ಶ್ರೀಹರಿವಾಯುಸ್ತುತಿ

ಪ್ರಥಮೋ ಹನುಮಾನ್ ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥

ವಾಸುದೇವಪದಸಂತತಸಂಗೀ
ಬಸವನಗುಡಿ, ಬೆಂಗಳೂರು ೦ ೦೦೪

। ಶ್ರೀ ಗುರುಭ್ಯೋ ನಮಃ ।

। ಶ್ರೀಮನ್ಮಥ್ವಾಂತರ್ಗತ ಶ್ರೀ ಲಕ್ಷ್ಮೀನೃಸಿಂಹಾಯ ನಮಃ ।

ಶ್ರೀ ತ್ರಿವಿಕ್ರಮಪಂಡಿತಾಚಾರ್ಯ ವಿರಚಿತ

ಶ್ರೀ ಹರಿವಾಯುಸ್ತುತಿ

ಮೂರನೆಯ ಭಾಗ

ಪಿ. ವಿಷ್ಣುತೀರ್ಥ

ನವವೃಂದಾವನ, ಆನೆಗೊಂದಿ

ಇವರ ಅರ್ಥ, ತಾತ್ಪರ್ಯ, ವಿವರಣೆಗಳ ಸಹಿತ

ವಾಸುದೇವಪದಸಂತತಸಂಗೀ

ಆನಂದ್ ಪ್ರಿಂಟರ್ಸ್

25, ಗಾಂಧೀ ಬಜಾರ್, ಬೆಂಗಳೂರು-560 004.

SRI HARIVAYUSTUTHI—with meanings and notes by P. Vishnuteertha, 931, 2nd Main, IV Block, Rajajinagar, Bangalore-560 010.

ಪ್ರಥಮ ಮುದ್ರಣ—1989 : ೧,೦೦೦ ಪ್ರತಿಗಳು

ಎಲ್ಲ ಹಕ್ಕುಗಳೂ ಲೇಖಕರಿಂದ ಕಾಯ್ದಿರಿಸಲ್ಪಟ್ಟಿದೆ.

ಬೆಲೆ : ರೂ. 40-00

ಮುದ್ರಣ :

ಆನಂದ್ , ಪ್ರಿಂಟರ್ಸ್

25, ಗಾಂಧೀ ಬಜಾರ್, ಬೆಂಗಳೂರು-560 004

ಲೇಖಕನ ಕಡೆಯ ಮಾತು

ಋಗ್ವೇದದ ಮೊದಲನೇ ಅಗ್ನಿಸೂಕ್ತದಲ್ಲಿ 'ಯದಂಗ ದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ । ತವೇತ್ತತ್ ಸತ್ಯಮಂಗಿರಃ ॥' ('ಹೇ ಭಗವಂತ, ನೀನು ಯಜಮಾನನಿಗೆ ಏನು ಶುಭವನ್ನು ಮಾಡಬೇಕೆಂದು ಇಚ್ಛಿಸುವೆಯೋ ಆ ನಿನ್ನ ಇಚ್ಛೆ ಮಾತ್ರವೇ ಸತ್ಯವಾಗುತ್ತದೆ, ಅವರು ಬಯಸಿದ್ದೆಲ್ಲ ಈಡೇರುವುದಿಲ್ಲ') ಎಂದು ಹೇಳಿದಂತೆ ಆ ಶ್ರೀಹರಿವಾಯುಗಳ ಇಚ್ಛೆಗೆ ಬಂದಿದ್ದುದರಿಂದಲೇ ನಮ್ಮ ಹರಿವಾಯುಸ್ತುತಿಯ ವಿಸ್ತೃತವಿವರಣೆಯ ಪ್ರಕಟನರೂಪ ಈ ಮಹಾಪ್ರಯತ್ನವು ಯಶಸ್ವಿಯಾಗಿ ಮುಗಿಯಿತು. ಹೀಗೆ ಮಹತ್ತರವಾದ ಈ ದೊಡ್ಡ ಜ್ಞಾನಯಜ್ಞವು ಅವರ ಅನುಗ್ರಹವಿಶೇಷದಿಂದ ಸಮಾಪ್ತಿಯಾದರೂ 'ಖಿಲವಾಯುಸ್ತುತಿ'ಯ ಮುದ್ರಣ ಮತ್ತು ಪ್ರಕಟನರೂಪವಾದ ಅವಭೃತಸ್ನಾನ ಮಾತ್ರ ಉಳಿದುಕೊಂಡಿದೆ. ಇದನ್ನೂ ನಮ್ಮಿಂದ ಮಾಡಿಸಿ ನಮ್ಮನ್ನು ಕೃತಕೃತ್ಯರನ್ನಾಗಿ ಮಾಡಲು ಆ ಬಾದರಾಯಣರೇ ಸಮರ್ಥರು, ಇರಲಿ.

ದಿನಾಂಕ 14–7–1982ರಲ್ಲಿ 'ಪಾಂತ್ವಸ್ಮಾನ್' ಎಂಬ ಶ್ಲೋಕಕ್ಕೆ ಅರ್ಥ ಬರೆಯಲು ಆರಂಭಿಸಿದಾಗ ಲೇಖಕನಿಗಾಗಲಿ ಪ್ರಕಾಶಕರಿಗಾಗಲಿ ನಖಸ್ತುತಿಯ ಎರಡು ಶ್ಲೋಕಗಳ ವಿವರಣೆಯೇ ಮುನ್ನೂರು ಪುಟಗಳನ್ನು ಮೀರುವುದೆಂಬ ಕಲ್ಪನೆ ಸುತರಾಂ ಇರಲಿಲ್ಲ. ಋಗ್ಭಾಷ್ಯೋದಾಹೃತ 'ಹೃದಿಸ್ಥೋ ಬಾದರಾಯಣಃ । ಓಂಕಾರಪೂರ್ವಿಕಾ ವಿದ್ಯಾಃ ಪ್ರೇರಯತ್ಯಖಿಲೇಷ್ವಪಿ ॥' ಎಂಬ ಸಾತ್ತ್ವತಸಂಹಿತಾವಚನವು ಹೇಳುವಂತೆ ಮಧ್ವಾಂತರ್ಗತರಾದ ಆ ವೇದವ್ಯಾಸರೇ ನನ್ನ ಹೃದಯದೊಳಗೆ ನಿಂತು ಅಷ್ಟು ವಿಚಾರಗಳನ್ನು ತಿಳಿಸಿಕೊಟ್ಟರು. ಅಷ್ಟಕ್ಕೇ ತೃಪ್ತರಾಗದೆ ನಮ್ಮ ಪಾಠಕರಲ್ಲೆಲ್ಲಾ ನಿಂತು ಈ ಮಹತ್ಕಾರ್ಯವನ್ನು ಮುಂದುವರಿಸುವಂತೆ ಅವರೇ ನಮ್ಮನ್ನು ಹುರಿದುಂಬಿಸಿದರು.

'ಹರಿವಾಯುಸ್ತುತಿ'ಗೆ ಅರ್ಥ ಬರೆಯುವಾಗಲೂ ನಮ್ಮ ಅಲ್ಪಜ್ಞಾನ ಅಲ್ಪಶಕ್ತಿಗಳನ್ನು ಲಕ್ಷಿಸಿ ಆ ಗ್ರಂಥವನ್ನು ಸುಮಾರು ನಾಲ್ಕುನೂರ ಐವತ್ತು

ಪುಟಗಳಲ್ಲೇ ಮುಗಿಸಬೇಕೆಂದು ಹವಣಿಸಿಕೊಂಡು ಲೇಖನ-ಮುದ್ರಣ ಎರಡು ಕಾರ್ಯಗಳನ್ನೂ ಆರಂಭಿಸಿದೆವು. ಆದರೆ ಅದು ಹೇಗೆ ನಮ್ಮ ಹತೋಟಿ ಮೀರಿ-ತೆಂದೂ ಅದರಿಂದ ಆ ಕಾರ್ಯವನ್ನು ನಿರ್ವಹಿಸುವುದು ಎಷ್ಟು ಕಷ್ಟವಾಯಿ-ತೆಂದೂ ಆದರೂ ಆ ವೇದವ್ಯಾಸರೇ ಹೆಜ್ಜೆಹೆಜ್ಜೆಗೂ ಬೆನ್ನುತಟ್ಟಿ ನಮ್ಮ ಉದ್ಯಮ ನಿಲ್ಲದಂತೆ ಅನುಗ್ರಹಿಸಿದರೆಂಬ ವಿವರಣೆ ಎರಡನೇ ಭಾಗದ ಪ್ರಸ್ತಾವನೆಯಲ್ಲೇ ನಿವೇದಿಸಿಕೊಂಡಿದ್ದೇವೆ.

ಈಗಿನ ಮೂರನೇ ಭಾಗದ ಸಂಗತಿಯೇ ಬೇರೆ ರೀತಿಯಾಗಿದೆ. ಎರಡನೇ ಭಾಗದ ಪ್ರಸ್ತಾವನೆಯು ಅನೇಕ ಓದುಗರಿಗೆ ಮೆಚ್ಚಿಗೆಯಾಗಿರಬೇಕು; ಅನೇಕರ ಮನಸ್ಸೇ ಕರಗಿಹೋಗಿರಬೇಕು. ಅದೂ ಹರಿವಾಯುಗಳ ಪ್ರೇರ-ಣೆಯೇ ಸರಿ. ಅವರೇ ಆ ಓದುಗರಲ್ಲಿ ನಿಂತು ನಮಗೆ ಉದ್ದಕ್ಕೂ ಪ್ರೋತ್ಸಾಹ ಕೊಡುತ್ತಾ ಬಂದಿದ್ದಾರಲ್ಲದೆ ಅನೇಕ ಮಹನೀಯರಿಂದ ಅಪ್ರಾರ್ಥಿತವಾಗಿ ನಮಗೆ ಆರ್ಥಿಕಸಹಾಯವನ್ನೂ ಒದಗಿಸಿಕೊಟ್ಟರು. ಇಂತಹವರಲ್ಲಿ ರಾವ್ ಬಹದ್ದೂರ್ ಬಿ. ವೆಂಕಟೇಶಾಚಾರ್ ಮೆಮೋರಿಯಲ್ ಟ್ರಸ್ಟಿನವರೇ ಈ ಕಾರ್ಯದಲ್ಲಿ ಅಗ್ರಗಾಮಿಗಳು. ಅನಂತರ ಒಬ್ಬರ ಮೇಲೊಬ್ಬರಂತೆ ಸರ್ವಶ್ರೀ-ಗಳಾದ—

ಸಿ. ನಾರಾಯಣರಾವ್, ಮಾಧವರಾವ್, ಪ್ರಹ್ಲಾದರಾವ್, ಡಾಕ್ಟರ್ ಜಯಲಕ್ಷ್ಮೀ ಸಂಪತ್ ಮೊದಲಾದ ಅನೇಕರು ಬಿಚ್ಚುಮನಸ್ಸಿನಿಂದ ಆರ್ಥಿಕ ನೆರವು ನೀಡಿದರು. ಹೀಗೆ ಅನಿರೀಕ್ಷಿತವಾದ ಆರ್ಥಿಕಸಹಾಯ ದೊರೆಯಿತು. ಹೀಗೆ ಅನೇಕ ಮಹನೀಯರ ಆರ್ಥಿಕಸಹಾಯ ದೊರೆತದ್ದರಿಂದ ಒಟ್ಟಿಗೆ ಕಾಗದವನ್ನು ಕೊಳ್ಳಲು ಅನುಕೂಲವಾಯಿತು. ಆದರೆ ಪುಸ್ತಕದ 200 ಪುಟಗಳು ಮುದ್ರಣವಾಗುವ ವೇಳೆಗೆ ನಾವು ಕೂಡಿಹಾಕಿದ್ದ ಕಾಗದವು ಮುಗಿದು, ಮತ್ತಷ್ಟು ಕಾಗದ ಕೊಳ್ಳಬೇಕಾಯಿತು. ಅದೇ ವೇಳೆಗೆ ಮಾರು-ಕಟ್ಟೆಯಲ್ಲಿ ಕಾಗದದ ಬೆಲೆ ಶೇಕಡ 70-80ರಷ್ಟು ಏರಿದುದರಿಂದ ಅದನ್ನು ಸರಿದೂಗಿಸಲು ಶ್ರಮವಾದರೂ ಶ್ರೀವಾಯುದೇವರ ಅನುಗ್ರಹದಿಂದ ಹೇಗೋ ವ್ಯವಸ್ಥಿತವಾಯಿತು.

ಆದರೆ ಕಾಗದ ಸಿದ್ಧವಾದ ಮಾತ್ರಕ್ಕೆ ವಾಯುಸ್ತುತಿಯು ಮುದ್ರಿತ-ವಾದಂತಲ್ಲವಷ್ಟೆ. ಅದಕ್ಕೆ ಮುಖ್ಯವಾಗಿ ಹಸ್ತಪ್ರತಿಯೇ ಸಿದ್ಧವಾಗಬೇಕಾ-ಗಿತ್ತು. ಭೀಮಾವತಾರದ ಪ್ರಥಮ (೨ನೇ) ಶ್ಲೋಕದ ವಿವರಣೆಯನ್ನೂ, ಎರಡನೇ ಭಾಗ ಹೊರಬರುವುದಕ್ಕೆ ಎಷ್ಟೋ ಮುಂಚೆ, ಅಕ್ಷಯ ಸಂವತ್ಸರ-ದಲ್ಲೇ ಶ್ರೀ ರಘೂತ್ತಮಸ್ವಾಮಿಗಳ ಆರಾಧನೆಯ ದಿನವೇ ಮೈಸೂರಿನಲ್ಲಿ ಆರಂಭಿಸಿ ತಿದ್ದಿದ ಶುದ್ಧಪ್ರತಿಯನ್ನು ಪುರಂದರದಾಸರ ಆರಾಧನೆಯ ದಿನ ಬರೆಯಲು ಮೊದಲುಮಾಡಿದೆ. ಸುಮಾರು ಐದು ತಿಂಗಳಿನಲ್ಲಿ ನಾಲ್ಕು ಶ್ಲೋಕಗಳ ಅನ್ವಯ-ಅರ್ಥ-ತಾತ್ಪರ್ಯಾದಿ ಸಾಮಾನ್ಯ ವಿವರಣೆಯೂ ಮುಗಿ-ಯಿತು. ಆದರೆ ಪ್ರತಿಯೊಂದು ಶ್ಲೋಕದಲ್ಲೂ ಅನೇಕ ಕಥೆಗಳು ಪ್ರಸಕ್ತ-ವಾಗಿದ್ದುವು, ಅವುಗಳ ವಿವರಗಳನ್ನು ಸುಸ್ಪಷ್ಟವಾಗಿ ತಿಳಿದುಕೊಳ್ಳಲು ಅನೇಕ ಗ್ರಂಥಗಳನ್ನು ಹುಡುಕಬೇಕಾಯಿತು. ಮುಖ್ಯವಾಗಿ ಶ್ರೀಮನ್ಮಹಾಭಾರತ, ಹರಿವಂಶ ಮತ್ತು ಭಾಗವತಗಳನ್ನೂ ಭಾಗವತತಾತ್ಪರ್ಯ-ತಾತ್ಪರ್ಯನಿರ್ಣಯ-ಗಳನ್ನೂ ಓದಿ ಟಿಪ್ಪಣಿಗಳನ್ನು ಬರೆದುಕೊಂಡದ್ದಾಯಿತು. ಈ ಕಾರ್ಯದಲ್ಲಿ ಮೈಸೂರಿನ ಪ್ರಾಚ್ಯಶೋಧನಾಲಯದ ನೆರವು ಪಡೆಯಲಾಯಿತು. ಮಹಾ-ಭಾರತದ ಭೀಷ್ಮಾದಿ ಐದಾರು ಪರ್ವಗಳನ್ನಂತೂ ಮತ್ತೆಮತ್ತೆ ಪಠಿಸಿ ಬೇಕಾದ ಅಂಶಗಳನ್ನು ಹುಡುಕಬೇಕಾಯಿತು. ಹರಿವಂಶದಲ್ಲೇ ಭಿನ್ನಭಿನ್ನ ಪಾಠ-ಗಳಿದ್ದುದರಿಂದ ಹುಡುಕಿ ಹುಡುಕಿ ಬೇಕಾದ ಅಂಶಗಳನ್ನು ಸಂಗ್ರಹಿಸಬೇಕಾ-ಯಿತು. ಈ ರೀತಿ ಅಧ್ಯಯನಕ್ಕಾಗಿಯೇ ಅರೇಳು ತಿಂಗಳು ಹಿಡಿಯಿತು.

ಸರಿ, ಹೊಸಹೊಸ ವಿಚಾರಗಳು ತಿಳಿದಂತೆಲ್ಲ ಹಿಂದೆ ಬರೆದಿದ್ದ ನಾಲ್ಕೈದು ಶ್ಲೋಕಗಳ ಅರ್ಥ-ತಾತ್ಪರ್ಯಗಳನ್ನೇ ಎರಡು-ಮೂರು ನಾಲ್ಕಾ-ವರ್ತಿ ಸಹ ತಿದ್ದಿ ತಿದ್ದಿ ಪುನಃ ಪುನಃ ಬರೆಯಬೇಕಾಯಿತು. ಈ ಮಧ್ಯೆ ಸುಮಾರು ಒಂದೂವರೆ ತಿಂಗಳು ನರಸಿಂಹತೀರ್ಥದಲ್ಲೇ ಶ್ರೀಪಾದರಾಯರ ಸನ್ನಿಧಿಯಲ್ಲಿ ಇರಬೇಕಾದ ಪ್ರಸಂಗ ಬಂತು. ಅದುವರೆಗೆ ಬರೆದಿದ್ದ ವಿವರಣೆ-ಯನ್ನು ಅವರ ಮುಂದೆ ಓದಿದೆ. ಅದನ್ನು ಕೇಳಿದ ಆ ಮಹಾನುಭಾವರು ನನಗೆ ಶ್ರೀ ವಾದಿರಾಜರ 'ಯುಕ್ತಿಮಲ್ಲಿಕಾ'ವನ್ನು ನೋಡಲು ಆದೇಶ ನೀಡಿದರು. ಅದರಂತೆ ಸ್ಥೂಲವಾಗಿ ಆ ಗ್ರಂಥವನ್ನು ನೋಡುತ್ತಾ ಹೋದೆ;

ಫಲಸೌರಭದ ಉತ್ತರಾರ್ಧಕ್ಕೆ ಬಂದಾಗ ಅವರ ಸೂಚನೆಯ ಮಹತ್ವ ಅರ್ಥವಾಯಿತು—ದೊಡ್ಡ ನಿಧಿಯೇ ಸಿಕ್ಕಹಾಗಾಯಿತು. ಹೇಳುವುದೇನಿದೆ? ಬರೆದದ್ದೆಲ್ಲವನ್ನೂ ಪೂರ್ತಿಯಾಗಿ ತಿದ್ದಿ ಬರೆಯಲೇಬೇಕಾಯಿತು.

ಇಷ್ಟರಲ್ಲೇ ಆ ಶ್ರೀಪಾದರಾಜಮಠದ ಪೀಠಾಧಿಪತಿಗಳಾದ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು ಅನುಗ್ರಹ ಮಾಡಿ ನನಗೆ ತಮ್ಮ ಮಠದಲ್ಲೇ ಇದ್ದುಕೊಂಡು ವಾಯುಸ್ತುತಿಯ ಲೇಖನಕಾರ್ಯ ಮುಂದುವರಿಸಲು ಅನುಕೂಲ ಮಾಡಿಕೊಟ್ಟರು. ಪ್ರಭವ ಸಂವತ್ಸರದ ನವರಾತ್ರಿಯಲ್ಲಿ ಆರಂಭಿಸಿದ್ದಕ್ಕೆ ವಿಭವ ಸಂವತ್ಸರದ ಜ್ಯೇಷ್ಠ ಮಾಸದ ಹೊತ್ತಿಗೆ ಲೇಖನಕಾರ್ಯ ಮುಗಿಯಿತು. ಇದಕ್ಕೆ ಶ್ರೀಪಾದರಾಜ ಯತೀಂದ್ರರ ಕೃಪಾದೃಷ್ಟಿ ಮತ್ತು ಪೂರ್ಣಾನುಗ್ರಹಗಳೇ ಮುಖ್ಯಕಾರಣ. ತಿದ್ದಿದ ಶುದ್ಧ ಹಸ್ತಪ್ರತಿಯನ್ನು ಆ ಯತಿವರೇಣ್ಯರ ವಿಭವ ಸಂವತ್ಸರದ ಆರಾಧನೆಯಲ್ಲೇ ಅವರ ವೃಂದಾವನದ ಸನ್ನಿಧಿಯಲ್ಲಿ ಅರ್ಪಿಸಿ ಮಂಗಳವೂ ಮಾಡಿಯಾಯಿತು.

ಪ್ರಾಯಶಃ ಇಲ್ಲಿಯವರೆಗೆ ನನ್ನ ಹಸ್ತಪ್ರತಿಯೇ ಮತ್ತೆ ಮತ್ತೆ ತಿದ್ದುಪಡಿಯಾಗುತ್ತಿದ್ದುದರಿಂದ ಮುದ್ರಣಾರಂಭ ಮುಂದೆ ಮುಂದೆ ಹೋಗುತ್ತಿತ್ತು. ಕೊನೆಗೆ ಪ್ರಭವ ಸಂವತ್ಸರದ ದೀಪಾವಳಿ ಹೊತ್ತಿಗೆ ಭೀಮಾವತಾರದ ಏಳು ಶ್ಲೋಕಗಳ ಶುದ್ಧಪ್ರತಿಯನ್ನು ಮುಗಿಸಿ ಆನಂದ್ ಪ್ರಿಂಟರ್ಸ್‌ಗೆ ಒಪ್ಪಿಸಿದ್ದಾಯಿತು. ಮುದ್ರಣಕಾರ್ಯ ಆರಂಭವಾಯಿತು. ವಿಭವ ಸಂವತ್ಸರದ ಆಷಾಢದ ಹೊತ್ತಿಗೆ ಮಧ್ವಾವತಾರದ ಹಾಗೂ ಖಿಲವಾಯುಸ್ತುತಿಯ ಶುದ್ಧ ಹಸ್ತಪ್ರತಿಯನ್ನೂ ಅವರಿಗೆ (ಪ್ರಕಾಶಕರಿಗೆ) ಒಪ್ಪಿಸಿ ಇಡೀ ಮೂರನೇ ಭಾಗದ ಒಂದು ಜೆರಾಕ್ಸ್ ಪ್ರತಿಯನ್ನು ದಿಲ್ಲಿಯಲ್ಲಿರುವ ಕಾಪಿರೈಟ್ ಆಫೀಸಿಗೂ ಕಳುಹಿಸಿದ್ದಾಯಿತು. ಇತ್ತ ಮುದ್ರಣಕಾರ್ಯ ಮುಂದೆ ಸಾಗಿ ಮಾಘಮಾಸ (1989ನೇ ಫೆಬ್ರುವರಿ) ಬರುವ ಹೊತ್ತಿಗೆ ಭೀಮಾವತಾರದ ವರ್ಣನೆ ಮುಗಿಯಿತು. ಮಧ್ವನವಮೀ ದಿನ ಮಧ್ವಾವತಾರ ಆರಂಭಿಸಬೇಕೆಂದು ನಮ್ಮ ಸಂಕಲ್ಪ. ಆದರೆ ಹಸ್ತಪ್ರತಿಯಲ್ಲಿ ಮಧ್ವಾವತಾರಕ್ಕೆ ಪೀಠಿಕಾರೂಪವಾಗಿ ಬರೆದಿದ್ದ ಕೆಲವು ಪುಟಗಳು ಇರಲಿಲ್ಲವಾದ್ದರಿಂದ ಆ ಭಾಗಕ್ಕಾಗಿ ಒಂದು ಫಾರಂ

(೧೬ ಪುಟಗಳನ್ನು) ಮೀಸಲಾಗಿಟ್ಟು ೬೪ನೇ ಪುಟದಿಂದ ೨೯ನೇ ಶ್ಲೋಕದಿಂದ ಮುದ್ರಣ ಮುಂದುವರೆಸಿದ್ದಾಯಿತು. ಭಗವಂತನ ಕೃಪೆಯಿಂದ ಈ ವರ್ಷ (ಶುಕ್ಲ ಸಂವತ್ಸರ) ಅನಂತಪದ್ಮನಾಭ ಚತುರ್ದಶಿಗೇ ೪೧ನೇ ಶ್ಲೋಕದ ಕಡೆಯ ಪುಟವೂ ಮುದ್ರಿತವಾಯಿತು.

ಇದುವರೆಗೆ ಹರಿವಾಯುಸ್ತುತಿಯ ಮೂಲಶ್ಲೋಕಗಳನ್ನು ಆಯಾ ಪ್ರಸಕ್ತಿ ಬಂದಾಗ ಮಾತ್ರ ಕೊಡುತ್ತಾ ಬಂದಿದ್ದೇವೆ. ಸಮಗ್ರ ಸ್ತುತಿಯನ್ನು ಆದ್ಯಂತವಾಗಿ ಪಠಿಸುವವರಿಗೆ ಇದು ಅನುಕೂಲವಾಗಿರಲಿಲ್ಲ. ಇದನ್ನು ಗಮನಿಸಿ ನಾವು ಈಗ, ಒಂದೇ ಕಡೆ ಎಲ್ಲ ಶ್ಲೋಕಗಳನ್ನು ಕೊಡುವುದರ ಜೊತೆಗೆ ಶ್ಲೋಕಗಳ ಒಂದೊಂದು ಪಾದವೂ ಒಂದೇ ಪಂಕ್ತಿಯಲ್ಲಿ ಬರುವಂತೆಯೂ ಯತಿ (ನಿಲ್ಲಿಸಬೇಕಾದ ಸ್ಥಳ)ಗಳು ಸುಲಭವಾಗಿ ತಿಳಿಯುವಂತೆಯೂ ಮುದ್ರಿಸಿ ಇಡೀ ಹರಿವಾಯುಸ್ತುತಿಯನ್ನು ಕೊನೆಯಲ್ಲಿ ಸೇರಿಸಲಾಗಿದೆ; ಅಪೇಕ್ಷಿಸಿದವರಿಗೆ ಕೇವಲ ಮೂಲವೇ ದೊರಕುವಂತೆ ಅದನ್ನೂ ಬೇರೆಯಾಗಿಯೂ ಮುದ್ರಿಸಿದ್ದೇವೆ. ಶ್ರೀಪದ್ಮನಾಭತೀರ್ಥರ ಆರಾಧನೆಯ ದಿನ (ದಿ॥ 27-11-1989) ಈ ಪುಸ್ತಕವನ್ನು ಅವರ ಚರಣಾರವಿಂದಗಳಲ್ಲಿ ಸಮರ್ಪಿಸುತ್ತಿದ್ದೇವೆ.

ಕಟ್ಟಕಡೆಯಲ್ಲಿ ಕಳೆದ ಏಳೆಂಟು ವರ್ಷಗಳಿಂದಲೂ ಸಮಾಧಾನಚಿತ್ತದಿಂದ ಈ ಗ್ರಂಥದ ಪರಿಸಮಾಪ್ತಿಯನ್ನು ನಿರೀಕ್ಷಿಸುತ್ತಾ ನಮ್ಮೊಡನೆ ಸಹಾನುಭೂತಿಯಿಂದ ಸಹಕರಿಸುತ್ತಾ ನಾನಾರೀತಿಯಿಂದ ನೆರವು ನೀಡುತ್ತಿರುವ ಗ್ರಾಹಕವರ್ಗದ ಸಕಲ ವಿಷ್ಣುಭಕ್ತರಿಗೂ ಶ್ರೀಹರಿವಾಯುಗಳು ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಅಭಿವೃದ್ಧಿಮಾಡಿ ಶ್ರೇಯಸ್ಸನ್ನು ಕೊಡಲೆಂದು ಶ್ರೀಮನ್-ಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಹಯಗ್ರೀವಾತ್ಮಕ ಶ್ರೀಲಕ್ಷ್ಮೀ-ನೃಸಿಂಹಸ್ವಾಮಿಯನ್ನು ಅನನ್ಯಭಾವದಿಂದ ಸ್ಮರಿಸಿ ಪ್ರಾರ್ಥಿಸುತ್ತೇವೆ.

ಹರಿವಾಯುಸ್ತುತೇರಸ್ಯಾಃ ಪಾಠಕಾನಾಂ ಹೃದಿಸ್ಥಿತಃ ।
ಮಧ್ವೇಶೋ ನೃಹರಿಃ ಸುಷ್ಟು ಪ್ರೀಯತಾಂ ಮೇ ರಮಾಪತಿಃ ॥

'ನವವೃಂದಾವನ', 931, 2ನೇ ಮುಖ್ಯರಸ್ತೆ
ನಾಲ್ಕನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560 010

ವಿಷ್ಣುತೀರ್ಥ
ದಿನಾಂಕ 27-11-1989

ಪ್ರಕಾಶಕರ ನುಡಿ

"ಶ್ರೀಹರಿವಾಯುಸ್ತುತಿ"ಯ ಮೂರನೆಯ (ಕೊನೆಯ) ಭಾಗ ತಮ್ಮ ಕೈಯಲ್ಲಿದೆ. ವಿಳಂಬವಾದುದಕ್ಕೆ ಗ್ರಾಹಕರ ಕ್ಷಮೆ ಕೋರಿ ವಿಷಯ ಮುಂದು ವರೆಸುತ್ತೇವೆ.

ಎರಡನೇ ಭಾಗದಲ್ಲೇ ನಮ್ಮ ತೊಂದರೆಗಳನ್ನು ನಿವೇದಿಸಿಕೊಂಡಿದ್ದೇವೆ. ಪುಟಗಳು ನಮ್ಮ ಅಂದಾಜನ್ನು ಮೀರಿದ ವಿಷಯವೂ ತಮಗೆ ತಿಳಿದುದೇ ಆಗಿದೆ. ಈ ಮಧ್ಯೆ ಕಾಗದದ ಬೆಲೆ ಶೇ 70-80ರಷ್ಟು ಏರಿಹೋಯಿತು. ಶ್ರೀಹರಿಯು ಗ್ರಾಹಕರಿಂದ ಕೊಡಿಸಿದ ಹಣ ಸಾಲದೇ ಬೇರೆ ವ್ಯವಸ್ಥೆಯಾಗ ಬೇಕಾಯಿತು. ಅನೇಕರು ಸಹಾಯ ಮಾಡಿದುದರಿಂದ ಪುಸ್ತಕವು ಪೂರ್ಣ ಗೊಂಡಿತಾದರೂ ಗ್ರಾಹಕರು ಕಾಯುವಂತಾಯಿತು. ಸಹಾಯಕರ ವಿವರ ಗಳನ್ನೂ, ತಡವಾದುದಕ್ಕೆ ಕಾರಣವನ್ನೂ ಲೇಖಕರೇ ಈ ಮೊದಲೇ ತಿಳಿಸಿ ದ್ದಾರೆಯಾದಕಾರಣ ಅದರ ಪುನರ್‌ಪ್ರಸ್ತಾಪ ಅನವಶ್ಯಕ.

ಲೇಖಕರು ತಾವು ಲೇಖನಕ್ಕಾಗಿ ಗೌರವಧನ ಸ್ವೀಕರಿಸುವುದರ ಬದಲು ತಮಗೆ ಈ ಕಾರ್ಯಕ್ಕಾಗಿ ದೊರೆತ ಸಹಾಯವೆಲ್ಲವನ್ನೂ "ಶ್ರೀಹರಿವಾಯು ಸ್ತುತಿ"ಗೇ ಸಮರ್ಪಿಸಿದ್ದಾರೆ. ಅಂತೆಯೇ ಈ ಗ್ರಂಥ ತಮ್ಮ ಕೈ ಸೇರಿತು. ಕೇವಲ ೪೧ ಶ್ಲೋಕವೆನಿಸಿದರೂ, ಮಾಧ್ವರ ನಿತ್ಯಪಠನಾವಶ್ಯಕವಾದ ಈ "ಶ್ರೀಹರಿವಾಯುಸ್ತುತಿ"ಯು ವಾಚಕರ ಮನದಲ್ಲಿ ಅರ್ಥಪೂರ್ಣವಾಗಿ ನಿಲ್ಲುತ್ತದೆ ಎಂಬ ಭರವಸೆ ನಮ್ಮದು. ವ್ಯಾಕರಣ ಬಲ್ಲವರಿಗಂತೂ ಇದು ಒಂದು ದೊಡ್ಡ ನಿಧಿಯೇ ಆಗುವುದೆಂದು ನಮ್ಮ ಭಾವನೆ.

ಇದರ ಶ್ರಮ ಹಾಗೂ ವೆಚ್ಚದಲ್ಲಿ ನಮ್ಮ ಮಾಸಪತ್ರಿಕೆ "ವಾಸುದೇವ ಪದಸಂತತಸಂಗೀ"ಯ ಭಾಗವೇ ಹೆಚ್ಚಾಗಿದೆ. ಪತ್ರಿಕೆಯ ಗ್ರಾಹಕರು, ಅವರ ಚಂದಾ, ಸಾಕಷ್ಟು ಸಹಾಯ ಮಾಡಿವೆ. ಅದಕ್ಕಾಗಿ ಚಂದಾದಾರರಿಗೆ ನಮ್ಮ ಕೃತಜ್ಞತೆಗಳು.

ಲೇಖಕರು (ಶ್ರೀ ಪಿ. ವಿಷ್ಣುತೀರ್ಥರು) ಈಗ ಖಿಲವಾಯುಸ್ತುತಿಯ ಅರ್ಥವನ್ನು ಬರೆದಿಟ್ಟಿದ್ದಾರೆ. ಪುರುಷಸೂಕ್ತಕ್ಕೆ ವ್ಯಾಖ್ಯಾನಗಳ ಸಹಿತ ಅರ್ಥ

ಬರೆಯುತ್ತಿದ್ದಾರೆ. ಅಣುಭಾಷ್ಯಕ್ಕೆ ಸುಮಾರು 200–250 ಪುಟಗಳಷ್ಟು ವ್ಯಾಖ್ಯಾನ ಮಾಡಲಿದ್ದಾರೆ. ಎಲ್ಲರ ಸಹಕಾರ ದೊರೆತರೆ ಅವರಿಂದ ಇನ್ನೂ ಹೆಚ್ಚಿನ ಗ್ರಂಥಗಳನ್ನು ಪಡೆಯಬಹುದು. ಈಗಾಗಲೇ ಅವರ ಪಾಂಡಿತ್ಯವನ್ನು ಈ ಗ್ರಂಥದ ಮೂಲಕ ತಿಳಿದಿರುವ ತಮಗೆ ಅವರ ವಯಸ್ಸು ಏಳು ದಶಕಗಳನ್ನು ಮೀರಿದೆಯೆಂದರೆ ಆಶ್ಚರ್ಯವಾಗಬಹುದು. ಆದಷ್ಟು ಜಾಗ್ರತೆ ಅವರ ವಿದ್ವತ್ತಿನ ಪ್ರಯೋಜನ ಪಡೆಯುವುದು ಜ್ಞಾನಸಂಪಾದನೆಯ ಆಸೆಯುಳ್ಳವರ ಸಹಾಯವನ್ನು ಅವಲಂಬಿಸಿದೆ.

ಈ ಗ್ರಂಥಕ್ಕಾಗಿ ದ್ರವ್ಯಸಹಾಯಮಾಡಿದ ಸಕಲ ಸಜ್ಜನರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಹಾಗೂ ಕಿಂಚಿತ್ತೂ ದ್ರವ್ಯಾಪೇಕ್ಷೆಯಿಲ್ಲದೆ, ಮುದ್ರಣಸೇವೆ ಸಲ್ಲಿಸಲು ನಮಗೆ ಅವಕಾಶ ಒದಗಿಸಿದ ಲೇಖಕರಾದ ಶ್ರೀ ಪಿ. ವಿಷ್ಣುತೀರ್ಥರಿಗೆ ನಮ್ಮ ಸಾಷ್ಟಾಂಗ ಪ್ರಣಾಮಗಳು.

ಈ ಗ್ರಂಥದಲ್ಲಿ ಮುದ್ರಿಸಿರುವ ಚಿತ್ರಗಳನ್ನಿತ್ತ ಸರ್ವಶ್ರೀ ಎಸ್. ಜಿ. ದ್ವಾರಕಿ, ಬ್ಯಾಹಟ್ಟಿಯ ಮಧುಸೂದನ ಜವಳಿ, ಜಿ. ನರಸಿಂಹಮೂರ್ತಿ, ವಾಸುದೇವಮೂರ್ತಿ ಹಾಗೂ ಕೆ. ಮೋಹನ್‌ರವರಿಗೆ ನಮ್ಮ ವಂದನೆಗಳು. ಹಾಗೂ ವ್ಯಾಸರಾಜರ ಪಡಿಯಚ್ಚನ್ನಿತ್ತಿರುವ ಶ್ರೀ ಆರ್. ಕೆ. ರಾಜಾರಾವ್ ರವರಿಗೂ ನಮ್ಮ ವಂದನೆಗಳು. ನಮ್ಮ ಈ ಕಾರ್ಯದಲ್ಲಿ ತಾಳ್ಮೆಯಿಂದ ಸಹಕರಿಸಿದ ವಾಚಕವರ್ಗಕ್ಕೆ ನಮ್ಮ ವಂದನೆಗಳು.

ಪ್ರಕಾಶಕರು

ಮೂರನೇ ಭಾಗದ

ವಿಷಯಾನುಕ್ರಮಣಿಕೆ

ಮೂರನೇ ವರ್ಗ—ಭೀಮಾವತಾರ ಮಹಿಮೆ

(೨೨ ರಿಂದ ೭೮ರವರೆಗೆ ೭ ಶ್ಲೋಕಗಳು)

ಲೇಖಕನ ಮಂಗಳಾಚರಣೆ ೪೧೯–೨೦

(ಅ) ದುಷ್ಟಸಂಹಾರದಿಂದ ಭೂಭಾರಹರಣ (ಶ್ಲೋ. ೨೨–೨೪)

೨೨ನೇ ಶ್ಲೋ. ಬಕ–ಕಿರ್ಮೀರರ ವಧೆ (೩೯ ಪುಟಗಳು) . ೪೨೧–೫೯

251. ಅವತಾರಿಕೆ ಶ್ಲೋಕ ಪದವಿಭಾಗ. 252. ಶ್ಲೋಕದ ವಿಶ್ಲೇಷಣೆ. 253. ಕಠಿನಶಬ್ದಾರ್ಥ—ಚಂದ್ರವಂಶ, ಪುರುವಂಶ, ಕೌರವವಂಶ, ಯುಕ್ತಿಮಲ್ಲಿಕಾ ಸಮಾಖ್ಯೆಗಳು. 254. ಹರಿಪರವಾಗಿ ಅನ್ವಯ-ಅರ್ಥ. 255. ಭೀಮಪರವಾಗಿ ಅನ್ವಯ-ಅರ್ಥ. 256. ಭಾಗವತೋಕ್ತ ಬಕಾಸುರನ ಕಥೆ. 257. ಬಕಾಸುರನ ವೃತ್ತಾಂತ (ಭಾರತದ ಕಥೆ). 258. ಕಿರ್ಮೀರನ ವೃತ್ತಾಂತ. 259. ಕೃಷ್ಣಪರ ಭಾವಾರ್ಥ. 260. ಭೀಮಪರ ಭಾವಾರ್ಥ. 261. ವಿಶೇಷ ವಿಚಾರಗಳು (ಗು.ಸಾ.)

೨೩. ಜರಾಸಂಧನ ವಧೆ (೩೦ ಪು.) ೪೫೯–೮೯

262. ಅವತಾರಿಕೆ, ಶ್ಲೋ. ಪದವಿಭಾಗ. 263. ಕಠಿನಶಬ್ದ ವಿವರಣೆ. 264. ವಿಶ್ಲೇಷಣೆ. 265. (ಅ–ಆ) ಕೃಷ್ಣಪರವಾಗಿ ಅನ್ವಯ-ಅರ್ಥ. (ಇ–ಈ) ಭೀಮಪರವಾಗಿ ಅನ್ವಯ-ಅರ್ಥ. 266. ಜರಾಸಂಧನ ವೃತ್ತಾಂತ (ಚ) ರಾಜಸೂಯ ಯಾಗ (ಛ) ಅಶ್ವಮೇಧ ಯಾಗ. 26/. ಕೃಷ್ಣಪರ ಭಾವಾರ್ಥ. 268. ಭೀಮಪರ ಭಾವಾರ್ಥ.

೨೪. ಹದಿನೆಂಟು ಅಕ್ಷೋಹಿಣೀ ಸೈನ್ಯ ನಾಶ

(೫೩ ಪು.) ೪೮೯–೫೪೧

269. ಅವತಾರಿಕೆ, ಶ್ಲೋ. ಪದವಿಭಾಗ. 270. ಕಠಿನಶಬ್ದಾರ್ಥ. ಭೀಮನ ಗದೆ-ವಿಷ್ಣುಗದೆ, ಅಕ್ಷೋಹಿಣೀ, ಶ್ರುತಿ ಸಮಾಖ್ಯೆ. 271. ವಿಶ್ಲೇಷಣೆ. 272. ಕೃಷ್ಣ-ಪರ ಅನ್ವಯ-ಅರ್ಥ. 273. ಭೀಮಪರ ಅನ್ವಯ-ಅರ್ಥ. 274. ಕೌರವ-ಪಾಂಡವರ ಯುದ್ಧ. ಗ) ಯುದ್ಧದಲ್ಲಿ ಭೀಮನ ಪಾತ್ರ, ಘ) ದುಶ್ಶಾಸನನ ವಧೆ, ಙ) ಭೀಮನ ಯುದ್ಧದ ವೈಖರಿ, ಚ-ಛ) ೪ನೇ ೧೪ನೇ ದಿನದ ಯುದ್ಧದಲ್ಲಿ ಜ) ಶಲ್ಯನೊಡನೆ ಗದಾಯುದ್ಧ, ಝ) ಆನೆಗಳ ಸಂಹಾರ, ಞ) ಅಶ್ವತ್ಥಾಮನ

ಪರಾಜಯ, ಟ) ಕರ್ಣನ ಪರಾಭವ, ಠ) ಮಧ್ವನಾಮದಿಂದ, ಡ) ವ್ಯಾಸರಾಯರ ಪ್ರಾರ್ಥನೆ. 275. ಕೃಷ್ಣಪರ–ಭೀಮಪರ ಭಾವಾರ್ಥ. 276. ವಿಶೇಷಾರ್ಥಗಳು (ಗು.ಸಾ.)

(ಆ) ಮಧ್ಯದ ಉಪವಿಭಾಗ (ಶ್ಲೋ. ೨೫–೨೬)
ಪ್ರಾಸಂಗಿಕ ಎರಡು ವಿಚಾರಗಳು.

೨೫. ಅವಿದ್ಯಾಪರಿಹಾರ (೨೨ ಪು.) ೫೪೨–೬೩

277. ಅವತಾರಿಕೆ, ಶ್ಲೋ. ಪದವಿಭಾಗ, 278. ವಿಶ್ಲೇಷಣೆ. 279. ಕಠಿನ ಶಬ್ದಾರ್ಥ, ಶ್ರುತಿ ಸಮಾಖ್ಯೆಗಳು. 280. ಹರಿಪರ ಅನ್ವಯ–ಅರ್ಥ. 281. ಹರಿಪರ ಭಾವಾರ್ಥ. 282. ವಾಯುಪರ ಅನ್ವಯ–ಅರ್ಥ. 283. ದ್ರೌಪದಿಯ ವೃತ್ತಾಂತ. 284. ವಾಯುಪರ ಭಾವಾರ್ಥ.

೨೬. ಹರಿವಾಯುಗಳಿಗೆ ವಂದನೆ (೧೩ ಪು.) ೫೬೪–೭೬

285. ಅವತಾರಿಕೆ, ಶ್ಲೋ. ಪದವಿಭಾಗ. 286. ವಿಶ್ಲೇಷಣೆ. 287. ಕಠಿನ ಶಬ್ದಾರ್ಥ. 288. ಹರಿಪರ ಅನ್ವಯ–ಅರ್ಥ–ತಾತ್ಪರ್ಯ. 289. ವಾಯುಪರ ಅನ್ವಯ–ಅರ್ಥ, ಭಾವಾರ್ಥ. 290. ವಿಶೇಷ ವಿಚಾರಗಳು, ಕೃಷ್ಣಶಬ್ದಾರ್ಥ, ಶ್ರುತಿ ಸಮಾಖ್ಯೆ.

(ಇ) ಕಡೆಯ ಉಪವಿಭಾಗ (ಶ್ಲೋ. ೨೭–೨೮).

೨೭. ಸೌಗಂಧಿಕಾಪುಷ್ಪಕ್ಕೆ ಹೋದಾಗ ಹನುಮದ್ದರ್ಶನ (೨೪ ಪು.) ೫೭೭–೯೯

291. ಅವತಾರಿಕೆ, ಶ್ಲೋ. ಪದವಿಭಾಗ, 292. ವಿಶ್ಲೇಷಣೆ. 293. ಶ್ರೀರಾಮ ಪರಶುರಾಮನನ್ನು ಸೋಲಿಸಿದ ರಹಸ್ಯ. 294. ಕಠಿನ ಶಬ್ದಾರ್ಥ, ಶ್ರುತಿ ಸಮಾಖ್ಯೆ. 295. ಹರಿಪರ ಅನ್ವಯ, ಅರ್ಥ, ಭಾವಾರ್ಥ. 296. ವಾಯುಪರ ಅನ್ವಯ, ಅರ್ಥ, ತಾತ್ಪರ್ಯ. 297. ಹನುಮ–ಭೀಮರ ಸಂವಾದ, ಅವತಾರಗಳ ಧರ್ಮರಹಸ್ಯ, ವಾಯುದೇವರ ವಿಶೇಷ ಶಕ್ತಿ. 298. ವಾಯುಪರ ಭಾವಾರ್ಥ, ವಾಸಿಷ್ಠ ರಾಮಾಯಣದ ಸಮಾಖ್ಯೆ.

೨೮. ಸೌಗಂಧಿಕಾಹರಣ ಮತ್ತು ಮಣಿಮಂತ ಮೊದಲಾದ ದೈತ್ಯರ ವಧೆ (೨೩ ಪು.) ೬೦೦–೬೨೩

299. ಅವತಾರಿಕೆ (ಆರು ಅರ್ಥಗಳಿವೆ), ಶ್ಲೋ. ಸಾಮಾನ್ಯ ಪದವಿಭಾಗ. 300. ೧ನೇ ಅರ್ಥ, ಭಾವಾರ್ಥ. 301. ಹರಿವಂಶದ ಕಥೆ—ಧನ್ಯೋಪಾಖ್ಯಾನ,

ಕೃಷ್ಣನ ಬಲಪರೀಕ್ಷೆ. 302. ೨ನೇ ಅರ್ಥ. ನರಕಾಸುರನ ಹಾವಳಿ, ಅವನ ವಧೆ, ೧೬ ಸಾವಿರ ಕನ್ಯಾವಿಚಾರ. 303-4. ಅನ್ವಯ, ಅರ್ಥ, ಭಾವಾರ್ಥ. 305. ೩ನೇ ಅರ್ಥ, ಪಾರಿಜಾತಹರಣದ ಕಥೆ 306. (ಅ) ಮೂರನೇ ಅನ್ವಯಕ್ರಮ ಅನ್ವಯಾರ್ಥ, ಭಾವಾರ್ಥ. 307. ನಾಲ್ಕನೇ ಅರ್ಥಕ್ಕೆ ಪೀಠಿಕೆ. 308. ಹರಿಪರವಾಗಿ ನಾಲ್ಕನೇ ಅರ್ಥ, ಅಮೃತಮಥನದ ಕಥೆ, ಮೋಹಿನೀ ಅವತಾರ, ವ್ಯಾಸಾವತಾರ, ಅನ್ವಯ, ಅನ್ವಯಾರ್ಥ, ಭಾವಾರ್ಥ. 309. ಐದನೇ ಅರ್ಥಕ್ಕೆ ಪೀಠಿಕೆ. 310. ಐದನೇ ಅರ್ಥ, ಅನ್ವಯ, ಭಾವಾರ್ಥ. 311. ಭೀಮಪರ ಅರ್ಥಕ್ಕೆ ಪೀಠಿಕೆ. 312. ಹೊಂಗೆಂಪು ಬಣ್ಣದ ಸೌಗಂಧಿಕಾಹರಣ. 313. ಪಂಚವರ್ಣದ ಸೌಗಂಧಿಕಾಹರಣ 314. ೬ನೇ ಅರ್ಥ, ಕಠಿನಶಬ್ದಾರ್ಥ, ಶ್ರುತಿಸಮಾಖ್ಯೆ. 315. ಅನ್ವಯ, ವಿಶ್ಲೇಷಣೆ, ಅರ್ಥ, ಭಾವಾರ್ಥ. 316. ಭೀಮನ ಭಾಗವತಧರ್ಮ, ಭೀಮನ ಸ್ವರೂಪಬಲ, ಜಠರಾಗ್ನಿ, ಸಕಲವೂ ವಿಷ್ಣುಪ್ರೀತಿಗಾಗಿ, ದ್ರೌಪದಿಯ ವೈರಕ್ಕೆ ಕಾರಣಗಳು, ಉಪಸಂಹಾರ, ಲೇಖಕನ ಮಂಗಳಾಚರಣೆ.

ನಾಲ್ಕನೇ ವರ್ಗ—ಮಧ್ವಾವತಾರದ ಮಹಿಮೆ

(೨೯ ರಿಂದ ೪೦ರವರೆಗೆ ೧೨ ಶ್ಲೋಕಗಳು)

ಲೇಖಕನ ಮಂಗಳಾಚರಣೆ (೨ ಪು.) ೬೭೩–೭೪

ಮಧ್ವಾವತಾರಕ್ಕೆ ಪೀಠಿಕೆ (೧೩ ಪು.) ೬೭೫–೬೮೭

317. ವಾಯುದೇವರ ಅವತಾರತ್ರಯ. 318. ವಾಯುಪುರಾಣದ ಹೇಳಿಕೆ. 319. ಬಳಿತ್ಥಾಸೂಕ್ತದ ಹೇಳಿಕೆ. 320. ಋಗ್ವೇದದಲ್ಲಿ ಹನುಮಂತನ ಪ್ರಸಕ್ತಿ. 321. ಋಗ್ವೇದದಲ್ಲಿ ಮಧ್ವಾಚಾರ್ಯರ ಉಲ್ಲೇಖಗಳು 322. ಯುಕ್ತಿಗಳಿಂದಲೂ ಸಾಧನೆ.

ಮಧ್ವಾವತಾರದ ಮಹಿಮೆ ....

(ಅ) ಮೊದಲನೆಯ ಉಪವಿಭಾಗ (ಶ್ಲೋ. ೨೯–೩೨)

ಮಧ್ವಾವತಾರದ ಉಪಕ್ರಮ.

೨೯. ಮಣಿಮಂತನ ಉದಯ (೧೬ ಪು.) ೬೮೭–೭೦೨

323. ಅವತಾರಿಕೆ, ಶ್ಲೋ. ಪದವಿಭಾಗ. 324. ವಿಶ್ಲೇಷಣೆ. 325. ಕಠಿನಶಬ್ದಾರ್ಥ. 326. ಹರಿಪರ ಅನ್ವಯ, ಅರ್ಥ. 327. ವಾಯುಪರ ಅನ್ವಯ, ಅರ್ಥ, ಉಭಯಪರ ಭಾವಾರ್ಥ. 328. ವಿಶೇಷ ವಿಚಾರಗಳು, ಕಲಿಯೂ ಮಣಿಮಂತನೂ ದುಶ್ಶಾಸ್ತ್ರಗಳನ್ನು ರಚಿಸಿದ್ದು, ಸ್ಕಾಂದಪುರಾಣದ ಹೇಳಿಕೆ.

೩೦. ಕಷ್ಟಶಾಸ್ತ್ರದ ನಿರಶನ (೧೪ ಪು.) ೨೦೩–೧೬

329. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ. 330. ಕಠಿನಶಬ್ದಾರ್ಥ, ಪಾಷಂಡವಾದ. 331. ಹರಿಪರ ಅನ್ವಯ, ಅರ್ಥ. 332. ವಾಯುಪರ ಅನ್ವಯ, ಅರ್ಥ, ಉಭಯಪರ ಭಾವಾರ್ಥ. 333. ಶ್ರುತಿಸಮಾಖ್ಯೆ.

೩೧. ನಿರಾಸದ ಪರಿಣಾಮ (೧೦ ಪು.) ೨೧೭–೨೬

334. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ. 335. ಕಠಿನ ಶಬ್ದಾರ್ಥ. 336. ಉಭಯಪರ ಅನ್ವಯ, ಅರ್ಥ, ಭಾವಾರ್ಥ.

೩೨. ಅವತಾರತ್ರಯದಲ್ಲೂ ನಿರ್ವಿಕಾರ (೨೦ ಪು.).... ೨೨೭–೪೬

337. ಅವತಾರಿಕೆ, ಶ್ಲೋ. ಪದವಿಭಾಗ. 338. ಕಠಿನ ಶಬ್ದಾರ್ಥ. 339. ಹರಿಪರ ವಿಶ್ಲೇಷಣೆ, ಅನ್ವಯ, ಅರ್ಥ, ಭಾವಾರ್ಥ. 340. ವಾಯುಪರ ವಿಶ್ಲೇಷಣೆ, ಅನ್ವಯ, ಅರ್ಥ, ಭಾವಾರ್ಥ. 341. ವಿಶೇಷ ವಿಚಾರ–ವಾಯುದೇವರಿಗೆ ಶಂಕರಾದಿಗಳು ಕಿಂಕರರು, ಮೃತ್ಯುವಿಲ್ಲ, ಅಸುರಾವೇಶವಿಲ್ಲ, ಶ್ರುತಿಸಮಾಖ್ಯೆಗಳು.

(ಆ) ಎರಡನೆಯ ಉಪವಿಭಾಗ (೩೩–೩೫ ಶ್ಲೋಕಗಳು)

೩೩. ಆಚಾರ್ಯರ ಮುಖಚಂದ್ರ ನಿರ್ವಿಕಾರ (೧೨ ಪು.) ೨೪೭–೫೯

342. ಅವತಾರಿಕೆ, ಶ್ಲೋ. ಪದಚ್ಛೇದ, ವಿಶ್ಲೇಷಣೆ. 343. ಕಠಿನ ಶಬ್ದಾರ್ಥ. 344. ಉಭಯಪರ ಅನ್ವಯ, ಅರ್ಥ, ಭಾವಾರ್ಥ, ಶ್ರುತಿಸಮಾಖ್ಯೆ.

೩೪. ಅವರ ವ್ಯಾಖ್ಯಾನದ ವೈಭವ (೧೨ ಪು.) ೨೫೯–೭೦

345. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ, ಕಠಿನ ಶಬ್ದಾರ್ಥ, ಶ್ರುತಿಸಮಾಖ್ಯೆ. 346. ಉಭಯಪರ ಅನ್ವಯ, ಅರ್ಥ, ಭಾವಾರ್ಥ.

೩೫. ಸರ್ವದೇವತಾಸ್ತುತ್ಯವಾದ ಮಹಿಮೆ (೧೫ ಪು.) ೨೭೦–೮೪

347. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ, ಕಠಿನ ಶಬ್ದಾರ್ಥ, 348. ಉಭಯಪರ ಅನ್ವಯ, ಅರ್ಥ, ಭಾವಾರ್ಥ. 349. ಶ್ರುತಿಸಮಾಖ್ಯೆ.

(೩) ಮೂರನೆಯ ಉಪವಿಭಾಗ (೩೭-೪೦ ಶ್ಲೋಕಗಳು) ಗ್ರಂಥರಚನೆ.

೩೬. ವ್ಯಾಸಾವತಾರ ವರ್ಣನೆ (೧೧ ಪು.) ೭೮೫-೯೬

350. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ, ಕಠಿನ ಶಬ್ದಾರ್ಥಗಳು. 351. (ಕೇವಲ ವ್ಯಾಸಪರ) ಅನ್ವಯ, ಅರ್ಥ, ಭಾವಾರ್ಥ. 352. ವ್ಯಾಸಾವತಾರದ ಕಥೆ.

೩೭. ಬ್ರಹ್ಮಸೂತ್ರಗಳ ರಚನೆ (೯ ಪು.) ೭೯೬-೮೦೪

353. ಅವತಾರಿಕೆ, ಶ್ಲೋ. ಪದವಿಭಾಗ, ವಿಶ್ಲೇಷಣೆ, ಕಠಿನ ಶಬ್ದಾರ್ಥ. 354. (ಕೇವಲ ವ್ಯಾಸಪರ) ಅನ್ವಯ, ಅರ್ಥ, ಭಾವಾರ್ಥ.

೩೮. ಬ್ರಹ್ಮಸೂತ್ರಭಾಷ್ಯರಚನೆ (೧೩ ಪು.) ೮೦೪-೧೭

355. ಅವತಾರಿಕೆ, ಶ್ಲೋ. ಪದ, ವಿಶ್ಲೇಷಣೆ, ಕಠಿನ ಶಬ್ದಾರ್ಥ, ಶ್ರುತಿ ಸಮಾಖ್ಯೆ. 356. (ಕೇವಲ ಮಧ್ವಪರ) ಅನ್ವಯ, ಅರ್ಥ, ಭಾವಾರ್ಥ. 357. ಬ್ರಹ್ಮಸೂತ್ರ ಮತ್ತು ಸೂತ್ರಭಾಷ್ಯದ ಬಗ್ಗೆ ವಿಶೇಷ ವಿಚಾರಗಳು. ವ್ಯಾಸಪರವಾಗಿ ಅರ್ಥ, ಭಾವಾರ್ಥ.

೩೯. ಅನೇಕ ಗ್ರಂಥರಚನೆ (೧೪ ಪು.) ೮೧೭-೩೦

358. ಅವತಾರಿಕೆ, ಶ್ಲೋ. ವಿಶ್ಲೇಷಣೆ, ಕಠಿನ ಶಬ್ದಾರ್ಥ, ಅನ್ವಯ, ಅರ್ಥ, ಭಾವಾರ್ಥ, ಉಡುಪಿ ಕ್ಷೇತ್ರದ ಮಹಿಮೆ, ಮಧ್ವಾಚಾರ್ಯರ ಚರಿತ್ರೆ, ಹೆಚ್ಚಿನ ವಿಷಯ, ಸರ್ವಮೂಲ ಗ್ರಂಥಗಳು, ಪ್ರಸ್ಥಾನತ್ರಯ, ದಶಪ್ರಕರಣಗಳು, ಇತರ ಗ್ರಂಥಗಳು, ವೇದವ್ಯಾಸಪರವಾಗಿ ಅರ್ಥ, ಅನ್ವಯ, ಅರ್ಥ, ಭಾವಾರ್ಥ.

೪೦. ವಂದನಾರ್ಪಣೆ (೯ ಪು.) ೮೩೦-೮೩೮

359. ಅವತಾರಿಕೆ, ಶ್ಲೋ. ಪದ, ವಿಶ್ಲೇಷಣೆ, ಕಠಿನ ಶಬ್ದಾರ್ಥ, ವಾಯುಪರವಾಗಿ ಅನ್ವಯಾರ್ಥ, ವೇದವ್ಯಾಸಪರ ಅನ್ವಯಾರ್ಥ, ಭಾವಾರ್ಥ, ಮಧ್ವಾಚಾರ್ಯರ ಪರವಾಗಿ ಭಾವಾರ್ಥ.

ಐದನೇ ವರ್ಗ—ಫಲಶ್ರುತಿ

(೪೧ ಶ್ಲೋಕಗಳು) ೮೩೮–೮೪೩

೪೧. ಫಲಶ್ರುತಿಪೂರ್ವಕ ಸಮಾಪ್ತಿ (೬ ಪು.) ....

360. ಅವತಾರಿಕೆ, ಅರ್ಥ, ಭಾವಾರ್ಥ.

ಶ್ರೀ ನರಸಿಂಹನಖಸ್ತುತಿಃ—೨ ಶ್ಲೋ. (೧ ಪು.) ೮೪೫

ಶ್ರೀಹರಿವಾಯುಸ್ತುತಿಃ—೪೧ ಶ್ಲೋ. (೧೧ ಪು.) ೮೪೬–೮೫೬

ಖಿಲವಾಯುಸ್ತುತಿಃ—೨೬ ಶ್ಲೋ. (೪ ಪು.) ೮೫೭–೮೬೦

———

೩ನೇ ಭಾಗದ ತಪ್ಪೋಲೆ

(ಕೆ=ಕೆಳಗಿನಿಂದ)

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೪೨೧	೬	ಪ್ರವಿತತ ಮನಸಾ	ಪ್ರವಿತತಮನಸಾ
”	೧೬	ದುಷಸಂಹಾರ	ದುಷ್ಟಸಂಹಾರ
೪೨೬	೧೦	ಘ)ವಿಪ್ರಾನು	ಘ) ಶೋಚದ್ವಿಪ್ರಾನು
”	೧೦–೧೧	ಜೋಡಿಸಬೇಕು. ವಿಪ್ರ	ಜೋಡಿಸಬೇಕು ಶೋಚದ್– ದುಃಖಿಸುತ್ತಿರುವ ವಿಪ್ರ
”	೧೪	ಷಟ್ಕವರ್ಾಯಾಗಾದಿ	ಷಟ್ಕವರ್ಾ ಯಾಗಾದಿ
”	ಕೆ.೩	ಏಕಚಕ್ರಾ+ಅ	ಏಕಚಕ್ರ+ಅ
೪೨೭	೭	ಅಸು ವಿದ್ಯತಿ ಸುಖಸ್ಯ	ಅಸುವಿಧೃತಿಸುಖಸ್ಯ
”	ಕೆ.೧೦	ಸುಖ ಅ ಎಂದು	ಸುಖ ಎಂದು
೪೨೯	೭	ನೇತ್ರರ್ಥಃ’ ತೋರಿ	ನೇತ್ರರ್ಥಃ’ ಎಂದು ತೋರಿ
೪೩೬	೪	‘ಆಪೇವೋದ್ಯದ್	‘ಆಸೇವೋದ್ಯದ್
”	೫	ಮಧ್ಯಾಪಿ	ಮದ್ಯಾಪಿ
”	೧೦	ಮಿಮೀಥೇ	ಮಿಮೀತೇ
೪೩೮	ಕೆ.೧೦	ದೇವ! ವಿಪ್ರಾ	ದೇವ! ಶೋಚದ್‌ವಿಪ್ರಾ
”	ಕೆ.೪,೩,೨	ಪಾಶ್ಯೈಃ–ವಿಪ್ರಾ....ಆ ಬ್ರಾಹ್ಮಣ ಕುಟುಂಬದ –ಹೀಗೆ ತಿದ್ದಿಕೊಳ್ಳಿ—ಪಾಶ್ಯೈಃ—ಶೋಚದ್- (ಬಕಾಸುರನಿಗೆ ಮಾರನೆಯ ದಿನ ಆಹುತಿಯಾಗಿ ಹೋಗಬೇಕಲ್ಲಾ ಎಂದು) ದುಃಖಿಸುತ್ತಿದ್ದ, ವಿಪ್ರ– ಬ್ರಾಹ್ಮಣ ಕುಟುಂಬದ	
೪೪೨	೫	ಅನ್ನಂಮಾಂಸ	ಅನ್ನಂ ಮಾಂಸ
೪೪೪	ಕೆ.೯	ವನ ಹೊಲಸು	ವನದ ಹೊಲಸು
೪೪೫	೬	ಭಕ್ಷಿತು ರತ್ತು	ಭಕ್ಷಿತುರತ್ತು

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೪೪೫	೧೦	ಐಚ್ಛತು	ಐಚ್ಛತ್
೪೪೬	೧೫	ಮಹಿತಾ	ಮಹತಾ
೪೪೭	ಕೆ.೨	ಸ್ನಾತ್ವಾ ಎಂಬುದನ್ನು ಮುಂದಿನ ಪಂಕ್ತಿಗೆ ಸೇರಿಸಿಕೊಳ್ಳಬೇಕು	
೪೫೦	೬	ಪ್ರಸನೇ	ಪ್ರಸನ್ನೇ
೪೫೨	ಕೆ.೭	ಐತರೇಯಭಾಷ	ಐತರೇಯಭಾಷ್ಯ
೪೭೬	ಕೆ.೭	ದೇವಶ್ರೇಷ್ಠ	ದೇವಶ್ರೇಷ್ಠಂ
೪೮೦	೭	ಪ ಕಾರ	ಪ್ರಕಾರ
೪೯೧	೬	(ಸ್ವಾ. ಸ)	(ಸ್ವಾ. ಪ.)
೪೯೩	೩	ವೃತ್ತೇಷು	ವೃತ್ರೇಷು
"	೪	(ಪಾ.೩।೮।೮೭)	(ಪಾ.೩।೨।೮೭)
೫೧೧	೬	(a) (b) ಗಳನ್ನು	(a) (b)
೫೧೨	ಕೆ.೩	ಪದ್ಮ–ಪಾದ	ಪದ್ಮಂ–ಪಾದ
೫೧೩	ಕೆ.೬	ದ್ದಾಮ ಬಾಹೋಃ	ದ್ದಾಮಬಾಹೋಃ
೫೧೪	೩	ಶರಣಂ	ಶರಣು
೫೨೧	೪	ವಿಣ್ಮೂತ್ರ ಶೋಣಿತ	ವಿಣ್ಮೂತ್ರಶೋಣಿತ
೫೨೪	೩	ಶಲ್ಯನು ಭೀಷ್ಮ	ಭೀಷ್ಮ,
"	೪–೫	ಬಿಟ್ಟಿದ್ದ ಕೌರವ	ಬಿಟ್ಟಿದ್ದರಿಂದ ಕೌರವ
೫೨೪	೬	ವುದಕ್ಕಾಗಿ ಹುಂಕಾರ	ವುದಕ್ಕಾಗಿ ಶಲ್ಯನು ಹುಂಕಾರ
೫೨೮	ಕೆ.೨	ಚೇತುಂ	ಜೇತುಂ
೫೩೨	ಕೆ.೩	ಖಳ ಖಳರ	ಖಿಳ ಖಳರ
೫೪೦	೧೦	ತಾನು ಶುಶ್ರುಮ	ನಾನುಶುಶ್ರುಮ
೫೪೪	೭	ವಾಗ್ದೇವಿ	ವಾಗ್ದೇವೀ
೫೪೬	ಕೆ.೬	ಯೋಚಿಸಿದೆ	(ಯೋಚಿಸದೆ)

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೫೫೦	೧೩	ಅರ್ಥವನ್ನೂ	ಅರ್ಥವನ್ನೂ ಹೇಳುತ್ತಾರೆ.
೫೫೨	ಕೆ.೮	ಉತ್ಕೃಷ್ಟ ಪ್ರಾಪ್ತಾ	ಉತ್ಕೃಷ್ಟತಾಂ ಪ್ರಾಪ್ತಾ
೫೫೩	೫	ಅನೇಕ ಅನೇಕ	ಅನೇಕ
೫೫೬	ಕೆ.೮	ಆಶ್ರಯವಿಲ್ಲ. (ಅನಿಲ)	ಆಶ್ರಯವಿಲ್ಲ (ಅನಿಲ).
"	ಕೆ.೭	ಇಲ್ಲದವನು(.	ಇಲ್ಲದವನು).
"	ಕೆ.೪	ನೀನು ಲೌಕಿಕ	ಲೌಕಿಕ
೫೫೭	ಕೆ.೩	ಪೂರ್ವ ಭೀಮ	ಪೂರ್ವಭೀಮ
೫೫೮	೭	ಪೂರ್ವ ಭೀಮ	ಪೂರ್ವಭೀಮ
"	"	ಹಿಂದಿದ	ಹಿಂದಿನ
"	ಕೆ.೪	ಮಾಂ-ನನ್ನನ್ನು);	(ಮಾಂ-ನನ್ನನ್ನು);
೫೬೭	೧೪	ಕಾಡುವ	ಕಾಡುವ,
೫೬೯	೬	ಕುರುಕುಲ ಜನನೇ	ಕುರುಕುಲಜನನೇ
೫೭೧	ಕೆ.೫	ಮಾಡಿದ್ದೇ	ಮಾಡಿದ್ದು
೫೮೮	೩	ಅಮಂ	ಅಮುಂ
೫೯೧	೭	ಅಂಜಿದಂತೆ ತನ್ನ	ಅಂಜಿದಂತೆ ನಟಿಸಿ ತನ್ನ
೫೯೮	೧೦	ಕಸ್ತಂ	ಕಸ್ತ್ವಂ
೬೦೧	೫	(ಉನ್ಮಥ್ಯ,	ಉನ್ಮಥ್ಯ,
"	ಕೆ.೬	ತ್ಸಂಬುದ್ಧಿಃ	ತ್ಸಂಬುದ್ಧಿಃ,
೬೦೨	ಕೆ.೧೦	ಶಿಘ್ರವಾಗಿ	ಶೀಘ್ರವಾಗಿ
"	ಕೆ.೪	ಇತ್ಯಾದಿನಾಯಚ್ಛಾ	ಇತ್ಯಾದಿನಾ ಯಚ್ಛಾ
೬೦೩	೧೩	ಕುಸ(ಮ	ಕುಸುಮ
"	ಕೆ.೬	ರಕ್ಷಿತೋಃ	ರಕ್ಷಿತ್ರೋಃ
೬೦೪	೧೦	ಚಃ-	ಚ-
"	ಕೆ.೩	ಪರ್ವತ ಬಳಿ	ಪರ್ವತದ ಬಳಿ
೬೦೯	ಕೆ.೪	ಆಸೀತ್ಬಾಹ್ಯೇ	ಆಸೀದ್ಬಾಹ್ಯೇ

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೬೦೯	ಕೆ.೩	ರೋಪವಮಂತತ್	ರೋಪವಮಂ ತತ್
"	"	ಪಾಶಾಶ್ಚತೇ	ಪಾಶಾಶ್ಚ ತೇ
"	ಕೆ.೧	ಚಃ	ಚ॥
೬೧೩	೩	ನರಕಾಸುರನ ಭೂದೇವಿ	ಭೂದೇವಿ
"	ಕೆ.೧೦	ಅರವತ್ತು ಸಾವಿರ	ಹದಿನಾರು ಸಾವಿರ
	ಕೆ.೨	"	"
೬೧೪	೫	"	"
೬೧೫	ಕೆ.೬	೧೦೫),	೧೦೫,
೬೧೬	೯	ಕ ಸುಮಂ	ಕುಸುಮಂ
೬೧೯	೧೦	ವಾಗಿದೆಯೆಂದು	ವಾಗಿವೆಯೆಂದು
೭೨೨	೫	ಕುಂಡಲಗಳನ್ನೂ	ಕುಂಡಲಗಳನ್ನು
೬೨೨	೯	ಸುಪ್ರತೀಕವೆಂಬ—ಎಂಬುದನ್ನು ಮುಂದಿನ ಪಂಕ್ತಿಯಲ್ಲಿರುವ 'ದಂತದ ಆನೆಯನ್ನು' ಎಂಬುದರ ನಡುವೆ ಸೇರಿಸಿ—'ದಂತದ ಸುಪ್ರತೀಕವೆಂಬ ಆನೆಯನ್ನು'—ಎಂದು ಓದಬೇಕು.	
೬೨೩	೨	ಇಟ್ಟುಕೊಂಡು	ಇಟ್ಟುಕೊಂಡು[2]
೬೨೪	೧೩	ಉಚ್ಯತೇ	ಉಚ್ಯತೇ'
೬೨೪	ಕೆ.೧	ಕ್ರೋಧ,	ಕ್ರೋಧೇ
೬೨೫	೧೭	ಅಥವ	ಅಥವಾ
"	೨೩	ಜಾತಹ ಣದ	ಜಾತಹರಣದ
೬೩೧	೧೯	ಸಮುದ್ಧರ್ತಾಮೃತ್ಯು	ಸಮುದ್ಧರ್ತಾ ಮೃತ್ಯು
೬೩೪	೨೬	ಸಂಧಿಮಾಡಿಕೊಂಡ	ಸಂಧಿಮಾಡಿಕೊಂಡು
೬೩೮	೧೩	-ನ್ನು	ಇನ್ನು
೬೪೫	೧೪	ಬಲಿ.	ಬಲೀ
೬೪೮	ಕೆ.೧೮	ಕೊಂಡುವಂತೆ	ಕೊಡುವಂತೆ

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೬೪೯	೧೦	ಯೋಜನೆಗಳ	ಯೋಜನಗಳ
೬೫೧	೮	ಸಮೀಪಿಸಿ	ಸಮೀಪಿಸಿ)
೬೫೨	೮	ದೀನ	ದೀನಂ
೬೫೩	೪	(ಧ್ವಜದಲ್ಲೀ,	(ಧ್ವಜದಲ್ಲೀ)
”	ಕೆ.೮	ನಿಜವಲ್ಲದು	ನಿಜವಲ್ಲದ್ದು
೬೫೫	೧೦	ಬಹ್ವೀಕೋಟೀ	ಬಹ್ವೀಃಕೋಟಿಃ
೬೫೯	೧೨	ಕಾಣಿಸಿದ	ಕಾಣಿಸದ
೬೬೧	ಕೆ.೫	ಪೌಂಡ್ರ	ಪೌಂಡ್ರ
೭೦೦	ಕೆ.೪	ವರಾರ್	ವರಾದ್
”	ಕೆ.೧	ಕತಾ	ಕಲಾ
೭೦೧	ಕೆ.೯	ಪ್ರಜಾತಾಭುವಿ	ಪ್ರಜಾತಾ ಭುವಿ
೭೦೩	೧೪	ವಿಸೃಷ್ಟ್ವೋ	ವಿಃಸೃಷ್ಟ್ವೋ
೭೦೪	ಕೆ.೧೧	ದುಷ್ಪ್ರಜ್ಞಾ	ದುಷ್ಪ್ರೇಕ್ಷಾ
೭೦೫	೨	ಪಾಲಕನೂ ಆದ	ಪಾಲಕನೂ ಪ್ರಕಾಶ-ರೂಪನೂ ಆದ
೭೦೭	೩	‘ವಿಷತರ’	‘ವಿಷತರು’
೭೦೯	೧	ಯುಕ್ತಿಯುತೆ	ಯುಕ್ತಿಯಂತೆ
೭೧೦	೧೧	ಜ್ಞಾನವೆಂಬ	ಜ್ಞಾನದಿಂದ
೭೧೨	ಕೆ.೭	ಗೀತೋಪದಾದಿ	ಗೀತೋಪನಿಷದಾದಿ
೭೧೩	ಕೆ.೯	ವಾಸ್ತು	ವಾ. ಸ್ತು.
೭೧೫	೧೦	”	”
೭೧೬	ಕೆ.೯	ದುರ್ದರ್ಶ ನಾನ್ಯ	ದುರ್ದರ್ಶನಾನ್ಯ
೭೧೮	೬	ಕುದಿಯಾಂ	ಕುಧಿಯಾಂ
”	ಕೆ.೫	ಧಾತು ಧಾತು	ಧಾತು
೭೨೦	೬	ಆಶಾದಶ	ಆಶಾ ದಶ

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೭೨೩	೯	ಶಾಂತಿಶೌರ್ಯಾ:	ಶಾಂತಶೌರ್ಯಾ:
”	ಕೆ.೪	ಅ)—	ಅ—
೭೩೨	ಕೆ.೧೧	ರಮಾದಿಭ್ಯೋಪ್ರ್ಯ	ರಮಾದಿಭ್ಯೋಽಪ್ಯ
೭೩೩	೩	ಹರಿವಾಯುಪರವಾಗಿ	ವಾಯುಪರವಾಗಿ
೭೪೩	೬	—70ಡ-ಖಂಡ	270 ಡ (ಪು. ೫೦೭) ಖಂಡ
೭೪೪	೧೦	ಗ್ರಣತೇ	ಗೃಣತೇ
೭೪೭	೧೧	ಎಂದು ಲಭಿಸೀತೆಂದು	ಎಂದು
೭೪೯	೧೨	ಎಂಬ ವಾಕ್ಯವೇ	ವಾಕ್ಯವೇ
೭೫೨	ಕೆ.೧೦	ದುರಿತಂದುಷ್ಕೃತಂ	ದುರಿತಂ ದುಷ್ಕೃತಂ
೭೫೩	ಕೆ.೬	ವಕ್ತ್ರಂ-ಮುಖಂ	ವಕ್ತ್ರಂ-ಮುಖಂ
೭೫೪	೧೨	ಶ್ರೀಕಾಂತಿಯಿಂದ	ಶ್ರೀ-ಕಾಂತಿಯಿಂದ
೭೬೦	ಕೆ.೬	ಸಮವಾಯುಶ್ಚ ಯೋ ಗಣ:	ಸಮವಾಯು-ಶ್ಚಯೋ ಗಣ:
೭೬೧	ಕೆ.೫	ಸವ್ಯಾಹತ್ಯಾದಿ	ಸ್ವವ್ಯಾಹತ್ಯಾದಿ
೭೬೫	೧	ಅಪ್ರಾಮಣಗಳು	ಅಪ್ರಮಾಣಗಳು
೭೭೪	೧೨	ಭೂಕೃದಂತ)	ಭೂತಕೃದಂತ)
೭೭೫	೫	ಕೆಲವು	ಕೆಲವರು
೭೭೯	೨	ಋಷಿ-	ಋಷಿ:-
೭೮೨	ಕೆ.೧೧	ಶತಶಬ್ದ ।	ಶತಶಬ್ದ
೭೮೩	೧೦	ಋಷ್ಯಾದಿಗಳಂತೆಯೇ;	ಋಷ್ಯಾದಿಗಳಂತೆಯೇ);
೭೮೪	೭	)ಯಜ್ಞಯಾಗಾದಿ	(ಯಜ್ಞಯಾಗಾದಿ
೭೮೮	೧೪	ಸಂಭವ:' ಅಮರ	ಸಂಭವ:' ಎಂಬ ಅಮರ
೭೯೦	೪	ಯುಷ್ಮದತ್ಸದೃಶ	ಯುಷ್ಮತ್ಸದೃಶ
೭೯೧	೮	ಸತ್ಯ ವತ್ಯಾಂ	ಸತ್ಯವತ್ಯಾಂ

ಪುಟ	ಪಂಕ್ತಿ	ಅಶುದ್ಧ	ಹೀಗೆ ತಿದ್ದಬೇಕು
೭೯೧	ಕೆ.೬	ಜನನಿಧಿಶಯನಃ	ಜಲನಿಧಿಶಯನಃ
೭೯೭	೬	ಹರಿಪರ ಅರ್ಥ ವ್ಯತ್ಯಾಸವಿಲ್ಲ. ಈಶ್ಲೋಕ	ಕೇವಲ ಹರಿಪರವಾದ ಈ ಶ್ಲೋಕ
೮೦೦	೭	ಲೋಕೋಪಕ್ಲ(ಕೃ)ತ್ಯೈ	ಲೋಕೋಪಕೃತ್ಯೈ
೮೦೭	೧೧	ಪೂರ್ವಕವಾಗಿ	ಪೂರ್ವಕವಾಗಿ.
೮೦೯	೧೦	ಪರರ ವ್ಯಾಧಿಗಳನ್ನು	ಪರರ ವಸ್ತುಗಳನ್ನು
೮೧೦	೧೧	ಪರಿಶೋಭಿಸುವ ;	ಪರಿಶೋಭಿಸುವ) ;
”	ಕೆ.೩	ದುರ್ಭಾಷ್ಯ-ಇಷ್ಟ	ದುರ್ಭಾಷ್ಯಂ–ಇಷ್ಟ
೮೧೪	೨	ಪಾಶುಪತಾಸ್ತ್ರಗಳನ್ನು	ಪಾಶುಪತಶಾಸ್ತ್ರಗಳನ್ನು
೮೧೫	೭	ಪರಿಚ್ಛೇದದಲ್ಲೇ	ಪದಚ್ಛೇದದಲ್ಲೇ
೮೧೬	೧೩	ನಿಶ್ಚಿತವಾದ ;	ನಿಶ್ಚಿತವಾದ) ;
೮೧೯	೩	ಪೀಠಾಭಿದಾನೇ	ಪೀಠಾಭಿಧಾನೇ
೮೨೦	೮	ಒಂದ ಸರಿ	ಒಂದು ಸರಿ
೮೩೦	ಕೆ.೪	ಮಂದಾಕಿನೀ ಸತ್—	ಮಂದಾಕಿನೀಸತ್—



ನವವೃಂದಾವನದ ಪಕ್ಷಿನೋಟ



ಶ್ರೀ ಪದ್ಮನಾಭತೀರ್ಥರು, ನವವೃಂದಾವನ

ಶ್ರೀ ಶ್ರೀಪಾದರಾಜರು, ನರಸಿಂಗತೀರ್ಥ, ಮುಳಬಾಗಿಲು



ಶ್ರೀ ವ್ಯಾಸರಾಜರು, ನವವೃಂದಾವನ



ಶ್ರೀಹರಿವಾಯುಸ್ತುತಿ. ಶ್ಲೋ. ೨೯ [ಖಂಡ 323]

9-12-87 ಬುಧವಾರ

ಮಧ್ವಾವತಾರದ ಮಹಿಮೆ 16A

(೮) ಮೊದಲನೇ ಉಪವಿಭಾಗ (೨೯ರಿಂದ ೩೭ಶ್ಲೋ) – ಮಧ್ವಾವತಾರದ 16A ಉಪಕ್ರಮ.

ಶ್ಲೋಕ ೨೯. ಮಣಿಮಂತನ ಉದಂತ

323. ಶ್ಲೋಕದ ಅವತಾರಿಕೆ — (ಟೀ.) ಭೀಮಾವತಾರವನ್ನು ನಿರೂಪಣೆಮಾಡಿದ ಬಳಿಕ ಮಧ್ವಾವತಾರಕ್ಕೆ ಪ್ರಸಂಗರೂಪವಾಗಿ ಮಣಿಮಂತನು ಭೀಮನ ಮೇಲಿನ ಛಲವನ್ನು ಸಾಧಿಸುವುದಕ್ಕಾಗಿ ಭೂಮಿಯಲ್ಲಿ ಭಾಷ್ಯಕಾರನಾಗಿ ಅವತರಿಸಿ ದುಶ್ಶಾಸ್ತ್ರಗಳನ್ನು ರಚಿಸಿದ ವಿಚಾರವನ್ನು ವರ್ಣಿಸುತ್ತಾರೆ. ಮಧ್ವಾವತಾರದಂತೆ ವೇದವ್ಯಾಸರ ಅವತಾರದ ಮಹಿಮೆಯನ್ನು ಶ್ಲೋಕದಿಂದ ಹೇಳುತ್ತಿರುವುದರಿಂದ ವೇದವ್ಯಾಸರಿಗೆ ವಿರೋಧರೂಪವಾಗಿ ಕಲಿಯು ರುದ್ರದೇವರಲ್ಲಿ ಆವಿಷ್ಟನಾಗಿ ದುಶ್ಶಾಸ್ತ್ರಗಳನ್ನು ರಚಿಸಿದನೆಂದು ಹೇಳುತ್ತಾರೆ (ಪ್ರ.ರಾ.) ಶ್ರೀಹರಿಯು ವೇದವ್ಯಾಸರಾಗಿಯೂ ವಾಯುದೇವರು ಮಧ್ವಾಚಾರ್ಯರಾಗಿಯೂ ಅವತಾರಮಾಡಿದ್ದಕ್ಕೆ ಉದ್ದೇಶ್ಯವೇನೆಂದ-

ಲೇಖಕರ ಹಸ್ತಪ್ರತಿ

ಶ್ರೀ ಹರಿ ವಾಯು ಸ್ತುತಿ

ಮೂರನೇ ಭಾಗ

। ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಹಯಗ್ರೀವಾತ್ಮಕ ಶ್ರೀಲಕ್ಷ್ಮೀನೃಸಿಂಹಾಯ ನಮಃ ।

ಶ್ರೀ ಹ ರಿ ವಾ ಯು ಸ್ತು ತಿ

ಮೂರನೆಯ ಭಾಗ

ಮೂರನೇ ವರ್ಗ—ಭೀಮಾವತಾರ ಮಹಿಮೆ

(೨೨ರಿಂದ ೨೮ರ ವರೆಗೆ ಶ್ಲೋಕಗಳು)

ಲೇಖಕನ ಮಂಗಳಾಚರಣೆ

ಶ್ರೀಕೃಷ್ಣ ಪಾರ್ಥನುತಪಾದಸರೋಜಯುಗ್ಮ
ಭೈಷ್ಮ್ಯಾದಿಕಾಂತ ಸುಮನೋಹರರೂಪಮೂರ್ತೇ।
ಕಂಸಾದಿಮರ್ದನ ದಯಾಮಯ ಪುಣ್ಯಕೀರ್ತೇ
ಚಿತ್ತೇ ರಮಸ್ವ ಸತತಂ ಸಕಲಾರ್ತಿಹಾರಿನ್ ॥ ೧ ॥

ಶ್ರೀಕೃಷ್ಣನ ಸ್ತುತಿ— ಹೇ ಶ್ರೀಕೃಷ್ಣ! ಧರ್ಮಭೀಮಾರ್ಜುನಾದಿ ಪಾಂಡವರಿಂದ ವಂದಿತವಾದ ಪಾದಕಮಲದ್ವಯವುಳ್ಳವನೇ, ರುಕ್ಮಿಣೀ-ಸತ್ಯಭಾಮಾದಿ ಅಷ್ಟಮಹಿಷಿಯರ ಪ್ರಿಯಕಾಂತನೇ, ಮನ್ಮಥಕೋಟಿಗೂ ಮಿಗಿಲಾದ ರೂಪಲಾವಣ್ಯದಿಂದ ಕೂಡಿದ ಹೇ ಸುಂದರಾಂಗ, ಕಂಸಾದಿ ದೈತ್ಯರನ್ನು ಧ್ವಂಸಮಾಡಿದ ಮಹಾಪರಾಕ್ರಮಶಾಲಿಯೇ, ಕರುಣಾಮಯನೇ, ಪುಣ್ಯಚರಿತ್ರನೇ, ಸಕಲಾನಿಷ್ಟಗಳನ್ನೂ ಪರಿಹರಿಸುವ ಸ್ವಾಮಿಯೇ! ನನ್ನ ಚಿತ್ತದಲ್ಲಿ ಸದಾ ವಿಹರಿಸುತ್ತಿರು.

ಶ್ರೀಕೃಷ್ಣಸೇವಾಧುರಧಾರಕಾಯ
ವೀರಾಯ ದೋರ್ದಂಡಸುಮಂಡಿತಾಯ ।
ಸರ್ವಾರಿದರ್ಪಕ್ಷಯಕಾರಣಾಯ
ಭೀಮಾಯ ತಸ್ಮೈ ಬಹುಧಾ ನಮೋಽಸ್ತು ॥ ೨ ॥

ಭೀಮಸೇನನ ಸ್ತುತಿ— ಶ್ರೀಕೃಷ್ಣಸೇವಾಧುರಂಧರನಾದ ವೀರಾಗ್ರಣಿಯೂ, ಮಹಾಭುಜಪರಾಕ್ರಮಶಾಲಿಯೂ ಆದ, ಬಕ ಹಿಡಿಂಬ ಕೀಚಕ ಜರಾಸಂಧಾದಿ ಸಮಸ್ತ ದುಷ್ಟಶತ್ರುಗಳ ದರ್ಪವನ್ನೂ ಅಡಗಿಸಿಬಿಟ್ಟಂಥಾ (ವಾಯುದೇವರ ದ್ವಿತೀಯಾವತಾರವಾದ) ಭೀಮನಿಗೆ ಮತ್ತೆಮತ್ತೆ ಅನೇಕ ಪ್ರಕಾರವಾಗಿ ಸಾಷ್ಟಾಂಗ ನಮಸ್ಕಾರಗಳು.

ಭೀಮಸೇನ ಮಹಾಬಾಹೋ ತ್ವತ್ಸೇವಾನಿರತೇ ಮಯಿ ।
ಕೃಪಾಕಟಾಕ್ಷವಿನ್ಯಾಸಂ ಕೃತ್ವಾ ಮಾಮುದ್ಧರ ಪ್ರಭೋ ॥ ೩ ॥

ಪ್ರಾರ್ಥನೆ— ಹೇ ಭೀಮಸೇನ! ಮಹಾಬಲಶಾಲಿಯೇ! ನಿನ್ನ ಮಹಿಮೆಯ ಸ್ತೋತ್ರರೂಪವಾದ ಸೇವೆ ಮಾಡಲು ಉದ್ಯುಕ್ತನಾದ ನನ್ನ ಮೇಲೆ ಕೃಪಾಕಟಾಕ್ಷವನ್ನು ಬೀರಿ ನನ್ನ ಪ್ರಯತ್ನವು ಶ್ರೀಹರಿಪ್ರೀತಿಕರವಾಗಿ ಸಫಲವಾಗುವಂತೆ ಮಾಡಿ, ಹೇ ಪ್ರಭೋ, ನನ್ನನ್ನು ಉದ್ಧರಿಸು, ಕೃತಾರ್ಥನನ್ನಾಗಿ ಮಾಡು.

ಅಥ ವಾಯುಸ್ತುತಿಪ್ರೋಕ್ತ—ಮಹಿಮಾ ಕೃಷ್ಣಭೀಮಯೋಃ ।
ಭಾರತಾದಿಭ್ಯ ಉದ್ಧೃತ್ಯ ಯಥಾಮತಿ ನಿರೂಪ್ಯತೇ ॥ ೪ ॥

ಅರ್ಥವಿವರಣೆಯ ಸಂಕಲ್ಪ— ಶ್ರೀಕೃಷ್ಣನ ಭೀಮನ ಹಾಗೂ ಗುರುಗಳ ಪ್ರಾರ್ಥನೆ ಮಾಡಿದ ಬಳಿಕ (ಅವರೆಲ್ಲರ ಅನುಗ್ರಹಬಲದಿಂದ) ವಾಯುಸ್ತುತಿಯಲ್ಲಿ ಹೇಳಿರುವ ಶ್ರೀಕೃಷ್ಣ ಮತ್ತು ಭೀಮಸೇನ ಇವರಿಬ್ಬರ ಮಹಿಮೆಯನ್ನು ಭಾರತ ಭಾಗವತ ಹರಿವಂಶಾದಿ ಗ್ರಂಥಗಳಿಂದ ಸಂಗ್ರಹಿಸಿ ಯಥಾಮತಿ ವಿಸ್ತರಿಸಿ ನಿರೂಪಣೆ ಮಾಡುತ್ತೇನೆ.

ಆದೌ ನಖಸ್ತುತಿಂ ಪಠೇತ್ ॥

ಹರಿಃ ಓಂ ॥

ಪಾಂತ್ವಸ್ಮಾನ್ ಪುರುಹೂತವೈರಿ-ಬಲವನ್-ಮಾತಂಗಮಾದ್ಯದ್ಘಟಾ-
ಕುಂಭೋಚ್ಚಾದ್ರಿವಿಪಾಟನಾಧಿಕಪಟು— ಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯ ಪ್ರತತಸುನಖರಾ ದಾರಿತಾರಾತಿದೂರ-
ಪ್ರಧ್ವಸ್ತಧ್ವಾಂತಶಾಂತ-ಪ್ರವಿತತ ಮನಸಾ ಭಾವಿತಾ ನಾಕಿವೃಂದೈಃ*॥

(*ಉಡುಪಿ ಕಡೆಯ ಪಾಠ—ಭೂರಿಭಾಗ್ಯೈಃ)

ಲಕ್ಷ್ಮೀಕಾಂತಸಮಂತತೋ(ಪಿ) ವಿಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ।
ಯದ್ರೋಷೋತ್ಕರದಕ್ಷನೇತ್ರಕುಟಿಲ-ಪ್ರಾಂತೋತ್ಥಿತಾಗ್ನಿಸ್ಫುರತ್
ಖದ್ಯೋತೋಪಮವಿಸ್ಫುಲಿಂಗಭಸಿತಾ ಬ್ರಹ್ಮೇಶ-ಶಕ್ರೋತ್ಕರಾಃ ॥ ೨ ॥

(ಅ) ದುಷ್ಟಸಂಹಾರದಿಂದ ಭೂಭಾರಹರಣ (ಶ್ಲೋ. ೨೨-೨೪)

ಶ್ಲೋ. ೨೨ ಬಕ ಕಿರ್ಮೀರರ ವಧೆ

251. ಅವತಾರಿಕೆ— (ಲೇ)* 'ಪ್ರಥಮೋ ಹನುಮಾನ್ನಾಮ ದ್ವಿತೀಯೋ ಭೀಮ ಏವ ಚ ।' ಎಂಬ ಪ್ರಮಾಣದಂತೆ ಮೊದಲನೆಯ ಅವತಾರವಾದ ಹನುಮಂತನ ಮಹಿಮೆಯನ್ನು ನಿರೂಪಣೆ ಮಾಡಿದ ಬಳಿಕ, ದ್ವಾಪರಯುಗದಲ್ಲಿ ಶ್ರೀಕೃಷ್ಣನ ಸೇವೆಗಾಗಿ ಅವನ ಪ್ರಧಾನಾಂಗವಾಗಿ ಅವತಾರ ಮಾಡಿದ ವಾಯುದೇವರ ದ್ವಿತೀಯಾವತಾರವಾದ ಭೀಮಸೇನನ ಮಹಿಮೆಯನ್ನೂ, ಹಾಗೆಯೇ ಭೀಮೋಪಾಸ್ಯನಾದ ಆ ಶ್ರೀಕೃಷ್ಣನ ಚರಿತ್ರೆಯನ್ನೂ ಏಳು ಶ್ಲೋಕಗಳಲ್ಲಿ ಶ್ಲೇಷದಿಂದ ವರ್ಣಿಸಲು ಆರಂಭಿಸಿದ ಶ್ರೀ ಕವಿವರ್ಯರಾದ ಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯರು ಮೊಟ್ಟಮೊದಲು ಲೋಕ

---

*ಇನ್ನು ಮುಂದೆ 'ಲೇ.' ಎಂದು ತೋರಿಸಿದ ಭಾಗಗಳು ಈ ಲೇಖಕನದೆಂದು ತಿಳಿಯಬೇಕು.

ಕಂಟಕರಾಗಿದ್ದ ಬಕಾಸುರ ಕಿರ್ಮೀರರನ್ನು ಸಂಹಾರಮಾಡಿ ಜನಗಳಿಗೆ ಬಂದಿದ್ದ ದೊಡ್ಡ ಕಂಟಕವನ್ನು ಪರಿಹರಿಸಿದ ಶ್ರೀಕೃಷ್ಣ ಭೀಮಸೇನರ ಮಹಿಮೆಯನ್ನು ಪ್ರಶಂಸಿಸುತ್ತಾರೆ. (ಪು.ರಾ.) ಇನ್ನು ಶ್ಲೋಕಸಪ್ತಕದಿಂದ ಶ್ರೀಕೃಷ್ಣಚರಿತ್ರೆ ಭೀಮಾವತಾರದ ಚರಿತ್ರೆಗಳನ್ನು ನಿರೂಪಿಸುತ್ತಾರೆ. (ಕಕ., ವಿ.) ಹನುಮದವತಾರದ ಮಹಿಮೆಯನ್ನು ನಿರೂಪಣೆ ಮಾಡಿದ ಬಳಿಕ ಭೀಮಾವತಾರದ ಮಹಿಮೆಯನ್ನೂ ವಿಜ್ಞಾಪಿಸುತ್ತಾ ಆ ಭೀಮಸೇನನಿಗೆ ಪ್ರಣಾಮ ಮಾಡುತ್ತಾರೆ. (ಭ.) ಭೀಮಾವತಾರದ ಅಸಾಧಾರಣ ವ್ಯಾಪಾರಗಳನ್ನು ಹೇಳಲು ಆರಂಭಿಸಿ ಅವನಿಗೆ ವಂದಿಸುತ್ತಾರೆ—' ಜಘ್ನೇ....' ಎಂಬ ಶ್ಲೋಕದಿಂದ.

ಜಘ್ನೇ ನಿಘ್ನೇನ ವಿಘ್ನೋ ಬಹುಲ-ಬಲ-ಬಕ
ಧ್ವಂಸನಾದ್ ಯೇನ ಶೋಚದ್-
ವಿಪ್ರಾನುಕ್ರೋಶಪಾಶೈ—ರಸು-ವಿಧೃತಿ-ಸುಖ-
ಸ್ಯೈಕಚಕ್ರಾ-ಜನಾನಾಮ್ ।
ತಸ್ಮೈ ತೇ ದೇವ ! ಕುರ್ಮಃ ಕುರುಕುಲಪತಯೇ
ಕರ್ಮಣಾ ಚ ಪ್ರಣಾಮಾನ್
ಕಿರ್ಮೀರಂ ದುರ್ಮತೀನಾಂ ಪ್ರಥಮಮಥ ಚ ಯೋ
ನರ್ಮಣಾ ನಿರ್ಮಮಾಥ ॥ ೨೩ ॥

ಪದವಿಭಾಗ— (ಉಭಯಪರ) ಜಘ್ನೇ, ನಿಘ್ನೇನ, ವಿಘ್ನಃ, ಬಹುಲ-ಬಲ-ಬಕ-ಧ್ವಂಸನಾತ್, ಯೇನ, ಶೋಚದ್ವಿಪ್ರಾನುಕ್ರೋಶಪಾಶೈಃ, ಅಸು-ವಿಧೃತಿಸುಖಸ್ಯ, (ಹರಿಪರವಾಗಿ ಮಾತ್ರ—ಏಕಚಕ್ರ, ಅ, ಜನಾನಾಂ; ವಾಯುಪರವಾಗಿ—) ಏಕಚಕ್ರಾ-ಜನಾನಾಂ, ತಸ್ಮೈ, ತೇ, ದೇವ, ಕುರ್ಮಃ, ಕುರುಕುಲಪತಯೇ, ಕರ್ಮಣಾ, ಚ, ಪ್ರಣಾಮಾನ್, ಕಿರ್ಮೀರಂ, ದುರ್ಮತೀನಾಂ, ಪ್ರಥಮಂ, ಅಥ, ಚ, ಯಃ, ನರ್ಮಣಾ, ನಿರ್ಮಮಾಥ ॥

252. **ಶ್ಲೋಕದ ವಿಶ್ಲೇಷಣೆ—** ಈ ಶ್ಲೋಕದಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ— i) ಇಡೀ ಪೂರ್ವಾರ್ಧವು ಒಂದು ಅಧೀನವಾಕ್ಯ; ii) ಪೂರ್ತಿ ಮೂರನೇ ಚರಣ ಇನ್ನೊಂದು ವಾಕ್ಯ. ಪ್ರಧಾನವಾಕ್ಯವೂ

ಇದರಲ್ಲೇ ಅಡಗಿದೆ; iii) ನಾಲ್ಕನೇ ಚರಣವು ಮತ್ತೊಂದು ಅಧೀನವಾಕ್ಯ. ii) ಮೂರನೇ ಚರಣದಲ್ಲಿರುವ 'ದೇವ' ಎಂಬ ಸಂಬೋಧನೆ ಕೃಷ್ಣ-ಭೀಮ ಇಬ್ಬರಿಗೂ ಅನ್ವಯಿಸುತ್ತದೆ. ತಸ್ಮೈ ತೇ ಪ್ರಣಾಮಾನ್ ಕುರ್ಮಃ —ಅಂಥಾ ನಿನಗೆ ನಮಸ್ಕಾರ ಮಾಡುತ್ತೇವೆ ಎಂಬುದೇ ಪ್ರಧಾನವಾಕ್ಯ. ಇದು ಕೃಷ್ಣ ಭೀಮ ಇಬ್ಬರಿಗೂ ಸಂದರ್ಭೋಚಿತವಾಗಿ ಅನ್ವಯಿಸುತ್ತದೆ. i) ಪೂರ್ವಾರ್ಧವು 'ತಸ್ಮೈ'ಗೆ ವಿಶೇಷಣ. ಈ ಅಧೀನವಾಕ್ಯದಲ್ಲಿ 'ಬಕ-ಧ್ವಂಸನಾತ್ ಯೇನ ವಿಘ್ನಃ ಜಘ್ನೇ—ಬಕಾಸುರನನ್ನು ಧ್ವಂಸ ಮಾಡಿದ್ದರಿಂದ ಯಾವ (ಶ್ರೀಕೃಷ್ಣ ಅಥವಾ ಭೀಮ)ನಿಂದ ಜನಗಳಿಗೆ ಇದ್ದ ವಿಘ್ನವು ನಾಶ ಮಾಡಲ್ಪಟ್ಟಿತೋ—ಎಂಬುದೇ ಮುಖ್ಯಭಾಗ. ವಾಕ್ಯದ ಮಿಕ್ಕಭಾಗವು ವಿಘ್ನದ ಅಥವಾ ಜಘ್ನೆಯ ವಿಶೇಷಣಗಳು. ಯಾವ ವಿಘ್ನ ? ಎಂದರೆ 'ಅಸುವಿಧೃತಿಸುಖಸ್ಯ'—ಸುಖವಾಗಿ ಉಸಿರಾಡುವುದಕ್ಕೂ ಅಡಚಣೆಯಾಗಿದ್ದ ವಿಘ್ನ—ಎಂದು ವಿವರಣೆ. ಯಾರಿಗೆ ಆ ವಿಘ್ನ ಬಂದಿತ್ತು? ಎಂದರೆ—'ಏಕ-ಚಕ್ರಾಜನಾನಾಂ'—ಏಕಚಕ್ರಾನಗರಿಯಲ್ಲಿದ್ದ ಜನಗಳಿಗೆ ಬಂದಿದ್ದ ವಿಘ್ನ ಎಂದು ಉತ್ತರ. ವಿಘ್ನ ಪರಿಹಾರ ಮಾಡಲು (ವಿಘ್ನಃ ಜಘ್ನೇ) ಕಾರಣ ವೇನು ? ಎಂದರೆ 'ವಿಪ್ರಾನುಕ್ರೋಶಪಾಶೈಃ ನಿಘ್ನೇನ'—ಬ್ರಾಹ್ಮಣರಮೇಲೆ ಇದ್ದ ಸಹಾನುಭೂತಿಗೆ ಕಟ್ಟುಬಿದ್ದು (ನಿಘ್ನೇನ) ವಿಘ್ನ ಪರಿಹಾರಮಾಡಿದನು. iii) ಮೂರನೇ ವಾಕ್ಯವು ಕೇವಲ ಭೀಮನಿಗೆ ಅನ್ವಯಿಸುತ್ತದೆ. ಇದರಲ್ಲಿ 'ಯಃ ಕಿರ್ಮೀರಂ ನರ್ಮಣಾ ನಿರ್ಮಮಾಥ'—ಯಾರು ಕಿರ್ಮೀರನನ್ನು ಸುಲಭವಾಗಿ—ಲೀಲೆಯಿಂದ ಮರ್ದಿಸಿದನೋ ಎಂಬುದು ಮುಖ್ಯಭಾಗ. ಇದನ್ನು 'ತಸ್ಮೈ ಕುರುಕುಲಪತಯೇ ಪ್ರಣಾಮಾನ್ ಕುರ್ಮಃ' ಎಂದು ಪ್ರಧಾನವಾಕ್ಯದೊಡನೆ ಹೊಂದಿಸಬೇಕು. 'ದುರ್ಮತೀನಾಂ ಪ್ರಥಮಂ' ಎಂಬುದು ಕಿರ್ಮೀರನ ವಿಶೇಷಣ.

ಇಡೀ ಶ್ಲೋಕಕ್ಕೆ ಹರಿಪರವಾಗಿ ಎರಡು ವಿಧ ಅನ್ವಯ ಹೇಳಬಹುದು. i) ದೇವ ! a) ವಿಪ್ರಾನುಕ್ರೋಶಪಾಶೈಃ ನಿಘ್ನೇನ ಯೇನ ಜನಾನಾಂ ವಿಘ್ನಃ ಜಘ್ನೇ, ತಸ್ಮೈತೇ, b) ಯಃ ಕಿರ್ಮೀರಂ ನರ್ಮಣಾ ನಿರ್ಮಮಾಥ, ತಸ್ಮೈ ಕುರುಕುಲಪತಯೇ ಚ ಪ್ರಣಾಮಾನ್ ಕುರ್ಮಃ. (ಅರ್ಥ) ಹೇ

ಕೃಷ್ಣ, ಬ್ರಾಹ್ಮಣರ ಮೇಲಿನ ದಯೆಗೆ ಅಧೀನನಾದ ನೀನು ಜನರಿಗೆ ಬಂದಿದ್ದ ವಿಘ್ನವನ್ನು ಪರಿಹರಿಸಿದೆಯೋ ಅಂಥಾ ನಿನಗೂ, ಕಿರ್ಮೀರಶನ್ನು ಕೊಂದಂಥಾ ಭೀಮನಿಗೂ ನಮಸ್ಕರಿಸುತ್ತೇವೆ. ಇದರಂತೆ ಇಬ್ಬರಿಗೂ ಒಟ್ಟಿಗೆ ನಮಸ್ಕಾರ ಮಾಡಿದಂತೆ ಆಗುತ್ತದೆ. ವು.ರಾ. ವ್ಯಾಖ್ಯಾನದಲ್ಲಿ ನಾಲ್ಕನೇ ಚರಣವನ್ನು 'ದೇವ' ಪದದೊಡನೆ ಹೊಂದಿಸಿ ಕೃಷ್ಣನಿಗೆ ವಿಶೇಷಣ ಮಾಡಿ ಅನ್ವಯ ತೋರಿಸಿದ್ದಾರೆ. ಹೇಗೆಂದರೆ— a) ಯಃ ಕಿರ್ಮೀರಂ ನಿರ್ಮಮಾಥ, ತಸ್ಮೈ ಕುರುಕುಲಪತಯೇ ದೇವ! b) ಯೇನ ವಿಘ್ನಃ ಜಘ್ನೇ, c) ತಸ್ಮೈ ತೇ ಪ್ರಣಾಮಾನ್ ಕುರ್ಮಃ. (ಅರ್ಥ) a) ಕಿರ್ಮೀರನನ್ನು ಕೊಂದಂಥಾ ಭೀಮಸೇನನಿಗೆ ಸ್ವಾಮಿಯಾದ ಕೃಷ್ಣನೇ, b) ಜನಗಳ ವಿಘ್ನ ಪರಿಹಾರ ಮಾಡಿದಂಥಾ, c) ನಿನಗೆ ನಮಸ್ಕಾರ ಮಾಡುತ್ತೇವೆ.

ವಾಯುಪರವಾಗಿ a) ದೇವ! ಯೇನ ಏಕಚಕ್ರಾಜನಾನಾಂ.... ಸುಖಸ್ಯ ವಿಘ್ನಃ ಜಘ್ನೇ, b) ಯಃ ಕಿರ್ಮೀರಂ ನರ್ಮಣಾ ನಿರ್ಮಮಾಥ, c) ತಸ್ಮೈ ಕುರುಕುಲಪತಯೇ ತೇ ಪ್ರಣಾಮಾನ್ ಕುರ್ಮಃ—ಎಂದು ಒಂದೇ ಅನ್ವಯ. (ಅರ್ಥ) a) ಹೇ ದೇವ, ಯಾವ (ನಿನ್ನಿಂದ) ಏಕಚಕ್ರಾನಗರಿಯ ಜನಗಳಿಗೆ ಉಸಿರಾಡುವುದಕ್ಕೂ ಅಡಚಣೆಯಾಗಿದ್ದ ವಿಘ್ನವು ಬಕಾಸುರನ ಸಂಹಾರದಿಂದ ಪರಿಹರಿಸಲ್ಪಟ್ಟಿತೋ, b) ಮತ್ತು ಯಾವ ನೀನು ದುಷ್ಟರಲ್ಲಿ ಅಗ್ರಗಣ್ಯನಾದ ಕಿರ್ಮೀರನನ್ನು ನಿರಾಯಾಸವಾಗಿ ಅಪ್ಪಳಿಸಿಹಾಕಿದೆಯೋ ಅಂಥಾ c) ಕುರುಕುಲಾಗ್ರಣಿಯಾದ ನಿನಗೆ ವಂದನೆಗಳನ್ನು ಮಾಡುವೆವು. ಇಷ್ಟು ನೆನಪಿಟ್ಟುಕೊಂಡರೆ ಉಳಿದದ್ದೆಲ್ಲಾ ಸುಲಭವಾಗಿ ಅರ್ಥವಾಗುತ್ತದೆ.

ಅನ್ವಯಕ್ರಮದಲ್ಲಿ ವಿಶೇಷ— ಹರಿಪರವಾಗಿ ಅರ್ಥ ಹೇಳುವಾಗ ಏಕಚಕ್ರ, ಅ, ಜನಾನಾಂ ಎಂದು ಬಿಡಿಸಬೇಕು. ಏಕಚಕ್ರ, ಅ ಎರಡೂ ಕೃಷ್ಣನಿಗೆ ವಿಶೇಷಣಗಳಾಗುತ್ತವೆ. ಆದರಂತೆ ನಾಲ್ಕನೇ ಚರಣದಲ್ಲಿರುವ ಅಥ, ಚ-ಗಳೂ ಕೃಷ್ಣನಿಗೆ ವಿಶೇಷಣಗಳು. ಇವುಗಳ ಅರ್ಥವನ್ನು ಮುಂದೆ ಖಂಡ 253ರಲ್ಲಿ ವಿವರಿಸಿದೆ. ಭೀಮಪರವಾಗಿ ಅರ್ಥ ಹೇಳುವಾಗ ಏಕಚಕ್ರಾ-ಜನಾನಾಂ ಎಂಬುದು ಒಂದೇ ಪದ. ಅಥ, ಚ ಎಂಬ ಎರಡೂ ಸಂಬಂಧ-ಸೂಚಕಾವ್ಯಯಗಳು, ಅವೆರಡಕ್ಕೂ ಸಾಮಾನ್ಯಾರ್ಥವೇ ಹೇಳಬೇಕು. ಈಗ

ಖಂಡ 254 55ರಲ್ಲಿ ಕೊಟ್ಟಿರುವ ದಂಡಾನ್ವಯ ನೋಡಿದರೆ ಈ ವಿಶ್ಲೇಷಣ ಮತ್ತಷ್ಟು ಚೆನ್ನಾಗಿ ಮಂದಟ್ಟಾಗಿ ಶ್ಲೋಕದ ಅರ್ಥವೂ ಸ್ಪಷ್ಟವಾಗಿ ಹೃದ್ಗತವಾಗುವುದು.

ಈ ಶ್ಲೋಕದಲ್ಲಿ ಕಠಿನಶಬ್ದಗಳೇ ಇಲ್ಲವೆನ್ನಬಹುದು. ಆದರೂ ಏಕ-ಚಕ್ರ, ಅ, ಅಥ ಇತ್ಯಾದಿಗಳಿಗೆ ಕೃಷ್ಣಪರವಾಗಿ ಅರ್ಥ ಹೇಳುವಾಗ ಸ್ವಲ್ಪ-ವಾದರೂ ವಿವರಣೆ ಬೇಕೇಬೇಕಾಗುತ್ತದೆ. ಆದ್ದರಿಂದ ಮೊದಲು ಕಠಿನ-ಶಬ್ದಾರ್ಥ ವಿವರಿಸಿ ಅನಂತರ ಅನ್ವಯ-ಅರ್ಥಗಳಿಗೆ ಹೋಗುವೆನು.

253. ಕಠಿಣ ಶಬ್ದಾರ್ಥ— ಕ) ಜಘ್ನೇ (ಕರ್ಮಣಿ ಪ್ರಯೋಗ, ಪ್ರ.ಪು., ಏಕವಚನರೂಪ) ಸಾಮಾನ್ಯವಾಗಿ 'ಕೊಲ್ಲಲ್ಪಟ್ಟಿತು, ಕೊಲ್ಲಲ್-ಪಟ್ಟನು' ಎಂದರ್ಥ; ಇಲ್ಲಿ ವಿಘ್ನಕ್ಕೆ ಅನ್ವಯಿಸಬೇಕಾಗಿರುವುದರಿಂದ 'ದೂರಮಾಡಲ್ಪಟ್ಟಿತು, ಪರಿಹರಿಸಲ್ಪಟ್ಟಿತು' ಎಂದು ಅರ್ಥ ಹೇಳಬೇಕು. ಜಘ್ನೇ ಎಂಬುದು ಹನ ಹಿಂಸಾ. ಗತ್ಯೋಃ (ಅದಾದಿ ಪರ)=ಕೊಲ್ಲು, ಹೋಗು ಎಂದು ಎರಡರ್ಥವುಳ್ಳ ಹನ್ ಧಾತುವಿನ ಲಿಟ್ ಕರ್ಮಣಿರೂಪ. ಇದರ ರೂಪಸಿದ್ಧಿ ಹೇಗೆ ಎಂಬುದನ್ನು ಕಕ. ಕಿಂಚಿತ್ ತೋರಿಸಿದ್ದಾರೆ—ಲಿಟ್‌ನಲ್ಲಿ 'ಅಭ್ಯಾಸಾಚ್ಚ' (ಪಾ. ೭.೩.೫೫) ಎಂಬ ಸೂತ್ರದಂತೆ ದ್ವಿತ್ವ ಬಂದಾಗ ಹನ್ ಧಾತುವಿನ ಹಕಾರಕ್ಕೆ ಕುತ್ವ (ಘಕಾರಾದೇಶ) ಬಂದು ಹನ್ + ಏ (ಪ್ರತ್ಯಯ) = ಹನ್ + ಹನ್ + ಏ = ಜ + ಘನ್ + ಏ ಎಂದಿರಲು, 'ಗಮ-ಹನಜನ—' (ಪಾ. ೬-೪-೯೮) ಎಂಬ ಸೂತ್ರದಂತೆ ಉಪಧಾ ಅಕಾರಕ್ಕೆ ಲೋಪ ಬಂದು ಜ ಘ್-ನ್-ಏ ಸೇರಿ ಜಘ್ನೇ ಎಂದಾಗಿದೆ.

ಖ) ನಿಘ್ನೇನ ಎಂಬುದು ಯೇನ-ಕ್ಕೆ ವಿಶೇಷಣ (ಕಕ, ವಿ, ಛ). 'ಅಧೀನೋ ನಿಘ್ನ ಆಯತ್ತಃ' ಎಂದು ಅಮರ ಇರುವುದರಿಂದ ಇದಕ್ಕೆ 'ಅಧೀನನಾದ, ಒಳಪಟ್ಟ' ಎಂದರ್ಥ. ಜಘ್ನೇ ನಿಘ್ನೇನ ವಿಘ್ನೋ ಎಂಬಲ್ಲಿ ಮೂರು ಘ್ನ ಗಳು ಸಾಲಾಗಿ ಬಂದಿರುವುದರಿಂದ ಇಲ್ಲಿ ವೃತ್ತ್ಯನುಪ್ರಾಸಾ-ಲಂಕಾರವಿದೆ. ಜೊತೆಗೆ 'ಘ್ನ' ಶಬ್ದವು ಹನ್ ಧಾತುವಿನ ರೂಪವಾದ್ದರಿಂದ ಅದಕ್ಕೆ 'ಕೊಲ್ಲು, ನಾಶಮಾಡು' (ಉದಾ. ಶತ್ರುಘ್ನ, ವೃತ್ರಘ್ನ) ಎಂದು ಅರ್ಥವಾಗುವುದರಿಂದ ಈ ಶ್ಲೋಕಪಠನದಿಂದ (ಪುರಶ್ಚರಣೆಯಿಂದ) ಸಮಸ್ತ ವಿಘ್ನಗಳೂ ಪರಿಹಾರವಾಗುತ್ತವೆ.

ಗ) ಬಕ ಎಂಬುದು ಒಂದು ಜಾತಿಯ ಜಲಚರಪಕ್ಷಿ; ಉದ್ದವಾದ ಕಾಲು, ಕತ್ತು, ಕೊಕ್ಕು ಇರುತ್ತದೆ; ಮೀನು ಹಿಡಿದು ಬದುಕುತ್ತದೆ; ಇದನ್ನು ಶುದ್ಧ ಕನ್ನಡದಲ್ಲಿ ಕೊಕ್ಕರೆ ಎನ್ನುತ್ತಾರೆ. ಇಲ್ಲಿ ಕೊಕ್ಕರೆ ವೇಷ ಧರಿಸಿದ್ದ ಒಬ್ಬ ದೈತ್ಯ ಪ್ರಸಕ್ತನಾಗಿದ್ದಾನೆ; ಅವನನ್ನು ಶ್ರೀಕೃಷ್ಣನು ಸಂಹರಿಸಿದನು. ಬಹಳ ಅನ್ನವನ್ನು ತಿನ್ನುತ್ತಿದ್ದ ಒಬ್ಬ ನರಭಕ್ಷಕ ದೈತ್ಯನೂ ಈ ಶ್ಲೋಕದಲ್ಲಿ ಪ್ರಸಕ್ತನಾಗಿದ್ದಾನೆ, ಅವನನ್ನು ಭೀಮಸೇನ ಸಂಹಾರ ಮಾಡಿದನು. ಈ ಇಬ್ಬರ ಕಥೆಯನ್ನೂ ಮುಂದೆ 256-257ನೇ ಖಂಡಗಳಲ್ಲಿ ಕೊಟ್ಟಿದೆ. ಬಹುಲ-ಬಲ ಎಂಬುದು ಆ ಬಕಾಸುರರಿಗೆ ವಿಶೇಷಣ; ಬಹಳ ಬಲಿಷ್ಠನಾದ ಎಂದರ್ಥ.

ಘ) ವಿಪ್ರಾನುಕ್ರೋಶಪಾಶೈಃ ನಿಷ್ಕ್ರೋಧ ಎಂದು ಜೋಡಿಸಬೇಕು. ವಿಪ್ರ ಎಂಬುದು ಬ್ರಾಹ್ಮಣಜಾತಿಯ ಹೆಸರು; ಇಲ್ಲಿ ಅದೇ ಅರ್ಥ ಹೇಳಬೇಕು. ಜಾತ್ಯಾ ಬ್ರಾಹ್ಮಣ ಅಥವಾ ಜನ್ಮತಃ ಬ್ರಾಹ್ಮಣ. ಯಾಗಾದಿ ಷಟ್ಕರ್ಮನಿರತನಾದ ವಿಪ್ರನಿಗೆ 'ಬ್ರಾಹ್ಮಣ'ನೆಂದು ಹೆಸರು. 'ವಿಪ್ರಶ್ಚ ಬ್ರಾಹ್ಮಣೋಽಸೌ ಷಟ್ಕರ್ಮಾಯಾಗಾದಿಭಿರ್ಯುತಃ'—ಅಮರ. ಅನು-ಕ್ರೋಶ ಎಂದರೆ ಇನ್ನೊಬ್ಬರ ದುಃಖವನ್ನು ನೋಡಿ (ಅನು–ಅನುಸರಿಸಿ, ನೋಡಿ) ಉಂಟಾಗುವ ದಯೆ ಅಥವಾ ಸಹಾನುಭೂತಿ, ಮರುಕ ಎಂದರ್ಥ (ಛ). 'ಕೃಪಾ ದಯಾನುಕಂಪಾ ಸ್ಯಾ–ದನುಕ್ರೋಶೋಽಪಿ' ಎಂದು ಅಮರ. ಬ್ರಾಹ್ಮಣರ ಮೇಲಿನ ಸಹಾನುಭೂತಿಯೆಂಬ ಹಗ್ಗದಿಂದ ಕಟ್ಟಲ್ಪಟ್ಟವರಾಗಿ, 'ದಯಾಪರವಶೇನೇತಿ ಯಾವತ್,' ಬ್ರಾಹ್ಮಣರಿಗೆ ಬಂದಿದ್ದ ದುಃಖವನ್ನು ನೋಡಿ ಮರುಕಗೊಂಡಂಥಾ ಎಂದರ್ಥ.

ಙ) ಏಕಚಕ್ರಾ ಎಂದು ನಗರಿಯ ಹೆಸರು. ಅರಗಿನ ಮನೆಗೆ ಬೆಂಕಿ ಹಚ್ಚಿ ಅಲ್ಲಿಂದ ತಪ್ಪಿಸಿಕೊಂಡು ಬಂದಮೇಲೆ ಪಾಂಡವರು ಬ್ರಾಹ್ಮಣವೇಷ ಧರಿಸಿ ಈ ಏಕಚಕ್ರಾನಗರಿಯಲ್ಲೇ ವಾಸವಾಗಿದ್ದರು. ಶ್ರೀಕೃಷ್ಣಪರವಾಗಿ ಅರ್ಥ ಹೇಳುವಾಗ ಈ ಪದವನ್ನೇ ಏಕಚಕ್ರಾ+ಅ ಎಂದು ಎರಡು ಪದವನ್ನಾಗಿ ಬಿಡಿಸಿಕೊಳ್ಳಬೇಕು. 'ಏಕೇ ಮುಖ್ಯಾನ್ಯ ಕೇವಲಾಃ' ಎಂಬ ಧನಂಜಯ ನಿಘಂಟಿನ ಪ್ರಕಾರ ಏಕ ಎಂದರೆ ಮುಖ್ಯ ಎಂದೂ ಅರ್ಥವಾಗು

ತ್ತದೆ. ಏಕ–ಮುಖ್ಯವಾಗಿ, ಚಕ್ರ–ಚಕ್ರವೇ ಯಾರಿಗೆ ಆಯುಧವಾಗಿದೆಯೋ ಅಂಥಾ ಅಥವಾ ಚಕ್ರಾಯುಧನಾದ ಎಂದು ಕೃಷ್ಣಪರವಾದ ಅರ್ಥ. 'ಅ ಇತಿ ಬ್ರಹ್ಮ' (ಐ.ಉ. ೨-೩-೮) ಎಂದು ಐತರೇಯ ಶ್ರುತಿ ಇದೆ. ಅದಕ್ಕೆ ಭಾಷ್ಯದಲ್ಲಿ ಸ್ವತಂತ್ರನಾದ, ಗುಣಪೂರ್ಣನಾದ, ಸಮಸ್ತದೋಷದೂರನಾದ ಮತ್ತು ಸರ್ವಸ್ಮಾತ್ ಭಿನ್ನನಾದ ಎಂದು ನಾಲ್ಕು ಅರ್ಥ ಹೇಳಿದ್ದಾರೆ. ಇಲ್ಲಿ ನಾಲ್ಕೂ ಅರ್ಥಗಳನ್ನು ಅ ಕ್ಕೆ ಹೇಳಬಹುದು.

ಚ) **ಅಸು ವಿಧೃತಿ ಸುಖಸ್ಯ** ಎಂಬುದನ್ನು 'ವಿಘ್ನ'ದ ಜೊತೆಗೆ ಹೊಂದಿಸಬೇಕು. ಅಸು–ಪ್ರಾಣ, ಉಸಿರಾಡುವಿಕೆ, ಶ್ವಾಸೋಚ್ಛ್ವಾಸ ಎಂದರ್ಥ. ಉಸಿರಾಟವು ನಿರಂತರವಾಗಿರುವುದರಿಂದ ಸಂಸ್ಕೃತದಲ್ಲಿ ಅಸು ಶಬ್ದವೂ ಪ್ರಾಣ-ಶಬ್ದವೂ ನಿತ್ಯಬಹುವಚನಾಂತ ಪುಲ್ಲಿಂಗ ಶಬ್ದಗಳು. ಇದನ್ನೇ ಅಮರಕಾರ 'ಪುಂಸಿ ಭೂಮ್ನ್ಯಸವಃ ಪ್ರಾಣಾಶ್ಚೈವಂ ಜೀವೋಽಸು. ಧಾರಣಮ್' ಎಂದು ಹೇಳಿದ್ದಾನೆ. ಧೃತಿ ಎಂದರೆ ಸಾಮಾನ್ಯವಾಗಿ 'ಧೈರ್ಯ' ಎಂದರ್ಥವಾಗುತ್ತದೆ; ಇಲ್ಲಿ ಧಾರಣೆ, ಧರಿಸುವಿಕೆ ಎಂಬರ್ಥದಲ್ಲಿ ಬಂದಿದೆ ಧೃ (ಧರ್) ಧರಿಸು + ಕ್ತಿನ್ (ಪ್ರತ್ಯಯ) = ಧೃತಿ, ಧಾರಣಂ. ಕ್ತಿನ್ ಪ್ರತ್ಯಯವು ಲ್ಯುಡರ್ಥ (ಭಾವಾರ್ಥ)ದಲ್ಲಿ ಬಂದಿದೆ. ಅಸು....ಸುಖಸ್ಯ ಎಂದರೆ ಉಸಿರಾಟವನ್ನು ಧರಿಸುವ ಸುಖ ಅ ಎಂದು ಪದಶಃ ಅರ್ಥವಾದರೂ ಸುಖವಾಗಿ (ಅನಾಯಾಸವಾಗಿ) ಉಸಿರಾಡುವುದಕ್ಕೂ—ವಿಘ್ನವಾಗಿದ್ದ ಎಂದು ಭಾವಾರ್ಥ.

ಛ) **ಕರ್ಮಣಾ ಚ** ಎಂಬುದನ್ನು 'ಪ್ರಣಾಮಾನ್ ಕುರ್ಮಃ' ಎಂದು ಕ್ರಿಯಾಪದದೊಡನೆ ಹೊಂದಿಸಬೇಕು. ಇದಕ್ಕೆ ಕಾಯಾ-ವಾಚಾ ಮನಸಾ ತ್ರಿಕರಣಪೂರ್ವಕವಾಗಿ ನಮಸ್ಕರಿಸುತ್ತೇವೆ—ಎಂದರ್ಥ.

ಜ) **ಕಿರ್ಮೀರ** ಎಂಬುದು ಒಬ್ಬ ದೈತ್ಯನ ಹೆಸರು. ಇವನನ್ನು ಭೀಮ ಸಂಹಾರ ಮಾಡಿದ ಕಥೆ ಮುಂದೆ 258ನೇ ಖಂಡದಲ್ಲಿ ಕೊಟ್ಟಿದೆ. **ದುರ್ಮತೀನಾಂ ಪ್ರಥಮಂ** ದುಷ್ಟರಲ್ಲಿ ಅಗ್ರಗಣ್ಯನಾದ ಎಂಬುದು ಕಿರ್ಮೀರನ ವಿಶೇಷಣ. ಇವನ ದುಷ್ಟತನದ ವಿವರಣೆ ಮಹಾಭಾರತದ ವನಪರ್ವದಲ್ಲಿ

೧೧ನೇ ಅಧ್ಯಾಯದಲ್ಲಿ* ಬಂದಿದೆ (ಖಂಡ 256 ನೋಡಿ).

ಝು) ಅಥ ಚ ಎರಡೂ ಸಾಮಾನ್ಯವಾಗಿ ಸಂಬಂಧಸೂಚಕಾವ್ಯಯಗಳು. ಅಥ-ಅನಂತರ, ಆಮೇಲೆ ಚ-ಮತ್ತು (ಕೃಷ್ಣಶ್ಚ ಅರ್ಜುನಶ್ಚ ಕೃಷ್ಣಾರ್ಜುನೌ—ಕೃಷ್ಣ ಮತ್ತು ಅರ್ಜುನ ಎಂಬಂತೆ). ಕೃಷ್ಣಪರವಾಗಿ ಎರಡಕ್ಕೂ ವಿಶೇಷವಿದೆಯೆಂದು ಪುರಾ ತೋರಿಸಿಕೊಡುತ್ತಾರೆ. 'ಅನ್ನಂ ಥಂ' —ಥ ಎಂದರೆ ಅನ್ನ ಎಂದು ಶ್ರುತಿಯಿದೆ. ಅನ್ಯಾಯ, ಅಧರ್ಮ ಇತ್ಯಾದಿಗಳಲ್ಲಿರುವಂತೆ ಅಕಾರವು ನಞ್) ವಿರೋಧಾರ್ಥಕ ಅಥವಾ ಅಭಾವಾರ್ಥದಲ್ಲಿ ಬರುತ್ತದೆ. ಆದ್ದರಿಂದ ಅ-ಥ ಎಂದರೆ ಅನ್ನ ಇಲ್ಲದ, ಅನ್ನರಹಿತನಾದ ಎಂದು ಪದಶಃ ಅರ್ಥ. ರೋಗ-ರುಜಿನ, ಜನನ-ಮರಣ, ಮೊದಲಾದ ಸಕಲ ದುಃಖಗಳೂ ಅನ್ನ ತಿನ್ನುವುದರಿಂದಲೇ ಹುಟ್ಟುತ್ತವೆ; ಅಂಥಾ ಅನ್ನವೇ ಇಲ್ಲದಿದ್ದರೆ ಯಾವ ದುಃಖವೂ ಬರುವಹಾಗಿಲ್ಲ ಎಂಬ ಭಾವನೆಯಿಂದ ಅಥ ಎಂದರೆ ದುಃಖರಹಿತನಾದ ಎಂದರ್ಥ. 'ಚಾಸ್ತ್ರೀ ಶೋಣಾ ಶೋಣಿತೇ ತು ಚಂ ಕ್ಲೀಬೇ ವಿಮಲೇ ತ್ರಿಷು' ಎಂದು ನಾನಾರ್ಥರತ್ನಮಾಲಾಕೋಶವಿದೆ. (ಪುರಾ) (ಲೇ.) ಚಕಾರವು ಸಾಮಾನ್ಯವಾಗಿ ಅವ್ಯಯ; ಇದಕ್ಕೆ ಮೇಲೆ ಹೇಳಿದಂತೆ 'ಮತ್ತು' ಎಂದರ್ಥ. ಚಃ ಅಥವಾ ಚಂ ಎಂದು ಅಕಾರಾಂತ ಶಬ್ದವಾದರೆ (ಪು.ನ.ಲಿಂಗ) ಅದಕ್ಕೆ ಶೋಣಾ-ಕಮಲದ ಕೆಂಪು ಛಾಯೆ ಎಂದರ್ಥ (ರಕ್ತದಂತೆ ಕೆಂಪುಬಣ್ಣವಲ್ಲ). ಚಂ ಎಂದು ನಪುಂಸಕಲಿಂಗ ಶಬ್ದವಾದರೆ 'ರಕ್ತಂ' 'ಶೋಣಿತಂ'—ರಕ್ತ ಎಂದರ್ಥವಾಗುತ್ತದೆ. ಚ-ಕಾರವು ವಿಶೇಷಣವಾದರೆ (ಮೂರೂ ಲಿಂಗದಲ್ಲಿ ಅನ್ವಯವಾಗುತ್ತದೆ—ತ್ರಿಷು) ವಿಮಲವಾದ ಅಥವಾ ನಿರ್ಮಲವಾದ, ಪರಿಶುದ್ಧವಾದ ಎಂದರ್ಥವಾಗುತ್ತದೆ. ಪ್ರಕೃತ ಚ-ಕಾರವನ್ನು ಕೃಷ್ಣನ ವಿಶೇಷಣವೆಂದು ಹೇಳಿರುವುದರಿಂದ ಚಃ ಎಂದು ಪುಲ್ಲಿಂಗವಾಗುತ್ತದೆ; ಅದರ ಸಂಬೋಧನಾರೂಪ ಹೇ ಚ! ಇದಕ್ಕೆ ಹೇ ನಿರ್ದೋಷನಾದ ಶ್ರೀಕೃಷ್ಣನೇ! ಎಂದರ್ಥ.

---

* ಮಹಾಭಾರತದ ಪರ್ವ-ಅಧ್ಯಾಯಗಳ ಸಂಖ್ಯೆಗಳೆಲ್ಲ ಕುಂಭಕೋಣದ ಟಿ. ಆರ್. ಕೃಷ್ಣಾಚಾರ್ಯರ ಸಂಸ್ಕರಣಕ್ಕೆ ಅನುಗುಣವಾಗಿವೆ.

ಇ) ನರ್ಮಣಾ ಎಂಬುದು 'ನರ್ಮನ್' ಎಂಬ ನಕಾರಾಂತ ನಪುಂಸಕಲಿಂಗಶಬ್ದದ (ಕರ್ಮನ್-ಕರ್ಮಣಾ ಎಂಬಂತೆ) ತೃತೀಯೈಕವಚನ ರೂಪ. (ವಿ) 'ಕ್ರೀಡಾ ಖೇಲಾ ಚ ನರ್ಮ ಚ' ಎಂದು ಅಮರದಂತೆ ನರ್ಮಣಾ ಎಂದರೆ 'ಆಟದಿಂದ, ಕ್ರೀಡೆಯಿಂದ' ಎಂದು ಅರ್ಥವಾದರೂ ಈ ಸಂದರ್ಭದಲ್ಲಿ 'ಆಟದಂತೆ, ಕ್ರೀಡೆಯಂತೆ ಅಥವಾ ಕಿಂಚಿತ್ತೂ ಶ್ರಮವಿಲ್ಲದೆ ಲೀಲಾಜಾಲವಾಗಿ' ಎಂಗರ್ಥವಾಗುತ್ತದೆ. ಅದನ್ನೇ (ಕಕ) 'ಅನಾಯಾಸೇನೇತ್ಯರ್ಥಃ' ತೋರಿಸಿದ್ದಾರೆ.

ಟ) ನಿರ್ಮಮಾಥ— ಮರ್ದಿಸಿಬಿಟ್ಟನು, ಧ್ವಂಸಮಾಡಿಬಿಟ್ಟನು ಎಂದರ್ಥ. ನಿರ್ ಉಪಸರ್ಗ. 'ಮಂಥ ವಿಲೋಡನೇ' — ಮಥಿಸು, ಮರ್ದಿಸು ('ಮೇಥ ವಿಲೋಡನೇ' ಎಂದು ಸಿದ್ಧಾಂತಕೌಮುದೀ ಪಾಠ, ಭ್ವಾದಿ. ಪರ.) ಎಂಬ ಧಾತುವಿನ ಲಿಟ್ ಪ್ರ.ಪು., ಏ.ವ.ರೂಪ. ಮಮಾಥ। ಮೇಥತುಃ। ಮೇಥುಃ। ಇತ್ಯಾದಿ ರೂಪಗಳು. (ಕಕ) 'ಅತ ಉಪಧಾಯಾಃ' (ಪಾ. ೭ ೨-೧೧೬) ಎಂಬ ಸೂತ್ರದಂತೆ ಉಪಧಾ-ಅಕಾರಕ್ಕೆ ವೃದ್ಧಿ ಬಂದು ಮಮಾಥ ಎಂದಾಯಿತು.

ಠ) ಕುರುಕುಲಪತಯೇ— ಕುರುಕುಲೋತ್ಪನ್ನರಾದ ಕ್ಷತ್ರಿಯವೀರರಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದ ಭೀಮಸೇನನಿಗೆ ಎಂದರ್ಥ. ಕುರುಕುಲದ ಹೆಸರು ಬಹಳ ಪ್ರಸಿದ್ಧವಾದ್ದರಿಂದ ನಾವೆಲ್ಲ ಅದನ್ನು ಕೇಳಿಬಲ್ಲೆವಾದರೂ ಆ ಕುರು ಯಾರು? ಅವನು ಯಾವ ವಂಶದವನು? ಆ ವಂಶದಲ್ಲೇ ಅವನು ಎಷ್ಟನೆಯವನು? ಅವನಿಗೂ ಭೀಮನಿಗೂ ಸಂಬಂಧ ಹೇಗೆ? ಎಂಬ ವಿಚಾರ ಎಲ್ಲರಿಗೂ ತಿಳಿದಿರುವುದಿಲ್ಲ; ಆದಕಾರಣ ಅದರ ವಿವರ ಕೊಡುವುದು ಉಚಿತವಾಗಿದೆ. ಕುರುವಂಶದ ರಾಜರುಗಳ ಬಹು ವಿಸ್ತಾರವಾದ ಕಥೆ ಮಹಾಭಾರತದ ಆದಿಪರ್ವದ (ಸಂಭವಪರ್ವ ಎಂಬ ಉಪಪರ್ವದಲ್ಲಿ) ೬೯ರಿಂದ ೧೩೩ರ ವರೆಗಿನ ಅರವತ್ತೈದು ಅಧ್ಯಾಯಗಳಲ್ಲೂ (ಕೇವಲ ಕುರು ವಂಶದ ವಂಶಾವಳಿ ೬೩ನೇ ಅಧ್ಯಾಯದಲ್ಲಿ ಬಂದಿದೆ), ಹರಿವಂಶದಲ್ಲೂ*

---

* ನನ್ನ ಹತ್ತಿರ ಪುಣೆಯ ಭಂಡಾರ್ಕರ್ ಓರಿಯಂಟಲ್ ಇನ್ಸ್ಟಿಟ್ಯೂಟ್‌ನ 1976ರ ಮುದ್ರಣದ ಪಾಠ—ಹರಿವಂಶ ಇದೆ. ಇದರ ಜೊತೆಗೆ ಮೈಸೂರು ಪ್ರಾಚ್ಯ

(ಭ. ೨೦–೨೩ ಅ. ನೀ.ಬಾಂ.ಉ. ೨೫–೩೨ ಅ.), ಭಾಗವತದಲ್ಲೂ (೯ ಸ್ಕಂ, ಅಧ್ಯಾ. ೧೨, ೧೫–೧೯) ಬಂದಿದೆ. ಆ ವಂಶೀಕರನ್ನು ಸ್ಮರಿಸುವುದೇ ಪರಮ-ಪಾವನವೆಂದೂ, ಪುಣ್ಯಪ್ರದವೆಂದೂ ಆ ಎಲ್ಲ ಗ್ರಂಥಗಳಲ್ಲೂ ಹೇಳಿದೆ. ಭಾಗ-ವತದಲ್ಲಿ 'ಪಾಪಾನಿ ಕೀರ್ತನಾದೇಷಾಂ ವಿಲಯಂ ಯಾಂತಿ ಕೃತ್ಸ್ನಶಃ' (೯ ಸ್ಕಂ, ೧೯ ಅ, ೫೦ ಶ್ಲೋ) (ಕೀರ್ತನಾತ್–ಹೆಸರು ಹೇಳುವುದರಿಂದಲೇ, ಕೃತ್ಸ್ನಶಃ–ಸಂಪೂರ್ಣವಾಗಿ) 'ಇವರುಗಳ ನಾಮೋಚ್ಚಾರಣೆಯಿಂದಲೇ ಸಮಸ್ತ ಪಾಪಗಳೂ ಸಂಪೂರ್ಣವಾಗಿ ನಾಶವಾಗಿಹೋಗುತ್ತವೆ' ಎಂದು ಹೇಳಿದ್ದರೆ, ಹರಿವಂಶದಲ್ಲಿ ಈ ವಂಶದವರ ಚರಿತ್ರೆಯು 'ಕೀರ್ತಿವರ್ಧನಂ' (ಭ. ೨೦-೪೭) ಕೀರ್ತಿಯನ್ನು ಹೆಚ್ಚಿಸುವಂಥಾದ್ದೆಂದೂ, 'ಧನ್ಯಮಾಯು-ಷ್ಯಮಾರೋಗ್ಯಂ ಪುಣ್ಯಂ ಸಂಕಲ್ಪಸಾಧಕಮ್' (ಭ. ೨೦-೪೮, ನೀ.ಬಾಂ. ೨೫.೫೯) ಧನ್ಯರನ್ನು (ಕೃತಕೃತ್ಯರನ್ನು) ಮಾಡುವಂಥಾದ್ದೂ ಆಯುರ್-ವೃದ್ಧಿಕರವೂ ಆರೋಗ್ಯಪ್ರದವೂ ಪುಣ್ಯಕರವೂ ಇಷ್ಟಾರ್ಥಸಿದ್ಧಿಪ್ರದವೂ ಆಗಿದೆಯೆಂದೂ ಹೇಳಿದೆ. ಆದ್ದರಿಂದ ಆ ವಂಶದ ಪೀಳಿಗೆಯನ್ನು ಸಂಕ್ಷೇಪ ವಾಗಿ ಕೊಡುತ್ತೇನೆ.

ಸಂಶೋಧನಾಲಯದಲ್ಲಿದ್ದ ನೀಲಕಂಠೀಯ ವ್ಯಾಖ್ಯಾನಸಹಿತವಾದ, ಬೊಂಬಾಯಿಯ ಗೋಪಾಲನಾರಾಯಣ ಕಂಪನಿಯವರ ಕ್ರಿ.ಶ. 1891ರ ಸಂಸ್ಕರಣದ ಸಟೀಕಾ ಹರಿವಂಶ ವನ್ನೂ, ನಮ್ಮ ಮಿತ್ರರ ಬಳಿ ಇದ್ದ ನೀಲಕಂಠೀಯ ಟೀಕಾಸಹಿತವಾದ, ಬೊಂಬಾಯಿಯ ಬಾಪೂ ಹರಶೇಠ್ ದೇವಳೇಕರ್ ಇವರು ಕ್ರಿ.ಶ. 1879ರಲ್ಲಿ ಪ್ರಕಟಿಸಿದ ಹರಿವಂಶವನ್ನೂ ನೋಡಿದ್ದೇನೆ. ಮೂಲಶ್ಲೋಕಗಳನ್ನು ಆರಿಸಿಕೊಂಡು ಅಧ್ಯಾಯ ಮತ್ತು ಶ್ಲೋಕಸಂಖ್ಯೆ ಗಳೊಡನೆ ಕೊಟ್ಟಿದ್ದೇನೆ. ಭ-ಭಂಡಾರಕರ್ ಸಂಸ್ಥೆಯ ಪಾಠ, ನೀ-ಗೋಪಾಲನಾರಾಯಣ ಇವರ ಪಾಠ, ಬೊಂ-ದೇವಳೇಕರ್ ಸಂಸ್ಕರಣದ ಪಾಠ. ಈ ಸಂಸ್ಕೃತ ಗ್ರಂಥಗಳಲ್ಲದೆ ಶ್ರೀಯುತ ಯು. ಶ್ರೀನಿವಾಸಾಚಾರ್ಯರ ಹರಿವಂಶದ ಸರಳ ಕನ್ನಡಾನುವಾದವನ್ನೂ (ಸಂಕೇತ ಉ) ಶ್ರೀವರ್ಧನ್ ಗಲಗಲಿ ಪಂಢರಿನಾಥಾಚಾರ್ಯರ ಅನುವಾದವನ್ನೂ (ಸಂಕೇತ ಗ) ನೋಡಿ ಅವುಗಳ ಅಧ್ಯಾಯ ಸಂಖ್ಯೆಗಳನ್ನೂ ಪುಟಸಂಖ್ಯೆಗಳನ್ನೂ ಪಾಠಕರ ಅನುಕೂಲಕ್ಕಾಗಿ ಕೊಟ್ಟಿದ್ದೇನೆ. ಉ. ಅನುವಾದದ ಅಧ್ಯಾಯಕ್ರಮ ನೀ. ಗ್ರಂಥಕ್ಕೆ ಅನುಗುಣವಾಗಿದೆ.

ಡ) ಚಂದ್ರವಂಶದ ಬೆಳವಣಿಗೆ— ಶ್ರೀಮನ್ನಾರಾಯಣನ ನಾಭಿಕಮಲದಿಂದ ಚತುರ್ಮುಖಬ್ರಹ್ಮ ಉದಯಿಸಿದನು. ಬ್ರಹ್ಮನ ಮಾನಸ ಪುತ್ರರಲ್ಲಿ ಅತ್ರಿಯೂ ಒಬ್ಬರು. ಈ ಅತ್ರಿಯ ಕಣ್ಣೀರಿನಿಂದ ಚಂದ್ರ ಉದ್ಭವಿಸಿದನು. ಚಂದ್ರನಿಂದ ತಾರೆಯಲ್ಲಿ ಬುಧನು ಹುಟ್ಟಿದನು. ಬುಧನು ಸ್ತ್ರೀಯಾಗಿದ್ದ ಇಳೆಯಲ್ಲಿ ಪುರೂರವನನ್ನು ಮಗನಾಗಿ ಪಡೆದನು. ಊರ್ವಶಿಯು ಪುರೂರವನನ್ನು ಮೋಹಿಸಿ ಅವನೊಡನೆ ಇದ್ದು ಅನೇಕ ಮಕ್ಕಳನ್ನು ಹಡೆದಳು. ಅವಳ ಹಿರಿಯ ಮಗನೇ ಆಯು. ಅವನ ಮಗನೇ ಸ್ವಲ್ಪಕಾಲ ಸ್ವರ್ಗವನ್ನು ಆಳಿದ ನಹುಷಚಕ್ರವರ್ತಿ, ಅವನು ಅಗಸ್ತ್ಯರ ಶಾಪದಿಂದ ಹೆಬ್ಬಾವಾಗಿ ಬಿದ್ದನು. ನಹುಷನ ಹಿರಿಯ ಮಗನೇ ಯಯಾತಿ. ಇವನಿಗೆ ಇಬ್ಬರು ಪತ್ನಿಯರು—ಶುಕ್ರಾಚಾರ್ಯರ ಮಗಳಾದ ದೇವಯಾನಿ ಹಿರಿಯ ಹೆಂಡತಿ; ವೃಷಪರ್ವನೆಂಬ ರಾಕ್ಷಸರಾಜನ ಮಗಳಾದ ಶರ್ಮಿಷ್ಠೆ ಕಿರಿಯ ಹೆಂಡತಿ. (ಇವರ ಕತೆಯೇ ಬಹಳ ದೊಡ್ಡ ವಿಚಾರ.)

ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ।
ದ್ರುಹ್ಯಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ॥

ದೇವಯಾನಿಗೆ ಯದು ತುರ್ವಸು ಎಂದು ಇಬ್ಬರು ಮಕ್ಕಳು ಹುಟ್ಟಿದರು. ಈ ಯದುವಿನ ವಂಶೀಕರೇ ಯಾದವರು—ಅವರ ವಂಶದಲ್ಲೇ ಶ್ರೀಕೃಷ್ಣನೂ ಅವತರಿಸಿದನು; ಆದ್ದರಿಂದಲೇ ಶ್ರೀಕೃಷ್ಣನಿಗೆ ಯಾದವಕೃಷ್ಣನೆಂದು ಹೆಸರು. ಶರ್ಮಿಷ್ಠೆಗೆ ದ್ರುಹ್ಯ, ಅನು, ಪೂರು ಎಂದು ಮೂರು ಮಕ್ಕಳು. ಈ ಪೂರುವೇ ಕೌರವವಂಶಕ್ಕೆ ಮೂಲಪುರುಷ. ಹೀಗೆ ಯಯಾತಿ ಚಂದ್ರನಿಂದ ಆರನೆಯ ತಲೆಯಾದರೆ ಪುರು ಏಳನೆಯ ತಲೆಯಾಗುತ್ತಾನೆ.

ಢ) ಪುರುವಂಶದಲ್ಲಿ ಕುರು—ಈ ಪುರುವಿನ ವಂಶದಲ್ಲಿ ಏಳನೆಯವನೇ ಶಕುಂತಳೆಯನ್ನು ಮೋಹಿಸಿ ವರಿಸಿದ ದುಷ್ಯಂತಮಹಾರಾಜ. ಅವರಿಬ್ಬರ ಮಗನೇ ಪ್ರಸಿದ್ಧನಾದ ಭರತಚಕ್ರವರ್ತಿ. ಭರತನ ಹೆಸರಿನಿಂದಲೇ ನಮ್ಮ ದೇಶಕ್ಕೆ ಭಾರತ ಎಂಬ ಹೆಸರು ಬಂದದ್ದು. ಈ ಭರತನಿಂದ ಏಳನೇ ತಲೆಯವನೇ ಕುರುರಾಜ. ಕುರುವು ಚಂದ್ರನಿಂದ ೩೨ನೆಯವನೂ, ಯಯಾತಿಯಿಂದ ೨೭ನೆಯವನೂ, ಭರತನಿಂದ ಏಳನೆಯವನೂ ಆಗುತ್ತಾನೆ. ರಘುವಿನ

ವಂಶೀಕರು ರಾಘವರೆಂದೂ, ಯದುವಿನ ವಂಶೀಕರು ಯಾದವರೆಂದೂ ಪ್ರಸಿದ್ಧರಾದಂತೆ ಕುರುವಂಶದಲ್ಲಿ ಹುಟ್ಟಿದವರೆಲ್ಲಾ ಕೌರವರೆಂದು ಪ್ರಖ್ಯಾತ ರಾಗಿದ್ದಾರೆ.

೫) ಕೌರವವಂಶ— ಮಹಾಭಾರತದಲ್ಲಿ ಪ್ರಸಿದ್ಧನಾದ ಶಂತನು ಈ ಕುರುವಿನಿಂದ ಎಂಟನೆಯವನು. ಶಂತನು ವರುಣಾಂಶಸಂಭೂತ; ಆದ್ದ-ರಿಂದಲೇ ಸಾಕ್ಷಾತ್ ಗಂಗಾದೇವಿಯೇ ಅವನನ್ನು ವರಿಸಿ ಭೀಷ್ಮಾಚಾರ್ಯನನ್ನು ಹಡೆದಳು. ಆ ಶಂತನುವಿಗೆ ಸತ್ಯವತೀ ಎಂಬ ಎರಡನೇ ಹೆಂಡತಿಯಲ್ಲಿ ಚಿತ್ರಾಂಗದ, ವಿಚಿತ್ರವೀರ್ಯ ಎಂಬ ಇಬ್ಬರು ಗಂಡುಮಕ್ಕಳು ಹುಟ್ಟಿದರು. ವಿಚಿತ್ರವೀರ್ಯನಿಗೂ ಅಂಬಿಕಾ, ಅಂಬಾಲಿಕಾ ಎಂದು ಇಬ್ಬರು ಹೆಂಡರು. ಅಂಬಿಕೆಯಲ್ಲಿ ಕುರುಡನಾದ ಧೃತರಾಷ್ಟ್ರನೂ ಅಂಬಾಲಿಕೆಯಲ್ಲಿ ಪಾಂಡುವೂ ಹುಟ್ಟಿದರು. ಧೃತರಾಷ್ಟ್ರನು ಗಾಂಧಾರಿಯನ್ನು ಮದುವೆಯಾದ. ಅವಳ ಹೊಟ್ಟೆಯಲ್ಲೇ ದುರ್ಯೋಧನಾದಿ ನೂರು ಗಂಡುಮಕ್ಕಳೂ ಕೊನೆಯಲ್ಲಿ ದುಃಶಲೆ ಎಂಬ ಒಬ್ಬ ಹೆಣ್ಣುಮಗಳೂ ಹುಟ್ಟಿದರು. ಇವರಿಗೇ ವಿಶೇಷವಾಗಿ ಕೌರವರು ಎಂಬ ಹೆಸರು ರೂಢಿಯಾಗಿ ಬಂದುಹೋಗಿದೆ. ಪಾಂಡುರಾಜನಿಗೆ ಕುಂತೀ, ಮಾದ್ರೀ ಎಂದು ಇಬ್ಬರು ಪತ್ನಿಯರು. ಕುಂತಿಯು ಯಮ-ಧರ್ಮಾಂಶದಿಂದ ಧರ್ಮರಾಜ, ವಾಯ್ವಂಶಸಂಭೂತನಾದ ಭೀಮಸೇನ, ಇಂದ್ರಾಂಶಸಂಭೂತನಾದ ಅರ್ಜುನ ಎಂಬ ಮೂರು ಮಕ್ಕಳನ್ನು ಹಡೆದಳು. ಮಾದ್ರಿಯು ಅವಳಿ ಜವಳಿ ದೇವತೆಗಳಾದ ಅಶ್ವಿನೀದೇವತೆಗಳ ಪ್ರಸಾದದಿಂದ ನಕುಲ-ಸಹದೇವರೆಂಬ ಅವಳಿ ಮಕ್ಕಳನ್ನು ಪಡೆದಳು. ಪಾಂಡುರಾಜನ ಈ ಐದು ಮಕ್ಕಳೇ ಪಾಂಡವರೆಂದು ಲೋಕವಿಖ್ಯಾತರಾಗಿದ್ದಾರೆ. ವಾಸ್ತವಿಕ ವಾಗಿ ಪಾಂಡವರೈವರೂ ಕುರುವಂಶದಲ್ಲೇ ಹುಟ್ಟಿದವರಾದ್ದರಿಂದ ಕೌರವರೇ ಆದರೂ ರೂಢಿಯಲ್ಲಿ ಆ ಹೆಸರು ಅವರಿಗೆ ಪ್ರಚಾರಕ್ಕೆ ಬರಲಿಲ್ಲ.

ಈ ವಂಶಾವಳಿಯಿಂದ ನಮ್ಮ ಈಗಿನ ಕಥಾನಾಯಕನಾದ ಭೀಮಸೇನ ಚಂದ್ರನಿಂದ ನಲವತ್ತೆರಡನೆಯವನೂ ಪುರುವಿನಿಂದ ಮೂವತ್ತಾರನೆಯವನೂ ಕುರುವಿನಿಂದ ಹತ್ತನೆಯವನೂ ಆಗುತ್ತಾನೆ. ಅವನು ವಾಯ್ವಂಶಸಂಭೂತ ನಾದ್ದರಿಂದ ಬಲದಲ್ಲೂ ಪರಾಕ್ರಮದಲ್ಲೂ ವಿಷ್ಣುಭಕ್ತಿಯಲ್ಲೂ ಕುರು-

ಕುಲೋತ್ಪನ್ನರಾದ ಸಕಲರಿಗಿಂತಲೂ ಅತ್ಯಂತ ಶ್ರೇಷ್ಠನಾದುದರಿಂದ ಪಂಡಿತಾಚಾರ್ಯರು ಭೀಮನಿಗೆ **ಕುರುಕುಲಪತಯೇ** ಎಂದು ವಿಶೇಷಣ ಕೊಟ್ಟಿದ್ದಾರೆಂದು ತಿಳಿಯಬೇಕು.

ತ) ಯುಕ್ತಿಮಲ್ಲಿಕಾದಲ್ಲಿ ಹೇಳಿದ ಸಮಾಖ್ಯೆಗಳು— ಶ್ರೀಮತ್-ವಾದಿರಾಜಸ್ವಾಮಿಗಳವರು ತಮ್ಮ 'ಯುಕ್ತಿಮಲ್ಲಿಕಾ' ಗ್ರಂಥದ ಕಡೆಯ ಭಾಗವಾದ ಫಲಸೌರಭದ ಉತ್ತರಾರ್ಧದಲ್ಲಿ ವಾಯುಸ್ತುತಿಗೆ ಋಗ್ವೇದ-ಶ್ರುತಿಸಮಾಖ್ಯೆ ತೋರಿಸಿಕೊಟ್ಟು ವಾಯುಸ್ತುತಿಯಲ್ಲಿ ಹೇಳಿದ ಅನೇಕ ವಾಕ್ಯಗಳು ಋಗ್ವೇದದ ಋಙ್ಮಂತ್ರಗಳ ಹೇಳಿಕೆಗಳಿಗೆ ಅನುಕೂಲವಾಗಿವೆಯೆಂದು ಸಮರ್ಥಿಸಿ ವಾಯುಸ್ತುತಿಗೆ ಶ್ರುತಿಪ್ರಾಮಾಣ್ಯವನ್ನು ಸಮರ್ಥಿಸಿ-ಕೊಟ್ಟಿದ್ದಾರೆ. (ಸಮಾಖ್ಯೆ ಎಂದರೆ ಸಮಾನವಾದ ಹೇಳಿಕೆ ಎಂದರ್ಥ. ಸಮ–ಒಂದೇ ವಿಧವಾದ, ಆ-ಖ್ಯಾ–ಹೇಳಿಕೆ. ಇದರ ಅರ್ಥ ಮುಂದೆ ಸ್ಪಷ್ಟವಾಗಿ ಗೊತ್ತಾಗುವುದು.)

ಋಗ್ವೇದಸಂಹಿತೆಯ ನವಮ ಮಂಡಲದಲ್ಲಿ ೧೧೪ ಸೂಕ್ತಗಳೂ, ೧,೧೦೮ ಋಙ್ಮಂತ್ರಗಳೂ ಇವೆ. ಅಥವಾ ಆರನೇ ಅಷ್ಟಕದಲ್ಲಿ ಪ್ರಾರಂಭದ ೧೫ ವರ್ಗ ಬಿಟ್ಟು ಕಡೆಯ ಎರಡು ಅಧ್ಯಾಯಗಳೂ (೭ನೇ ೮ನೇ ಅಧ್ಯಾಯಗಳೂ), ಏಳನೇ ಅಷ್ಟಕದಲ್ಲಿ ಕಡೆಯ ೫ ವರ್ಗ ಬಿಟ್ಟು ಉಳಿದ ಐದು ಅಧ್ಯಾಯಗಳೂ ಸೇರಿ ಸ್ವಲ್ಪ ಕಡಿಮೆ ಏಳು ಅಧ್ಯಾಯಗಳಾಗುತ್ತವೆ. ಇವಿಷ್ಟಕ್ಕೂ ಪವಮಾನನೆಂಬ ಸೋಮನೇ ದೇವತೆಯಾಗಿದ್ದಾನೆ; ಆದ್ದರಿಂದ ಇಡೀ ನವಮ ಮಂಡಲವನ್ನು (ಏಳು ಅಧ್ಯಾಯಗಳನ್ನು) 'ಪವಮಾನ ಮಂಡಲ ಅಥವಾ ಪವಮಾನಾಧ್ಯಾಯ'ಗಳೆನ್ನುತ್ತಾರೆ. 'ಪಾವಯತೀತಿ ಪವಮಾನಃ'—ಪವಿತ್ರ ಮಾಡುವವನು ಅಥವಾ ಪಾವನ ಮಾಡುವವನು ಪವಮಾನ ಎಂಬ ವ್ಯುತ್ಪತ್ತಿಯಿಂದ ಪವಮಾನ ಶಬ್ದವು ವಾಯುವಾಚಕ. 'ನಭಸ್ವದ್-ವಾತ-ಪವನ—ಪವಮಾನ-ಪ್ರಭಂಜನಾಃ' ಎಂದು ಅಮರದಲ್ಲೂ ಪವಮಾನಶಬ್ದ ವಾಯುಪರ್ಯಾಯವೆಂದು ಹೇಳಿದೆ. ಹೀಗೆ ಪವಮಾನಶಬ್ದ ವಾಯುವಾಚಕವಾದ್ದರಿಂದ ಸೋಮಶಬ್ದವೂ ವಾಯುಪರವಾಗಿದೆಯೆಂದು ತೋರಿಸುತ್ತಾರೆ—೧) ಜಾಗ್ರತ್-ಸ್ವಪ್ನ ಸುಷುಪ್ತ್ಯಾಖ್ಯಾವಸ್ಥಾಸು ದೇಹಿನಾಂ

ದೇಹೇ ಸತ್ತ್ವಾತ್ ಸೋಮಃ (ಕುಂಭಕೋಣದ ಪ್ರತಿಯಲ್ಲಿ ಪುಟ ೬೩೫)= ಎಚ್ಚರಿಕೆ, ನಿದ್ದೆ, ಗಾಢನಿದ್ರೆ ಹೀಗೆ ಮೂರು ದಶೆಗಳಲ್ಲೂ ಶ್ವಾಸರೂಪದಿಂದ ದೇಹದಲ್ಲಿರುವುದರಿಂದ ಸೋಮ. ೨) 'ಸು ಪ್ರಸವಐಶ್ವರ್ಯಯೋಃ' ಇತಿ ಧಾತೋಃ ಔಣಾದಿಕೇ ಮ-ಪ್ರತ್ಯಯೇ ಗುಣೇ ಚ ಕೃತೇ, ಜಗತ್ಪ್ರಸವಿತೃತ್ವಾತ್ ಐಶ್ವರ್ಯವತ್ತ್ವಾದ್ವಾ ಸೋಮಃ। ಸು ಧಾತುವಿಗೆ ಪ್ರಸವಿಸು, ಹಡಿಯುವುದು ಎಂದೂ ಐಶ್ವರ್ಯಯುಕ್ತನಾಗಿರು ಎಂದರ್ಥವಿದೆ. ಸು ಧಾತುವಿಗೆ ಮ ಎಂಬ ಉಣಾದಿ ಪ್ರತ್ಯಯ ಬರಲು ಧಾತುವಿನ ಉಕಾರಕ್ಕೆ ಗುಣವಾಗಿ ಸೋ+ಮ ಎಂದಾಗಿ, ಸೇರಿದಾಗ ಸೋಮ ಎಂದಾಗುತ್ತದೆ. ಅದಕ್ಕೆ ಜಗತ್ತನ್ನು ಪ್ರಸವಿಸುವವನೂ (ಸೃಷ್ಟಿಸುವವನೂ) ಮತ್ತು ಐಶ್ವರ್ಯಶಾಲಿಯೂ ಆದ್ದರಿಂದ ಸೋಮ ಎಂಬ ವ್ಯುತ್ಪತ್ತಿಯಿಂದಲೂ ಸೋಮಶಬ್ದವೂ ಮುಖ್ಯಪ್ರಾಣನನ್ನೇ ಹೇಳುತ್ತದೆ. ಹೀಗೆ ಪವಮಾನ ಶಬ್ದವೂ ಸೋಮ ಶಬ್ದವೂ ಮುಖ್ಯಪ್ರಾಣವಾಚಕವಾದ್ದರಿಂದ ೧೧೪ ಸೂಕ್ತಗಳನ್ನೂ ೧,೧೦೮ ಋಕ್ಕುಗಳನ್ನೂ ಒಳಗೊಂಡ ಪವಮಾನಮಂಡಲವೆಂಬ ಇಡೀ ನವಮ ಮಂಡಲವು (ಅಥವಾ ಪವಮಾನಾಧ್ಯಾಯಗಳೆಂದು ಪ್ರಸಿದ್ಧವಾದ ಸ್ವಲ್ಪ ಕಡಿಮೆಯಾದ ಏಳು ಅಧ್ಯಾಯಗಳೂ) ವಾಯುದೇವರ ಮಹಿಮೆಯನ್ನೇ ಹೇಳುತ್ತವೆ ಎಂದೂ ಆ ಮಧ್ಯೆ ಬರುವ ಅನೇಕ ಋಕ್ಕುಗಳು ಹನುಮ ಭೀಮ ಮಧ್ವ ಎಂಬ ಮೂರು ಅವತಾರಗಳ ಚರಿತ್ರೆಯನ್ನು ಹೇಳುತ್ತವೆಯೆಂದು ಅನೇಕ ಋಕ್ಕುಗಳಿಗೆ ಅರ್ಥ ಹೇಳಿ ತೋರಿಸಿಕೊಟ್ಟಿದ್ದಾರೆ. ಭೀಮಾವತಾರದ ಏಳು ಶ್ಲೋಕಗಳಲ್ಲಿ ಎಲ್ಲೆಲ್ಲಿ ಅಂಥಾ ಶ್ರುತಿ ಸಮಾಖ್ಯೆ ಬಂದಿದೆಯೋ ಅವನ್ನು ಆಯಾ ಶ್ಲೋಕದ ಕೆಳಗೇ ತೋರಿಸಿಕೊಡುತ್ತೇವೆ.

ಥ) ಅಜೀತಯೇ ಽಹತಯೇ ಪವಸ್ವ ಸ್ವಸ್ತಯೇ....ಪವಮಾನಸೋಮ—ಎಂಬುದು ೯ನೇ ಮಂಡಲದ ೯೬ನೇ ಸೂಕ್ತದ ನಾಲ್ಕನೇ ಋಕ್. (ಪೂರ್ಣ ಋಕ್ಕಿನ ಅರ್ಥವನ್ನು ೨೪ನೇ ಶ್ಲೋಕದಲ್ಲಿ ಖಂಡ 270-ಡ-ದಲ್ಲಿ ಕೊಟ್ಟಿದೆ) ಪವಮಾನ ಸೋಮ—ಹೇ ಮುಖ್ಯಪ್ರಾಣ, ಪವಸ್ವ—ನೀನು ಆಡ್ಡಾಡು ಎಂದು ಹೇಳಿ ಅದಕ್ಕೆ ಕಾರಣವನ್ನು ಹೇಳುತ್ತದೆ—ಅಜೀತಯೇ-ಭಕ್ತರಾದ ನಾವು ಶತ್ರುಗಳಿಂದ ಜಯಿಸಲ್ಪಡದೆ ಇರುವುದಕ್ಕಾಗಿಯೂ ಎಂದರೆ

ದೇಹೇ ಸತ್ವಾತ್ ಸೋಮಃ (ಕುಂಭಕೋಣದ ಪ್ರತಿಯಲ್ಲಿ ಪುಟ ೬೩೫)= ಎಚ್ಚರಿಕೆ, ನಿದ್ದೆ, ಗಾಢನಿದ್ರೆ ಹೀಗೆ ಮೂರು ದಶೆಗಳಲ್ಲೂ ಶ್ವಾಸರೂಪದಿಂದ ದೇಹದಲ್ಲಿರುವುದರಿಂದ ಸೋಮ. ೨) 'ಸು ಪ್ರಸವಐಶ್ವರ್ಯಯೋಃ' ಇತಿ ಧಾತೋಃ ಔಣಾದಿಕೇ ಮ-ಪ್ರತ್ಯಯೇ ಗುಣೇ ಚ ಕೃತೇ, ಜಗತ್ಪ್ರಸವಿತೃತ್ವಾತ್ ಐಶ್ವರ್ಯವತ್ವಾದ್ವಾ ಸೋಮಃ। ಸು ಧಾತುವಿಗೆ ಪ್ರಸವಿಸು, ಹಡಿಯುವುದು ಎಂದೂ ಐಶ್ವರ್ಯಯುಕ್ತನಾಗಿರು ಎಂದರ್ಥವಿದೆ. ಸು ಧಾತುವಿಗೆ ಮ ಎಂಬ ಉಣಾದಿ ಪ್ರತ್ಯಯ ಬರಲು ಧಾತುವಿನ ಉಕಾರಕ್ಕೆ ಗುಣವಾಗಿ ಸೋ+ಮ ಎಂದಾಗಿ, ಸೇರಿದಾಗ ಸೋಮ ಎಂದಾಗುತ್ತದೆ. ಅದಕ್ಕೆ ಜಗತ್ತನ್ನು ಪ್ರಸವಿಸುವವನೂ (ಸೃಷ್ಟಿಸುವವನೂ) ಮತ್ತು ಐಶ್ವರ್ಯಶಾಲಿಯೂ ಆದ್ದರಿಂದ ಸೋಮ ಎಂಬ ವ್ಯುತ್ಪತ್ತಿಯಿಂದಲೂ ಸೋಮ-ಶಬ್ದವೂ ಮುಖ್ಯಪ್ರಾಣನನ್ನೇ ಹೇಳುತ್ತದೆ. ಹೀಗೆ ಪವಮಾನ ಶಬ್ದವೂ ಸೋಮ ಶಬ್ದವೂ ಮುಖ್ಯಪ್ರಾಣವಾಚಕವಾದ್ದರಿಂದ ೧೧೪ ಸೂಕ್ತಗಳನ್ನೂ ೧,೧೦೮ ಋಕ್ಕುಗಳನ್ನೂ ಒಳಗೊಂಡ ಪವಮಾನಮಂಡಲವೆಂಬ ಇಡೀ ನವಮ ಮಂಡಲವು (ಅಥವಾ ಪವಮಾನಾಧ್ಯಾಯಗಳೆಂದು ಪ್ರಸಿದ್ಧವಾದ ಸ್ವಲ್ಪ ಕಡಿಮೆಯಾದ ಏಳು ಅಧ್ಯಾಯಗ್ಗಳೂ) ವಾಯುದೇವರ ಮಹಿಮೆಯನ್ನೇ ಹೇಳುತ್ತವೆ ಎಂದೂ ಆ ಮಧ್ಯೆ ಬರುವ ಅನೇಕ ಋಕ್ಕುಗಳು ಹನುಮ ಭೀಮ ಮಧ್ವ ಎಂಬ ಮೂರು ಅವತಾರಗಳ ಚರಿತ್ರೆಯನ್ನು ಹೇಳುತ್ತವೆಯೆಂದು ಅನೇಕ ಋಕ್ಕುಗಳಿಗೆ ಅರ್ಥ ಹೇಳಿ ತೋರಿಸಿಕೊಟ್ಟಿದ್ದಾರೆ. ಭೀಮಾವತಾರದ ಏಳು ಶ್ಲೋಕಗಳಲ್ಲಿ ಎಲ್ಲೆಲ್ಲಿ ಅಂಥಾ ಶ್ರುತಿ ಸಮಾಖ್ಯೆ ಬಂದಿದೆಯೋ ಅವನ್ನು ಆಯಾ ಶ್ಲೋಕದ ಕೆಳಗೇ ತೋರಿಸಿಕೊಡುತ್ತೇವೆ.

ಥ) ಅಜೀತಯೇ ಽಹತಯೇ ಪವಸ್ವ ಸ್ವಸ್ತಯೇ....ಪವಮಾನಸೋಮ—ಎಂಬುದು ೯ನೇ ಮಂಡಲದ ೯೬ನೇ ಸೂಕ್ತದ ನಾಲ್ಕನೇ ಋಕ್. (ಪೂರ್ಣ ಋಕ್ಕಿನ ಅರ್ಥವನ್ನು ೨೪ನೇ ಶ್ಲೋಕದಲ್ಲಿ ಖಂಡ 270-ಡ-ದಲ್ಲಿ ಕೊಟ್ಟಿದೆ) ಪವಮಾನ ಸೋಮ–ಹೇ ಮುಖ್ಯಪ್ರಾಣ, ಪವಸ್ವ–ನೀನು ಅಡ್ಡಾಡು ಎಂದು ಹೇಳಿ ಅದಕ್ಕೆ ಕಾರಣವನ್ನು ಹೇಳುತ್ತದೆ—ಅಜೀತಯೇ-ಭಕ್ತರಾದ ನಾವು ಶತ್ರುಗಳಿಂದ ಜಯಿಸಲ್ಪಡದೆ ಇರುವುದಕ್ಕಾಗಿಯೂ ಎಂದರೆ

ದೇಹೇ ಸತ್ವಾತ್ ಸೋಮಃ (ಕುಂಭಕೋಣದ ಪ್ರತಿಯಲ್ಲಿ ಪುಟ ೬೩೫)= ಎಚ್ಚರಿಕೆ, ನಿದ್ದೆ, ಗಾಢನಿದ್ರೆ ಹೀಗೆ ಮೂರು ದಶೆಗಳಲ್ಲೂ ಶ್ವಾಸರೂಪದಿಂದ ದೇಹದಲ್ಲಿರುವುದರಿಂದ ಸೋಮ. ೨) 'ಸು ಪ್ರಸವಐಶ್ವರ್ಯಯೋಃ' ಇತಿ ಧಾತೋಃ ಔಣಾದಿಕೇ ಮ-ಪ್ರತ್ಯಯೇ ಗುಣೇ ಚ ಕೃತೇ, ಜಗತ್ಪ್ರಸವಿತೃತ್ವಾತ್ ಐಶ್ವರ್ಯವತ್ವಾದ್ವಾ ಸೋಮಃ। ಸು ಧಾತುವಿಗೆ ಪ್ರಸವಿಸು, ಹಡಿಯುವುದು ಎಂದೂ ಐಶ್ವರ್ಯಯುಕ್ತನಾಗಿರು ಎಂದರ್ಥವಿದೆ. ಸು ಧಾತುವಿಗೆ ಮ ಎಂಬ ಉಣಾದಿ ಪ್ರತ್ಯಯ ಬರಲು ಧಾತುವಿನ ಉಕಾರಕ್ಕೆ ಗುಣವಾಗಿ ಸೋ+ಮ ಎಂದಾಗಿ, ಸೇರಿದಾಗ ಸೋಮ ಎಂದಾಗುತ್ತದೆ. ಅದಕ್ಕೆ ಜಗತ್ತನ್ನು ಪ್ರಸವಿಸುವವನೂ (ಸೃಷ್ಟಿಸುವವನೂ) ಮತ್ತು ಐಶ್ವರ್ಯಶಾಲಿಯೂ ಆದ್ದರಿಂದ ಸೋಮ ಎಂಬ ವ್ಯುತ್ಪತ್ತಿಯಿಂದಲೂ ಸೋಮ-ಶಬ್ದವೂ ಮುಖ್ಯಪ್ರಾಣನನ್ನೇ ಹೇಳುತ್ತದೆ. ಹೀಗೆ ಪವಮಾನ ಶಬ್ದವೂ ಸೋಮ ಶಬ್ದವೂ ಮುಖ್ಯಪ್ರಾಣವಾಚಕವಾದ್ದರಿಂದ ೧೧೪ ಸೂಕ್ತಗಳನ್ನೂ ೧,೧೦೮ ಋಕ್ಕುಗಳನ್ನೂ ಒಳಗೊಂಡ ಪವಮಾನಮಂಡಲವೆಂಬ ಇಡೀ ನವಮ ಮಂಡಲವು (ಅಥವಾ ಪವಮಾನಾಧ್ಯಾಯಗಳೆಂದು ಪ್ರಸಿದ್ಧವಾದ ಸ್ವಲ್ಪ ಕಡಿಮೆಯಾದ ಏಳು ಅಧ್ಯಾಯಗ್ಗಳೂ) ವಾಯುದೇವರ ಮಹಿಮೆಯನ್ನೇ ಹೇಳುತ್ತವೆ ಎಂದೂ ಆ ಮಧ್ಯೆ ಬರುವ ಅನೇಕ ಋಕ್ಕುಗಳು ಹನುಮ ಭೀಮ ಮಧ್ವ ಎಂಬ ಮೂರು ಅವತಾರಗಳ ಚರಿತ್ರೆಯನ್ನು ಹೇಳುತ್ತವೆಯೆಂದು ಅನೇಕ ಋಕ್ಕುಗಳಿಗೆ ಅರ್ಥ ಹೇಳಿ ತೋರಿಸಿಕೊಟ್ಟಿದ್ದಾರೆ. ಭೀಮಾವತಾರದ ಏಳು ಶ್ಲೋಕಗಳಲ್ಲಿ ಎಲ್ಲೆಲ್ಲಿ ಅಂಥಾ ಶ್ರುತಿ ಸಮಾಖ್ಯೆ ಬಂದಿದೆಯೋ ಅವನ್ನು ಆಯಾ ಶ್ಲೋಕದ ಕೆಳಗೇ ತೋರಿಸಿಕೊಡುತ್ತೇವೆ.

ಥ) ಅಜೀತಯೇ ಽಹತಯೇ ಪವಸ್ವ ಸ್ವಸ್ತಯೇ....ಪವಮಾನಸೋಮ —ಎಂಬುದು ೯ನೇ ಮಂಡಲದ ೯೬ನೇ ಸೂಕ್ತದ ನಾಲ್ಕನೇ ಋಕ್. (ಪೂರ್ಣ ಋಕ್ಕಿನ ಅರ್ಥವನ್ನು ೨೪ನೇ ಶ್ಲೋಕದಲ್ಲಿ ಖಂಡ 270-ಡ-ದಲ್ಲಿ ಕೊಟ್ಟಿದೆ) ಪವಮಾನ ಸೋಮ—ಹೇ ಮುಖ್ಯಪ್ರಾಣ, ಪವಸ್ವ—ನೀನು ಆಡ್ಡಾಡು ಎಂದು ಹೇಳಿ ಅದಕ್ಕೆ ಕಾರಣವನ್ನು ಹೇಳುತ್ತದೆ—ಅಜೀತಯೇ-ಭಕ್ತರಾದ ನಾವು ಶತ್ರುಗಳಿಂದ ಜಯಿಸಲ್ಪಡದೆ ಇರುವುದಕ್ಕಾಗಿಯೂ ಎಂದರೆ

(ತ್ವಯಾ) ಬಹುಲಬಲಬಕಧ್ವಂಸನಾತ್ ಜನಾನಾಂ ಅಸುವಿಧೃತಿಸುಖಸ್ಯ ವಿಘ್ನಃ ಜಘ್ನೇ, ತಸ್ಮೈ ತೇ ಕರ್ಮಣಾ ಚ ಪ್ರಣಾಮಾನ್ ಕುರ್ಮಃ ॥

ಕೃಷ್ಣಪರವಾಗಿ ಅನ್ವಯಾರ್ಥ (ಮೊದಲನೇ ದಂಡಾನ್ವಯಕ್ಕೆ ಅನುಸಾರ)— ದೇವ-ಕ್ರೀಡಾದಿ ಗುಣವಿಶಿಷ್ಟನಾದ; ಅಘ-ಸಕಲ ದುಃಖಗಳಿಗೂ ಮೂಲಭೂತವಾದ ಅನ್ನದಿಂದ ರಹಿತನಾದ ಕಾರಣ ದುಃಖದ ಗಂಧವೂ ಇಲ್ಲದ; ಚ-ನಿರ್ಮಲನಾದ (ಪರಿಶುದ್ಧನಾದ); ಏಕಚಕ್ರ-ಚಕ್ರವೇ ಮುಖ್ಯವಾದ ಆಯುಧವಾಗಿರುವ; ಅ-ಪರಿಪೂರ್ಣನೂ ಸ್ವತಂತ್ರನೂ ಸರ್ವಸ್ಮಾತ್ ಭಿನ್ನನೂ ಆದ ಶ್ರೀಕೃಷ್ಣನೇ! ಶೋಚದ್........ಪಾಶೈಃ— ಶೋಚದ್-ಗೋಳಾಡುತ್ತಿದ್ದ, ವಿಪ್ರ-ಬ್ರಾಹ್ಮಣರ ಮೇಲಿನ, ಅನುಕ್ರೋಶ-ದಯೆ (ಮರುಕ) ಎಂಬ, ಪಾಶೈಃ-ಹಗ್ಗಗಳಿಂದ (ಬಂಧನಗಳಿಂದ); ನಿಘ್ನೇನ-ಅಧೀನನಾದ (ಎಂದರೆ ಗೋಳಾಡುತ್ತಿದ್ದ ಬ್ರಾಹ್ಮಣರನ್ನು ನೋಡಿ ಮರುಕಗೊಂಡವನಾದ); ಯೇನ (ತ್ವಯಾ)-ಯಾವ ನಿನ್ನಿಂದ; ಬಹುಲ-ಬಲ........ಧ್ವಂಸನಾತ್—ಬಹುಲ-ಬಲ-ಬಹಳ ಬಲಶಾಲಿಯಾಗಿದ್ದ, ಬಕ-ಕೊಕ್ಕರೆಯ ವೇಷ ಧರಿಸಿ ಬಂದಿದ್ದ ಬಕಾಸುರನನ್ನು; ಧ್ವಂಸನಾತ್-ಸಂಹಾರ ಮಾಡಿದ್ದರಿಂದ; ಜನಾನಾಂ-(ವ್ರಜದಲ್ಲಿದ್ದ) ಜನಗಳಿಗೆ (ಇದ್ದಂಥಾ); ಅಸು....ಸುಖಸ್ಯ—ಅಸು-ಪ್ರಾಣವನ್ನು (ಉಸಿರಾಟವನ್ನು), ವಿಧೃತಿ-ನಡೆಸುವ, ಸುಖಸ್ಯ-ಸುಖಕ್ಕೆ; ವಿಘ್ನಃ-ಅಡಚಣೆಯು; ಜಘ್ನೇ-ನಾಶ ಮಾಡಲ್ಪಟ್ಟಿತೋ; ತಸ್ಮೈ ತೇ-ಅಂಥಾ ನಿನಗೂ; (ಚ-ಮತ್ತು); ದುರ್ಮತೀನಾಂ-ದುರ್ಬುದ್ಧಿಯುಳ್ಳ ದುಷ್ಟರಲ್ಲಿ; ಪ್ರಥಮ-ಮೊದಲನೆಯವನಾದ (ಅಗ್ರಗಣ್ಯನಾಗಿದ್ದ); ಕಿರ್ಮೀರಂ-ಕಿರ್ಮೀರನೆಂಬ ದೈತ್ಯನನ್ನು; ಯಃ-ಯಾವ ಭೀಮಸೇನನು; ನರ್ಮಣಾ-ಅನಾಯಾಸವಾಗಿ (ಆಟವಾಡುತ್ತಾ); ನಿರ್ಮಮಾಥ-ಮರ್ದಿಸಿಬಿಟ್ಟನೋ; ತಸ್ಮೈ-ಅಂಥಾ; ಕುರುಕುಲಪತಯೇ(ಚ)-ಕುರುಕುಲಾಗ್ರಣಿಯಾದ ಭೀಮಸೇನನಿಗೂ ಕೂಡ; ಕರ್ಮಣಾ (ಚ)-ಕಾಯಾ ವಾಚಾ ಮನಸಾ (ತ್ರಿಕರಣಪೂರ್ವಕವಾಗಿ): ಪ್ರಣಾಮಾನ್ ಕುರ್ಮಃ-ನಮಸ್ಕಾರಗಳನ್ನು ಅರ್ಪಿಸುವೆವು.

(ತ್ವಯಾ) ಬಹುಲಬಲಬಕಧ್ವಂಸನಾತ್ ಜನಾನಾಂ ಅಸುವಿಧೃತಿಸುಖಸ್ಯ ವಿಘ್ನಃ ಜಘ್ನೇ, ತಸ್ಮೈ ತೇ ಕರ್ಮಣಾ ಚ ಪ್ರಣಾಮಾನ್ ಕುರ್ಮಃ ॥

ಕೃಷ್ಣಪರವಾಗಿ ಅನ್ವಯಾರ್ಥ (ಮೊದಲನೇ ದಂಡಾನ್ವಯಕ್ಕೆ ಅನುಸಾರ)— ದೇವ-ಕ್ರೀಡಾದಿ ಗುಣವಿಶಿಷ್ಟನಾದ; ಅಘ-ಸಕಲ ದುಃಖಗಳಿಗೂ ಮೂಲಭೂತವಾದ ಅಘದಿಂದ ರಹಿತನಾದ ಕಾರಣ ದುಃಖದ ಗಂಧವೂ ಇಲ್ಲದ; ಚ-ನಿರ್ಮಲನಾದ (ಪರಿಶುದ್ಧನಾದ); ಏಕಚಕ್ರ-ಚಕ್ರವೇ ಮುಖ್ಯವಾದ ಆಯುಧವಾಗಿರುವ; ಅ-ಪರಿಪೂರ್ಣನೂ ಸ್ವತಂತ್ರನೂ ಸರ್ವಸ್ಮಾತ್ ಭಿನ್ನನೂ ಆದ ಶ್ರೀಕೃಷ್ಣನೇ! ಶೋಚದ್........ಪಾಶೈಃ—ಶೋಚದ್-ಗೋಳಾಡುತ್ತಿದ್ದ, ವಿಪ್ರ-ಬ್ರಾಹ್ಮಣರ ಮೇಲಿನ, ಅನುಕ್ರೋಶ-ದಯೆ (ಮರುಕ) ಎಂಬ, ಪಾಶೈಃ-ಹಗ್ಗಗಳಿಂದ (ಬಂಧನಗಳಿಂದ); ನಿಘ್ನೇನ-ಅಧೀನನಾದ (ಎಂದರೆ ಗೋಳಾಡುತ್ತಿದ್ದ ಬ್ರಾಹ್ಮಣರನ್ನು ನೋಡಿ ಮರುಕಗೊಂಡವನಾದ); ಯೇನ (ತ್ವಯಾ)-ಯಾವ ನಿನ್ನಿಂದ; ಬಹುಲ-ಬಲ........ಧ್ವಂಸನಾತ್—ಬಹುಲ-ಬಲ-ಬಹಳ ಬಲಶಾಲಿಯಾಗಿದ್ದ, ಬಕ-ಕೊಕ್ಕರೆಯ ವೇಷ ಧರಿಸಿ ಬಂದಿದ್ದ ಬಕಾಸುರನನ್ನು; ಧ್ವಂಸನಾತ್-ಸಂಹಾರ ಮಾಡಿದ್ದರಿಂದ; ಜನಾನಾಂ-(ವ್ರಜದಲ್ಲಿದ್ದ) ಜನಗಳಿಗೆ (ಇದ್ದಂಥಾ); ಅಸು....ಸುಖಸ್ಯ—ಅಸು-ಪ್ರಾಣವನ್ನು (ಉಸಿರಾಟವನ್ನು), ವಿಧೃತಿ-ನಡೆಸುವ, ಸುಖಸ್ಯ-ಸುಖಕ್ಕೆ; ವಿಘ್ನಃ-ಅಡಚಣೆಯು; ಜಘ್ನೇ-ನಾಶ ಮಾಡಲ್ಪಟ್ಟಿತೋ; ತಸ್ಮೈ ತೇ-ಅಂಥಾ ನಿನಗೂ; (ಚ-ಮತ್ತು); ದುರ್ಮತೀನಾಂ-ದುರ್ಬುದ್ಧಿಯುಳ್ಳ ದುಷ್ಟರಲ್ಲಿ; ಪ್ರಥಮ-ಮೊದಲನೆಯವನಾದ (ಅಗ್ರಗಣ್ಯನಾಗಿದ್ದ); ಕಿರ್ಮೀರಂ-ಕಿರ್ಮೀರನೆಂಬ ದೈತ್ಯನನ್ನು; ಯಃ-ಯಾವ ಭೀಮಸೇನನು; ನರ್ಮಣಾ-ಅನಾಯಾಸವಾಗಿ (ಆಟ-ವಾಡುತ್ತಾ); ನಿರ್ಮಮಾಥ-ಮರ್ದಿಸಿಬಿಟ್ಟನೋ; ತಸ್ಮೈ-ಅಂಥಾ; ಕುರುಕುಲಪತಯೇ(ಚ)-ಕುರುಕುಲಾಗ್ರಣಿಯಾದ ಭೀಮಸೇನನಿಗೂ ಕೂಡ; ಕರ್ಮಣಾ (ಚ)-ಕಾಯಾ ವಾಚಾ ಮನಸಾ (ತ್ರಿಕರಣಪೂರ್ವಕವಾಗಿ): ಪ್ರಣಾಮಾನ್ ಕುರ್ಮಃ-ನಮಸ್ಕಾರಗಳನ್ನು ಅರ್ಪಿಸುವೆವು.

ಯೇನ (ತ್ವಯಾ)-ಯಾವ ನಿನ್ನಿಂದ; ಬಹುಲ....ಧ್ವಂಸನಾತ್-ಬಹಳ ಬಲಿಷ್ಠನಾಗಿದ್ದ ಬಕಾಸುರನನ್ನು ಸಂಹಾರ ಮಾಡಿದ್ದರಿಂದ; ಏಕಚಕ್ರಾ-ಜನಾನಾಂ-ಏಕಚಕ್ರಾನಗರಿಯ ಜನಗಳಿಗೆ (ಬಂದಿದ್ದ); ಅಸುವಿಧೃತಿಸುಖಸ್ಯ-ಸುಖವಾಗಿ ಉಸಿರಾಡುವುದಕ್ಕೇ; ವಿಘ್ನಃ-ಅಡಚಣೆಯು; ಜಘ್ನೇ-ನಾಶ ಮಾಡಲ್ಪಟ್ಟಿತೋ; ಅಥ ಚ-ಅನಂತರ (ಎಂದರೆ ಅದು ಕಳೆದು ಎಷ್ಟೋ ಕಾಲಾನಂತರದಲ್ಲಿ); ಯಃ-ಯಾರು; ದುರ್ಮತೀನಾಂ ಪ್ರಥಮಂ-ದುಷ್ಟ-ಬುದ್ಧಿಯುಳ್ಳ ದೈತ್ಯರಲ್ಲಿ ಅಗ್ರಣಿಯಾಗಿದ್ದ; ಕಿರ್ಮೀರಂ ಚ-(ಬಕಾಸುರನ ತಮ್ಮನಾದ) ಕಿರ್ಮೀರನನ್ನೂ, ನರ್ಮಣಾ-ನಿರಾಯಾಸವಾಗಿ, ನಿರ್ಮಮಾಥ-ಹೊಸೆದುಹಾಕಿದನೋ, ತಸ್ಮೈ-ಅಂಥಾ; ಕುರುಕುಲಪತಯೇ-ಕುರು-ಕುಲೋತ್ಪನ್ನ ಶೂರಾಗ್ರಣಿಯಾದ; ತೇ-ನಿನಗೆ; ಕರ್ಮಣಾ ಚ-ತ್ರಿಕರಣ ದಿಂದಲೂ; ಪ್ರಣಾಮಾನ್-ಪ್ರಣಾಮಗಳನ್ನು; ಕುರ್ಮಃ-ಮಾಡುತ್ತೇವೆ.

ಸೂಚನೆ— ಈ ಶ್ಲೋಕದ ಭಾವಾರ್ಥವು ಮಂದಟ್ಟಾಗಬೇಕಾದರೆ ಭಾಗವತದಲ್ಲಿ ನಿರೂಪಿತವಾದ ಕೃಷ್ಣಹತನಾದ ಬಕಾಸುರನ ವೃತ್ತಾಂತವೂ ಮಹಾಭಾರತದಲ್ಲಿ ಹೇಳಿರುವ ಬಕಾಸುರ ಕಿರ್ಮೀರರ ವಧೆಯ ಕಥೆಯೂ ಸ್ವಲ್ಪವಾದರೂ ತಿಳಿದಿರಬೇಕು. ಆದಕಾರಣ ಆ ಮೂರು ದೈತ್ಯರ ವಧೆಯ ಕಥೆಗಳನ್ನೂ ಮೊದಲು ನಿರೂಪಣೆಮಾಡುತ್ತೇವೆ.

256. ಭಾಗವತೋಕ್ತ ಬಕಾಸುರನ ಕಥೆ— ಈ ಕಥೆ ಭಾಗವತ ದಶಮಸ್ಕಂಧದ (ಪೂರ್ವಾರ್ಧದ) ಹನ್ನೆರಡನೇ ಅಧ್ಯಾಯದಲ್ಲೂ ತಾತ್ಪರ್ಯ-ನಿರ್ಣಯದ ಹದಿಮೂರನೇ ಅಧ್ಯಾಯದ ೬೦-೩೩ ಶ್ಲೋಕಗಳಲ್ಲೂ ನಿರೂಪಿತ ವಾಗಿದೆ. ನನಗೆ ದೊರೆತ ಯಾವ ಹರಿವಂಶದಲ್ಲೂ ಈ ಬಕಾಸುರನ ಕಥೆ ವರ್ಣಿತವಾಗಿಲ್ಲ. ಬಾಲಕನಾದ ಶ್ರೀಕೃಷ್ಣನನ್ನು ಹುಡುಕಿ ಸಂಹಾರ ಮಾಡುವುದಕ್ಕಾಗಿ ಕಂಸನಿಂದ ಕಳುಹಿಸಲ್ಪಟ್ಟ ಪೂತನಿ, ತೃಣಾವರ್ತ ಮತ್ತು ಶಕಟಾಸುರರಂತೆಯೇ ಬಕಾಸುರನೂ ಶ್ರೀಕೃಷ್ಣವಧೆಗಾಗಿ ಕಳುಹಿಸಲ್ಪಟ್ಟ ಕಂಸನ ಒಬ್ಬ ಅನುಚರ. ಈ ಅಸುರನು ಕೊಕ್ಕರೆಯ ವೇಷ ಧರಿಸಿ ಬಂದಿದ್ದ-ನಾದ್ದರಿಂದ ಅವನು ಆ ಹೆಸರಿನಿಂದಲೇ ಪ್ರಸಿದ್ಧಿಗೆ ಬಂದಿದ್ದಾನೆ. ಇವನು ಸ್ಕಂದನ (ಷಣ್ಮುಖನ) ವರದಿಂದ ಅಜೇಯನಾಗಿದ್ದನೆಂದು ತಾತ್ಪರ್ಯ-

ಯೇನ (ತ್ವಯಾ)-ಯಾವ ನಿನ್ನಿಂದ; ಬಹುಲ....ಧ್ವಂಸನಾತ್-ಬಹಳ ಬಲಿಷ್ಠನಾಗಿದ್ದ ಬಕಾಸುರನನ್ನು ಸಂಹಾರ ಮಾಡಿದ್ದರಿಂದ; ಏಕಚಕ್ರಾ-ಜನಾನಾಂ-ಏಕಚಕ್ರಾನಗರಿಯ ಜನಗಳಿಗೆ (ಬಂದಿದ್ದ); ಅಸುವಿಧೃತಿಸುಖಸ್ಯ-ಸುಖವಾಗಿ ಉಸಿರಾಡುವುದಕ್ಕೇ; ವಿಘ್ನಃ-ಅಡಚಣೆಯು; ಜಘ್ನೇ-ನಾಶ ಮಾಡಲ್ಪಟ್ಟಿತೋ; ಅಥ ಚ-ಅನಂತರ (ಎಂದರೆ ಅದು ಕಳೆದು ಎಷ್ಟೋ ಕಾಲಾನಂತರದಲ್ಲಿ); ಯಃ-ಯಾರು; ದುರ್ಮತೀನಾಂ ಪ್ರಥಮಂ-ದುಷ್ಟ-ಬುದ್ಧಿಯುಳ್ಳ ದೈತ್ಯರಲ್ಲಿ ಅಗ್ರಣಿಯಾಗಿದ್ದ; ಕಿರ್ಮೀರಂ ಚ-(ಬಕಾಸುರನ ತಮ್ಮನಾದ) ಕಿರ್ಮೀರನನ್ನೂ, ನರ್ಮಣಾ-ನಿರಾಯಾಸವಾಗಿ, ನಿರ್ಮಮಾಥ-ಹೊಸೆದುಹಾಕಿದನೋ, ತಸ್ಮೈ-ಅಂಥಾ; ಕುರುಕುಲಪತಯೇ-ಕುರು-ಕುಲೋತ್ಪನ್ನ ಶೂರಾಗ್ರಣಿಯಾದ; ತೇ-ನಿನಗೆ; ಕರ್ಮಣಾ ಚ-ತ್ರಿಕರಣ ದಿಂದಲೂ; ಪ್ರಣಾಮಾನ್-ಪ್ರಣಾಮಗಳನ್ನು; ಕುರ್ಮಃ-ಮಾಡುತ್ತೇವೆ.

ಸೂಚನೆ— ಈ ಶ್ಲೋಕದ ಭಾವಾರ್ಥವು ಮಂದಟ್ಟಾಗಬೇಕಾದರೆ ಭಾಗವತದಲ್ಲಿ ನಿರೂಪಿತವಾದ ಕೃಷ್ಣಹತನಾದ ಬಕಾಸುರನ ವೃತ್ತಾಂತವೂ ಮಹಾಭಾರತದಲ್ಲಿ ಹೇಳಿರುವ ಬಕಾಸುರ ಕಿರ್ಮೀರರ ವಧೆಯ ಕಥೆಯೂ ಸ್ವಲ್ಪವಾದರೂ ತಿಳಿದಿರಬೇಕು. ಆದಕಾರಣ ಆ ಮೂರು ದೈತ್ಯರ ವಧೆಯ ಕಥೆಗಳನ್ನೂ ಮೊದಲು ನಿರೂಪಣೆಮಾಡುತ್ತೇವೆ.

256. ಭಾಗವತೋಕ್ತ ಬಕಾಸುರನ ಕಥೆ— ಈ ಕಥೆ ಭಾಗವತ ದಶಮಸ್ಕಂಧದ (ಪೂರ್ವಾರ್ಧದ) ಹನ್ನೆರಡನೇ ಅಧ್ಯಾಯದಲ್ಲೂ ತಾತ್ಪರ್ಯ-ನಿರ್ಣಯದ ಹದಿಮೂರನೇ ಅಧ್ಯಾಯದ ೬೦-೩೩ ಶ್ಲೋಕಗಳಲ್ಲೂ ನಿರೂಪಿತ ವಾಗಿದೆ. ನನಗೆ ದೊರೆತ ಯಾವ ಹರಿವಂಶದಲ್ಲೂ ಈ ಬಕಾಸುರನ ಕಥೆ ವರ್ಣಿತವಾಗಿಲ್ಲ. ಬಾಲಕನಾದ ಶ್ರೀಕೃಷ್ಣನನ್ನು ಹುಡುಕಿ ಸಂಹಾರ ಮಾಡುವುದಕ್ಕಾಗಿ ಕಂಸನಿಂದ ಕಳುಹಿಸಲ್ಪಟ್ಟ ಪೂತನಿ, ತೃಣಾವರ್ತ ಮತ್ತು ಶಕಟಾಸುರರಂತೆಯೇ ಬಕಾಸುರನೂ ಶ್ರೀಕೃಷ್ಣವಧೆಗಾಗಿ ಕಳುಹಿಸಲ್ಪಟ್ಟ ಕಂಸನ ಒಬ್ಬ ಅನುಚರ. ಈ ಅಸುರನು ಕೊಕ್ಕರೆಯ ವೇಷ ಧರಿಸಿ ಬಂದಿದ್ದ-ನಾದ್ದರಿಂದ ಅವನು ಆ ಹೆಸರಿನಿಂದಲೇ ಪ್ರಸಿದ್ಧಿಗೆ ಬಂದಿದ್ದಾನೆ. ಇವನು ಸ್ಕಂದನ (ಷಣ್ಮುಖನ) ವರದಿಂದ ಅಜೇಯನಾಗಿದ್ದನೆಂದು ತಾತ್ಪರ್ಯ-

ಯೇನ (ತ್ವಯಾ)–ಯಾವ ನಿನ್ನಿಂದ; ಬಹುಲ....ಧ್ವಂಸನಾತ್–ಬಹಳ ಬಲಿಷ್ಠನಾಗಿದ್ದ ಬಕಾಸುರನನ್ನು ಸಂಹಾರ ಮಾಡಿದ್ದರಿಂದ; ಏಕಚಕ್ರಾ-ಜನಾನಾಂ–ಏಕಚಕ್ರಾನಗರಿಯ ಜನಗಳಿಗೆ (ಬಂದಿದ್ದ); ಅಸುವಿಧೃತಿಸುಖಸ್ಯ-ಸುಖವಾಗಿ ಉಸಿರಾಡುವುದಕ್ಕೇ; ವಿಘ್ನಃ–ಅಡಚಣೆಯು; ಜಘ್ನೇ–ನಾಶ ಮಾಡಲ್ಪಟ್ಟಿತೋ; ಅಥ ಚ-ಅನಂತರ (ಎಂದರೆ ಅದು ಕಳೆದು ಎಷ್ಟೋ ಕಾಲಾನಂತರದಲ್ಲಿ); ಯಃ–ಯಾರು; ದುರ್ಮತೀನಾಂ ಪ್ರಥಮಂ–ದುಷ್ಟ-ಬುದ್ಧಿಯುಳ್ಳ ದೈತ್ಯರಲ್ಲಿ ಅಗ್ರಣಿಯಾಗಿದ್ದ; ಕಿರ್ಮೀರಂ ಚ–(ಬಕಾಸುರನ ತಮ್ಮನಾದ) ಕಿರ್ಮೀರನನ್ನೂ, ನರ್ಮಣಾ–ನಿರಾಯಾಸವಾಗಿ, ನಿರ್ಮಮಾಥ–ಹೊಸೆದುಹಾಕಿದನೋ, ತಸ್ಮೈ–ಅಂಥಾ; ಕುರುಕುಲಪತಯೇ-ಕುರು-ಕುಲೋತ್ಪನ್ನ ಶೂರಾಗ್ರಣಿಯಾದ; ತೇ–ನಿನಗೆ; ಕರ್ಮಣಾ ಚ–ತ್ರಿಕರಣ ದಿಂದಲೂ; ಪ್ರಣಾಮಾನ್-ಪ್ರಣಾಮಗಳನ್ನು; ಕುರ್ಮಃ–ಮಾಡುತ್ತೇವೆ.

ಸೂಚನೆ— ಈ ಶ್ಲೋಕದ ಭಾವಾರ್ಥವು ಮಂದಟ್ಟಾಗಬೇಕಾದರೆ ಭಾಗವತದಲ್ಲಿ ನಿರೂಪಿತವಾದ ಕೃಷ್ಣಹತನಾದ ಬಕಾಸುರನ ವೃತ್ತಾಂತವೂ ಮಹಾಭಾರತದಲ್ಲಿ ಹೇಳಿರುವ ಬಕಾಸುರ ಕಿರ್ಮೀರರ ವಧೆಯ ಕಥೆಯೂ ಸ್ವಲ್ಪವಾದರೂ ತಿಳಿದಿರಬೇಕು. ಆದಕಾರಣ ಆ ಮೂರು ದೈತ್ಯರ ವಧೆಯ ಕಥೆಗಳನ್ನೂ ಮೊದಲು ನಿರೂಪಣೆಮಾಡುತ್ತೇವೆ.

256. ಭಾಗವತೋಕ್ತ ಬಕಾಸುರನ ಕಥೆ— ಈ ಕಥೆ ಭಾಗವತ ದಶಮಸ್ಕಂಧದ (ಪೂರ್ವಾರ್ಧದ) ಹನ್ನೆರಡನೇ ಅಧ್ಯಾಯದಲ್ಲೂ ತಾತ್ಪರ್ಯ-ನಿರ್ಣಯದ ಹದಿಮೂರನೇ ಅಧ್ಯಾಯದ ೬೦-೩೩ ಶ್ಲೋಕಗಳಲ್ಲೂ ನಿರೂಪಿತ ವಾಗಿದೆ. ನನಗೆ ದೊರೆತ ಯಾವ ಹರಿವಂಶದಲ್ಲೂ ಈ ಬಕಾಸುರನ ಕಥೆ ವರ್ಣಿತವಾಗಿಲ್ಲ. ಬಾಲಕನಾದ ಶ್ರೀಕೃಷ್ಣನನ್ನು ಹುಡುಕಿ ಸಂಹಾರ ಮಾಡುವುದಕ್ಕಾಗಿ ಕಂಸನಿಂದ ಕಳುಹಿಸಲ್ಪಟ್ಟ ಪೂತನಿ, ತೃಣಾವರ್ತ ಮತ್ತು ಶಕಟಾಸುರರಂತೆಯೇ ಬಕಾಸುರನೂ ಶ್ರೀಕೃಷ್ಣವಧೆಗಾಗಿ ಕಳುಹಿಸಲ್ಪಟ್ಟ ಕಂಸನ ಒಬ್ಬ ಅನುಚರ. ಈ ಅಸುರನು ಕೊಕ್ಕರೆಯ ವೇಷ ಧರಿಸಿ ಬಂದಿದ್ದ-ನಾದ್ದರಿಂದ ಅವನು ಆ ಹೆಸರಿನಿಂದಲೇ ಪ್ರಸಿದ್ಧಿಗೆ ಬಂದಿದ್ದಾನೆ. ಇವನು ಸ್ಕಂದನ (ಷಣ್ಮುಖನ) ವರದಿಂದ ಅಜೇಯನಾಗಿದ್ದನೆಂದು ತಾತ್ಪರ್ಯ-

ಮುಂದಾಳುಗಳಾಗಿ ನಿಂತು ಅವನೊಡನೆ ಸಂಧಿಮಾಡಿಕೊಂಡರು. ಅದರಂತೆ ಅವನು ಜನಗಳನ್ನು ಈ ರೀತಿ ಮನಸ್ಸು ಬಂದಂತೆ ಹಿಂಸಿಸಬಾರದೆಂದೂ, ಅದಕ್ಕೆ ಪ್ರತಿಯಾಗಿ ಪ್ರತಿನಿತ್ಯ ಒಬ್ಬೊಬ್ಬ ಪಟ್ಟಣಿಗರು ಬೆಟ್ಟದ ಆಕಾರದ ಭಕ್ಷ್ಯಭೋಜ್ಯಗಳನ್ನೂ (ಗಿರಿಸನ್ನಿಭಭಕ್ಷ್ಯಭೋಜ್ಯೈಃ, ತಾ.ನಿ. ೧೯/೭೩), ರಾಶಿರಾಶಿ ಅನ್ನ-ಮಾಂಸಗಳ ಜೊತೆ ಸುರಾದಿ ಪಾನಗಳನ್ನೂ (ಅನ್ನಂಮಾಂಸ-ಸಮಾಯುಕ್ತಂ, ಆದಿಪ. ೧೭೪ ಅ, ೧೩ ಶ್ಲೋ., ಪಾನಕುಂಭಾನ್ ಸ್ಥೂಲ ಮಾಂಸಂ, ಅಲ್ಲೇ, ೧೫ ಶ್ಲೋ.), ಅಷ್ಟೇ ಅಲ್ಲದೆ ಒಬ್ಬ ಮನುಷ್ಯನನ್ನೂ ಒಂದು ಜೊತೆ ಎತ್ತು-ಬಂಡಿಯನ್ನೂ ಕಳುಹಿಸಿಕೊಡಬೇಕೆಂದು ಒಪ್ಪಿಗೆ-ಯಾಯಿತು—

ಕುಲಾಚ್ಚ ಪುರುಷಂ ಚೈಕಂ ಬಲೀವರ್ದೌ ಚ ಕಾಲಕೌ ॥
(ಆ.ಪ., ೧೭೪/೧೭)

(ಬಲೀವರ್ದೌ–ಎರಡು ಬಂಡಿ ಎಳೆಯುವ ಎತ್ತುಗಳು, ಕಾಲಕೌ–ಕರಿಯ ಬಣ್ಣದವು)
ಬಕನಿಗೆ ಈ ರೀತಿ ಅನ್ನವನ್ನೂ ನರಬಲಿಯನ್ನೂ ಒಪ್ಪಿಸುವ ಪಾಳಿ (ಅಥವಾ ಸರದಿ) ಒಂದೊಂದು ಕುಟುಂಬಕ್ಕೆ ಹದಿಮೂರು ವರ್ಷಗಳಿಗೆ ಒಮ್ಮೆ ಬರುತ್ತಿತ್ತು—' ತೇನೋಪಸೃಷ್ಟಾ ನಗರೀ ವರ್ಷಮದ್ಯ ತ್ರಯೋದಶಮ್ । ' (ಅಲ್ಲೇ, ೭ ಶ್ಲೋ.) (ತೇನ–ಅವನಿಂದ, ಬಕಾಸುರನಿಂದ, ಉಪಸೃಷ್ಟಾ–ಪೀಡೆಗೆ ಒಳಗಾದ, ಹಿಂಸೆಗೆ ಗುರಿಯಾದ, ಅದ್ಯ–ಇವತ್ತಿಗೆ, ಇಂದಿಗೆ)

ವಿಪ್ರನ ಕುಟುಂಬದಲ್ಲಿ ಆಕ್ರಂದನ— ಏಕಚಕ್ರಾನಗರದ ಪರಿಸ್ಥಿತಿ ಹೀಗೆ ದುರ್ದಶಾಗ್ರಸ್ತವಾಗಿರಲು ಅತ್ತ ದುರ್ಯೋಧನನ ಹಂಚಿಕೆಯಿಂದ ಅರಗಿನ ಮನೆಯ ಕುತ್ತಿನಿಂದ ಪಾರಾಗಿ ಬಂದ ಪಾಂಡವರು ತಾಯಿ ಸಮೇತ-ರಾಗಿ ಬ್ರಾಹ್ಮಣವೇಷ ಧರಿಸಿ ಆ ಏಕಚಕ್ರಾನಗರಿಯಲ್ಲೇ ಒಬ್ಬ ಬ್ರಾಹ್ಮಣನ ಮನೆಯಲ್ಲಿ ವಾಸಮಾಡುತ್ತಿದ್ದರು. ಒಂದು ದಿನ ' ಅಥಾರ್ತಿಜಂ ಮಹಾ-ಶಬ್ದಂ ಬ್ರಾಹ್ಮಣಸ್ಯ ನಿವೇಶನೇ ' (ಆ.ಪ., ೧೭೧ ಅ, ೨೪ ಶ್ಲೋ, ಆರ್ತಿ–ದುಃಖ, ಆರ್ತಿ-ಜಂ–ಸಂಕಟದಿಂದ ಹೊರಬಂದ, ನಿವೇಶನೇ–ಮನೆಯಲ್ಲಿ) ' ಬ್ರಾಹ್ಮಣನೊಬ್ಬನ ಮನೆಯಲ್ಲಿ ಇದ್ದಕ್ಕಿದ್ದಹಾಗೆ ಸಂಕಟಕ್ಕೀಡಾಗಿ

ರೋಧಿಸುವ ಶಬ್ದವು’ ಕೇಳಿಸಿತು. ಅದನ್ನು ಕೇಳಿ ಮರುಕಗೊಂಡ ಕುಂತೀದೇವಿಯು ಅದಕ್ಕೆ ಕಾರಣವೇನೆಂದು ವಿಚಾರಿಸಿದಳು. ಆ ಬ್ರಾಹ್ಮಣನೇ ಮಾರನೆಯ ದಿನ ಬಕಾಸುರನಿಗೆ ಬಲಿ ಒಪ್ಪಿಸಬೇಕಾಗಿತ್ತು. ಭಕ್ಷ್ಯಭೋಜ್ಯಾದಿಗಳನ್ನಣಿಮಾಡಿಕೊಂಡು ಸಿದ್ಧವಾಗಿದ್ದನು. ಆದರೆ ಆ ಕುಟುಂಬದಲ್ಲಿ ನಾಲ್ಕೇ ಜನ—ಗಂಡ, ಹೆಂಡತಿ, ಮಗ, ಮಗಳು—ಇದ್ದುದರಿಂದ ಬಕನಿಗೆ ನರಬಲಿಯಾಗಿ ಯಾರು ಹೋಗಬೇಕೆಂಬುದೇ ನಿರ್ಧಾರವಾಗಲಿಲ್ಲ. ಯಾರು ಹೋಗುವೆನೆಂದರೂ ಮಿಕ್ಕ ಮೂವರೂ ವಿರೋಧಿಸುತ್ತಿದ್ದುದರಿಂದ ಸಮಸ್ಯೆ ಬಗೆಹರಿಯದೆ ಎಲ್ಲರೂ ಅಳುವುದಕ್ಕಾರಂಭಿಸಿದ್ದರು. ಅದನ್ನು ಕೇಳಿದ ಕುಂತಿಯು ತನಗೆ ಐದು ಮಕ್ಕಳಿದ್ದಾರೆಂದೂ, ‘ಅವರ ಪೈಕಿ ಒಬ್ಬನನ್ನು ಕಳುಹಿಸುವೆನು. ಇದಕ್ಕಾಗಿ ಚಿಂತಿಸಬೇಡಿ’ ಎಂದೂ ಹೇಳಿದಾಗ ಸತ್ತವರ ಮೇಲೆ ಅಮೃತವೃಷ್ಟಿ ಮಾಡಿದಂತಾಯಿತು—

ಗತಾಸೂ-ನಮೃತೇನೇವ ಜೀವಯಂತೀದಮಬ್ರವೀತ್ (೧೬೩/೨೦)

ಆದರೆ ತಮಗಾಗಿ ಇನ್ನೊಬ್ಬನನ್ನು ಬಲಿ ಕೊಡುವುದೂ ಅವರ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಅದಕ್ಕೆ ಕುಂತಿಯೇ ಅವರಿಗೆ ಸಮಾಧಾನ ಮಾಡುತ್ತಾ

ವೀರ್ಯವಾನ್ ಮಂತ್ರಸಿದ್ಧಶ್ಚ ತೇಜಸ್ವೀ ಚ ಸುತೋ ಮಮ।
(ಅಲ್ಲೇ, ೧೬೫/೧೪)

‘ನನ್ನ ಮಗನು ಬಹಳ ಪರಾಕ್ರಮಶಾಲಿ. ಮಂತ್ರಜ್ಞ ಮತ್ತು ಮಹಾತೇಜಸ್ವಿಯೂ ಆಗಿದ್ದಾನೆ. ಆದ್ದರಿಂದ ಆ ಬಕಾಸುರನನ್ನು ಜಯಿಸಲೂ ಸಮರ್ಥ. ನೀವೇನೂ ಚಿಂತಿಸಬೇಡಿ’ ಎಂದು ಹೇಳಿ ಒಪ್ಪಿಸಿ ಭಕ್ಷ್ಯಭೋಜ್ಯಾದಿಗಳೆಲ್ಲವನ್ನೂ ಸಿದ್ಧಪಡಿಸುವಂತೆ ಹೇಳಿಬಂದು ಈ ವಿಷಯ ಭೀಮನಿಗೂ ತಿಳಿಸಿದಳು. ಭೀಮನೂ ಸಿದ್ಧನಾದನು.

ವೇತ್ರಕೀಯವನಕ್ಕೆ ಪ್ರಯಾಣ— ಹಿಂದಿನ ದಿನ ನಿಶ್ಚಿತವಾದಂತೆ ಮಾರನೆಯ ದಿವಸ ಬಕಾಸುರನ ಬಳಿಗೆ ಭೀಮನೇ ಹೋಗುವುದೆಂದು ನಿರ್ಧಾರವಾಯಿತು. ಬೆಳಗಾದಕೂಡಲೇ ಏಕಚಕ್ರಾನಗರಿಯ ಜನಗಳೆಲ್ಲ ಭೀಮನಿಗೆ ಸ್ನಾನಾಲಂಕಾರ ಮಾಡಿಸಿ ಅವನಿಗೆ ಬೇಕುಬೇಕಾದ ಭಕ್ಷ್ಯಭೋಜ್ಯಗಳನ್ನು ಅಡಿಗೆ ಮಾಡಿಸಿದರು—

ಸಘೃತಂ ಸೋಪದಂಶಂ ಚ ಸೂಪೈರ್ನಾನಾವಿಧೈಃ ಸಹ।
(೧೭೭/೧೦)

(ಸ+ಉಪದಂಶಂ–ಉಪ್ಪಿನಕಾಯಿ ಅಥವಾ ಚಟ್ನಿಣಿಯ ಜೊತೆ, ಸೂಪೈಃ–ತೊವ್ವೆಗಳು)

ಮೋದಕಾನಿ ಚ ಮುಖ್ಯಾನಿ ಚಿತ್ರೌದನ-ಚಯಾನ್ ಬಹೂನ್ ।
(೧೭೭/೧೨)

(ಮೋದಕಾನಿ–ಕಡುಬುಗಳನ್ನು [ಭಕ್ಷ್ಯಗಳನ್ನು], ಓದನ ಅನ್ನ, ಚಿತ್ರೌದನ-ಚಯಾನ್–ಚಿತ್ರಾನ್ನದ ರಾಶಿಗಳನ್ನು)

ಬಗೆಬಗೆಯ ಉಪ್ಪಿನಕಾಯಿಗಳನ್ನೂ ಮಾಡಿಸಿ ತುಪ್ಪದ ಜೊತೆಯಲ್ಲಿ ವಿಧವಿಧವಾದ ತೊವ್ವೆಗಳನ್ನೂ ಕಡುಬು-ಕಜ್ಜಾಯಗಳನ್ನೂ ರಾಶಿರಾಶಿಯಾಗಿ ಹಾಕಿದ ಚಿತ್ರಾನ್ನಗಳನ್ನೂ ಭೀಮನಿಗೆ ಬಡಿಸಿದರು. ಅವರು ಉಪಚಾರ ಮಾಡಿ ಮಾಡಿದ ಹಾಗೆ ಭೀಮನು ಅವೆಲ್ಲವನ್ನೂ ತಿಂದುಬಿಟ್ಟ

ತತೋಽಪಿಬದ್ ದಧಿಘಟಾನ್ ಸುಬಹೂನ್ ದ್ರೋಣಸಮ್ಮಿತಾನ್ ।

ಕೊನೆಗೆ ಕೊಡಗಟ್ಲೆ ಮೊಸರನ್ನೂ ದೊನ್ನೆ-ದೊನ್ನೆ (ದ್ರೋಣ-ದೊನ್ನೆ)ಗಟ್ಲೆ ತುಪ್ಪವನ್ನೂ ಕುಡಿದು ವೇತ್ರಕೀಯವನಕ್ಕೆ ಹೊರಡಲು ಸಿದ್ಧನಾದನು. ಅನಂತರ ಬಂಡಿಯಲ್ಲಿ ಅನ್ನವನ್ನೂ ಭಕ್ಷ್ಯಭೋಜ್ಯಗಳನ್ನೂ ಹೇರಿಕೊಂಡು ಎತ್ತುಗಳನ್ನು ಹೊಡೆದುಕೊಂಡು ವೇತ್ರಕೀಯವನದ ಕಡೆಗೆ ಸಾಗಿದನು ವೇತ್ರಕೀಯವನ ಹೊಲಸು ದೂರಕ್ಕೇ ಗೋಚರವಾಗುತ್ತಿತ್ತು—

ಗೃಧ್ರಕಂಕಬಲಚ್ಛನ್ನಂ ಗೋಮಾಯುಗಣಸೇವಿತಮ್ ।
ಉಗ್ರಗಂಧಮಚಕ್ಷುಷ್ಯಂ ಶ್ಮಶಾನಮಿವ ದಾರುಣಮ್॥ (೧೭೧/೨೧)

(ಗೃಧ್ರ–ಹದ್ದು, ಕಂಕ–ರಣಹದ್ದು, ಬಲ–ಗುಂಪು, ಛನ್ನ–ಆವೃತ, ಸುತ್ತಲ್ಪಟ್ಟ, ಗೋಮಾಯು–ನರಿ, ಗಣ–ಗುಂಪು)

ಆ ಸ್ಥಳವನ್ನು ಹದ್ದುಗಳು ಮತ್ತು ರಣಹದ್ದುಗಳು ಗುಂಪುಗುಂಪಾಗಿ ಮುತ್ತಿಕೊಂಡಿದ್ದುವು. ಅನೇಕ ನರಿಗಳು ಅಲ್ಲಿ ಅಡ್ಡಾಡುತ್ತಿದ್ದುವು. ದುರ್ಗಂಧವು ಮೂಗಿನ ಶಿಲೆಯನ್ನು ಭೇದಿಸುವಂತಿತ್ತು. ಶ್ಮಶಾನದಂತೆ ಭೀಕರವಾಗಿದ್ದು ನೋಡುವುದಕ್ಕೆ ಅಸಹ್ಯವಾಗಿ ಕಾಣುತ್ತಿತ್ತು. ಆದರೂ ಭೀಮ ಗಾಡಿಯನ್ನು

ಹೊಡೆದುಕೊಂಡು ವನದೊಳಗೆ ಪ್ರವೇಶಿಸಿ ಅಷ್ಟು ದೂರ ಒಳಕ್ಕೆ ಬಂದರೂ ಬಕಾಸುರ ಅವನ ಕಣ್ಣಿಗೇ ಬೀಳಲಿಲ್ಲ. ಒಂದು ರೀತಿ ಅದೇ ಅನುಕೂಲವಾಯಿತೆಂದು ಭಾವಿಸಿಕೊಂಡ ಭೀಮನು—

ಸಪಾಯಸ-ಸುಭಕ್ಷ್ಯಪಯೋಘಟಾದ್ಯೈಃ ।
ಯುಕ್ತಂ ಚ ಶೈಲನಿಭ-ಮುತ್ತಮ-ಮನ್ನರಾಶಿಂ
ಸ್ಪರ್ಶಾತ್ ಪುರೈವ ನರಭಕ್ಷಿತು ರತ್ತುಮೈಚ್ಛತ್

(ತಾ.ನಿ. ೧೯/೮೮)

(ಪಯೋಘಟ–ಹಾಲಿನ ಕೊಡಗಳು, ಶೈಲ-ನಿಭಂ–ಬೆಟ್ಟಕ್ಕೆ ಸಮನಾಗಿ ಎತ್ತರವಾಗಿ ಬಿದ್ದಿದ್ದ, ಸ್ಪರ್ಶಾತ್ ಪುರಾ ಏವ–ಮುಟ್ಟುವುದಕ್ಕೆ ಮೊದಲೇ, ನರ-ಭಕ್ಷಿತುಃ- ನರಭಕ್ಷಕನಾದ ಬಕಾಸುರನು, ಅತ್ತುಂ ಐಚ್ಛತು–ತಿನ್ನಲು ಇಚ್ಛಿಸಿದನು.) (ಅರ್ಥ) ಪಾಯಸ, ನಾನಾ ಭಕ್ಷ್ಯಗಳು, ಹಾಲಿನ ಕೊಡಗಳು (ಮೊಸರಿನ ಗಡಿಗೆಗಳು) ಮೊದಲಾದುವುಗಳ ಸಮೇತ ಬೆಟ್ಟದ ಆಕಾರವಾಗಿ ಎತ್ತರವಾಗಿದ್ದ ಉತ್ತಮ ಅನ್ನದ ರಾಶಿಯೆಲ್ಲವನ್ನೂ ಆ ನರಭಕ್ಷಕ ಮುಟ್ಟಲಿಗೆ ಮಾಡುವುದಕ್ಕೆ ಮೊದಲೇ ತಿಂದುಹಾಕಿಬಿಡಬೇಕೆಂದು ಆಲೋಚಿಸಿದನು. ಸರಿ, ಆ ಕೂಡಲೇ—

ಉಪವಿಶ್ಯ ವಿವಿಕ್ತೇಽನ್ನಂ ಭುಂಕ್ತೇ ಸ್ಮ ಪರಮಃ ಪರಃ ।

(ಆ.ಪ. ೧೭೭/೨೬)

(ಉಪವಿಶ್ಯ–ಕುಳಿತುಕೊಂಡು, ವಿವಿಕ್ತೇ–ಏಕಾಂತಸ್ಥಳದಲ್ಲಿ, ಭುಂಕ್ತೇ ಸ್ಮ–ಉಂಡುಬಿಟ್ಟನು, ತಿಂದು ಮುಗಿಸಿದನು, ಪರಃ- ತಾನೊಬ್ಬನೇ)

ಏಕಾಂತಸ್ಥಳದಲ್ಲಿ ಕುಳಿತು ತಾನೊಬ್ಬನೇ ಆದಷ್ಟು ಅನ್ನವನ್ನೂ ಉಂಡುಬಿಟ್ಟ. ಇತ್ತಲಾಗಿ ಬಕಾಸುರ ನೋಡುತ್ತಾನೆ—ತನಗಾಗಿ ತಂದಿದ್ದ ಅನ್ನವನ್ನು ಬೇರೆ ಯಾವನೋ ತಿಂದು ಮುಗಿಸುತ್ತಿದ್ದಾನೆ! ಅದನ್ನು ಕಂಡು ಕಣ್ಣು ಕೆಂಪಗೆ ಮಾಡಿಕೊಂಡು ಹುಬ್ಬು ಗಂಟುಹಾಕಿ ಅರ್ಭಟಿಸುತ್ತಾ ಓಡಿಬಂದು ಒಂದು ಭಾರಿ ವೃಕ್ಷವನ್ನು ಕಿತ್ತು ಭೀಮನ ಮೇಲೆ ಎಸೆದನು. ಭೀಮ ಎಡಗೈಯಿಂದಲೇ ಆ ಮರವನ್ನು ಪಕ್ಕಕ್ಕೆ ತಳ್ಳಿ, ಬಕನನ್ನು ಲಕ್ಷ್ಯಮಾಡದೆ ಬೇಗ ಊಟ ಮುಗಿಸಿ ಉತ್ತರಾಪೋಶನ ತೆಗೆದುಕೊಂಡದ್ದೇ ತಡ, ಭುಜವನ್ನು ಆಸ್ಫೋಟನೆ

ಮಾಡುತ್ತಾ ಸಿಂಹಗರ್ಜನೆ ಮಾಡುತ್ತಾ ಬಕಾಸುರನನ್ನು ಎದುರಿಸಿ ಯುದ್ಧಕ್ಕೆ ನಿಂತನು.

ಅವನೊಡನೆ ಯುದ್ಧ ಮಾಡಿ ವಧಿಸಿಬಿಟ್ಟದ್ದು—ತನ್ನನ್ನು ನೋಡಿ ಅಂಜಿಕೊಳ್ಳುವುದಕ್ಕೆ ಪ್ರತಿಯಾಗಿ ತನ್ನೊಡನೆ ಯುದ್ಧಕ್ಕೇ ಬಂದದ್ದು ಕಂಡ ಬಕಾಸುರನು ಮತ್ತಷ್ಟು ರೇಗಿ ಇನ್ನೂ ಕೆಲವು ಮರಗಳನ್ನು ಕಿತ್ತು ಭೀಮನ ಮೇಲೆ ಎಸೆದನು. ಭೀಮನೂ ಬೇರೆ ವೃಕ್ಷಗಳನ್ನು ಕಿತ್ತು ಬಕಾಸುರನನ್ನು ಬಡಿದನು. ಹೀಗೆ ಸ್ವಲ್ಪ ಹೊತ್ತು ಇಬ್ಬರೂ ವೃಕ್ಷಗಳಿಂದಲೇ ಹೊಡೆದಾಡಿದರು. ಆದರಿಂದ ಹತ್ತಿರದಲ್ಲಿದ್ದ ಮರಗಳೆಲ್ಲವೂ ನಾಶವಾಗಿಹೋಗಿ ಆ ಸ್ಥಳವೇ ಬೋಳಾಗಿ ಹೋಯಿತು. ಅನಂತರ ಇಬ್ಬರೂ ಬಂಡೆಗಳನ್ನು ಎಸೆದು ಹೊಡೆದಾಡಿದರು; ಅವುಗಳೂ ಚಲ್ಲಾಪಿಲ್ಲಿಯಾಗಿ ಹೋದುವು. ಕೊನೆಗೆ ಇಬ್ಬರೂ ಕೈಗೆ ಕೈ ಹಚ್ಚಿ ಹೊಡೆದಾಡುತ್ತಾ ಗುದ್ದಾಡಿ ಒಬ್ಬರನ್ನೊಬ್ಬರು ತಿಕ್ಕಿಬಿದ್ದು ಅಪ್ಪಳಿಸುತ್ತಾ ಎರಡು ಮದ್ದಾನೆಗಳು ಹೊಡೆದಾಡುವಂತೆ ಭಯಂಕರವಾಗಿ ಯುದ್ಧಮಾಡಿದರು. ಅವರಿಬ್ಬರ ತುಳಿದಾಟಕ್ಕೆ ಭೂಮಿಯೇ ಗಡಗುಟ್ಟಿ ತಲ್ಲಣಿಸಿಹೋಯಿತು—

ತಯೋರ್ವೇಗೇನ ಮಹತಾ ಪೃಥಿವೀ ಸಮಕಂಪತ ॥ (೧೭೭/೫೮)

ಕೊನೆಗೆ ಭೀಮಸೇನ ಬಕಾಸುರನಿಗೆ ಬಲವಾಗಿ ತೆಕ್ಕೆಬಿದ್ದು ಅವನನ್ನು ಅಲ್ಲಾಡದಂತೆ ಬಿಗಿಯಾಗಿ ಅದುಮಿಕೊಂಡು ತನ್ನ ಮಂಡಿಗಳಿಂದ ಬಕನ ಎದೆಯನ್ನೂ ಹೊಟ್ಟೆಯನ್ನೂ ಪಕ್ಕಗಳನ್ನೂ ಬೆನ್ನನ್ನೂ ಬಲವಾಗಿ ತಿವಿದು ಹೊಡೆತ ಕೊಟ್ಟನು—

ಜಾನುಭ್ಯಾಂ ಪಾರ್ಶ್ವಯೋಃ ಕುಕ್ಷೌ ಪೃಷ್ಠೇ ವಕ್ಷಸಿ ಜಘ್ನಿವಾನ್ ।
(೧೭೭/೭೯)

(ಜಾನುಭ್ಯಾಂ-ಎರಡು ಮಂಡಿಗಳಿಂದ, ಕುಕ್ಷೌ-ಹೊಟ್ಟೆಯಲ್ಲಿ, ಪೃಷ್ಠೇ-ಬೆನ್ನು ಮೇಲೆ, ವಕ್ಷಸಿ-ಎದೆಯಲ್ಲಿ, ಜಘ್ನಿವಾನ್-ಹೊಡೆದನು, ತಿವಿದನು) ಇದರಿಂದ ಬಕಾಸುರನ ದೇಹವೆಲ್ಲಾ ಹಿಸುಕಿದ ಹಣ್ಣಿನಂತೆ ಜಜ್ಜಿಹೋಗಿ ಶಿಥಿಲವಾಗಿಹೋಯಿತು. ಕಣ್ಣುಗುಡ್ಡೆ ಮೇಲಕ್ಕೆ ಸಿಕ್ಕಿಕೊಂಡಿತು, ನಿಟ್ಟುಸಿರು ಬಿಡುತ್ತಾ, ತಲೆತಿರುಗಿ ನೆಲದಮೇಲೆ ದೊಪ್ಪನೆ ಬಿದ್ದು—

ಭೂಮೌ ನಿಪತ್ಯ ವಿಲುಠನ್ ದಂಡಾಹತ ಇವೋರಗಃ । (೧೭೭/೪೧)
(ನಿಪತ್ಯ–ಬಿದ್ದು, ವಿಲುಠನ್–ಹೊರಳಾಡುತ್ತಾ, ದಂಡ ಆಹತಃ- ದೊಣ್ಣೆಯಿಂದ ಬಡಚಿಹಾಕಿದ, ಉರಗಃ ಇವ–ಹಾವಿನಂತೆ)
ದೊಣ್ಣೆಯಿಂದ ಬಡಿದ ಹಾವಿನಂತೆ ಪೀವಿಲಿ ಒದ್ದಾಡಿದನು. ಇನ್ನು ತಡ ಮಾಡಬಾರದೆಂದು ಯೋಚಿಸಿದ ವೃಕೋದರ ಬಕನ ಕುತ್ತಿಗೆಯನ್ನು ಬಲಗೈಯಿಂದಲೂ ಸೊಂಟವನ್ನು ಎಡಗೈಯಿಂದಲೂ ಬಲವಾಗಿ ಹಿಡಿದುಕೊಂಡು ನೆಲದಿಂದ ಮೇಲಕ್ಕೆತ್ತಿ ಅವನ ಬೆನ್ನನ್ನು ತನ್ನ ಮಂಡಿಯ ಮೇಲೆ ಹಾಕಿಕೊಂಡು ಎರಡು ಕೈಗಳಿಂದಲೂ ಕೆಳಗೆ ಅದುಮಿಬಿಟ್ಟನು. ಆ ನೋವು ತಾಳಲಾರದೆ ಬಕಾಸುರ ಗಟ್ಟಿಯಾಗಿ ಕಿರಚಿಕೊಂಡನು. ಅತ್ತ—

ತತೋಽಸ್ಯ ರುಧಿರಂ ವಕ್ತ್ರಾತ್ ಪ್ರಾದುರಾಸೀತ್ ವಿಶಾಂಪತೇ ।
(೧೭೭/೪೬)
(ಅಸ್ಯ–ಇವನ, ಬಕನ, ರುಧಿರಂ–ರಕ್ತವು, ವಕ್ತ್ರಾತ್–ಬಾಯಿಂದ, ಪ್ರಾದುರಾಸೀತ್–ಹೊರಚಿಮ್ಮಿತು, ಉಕ್ಕಿ ಬಂತು, ವಿಶಾಂಪತೇ–ಹೇ ರಾಜನೇ, ಹೇ ಜನಮೇಜಯನೇ)
ಅವನ ಬಾಯಿಂದ ರಕ್ತ ಹೊರಚಿಮ್ಮಿತು.

ತತಃ ಸ ಭಗ್ನಸರ್ವಾಂಗೋ ನದಿತ್ವಾ ಭೈರವಂ ರವಮ್ ।
ಶೈಲರಾಜ ಪ್ರತೀಕಾಶೋ ಗತಾಸುರಭವದ್ ಬಕಃ ॥ (೧೭೮/೧೧)
(ನದಿತ್ವಾ–ಕಿರಿಚಿಕೊಂಡು, ಅರಚಿ, ಭೈರವಂ–ಭಯಂಕರವಾದ, ರವಂ–ಧ್ವನಿಯನ್ನು, ಶೈಲರಾಜ–ದೊಡ್ಡಬೆಟ್ಟ, ಪ್ರತೀಕಾಶ–ಸಮಾನನಾದ, ಗತಾಸುಃ–ಪ್ರಾಣ ಹೋದವನು, ಗತಾಸುಃ ಅಭವತ್–ಸತ್ತುಹೋದನು.)
ಆಮೇಲೆ ಆ ಬಕನು ಸರ್ವಾಂಗಗಳೂ ಅಜ್ಜಿಬಜ್ಜಿಯಾಗಿಹೋದುದರಿಂದ ಕೆಟ್ಟ ಧ್ವನಿಯಿಂದ ಕಿರಿಚಿ ದೊಡ್ಡ ಪರ್ವತಾಕಾರವಾಗಿ ಬಿದ್ದು ಪ್ರಾಣ ಬಿಟ್ಟನು. ಅನಂತರ ಭೀಮನು ಅವನ ಶರೀರ ಎಳೆದುಕೊಂಡು ಏಕಚಕ್ರಾನಗರಕ್ಕೆ ಬಂದು

ದ್ವಾರ್ಯೇವ ತತ್ ಪ್ರತಿನಿಧಾಯ ಪುನಃ ಸ ಭೀಮಃ ಸ್ನಾತ್ವಾ ಜಗಾಮ ನಿಜಸೋದರಪಾರ್ಶ್ವಮೇವ ॥ (ತಾ.ನಿ. ೯/೯೩)

(ದ್ವಾರಿ ಏವ-ಬಾಗಿಲಲ್ಲೇ, ಪ್ರತಿನಿಧಾಯ-ಎಸೆದು, ನಿಜ-ತನ್ನ, ಸೋದರ-ಅಣ್ಣತಮ್ಮಂದಿರ)

ಬಕನ ಆ ಕಳೇಬರವನ್ನು ಊರಬಾಗಿಲಲ್ಲೇ ಎಸೆದುಬಿಟ್ಟು ಪುನಃ ಸ್ನಾನ ಮಾಡಿ ತನ್ನ ಅಣ್ಣ-ತಮ್ಮಂದಿರ ಬಳಿಗೆ ಹೋದನು. ಇದೇ ಬಕಾಸುರನ ವಧೆಯ ಕಥೆ

ಈ ಪ್ರಕಾರ ಏಕಚಕ್ರಾನಗರಿಯ ಜನಗಳಿಗೆ ನಿರಾತಂಕವಾಗಿ ಉಸಿರಾಡುವುದಕ್ಕೇ ಕಂಟಕಪ್ರಾಯನಾಗಿ ದೊಡ್ಡ ವಿಪತ್ತಿನಂತೆ ವಿಘ್ನಸ್ವರೂಪನಾಗಿದ್ದ ಬಕಾಸುರನನ್ನು ಸಂಹರಿಸಿ ಭೀಮನು ಆ ಬ್ರಾಹ್ಮಣಕುಟುಂಬಕ್ಕೆ ಬಂದೊದಗಿದ್ದ ಗಂಡಾಂತರವನ್ನು ದೂರಮಾಡಿದನೆಂಬುದೇ ಈ ಶ್ಲೋಕದ ಪೂರ್ವಾರ್ಧದ ಮುಖ್ಯಾಭಿಪ್ರಾಯ. ಈಗ ನಾಲ್ಕನೇ ಚರಣದಲ್ಲಿ ಪ್ರಸಕ್ತವಾದ ಕಿರ್ಮೀರನ ಕಥೆಗೆ ಹೋಗೋಣ.

258. ಕಿರ್ಮೀರನ ವೃತ್ತಾಂತ— ಮಹಾಭಾರತದ ವನಪರ್ವದಲ್ಲಿ ಹನ್ನೊಂದು (೧ರಿಂದ ೧೧) ಅಧ್ಯಾಯಗಳನ್ನೊಳಗೊಂಡ 'ಕಿರ್ಮೀರವಧಪರ್ವ'ವೆಂಬ ಉಪಪರ್ವವೇ ಆದಿಭಾಗ. ಕಿರ್ಮೀರನ ವೃತ್ತಾಂತವೆಲ್ಲ ಪ್ರಾಯಶಃ ಹನ್ನೊಂದನೇ ಅಧ್ಯಾಯದಲ್ಲೇ ಬಂದಿದೆ. (ಕೆಳಗೆ ಉದಹರಿಸಿರುವ ಶ್ಲೋಕಗಳೆಲ್ಲ ಪ್ರಾಯಶಃ ಈ ಅಧ್ಯಾಯದಲ್ಲೇ ಬಂದಿವೆ.) ಅಲ್ಲದೆ ತಾತ್ಪರ್ಯನಿರ್ಣಯದ ಇಪ್ಪತ್ತೆರಡನೇ ಅಧ್ಯಾಯದ ಮೊದಲ ಮೂರು ಶ್ಲೋಕಗಳಲ್ಲೇ ಕಿರ್ಮೀರನ ವಧೆಯ ಕಥೆ ಮುಗಿದುಹೋಗಿದೆ. ಇವೆರಡರ ಸಾರಭಾಗವೇ ನನ್ನ ನಿರೂಪಣೆಯೆಂದು ತಿಳಿಯಬೇಕು.

ಭೀಮಸೇನ ವೇತ್ರಕವನದಲ್ಲಿ ಕೊಂದುಹಾಕಿದ ಬಕಾಸುರನ ತಮ್ಮನೇ ಕಿರ್ಮೀರ. ಈಶ್ವರನ ವರದಿಂದ ಅಜೇಯನಾದ ಇವನು* ಕಾಮ್ಯಕವನದ ಸಮೀಪದ ಒಂದು ದಟ್ಟಡವಿಯಲ್ಲಿ ವಾಸ ಮಾಡಿಕೊಂಡಿದ್ದನು. ತನ್ನ ಅಣ್ಣನಾದ ಬಕಾಸುರನಂತೆ ಇವನೂ ನರಭಕ್ಷಕನಾಗಿದ್ದ. ಆ ವನಕ್ಕೆ ಬಂದವರನ್ನೆಲ್ಲಾ ತುರುಬಿ ಭಕ್ಷಿಸಿಬಿಡುತ್ತಿದ್ದ. ಆದರಿಂದ ಎಲ್ಲರೂ ಆ ವನಕ್ಕೆ

---

* ಬಕಾನುಜೋಽಸೌ ನಿಖಿಲೈರಜೇಯೋ ವರಾದ್ ಗಿರೀಶಸ್ಯ... (ತಾ.ನಿ.೨೨/೨)

ಹೋಗುವುದಕ್ಕೇ ಅಂಜುತ್ತಿದ್ದರು. ಇತ್ತ ಜೂಜಿನಲ್ಲಿ ಸರ್ವಸ್ವವನ್ನೂ ಸೋತು ವನವಾಸಕ್ಕೆ ಹೊರಟ ಧರ್ಮರಾಜಾದಿ ಪಾಂಡವರು ಪುರೋಹಿತರಾದ ಧೌಮ್ಯಾಚಾರ್ಯ ಸಮೇತರಾಗಿ ಮೂರು ದಿವಸ ಹಾದಿ ನಡೆದು ಕೊನೆಗೆ ಅರ್ಧರಾತ್ರಿಯ ವೇಳೆಗೆ ನೆಟ್ಟಗೆ ಕಿರ್ಮೀರನ ವನಕ್ಕೇ ಬಂದು ಸೇರಿದರು. ಅವರು ಬರುವುದೇ ತಡ, ಮನುಷ್ಯರ ವಾಸನೆಯನ್ನು ಗುರುತಿಸಿದ ಕಿರ್ಮೀರ—

ತೇಷಾಂ ಪ್ರವಿಶತಾಂ ತತ್ರ ಮಾರ್ಗಮಾವೃತ್ಯ ಭಾರತ ।....
ದೀಪ್ತಾಕ್ಷ ಭೀಷಣಂ ರಕ್ಷಃ ಸೋಲ್ಮುಕಂ ಪ್ರತ್ಯಪದ್ಯತ ॥ (೬, ೭)

(ತೇಷಾಂ ಪ್ರವಿಶತಾಂ-ಅವರು ಪ್ರವೇಶಿಸುತ್ತಿದ್ದ ಹಾಗೆಯೇ, ಸತ್‌ಸಪ್ತಮೀ ಪ್ರಯೋಗ. ಆವೃತ್ಯ-ಅಡ್ಡಗಟ್ಟಿ, ದೀಪ್ತಾಕ್ಷಂ-ಕಣ್ಣರಳಿಸಿಕೊಂಡಿದ್ದ, ರಕ್ಷಃ-ರಾಕ್ಷಸನು, ಕಿರ್ಮೀರನು, ಸ+ಉಲ್ಮುಕಂ-ಕೊಳ್ಳಿಯನ್ನು ಹಿಡಿದುಕೊಂಡು, ಪ್ರತ್ಯಪದ್ಯತ-ಎದುರಿಸಿದನು, ಎದುರಾಗಿ ಬಂದನು.)

ಪಾಂಡವರು ವನದೊಳಗೆ ಪ್ರವೇಶಿಸುತ್ತಿದ್ದ ಹಾಗೆಯೇ ಕಿರ್ಮೀರ ಕಣ್ಣು ಕೆಂಪಗೆ ಮಾಡಿಕೊಂಡು ಕೊಳ್ಳಿ ಹಿಡಿದುಕೊಂಡು ಉಗ್ರರೂಪ ತಾಳಿ ದಾರಿಗೆ ಅಡ್ಡಲಾಗಿ ನಿಂತು, ತನ್ನ ರಾಕ್ಷಸೀಮಾಯೆಯಿಂದ ಅವರಿಗೆ ದಿಕ್ಕೇ ತೋರದಂತೆ ಮಾಡಿ ತಡೆಗಟ್ಟಿ ಆರ್ಭಟಿಸಿದನು. ಅವನ ಆರ್ಭಟದ ಧ್ವನಿ ಕೇಳಿ ಮರ-ಗಿಡಗಳ ಮೇಲೆ ಗೂಡುಕಟ್ಟಿಕೊಂಡು ಮಲಗಿದ್ದ ಹಕ್ಕಿಗಳೆಲ್ಲ ಎಚ್ಚತ್ತು ಹಾರಾಡುತ್ತಾ ಕಲಕಲಧ್ವನಿ ಮಾಡತೊಡಗಿದುವು. ಎಷ್ಟೋ ಚಿಕ್ಕಪುಟ್ಟ ಹಕ್ಕಿಗಳು ಆ ಕೂಗಿಗೇ ಹೆದರಿ ಗೂಡುಗಳಿಂದ ಉದುರಿ ನೆಲದ ಮೇಲೆ ಬಿದ್ದು ಸತ್ತುಹೋದುವಂತೆ—

ತಸ್ಯ ನಾದೇನ ಸಂತ್ರಸ್ತಾಃ ಪಕ್ಷಿಣಃ ಸರ್ವತೋ ದಿಶಮ್ ।
ವಿಮುಕ್ತನಾದಾಃ ಸಂಪೇತುಃ ಸ್ಥಲಜಾ ಜಲಜೈಃ ಸಹ ॥ (೧೦ ಶ್ಲೋ.)

(ನಾದೇನ-ಕಿರಿಚಿದ ಧ್ವನಿಯಿಂದ, ಸಂತ್ರಸ್ತಾಃ-ಭಯಗೊಂಡ, ಬೆಚ್ಚಿಬಿದ್ದ, ಸರ್ವತೋ ದಿಶಂ-ಸುತ್ತಮುತ್ತ ಎಲ್ಲ ಕಡೆಯೂ, ವಿಮುಕ್ತ ನಾದಾಃ-(ಭಯ ದಿಂದ) ಕೌಕೌಗುಟ್ಟುತ್ತಾ, ಕಿರಿಚಾಡುತ್ತಾ, ಸಂಪೇತುಃ-ಉದುರಿಬಿದ್ದುವು)

ಧೌಮ್ಯರು ರಕ್ಷೋಘ್ನಮಂತ್ರಗಳನ್ನು ಪಠಿಸಿ ಆ ದೈತ್ಯನ ಮಾಯೆಯನ್ನು ನಿವಾರಿಸಿದರು. ಇದರಿಂದ ಕಿರ್ಮೀರನಿಗೆ ಮತ್ತಷ್ಟು ಕೋಪ ಕೆರಳಿತು.

ಅವನು 'ನೀವು ಯಾರು? ಇಲ್ಲಿಗೇಕೆ ಬಂದಿರಿ? ನಿಮ್ಮ ಅವಸ್ಥೆ ಮುಗಿಯಿತು' ಎಂದು ಅಬ್ಬರಿಸಿದನು. ಅದಕ್ಕೆ ಧರ್ಮರಾಜ ತಾವು ಪಾಂಡವರೆಂದು ಹೇಳಿ ತಮ್ಮ ಪರಿಚಯ ಮಾಡಿಕೊಟ್ಟ. ಭೀಮನ ಹೆಸರು ಕೇಳುವುದೇ ತಡ, ಅವನ ಕೋಪ ಉಕ್ಕೇರಿತು. 'ನನ್ನ ಅಣ್ಣನನ್ನು ಕೊಂದ ಎಲೋ ನೀಚನೇ' ಎಂದು ಸಿಡಿಸಿಡಿಗುಟ್ಟುತ್ತಾ ಭೀಮನ ಮೇಲೆ ಭಾರಿಭಾರಿ ಮರಗಳನ್ನೂ ಬಂಡೆಗಳನ್ನೂ ಎಸೆಯಲಾರಂಭಿಸಿದ (ಅಭಿಪ್ರಸಸ್ರೇ ಭೀಮಂ ಮಹಾವೃಕ್ಷಗಿರೀನ್ ಪ್ರಮುಂಚನ್ ॥ ತಾ.ನಿ. ೨೨/೨. ಅಭಿಪ್ರಸಸ್ರೇ–ಎದುರಿಸಿಬಂದನು, ಯುದ್ಧಕ್ಕೆ ಬಂದನು, ಪ್ರಮುಂಚನ್–ಎಸೆಯುತ್ತಾ) ಅದಕ್ಕೆ ಪ್ರತಿಯಾಗಿ ಭೀಮನೂ ಸಹ ಹತ್ತು ಮಾರು ಎತ್ತರದ ಒಂದು ಭಾರಿ ಮರವನ್ನು ಕಿತ್ತು ಕಿರ್ಮೀರನ ಮೇಲೆ ಎಸೆದು ಅವನೊಡನೆ ಕಾಳಗಕ್ಕೇ ನಿಂತನು. ಇಬ್ಬರೂ ಸ್ವಲ್ಪ ಹೊತ್ತು ಮರ ಮರಗಳನ್ನೇ ಕಿತ್ತು ಹೊಡೆದಾಡಿದರು. ಆಮೇಲೆ ಬಂಡೆಗಳನ್ನು ಎಸೆದಾಡುತ್ತಾ ಸ್ವಲ್ಪ ಹೊತ್ತು ಯುದ್ಧ ಮಾಡಿ ಕೊನೆಗೆ ಬಾಹುಯುದ್ಧಕ್ಕೆ ಇಳಿದರು. ಒಬ್ಬರನ್ನೊಬ್ಬರು ಜಗ್ಗಾಡಿ ಗುದ್ದಾಡಿ ಬಗ್ಗಿಸಿ ಈಡಾಡುತ್ತಾ ದ್ವಂದ್ವಯುದ್ಧ ಮಾಡಿದರು. ಹೀಗೆ ಒಬ್ಬರಿಗೊಬ್ಬರು ಎಳೆದಾಡುತ್ತಿದ್ದಾಗ ಮಧ್ಯೆ ಭೀಮನು ಸಮಯ ಕಾಯುತ್ತಿದ್ದು ಸಟಕ್ಕನೆ ಕಿರ್ಮೀರನ ಮಧ್ಯ ಭಾಗವನ್ನು ಎರಡೂ ಕೈಗಳಿಂದ ಬಲವಾಗಿ ಹಿಡಿದು ಅವನ ದೇಹವನ್ನು ಕಣ್ಣು ಕಗ್ಗಲಿಡುವಂತೆ, ಬಿರುಗಾಳಿಯು ದೊಡ್ಡ ಮರವನ್ನು ತಲ್ಲಣಗೊಳಿಸುವಂತೆ ಕೊಡವಿಬಿಟ್ಟನು—

ಧೂನಯಾಮಾಸ ವೇಗೇನ ವಾಯುಶ್ಚಂಡ ಇವ ದ್ರುಮಮ್ । (೫೯)

ಆಮೇಲೆ ಅತ್ತ ಇತ್ತ ಜಗ್ಗಾಡಿ ದನಗಳನ್ನು ಬಡಿಯುವಂತೆ ಎರಡೂ ತೋಳುಗಳಿಂದ ಅವನ ಶರೀರಕ್ಕೆ ಗುದ್ದಿ ಹಣ್ಣುಹಣ್ಣು ಮಾಡಿಬಿಟ್ಟನು—

ಪ್ರಗೃಹ್ಯ ತರಸಾ ದೋರ್ಭ್ಯಾಂ ಪಶುಮಾರಮಮಾರಯತ್ । (೬೩)

(ಪ್ರಗೃಹ್ಯ–ಹಿಡಿದುಕೊಂಡು, ದೋರ್ಭ್ಯಾಂ–ಎರಡು ಕೈಗಳಿಂದಲೂ, ತರಸಾ–ವೇಗವಾಗಿ)

ಕಿರ್ಮೀರನ ಸರ್ವಾಂಗವೂ ಜರ್ಜರಿತವಾಗಿ ಹೋಯಿತಲ್ಲದೆ ಕಣ್ಣು ಕೋರೈಸಿಹೋಯಿತು. ಆಗ ಮತ್ತೊಮ್ಮೆ ಅವನು ಇಡೀ ದೇಹವನ್ನು

ಮೇಲೆತ್ತಿ ನೆಲಕ್ಕೆ ಅಪ್ಪಳಿಸಿ, ತಾತ್ಪರ್ಯನಿರ್ಣಯಕಾರರು ಹೇಳುವಂತೆ, ಯುದ್ಧವೆಂಬ ಈ ಯಜ್ಞದಲ್ಲಿ ಆ ಕಿರ್ಮೀರನನ್ನೇ ಶ್ರೀಕೃಷ್ಣನೆಂಬ ದೇವತೆಗೆ ಯಜ್ಞಪಶುವಾಗಿ ಸಮರ್ಪಿಸಿಬಿಟ್ಟನು—'ಚಕ್ರೇ ಮಖೇ ಸಂಗರನಾಮಧೇಯೇ ಪ್ರಸಹ್ಯ ನಾರಾಯಣದೈವತೇ ಪಶುಮ್ ॥' (ತಾ. ನಿ. ೨೨/೩) (ಚಕ್ರೇ-ಮಾಡಿದನು, ಮಖೇ-ಯಜ್ಞದಲ್ಲಿ, ಸಂಗರ-ಯುದ್ಧ, ಪ್ರಸಹ್ಯ-ಬಲಾತ್ಕಾರ-ಪೂರ್ವಕವಾಗಿ)

ಇತ್ತ ಭೀಮನ ಉತ್ಸಾಹ ಹೆಚ್ಚುತ್ತಿರಲು ಅತ್ತ ಕಿರ್ಮೀರನ ಅವಸ್ಥೆ ಏನಾಯಿತು? ಕೇಳಿ—

ವಿಸ್ರಸ್ತವಸ್ತ್ರಾಭರಣಂ ಸ್ಫುರಂತಮುದ್ಭ್ರಾಂತಚಿತ್ತಂ
ವ್ಯಸುಮುತ್ಸಸರ್ಜ ॥ (೬೭)

(ವಿಸ್ರಸ್ತ-ದಿಕ್ಕುದಿಕ್ಕಾಗಿ ಚೆದರಿಹೋದ, ಸ್ಫುರಂತಂ-ಮೈಕೈಯೆಲ್ಲಾ ಗಡಗಡ ನಡುಗುತ್ತಿರುವ, ಉದ್-ಭ್ರಾಂತಂ-ಕಂಗೆಟ್ಟುಹೋದ, ದಿಗ್ಭ್ರಾಂತವಾದ, ಅಸುಂ-ಪ್ರಾಣವನ್ನು, ವಿ+ಉತ್‌ಸಸರ್ಜ-ತೊರೆದನು, ತ್ಯಜಿಸಿದನು)

ಅವನ ಬಟ್ಟೆ-ಬರೆ ಉಡುಗೆ-ತೊಡಿಗೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಹೋದುವು. ಮೈಕೈಯೆಲ್ಲ ಥರಥರ ನಡುಗಹತ್ತಿತು. ಏನು ಮಾಡುವುದಕ್ಕೂ ತೋರದಂತೆ ದಿಗ್ಭ್ರಾಂತನಾಗಿ ಅಸುವನ್ನು ನೀಗಿಬಿಟ್ಟ. ಭೀಮನ ಸಾಹಸಕ್ಕೆ ಮೆಚ್ಚಿ ದೇವತೆಗಳು ಅವನ ಮೇಲೆ ಪುಷ್ಪವೃಷ್ಟಿ ಮಾಡಿದರು. ಈ ರೀತಿ ದುರ್ಜನಾಗ್ರಗಣ್ಯನಾದ ಕಿರ್ಮೀರನನ್ನೂ ಭೀಮನು ಅನಾಯಾಸವಾಗಿ ಸಂಹರಿಸಿಬಿಟ್ಟನು.

ಬಕಪಕ್ಷಿಯ ವೇಷ ಧರಿಸಿ ಬಂದಿದ್ದ ಬಕಾಸುರನ ಕಥೆಯೂ, ನರಭಕ್ಷಕರಾಗಿ ಲೋಕಕಂಟಕರಾಗಿದ್ದ ಬಕ ಕಿರ್ಮೀರರೆಂಬ ದುಷ್ಟಸಹೋದರರ ವಧೆಯ ವೃತ್ತಾಂತವೂ ಮುಗಿದ ಕಾರಣ ಈಗ ಉಳಿದುಕೊಂಡಿರುವ ಕೃಷ್ಣ-ಪರವಾದ ಭಾವಾರ್ಥವನ್ನೂ ಭೀಮಪರವಾದ ಭಾವಾರ್ಥವನ್ನೂ ಹೇಳಿ ಈ ಶ್ಲೋಕದ ವಿವರಣೆಯನ್ನು ಮುಗಿಸುವೆವು.

259. ಕೃಷ್ಣಪರವಾಗಿ ಭಾವಾರ್ಥ— ಭಗವಂತ ಶ್ರೀಮನ್ನಾರಾಯಣನು ತ್ರೇತಾಯುಗದಲ್ಲಿ ಭೂಭಾರಹರಣಕ್ಕಾಗಿ ಹೇಗೆ ಶ್ರೀರಾಮನಾಗಿ

ಅವತರಿಸಿದನೋ ಅದೇ ರೀತಿ ದ್ವಾಪರದಲ್ಲಿ ಭೂಭಾರಹರಣ ಮಾಡಿ ಧರ್ಮಸಂಸ್ಥಾಪನೆ ಮಾಡುವುದಕ್ಕಾಗಿ ಶ್ರೀಕೃಷ್ಣನಾಗಿ ಅವತರಿಸಿದನು. ಈ ರೀತಿ ಒಂದೊಂದು ಯುಗದಲ್ಲೂ ಧರ್ಮಸಂಸ್ಥಾಪನೆಗಾಗಿ ಪುನಃಪುನಃ ಅವತರಿಸುವುದು ಅವನಿಗೊಂದು ಲೀಲೆಯೇ ಹೊರತು ಅದರಿಂದ ಅವನಿಗೆ ಲಭಿಸಬೇಕಾದ ಯಾವ ಪ್ರಯೋಜನವಿಲ್ಲ ಎಂಬ ಅಂಶವನ್ನು ದೇವ ಎಂಬ ಸಂಬೋಧನೆ ತಿಳಿಸುತ್ತದೆ. ಅಲ್ಲದೆ ವಸುದೇವ-ದೇವಕಿಯರೂ ನಂದ-ಯಶೋದೆಯರೂ ಆ ಕೃಷ್ಣನ ತಂದೆ-ತಾಯಿಗಳೆಂದು ಲೋಕಪ್ರಸಿದ್ಧಿ ಇದ್ದರೂ ಕೃಷ್ಣ ಅವರ ಹೊಟ್ಟೆಯಲ್ಲಿ ಹುಟ್ಟಿದ ಮಗುವೂ ಅಲ್ಲ, ಅವರು ಅವನ ತಂದೆ-ತಾಯಿಗಳೂ ಅಲ್ಲ. ಏಕೆಂದರೆ ಕೃಷ್ಣನಿಗೆ ಮಿಕ್ಕ ಮಕ್ಕಳಂತೆ ಗರ್ಭವಾಸದ ಪ್ರಶ್ನೆಯೇ ಇಲ್ಲ. ಅವನು 'ಆವಿರ್ಭವಿಸಿ ಪ್ರಕಟವಾದ'ನೇ ಹೊರತು 'ಹುಟ್ಟಲೇ' ಇಲ್ಲ. ಅವನು ಅಪ್ರಾಕೃತ ದೇಹವುಳ್ಳವನೆಂಬುದನ್ನು ಅಥ ಎಂಬ ಸಂಬೋಧನೆ ತೋರಿಸಿಕೊಡುತ್ತದೆ. ಥ ಎಂದರೆ ಅನ್ನ. ಅನ್ನನಿಮಿತ್ತವಾಗಿಯೇ ಜನನ-ಮರಣ, ವೃದ್ಧಿ-ಹ್ರಾಸ, ರೋಗ-ರುಜಿನಾದಿ ಸಕಲ ದೋಷಗಳೂ ಪ್ರಾಣಿಗಳಿಗೆ ಅಂಟಿಕೊಳ್ಳುತ್ತವೆ. ಶ್ರೀಕೃಷ್ಣ ಆ ಸಕಲ ಪ್ರಾಣಿಗಳಿಗೆ ವಿರುದ್ಧವಾಗಿ ಅ ಥ, ಅನ್ನಸಂಬಂಧಿ ಯಾವ ದೋಷವೂ ಇಲ್ಲದವನು—ಅಪ್ರಾಕೃತದೇಹವುಳ್ಳವನು, ಆದ್ದರಿಂದ ಸರ್ವದೋಷದೂರನು ಮತ್ತು ಪರಿಶುದ್ಧನೂ ಆಗಿದ್ದಾನೆ. ಇದನ್ನೇ ಚ ಎಂಬ ವಿಶೇಷಣ ತೋರಿಸುತ್ತದೆ.

ಪ್ರಾಕೃತದೇಹವುಳ್ಳವನು ಮತ್ತು ಪರಿಶುದ್ಧ ಎಂಬ ಗುಣಗಳನ್ನು ಅವನಲ್ಲಿ ಅನ್ವಯಿಸುವುದಕ್ಕಾಗಿಯೇ ಅ ಎಂದು ಹೇಳಿದ್ದಾರೆ. 'ಅ ಇತಿ ಬ್ರಹ್ಮ' ಎಂದು ಶ್ರುತಿ ಹೇಳುತ್ತದೆ. ಇದರ ಅರ್ಥವನ್ನು ಐತರೇಯಭಾಷ್ಯದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಅ ಎಂದರೆ ಸರ್ವತಂತ್ರ-ಸ್ವತಂತ್ರ, ಅನಂತಾನಂತಗುಣಪರಿಪೂರ್ಣ, ಸರ್ವಸ್ಮಾದ್ಭಿನ್ನ. ಗುಣಗಳೇ ದೇಹವಾದ್ದರಿಂದ ಅವಕ್ಕೆ ವಿಕಾರವೂ ಇಲ್ಲ, ಆದ್ಯಂತಗಳೂ ಇಲ್ಲ, ಪರಿಮಿತಿಯೂ ಇಲ್ಲ. ಆದುದರಿಂದ ಅವನಿಗೆ ಹುಟ್ಟುವ ಪ್ರಶ್ನೆಯೇ ಇಲ್ಲ. ಆದರೆ ಲೋಕಾರೂಢಿಯಾಗಿ 'ಕೃಷ್ಣ ಹುಟ್ಟಿದನು, ಎಳೆಮಗುವಾಗಿದ್ದನು, ಬಾಲಕನಾಗಿದ್ದನು, ರುಕ್ಮಿಣಿಯನ್ನು ವಿವಾಹವಾದನು' ಎಂದೆಲ್ಲಾ ವ್ಯವಹಾರವಿದೆಯಲ್ಲಾ ಎಂದರೆ

ಅದೆಲ್ಲಾ ಅಜ್ಞಜನರ ಮೋಹ. ಏಕೆಂದರೆ ಕೃಷ್ಣ ಎಲ್ಲ ಮಕ್ಕಳಂತೆ ಹುಟ್ಟಲಿಲ್ಲ, ಅದಕ್ಕೆ ಪ್ರತಿಯಾಗಿ ಶಂಖಚಕ್ರಾದ್ಯಾಯುಧಪಾಣಿಯಾಗಿ ಆವಿರ್ಭವಿಸಿದನೆಂಬ ವಿಷಯ ಭಾಗವತ ದಶಮಸ್ಕಂಧದ ಈ ಪ್ರಸಿದ್ಧ ಶ್ಲೋಕಗಳಿಂದ ಸ್ಪಷ್ಟವಾಗಿ ಹೊರಬೀಳುತ್ತದೆ—(ಭಾಗ ೧೦ ಸ್ಕಂ. ೪ ಅ. ೧೦-೧೧ ಶ್ಲೋ.)

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಮ್ ॥ ೧ ॥

(ಶಬ್ದಾರ್ಥ) ಅಂಬುಜ + ಈಕ್ಷಣಂ–ಕಮಲದಂತೆ ಕಣ್ಣುಳ್ಳ, ಗದಾ-ಆದಿ-ಉತ್-ಆಯುಧಂ–ಗದಾದಿ ಆಯುಧಗಳನ್ನು ಧರಿಸಿದ್ದ, ಲಕ್ಷ್ಮ–ಲಾಂಛನ, ಚಿಹ್ನೆ, ಗಲ–ಗಂಟಲು (ಇಲ್ಲಿ ಕಂಠ ಎಂದರ್ಥ), ಸಾಂದ್ರ–ದಟ್ಟವಾದ, ಕಪ್ಪಾದ. ಪಯೋದ–ಮೇಘ, ಮೋಡ, ಸೌಭಗಂ–ಸೌಂದರ್ಯವುಳ್ಳ, ಸೊಬಗು)

ಮಹಾರ್ಹ-ವೈಡೂರ್ಯಕಿರೀಟಕುಂಡಲ
ತ್ವಿಷಾ ಪರಿಷ್ವಕ್ತ-ಸಹಸ್ರ-ಕುಂತಲಮ್ ।
ಉದ್ದಾಮ-ಕಾಂಚ್ಯಂಗದ ಕಂಕಣಾದಿಭಿರ್-
ವಿರೋಚಮಾನಂ ವಸುದೇವ ಐಕ್ಷತ ॥ ೨ ॥

(ಶಬ್ದಾರ್ಥ) ಮಹಾ ಅರ್ಹ–ಬಹು ಬೆಲೆಯುಳ್ಳ, ಅನರ್ಘ್ಯವಾದ, ತ್ವಿಷಾ ಕಾಂತಿಯಿಂದ, ಪರಿಷ್ವಕ್ತ–ಸುತ್ತಲ್ಪಟ್ಟ, ಸುತ್ತುವರಿಯಲ್ಪಟ್ಟ, ಕುಂತಲ–ಗುಂಗುರು ಕೂದಲು, ಉದ್ದಾಮ–ಅಮೋಘವಾದ, ಅನರ್ಘ್ಯವಾದ ಕಾಂಚೀ–ಡಾಬು ಅಥವಾ ಸೊಂಟದ ಪಟ್ಟಿ, ಅಂಗದ–ತೋಳ್ಬಂದಿ, ಕೇಯೂರ, ತೋಳಿಗೆ ಕಟ್ಟಿಕೊಳ್ಳುವ ಪಟ್ಟಿ, ವಿರೋಚಮಾನಂ–ಜಗಮಗಿಸುತ್ತಿದ್ದ, ಐಕ್ಷತ–ನೋಡಿದನು, ಕಂಡನು.

(ಎರಡೂ ಶ್ಲೋಕಗಳ ಭಾವಾರ್ಥ) ಕಮಲದಂತೆ ಕೋಮಲವೂ, ವಿಶಾಲವೂ ಆದ ಕಣ್ಣುಗಳುಳ್ಳ, ನಾಲ್ಕು ಕೈಗಳುಳ್ಳ, ಶಂಖಚಕ್ರಗದಾದಿ ಆಯುಧಗಳನ್ನು ಧರಿಸಿದ್ದ, ಶ್ರೀವತ್ಸಲಾಂಛನವುಳ್ಳ, ಕೌಸ್ತುಭಮಣಿಯು

ಕಂಠದಲ್ಲಿ ಪರಿಶೋಭಿಸುತ್ತಿದ್ದ, ದಿವ್ಯವಾದ ಬಿಳಿಯ ಪೀತಾಂಬರಧಾರಿಯಾಗಿದ್ದ ದಟ್ಟವಾಗಿ ಸೇರಿದ ಮೇಘಗಳಂತೆ ಶ್ಯಾಮಲವರ್ಣದ ಸೊಬಗಿನಿಂದ ಕೂಡಿದ್ದ, ಅಮೂಲ್ಯವಾದ ವಜ್ರವೈಡೂರ್ಯಾದಿ ನವರತ್ನಖಚಿತವಾದ ಕಿರೀಟದ ಪ್ರಭೆಯಿಂದಲೂ, ಕುಂಡಲಗಳ ಕಾಂತಿಯಿಂದಲೂ ಸುತ್ತುವರಿಯಲ್ಪಟ್ಟು ಜಗಮಗಿಸುತ್ತಿದ್ದ, ಸಾವಿರಾರು ಗುಂಗುರುಕೂದಲುಗಳುಳ್ಳ, ಅನರ್ಘ್ಯವಾದ ಕಾಂಚಿಯಿಂದಲೂ ತೋಳ್ಬಂದಿಗಳಿಂದಲೂ ಕಡಗಗಳಿಂದಲೂ ವಿರಾಜಿಸುತ್ತಿದ್ದ ಅದ್ಭುತನಾದ ಬಾಲಕನನ್ನು ವಸುದೇವನು ಕಂಡನು. ಈ ವಿಷಯಗಳನ್ನೇ ಏಕಚಕ್ರ ಎಂಬ ಕೃಷ್ಣನ ವಿಶೇಷಣ ಸೂಚಿಸುತ್ತದೆ. ಹೀಗೆ ಒಟ್ಟಿನಲ್ಲಿ ಕೃಷ್ಣನಿಗೆ ಕೊಟ್ಟಿರುವ ಎಲ್ಲ ವಿಶೇಷಣಗಳೂ—ದೇವ, ಅಥ, ಚ, ಅ, ಏಕಚಕ್ರ ಎಂಬ ಐದು ವಿಶೇಷಣಗಳಲ್ಲೂ ಮಹತ್ವದ ಅರ್ಥ ಅಡಗಿದೆ.

ಕ್ರೀಡಾದಿ ಗುಣವಿಶಿಷ್ಟನೂ ಸರ್ವದೋಷವಿವರ್ಜಿತನೂ ಪರಿಶುದ್ಧನೂ ಸ್ವತಂತ್ರನೂ ಅನಂತಗುಣಪರಿಪೂರ್ಣನೂ ಸಕಲಜಗದ್ವಿಲಕ್ಷಣನೂ ಚಕ್ರಾದಿ ಆಯುಧೋಪೇತನೂ ಆದ ಹೇ ಶ್ರೀಕೃಷ್ಣ! ನೀನು ಅವತಾರ ಮಾಡುವುದಕ್ಕೆ ಪೂರ್ವದಲ್ಲಿ ಗೋಬ್ರಾಹ್ಮಣಾದಿ ಸಕಲ ಸಜ್ಜನರು ಅನೇಕ ಬಗೆಯ ಅಸುರರ ನಾನಾವಿಧವಾದ ಬಾಧೆಗಳಿಂದ ಪೀಡಿತರಾಗಿ ನಿರಾತಂಕವಾಗಿ ಧರ್ಮಾನುಷ್ಠಾನ ಮಾಡುವುದಿರಲಿ, ನಿರ್ಭಯವಾಗಿ ನಿಶ್ಚಿಂತೆಯಿಂದ ಉಸಿರಾಡುವುದಕ್ಕೂ ಅವಕಾಶವಿರಲಿಲ್ಲ. ಹೆಜ್ಜೆ ಹೆಜ್ಜೆಗೂ ವಿಘ್ನಗಳು ತೊಂದರೆಗಳು; ಹೆಜ್ಜೆ ಹೆಜ್ಜೆಗೂ ಅಡ್ಡಿ ಆತಂಕಗಳು. ಕಂಸನ ದೂತರಾದ ಪೂತನಾ ಶಕಟಾಸುರ ಬಕಾಸುರರೇ ಮೊದಲಾದ ದುಷ್ಟರು ನಿರಪರಾಧಿಗಳಾದ ಎಳೆಯ ಮಕ್ಕಳಿಗೆ ಮೃತ್ಯುಸ್ವರೂಪರಾಗಿ ದಿನಬೆಳಗಾದರೆ ಒಬ್ಬರಲ್ಲ ಒಬ್ಬರು ಬಾಲಕರನ್ನು ಸಂಹಾರಮಾಡುತ್ತಲಿದ್ದರು ಅವರ ಕಾಟದಿಂದ ಮಕ್ಕಳಿಗೆ ಉಳಿಬಾಳೇ ಇರಲಿಲ್ಲ. ಹೇ ಕೃಷ್ಣ! ದಯಾಮಯ! ನೀನು ಆ ದೈತ್ಯರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಸಂಹಾರ ಮಾಡಿ ಸಜ್ಜನರಿಗೆ ಬಂದಿದ್ದ ಆ ಅನುಸಂಕಟವನ್ನು ಪರಿಹಾರ ಮಾಡಿ ಸಮಸ್ತ ಜನಾಂಗವನ್ನೂ ಸಂರಕ್ಷಿಸಿದಿ.

ಇಷ್ಟೇ ಅಲ್ಲದೆ ನಿನ್ನ ಈ ಭಾರಹರಣಕಾರ್ಯದಲ್ಲಿ ನಿನಗೆ ಪ್ರಧಾನಾಂಗವಾಗಿ ಸೇವೆ ಮಾಡಲು ಕುರುಕುಲದಲ್ಲಿ ಭೀಮಸೇನನಾಗಿ ಅವತಾರಮಾಡಿದ್ದ

ವಾಯುದೇವರೂ ಸಹ ಬಕ-ಹಿಡಿಂಬ ಕೀಚಕ ಕಿರ್ಮೀರಾದಿ ಸಜ್ಜನಘಾತಕ ದುಷ್ಟದೈತ್ಯರ ವಧೆ ಮಾಡಿ ಸಾಧು-ಸಜ್ಜನರಿಗೆ ಒದಗಿದ್ದ ನಾನಾ ಹಿಂಸೆಗಳನ್ನು ಪರಿಹಾರ ಮಾಡಿದರು. ಅದಕ್ಕೂ ನೀನೇ ಪ್ರೇರಕನು—ನೀನೇ ನಿಯಾಮಕ. ಈ ರೀತಿ ಅಮೋಘವಾದ ಪುಣ್ಯಚರಿತ್ರೆಯುಳ್ಳ ನಿನಗೂ ನಿನ್ನ ಭಕ್ತಾಗ್ರೇಸರನೂ ನಿನಗೆ ಅನುಕೂಲನೂ ಸೇವಕನೂ ಆದ ಕುರುಕುಲಾಗ್ರಣಿಯಾದ ಭೀಮಸೇನನಿಗೂ ತ್ರಿಕರಣಪೂರ್ವಕ ಶ್ರದ್ಧಾಭಕ್ತಿಸಮನ್ವಿತನಾಗಿ ಯಥಾಮತಿ ಸ್ತುತಿಸಿ ವಂದನೆಗಳನ್ನು ಸಮರ್ಪಿಸುತ್ತೇನೆ—ಎಂದು ಭಾವ.

260. ಭೀಮಪರವಾಗಿ ಭಾವಾರ್ಥ (ಬಕ-ಕಿರ್ಮೀರಾದಿಗಳ ವಧೆಯಿಂದ ವಿಘ್ನಪರಿಹಾರ)—ಮೇಲೆ ನಿರೂಪಣೆ ಮಾಡಿದಂತೆ ಶ್ರೀಮನ್ನಾರಾಯಣನು ಭೂದೇವಿಯ ಪ್ರಾರ್ಥನೆಗೆ ಓಗೊಟ್ಟು ಭೂಭಾರವನ್ನು ಇಳುಹುವುದಕ್ಕಾಗಿಯೂ ಧರ್ಮಸಂಸ್ಥಾಪನೆಗಾಗಿಯೂ ಶ್ರೀಕೃಷ್ಣನಾಗಿ ಅವತರಿಸಲು ಅವನ ಅಪ್ಪಣೆಯಂತೆ ವಾಯುದೇವನು ಆ ಭಗವಂತನಿಗೆ ನೆರವಾಗುವುದಕ್ಕಾಗಿ ಕುರುಕುಲದಲ್ಲಿ ಭೀಮಸೇನನೆಂಬ ಹೆಸರಿನಿಂದ ಅವತರಿಸಿದನು. ನಾಗಾಯುತ (ಹತ್ತುಸಾವಿರ ಆನೆಗಳ) ಬಲಾಢ್ಯನಾದ ಈ ಭೀಮಸೇನನಿಗೆ ಹಿಂದೆ ಐದನೇ ಶ್ಲೋಕದಲ್ಲಿ 'ಉದ್ಯದ್ವಿದ್ಯುತ್ಪ್ರಚಂಡಾಂ....' ಎಂದು ಹೇಳಿದಂತೆ ಗದೆಯೇ ಮುಖ್ಯವಾದ ಆಯುಧವಾಗಿತ್ತು. ಆದರೆ ದುಷ್ಟದಮನದ ಅನೇಕ ಪ್ರಸಂಗಗಳಲ್ಲಿ ಗದೆಗಿಂತಲೂ ಹೆಚ್ಚಾಗಿ ಅವನ ಅಸದೃಶವಾದ ಬಾಹುಬಲವೇ ಅವನಿಗೆ ನೆರವಾಯಿತೆಂದು ಹೇಳುತ್ತಾ ಅಂತಹ ಎರಡು ಪ್ರಸಂಗಗಳನ್ನು ಈ ಶ್ಲೋಕದಲ್ಲಿಯೇ ಹೇಳಿ ಆ ಭೀಮಸೇನನನ್ನು ಸ್ತುತಿಸಿ ವಂದನಾರ್ಪಣೆ ಮಾಡುತ್ತಾರೆ.

ವಾಯುದೇವರ ದ್ವಿತೀಯಾವತಾರವಾದ ಹೇ ಭೀಮಸೇನ, ಸ್ವಾಮಿ! ನೀನು ಶ್ರೀಕೃಷ್ಣಪರಮಾತ್ಮನ ಭೂಭಾರಹರಣಕಾರ್ಯದಲ್ಲಿ ಅವನ ಪ್ರಧಾನಾಂಗವಾಗಿ ಅನೇಕ ದುಷ್ಟ ದೈತ್ಯರನ್ನು ದಮನಗೈದು ಆ ಭಗವಂತನಿಗೆ ಅರ್ಪಿಸಿದಿ. ನಿನ್ನಂತೆ ನಿಶ್ಚಲವಾದ ನಿರ್ವ್ಯಾಜವಾದ ವಿಷ್ಣುಭಕ್ತಿಯನ್ನೂ ಬೇರೆ ಯಾರೂ ಮಾಡಲಿಲ್ಲ. ನಿನ್ನಂತಹ ನಿಗರ್ವಿಯಾದ ಕ್ಷತ್ರಿಯವೀರನೂ ಉಭಯಸೈನ್ಯದಲ್ಲೂ ಬೇರೆ ಯಾರೂ ಇಲ್ಲ. ನಿನ್ನ ಬಲ, ನಿನ್ನ ಪರಾಕ್ರಮ,

ನಿನ್ನ ಸಾಹಸ, ನಿನ್ನ ಕೆಚ್ಚೆದೆ ಬೇರೆ ಎಲ್ಲೂ ಕಾಣುವುದಿಲ್ಲ. ಬಕ ಹಿಡಿಂಬ, ಕೀಚಕ ಕಿರ್ಮೀರಾದಿ ದೈತ್ಯರು ಎಷ್ಟೇ ಬಲಿಷ್ಠರಾಗಿದ್ದರೂ ಅವರು ಲೋಕಕ್ಕೆ ಕಂಟಕಪ್ರಾಯರಾಗಿದ್ದರು. ಆದಕಾರಣವೇ ನೀನು ಅವರನ್ನೆಲ್ಲಾ ಸದೆಬಡಿದು ಲೋಕಕ್ಕೆ ಒದಗಿದ್ದ ಸಂಕಟವನ್ನು ಪರಿಹರಿಸಿ ಕಲ್ಯಾಣವನ್ನುಂಟು ಮಾಡಿ ಶ್ರೀಹರಿಯನ್ನು ಪ್ರೀತಿಪಡಿಸಿದಿ. ಇದಕ್ಕೆ ಬಕ-ಕಿರ್ಮೀರರ ವಧಾ-ಪ್ರಸಂಗಗಳೇ ಉತ್ತಮ ನಿದರ್ಶನಗಳು.

ರಾವಣನ ಚಿಕ್ಕ ಸೋದರಮಾವನಾಗಿದ್ದ ಬಕಾಸುರನು ಶ್ರೀರಾಮನ ರಾಜ್ಯಭಾರಕಾಲದಲ್ಲಿ ಗುಹೆಯಲ್ಲಿ ಅಡಗಿದ್ದು ಕಾಲಾಂತರದಲ್ಲಿ ಗರಿಗಟ್ಟಿಕೊಂಡು ಏಕಚಕ್ರಾನಗರಿಯ ವೇತ್ರಕೀಯವನಕ್ಕೆ ಬಂದು ಸೇರಿಕೊಂಡು ನರಭಕ್ಷಕನಾಗಿ ಆ ಊರಿನ ಜನಗಳಿಗೆ ಮೃತ್ಯುಸ್ವರೂಪನಾದನು. ಅವನ ಕಾಟ ತಡೆಯ ಲಾರದೆ ಆ ಜನಗಳು ಆ ಅಸುರನೊಡನೆ ಹೇಗೋ ಕರಾರು ಮಾಡಿಕೊಂಡರು. ಅದರಂತೆ ನಿತ್ಯ ಒಂದು ಬಂಡಿ ಅನ್ನ-ಭಕ್ಷ್ಯ-ಭೋಜ್ಯಾದಿಗಳನ್ನೂ ಒಬ್ಬ ಮನುಷ್ಯನನ್ನೂ ಅವನಿಗೆ ಆಹಾರವಾಗಿ ಕಳುಹಿಸುತ್ತಿದ್ದರು. ಇದರಿಂದ ಆ ನಗರಿಯಲ್ಲಿದ್ದ ಯಾರಿಗೂ ನಿರಾತಂಕವಾಗಿ ಉಸಿರಾಡಲೂ ಅವಕಾಶವಿರಲಿಲ್ಲ. ಎಲ್ಲಿ ಏನು ತಪ್ಪಾಗುವುದೋ, ಬಕನಿಗೆ ಎಂದು ಏನು ಸಿಟ್ಟು ಬಂದೀತೋ, ಏನು ಅನಾಹುತವಾದೀತೋ ಎಂದು ಹಗಲಿರುಳೂ ಚಿಂತಿಸುವುದೇ ಅವರ ಪಾಡಾಗಿತ್ತು.

ಹೀಗಿರಲು ನರಬಲಿಯನ್ನು ಕೊಡುವ ಪಾಳಿಯು ಒಬ್ಬ ಬಡಬ್ರಾಹ್ಮಣನ ಪಾಲಿಗೆ ಬಂತು. ಆ ಕುಟುಂಬದಲ್ಲಿದ್ದವರೇ ನಾಲ್ಕು ಜನ—ತಾಯಿ, ತಂದೆ, ಮಗ, ಮಗಳು. ಯಾರು ಹೋದರೂ ಮಿಕ್ಕ ಮೂವರೂ ಬೇಡವೆನ್ನುತ್ತಾರೆ. ಇಂಥಾ ಅನುಸಂಕಟದಲ್ಲಿ ಸಿಕ್ಕಿಬಿದ್ದ ಆ ಬ್ರಾಹ್ಮಣಕುಟುಂಬದ ಮೇಲಿನ ಕನಿಕರದಿಂದ,:ಹೇ ಭೀಮಸೇನ! ನೀನೇ ಬಕಾಸುರನಿಗೆ ಬಲಿಯಾಗಿಹೋಗಲು ಒಪ್ಪಿಕೊಂಡಿ, ಸ್ವಾಮಿ. ನೀನು ಎಂಥಾ ಕರುಣಾಳು! ಸರಿ, ಮಾತಿಗೆ ತಕ್ಕಂತೆ ಆ ಭಕ್ಷ್ಯಭೋಜ್ಯಾದಿಗಳಿಂದ ತುಂಬಿದ ಬಂಡಿಯನ್ನು ಹೊಡೆದುಕೊಂಡು ಆ ವೇತ್ರಕೀಯವನಕ್ಕೆ ನೀನೇ ನಿರ್ಭಯವಾಗಿ ಹೊರಟುಬಿಟ್ಟೆ. ಆ ಅನ್ನ-ವನ್ನೆಲ್ಲಾ ನೀನೇ ತಿಂದು ಯುದ್ಧಕ್ಕೆ ಬಂದ ಬಕಾಸುರನೊಡನೆ ಹಣಾಹಣಿ

ಯುದ್ಧ ಮಾಡಿ ಅವನನ್ನು ಹಣ್ಣುಗಾಯಿ-ನೀರುಗಾಯಿ ಮಾಡಿ ಸಂಹರಿಸಿ-ಬಿಟ್ಟೆ. ಇದರಿಂದ ಏಕಚಕ್ರಾನಗರಿಯ ಜನಗಳಿಗಿದ್ದ ದೊಡ್ಡ ಗಂಡಾಂತರವೇ ತಪ್ಪಿದಂತಾಯಿತು, ವಿಶಿಷ್ಟ ಜನರಿಗೂ ಸೌಖ್ಯವನ್ನು ತಂದುಕೊಟ್ಟೆ. ಇಂಥಾ ಅದ್ಭುತ ಸಾಹಸಕಾರ್ಯವನ್ನು ಮಾಡಬಲ್ಲ ಜಗಜಟ್ಟಿಗಳು ಬೇರೆ ಎಲ್ಲಿದ್ದಾರೆ?

ಈ ಬಕಾಸುರನ ತಮ್ಮನೇ ಕಿರ್ಮೀರ, ಅವನೂ ನರಭಕ್ಷಕ. ಈಶ್ವರನ ವರದಿಂದ ಅಜೇಯನಾದ ಇವನು ಕಾಮ್ಯಕವನದ ದಟ್ಟಡವಿಯಲ್ಲಿ ಸೇರಿ-ಕೊಂಡು ಅಲ್ಲಿಗೆ ಯಾರೇ ಬರಲಿ ಎಲ್ಲರನ್ನೂ ಭಕ್ಷಿಸಿ ತೇಗಿಬಿಡುತ್ತಿದ್ದ. ಹೀಗಿರಲು ಧರ್ಮರಾಜಾದಿ ಪಾಂಡವರು ವನವಾಸಕ್ಕೆ ಹೊರಟವರು ದಾರಿ ಸಾಗಿಸಿ ಅರ್ಧರಾತ್ರಿಯ ಹೊತ್ತಿಗೆ ನೇರವಾಗಿ ಈ ಕಿರ್ಮೀರನ ವಾಸಸ್ಥಳಕ್ಕೇ ಬಂದರು. ಅವರು ಬರುವುದೇ ತಡ, ಈ ಕಿರ್ಮೀರ ಕೊಳ್ಳಿ ಹಿಡಿದುಕೊಂಡು ಬಂದು ಅವರೆಲ್ಲರನ್ನೂ ಅಡ್ಡಗಟ್ಟಿ ಅರ್ಭಟಿಸಿದನು ಹೇ ಸ್ವಾಮಿ! ನಿನ್ನ ಹೆಸರು ಕೇಳುತ್ತಲೇ ಅವನ ಕೋಪ ಉಕ್ಕೇರಿತು. ನೀನು ಅವನ ಅಣ್ಣನನ್ನು ಕೊಂದ ಸೇಡು ತೀರಿಸಬೇಕೆಂದು ನಿನ್ನ ಮೈಮೇಲೆ ಬಿದ್ದ—ತನ್ನ ಮೃತ್ಯು ವನ್ನು ತಾನೇ ಕರೆದಂತಾಯಿತು ಅವನೊಡನೆ ಮುಷ್ಟಾಮುಷ್ಟಿ ಯುದ್ಧ ಮಾಡಿ ಸ್ವಲ್ಪ ಹೊತ್ತು ಸೆಣಸಾಡಿ ಕೊನೆಗೆ ಅವನ ಸೊಂಟವನ್ನೇ ಹಿಡಿದೆತ್ತಿ ಗರಗರ ತಿರುಗಿಸಿ ಅವನ ಕಣ್ಣು ಕೋರೈಸುವಂತೆ ಮಾಡಿ ಅವನ ಶರೀರವನ್ನು ನೆಲಕ್ಕೆ ಅಪ್ಪಳಿಸಿಬಿಟ್ಟೆ. ಯುದ್ಧವೆಂಬ ಯಜ್ಞದಲ್ಲಿ ಅವನನ್ನೇ ಪಶುವನ್ನಾಗಿ ಮಾಡಿ ಭಗವಂತನಿಗೆ ಅರ್ಪಿಸಿಬಿಟ್ಟೆ. ಈ ರೀತಿ ದುಷ್ಟಾಗ್ರೇಸರರಾದ ಬಕಾಸುರ ನನ್ನೂ ಕಿರ್ಮೀರನನ್ನೂ ಧ್ವಂಸಮಾಡಿ ಲೋಕಕ್ಕೆ ಬಂದಿದ್ದ ಕಂಟಕವನ್ನು ದೂರ ಮಾಡಿ ಸಾಧುಸಜ್ಜನರಿಗೆ ಸೌಖ್ಯವುಂಟುಮಾಡಿ ಶ್ರೀಕೃಷ್ಣಾರ್ಪಣ ಎಂದಂಥಾ ನಿನ್ನ ಅತುಳ ಭುಜಬಲಕ್ಕೆ ಇಗೋ, ಸ್ವಾಮಿ ಭೀಮಸೇನದೇವ! ತ್ರಿಕರಣಶುದ್ಧಿ ಯಾದ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತೇನೆ, ನಿನಗೆ ನಮೋನಮಃ! (ಹೇ ಬಲದೇವ! ನಮ್ಮ ದೇಹದಲ್ಲೇ ಇಂಥಾ ಎಷ್ಟೋ ಮಂದಿ ಬಕ-ಕಿರ್ಮೀರರು, ಆಸೆ, ಅಜ್ಞಾನ, ಅಹಂಕಾರಾದಿಗಳು ಸೇರಿಕೊಂಡು ನಮಗೆ ವಿಚಿತ್ರ ಹಿಂಸೆ ಕೊಡುತ್ತಿದ್ದಾರೆ. ಅವರ ಕಾಟದಿಂದ ನನಗೆ ಒಂದೂ ಸತ್ಕಾರ್ಯ ವನ್ನು ಮಾಡುವಂತಿಲ್ಲ. ಆ ಬಕ-ಕಿರ್ಮೀರರನ್ನು ಧ್ವಂಸ ಮಾಡಿದಂತೆ ಈ

ಆಂತರಿಕ ಬಕ-ಕಿರ್ಮೀರರನ್ನೂ ನಾಶಮಾಡಿ ನಮ್ಮನ್ನು ಉದ್ಧರಿಸು. ನಮ್ಮ ಸಾಧನಮಾರ್ಗವು ನಿರಾತಂಕವಾಗಿ ಸಾಗುವಂತೆಯೂ ನಾವು ನಿರ್ವಿಘ್ನವಾಗಿ ಶ್ರೀಹರಿಪದವನ್ನು ಸೇರುವಂತೆಯೂ ಅನುಕೂಲ ಮಾಡಿಕೊಟ್ಟು ನಮ್ಮನ್ನು ಉದ್ಧಾರ ಮಾಡು ಸ್ವಾಮಿ! ಎಂಬುದೇ ಆಂತರಿಕ ಭಾವ.)

261. ವಿಶೇಷ ವಿಚಾರಗಳು—'ಗುರುಸಾರ್ವಭೌಮ' ಟೀಕೆಯಲ್ಲಿ ಸ್ವ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಹೀಗೆ ಹೇಳಿದ್ದಾರೆ—ವಾಯು-ಸ್ತುತಿಯಲ್ಲಿಯೇ ಭೀಮಾವತಾರದ ಏಳು ಶ್ಲೋಕಗಳು ಮುಖ್ಯ. ಅವುಗಳಲ್ಲೂ ಈ ಇಪ್ಪತ್ತೆರಡನೇ ಶ್ಲೋಕ ಬಹು ಮುಖ್ಯ. 'ಈ ಶ್ಲೋಕದಲ್ಲಿಯೂ ಬಹುಲ ಬಲಬಕಧ್ವಂಸನಾದ್ಯೇನ ಎಂಬ ಪದವು ರತ್ನಪ್ರಾಯವಾಗಿರುತ್ತದೆ' ಎನ್ನುತ್ತಾರೆ. ಏಕೆಂದರೆ ಇದರಿಂದ ಭೀಮಸೇನಚರಿತ್ರೆಗೆ ಸಂಬಂಧಿಸಿದ ವಿಶಿಷ್ಟ ಭಾರತಕಥೆಗಳೂ ಸೂಚಿಸಲ್ಪಡುತ್ತವೆ ಎಂದು ಹೇಳಿ ಆ ಕಥೆಗಳನ್ನು ಬಹು ವಿಸ್ತಾರವಾಗಿ ನಿರೂಪಣೆ ಮಾಡಿದ್ದಾರೆ. ಕೆಳಗೆ ಅವರ ನಿರೂಪಣೆಯ ರೂಪ-ರೇಖೆಗಳನ್ನು ಮಾತ್ರ ತೋರಿಸಿದೆ. ಹೆಚ್ಚಿನ ವಿಚಾರ ತಿಳಿಯಲಪೇಕ್ಷಿಸುವವರು ಗುರುಸಾರ್ವಭೌಮ ಟೀಕೆಯನ್ನೇ ನೋಡಬಹುದು.

ಭಾರತದ ವಿಶಿಷ್ಟ ಕಥೆಗಳೂ ಈ ಪದಾವಳಿಯಲ್ಲಿ ಸೂಚಿತವಾಗಿವೆಯೆಂದು ತೋರಿಸುವುದಕ್ಕೆ ಅವರು ವ್ಯಾಕರಣದ ಸಹಾಯವನ್ನು ಪಡೆದಿದ್ದಾರೆ. ಈ ಪದವನ್ನು ಒಂದೇ ಸಮಾಸ ಎಂದೂ ಗ್ರಹಣ ಮಾಡಲು ಶಕ್ಯವಿದೆ; ಬಹುಲಬಲಬಕಧ್ವಂಸನಾತ್ ಯೇನ ಎಂದು ಎರಡು ಬೇರೆ ಬೇರೆ ಪದಗಳೆಂದು ಗ್ರಹಿಸಲೂ ಸಾಧ್ಯವಿದೆ. ಒಂದೇ ಸಮಾಸಪದ ಎಂದು ತೆಗೆದುಕೊಂಡರೂ ಸಹ ಸಮಾಸಭೇದದಿಂದ ಅದಕ್ಕೆ ಎರಡು ಬೇರೆಬೇರೆ ಅರ್ಥ ಹೇಳಲೂ ಅವಕಾಶವಿದೆ. ಈ ಯುಕ್ತಿಯಿಂದ ಉಪಾಧ್ಯಾಯರು ಈ ಶಬ್ದಾವಳಿಗೆ ಮೂರು ವಿಧವಾದ ಅರ್ಥ ಹೇಳಿದ್ದಾರೆ.

೧) ಬಹುಲ........ದ್ಯೇನ ಎಂಬುದನ್ನು ಒಂದೇ ಸಮಸ್ತಪದ ಎಂದು ಗ್ರಹಿಸಿ, ಬಕಧ್ವಂಸನಾತ್ ಆದ್ಯೇನ=ಬಕನನ್ನು ಸಂಹಾರಮಾಡುವುದಕ್ಕೆ ಹಿಂದಿನಿಂದ (ಪೂರ್ವದಿಂದ) ಎಂದು ಪಂಚಮೀ ತತ್ಪುರುಷಸಮಾಸ ಮಾಡಬಹುದು. ಆಗ, ಭೀಮನ ಜನನಾರಭ್ಯ ಬಕಾಸುರನ ವಧೆಯವರೆಗೆ (ವಧೆ

ಬಿಟ್ಟು) ನಡೆದ ಆದಿಪರ್ವದ ಕಥಾಭಾಗವೆಲ್ಲವನ್ನೂ ಈ ಪದ ಸಂಗ್ರಹಿಸುತ್ತದೆ. ವಾಯುದೇವರ ಅನುಗ್ರಹದಿಂದ ಕುಂತೀ ಎರಡನೇ ಮಗನನ್ನು ಹಡೆದದ್ದು, ತೊಡೆಯಿಂದ ಬೆಟ್ಟದ ಮೇಲೆ ಬಿದ್ದಾಗ ಬೆಟ್ಟವೇ ಸೀಳಿಹೋದದ್ದು, ಬಾಲ್ಯ, ವಿದ್ಯಾಭ್ಯಾಸ, ದುರ್ಯೋಧನಾದಿಗಳು ಹಿಂಸಿಸಿದ್ದು—ವಿಷಾನ್ನ ಹಾಕಿದ್ದು, ಅರಗಿನಮನೆಯ ಪ್ರಸಂಗ, ಅದರಿಂದ ಪಾರಾಗಿ ಬಂದದ್ದು, ಹಿಡಿಂಬವಧೆ, ಹಿಡಿಂಬೆಯು ಕೈಹಿಡಿದಿದ್ದು ಮೊದಲಾದ ಕಥೆಗಳೆಲ್ಲ 'ಆದ್ಯೇನ' ಎಂಬುದರಿಂದ ಸೂಚಿತವಾಯಿತು ಎಂದು ತೋರಿಸಿಕೊಟ್ಟಿದ್ದಾರೆ.

೨) ಬಹುಲ........ಬಕಧ್ವಂಸನಾತ್ ಯೇನ ಎಂದು ಎರಡು ಬೇರೆ ಪದಗಳೆಂದು ಗ್ರಹಣ ಮಾಡಿದರೆ ಈ ಶ್ಲೋಕದಲ್ಲಿ ಹೇಳಿದ ಬಕಾಸುರನ ವಧೆ ಕಿರ್ಮೀರನ ವಧೆಗಳು ಮಾತ್ರ ಪ್ರಸಕ್ತವಾಗುವುವು.

೩) ಒಂದೇ ಸಮಸ್ತಪದ ಎಂದು ಹಿಂದಿನಂತೆಯೇ (೧ನೇ ಪಕ್ಷದಂತೆ) ಗ್ರಹಣಮಾಡಿ ಬಕಧ್ವಂಸನಂ ಆದ್ಯಂ ಯಸ್ಯ ತತ್, +ತೇನ ಎಂದು ವಿಗ್ರಹ ಹೇಳಿ ಬಹುವ್ರೀಹಿ ಸಮಾಸವೆಂದು ಹೇಳಿದರೆ ಬಕಾಸುರನ ವಧೆಯಿಂದ ಆರಂಭವಾದ ಆ ಭೀಮನ ಚರಿತ್ರೆಗಳೆಲ್ಲ ಬಂದುಬಿಡುತ್ತವೆ. ಅದರಂತೆ ದ್ರೌಪದೀ ಪಾಣಿಗ್ರಹಣ, ರಾಜಸೂಯಯಾಗಕ್ಕೆ ಪೂರ್ವಭಾವಿಯಾಗಿ ಜರಾಸಂಧನನ್ನು ಸಂಹರಿಸಿದ್ದು, ಜೂಜಾಡಿ ಸೋತ ಧರ್ಮರಾಜನ ದೆಸೆಯಿಂದ ವನವಾಸ-ಅಜ್ಞಾತವಾಸ ಮಾಡಿದ್ದು, ಸೌಗಂಧಿಕಾಹರಣದ ನಿಮಿತ್ತ ದೈತ್ಯಸಂಹಾರ, ಭಾರತಯುದ್ಧವ್ಯಾಜದಿಂದ ಕೌರವರ ನಾಶ, ಅಶ್ವಮೇಧ ಮಾಡಿಸಿದ್ದು ಮತ್ತು ಕೊನೆಗೆ ಸ್ವರ್ಗಾರೋಹಣ ಮಾಡಿದ್ದು ಎಲ್ಲ ಕಥೆಗಳೂ ಸೂಚಿತವಾದುವು ಎಂದು ತೋರಿಸಿಕೊಟ್ಟಿದ್ದಾರೆ.

ಇಲ್ಲಿಗೆ ೨೦ನೇ ಶ್ಲೋಕದ ವಿವರಣೆ ಮುಗಿಯಿತು.

೨೩ನೇ ಶ್ಲೋಕ. ಜರಾಸಂಧನ ವಧೆ

262. ಶ್ಲೋಕಕ್ಕೆ ಅವತಾರಿಕೆ—(ಲೇ.) ದ್ವಾಪರಯುಗವು ಪ್ರಾಪ್ತವಾಗಲು ಹರಿವಾಯುಗಳ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಹವಣಿ

ಸುತ್ತಿದ್ದ ಅನೇಕ ಮಂದಿ ದೈತ್ಯರು ರಾಜರಾಗಿ ಕ್ಷತ್ರಿಯವಂಶಗಳಲ್ಲಿ ಅವತಾರ ಮಾಡಿದರು. ಅಂಥಾ ದೈತ್ಯರಲ್ಲೆಲ್ಲಾ ಜರಾಸಂಧನು ಅತ್ಯಂತ ಬಲಿಷ್ಠನು. ಸಾಕ್ಷಾತ್ ಕಲಿಯ ಸ್ವರೂಪನಾದ ದುರ್ಯೋಧನನೊಬ್ಬನನ್ನು ಬಿಟ್ಟರೆ ಈ ಜರಾಸಂಧನಿಗೆ ಸಮಾನರಾದವರು ಬೇರೆ ಯಾರೂ ಇರಲಿಲ್ಲ. ಇದಕ್ಕೆ ವಿಶೇಷ ಕಾರಣಗಳೂ ಇದ್ದುವು ಜರಾಸಂಧನಿಗೆ ಜನ್ಮದೊಂದಿಗೇ ಚಂಡಕೌಶಿಕರೆಂಬ ಮಹರ್ಷಿಗಳು ಕೊಟ್ಟ ಎಂಟು ಮಹತ್ತರವಾದ ವರಗಳಿದ್ದುವು. ಜೊತೆಗೆ ಅವನಿಗೆ ರುದ್ರದೇವರೂ ಅಜೇಯನಾಗುವಂತೆ ವರ ಕೊಟ್ಟಿದ್ದರು. ಇದರಿಂದ ಕೊಬ್ಬಿದ ಅವನು ಎಂಬತ್ತು ಸಾವಿರ ಮಂದಿ ಕ್ಷತ್ರಿಯವೀರರನ್ನು ಯುದ್ಧದಲ್ಲಿ ಜಯಿಸಿ ಸೆರೆಹಿಡಿದು ಅವರೆಲ್ಲರನ್ನೂ ತನ್ನ ಉಪಾಸ್ಯಮೂರ್ತಿ ಶಿವನಿಗೆ ನರ-ಮೇಧ ಯಜ್ಞದಲ್ಲಿ ಪಶುಗಳಂತೆ ಬಲಿಕೊಡಬೇಕೆಂದು ಹವಣಿಸಿಕೊಂಡಿದ್ದ. ಒಂದು ಕಡೆ ಆ ರಾಜರೆಲ್ಲರೂ ದೂತರ ಮುಖಾಂತರ ಶ್ರೀಕೃಷ್ಣನಲ್ಲಿ ಮೊರೆಯಿಟ್ಟು ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದರು. ಇನ್ನೊಂದು ಕಡೆ ರಾಜಸೂಯಕ್ಕೆ ಹವಣಿಸುತ್ತಿದ್ದ ಧರ್ಮರಾಯನಿಗೂ ಅನುಗ್ರಹ ಮಾಡಬೇಕಾಗಿತ್ತು. ಆದರೆ ಆ ಜರಾಸಂಧನ ವಧೆಯು ಭೀಮ ನಿಂದಲೇ ಆಗಬೇಕೆಂದು ಶ್ರೀಹರಿಯ ನಿಯತವಾಗಿತ್ತು. ಇದನ್ನೆಲ್ಲಾ ವಿಚಾರ ಮಾಡಿ ಶ್ರೀಕೃಷ್ಣ ತಾನೇ ಎದುರಿಗೆ ಸಾಕ್ಷಿಯಾಗಿ ನಿಂತು ಜರಾಸಂಧನನ್ನು ಭೀಮನ ಕೈಗಳಿಂದ ವಧೆ ಮಾಡಿಸಿದ್ದರಿಂದಲೂ ಭೀಮನು ಕೇವಲ ಆ ಸ್ವಾಮಿಯ ಪ್ರೀತ್ಯರ್ಥವಾಗಿಯೇ ಜರಾಸಂಧನನ್ನು ಸಂಹರಿಸಿದ್ದರಿಂದಲೂ ಶ್ರೀಕೃಷ್ಣನಿಗೆ ಈ ಸೇವೆಯಿಂದ ಆದಷ್ಟು ತೃಪ್ತಿ ಧರ್ಮರಾಯ ಮಾಡಿದ ರಾಜಸೂಯ-ಅಶ್ವಮೇಧ ಎರಡು ಯಾಗಗಳಿಂದಲೂ ಆಗಲಿಲ್ಲವೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ. (ಕಕ. ವಿ. ಛ) ಭೀಮಸೇನನನ್ನು ಸಂಬೋಧಿಸಿ 'ನೀವು ಬೇರೆ ಯಾರಿಂದಲೂ ಸಾಧ್ಯವಾಗದ ಜರಾಸಂಧನ ವಧೆಯನ್ನು ಮಾಡಿದ್ದರಿಂದ ಆ ಭಗವಂತನಿಗೆ ಮಹಾಪ್ರೀತಿಯಾಯಿತೆ'ಂದು ನಿರೂಪಣೆ ಮಾಡುತ್ತಾರೆ. (ಪುರಾ.) ಭೀಮಕೃತ ಜರಾಸಂಧಸಂಹಾರವು ರಾಜ-ಸೂಯಾಶ್ವಮೇಧಗಳಿಗಿಂತಲೂ ಶ್ರೀಕೃಷ್ಣದೇವರಿಗೆ ಅಧಿಕಪ್ರೀತಿಜನಕವಾಯಿ ತೆಂದು 'ನಿರ್ಮೃದ್ನನ್....' ಎಂಬ ಶ್ಲೋಕದಿಂದ ಹೇಳುತ್ತಾರೆ.

ನಿರ್ಮೃದ್ನ (ನಿರ್ಮೃತ್ನ)ನ್ನತ್ಯ (ನ್ನಪ್ರ)ಯತ್ನಂ
ವಿಜರವರ ಜರಾ—ಸಂಧಕಾಯಾಸ್ಥಿಸಂಧೀನ್ ।
ಯುದ್ಧೇ (ತ್ವಂ) ತಂ ಸ್ವಧ್ವರೇ ವಾ ಪಶುಮಿವ ದಮಯನ್
ವಿಷ್ಣುಪಕ್ಷದ್ವಿಡೀಶಮ್ ॥
ಯಾವತ್ ಪ್ರತ್ಯಕ್ಷಭೂತಂ ನಿಖಿಲಮುಖಭುಜಂ
ತರ್ಪಯಾಮಾಸಿಥಾಸೌ ।
ತಾವತ್ಯಾಽಯೋಜಿ ತೃಪ್ತ್ಯಾ ಕಿಮು ವದ ಭಗವನ್
ರಾಜಸೂಯಾಶ್ವಮೇಧೇ ॥ ೨೩ ॥

ಪದವಿಭಾಗ— (ಹರಿ-ವಾಯು ಉಭಯಪರ) ನಿರ್ಮೃದ್ನನ್ (ಪಾಠಾಂ. ನಿರ್ಮೃತ್ನನ್); ಅತ್ಯಯತ್ನಂ (ಪಾಠಾಂತರ. ಅಪ್ರಯತ್ನಂ), ವಿಜರವರ, ಜರಾ....ಸಂಧೀನ್, ಯುದ್ಧೇ, ತಂ (ಪಾಠಾಂ. ತ್ವಂ), ಸ್ವಧ್ವರೇ, ವಾ, ಪಶುಂ, ಇವ, ದಮಯನ್, ವಿಷ್ಣು....ಡೀಶಂ, ಯಾವತ್, ಪ್ರತ್ಯಕ್ಷಭೂತಂ, ನಿಖಿಲ....ಭುಜಂ, ತರ್ಪಯಾಮಾಸಿಥ, ಅಸೌ, ತಾವತ್ಯಾ, ಅಯೋಜಿ, ತೃಪ್ತ್ಯಾ, ಕಿಮು, ವದ, ಭಗವನ್, ರಾಜ....ಮೇಧೇ ॥

263. ಕಠಿಣ ಶಬ್ದಗಳ ವಿವರಣೆ—

i) ನಿರ್ಮೃದ್ನನ್, ನಿರ್ಮೃತ್ನನ್— ನಿರ್ ಉಪಸರ್ಗ; 'ಮೃದ ಕ್ಷೋದೇ' (ಕ್ರ್ಯಾದಿ. ಪ.)-ಹಿಂಡು, ತಿರುಚು, ಮರ್ದಿಸು ಎಂಬ ಧಾತುವಿನ ಶತೃಂತ (ವರ್ತಮಾನ ಕೃದಂತ) ರೂಪ. ಇದು ತ್ವಂ-ಗೆ ವಿಶೇಷಣ. (ಮೂಳೆ-ಗಳ ಕೀಲುಗಳನ್ನು) ಪುಡಿಪುಡಿ ಮಾಡಿದ, ನುಚ್ಚುನುರಿ ಮಾಡಿದ. ನಿರ್-ಮೃತ್ನನ್ ಎಂಬುದು ವಿಶ್ವಪತಿಟೀಕೆಯ ಪಾಠ. ರೂಪಸಿದ್ಧಿ ಹೇಗಾಗುವು-ದೆಂಬುದನ್ನು ಅವರು ಸ್ಪಷ್ಟಪಡಿಸಿಲ್ಲ.

ii) ವಿಜರವರ ಎಂಬುದು ಸಂಬೋಧನಾರೂಪ. ವಿಗತಾ ಜರಾ ಯೇಭ್ಯಸ್ತೇ ವಿಜರಾಃ-ದೇವಾಃ। ಜರಾ ಎಂದರೆ ಮುಪ್ಪು ಯಾರಿಗೆ ಇಲ್ಲವೋ ಅವರು, ಎಂದರೆ ದೇವತೆಗಳು. ನಿರ್ಜರ-ವಿಜರ ಎರಡೂ ಒಂದೇ. ವಿಜರೇಷು (ವಿಜರಾಣಾಂ ವಾ) ವರಃ-ವಿಜರವರಃ, ತಸ್ಯ ಸಂಬುದ್ಧಿಃ ವಿಜರವರ (ಕಕ. ವಿ. ಛ). ಹೇ ದೇವೋತ್ತಮನೇ! ಇದು ಕೃಷ್ಣ ಭೀಮ ಇಬ್ಬರಿಗೂ

ವಿಶೇಷಣ. ವರ ಶಬ್ದ ಪುಲ್ಲಿಂಗವಾದರೆ ದೇವರಲ್ಲಿ ಕೇಳಿಕೊಳ್ಳುವ ಇಷ್ಟಾರ್ಥ ಎಂದರ್ಥ. ವರ ವಿಶೇಷಣವಾದರೆ ಮೂರು ಲಿಂಗದಲ್ಲೂ ರೂಪವುಂಟು, ಆಗ ಅದಕ್ಕೆ ಶ್ರೇಷ್ಠ ಎಂದರ್ಥ. ವರಂ ಎಂದು ನಪುಂಸಕಲಿಂಗವಾದರೆ ಇನ್ನೊಂದಕ್ಕಿಂತ ಉತ್ತಮ ಎಂದರ್ಥ. ಉದಾ. ಶ್ರವಣಾತ್ ಮನನಂ ವರಂ- ಶ್ರವಣ ಮಾಡುವುದಕ್ಕಿಂತ ಮನನ ಮಾಡಿಕೊಳ್ಳುವುದು ಉತ್ತಮ. ಈ ಮೂರೂ ಅರ್ಥ ಅಮರದಲ್ಲಿ ಹೇಳಿದೆ—'ದೈವಾದ್ ವೃತೇ ವರಃ, ಶ್ರೇಷ್ಠೇ ತ್ರಿಷು, ಕ್ಲೀಬಂ ಮನಾಕ್ ಪ್ರಿಯೇ' (ಕಕ.)

*ಗು.ಸಾ. ಟೀಕೆಯಲ್ಲಿ ಈ ಪದಕ್ಕೆ ವಾಯುಪರವಾಗಿ ಅನೇಕಾರ್ಥ ಹೇಳಿದ್ದಾರೆ; ಆ ಅರ್ಥಗಳು ಹರಿ-ವಾಯು ಉಭಯಪರವಾಗಿ ಅನ್ವಯಿ ಸುತ್ತವೆ. (ಕ) ವಿಜರೇಭ್ಯಃ ವರಃ (ಪಂಚಮೀ ತತ್ಪುರುಷಃ) ವಾಯುಪರ. ವಾಗಿ ಗರುಡಶೇಷರುದ್ರೇಂದ್ರಾದಿ ಸಕಲ ದೇವತೆಗಳಿಗಿಂತಲೂ ಶ್ರೇಷ್ಠರಾದ ಎಂದರ್ಥ. ಹರಿಪರವಾಗಿ ರಮಾಬ್ರಹ್ಮಾದಿ ಸಕಲ ದೇವತೆಗಳಿಗಿಂತಲೂ ಶ್ರೇಷ್ಠ ನೆಂದರ್ಥ. (ಖ) ವಿಜರಾಣಾಂ ವರೋ ಯಸ್ಮಾತ್ ಸಃ (ಪಂಚಮೀ ಬಹು. ವ್ರೀಹಿ) ದೇವತೆಗಳಿಗೆ ವರಗಳನ್ನು ಕೊಡುವವರಾದ ಎಂದು ಉಭಯಪರಾರ್ಥ. ಹರಿಪರವಾದ ಅರ್ಥ ಸ್ಪಷ್ಟವಾಗಿದೆ ಶ್ರೀಹರಿಯು ರುದ್ರಾದಿಗಳಿಗೆ ಅನು- ಗ್ರಹವನ್ನು ಬ್ರಹ್ಮ-ವಾಯುಗಳ ಮುಖಾಂತರವೇ ಮಾಡುತ್ತಾನೆ, ನೇರವಾಗಿ ಮಾಡುವುದಿಲ್ಲ. 'ಸಾಕ್ಷಾನ್ನಿಯಾಮಕೋ ವಿಷ್ಣು—ರ್ಬ್ರಹ್ಮವಾಯ್ವೋಃ ಸ- ದೈವ ಚ । ರುದ್ರಾದಿ ಸರ್ವದೇವಾನಾಂ ತದ್ದ್ವಾರೇಣ ನಿಯಾಮಕಃ ॥" ಎಂದು ನಾರದೀಯಪುರಾಣದಲ್ಲಿ ಹೇಳಿದೆ. ವಿಷ್ಣು ಸರ್ವದಾ ಬ್ರಹ್ಮ ವಾಯು ಇಬ್ಬರಿಗೆ ಮಾತ್ರ ನೇರವಾಗಿ ನಿಯಾಮಕ ಮಿಕ್ಕ ರುದ್ರಾದಿಗಳೆಲ್ಲರಿಗೂ ಆ ಬ್ರಹ್ಮ-ವಾಯುಗಳ ಮುಖಾಂತರವೇ ಮಾಡುತ್ತಾನೆಯೇ ಹೊರತು ನೇರವಾಗಿ ಮಾಡುವುದಿಲ್ಲ. ಇದರಿಂದ ವಾಯುದೇವರು ರುದ್ರಾದಿ ಸಕಲ ದೇವತೆಗಳಿಗೂ ವಿಷ್ಣುಪ್ರಸಾದ ಕೊಡಿಸುತ್ತಾರೆಂದು ಅರ್ಥವಾಗುತ್ತದೆ. ಆದಕಾರಣ ವಿಜರವರ ಎಂದರೆ ರುದ್ರಾದಿಗಳಿಗೂ ವಿಷ್ಣುಪ್ರಸಾದ ಕೊಡಿಸಲು ಕಾರಣೀಭೂತರಾದ ಎಂದು ವಾಯುಪರ ಅರ್ಥ.

---

* ಗು.ಸಾ. ಎಂಬುದು ಗುರುಸಾರ್ವಭೌಮ ಟೀಕೆಗೆ ಸಂಕೇತ. ಇನ್ನುಮುಂದೆ ಈ ಸಂಕೇತವನ್ನೇ ಬಳಸುವೆನು.

ಗ) ವಿಜರಾಃ ವರಾಃ ಯಸ್ಮಾತ್ ಸಃ (ಇದೂ ಪಂಚಮೀ ಬಹುವ್ರೀಹಿ) ಯಾರ ಅನುಗ್ರಹದಿಂದ [ಹರಿಪರವಾಗಿ] ರಮಾಬ್ರಹ್ಮಾದಿ ಸಕಲ ದೇವತೆಗಳೂ ಆ ಶ್ರೇಷ್ಠತ್ವವನ್ನು ಹೊಂದಿದರೋ ಎಂದರ್ಥ. ಪರಮಾತ್ಮನ ಕೃಪಾಕಟಾಕ್ಷ-ಲವಮಾತ್ರದಿಂದ ಲಕ್ಷ್ಮಿಗೆ ಶ್ರೇಷ್ಠತ್ವ ಬಂದಿತೆಂದೂ (ಶ್ರೀರ್ಯತ್ಕಟಾಕ್ಷ-ಬಲವತ್ಯಜಿತಂ ನಮಾಮಿ) ಆಕೆಯ ಅನುಗ್ರಹದಿಂದ ಬ್ರಹ್ಮಾದಿದೇವತೆಗಳು ತಮ್ಮತಮ್ಮ ಸ್ಥಾನ ಪಡೆದರೆಂದೂ ದ್ವಾದಶಸ್ತೋತ್ರದ ಸಪ್ತಮಾಧ್ಯಾಯದಲ್ಲಿ ಹೇಳಿದೆ ಅದನ್ನು ಇಲ್ಲಿ ಅನ್ವಯಿಸಿಕೊಳ್ಳಬೇಕು. ಇದೇ ರೀತಿ ಬೃಹದ್ಭಾಷ್ಯ (೩ ಅ. ೩ ಬ್ರಾ. ೧೦ (೬ ಖಂಡ)ದಲ್ಲಿ ವಾಯುದೇವರು ಇಂದ್ರಾದಿ ದೇವತೆಗಳನ್ನೆಲ್ಲಾ ಮೃತ್ಯುರೂಪ ಅನಿಷ್ಟದಿಂದ ಪಾರುಮಾಡಿ ಅವರವರ ಸ್ಥಾನದಲ್ಲಿ ನಿಯಾಮಕ ಮಾಡಿದರೆಂದು ಹೇಳಿದೆ. ಆದಕಾರಣ ರುದ್ರಾದಿಗಳಿಗೆ ಅವರವರ ಹಿರಿಮೆಯನ್ನು ತಂದುಕೊಡಲು ಕಾರಣೀಭೂತರಾದ ಎಂಬುದು ವಾಯುಪರ-ವಾದ ಅರ್ಥ. ಈ ಅರ್ಥವನ್ನು ಕೆಳಗಿನ ಬೃಹದ್ಭಾಷ್ಯಪ್ರಮಾಣವಾಕ್ಯಗಳು ಸ್ಪಷ್ಟವಾಗಿ ಹೇಳುತ್ತವೆ—

ಸ ವಾಯೂ ರುದ್ರಶಕ್ರಾದೇ—ರ್ವಾಸುದೇವಬಲಾಶ್ರಯಃ ।
ವಿಮೋಚ್ಯ ಪಾಪಸಂಘಾತಂ ದಿಶಾಮಂತೇಷ್ವಥಾಕ್ಷಿಪತ್ ॥

ವಾಸುದೇವನ ಬಲವನ್ನು ಆಶ್ರಯಿಸಿದ ಆ ವಾಯುದೇವ ದಿಕ್ಪಾಲಕರಾದ ರುದ್ರ ದೇವೇಂದ್ರ ಮೊದಲಾದ ದೇವತೆಗಳ ಅನಿಷ್ಟರೂಪ ಪಾಪದಿಂದ ಬಿಡುಗಡೆ ಮಾಡಿ ಅವರನ್ನು ಆಯಾ ದಿಕ್ಕುಗಳಿಗೆ ಪಾಲಕರನ್ನಾಗಿ ನೇಮಿಸಿದನು, ಇತ್ಯಾದಿ.

iii) ಜರಾಸಂಧಕಾಯಾಸ್ಥಿಸಂಧೀನ್ — (ವಿ.) ಜರಯಾ–ಜರಾಖ್ಯಯಾ ರಾಕ್ಷಸ್ಯಾ, ಸಂಧಾ–ಸಂಧಿರ್ಯಸ್ಯ ಸಃ ಜರಾಸಂಧಃ । ಜರಾ ಎಂಬ ರಾಕ್ಷಸಿಯಿಂದ ಕೂಡಿಸಲ್ಪಟ್ಟ ದೇಹದ ಎರಡು ಹೋಳುಗಳುಳ್ಳವನಾದ್ದರಿಂದ ಜರಾಸಂಧನೆಂದು ಖ್ಯಾತನಾದ ಮಗಧದೇಶದ ರಾಜ. ಅವನ ಕಥೆಯನ್ನು ಕೆಳಗೆ 266ನೇ ಖಂಡದಲ್ಲಿ ಕೊಟ್ಟಿದೆ. ಅದನ್ನು ಓದಿಕೊಂಡರೆ ಈ ಹೆಸರಿನ ಸ್ವಾರಸ್ಯ ತಿಳಿಯುತ್ತದೆ. ಜರಾಸಂಧ ಕಾಯ–ಜರಾಸಂಧನ ದೇಹದಲ್ಲಿದ್ದ, ಅಸ್ಥಿಸಂಧೀನ್–ಮೂಳೆಗಳ ಕೀಲುಗಳನ್ನು ಎಂದು

ಪದಶಃ ಅರ್ಥ. ಜರಾಸಂಧನಿಗೆ ವಿಶೇಷ ವರವಿದ್ದುದರಿಂದ ಅವನ ದೇಹವನ್ನು ಎರಡು ಸೀಳಾಗಿ ಸೀಳಿದ ಹೊರತು ಅವನು ಸಾಯುತ್ತಿರಲಿಲ್ಲ. ಭೀಮನು ಜರಾಸಂಧನ ದೇಹವನ್ನು ಸೀಳಿದ್ದಲ್ಲದೆ ಎಲುಬುಗಳ ಕೀಲುಗಳನ್ನೆಲ್ಲಾ ಜಜ್ಜಿಗುಟ್ಟಿದನು ಎಂದೂ ಈ ಶ್ಲೋಕದಲ್ಲಿ ಹೇಳಿದೆ.

iv) ತ್ವಂ–ನೀನು ಎಂದು ಕೃಷ್ಣಪರವಾಗಿ ಕೃಷ್ಣನೆಂದೂ, ವಾಯು-ಪರವಾಗಿ ಭೀಮನೆಂದೂ ಅರ್ಥ. 'ತ್ವಂ' ಎಂಬುದು ಕಕ. ವಿ. ಪುರಾ. ಪಾಠ. ತಂ–ಅವನನ್ನು (ಜರಾಸಂಧನನ್ನು) ಎಂಬುದು ಛ. ಪಾಠ.

v) ಸ್ವಧ್ವರೇ ವಾ. ಸು + ಅಧ್ವರೇ = ಸ್ವಧ್ವರೇ. ಅಧ್ವರ ಎಂದರೆ ಯಜ್ಞ–ಯಾಗ 'ಯಜ್ಞಃ ಸವೋಽಧ್ವರೋ ಯಾಗಃ' ಎಂದು ಅಮರ (ಛ.). ವಾ ಶಬ್ದ ಸಾಮಾನ್ಯವಾಗಿ ಅಥವಾ ಎಂಬ ಅರ್ಥವುಳ್ಳ ಅವ್ಯಯ; ಇಲ್ಲಿ ಉಪಮಾರ್ಥದಲ್ಲಿ ಬಂದಿದೆ. 'ವಾ ವಿಕಲ್ಪೋಪಮಾನಯೋಃ' ಎಂದು ಕೋಶವಿದೆ. (ಕಕ. ವಿ. ಛ.) (vi) ವಿಷ್ಣುಪಕ್ಷದ್ವಿಡೀಶಮ್—(ಕಕ. ವಿ. ಛ.) 'ಪಕ್ಷಃ ಪಾರ್ಶ್ವ-ಗರುತ್-ಸಾಧ್ಯ-ಸಹಾಯ-ಬಲ-ಭಿತ್ತಿಷು' ಎಂದು ಅಮರವಿರುವುದರಿಂದ ಪಕ್ಷ ಎಂದರೆ ಇಲ್ಲಿ ಸಹಾಯ ಎಂದರ್ಥ. ವಿಷ್ಣೋಃ ಪಕ್ಷಾಃ ಸಹಾಯಾಃ ವಿಷ್ಣುಪಕ್ಷಾಃ, ವಿಷ್ಣುಸಹಾಯಭೂತಾ ದೇವಾಃ। ವಿಷ್ಣು ಸಹಾಯಕರಾದ ದೇವತೆಗಳು. (ಛ.) ಅಥವಾ ವಿಷ್ಣುಃ ಪಕ್ಷಃ-ಸಹಾಯಃ ಯೇಷಾಂ ತೇ, ಯಾರಿಗೆ ವಿಷ್ಣು ಸಹಾಯಕನಾಗಿದ್ದಾನೋ ಎಂಬ ವ್ಯುತ್ಪತ್ತಿಯಿಂದಲೂ ದೇವತೆಗಳು ಎಂದೇ ಅರ್ಥವಾಗುತ್ತದೆ. ಅಂಥಾ ದೇವತೆಗಳಿಗೆ, ದ್ವಿಷಃ–ದ್ವೇಷಿಣಃ, ದ್ವೇಷಿಗಳಾದವರು ವಿಷ್ಣುಪಕ್ಷದ್ವಿಷಃ–ದೈತ್ಯರು ಎಂದರ್ಥ. ಅವರಿಗೆ ಈಶಂ–ಒಡೆಯನಾದ ಅಥವಾ ಮುಖ್ಯಸ್ಥನಾದ—ಎಂಬುದು ಜರಾ-ಸಂಧನಿಗೆ ವಿಶೇಷಣ. ಛ. ಪಾಠರೀತ್ಯಾ 'ತಂ' ಎಂಬ ಪದದೊಡನೆ ಅನ್ವಯವಾಗುತ್ತದೆ. (ಪು.ರಾ. ವಿಷ್ಣುಪಕ್ಷ–ವಿಷ್ಣುಸರ್ವೋತ್ತಮತ್ವಾದಿ ಸಿದ್ಧಾಂತಗಳಿಗೆ, ದ್ವಿಟ್–ದ್ವೇಷಿಗಳಾದವರಲ್ಲಿ, ಈಶಂ–ಅಗ್ರಗಣ್ಯನಾದ, ಅರ್ಥಾತ್ ವಿಷ್ಣುಸರ್ವೋತ್ತಮತ್ವ ಸಿದ್ಧಾಂತಕ್ಕೆ ವಿರೋಧಿಗಳಾದ ಶೈವಭಕ್ತಾಗ್ರೇಸರನಾದ ಎಂದರ್ಥ

vii) **ನಿಖಿಲ-ಮಖ-ಭುಜಂ**— ಯಜ್ಞಃ ಸವೋಽಧ್ವರೋ ಯಾಗಃ ಸಪ್ತತಂತು-ರ್ಮಖಃ ಕ್ರತುಃ ಎಂದು ಅಮರವಿರುವುದರಿಂದ ಮಖ ಎಂದರೆ ಯಜ್ಞ. ಅದನ್ನು ಭುನಕ್ತೀತಿ ಭುಕ್-ಫಲವನ್ನು ಅನುಭವಿಸುವವನು ಎಂದರ್ಥ. ನಿಖಿಲ-ಸಮಸ್ತವಾದ, ಮಖ-ಯಜ್ಞಗಳ ಫಲವನ್ನೂ, ಭುಜಂ-ಭುಜಿಸುವಂಥಾ ಎಂಬುದು ಶ್ರೀಕೃಷ್ಣನಿಗೆ ವಿಶೇಷಣ. ವಿಷ್ಣುಸಹಸ್ರನಾಮದಲ್ಲಿ (೯೭೨-೮೦ ನಾಮಗಳು) 'ಯಜ್ಞೋ ಯಜ್ಞಪತಿರ್ ಯಜ್ವಾ ಯಜ್ಞಾಂಗೋ ಯಜ್ಞವಾಹನಃ। ಯಜ್ಞಭೃದ್ ಯಜ್ಞಕೃದ್ ಯಜ್ಞೀ ಯಜ್ಞಭುಗ್ ಯಜ್ಞಸಾಧನಃ ॥' (೧೧೭-೧೮ ಶ್ಲೋ.) ಎಂದು ಹೇಳಿದೆ. ಶ್ರೀಮದಾಚಾರ್ಯರು ಈಶಾವಾಸ್ಯಭಾಷ್ಯದ ಮಂಗಳಶ್ಲೋಕದಲ್ಲಿ ' ಪೂರ್ಣಾನಂದಾಯ ಹರಯೇ ಸರ್ವಯಜ್ಞಭುಜೇ ನಮಃ ಎಂದು ಸ್ತುತಿಸಿದ್ದಾರೆ ಭಗವದ್ಗೀತೆಯಲ್ಲಿ (೯/೨೪) ಶ್ರೀಕೃಷ್ಣ 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' ಎಂದು ಹೇಳಿದ್ದಾನೆ. ಅದಕ್ಕೆ ಗೀತಾವಿವೃತಿಯಂತೆ 'ನಾನೇ ಸರ್ವ ಯಜ್ಞಗಳಿಗೂ ಭೋಕ್ತನೂ ಪ್ರವರ್ತಕನೂ ಉದ್ದೇಶ್ಯನೂ ಆಗಿದ್ದೇನೆ' ಎಂದರ್ಥ.

viii) **ಅಸೌ** ಎಂಬುದು ಭೀಮಪಕ್ಷದಲ್ಲಿ ಸರ್ವನಾಮ; ಅದಸ್ ಶಬ್ದದ ಪು.ಪ್ರ.ಏ.ರೂಪ. ಅಸೌ।ಅಮೂ।ಅಮೀ— ಇತ್ಯಾದಿ ರೂಪಗಳು. ಇದಕ್ಕೆ 'ಇವನು' ಎಂದರೆ 'ನಿಖಿಲಮಖಭುಜಂ' ಎಂದು ಪ್ರಸಕ್ತನಾದ ಶ್ರೀಕೃಷ್ಣನೆಂದರ್ಥ. ಅದಸ್-ಶಬ್ದದ ಪ್ರಯೋಗದ ಬಗ್ಗೆ ಖಂಡ 91ರಲ್ಲಿ ಕೊಟ್ಟಿರುವ ಆರ್ಯಾವೃತ್ತ ನೋಡಿರಿ. ಕೃಷ್ಣಪಕ್ಷದಲ್ಲಿ 'ಅಸು'-ಪ್ರಾಣ ಶಬ್ದದ ಸಪ್ತಮೀ ಏಕವಚನರೂಪ; ಅಸೌ।ಅಸೋಃ।ಅಸುಷು—ಎಂದು ರೂಪಗಳು. ಆದಕಾರಣ ಅಸೌ ಎಂದರೆ 'ಮುಖ್ಯಪ್ರಾಣನಲ್ಲಿ ಅಂತರ್ಗತನಾದ' ಎಂದು ಅರ್ಥ ಹೇಳಬೇಕು; ಇದು 'ತ್ವಂ'ಗೆ ವಿಶೇಷಣ. ಮುಖ್ಯಪ್ರಾಣಾಂತರ್ಗತನಾದ ನೀನು ಎಂದು ಶ್ರೀಕೃಷ್ಣನಿಗೆ ಅನ್ವಯಿಸುತ್ತದೆ.

ix) **ಯಾವತ್**.... **ತಾವತ್ಯಾ** ಎಂದು ಪರಿಮಾಣ ಸೂಚಕಗಳು. ಯಾವತ್ (ಅವ್ಯಯ) ಎಷ್ಟರಮಟ್ಟಿಗೆ ಅಥವಾ ಎಷ್ಟು. ತಾವತ್ಯಾ ಎಂಬುದು ತೃಪ್ತ್ಯೈಗೆ ವಿಶೇಷಣವಾದ್ದರಿಂದ ಸ್ತ್ರೀಲಿಂಗರೂಪದಲ್ಲಿದೆ. ಅಷ್ಟು ತೃಪ್ತಿಯಿಂದ

ಎಂದರ್ಥ. ಇದು ಅಯೋಜಿ ಎಂಬ ಕರ್ಮಣಿ ಕ್ರಿಯಾಪದದೊಡನೆ ಅನ್ವಯ ವಾಗುತ್ತದೆ. ತಾವತ್ಯಾ ತೃಪ್ತ್ಯಾ ಅಯೋಜಿ (ಕರ್ಮಣಿ ಪ್ರಯೋಗ) ಅಷ್ಟು ತೃಪ್ತಿಯಿಂದ ಹೊಂದಿಸಲ್ಪಟ್ಟನೇ ? ಎಂದು ಶಬ್ದಾರ್ಥವಾದರೂ ಅಷ್ಟು ತೃಪ್ತಿ ಯಾಯಿತೇ ? ಎಂದೇ ಭಾವಾರ್ಥ. x) ಕಿಮು ಎಂಬುದು ವಿಕಲ್ಪಾರ್ಥಕ ಅವ್ಯಯ. 'ಆಹೋ ಉತಾಹೋ ಕಿಮುತ ವಿಕಲ್ಪೇ ಕಿಂ ಕಿಮೂತ ಚ' ಎಂದು ಅಮರ. ಇಲ್ಲಿ ನಿಷೇಧಾರ್ಥದಲ್ಲಿ ಬಂದಿದೆ. 'ತಾವತ್ಯಾತೃಪ್ತ್ಯಾ ಅಯೋಜಿ ಕಿಮು' ಎಂದರೆ 'ಅಷ್ಟು ತೃಪ್ತಿಯಾಯಿತೇ ?' ಎಂದು ಅರ್ಥ ವಾದರೂ 'ಅಷ್ಟು ತೃಪ್ತಿ ಖಂಡಿತವಾಗಿಯೂ ಆಗಲಿಲ್ಲ' ಎಂದೇ ಇದರ ಒಟ್ಟು ಧೋರಣೆ.

xi) ಭಗವನ್—ಐಶ್ವರ್ಯಾದಿ ಷಡ್ಗುಣಗಳಿಗೆ ಭಗ ಎಂದು ಹೆಸರು. ಆ ಷಡ್ಗುಣಗಳನ್ನು 'ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ । ಜ್ಞಾನ-ವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾತ್ ॥' ಎಂಬ ಶ್ಲೋಕ ತಿಳಿಸುತ್ತದೆ. ಸಮಗ್ರ ಐಶ್ವರ್ಯ, ವೀರ್ಯ, ಕೀರ್ತಿ, ಕಾಂತಿ, ಜ್ಞಾನ, ವಿಜ್ಞಾನ ಈ ಆರು ಗುಣಗಳಿಗೆ ಭಗ ಎಂದು ಹೆಸರು. ಭಗಃ ಅಸ್ಯಾಸ್ತೀತಿ ಭಗ-ವಾನ್ ಎಂದು ವಿಗ್ರಹ. ತಸ್ಯ ಸಂಬುದ್ಧಿಃ ಭಗವನ್ ! ಹೇ ಐಶ್ವರ್ಯಾದಿ ಷಡ್ಗುಣ ಪರಿಪೂರ್ಣನೇ ಎಂದರ್ಥ. ಇದು ಕೃಷ್ಣನಿಗೆ ವಿಶೇಷಣವಾದರೆ ನಿರ ವಧಿಕವಾದ ಐಶ್ವರ್ಯಾದಿ ಗುಣಗಳುಳ್ಳವನು ಎಂದರ್ಥವಾಗುತ್ತದೆ. ವಾಯು-ದೇವರಿಗೆ ಅನ್ವಯಿಸಿದರೆ ಬ್ರಹ್ಮದೇವರನ್ನು ಬಿಟ್ಟರೆ ಜೀವಕೋಟಿಯಲ್ಲಿ ಮಿಕ್ಕ ಎಲ್ಲರಿಗಿಂತಲೂ ಅಧಿಕವಾದ ಐಶ್ವರ್ಯಾದಿಗುಣಗಳುಳ್ಳವರು ಎಂದು ಅರ್ಥದಲ್ಲಿ ಸಂಕೋಚ ಮಾಡಬೇಕು.

xii) ರಾಜಸೂಯಾಶ್ವಮೇಧೇ—ರಾಜಸೂಯ-ಅಶ್ವಮೇಧ ಎರಡೂ ಯಾಗಗಳ ಹೆಸರು. ಧರ್ಮರಾಜ ಈ ಎರಡೂ ಯಾಗಗಳನ್ನು ಮಾಡಿದ್ದನು ; ಅದನ್ನೇ ಇಲ್ಲಿ ಹೇಳಿದ್ದಾರೆ. ರಾಜಸೂಯಯಾಗ ಮಾಡುವವನು ಭೂಮಿ ಯಲ್ಲಿರುವ ಸಕಲ ರಾಜರಿಂದಲೂ ಕಪ್ಪ ಕಾಣಿಕೆ ತಂದು ಅದನ್ನೇ ವ್ಯಯ ಮಾಡಿ ಈ ಯಾಗ ಮಾಡಬೇಕು. ಈ ಯಾಗ ಮಾಡಿದವರು ತಮ್ಮ ಗುಂಪಿನ ವರಲ್ಲೆಲ್ಲಾ ಹೆಚ್ಚಿನ ಗೌರವಕ್ಕೆ ಪಾತ್ರರಾಗುತ್ತಾರೆ. ಅಶ್ವಮೇಧಯಾಗದಲ್ಲಿ

ಹೆಸರಿಗೆ ತಕ್ಕಂತೆ ಒಂದು ಕುದುರೆಗೆ ಸಂಸ್ಕಾರ ಮಾಡಿ ಬಿಡುತ್ತಾರೆ; ಆ ಕುದುರೆ ಎಲ್ಲೆಲ್ಲಿ ಹೋಗುತ್ತೋ ಅಲ್ಲೆಲ್ಲಾ ಆ ರಾಜರು ಕಪ್ಪ ಕೊಟ್ಟು ಕಳುಹಿಸಬೇಕು, ಇಲ್ಲದಿದ್ದರೆ ಕುದುರೆಯನ್ನು ತಡೆದು ಆ ಸೈನ್ಯದವರೊಡನೆ ಹೋರಾಡಬೇಕು. ಕುದುರೆ ಹಿಂದಿರುಗಿದ ಮೇಲೆ ಆ ಕುದುರೆಯನ್ನು ಬಲಿ ಕೊಟ್ಟು ಯಾಗ ಮಾಡುತ್ತಾರೆ. ಈ ಯಾಗಾನುಷ್ಠಾನದಿಂದ ಬ್ರಹ್ಮಹತ್ಯಾದಿ ದೋಷಗಳೂ ನಿವಾರಣೆಯಾಗುವುವು ಧರ್ಮರಾಜ ತನ್ನ ತಂದೆಗೆ ಹರಿಶ್ಚಂದ್ರಾದಿ ಉತ್ತ-ಮೋತ್ತಮ ಚಕ್ರವರ್ತಿಗಳ ಜೊತೆ ಸ್ಥಾನ ಸಿಗುವ ಉದ್ದೇಶದಿಂದ, ನಾರದರ ಮುಖಾಂತರ ಪಾಂಡುರಾಜ ಹೇಳಿಕಳುಹಿಸಿದ್ದರಿಂದ ಈ ರಾಜಸೂಯಯಾಗ ವನ್ನು ಮಾಡಿದನು. ಈ ವಿಚಾರ ಮಹಾಭಾರತದ ಸಭಾಪರ್ವದಲ್ಲಿ ಬಂದಿದೆ. ತನ್ನ ಬಂಧುಗಳಾದ ಕೌರವರನ್ನೆಲ್ಲಾ ವಧೆಮಾಡಿದ ಪಾಪಪರಿಹಾರಕ್ಕಾಗಿ ವೇದವ್ಯಾಸರ ನಿರ್ದೇಶದಂತೆ ಅದೇ ಧರ್ಮರಾಯ ಅಶ್ವಮೇಧಯಾಗವನ್ನು ಮಾಡಿದನು ಈ ಕಥೆ ಮಹಾಭಾರತದ ಅಶ್ವಮೇಧಪರ್ವದಲ್ಲಿ ಬಂದಿದೆ. ಈ ಎರಡೂ ಯಾಗಗಳ ವೃತ್ತಾಂತ ಖಂಡ 266 ಚ.ಛಗಳಲ್ಲಿ ಸಂಕ್ಷೇಪವಾಗಿ ಕೊಟ್ಟಿದೆ **ವ್ಯಾಕರಣಾಂಶ (ಈ ಪದದ ವಿಗ್ರಹ-ಸಮಾಸಗಳ** ವಿಚಾರ) (ವಿ.) ರಾಜಸೂಯಶ್ಚ ಅಶ್ವಮೇಧಶ್ಚ ರಾಜಸೂಯಾಶ್ವಮೇಧಃ; ತಸ್ಮಿನ್-ರಾಜಸೂಯಾಶ್ವಮೇಧೇ. (ಆಕ್ಷೇಪಣೆ) ರಾಮಲಕ್ಷ್ಮಣೌ, ಕೃಷ್ಣಾರ್ಜುನೌ ಎಂಬಂತೆ ಎರಡು ಇರುವುದರಿಂದ ದ್ವಿವಚನ ಬರಬೇಕಲ್ಲವೇ? (ಸಮಾಧಾನ) 'ಸರ್ವೋಽಪಿ ದ್ವಂದ್ವೋ ವಿಭಾಷಯಾ ಏಕವದ್ಭವತಿ'। ಎಲ್ಲಾ ದ್ವಂದ್ವ-ಸಮಾಸಗಳೂ ವಿಕಲ್ಪದಿಂದ ಏಕವಚನದಲ್ಲಿ ಬರುವುದುಂಟು. ಆದರಂತೆ ಇಲ್ಲಿ ಏಕವಚನ ಬಂದಿದೆ. (ಪುನಃ ಆಕ್ಷೇಪ) ಏಕವಚನಾಂತವಾದರೆ 'ಪಾಣಿಪಾದಂ' ಎಂಬಂತೆ ನಪುಂಸಕಲಿಂಗ ಬರಬೇಕಲ್ಲವೇ? ಪುಲ್ಲಿಂಗ ಹೇಗೆ ಬಂತು? (ಸಮಾಧಾನ) 'ಯುವೋರಿತಿ ಜ್ಞಾಪಕನಾನ್ನಪುಂಸಕಲಿಂಗತ್ವಾಭಾವಶ್ಚ'। ಪಾಣಿನಿ 'ಯುವೋರನಾಕೌ' (೭/೧/೧) ಎಂಬ ಸೂತ್ರದಲ್ಲಿ ಯು-ವೋಃ ಎಂದೂ ಅನ-ಅಕೌ ಎಂದೂ ದ್ವಂದ್ವಸಮಾಸದಲ್ಲಿ ಪುಲ್ಲಿಂಗ ಗ್ರಹಣಮಾಡಿರು ವುದರಿಂದ ಪುಲ್ಲಿಂಗವೂ ಬರುವುದುಂಟು ಎಂದು ತೋರಿಸಿದಂತಾಯಿತು ಆದ್ದ ರಿಂದ ನಪುಂಸಕಲಿಂಗ ಬರಲಿಲ್ಲ. (ಛ.) ಇಷ್ಟೆಲ್ಲಾ ಏಕೆ ಕಷ್ಟಪಡಬೇಕೆಂದು

ಥ. ಪಕ್ಷಾಂತರ ತೋರಿಸಿಕೊಡುತ್ತಾರೆ—'ರಾಜಸೂಯೇನ ಸಹಿತಶ್ಚಾಸಾವಶ್ವಮೇಧಶ್ಚ ರಾಜಸೂಯಾಶ್ವಮೇಧಃ'। ರಾಜಸೂಯ ಸಹಿತವಾದ ಅಶ್ವಮೇಧ ಎಂದು 'ಇತಿ ಮಧ್ಯಮಪದಲೋಪಿಸಮಾಸೋ ವಾ' ಮಧ್ಯಮಪದಲೋಪಿ ಸಮಾಸವೆಂದಾದರೂ ಭಾವಿಸಬಹುದು.

xiii) ನಿಖಿಲಮುಖಭುಜಂ ತರ್ಪಯಾಮಾಸಿಥ ಎಂಬ ವಾಕ್ಯಕ್ಕೆ 'ಇಚ್ಛನ್ ವವ್ರಿಮವಿದತ್ ಪೂಷಣಸ್ಯ' [ಋ. ೧೦/೫/೫] ಎಂಬ ಶ್ರುತಿವಾಕ್ಯ ಸಮಾಖ್ಯೆಯಾಗಿದೆಯೆಂದು 'ಯುಕ್ತಿಮಲ್ಲಿಕಾ'ದಲ್ಲಿ (ಶ್ಲೋಕ ೫೫೧) ತೋರಿಸಿದ್ದಾರೆ. ಶ್ರುತಿವಾಕ್ಯದಲ್ಲಿ (ಕ) ಪೂಷಣಸ್ಯ ಎಂಬ ಪದಕ್ಕೆ ಮೂರು ವಿಧವಾಗಿ ಅರ್ಥ ಹೇಳಬಹುದು :—೧) ಣಕಾರ-ಷಕಾರಗಳು ಬಲಾರ್ಥಕ ಪ್ರೇರಣಾರ್ಥಕಗಳೆಂದು ಐತರೇಯೋಪನಿಷತ್ತಿನಲ್ಲಿ (೩/೨/೬) ಹೇಳಿದೆ. ಋಗ್ಭಾಷ್ಯದಲ್ಲಿ ಣಕಾರವು ಆನಂದವಾಚಕವೆಂದು ಹೇಳಿದೆ (ಣಶ್ಚ ನಿರ್ವೃತಿ ವಾಚಕಃ). ಆದರಿಂದ ಪೂ—ಪೂರ್ಣವಾದ, ಷ-ಣ-ಬಲವೂ ನಿಯಮನ ಶಕ್ತಿಯೂ ಅಥವಾ ಬಲ ಆನಂದಗಳುಳ್ಳವನು ಪರಮಾತ್ಮನೆಂದರ್ಥ. ಅಥವಾ ೨) ಪೄ ಧಾತುವಿಗೆ ಪಾಲಿಸು ತುಂಬಿರು ಎಂದು ಎರಡರ್ಥವಿದೆ. ಅದರ ಮೇಲೆ ಉಣಾದಿ ಉ ಪ್ರತ್ಯಯ ಬಂದು ದೀರ್ಘವಾಗಿ ಪೂ ಎಂದಾಗಿದೆ; ಆದ್ದರಿಂದ ಪೂ ಎಂದರೆ 'ಪೂರ್ಣ' ಎಂದೇ ಅರ್ಥವಾಯಿತು. ಪೂ-ಪೂರ್ಣವಾದ, ಷ ಣಗಳು (ಹಿಂದಿನಂತೆ) ಉಳ್ಳವನು ಪೂಷಣ. ಹಿಂದಿನಂತೆಯೇ ಅರ್ಥ. ೩) ಪುಷ ಧಾತುವಿಗೆ ಪುಷ್ಟಿಯಾಗಿರು ಎಂದರ್ಥ. ಅದರಿಂದ ಪೂಷ ಎಂದರೆ ಪೂರ್ಣವಾದ, ಣ—ಆನಂದವುಳ್ಳವನಾದ್ದರಿಂದಲೂ ಪೂಷಣ ಎಂದರೆ ಭಗವಂತ ಎಂದೇ ಅರ್ಥ.

೩) ವೃಞ್ ವರಣೇ-ವರಿಸು, ಆರಿಸು ಎಂಬ ಧಾತುವಿಗೆ ಕಿ ಪ್ರತ್ಯಯ ಸೇರಿ (ಕ್ರಿಮಿ ಶಬ್ದದಂತೆ) ವವ್ರಿ ಎಂಬ ಪದವಾಗಿದೆ. ಅದರಿಂದ ವವ್ರಿ ಎಂದರೆ ವರಣ ಅಥವಾ ಪ್ರಸಾದ ಎಂದರ್ಥವಾಗುತ್ತದೆ. ಆದಕಾರಣ ಉದಹರಿಸಿದ ಶ್ರುತಿವಾಕ್ಯದ ಅರ್ಥವೇನೆಂದರೆ- ಪೂಷಣಸ್ಯ- ಪೂರ್ಣವಾದ ಬಲವೂ ಆನಂದವೂ ಅಥವಾ ಬಲವೂ ನಿಯಮನಶಕ್ತಿಯೂ ಉಳ್ಳ ಶ್ರೀವಿಷ್ಣುವಿನ, ವವ್ರಿಂ—

ಪ್ರಸಾದರೂಪವಾದ ಅನುಗ್ರಹವನ್ನು, ಇಚ್ಛನ್-ಬಯಸಿದವನಾಗಿ ಎಂದು ಶ್ರುತಿಯಲ್ಲಿ ಹೇಳಿಪ್ಪನ್ನೇ ಪಂಡಿತಾಚಾರ್ಯರು 'ನಿಖಿಲಮುಖಭುಜಂ ತರ್ಪ ಯಾಮಾಸಿಥ' ಎಂದು ವಾಯುಸ್ತುತಿಯಲ್ಲಿ ಹೇಳಿದರು. ಏವಂಚ ಭೀಮಸೇನ ಜರಾಸಂಧನನ್ನು ಸಂಹರಿಸಿದ್ದು ಕೇವಲ ಶ್ರೀಕೃಷ್ಣಪ್ರೀತ್ಯರ್ಥವೇ ಆಗಿತ್ತು. ಆದಕಾರಣವೇ ಶ್ರೀಕೃಷ್ಣನಿಗೆ ಜರಾಸಂಧನ ವಧೆಯಿಂದ ಆದಷ್ಟು ತೃಪ್ತಿ ಧರ್ಮರಾಜ ಮಾಡಿದ ರಾಜಸೂಯ-ಅಶ್ವಮೇಧ ಎರಡು ಯಾಗಗಳಿಂದಲೂ ಆಗಲಿಲ್ಲವೆಂಬ ವಾಯುಸ್ತುತಿಯ ಪ್ರತಿಪಾದನೆ ನ್ಯಾಯಸಂಗತವಾಗಿದೆಯೆಂದು ತಿಳಿಯಬೇಕು.

264. ಶ್ಲೋಕದ ನಿಶ್ಲೇಷಣೆ—ಹರಿ ವಾಯು ಉಭಯಪರ ಅರ್ಥ ಹೇಳುವಾಗಲೂ ಈ ಶ್ಲೋಕದ ನಾಲ್ಕನೇ ಚರಣವೇ ಪ್ರಧಾನವಾಕ್ಯ. ಅಲ್ಲಿರುವ ಭಗವನ್ ಎಂಬುದು ಉಭಯಪರವಾಗಿಯೂ ಸಂಬೋಧನೆ. ಈ ವಾಕ್ಯ ಕರ್ಮಣಿ ಪ್ರಯೋಗದಲ್ಲಿದೆಯೆಂದು ಹಿಂದೆಯೇ (ಖಂಡ ix) ಹೇಳಿದ್ದೇವೆ. ಈ ಚರಣಕ್ಕೆ ಭಗವನ್ ! ರಾಜಸೂಯಾಶ್ವಮೇಧೇ ತಾವತ್ಯಾ ತೃಪ್ತ್ಯೈ ಅಯೋಜಿ ಕಿಮು ? ವದ—ಎಂದು ಉಭಯಪರವಾಗಿ ಅನ್ವಯ. ಕೃಷ್ಣಪರವಾಗಿ ಅರ್ಥ ಹೇಳುವಾಗ ತ್ವಂ ನೀನು ಎಂಬ ಶಬ್ದವನ್ನು ಅಧ್ಯಾಹಾರ ಮಾಡಿಕೊಂಡು—ಭಗವನ್ ! (ತ್ವಂ) ರಾಜಸೂಯಾಶ್ವಮೇಧೇ ತಾವತ್ಯಾ ತೃಪ್ತ್ಯೈ ಅಯೋಜಿ ಕಿಮು ? ವದ — ಎಂದು ಜೋಡಿಸಬೇಕು. ಇದಕ್ಕೆ—ಹೇ ಭಗವಂತ, ನಿನಗೆ ರಾಜಸೂಯ ಅಶ್ವಮೇಧ ಎರಡು ಯಾಗಗಳಿಂದಲೂ ಅಷ್ಟು ತೃಪ್ತಿಯಾಯಿತೇ ? ಹೇಳು—ಎಂದು ಸರಳಾರ್ಥ. ಭೀಮಪಕ್ಷದಲ್ಲಿ ತೃತೀಯ ಚರಣದ ಕಡೆಯಲ್ಲಿರುವ 'ಅಸೌ' ಶಬ್ದವನ್ನು ಸೇರಿಸಿಕೊಳ್ಳಬೇಕು ; ಅಸೌ ಎಂದರೆ 'ಇವನು'—ಈ ಶ್ರೀಕೃಷ್ಣ ಎಂದರ್ಥ. ಅನ್ವಯ ಹೀಗಾಗುತ್ತದೆ—ಭಗವನ್ ! ಅಸೌ (ಕೃಷ್ಣಃ) ರಾಜಸೂಯಾಶ್ವಮೇಧೇ ತಾವತ್ಯಾ ತೃಪ್ತ್ಯೈ ಅಯೋಜಿ ಕಿಮು ? ವದ. ಇದಕ್ಕೆ—ಹೇ ಭಗವನ್ ಭೀಮಸೇನ, ಶ್ರೀಕೃಷ್ಣನಿಗೆ ರಾಜಸೂಯ-ಅಶ್ವಮೇಧ ಎರಡು ಯಾಗಗಳಿಂದಲೂ ಅಷ್ಟು ತೃಪ್ತಿಯಾಯಿತೇ ? ಹೇಳು ಎಂದು ಅರ್ಥ.

ತಾವತ್ಯಾ ಎಂಬುದು ಸಾಕಾಂಕ್ಷಕ ಪದ; ಅಷ್ಟು ತೃಪ್ತಿ ಎಂದರೆ ಎಷ್ಟು ತೃಪ್ತಿ? ಎಂಬ ಪ್ರಶ್ನೆ ಏಳಲೇಬೇಕು. ಅದಕ್ಕೆ ಉತ್ತರ ಮೂರನೇ ಚರಣದಲ್ಲಿದೆ. ತರ್ಪಯಾಮಾಸಿಥ ಎಂಬುದು ಮಧ್ಯಮಪುರುಷ ಏಕವಚನ ಕ್ರಿಯೆಯಾದ್ದರಿಂದ 'ತ್ವಂ' ಎಂಬ ಕರ್ತೃಪದ ಅಧ್ಯಾಹಾರಮಾಡಿ ಸೇರಿಸಿಕೊಳ್ಳಬೇಕು. ಕೃಷ್ಣಪಕ್ಷದಲ್ಲಿ 'ಆತ್ಮಾನಂ' ಎಂಬ ಯೋಗ್ಯಪದವನ್ನೂ ಸೇರಿಸಿಕೊಳ್ಳಬೇಕು. ಆಗ—ತ್ವಂ ಪ್ರತ್ಯಕ್ಷ...ಭುಜಂ (ಆತ್ಮಾನಂ) ತರ್ಪಯಾಮಾಸಿಥ-ನೀನು ಪ್ರತ್ಯಕ್ಷವಾಗಿ ನಿಂತಿದ್ದ ಸರ್ವಯಜ್ಞ ಭೋಕ್ತೃವಾದ ನಿನ್ನನ್ನು ಎಷ್ಟು ತೃಪ್ತಿಪಡಿಸಿಕೊಂಡೆಯೋ—ಎಂದು ಅರ್ಥ. ಭೀಮಪರವಾಗಿ— ನೀನು ಪ್ರತ್ಯಕ್ಷ ನಿಂತಿದ್ದ ಶ್ರೀಕೃಷ್ಣನನ್ನು ಎಷ್ಟು ತೃಪ್ತಿಪಡಿಸಿದೆಯೋ ಎಂದರ್ಥ.

ಈ ಹೆಚ್ಚು ತೃಪ್ತಿಗೆ ಕಾರಣವನ್ನು ಪೂರ್ವಾರ್ಧ ಹೇಳುತ್ತದೆ. ಅಲ್ಲಿರುವ ವಿಜರವರ ಎಂಬುದು ಉಭಯಪರವಾಗಿಯೂ ಸಂಬೋಧನೆ (ಖಂಡ 263 ii ನೋಡಿ). ಪೂರ್ವಾರ್ಧದಲ್ಲಿ— a) ಜರಾ....ಸಂಧೀನ್ ಅತ್ಯಯತ್ನಂ ನಿರ್ಮೃದ್ನನ್, (b) ವಿಷ್ಣುಪಕ್ಷದ್ವಿಡೀಶಂ (ತಂ) ಸ್ವಧ್ವರೇ ವಾ ಯುದ್ಧೇ ಪಶುಮಿವ ದಮಯನ್ ಎಂದು ಎರಡು ಉಪವಾಕ್ಯಗಳಿವೆ ಇವಕ್ಕೆ a) ಜರಾ-ಸಂಧನ ದೇಹದ ಕೀಲುಗಳನ್ನು ಅನಾಯಾಸವಾಗಿ ನೆಜ್ಜುಗುಟ್ಟಿ, b) ವಿಷ್ಣು-ದ್ವೇಷಿಗಳಲ್ಲಿ ಅಗ್ರೇಸರನಾದ ಅವನನ್ನು ಯುದ್ಧವೆಂಬ ಉತ್ತಮಯಜ್ಞದಲ್ಲಿ ಪಶುವಿನಂತೆ ಆಹುತಿಕೊಟ್ಟೆಯೋ—ಅದರಿಂದ ಎಷ್ಟು ತೃಪ್ತಿಯಾಯಿತೋ, ಅಷ್ಟು ತೃಪ್ತಿ ಎರಡು ಯಾಗಗಳಲ್ಲೂ ಆಯಿತೇ? ಹೇಳು—ಎಂದು ಇಡೀ ಶ್ಲೋಕದ ಅನ್ವಯವಾಗುತ್ತದೆ.

265 (ಅ) ಕೃಷ್ಣಪರವಾಗಿ ಅನ್ವಯ—ವಿಜರವರ ಭಗವನ್! a) ಅಸೌ (ಅಂತರ್ಗತಃ) ತ್ವಂ ಜರಾ..ಸಂಧೀನ್ ಅತ್ಯಯತ್ನಂ (ಅಪ್ರಯತ್ನಂ) ನಿರ್ಮೃ(ತ್ನನ್)ದ್ನನ್, (b) ವಿಷ್ಣುಪಕ್ಷದ್ವಿಡೀಶಂ (ತಂ) ಸ್ವಧ್ವರೇ ವಾ ಯುದ್ಧೇ ಪಶುಮಿವ ದಮಯನ್, (c) ಪ್ರತ್ಯಕ್ಷಭೂತಂ ನಿಖಿಲ....ಭುಜಂ (ಆತ್ಮಾನಂ) (ತ್ವಂ) ಯಾವತ್ ತರ್ಪಯಾಮಾಸಿಥ, (d) ಅಸೌ (ಆವೃತ್ತಿ ಮಾಡಿಕೊಳ್ಳಬೇಕು) (ತ್ವಂ) ರಾಜಸೂಯಾಶ್ವಮೇಧೇ ತಾವತ್ಯಾ ತೃಪ್ತ್ಯಾ ಅಯೋಜಿ ಕಿಮು? ವದ ॥

(ಅ) ಕೃಷ್ಣಪರವಾಗಿ ಅನ್ವಯಾರ್ಥ—ವಿಜರವರ-ರಮಾಬ್ರಹ್ಮಾದಿ ಸಕಲ ದೇವತೆಗಳಿಗಿಂತಲೂ ಶ್ರೇಷ್ಠನಾದ, ಅಥವಾ ರಮಾಬ್ರಹ್ಮಾದಿಸಕಲದೇವತೆಗಳಿಗೂ (ಅಪಾಂಗಲವ ಮಾತ್ರದಿಂದಲೇ) ಪ್ರಸಾದರೂಪ ವರವನ್ನು ಕೊಡುವ, ಅಥವಾ ತನ್ನ ಸಾನ್ನಿಧ್ಯದಿಂದ ರಮಾಬ್ರಹ್ಮಾದಿ ಸಕಲರಿಗೂ ಶ್ರೇಷ್ಠತ್ವವನ್ನು ಕೊಡುವ; ಭಗವನ್-ನಿರವಧಿಕವಾದ ಐಶ್ವರ್ಯಾದಿಷಡ್ಗುಣಪರಿಪೂರ್ಣನಾದ ಹೇ ಶ್ರೀಕೃಷ್ಣನೇ ! (a) ಅಸೌ (ಅಂತರ್ಗತಃ)-ವಾಯುದೇವರ (ಅಸು-ವಾಯು) ಅವತಾರವಾದ ಭೀಮನಲ್ಲಿ ಅಂತರ್ಯಾಮಿಯಾಗಿದ್ದ; ತ್ವಂ-ನೀನು; ಜರಾಸಂಧಕಾಯಾಸ್ಥಿಸಂಧೀನ್-ಜರಾಸಂಧನ (ಕಾಯ) ದೇಹದ (ಅಸ್ಥಿ) ಎಲುಬುಗಳ ಕೀಲುಗಳನ್ನೆಲ್ಲಾ; ಅತ್ಯಯತ್ನಂ (ಅಪ್ರಯತ್ನಂ)-ನಿರಾಯಾಸವಾಗಿ ಅಥವಾ ಸ್ವಲ್ಪವೂ ಶ್ರಮವಿಲ್ಲದೆ; ನಿರ್ಮೃ(ತ್ನನ್)ದ್ನನ್-ಸಡಿಲಗೊಳಿಸಿ (ಜಜ್ಜಿಹಾಕಿ ಅಥವಾ ಮರ್ದನಮಾಡಿ); (b) ವಿಷ್ಣು.... ಡೀಶಂ-ವಿಷ್ಣುವಿಗೆ ಸಹಾಯಕರಾದ ಅಥವಾ ವಿಷ್ಣುವೇ ಸಹಾಯವಾಗಿರುವ (ವಿಷ್ಣುವನ್ನು ಆಶ್ರಯಿಸಿದ) ದೇವತೆಗಳಿಗೂ ವಿಷ್ಣುಭಕ್ತರಿಗೂ ದ್ವೇಷಿಗಳಾದ ದೈತ್ಯರಲ್ಲೆಲ್ಲಾ ಅಗ್ರೇಸರನಾದ ಅಥವಾ (ಪು ರಾ.) ವಿಷ್ಣುಸರ್ವೋತ್ತಮತ್ವ (ಪಕ್ಷಕ್ಕೆ) ಸಿದ್ಧಾಂತಕ್ಕೆ (ದ್ವಿಟ್)-ವಿರೋಧಿಗಳಾದ ಶೈವಭಕ್ತರಲ್ಲಿ (ಈಶಂ)-ಅಗ್ರಗಣ್ಯನಾದ; (ತಂ)-ಅವನನ್ನು (ಆ ಜರಾಸಂಧನನ್ನು); ಸ್ವಧ್ವರೇ ವಾ-ಯಜ್ಞಕ್ಕೆ ಸದೃಶವಾದ; ಯುದ್ಧೇ-ಯುದ್ಧದಲ್ಲಿ; ಪಶುಂ ಇವ-ಯಜ್ಞಪಶುವಿನೋಪಾದಿಯಾಗಿ; ದಮಯನ್-ದಮನಮಾಡಿ (ಬಲಿಯಾಗಿ ಅರ್ಪಿಸಿ) (c) ಪ್ರತ್ಯಕ್ಷಭೂತಂ-ಕಣ್ಣಾರೆ ಸಾಕ್ಷಿಯಾಗಿದ್ದ; ನಿಖಿಲ-ಮಖ-ಭುಜಂ-ಸಕಲ ಯಜ್ಞಗಳ ಹವಿರ್ಭಾಗಗಳಿಗೂ ಭೋಕ್ತೃವಾದ; ಆತ್ಮಾನಂ-ತನ್ನನ್ನು; ಯಾವತ್-ಎಷ್ಟರ ಮಟ್ಟಿಗೆ, ತರ್ಪಯಾಮಾಸಿಥ-ತೃಪ್ತಿ ಪಡಿಸಿಕೊಂಡಿಯೋ; [d] [ಅಸೌ ತ್ವಂ] ಅಂಥಾ ನೀನು; ರಾಜಸೂಯಾಶ್ವಮೇಧೇ-ರಾಜಸೂಯ-ಅಶ್ವಮೇಧ ಎರಡು ಯಾಗಗಳಲ್ಲೂ, ತಾವತ್ಯಾ ತೃಪ್ತ್ಯಾ ಅಯೋಜಿ ಕಿಮು?-ಅಷ್ಟರಮಟ್ಟಿಗೆ ತೃಪ್ತಿ ಹೊಂದಿದಿಯಾ ? ವದ-ಹೇಳು. [ಜರಾಸಂಧನ ವಧೆಯನ್ನು ಎದುರಿಗೇ ಸಾಕ್ಷಿಯಾಗಿ ನಿಂತು ನೋಡಿದ್ದರಿಂದಲೂ ಅಂಥಾ ಕಡು ವಿಷ್ಣುದ್ವೇಷಿಯ ವಧೆಯಾದ್ದರಿಂದಲೂ ಆದಷ್ಟು ತೃಪ್ತಿ ರಾಜಸೂಯ-

ಅಶ್ವಮೇಧ ಎರಡು ಯಾಗಾನುಷ್ಠಾನದಿಂದಲೂ ಸರ್ವಥಾ ಆಗಲಿಲ್ಲವೆಂದೇ ಮುಖ್ಯಾಭಿಪ್ರಾಯ.]

ಇ) ಭೀಮಪರವಾಗಿ ಅನ್ವಯ— [a] ವಿಜರವರ ಭಗವನ್ ! ತ್ವಂ ಜರಾಸಂಧಕಾಯಾಸ್ಥಿಸಂಧೀನ್ ಅತ್ಯ[ಅಪ್ರ]ಯತ್ನಂ ನಿರ್ವ್ಯ[ತ್ನನ್]ದ್ನನ್, [b] ವಿಷ್ಣುಪಕ್ಷದ್ವಿಡೀಶಂ [ತಂ] ಸ್ವಧ್ವರೇ ವಾ ಯುದ್ಧೇ ಪಶುಮಿವ ದಮಯನ್, (c) ಪ್ರತ್ಯಕ್ಷಭೂತಂ ನಿಖಿಲಮಖಭುಜಂ ಯಾವತ್ ತರ್ಪಯಾಮಾಸಿಥ, (d) ಅಸೌ ರಾಜಸೂಯಾಶ್ವಮೇಧೇ ತಾವತ್ಯಾ ತೃಪ್ತ್ಯೈ ಅಯೋಜಿ ಕಿಮು ? ವದ ॥

ಈ) (a) ವಿಜರವರ-ರುದ್ರಾದಿ ದೇವತೆಗಳಿಗಿಂತ ಉತ್ತಮರಾದ, ಅಥವಾ ಆ ರುದ್ರಾದಿಗಳಿಗೆ ವಿಷ್ಣುಪ್ರಸಾದರೂಪವಾದ ಅನುಗ್ರಹಕ್ಕೆ ಕಾರಣೀಭೂತರಾದ, ಅಥವಾ ರುದ್ರಾದಿಗಳಿಗೆ ಮೃತ್ಯುರೂಪ ಅನಿಷ್ಟವನ್ನು ಪರಿಹರಿಸಿ ಅವರನ್ನು ಅವರವರ ಉತ್ತಮಸ್ಥಾನಗಳಲ್ಲಿ ನೆಲೆಗೊಳಿಸಿದ ಅಥವಾ ಅರ್ಜುನಾದಿಗಳಿಗೆ ಕೃಷ್ಣನ ಪ್ರಸಾದರೂಪ ಅನುಗ್ರಹ ಕೊಡಿಸಿ ಜಯಶೀಲರನ್ನಾಗಿ ಮಾಡುವುದಕ್ಕೂ, ಕರ್ಣಾದಿಗಳಿಗೆ ಆ ಕೃಷ್ಣನ ಅನುಗ್ರಹ ತಪ್ಪಿಸಿ ಅವರನ್ನು ಪರಾಭವಗೊಳಿಸುವುದಕ್ಕೂ ಕಾರಣೀಭೂತನಾದ; ಭಗವನ್-ಜ್ಞಾನಭಕ್ತ್ಯಾದಿ ಐಶ್ವರ್ಯಸಂಪನ್ನರಾದ ಹೇ ವಾಯುದೇವರೇ ! ತ್ವಂ-ನೀನು, ಜರಾ........ ಸಂಧೀನ್-ಜರಾಸಂಧನ ದೇಹದ ಎಲುಬುಗಳ ಕೀಲುಗಳನ್ನೆಲ್ಲಾ; ಅತ್ಯ(ಅಪ್ರ) ಯತ್ನಂ-ಅನಾಯಾಸವಾಗಿ; ನಿರ್ವ್ಯ(ತ್ನನ್)ದ್ನನ್-ಜಜ್ಜಿಹಾಕಿದವನಾಗಿ; (b) ವಿಷ್ಣು.........ಡೀಶಂ-ವಿಷ್ಣುಭಕ್ತರ ಮತ್ತು ದೇವತೆಗಳ ದ್ವೇಷಿಗಳಲ್ಲಿ ಅಗ್ರೇಸರನಾದ ಅಥವಾ ವಿಷ್ಣುಸರ್ವೋತ್ತಮತ್ವ ಸಿದ್ಧಾಂತಕ್ಕೆ ವಿರುದ್ಧವಾದ ಶಿವಸರ್ವೋತ್ತಮತ್ವಪ್ರತಿಪಾದಕರಾದ ಶಿವಭಕ್ತರಿಗೆ ಮುಖಂಡನಾದ; (ತಂ)-ಅವನನ್ನು (ಜರಾಸಂಧನನ್ನು); ಸ್ವಧ್ವರೇ ವಾ-ದೊಡ್ಡ ಯಜ್ಞಕ್ಕೆ ಸದೃಶವಾದ; ಯುದ್ಧೇ-ಯುದ್ಧದಲ್ಲಿ; ಪಶುಂ ಇವ-ಯಜ್ಞಪಶುವಿನಂತೆ, ದಮಯನ್-ಸಂಹಾರ ಮಾಡುತ್ತಾ, (d) ಪ್ರತ್ಯಕ್ಷಭೂತಂ-ಪ್ರತ್ಯಕ್ಷವಾಗಿ ಎದುರಿಗೇ ನಿಂತು ನೋಡುತ್ತಿದ್ದ; ನಿಖಿಲ ಮಖ ಭುಜಂ-ಸಮಸ್ತ ಯಜ್ಞಫಲಭೋಕ್ತೃವಾದ ಶ್ರೀಕೃಷ್ಣನನ್ನು; ಯಾವತ್ ತರ್ಪಯಾಮಾಸಿಥ-

ಎಷ್ಟರಮಟ್ಟಿಗೆ ತೃಪ್ತಿಗೊಳಿಸಿದೆಯೋ; (d) ಅಸೌ-ಈ ಕೃಷ್ಣನು, ರಾಜಸೂಯಾಶ್ವಮೇಧೇ-ರಾಜಸೂಯ ಅಶ್ವಮೇಧ ಎರಡು ಯಾಗಗಳಿಂದಲೂ, ತಾವತ್ಯಾ ತೃಪ್ತ್ಯಾ ಅಯೋಜಿ ಕಿಮು-ಅಷ್ಟು ತೃಪ್ತಿಯನ್ನು ಹೊಂದಿದನೇ? ವದ-ಹೇಳು.

ಈ ಶ್ಲೋಕದ ಭಾವಾರ್ಥವು ಚೆನ್ನಾಗಿ ಮಂದಟ್ಟಾಗಬೇಕಾದರೆ ಜರಾಸಂಧನ ವೃತ್ತಾಂತವು ಚೆನ್ನಾಗಿ ತಿಳಿದಿರಲೇಬೇಕು. ಆದಕಾರಣ ಮೊದಲು ಆ ಕಥೆಯನ್ನು ಹೇಳಿ ಅನಂತರ ಭಾವಾರ್ಥಕ್ಕೆ ಹೋಗುವೆನು.

ಜರಾಸಂಧನ ವೃತ್ತಾಂತ

266. ಆಧಾರಗಳು— ಜರಾಸಂಧನ ವೃತ್ತಾಂತವು ಮುಖ್ಯವಾಗಿ ಮಹಾಭಾರತದ ಸಭಾಪರ್ವದಲ್ಲಿ ೧೩ ರಿಂದ ೨೪ರ ವರೆಗಿನ ಹನ್ನೆರಡು ಅಧ್ಯಾಯಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಹಾಗೆಯೇ ಭಾಗವತದಲ್ಲಿ ನವಮಸ್ಕಂಧದ ೧೯ನೇ ಅಧ್ಯಾಯದಲ್ಲೂ ದಶಮಸ್ಕಂಧ ಉತ್ತರಾರ್ಧದಲ್ಲಿ ೫೦. ೫೫ನೇ ಅಧ್ಯಾಯಗಳಲ್ಲೂ ಜರಾಸಂಧನ ವಿಚಾರ ಬಂದಿದೆ. ತಾತ್ಪರ್ಯನಿರ್ಣಯದಲ್ಲಿ ೧೧, ೧೪ ಮತ್ತು ೨೧ನೇ ಅಧ್ಯಾಯಗಳಲ್ಲೂ ಜರಾಸಂಧನ ವೃತ್ತಾಂತಗಳು ಬಂದಿವೆ ಹರಿವಂಶದಲ್ಲಿ (ಭ. ೮೦-೮ ರಲ್ಲೂ, ನೀ. ಮತ್ತು ಉ.ಗಳಲ್ಲಿ ವಿಷ್ಣುಪರ್ವದ ೩೪.೪೩ ಅಧ್ಯಾಯಗಳಲ್ಲೂ, ಬಾಂ. ೧೬೨ ೭೧ ರಲ್ಲೂ) ಕೃಷ್ಣ-ಜರಾಸಂಧರಿಗೆ ನಡೆದ ಯುದ್ಧಗಳ ವರ್ಣನೆ ಇದೆಯಾಗಲಿ ಜರಾಸಂಧನ ಉತ್ಪತ್ತಿ ಮತ್ತು ವಧೆಗಳ ವೃತ್ತಾಂತ ಇಲ್ಲ. ಪ್ರಸ್ತುತ ಈ ಶ್ಲೋಕದ ಭಾವಾರ್ಥವನ್ನು ಚೆನ್ನಾಗಿ ಗ್ರಹಿಸಲು ಎಷ್ಟು ವಿಚಾರಗಳು ಆವಶ್ಯಕವೋ ಅಷ್ಟು ವಿಚಾರಗಳನ್ನು ಈ ಎಲ್ಲ ಆಧಾರಗಳಿಂದ ಸಂಗ್ರಹಿಸಿ ಕೆಳಗೆ ನಿರೂಪಿಸಲಾಗಿದೆ.

ಕ) **ಪೂರ್ವವೃತ್ತಾಂತ**— ಅಮೃತಮಥನಕಾಲದಲ್ಲಿ ದೇವ-ದಾನವರಿಗೆ ನಡೆದ ಘೋರ ಯುದ್ಧದಲ್ಲಿ (ಈ ವಿಚಾರ ಮುಂದೆ ೨೮ನೇ ಶ್ಲೋಕದಲ್ಲಿ ಬರುವುದು; ಅದರ ಕಥೆಯನ್ನು ಖಂಡ 309 ಅ-ಈ ಗಳಲ್ಲಿ ಕೊಡಲಾಗಿದೆ) ಅಮೃತಪಾನದಿಂದ ಅವಧ್ಯರಾದ ದೇವತೆಗಳು ಬಹಳ ಬಲಿಷ್ಠರಾದ ಅನೇಕ

ದೈತ್ಯರನ್ನು ಸಂಹಾರ ಮಾಡುತ್ತಿರಲು, ಬ್ರಹ್ಮನ ವರದಿಂದ ಅವಧ್ಯನಾದ ವಿಪ್ರಚಿತ್ತಿಯೆಂಬ ಮಹಾದೈತ್ಯನು ಯುದ್ಧದಲ್ಲಿ ಮುನ್ನುಗ್ಗಿ ದೇವತೆಗಳನ್ನು ಎದುರಿಸಿ ಸೋಲಿಸಿದನಲ್ಲದೆ ಒಂದು ಬಾಣದಿಂದ ದೇವೇಂದ್ರನನ್ನೇ ಮೂರ್ಛೆಗೊಳಿಸಿದನು. ಇದನ್ನು ಕಂಡು ಮುಖ್ಯಪ್ರಾಣನು (ಮೂಲರೂಪಿ ವಾಯು-ದೇವರು) ಆ ವಿಪ್ರಚಿತ್ತಿಯನ್ನು ಎದುರಿಸಿ ಆ ದೈತ್ಯ ಪ್ರಯೋಗಿಸಿದ ಅಸ್ತ್ರ-ಗಳನ್ನು ಪ್ರತ್ಯಸ್ತ್ರಗಳಿಂದ ನಿವಾರಣೆ ಮಾಡಿ ಅವನ ಮೇಲೆ ಕಾಂಚನ (ಬಂಗಾರ) ಮಯವಾದ ಗದೆಯನ್ನು ಪ್ರಯೋಗ ಮಾಡಿದನು. ಆದರಿಂದ ವಿಪ್ರಚಿತ್ತಿ ಹಿಟ್ಟುಹಿಟ್ಟಾಗಿಹೋದನಲ್ಲದೆ ವಾಯುದೇವರ ಬಲಾತಿಶಯದಿಂದ (ಗಾಳಿಯ ವೇಗದಿಂದ ಎಸೆದ ಕಾರಣ) ಆಕಾಶಮಾರ್ಗದಲ್ಲೇ ಹಾರಿಹೋಗಿ ಮೇರು-ಪರ್ವತದ ಮೇಲೆ ಬಿದ್ದು ಚೂರುಚೂರಾಗಿ ಹೋದನು. ಈ ಪ್ರಕಾರ ದೇವಾ-ಸುರರಿಗೆ ನಡೆದ ಈ ಯುದ್ಧದಲ್ಲಿ ಹತರಾದವರೇ ಮುಂದೆ ದ್ವಾಪರಯುಗದಲ್ಲಿ ಹರಿವಾಯುಗಳ ಮೇಲಿನ ದ್ವೇಷದ ಸಂಪೂರ್ಣ ಸಾಧನೆಗಾಗಿ ಕೀಚಕೋಪ-ಕೀಚಕರು, ಹಂಸ-ಡಿಭಿಕರು, ದುರ್ಯೋಧನ-ದುಶ್ಶಾಸನ, ಶಕುನಿ ಮೊದಲಾದ ಹೆಸರುಗಳಿಂದ ಪ್ರಖ್ಯಾತವಾದ ರಾಜವಂಶಗಳಲ್ಲಿ ರಾಜರುಗಳಾಗಿ ಹುಟ್ಟಿದರು. ಅದರಂತೆ ವಿಪ್ರಚಿತ್ತಿಯು ಜರಾಸಂಧನೆಂಬ ಹೆಸರಿನಿಂದ ಬೃಹದ್ರಥನ ಮಗನಾಗಿ ಹುಟ್ಟಿದನು—'ಸ ವಿಪ್ರಚಿತ್ತಿಶ್ಚ ಜರಾಸುತೋಽಭೂದ್ ವರಾ-ದ್ವಿಧಾತುರ್ಗಿರಿಶಸ್ಯ ಚೈವ। ಸರ್ವೈರಜೇಯಃ........' (ತಾ.ನಿ. ೧೧ ಅ, ೧೮೫-೨೦೫ ಶ್ಲೋ.). ಈ ವಿಪ್ರಚಿತ್ತಿ ಬಲ ಪರಾಕ್ರಮಾದಿ ಎಲ್ಲ ಗುಣಗಳಲ್ಲೂ ಮಿಕ್ಕ ಎಲ್ಲ ದೈತ್ಯರಿಗಿಂತ ಹೆಚ್ಚು ಬಲಿಷ್ಠನಾಗಿದ್ದಾನಲ್ಲದೆ ಮೂಲಕಲಿಯನ್ನು ಬಿಟ್ಟರೆ ಇವನಿಗೆ ಸಮಾನರಾದವರು ಬೇರೆ ಯಾರೂ ಇಲ್ಲ, ಇಂಥಾ ಪ್ರಬಲ-ನಾದ ಮಹಾದೈತ್ಯ ಇವನು.

ಖ) ಜರಾಸಂಧನ ಉತ್ಪತ್ತಿ— ಮಗಧದೇಶದ ರಾಜನಾದ ಬೃಹದ್ರಥ ಮಹಾಪರಾಕ್ರಮಿಯೂ ಅಪ್ರತಿಮ ವೀರನೂ ಆಗಿದ್ದ. ಅವನಿಗೆ ಇಬ್ಬರು ಹೆಂಡತಿಯರು, ಇಬ್ಬರೂ ಕಾಶೀರಾಜನ ಮಕ್ಕಳು. ಆದರೆ ಅವನ ದುರ್ದೈವದಿಂದ ಇಬ್ಬರಲ್ಲೂ ಸಂತಾನ ಆಗಲಿಲ್ಲ. ಇದರಿಂದ ಪ್ರಪಂಚದಲ್ಲೇ ಜುಗುಪ್ಸೆಗೊಂಡ ಅವನು ರಾಜ್ಯವನ್ನೇ ತ್ಯಜಿಸಿ ಪತ್ನಿಯರ ಸಮೇತ ತಪೋವನಕ್ಕೆ

ಬಂದುಬಿಟ್ಟ. ಒಂದು ದಿನ ಅಲ್ಲಿಗೆ ಕಕ್ಷೀವಾನ್ ಎಂಬ ಮಹರ್ಷಿಗಳ ಮಕ್ಕಳಾದ ಚಂಡಕೌಶಿಕರೆಂಬ ಮಹರ್ಷಿಗಳು ಬಂದರು. ಬೃಹದ್ರಥನೂ ಅವನ ಪತ್ನಿಯರೂ ಆ ಮಹರ್ಷಿಗಳನ್ನು ಆದರಿಸಿ ಚೆನ್ನಾಗಿ ಉಪಚರಿಸಿದರು. ಆದರಿಂದ ಅತ್ಯಂತ ಪ್ರಸನ್ನರಾದ ಅವರು ಅಲ್ಲೇ ಸಿಕ್ಕಿದ ಒಂದು ಮಾವಿನ-ಹಣ್ಣನ್ನು ಅಭಿಮಂತ್ರಿಸಿಕೊಟ್ಟು ಅದರಿಂದ ಸಂತಾನವಾಗುವುದೆಂದು ಹೇಳಿದರಲ್ಲದೆ ಹುಟ್ಟುವ ಆ ಮಗುವಿಗೆ ಬ್ರಹ್ಮಣ್ಯತ್ವ, ಅಜೇಯತ್ವ, ಯುದ್ಧೋತ್ಸಾಹ, ಮಹಾಬಲ, ಶಾಶ್ವತಕೀರ್ತಿಯೇ ಮೊದಲಾದ **ಎಂಟು ವರಗಳು** ಹುಟ್ಟುತ್ತಲೇ ಲಭಿಸುವಂತೆಯೂ ಅನುಗ್ರಹಿಸಿ ಹೊರಟುಬಿಟ್ಟರು. ಮಾವಿನಹಣ್ಣು ಒಂದಿದೆ, ಹೆಂಡರು ಇಬ್ಬರಿದ್ದಾರೆ, ಏನು ಮಾಡುವುದು? ಆ ಹಣ್ಣನ್ನೇ ಎರಡು ಸೀಳು ಮಾಡಿ ಇಬ್ಬರೂ ಭಕ್ಷಿಸಿದರು. ಇಬ್ಬರೂ ಗರ್ಭಧಾರಣ ಮಾಡಿ ಮಗುವನ್ನೂ ಹಡೆದರು. ಆದರೇನು? ಹಣ್ಣನ್ನು ಎರಡು ಸೀಳು ಮಾಡಿ ತಿಂದಿದ್ದಕ್ಕೆ ಅನುಗುಣವಾಗಿ ಇಬ್ಬರೂ ಮಗುವಿನ ಒಂದೊಂದು ಸೀಳನ್ನೇ ಹಡೆದರು—ಎರಡು ತುಂಡಿಗೂ ಒಂದು ಕೈ, ಒಂದು ಕಾಲು—ಹೀಗೆ ಎಲ್ಲ ಭಾಗಗಳೂ ಅರ್ಧರ್ಧ. ಇಬ್ಬರೂ ಮಗು ಹೆತ್ತರೂ ಸಾರ್ಥಕವಿಲ್ಲ; ಅತ್ತು ಗೋಳಾಡಿ ಆ ಎರಡು ತುಂಡುಗಳನ್ನೂ ದಾದಿಯರಿಗೆ ಹೇಳಿ ತಿಪ್ಪೆಗೆ ಹಾಕಿಸಿದರು.

ಅರ್ಧರಾತ್ರಿಯ ವೇಳೆಯಲ್ಲಿ ದೈವವಶಾತ್ ಜರಾ ಎಂಬ ಒಬ್ಬ ನರ-ಮಾಂಸಭಕ್ಷಕಿಯಾದ ರಾಕ್ಷಸಿಯು ಅದೇ ಮಾರ್ಗದಲ್ಲಿ ಬರುತ್ತಾ ಎರಡು ಸೀಳಾಗಿ ಕತ್ತರಿಸಿದ ಮಗುವನ್ನು ಕಂಡು ಕನಿಕರದಿಂದ ಕೈಗೆ ಎತ್ತಿಕೊಂಡಳಲ್ಲದೆ ದೈವಪ್ರೇರಣೆಯಿಂದ ಎರಡು ತುಂಡುಗಳನ್ನೂ ಕೂಡಿಸಿದಳು. ಆ ಕ್ಷಣ ಎರಡು ತುಂಡುಗಳೂ ಬಲವಾಗಿ ಅಂಟಿಕೊಂಡುಬಿಟ್ಟುವಲ್ಲದೆ ಮಗುವಿಗೆ ಜೀವವೂ ಬಂತು, ಅದು ಅಳಲಾರಂಭಿಸಿತು. ಅದರಿಂದ ವಿಸ್ಮಿತಳಾದ ಜರೆ ಮಗುವನ್ನು ಹಿಡಿದುಕೊಂಡೇ ಅರಮನೆಯ ಕಡೆಗೆ ನಡೆದಳು. ಅತ್ತ ರಾಣಿಯರಿಗೂ ರಾಜನಿಗೂ ಎಳೆಮಗು ಅತ್ತ ಧ್ವನಿ ಕೇಳಿಸಿತು. ಅವರೆಲ್ಲ ರೋದನಧ್ವನಿಯ ಕಡೆ ಧಾವಿಸಿ ಬರಲು ಜರೆ ಅವರನ್ನು ಕಂಡು ಎಲ್ಲಾ ವಿಚಾರ ತಿಳಿಸಿದಳು. ರಾಜನಿಗೂ ರಾಣಿಯರಿಗೂ ಆದ ಆನಂದಕ್ಕೆ ಪಾರವೇ ಇರಲಿಲ್ಲ. ಅವರೆಲ್ಲ ಆ ರಾಕ್ಷಸಿಗೆ ಧನ್ಯವಾದ ಹೇಳಿದ್ದಲ್ಲದೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ ಎಲ್ಲರೂ

ಜರಯಾ ಸಂಧಿತೋ ಯಸ್ಮಾತ್ ಜರಾಸಂಧೋ ಭವತ್ವಯಮ್

(ಸಭಾ ಪ. ೧೮ ಅ. ೧೨ ಶ್ಲೋ.) 'ಇವನನ್ನು ಜರೆಯು ಒಟ್ಟುಗೂಡಿಸಿ ಬದುಕಿಸಿದ್ದರಿಂದ ಇವನಿಗೆ ಜರಾಸಂಧ ಎಂಬ ಹೆಸರೇ ಇರಲಿ ಎಂದು ಹೇಳಿದರು. (ಜರಾ– ಜರಾ ಎಂಬ ರಾಕ್ಷಸಿಯಿಂದ, ಸಂ – ಧಾ-ಕೂಡಿಸಲ್ಪಟ್ಟವನು ಎಂದು ಅವಯವಾರ್ಥ. ಖಂ. 263 iii ನೋಡಿ.)

ಗ) ಜರಾಸಂಧನ ದಿಗ್ವಿಜಯ — ಜರಾಸಂಧ ಪ್ರಾಪ್ತವಯಸ್ಕನಾಗಲು ಬೃಹದ್ರಥ ಮಗನಿಗೆ ರಾಜ್ಯವನ್ನು ಒಪ್ಪಿಸಿ ತಾನು ಕಾಡಿಗೆ ಹೊರಟು ಹೋದನು. ಜರಾಸಂಧ ಚಂಡಕೌಶಿಕರ ಅಷ್ಟವರಗಳಿಂದ ಬಹಳ ಬಲಿಷ್ಠನಾಗಿದ್ದ. ಆದರ ಮೇಲೆ ಬ್ರಹ್ಮನನ್ನೂ ಶಿವನನ್ನೂ ಆರಾಧಿಸಿ ಅವರ ವರಗಳಿಂದಲೂ ಅಜೇಯನಾದನು (ವರಾದ್ವಿಧಾತುರ್ಗಿರಿಶಸ್ಯ ಚೈವ। ಸರ್ವೈರಜೇಯಃ। ತಾ.ನಿ. ೧೧/೭೦೪. ವಿಧಾತುಃ–ಬ್ರಹ್ಮನ, ಗಿರಿಶಸ್ಯ–ಈಶ್ವರನ). ಗಿರಿವ್ರಜವನ್ನೇ ರಾಜಧಾನಿಯಾಗಿ ಮಾಡಿಕೊಂಡು ಎಲ್ಲ ರಾಜರನ್ನೂ ಜಯಿಸಿ ತನ್ನ ವಶ ಮಾಡಿಕೊಂಡನು. ಅದಕ್ಕೂ ಹೆಚ್ಚಾಗಿ ಮಹಾಭಾರತದಲ್ಲಿ (ಸಭಾಪರ್ವ, ೧೫ ಅ. ೨೪ ಶ್ಲೋ) ಹೇಳಿದಂತೆ 'ಷಡಶೀತಿಃ ಸಮಾನೀತಾಃ ಶೇಷಾ ರಾಜಂಶ್ಚತುರ್ದಶ। ಜರಾಸಂಧೇನ ರಾಜಾನಃ........' (ಷಡಶೀತಿ– ಎಂಬತ್ತಾರು ಸಾವಿರ) ಎಂಬತ್ತಾರು ಸಾವಿರ ರಾಜರನ್ನು ಸೆರೆಹಿಡಿದು, ವಿಷ್ಣುಭಕ್ತರಾದ ಅವರೆಲ್ಲರನ್ನೂ ತನ್ನ ಆರಾಧ್ಯದೇವತೆಯಾದ ರುದ್ರದೇವರ ಪ್ರೀತ್ಯರ್ಥವಾಗಿ ನರಮೇಧ ಮಾಡಿ ಪಶುಗಳನ್ನಾಗಿ ಸಮರ್ಪಿಸಬೇಕೆಂದು ಹವಣಿಸಿಕೊಂಡಿದ್ದನು—'ಪಾರ್ಥಿವೈಸ್ತೈರ್ನೃಪತಿಭಿ—ರ್ಯಕ್ಷ್ಯಮಾಣಃ ಸಮೃದ್ಧಿಮಾನ್। ದೇವಶ್ರೇಷ್ಠಂ ಮಹಾದೇವಂ ಕೃತ್ತಿವಾಸಂ ತ್ರಿಯಂಬಕಮ್॥' (ಅಲ್ಲೇ, ೨೨/೨೬). ಇತ್ತ ಈ ರಾಜರೆಲ್ಲರೂ ಪ್ರತಿನಿಧಿಗಳ ಮೂಲಕ ಶ್ರೀಕೃಷ್ಣನಲ್ಲಿ ತಮ್ಮನ್ನು ಪಾರುಮಾಡಬೇಕೆಂದು ಪ್ರಾರ್ಥಿಸಿಕೊಂಡರು. ರಾಜಸೂಯಯಾಗವು ಅವರ ಬಿನ್ನಪವನ್ನು ಪಕ್ವಗೊಳಿಸಿತು.

ಘ) ರಾಜಸೂಯಯಾಗಕ್ಕೆ ಪ್ರಸಕ್ತಿ— ಧರ್ಮರಾಜ ರಾಜಸಭೆ ನಡೆಸುತ್ತಿದ್ದಾಗ ಸ್ವರ್ಗದಿಂದ ಆಗತಾನೇ ಬಂದ ನಾರದರು ಧರ್ಮರಾಜನಿಗೆ ಅವನ ತಂದೆ ಪಾಂಡುರಾಜನ ಸಂದೇಶವನ್ನು ತಿಳಿಸಿದರು. ತನ್ನ ಐವರು

ಮಕ್ಕಳೂ ಮಹಾ ಪರಾಕ್ರಮಶಾಲಿಗಳು, ಅವರೆಲ್ಲ ಸೇರಿ ತನ್ನ ಹೆಸರಿನಲ್ಲಿ ರಾಜಸೂಯಯಾಗ ಮಾಡಿದರೆ ಸ್ವರ್ಗದಲ್ಲಿ ತನಗೆ ಹೆಚ್ಚಿನ ಸ್ಥಾನವೂ ಗೌರವವೂ ದೊರಕುವುದೆಂದು ಹೇಳಿಕಳುಹಿಸಿದ್ದನು. ಆದರಿಂದ ಧರ್ಮರಾಜನಿಗೆ ಆ ಯಾಗ ಮಾಡಬೇಕೆಂದು ಅನ್ನಿಸಿದರೂ ಅಷ್ಟು ರಾಜರನ್ನೂ—ತತ್ರಾಪಿ ಜರಾಸಂಧನನ್ನು ಗೆಲ್ಲುವುದು ಹೇಗೆ ಎಂದು ಹೆದರಿಕೊಂಡು ಸುಮ್ಮನಾದನು. ಕೃಷ್ಣನೂ ಭೀಮನೂ ಅವನಿಗೆ ಉತ್ಸಾಹ ತುಂಬಿ ತಾವಿಬ್ಬರೂ ಅರ್ಜುನನ ಜೊತೆ ಹೋಗಿ ಜರಾಸಂಧನನ್ನು ಗೆದ್ದು ಬರುವೆವು ಎಂದು ಹೇಳಿ ಹೊರಟರು. ಶ್ರೀಕೃಷ್ಣ ಸಾಕ್ಷಾನ್ನಾರಾಯಣ ಎಂಬ ಅರಿವಿಲ್ಲದೆ ಅಜ್ಞಾನದಿಂದ 'ಅಯ್ಯೋ ಕೃಷ್ಣ, ಭೀಮ ಅರ್ಜುನ ಇಬ್ಬರೂ ನನ್ನ ಎರಡು ಕಣ್ಣುಗಳಿದ್ದಹಾಗೆ. ನೀನು ಸೋತು ಬಂದರೆ ನನ್ನ ಗತಿಯೇನು?' ಎಂದು ಆಕ್ಷೇಪಿಸಿದನು. ಆದರೂ ಶ್ರೀಕೃಷ್ಣ ಏನೋ ಸಮಾಧಾನ ಮಾಡಿ ಭೀಮಾರ್ಜುನರೊಡನೆ ಗಿರಿವ್ರಜಕ್ಕೆ ಹೊರಟುಬಿಟ್ಟ.

(ಜ) **ಜರಾಸಂಧನ ವಧೆ**— ಮೂವರೂ ಬ್ರಾಹ್ಮಣವೇಷ ಧರಿಸಿ ಅರ್ಧ ರಾತ್ರಿಯ ವೇಳೆಯಲ್ಲಿ ಗಿರಿವ್ರಜಕ್ಕೆ ಹಿಂಬಾಗಿಲಿಂದ ಹೋಗಿ ಜರಾಸಂಧನನ್ನು ಕರೆಯಿಸಿ ತಮ್ಮ ಪರಿಚಯ ಮಾಡಿಕೊಟ್ಟು ಯುದ್ಧಕ್ಕೆ ಆಹ್ವಾನಿಸಿದರು. ಆಕ್ಷಣ ಜರಾಸಂಧ ತನ್ನ ಮಗನಿಗೆ ರಾಜ್ಯದಲ್ಲಿ ಪಟ್ಟಗಟ್ಟಿ ಬಂದು ಯುದ್ಧಕ್ಕೆ ಸಿದ್ಧನಾಗಿ—

ಸೈನ್ಯಂ ಸೈನ್ಯೇನ ವ್ಯೂಢೇನ ಏಕ ಏಕೇನ ವಾ ಪುನಃ ।
ದ್ವಾಭ್ಯಾಂ ತ್ರಿಭಿರ್ವಾ ಯೋತ್ಸ್ಯೇಽಹಂ ಯುಗಪತ್ ಪೃಥಗೇವ ವಾ ॥
—(ಸಭಾ. ೨೨ ಅ. ೪೦ ಶ್ಲೋ.)

(ವ್ಯೂಢೇನ–ಯುದ್ಧಕ್ಕೆ ಸಜ್ಜಿತವಾದ, ಯೋತ್ಸ್ಯೇ[ಭವಿಷ್ಯತ್ಕಾಲ]–ಯುದ್ಧ ಮಾಡುವೆನು. ಯುಗಪತ್–ಒಟ್ಟಿಗೆಯಾಗಿ, ಪೃಥಕ್–ಬೇರೆಯಾಗಿ) 'ನೀವು ಸೈನ್ಯಸಮೇತರಾಗಿ ಬಂದರೆ ನಾನೂ ಹಾಗೆಯೇ ಸೈನ್ಯ ತಂದು ಯುದ್ಧ ಮಾಡುವೆನು. ಬೇಡ ಎಂದರೆ ಒಬ್ಬನೊಡನೆಯಾಗಲಿ, ಇಬ್ಬರ ಜೊತೆಯಾಗಲಿ, ಮೂವರ ಜೊತೆಯೇ ಆಗಲಿ ಹೇಗೆಂದರೆ ಹಾಗೆ ಒಟ್ಟಿಗೆಯಾಗಲಿ ಬಿಡಿಬಿಡಿಯಾಗಲಿ ಯುದ್ಧ ಮಾಡಲು ಸಿದ್ಧನಾಗಿದ್ದೇನೆ' ಎಂದು ಹೇಳಿದನು.

ಅದಕ್ಕೆ ಕೃಷ್ಣ 'ನಮ್ಮ ಮೂವರಲ್ಲಿ ಯಾರೊಬ್ಬರೊಡನೆ ಬೇಕಾದರೂ ಯುದ್ಧ ಮಾಡಬಹುದು' ಎಂದನು. ಆದಕ್ಕೆ ಜರಾಸಂಧ 'ನೀನು ಗೊಲ್ಲ, ಆದ್ದರಿಂದ ನೀನು ಬೇಡ; ಈ ಅರ್ಜುನ ಕೂಸಿದ್ದಹಾಗೆ ನಿರ್ಬಲ. ಇವನೂ ಬೇಡ' ಎಂದನು. ಅವನ ತಿರಸ್ಕಾರದಿಂದ ಅರ್ಜುನನಿಗೆ ಬಹಳ ಸಿಟ್ಟು ಬಂತು; ಆದರೆ ಏನು ಮಾಡುತ್ತಾನೆ? (ವಸ್ತುತಃ ಅರ್ಜುನನಿಗೆ ಗರ್ವಭಂಗ ಮಾಡುವುದಕ್ಕಾಗಿಯೇ ಕೃಷ್ಣ ಅವನನ್ನು ಇಲ್ಲಿಗೆ ಕರೆದುಕೊಂಡುಬಂದಿದ್ದ.) 'ಭೀಮನೇ ನನ್ನೊಡನೆ ಯುದ್ಧ ಮಾಡಲು ಸಮರ್ಥ. ಇವನೊಡನೆಯೇ ಯುದ್ಧ ಮಾಡುವೆನೆ'ಂದನು. ಕೂಡಲೇ ಭೀಮ ಸಿದ್ಧನಾಗಿ ನಿಂತ.

ಮೊದಲು ಅವರಿಬ್ಬರಿಗೂ ವಾಗ್ಯುದ್ಧ ನಡೆಯಿತು. ಜರಾಸಂಧ ಶಿವ-ಸರ್ವೋತ್ತಮತ್ವ ಸ್ಥಾಪಿಸಲು ಹೆಣಗಾಡಿದ. ಭೀಮ ಅವನ ಕೋಟಿಗಳನ್ನೆಲ್ಲಾ (ಕೊಟ್ಟ ಕಾರಣಗಳನ್ನೆಲ್ಲಾ ಎಂದರ್ಥ) ಖಂಡಿಸಿ ವಿಷ್ಣುಸರ್ವೋತ್ತಮತ್ವ ಸ್ಥಾಪಿಸಿದನು—'ವಾಚಾऽಜಯತ್ ತಂ ಪ್ರಥಮಂ ವೃಕೋದರಃ ಶಿವಾಶ್ರಯಂ ವಿಷ್ಣುಗುಣಪ್ರಕಾಶಯಾ।' (ತಾ. ನಿ. ೨೧/೧೫೫. ವಾಚಾ-ಮಾತಿನಿಂದ). ಆಮೇಲೆ ಇಬ್ಬರೂ ಗದಾಯುದ್ಧ ಆರಂಭಿಸಿದರೆಂದು ನಿರ್ಣಯದಲ್ಲಿ ಹೇಳಿದೆ. ಭಾರತದಲ್ಲಿ ಇಬ್ಬರೂ ಬಾಹುಯುದ್ಧ ಆರಂಭಿಸಿದರೆಂದಿದೆ. ಇಬ್ಬರೂ ಯುದ್ಧ ವಿಶಾರದರಾದಕಾರಣ ಸ್ವಲ್ಪ ಹೊತ್ತು ಆಸ್ಫೋಟ ಮಾಡುತ್ತಾ (ಶೆಡ್ಡು ಹೊಡೆಯುತ್ತಾ) ಒಬ್ಬರನ್ನೊಬ್ಬರು ಎಳೆದಾಡುತ್ತಾ ಅಂಗಾಂಗಗಳನ್ನು ತಿರುವುತ್ತಾ ಬಿಡಿಸಿಕೊಳ್ಳುತ್ತಾ ಹೊಡೆದಾಡಿದರು. ಆಮೇಲೆ ಮುಷ್ಟಿಯುದ್ಧ ಆರಂಭಿಸಿ ಭಾರಿ ಬಂಡೆಗಳು ತಗುಲಿದಂತೆ ಫಟ್-ಫಟ್ ಧಡ್-ಧಡ್ ಎಂದು ಸದ್ದು ಮಾಡುತ್ತಾ ಮುಷ್ಟಿಯುದ್ಧ ಮಾಡಿದರು. ಕೊನೆಗೆ ಇಬ್ಬರೂ ಗದೆ ಹಿಡಿದು ಯುದ್ಧ ಮಾಡಿದರು. ಇಷ್ಟುಹೊತ್ತಿಗೆ ಭೀಮನ ಹೊಡೆತಗಳಿಂದ ಜರಾಸಂಧನ ಅಂಗಾಂಗಗಳೆಲ್ಲಾ ಜಜ್ಜಿ ಶಿಥಿಲವಾಗಿಹೋಗಿದ್ದುವು. (ಇದರ ವಿವರಣೆಯೇ ವಾಯುಸ್ತುತಿಯ ಈ ಶ್ಲೋಕದ ಹೇಳಿಕೆ—ನಿರ್ಮೃದ್ನನ್ನತ್ಯ-ಯತ್ನಂ........ಜರಾಸಂಧಕಾಯಾಸ್ಥಿಸಂಧೀನ್.) ಆದನ್ನು ಕಂಡು ಕೃಷ್ಣ ಭೀಮನಿಗೆ—

ಕ್ಲಾಂತಃ ಶತ್ರುರ್ಹಿ ಕೌಂತೇಯ ಶಕ್ಯಃ ಪೀಡಯಿತುಂ ರಣೇ

—(ಸಭಾ. ೨೪/೩೭) (ಕ್ಲಾಂತಃ-ಹಣ್ಣುಹಣ್ಣಾಗಿ ಹೋಗಿದ್ದಾನೆ, ನಿಶ್ಶಕ್ತ)

'ಭೀಮ, ಶತ್ರುವು ಹಣ್ಣುಹಣ್ಣಾಗಿಹೋಗಿದ್ದಾನೆ. ಈ ಸಮಯದಲ್ಲೇ ಅವನನ್ನು ಸಂಹರಿಸುವುದು ಉತ್ತಮ' ಎಂದು ಬಾಯಲ್ಲಿ ಹೇಳಿ ಒಂದು ಹುಲ್ಲುಕಡ್ಡಿಯನ್ನು ಎತ್ತಿಕೊಂಡು ಅದನ್ನು ಎರಡು ಸೀಳು ಮಾಡಿ ಎಸೆದನು. ಇದು ಜರಾಸಂಧನನ್ನು ಹಾಗೆಯೇ ಕೊಲ್ಲಲು ಸಾಧ್ಯವಿಲ್ಲ, ದೇಹವನ್ನು ಸೀಳಿದರೆ ಮಾತ್ರ ಸಾಯುತ್ತಾನೆ ಎಂಬುದಕ್ಕೆ ಸಂಕೇತವಾಗಿತ್ತು. ಸೂಕ್ಷ್ಮಗ್ರಾಹಿಯಾದ ಭೀಮ ಕೃಷ್ಣನ ಸಂಕೇತ ಅರಿತುಕೊಂಡು, ಆ ರೀತಿ ಸೀಳುವುದಕ್ಕೆ ಇನ್ನೂ ಹೆಚ್ಚು ಬಲ ಬೇಕಾಗಿದ್ದದ್ದರಿಂದ ಮನಸ್ಸಿನಲ್ಲೇ ತನ್ನ ಮೂಲ ರೂಪವನ್ನು ಧ್ಯಾನಿಸಿ ಜರಾಸಂಧನ ವಧೆಗೆ ಶ್ರೀಕೃಷ್ಣನ ಅಪ್ಪಣೆಯನ್ನು ಮಾನಸಿಕವಾಗಿಯೇ ಪಡೆದುಕೊಂಡನು—

ಏವಮುಕ್ತಸ್ತತೋ ಭೀಮೋ ಮನಸಾಽಽಚಿಂತ್ಯ ಮಾರುತಮ್ ।
ಜನಾರ್ದನಂ ನಮಸ್ಕೃತ್ಯ.... (ಸಭಾ. ೨೪/೯)

ಮೂಲರೂಪದ ಬಲ ದೊರಕಿದ ಕಾರಣ ಭೀಮ ಜರಾಸಂಧನ ದೇಹವನ್ನು ಒಂದೇ ಏಟಿಗೆ ಮೇಲೆತ್ತಿ ಆಟದ ಗಿರಗಿಟ್ಟಿಯಂತೆ ಗರಗರ ತಿರುಗಿಸಿದನು—

ಪ್ರಭಂಜನಬಲಾವಿಷ್ಟೋ ಜರಾಸಂಧಮರಿಂದಮಃ ।
ಉತ್ಕ್ಷಿಪ್ಯ ಭ್ರಾಮಯಾಮಾಸ........ (೨೪/೯)

(ಪ್ರಭಂಜನ – ಮೂಲವಾಯುದೇವರ, ಅರಿಂದಮಃ – ಶತ್ರುಸಂಹಾರಕನಾದ ಭೀಮ, ಉತ್ಕ್ಷಿಪ್ಯ–ಮೇಲಕ್ಕೆ ಎತ್ತಿ, ಭ್ರಾಮಯಾಮಾಸ–ಗರಗರ ತಿರುಗಿಸಿದನು.) ಆಮೇಲೆ ಅವನನ್ನು ನೆಲದ ಮೇಲೆ ಹಾಕಿ ಅವನ ಒಂದು ಕಾಲಿನ ಮೇಲೆ ತನ್ನ ಒಂದು ಕಾಲು ಊರಿ, ಇನ್ನೊಂದು ಕಾಲನ್ನು ಅವನ ಕುತ್ತಿಗೆಯ ಹತ್ತಿರ ಒತ್ತಿಕೊಂಡು ತನ್ನ ಎರಡೂ ಕೈಗಳಿಂದ ಜರಾಸಂಧನ ಮತ್ತೊಂದು ಕಾಲನ್ನು ಹಿಡಿದುಕೊಂಡು ಮೇಲಕ್ಕೆ ಜಗ್ಗಿದನು—

ಕರೇ ಗೃಹೀತ್ವಾ ಚರಣಂ ದ್ವಿಧಾ ಚಕ್ರೇ ಮಹಾಬಲಃ (ಶ್ಲೋ. ೧೧)

(ಗೃಹೀತ್ವಾ- ಹಿಡಿದುಕೊಂಡು, ಚರಣಂ–ಕಾಲನ್ನು, ದ್ವಿಧಾ–ಎರಡು ಸೀಳಾಗಿ, ಚಕ್ರೇ- ಮಾಡಿದನು, ಸೀಳಿದನು.)

ಮೇಲಕ್ಕೆ ಜಗ್ಗಿದ ಕೂಡಲೇ ಜರಾಸಂಧನ ದೇಹ ಎರಡು ಹೋಳಾಗಿ ಸೀಳಿಹೋಯಿತು. ಅವನು ಸತ್ತು ಹೆಣವಾಗಿ ಹೋದನು—'ಶವಭೂತಸ್ತದಾ

ರಾಜನ್....' (ಶ್ಲೋ. ೨೧). ಅನಂತರ ಶ್ರೀಕೃಷ್ಣ ಸೆರೆಯಲ್ಲಿದ್ದ ರಾಜರನ್ನೆಲ್ಲಾ ಬಿಡುಗಡೆ ಮಾಡಿ ಭೀಮಾರ್ಜುನರೊಡನೆ ಧರ್ಮರಾಜನ ಬಳಿಗೆ ಹೋಗಿ ಎಲ್ಲಾ ವಿಚಾರ ತಿಳಿಸಿದನು. ಇಲ್ಲಿಗೆ ಜರಾಸಂಧನ ವೃತ್ತಾಂತ ಮುಗಿಯಿತು.

ಚ) **ರಾಜಸೂಯಯಾಗದ ಕಥೆ**— ಜರಾಸಂಧನನ್ನೇ ಸಂಹರಿಸಿದ ಬಳಿಕ ಪಾಂಡವರಿಗೆ ಮಿಕ್ಕ ರಾಜರನ್ನು ಗೆದ್ದು ಕಪ್ಪ ತರುವುದು ಹೆಚ್ಚೇನೂ ಕಷ್ಟವಾಗಲಿಲ್ಲ ವೇದವ್ಯಾಸರ ಹೇಳಿಕೆಯ ಪ್ರಕಾರ ಧರ್ಮರಾಜನ ನಾಲ್ಕು ತಮ್ಮಂದಿರು ನಾಲ್ಕು ದಿಕ್ಕಿಗೆ ಹೋಗಿ ರಾಜರನ್ನೆಲ್ಲ ಸೋಲಿಸಿ ಕಪ್ಪ-ಕಾಣಿಕೆ ತಂದರು. ಕೊನೆಗೆ ವೇದವ್ಯಾಸರು ಪರಶುರಾಮ ಶ್ರೀಕೃಷ್ಣ ಈ ಮೂರು ಭಗವದ್ರೂಪಗಳ ನೇತೃತ್ವದಲ್ಲಿ ರಾಜಸೂಯಯಾಗ ನಡೆದು ಪರಿಸಮಾಪ್ತವಾಯಿತು.

ಛ) **ಅಶ್ವಮೇಧಯಾಗ**— ಮಹಾಭಾರತದಲ್ಲಿ ಹದಿನೈದನೇ ಇಡೀ ಪರ್ವವೇ ಈ ಯಾಗದ ವೃತ್ತಾಂತ. ಧರ್ಮರಾಜನಿಗೆ ಶುದ್ಧ ವೈಷ್ಣವ ಧರ್ಮದಲ್ಲಿ ನಿಶ್ಚಲವಾದ ವಿಶ್ವಾಸವಿರಲಿಲ್ಲ. ಭೀಷ್ಮಾಚಾರ್ಯರೂ ವೇದವ್ಯಾಸರೂ ಕೃಷ್ಣನೂ ಎಷ್ಟು ಹೇಳಿದರೂ ಅವನಿಗೆ ತಾನು ಬಂಧುವಧೆ ಮಾಡಿದ ಮಹಾಪಾಪಿ ಎಂಬ ಸಂಶಯ ಹೋಗಲೇ ಇಲ್ಲ. ಒಂದು ಸಾರಿ ಆ ದುಃಖವನ್ನು ತಾಳಲಾರದೆ ವನವಾಸಕ್ಕೆ ಹೋಗಬೇಕೆಂದು ನಿಶ್ಚಯಿಸಿದನು. ಇದನ್ನು ಕೇಳಿ ವ್ಯಾಸರಿಗೆ ತುಂಬಾ ಸಿಟ್ಟು ಬಂತು. ಅವರು ಅವನನ್ನು ನಿಂದಿಸುತ್ತಾ—

ಸುಕೃತಾ ತೇ ಮತಿಸ್ತಾತ ಪುನರ್ಬಾಲ್ಯೇನ ಮುಹ್ಯಸೇ ।
ಕಿಮಾಕಾಶೇ ವಯಂ ಸರ್ವೇ ಪ್ರಲಪಾಮೋ ಮುಹುರ್ಮುಹುಃ ॥

—(ಆಶ್ವಮೇಧಿಕ ೨ ಅ. ೧೨ ಶ್ಲೋ.)

(ಸುಕೃತಾ-ಸರಿಹೋಯಿತು ಬಿಡು ಎಂದು ವ್ಯಂಗ್ಯೋಕ್ತಿ. ಮುಹ್ಯಸೇ-ಭ್ರಾಂತಿಗೊಳ್ಳುತ್ತೀ, ಪ್ರಲಪಾಮಃ-ಕಂಠಶೋಷಣೆ ಮಾಡಿಕೊಳ್ಳುತ್ತೇವೆ. ಮುಹುರ್ಮುಹುಃ-ಪುನಃಪುನಃ, ಮತ್ತೆಮತ್ತೆ)

'ನಿನ್ನ ಬುದ್ಧಿಗೆ ಏನು ಹೇಳೋಣ. ಪುನಃ ಅದೇ ಹುಡುಗಬುದ್ಧಿಯಾಯಿತಲ್ಲ! ನಾವೆಲ್ಲ ಮತ್ತೆಮತ್ತೆ ಉಪದೇಶ ಹೇಳಿದ್ದೆಲ್ಲಾ ಅಕಾಶಕ್ಕೆ ಹೇಳಿದಂತೆ ವ್ಯರ್ಥವಾಯಿತಲ್ಲ' ಎಂದು ಬೇಸರಿಸಿಕೊಂಡರು. ಪುನಃ ಬುದ್ಧಿ ಹೇಳಿ

ಯಜಸ್ವ ವಾಜಿಮೇಧೇನ ವಿಧಿವದ್ ದಕ್ಷಿಣಾವತ್ ।
ಬಹುಕಾಮಾನ್ನವಿತ್ತೇನ ರಾಮೋ ದಾಶರಥಿರ್ಯಥಾ ॥

(ಅಲ್ಲಿ, ೩ ಅ, ೯ ಶ್ಲೋ.)

'ದಶರಥನ ಮಗ ಶ್ರೀರಾಮಚಂದ್ರನು ರಾವಣಾದಿಗಳ ವಧೆ ಮಾಡಿದ ದೋಷ ಪರಿಹಾರಕ್ಕೆ ಅಶ್ವಮೇಧಯಾಗ ಮಾಡಿದನು. ಅದರಂತೆ ನೀನೂ ಅಶ್ವಮೇಧಯಾಗ ಮಾಡು. ಬೇಕಾದಷ್ಟು ಅನ್ನದಾನ ಮಾಡು. ಯಥೇಷ್ಟ ದಕ್ಷಿಣೆ ಕೊಡು' ಎಂದು ಸಲಹೆ ಕೊಟ್ಟರು. ಅದಕ್ಕೆ ಪುನಃ ಧರ್ಮರಾಯ 'ನನ್ನ ಹತ್ತಿರ ದುಡ್ಡೇ ಇಲ್ಲ' ಎಂದು ಗೋಳುಕರೆ ಆರಂಭಿಸಿದ. ಅದಕ್ಕೆ ವ್ಯಾಸರು ಒಂದು ಯುಕ್ತಿ ಹೇಳಿಕೊಟ್ಟರು. 'ನಿಮ್ಮ ಪೂರ್ವಿಕರಲ್ಲಿ ಒಬ್ಬನಾದ ಮರುತ್ತರಾಜು ಯಜ್ಞ ಮಾಡಿ ಉಳಿದ ಹಣವನ್ನೆಲ್ಲ ಹಿಮವತ್ಪರ್ವತದಲ್ಲಿ ಬಿಟ್ಟು ಹೋಗಿದ್ದಾನೆ. ಅದನ್ನು ತಂದು ಮಾಡು' ಎಂದರು. ಅದರಂತೆ ಧರ್ಮರಾಯ ಆ ಹಣ ತಂದು ಅಶ್ವಮೇಧಯಾಗ ಮಾಡಿದನು. ಉಪಲಭ್ಯವಾದ ಮಹಾಭಾರತದಲ್ಲಿ ಈ ಯಾಗದ ಹೆಚ್ಚು ವಿಸ್ತಾರ ಬಂದಿಲ್ಲ. ತಾತ್ಪರ್ಯನಿರ್ಣಯದಲ್ಲಿ ೩೦ನೇ ಅಧ್ಯಾಯದಲ್ಲಿ ೯೫ರಿಂದ ೧೫೮ರವರೆಗಿನ ಸುಮಾರು ೬೫ ಶ್ಲೋಕಗಳಲ್ಲಿ ಈ ಯಾಗದ ಮಹಿಮೆಯನ್ನು ವಿಸ್ತರಿಸಿದ್ದಾರೆ. ಈ ಶ್ಲೋಕದ ಭಾವಾರ್ಥವನ್ನು ತಿಳಿದುಕೊಳ್ಳಲು ಇದಕ್ಕೂ ಹೆಚ್ಚಿನ ವಿವರಣೆ ಬೇಕಾಗಿಲ್ಲ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೇ ಮುಗಿಸುವೆನು.

ಈಗ ಕೃಷ್ಣ ಭೀಮ ಇಬ್ಬರ ಪರವಾಗಿ ಭಾವಾರ್ಥಕ್ಕೆ ಹೋಗುವೆನು.

267. ಕೃಷ್ಣಪರವಾಗಿ ಭಾವಾರ್ಥ— ಹೇ ದೇವದೇವೋತ್ತಮನಾದ (ವಿಜರವರ) ಕೃಷ್ಣನೇ! ನೀನು ಕ್ಷರಾಕ್ಷರರೆಂದು ಪ್ರಸಿದ್ಧರಾದ ಸಕಲ ಚೇತನರಿಗಿಂತಲೂ ಸರ್ವೋತ್ತಮನಾಗಿ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವಿ (ಗೀತೆ ೧೫/೧೬-೧೮). ಲಕ್ಷ್ಮಿಯೂ ಸಹ ನಿನ್ನ ಕೃಪಾಕಟಾಕ್ಷಲವಮಾತ್ರದ ಬಲವನ್ನು ಆಶ್ರಯಿಸಿ ಭಾಗ್ಯದೇವತೆಯಾಗಿದ್ದಾಳೆ. ಬ್ರಹ್ಮ-

ರುದ್ರೇಂದ್ರಾದಿ ಸಕಲ ದೇವತೆಗಳಿಗೂ ಮೋಕ್ಷಾದ್ಯಖಿಲ ಪುರುಷಾರ್ಥಗಳನ್ನು ಕೊಡುವ ಪ್ರಭುವೇ ನೀನು. ಅಲ್ಲದೆ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಅವರಿಂದ ಶತ್ರುಸಂಹಾರಾದಿ ಕಾರ್ಯ ಮಾಡಿಸಿ ಅವರಿಗೇ ಯಶಸ್ಸು ತಂದು-ಕೊಡುವವನೂ ಆಗಿದ್ದೀಯೆ. (ಇದೆಲ್ಲ ಗು.ಸಾ. ಟೀಕೋಕ್ತ ವಿವರಣೆಗಳು.) ಸಕಲ ಯಜ್ಞಯಾಗಾದಿ ಸತ್ಕರ್ಮಗಳ ಫಲಭೋಕ್ತನೂ ನೀನೇ ಆಗಿದ್ದೀಯೆ. (ನಿಖಿಲಮುಖಭುಜಂ). ಆದರೆ ಈ ತತ್ವದ ರಹಸ್ಯ ಅರಿತುಕೊಂಡು ಸಕಲ ಕರ್ಮಗಳನ್ನೂ ನಿನ್ನಲ್ಲೇ ಸಮರ್ಪಣೆ ಮಾಡಿ ಕೃತಾರ್ಥರಾಗುವ ಏಕಾಂತ-ಭಕ್ತರು ವಿರಳ—ಅತಿ ವಿರಳ. ಆಡಂಬರ ಮಾಡಿ ದೊಡ್ಡ ಯಾಗ ಮಾಡುವುದಕ್ಕಿಂತ ಮಾಡಿದ ಸಣ್ಣ ಕರ್ಮವನ್ನೇ ನಿನ್ನಲ್ಲಿ ಸಮರ್ಪಿಸಿದರೇ ನಿನಗೆ ಹೆಚ್ಚು ತೃಪ್ತಿ. ಇದನ್ನೇ ನೀನು ಗೀತೆಯಲ್ಲಿ 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್' (೨.೪೦) ಎಂದು ಹೇಳಿದ್ದೀಯೆ. ಇದಕ್ಕೆ ಪ್ರತಿಯಾಗಿ ಬೃಹದಾರಣ್ಯಕೋಪನಿಷತ್ತು ಹೇಳುವಂತೆ (೩/೪/೧೫) 'ಯದಿ ಹ ವಾ ಅಸ್ಯನೇವಂವಿನ್ಮಹತ್ಪುಣ್ಯಂ ಕರ್ಮ ಕರೋತಿ ತದ್ಧಾಸ್ಯಾಂ-ತತಃ ಕ್ಷೀಯತ ಏವ' = ಈ ಸೂಕ್ಷ್ಮಧರ್ಮದ ರಹಸ್ಯವನ್ನು ಅರಿಯದವನು ಯಜ್ಞ-ಯಾಗಾದಿ ದೊಡ್ಡ ಪುಣ್ಯಕಾರ್ಯವನ್ನು ಮಾಡಿದರೂ ಕೂಡ ಅದು ಕೊನೆಗೆ ಕ್ಷಯಿಸಿಹೋಗಿ ಅತ್ಯಲ್ಪ ಫಲವನ್ನೇ ಕೊಡುತ್ತದೆ. ಈ ಪ್ರಮೇಯಕ್ಕೆ ಧರ್ಮರಾಜ-ಭೀಮಸೇನರುಗಳೇ ಉತ್ತಮ ನಿದರ್ಶನಗಳಾಗಿದ್ದಾರೆ.

ಪಾಂಡವರಲ್ಲೆಲ್ಲಾ ಜ್ಯೇಷ್ಠನಾದ ಧರ್ಮರಾಜ ನಿನ್ನ ಭಕ್ತನೇನೋ ಹೌದು. ಆದರೆ ಅವನಿಗೆ ಶುದ್ಧ ಸಾತ್ವಿಕ ವಿಷ್ಣುಧರ್ಮದಲ್ಲಿ ದೃಢವಾದ ನಿಷ್ಠೆಯೇ ಇಲ್ಲ. ಸರ್ವಜಗನ್ನಿಯಾಮಕನೂ ಸಕಲಕರ್ತನೂ ಸರ್ವ ಸಮರ್ಥನೂ ಆದ ನಿನ್ನನ್ನು ಅವನು ಸರಿಯಾಗಿ ಅರಿತುಕೊಂಡೇ ಇರಲಿಲ್ಲ. ನಿನ್ನನ್ನು ಏನೋ ಸಮರ್ಥನೆಂದು ತಿಳಿದಿದ್ದನೇ ವಿನಾ ಸಾಕ್ಷಾನ್ನಾರಾಯಣಾ-ವತಾರವೆಂದು ದೃಢವಾಗಿ ಅರಿತುಕೊಂಡಿರಲಿಲ್ಲ. ಆದ್ದರಿಂದಲೇ ಅವನಿಗೆ 'ಯಾರಿಗೆ ಅಗ್ರಪೂಜೆ ಮಾಡಬೇಕು?' ಎಂಬ ಸಂಶಯ ಬಂತು. ನೀನು ಭೀಮಾರ್ಜುನರೊಡನೆ ಜರಾಸಂಧನ ವಿಜಯಕ್ಕಾಗಿ ಹೊರಟಾಗ 'ಭೀಮ-ಅರ್ಜುನರು ನನ್ನ ಕಣ್ಣುಗಳಿದ್ದ ಹಾಗೆ. ಅವರನ್ನು ಕಳೆದುಕೊಂಡು

ನಾನೇನು ಮಾಡಲಿ?' ಎಂದು ನಿನ್ನ ಸಾಮರ್ಥ್ಯದ ಬಗ್ಗೆ ಅವಿಶ್ವಾಸ ತೋರಿಸಿದನು. ನೀನು ರಾಜಸೂಯಯಾಗ ಮಾಡೆಂದರೂ ಹಿಂದು ಮುಂದು ಯೋಚಿಸಿದ. ರಾಜಸೂಯ ಮಾಡಿದ್ದೂ ಸಹ ನಿನ್ನ ಪ್ರೀತ್ಯರ್ಥವಾಗಿ ಅಲ್ಲ, ತನ್ನ ತಂದೆಗೆ ಉತ್ತಮ ಸ್ಥಾನ ದೊರಕಲೆಂದೇ ಮಾಡಿದನು. ಇದರಿಂದ ಅವನಿಗೆ ನಿನ್ನ ಮಾತಿಗಿಂತ ತಂದೆಯ ಮಾತೇ ಹೆಚ್ಚೆಂದು ಸ್ಪಷ್ಟವಾಗುತ್ತದೆ. ಇದು ರಾಜಸೂಯದ ಕಥೆಯಾದರೆ ಅಶ್ವಮೇಧದ ಕಥೆಯು ಇದಕ್ಕೂ ಕೀಳು.

ಅಶ್ವಮೇಧಕ್ಕೆ ಕೈಹಾಕಿದ್ದೇ ಕೃಷ್ಣ-ವೇದವ್ಯಾಸರುಗಳಿಂದ ಬೈಯಿಸಿ-ಕೊಂಡಮೇಲೆ. ವ್ಯಾಸರು ಹೇಳಿದರಲ್ಲಾ ಮಾಡೋಣ ಎಂಬ ದೃಢ-ಬುದ್ಧಿಯೂ ಅವನಿಗಿರಲಿಲ್ಲ. 'ನನ್ನಲ್ಲಿ ದುಡ್ಡೇ ಇಲ್ಲ. ಯುದ್ಧ ನಡೆದು ದೇಶವೆಲ್ಲ ಹಾಯ್ ಹಾಯ್ ಎನ್ನುತ್ತಿರುವ ಕಾಲದಲ್ಲಿ ದುಡ್ಡೆಲ್ಲಿ ದೊರಕ-ಬೇಕು?' ಎಂದು ಗೊಣಗುಟ್ಟಲಾರಂಭಿಸಿದ. ವ್ಯಾಸರು ಅದಕ್ಕೂ ಉಪಾಯ ತೋರಿಸಿಕೊಟ್ಟರು. ಹೀಗೆ ಗೋಳಾಡುತ್ತಾ ಯಾಗ ಆರಂಭ ಮಾಡಿದರೂ ಮುಗಿದಮೇಲಾದರೂ ಕೃಷ್ಣಾರ್ಪಣ ಎಂದಿದ್ದರೆ ಕೃತಕೃತ್ಯನಾಗಿಹೋಗು-ತ್ತಿದ್ದ. ಅದೂ ಮಾಡಲಿಲ್ಲ. ಎಲ್ಲಾ ಯಾಗ ಮುಗಿದಮೇಲೆ ಮುಂಗಸಿಯ ರೂಪದ ಒಬ್ಬ ದೈತ್ಯನ ಮಾತು ನಂಬಿಕೊಂಡು (ಈ ಕಥೆ ತಾ.ನಿ.ದಲ್ಲಿ ೩೦ನೇ ಅಧ್ಯಾಯದ ಕಡೆಯಲ್ಲಿ ಬಂದಿದೆ) ತಾನು ಮಾಡಿದ್ದೆಲ್ಲ ವ್ಯರ್ಥ ಎಂಬ ಭ್ರಮೆಗೆ ಒಳಗಾದನು. ಒಟ್ಟಿನಲ್ಲಿ ಧರ್ಮರಾಜನಿಗೆ ಹೆಜ್ಜೆಹೆಜ್ಜೆಗೂ ಧರ್ಮದ ಬಗ್ಗೆಯೂ ನಿನ್ನ ಅಪಾರ ಮಹಿಮೆಯ ಬಗ್ಗೆಯೂ ಸಂದೇಹ-ವಿಪರ್ಯಗಳೇ ಬರುತ್ತಿದ್ದುವು. ಭೀಷ್ಮಾಚಾರ್ಯರ ಮತ್ತು ವೇದವ್ಯಾಸರ ಮಾತುಗಳಿಗೂ ಅವನು ಕೊಡಬೇಕಾದ ಮಹತ್ವ ಕೊಡಲಿಲ್ಲ. ಆದಕಾರಣ ಅವನು ರಾಜ-ಸೂಯ-ಅಶ್ವಮೇಧಗಳಂತಹ ಎರಡು ಮಹತ್ತರ ಯಾಗಗಳನ್ನು ಮಾಡಿದರೂ, ಹೇ ಕೃಷ್ಣ, ನಿನಗೆ ಅದರಿಂದ ಹೆಚ್ಚು ತೃಪ್ತಿಯಾಗಲಿಲ್ಲ—ಇದು ಸ್ವಾಭಾ-ವಿಕವೇ ಆಗಿದೆ.

ಹೇ ಸ್ವಾಮಿ ಶ್ರೀಕೃಷ್ಣ, ಭೀಮಸೇನನಾದರೋ ಈ ಧರ್ಮರಾಯನಿಗೆ ಸಂಪೂರ್ಣವಾಗಿ ವ್ಯತಿರಿಕ್ತ. ಶ್ರೀವಿಷ್ಣುದೀಕ್ಷೆಯಲ್ಲಿಯೂ ಶ್ರೀವಿಷ್ಣುಭಕ್ತಿ ಯಲ್ಲಿಯೂ ಶುದ್ಧ ಸಾತ್ವಿಕ ವೈಷ್ಣವಧರ್ಮಾನುಷ್ಠಾನನಿಷ್ಠೆಯಲ್ಲಿಯೂ

ಅವನು ಅತ್ಯಂತ ಶ್ರದ್ಧೆಯುಳ್ಳವನು—ಕಿಂಚಿತ್ತು ಕೂಡ ಲೋಪ ಬರದಂತೆ ಪರಿಪಾಲಿಸಿದ ನಿಷ್ಠಾವಂತ. ಅವನಿಗೆ ನಿನ್ನ ಮಾತೆಂದರೆ ವೇದವಾಕ್ಯ, ಹಿಂದೆ-ಮುಂದೆ ನೋಡದೆ ನಿನ್ನ ಮಾತಿನಂತೆ ನಡೆದುಕೊಳ್ಳುತ್ತಿದ್ದನು. ಆದುದರಿಂದಲೇ ಜರಾಸಂಧನನ್ನು ಸಂಹರಿಸಲು ಹೊರಡೋಣ ಎಂದು ನೀನು ಹೇಳುವುದೇ ತಡ, ಹೊರಟು ನಿಂತ. ಆಗ ಅವನಿಗೆ ಜರಾಸಂಧನ ಅಮಿತ ಪರಾಕ್ರಮ, ಅಜೇಯುತ್ವಾದಿ ಯಾವ ವಿಚಾರಗಳೂ ತಲೆಗೆ ಬರಲಿಲ್ಲ. 'ನಿನ್ನ ಅಪ್ಪಣೆಯಾಗಿದೆ, ಮಾಡಬೇಕು' ಇಷ್ಟೇ ಅವನ ವಿಚಾರವಾಗಿತ್ತು. ಅಷ್ಟೇ ಅಲ್ಲ, ನೀನು ಅವನಿಗೆ ಬ್ರಾಹ್ಮಣವೇಷದಿಂದ ಹೊರಡಬೇಕು, ಕೈಯಲ್ಲಿ ಏನೂ ಆಯುಧ ತರಬಾರದು, ರಾತ್ರಿಯೇ ಹೋಗಬೇಕು, ಹಿಂಬಾಗಿಲಿಂದಲೇ ಹೋಗಬೇಕು, ಮೂವರೇ ಹೋಗಬೇಕು—ಎಂದೆಲ್ಲಾ ನೋಡಲು ಅಸಂಗತವಾದ ವಿಚಾರಗಳನ್ನೇ ಹೇಳಿದಿ, ಅವನು ಒಂದಕ್ಕೂ ಪ್ರಶ್ನೆಮಾಡಲಿಲ್ಲ, ಮರು ಮಾತಾಡದೆ ಅತ್ಯಂತ ಶ್ರದ್ಧೆಯಿಂದ, ಅತ್ಯಂತ ವಿಧೇಯತೆಯಿಂದ ನಡೆದು-ಕೊಂಡ. ಇದಲ್ಲವೇ ನಿಜವಾದ—ಶುದ್ಧವಾದ ವಿಷ್ಣುದೀಕ್ಷೆ!

ಜರಾಸಂಧ ಯುದ್ಧಕ್ಕೆ ಬಂದು ಯಾರೊಡನೆ 'ಯುದ್ಧ ಮಾಡಬೇಕು? ಒಬ್ಬನ ಜೊತೆಯೋ, ಇಬ್ಬರ ಜೊತೆಯೋ, ಅಥವಾ ಮೂರೂ ಮಂದಿಗಳ ಜೊತೆಯೋ?' ಎಂದು ಪ್ರಶ್ನಿಸಿದಾಗಲೂ ಭೀಮಸೇನ ಬಾಯಿ ಬಿಡಲಿಲ್ಲ, ಮೌನದಿಂದಲೇ ಇದ್ದ; ನೀನೇ ಮಾತಾಡಿದಿ. ಎಂತಹ ವಿಧೇಯತೆ ಇದು! ಜರಾಸಂಧ ಅರ್ಜುನನನ್ನು 'ಕೇವಲ ಹುಡುಗ' ಎಂದು ನಿಂದಿಸಿದಾಗ ಅರ್ಜುನನಿಗೆ ಅಪಮಾನವೂ ಆಯಿತು, ಕೋಪವೂ ಬಂತು. ಅದಕ್ಕೆ ಪ್ರತಿ-ಯಾಗಿ ಅದೇ ಜರಾಸಂಧ ನಿನ್ನನ್ನು ಗೊಲ್ಲನೆಂದು ಜರಿದು 'ಈ ಭೀಮನೇ ನನಗೆ ಸರಿಸಮಾನ' ಎಂದು ಹೊಗಳಿದರೂ, ಭೀಮಸೇನನಿಗೆ ಎಳ್ಳಷ್ಟೂ ಹೆಮ್ಮೆಯಾಗಲೀ, ಉತ್ಸಾಹವಾಗಲೀ ಬರಲಿಲ್ಲ. 'ತುಲ್ಯನಿಂದಾಸ್ತುತಿರ್ ಮೌನೀ'—ತೆಗಳಿಕೆ ಹೊಗಳಿಕೆ ಎರಡನ್ನೂ ಸಮಾನವೆಂದು ತಿಳಿದವನು ಅವನು. ಆದರೂ ಸಹ, ಅವನಿಗೆ ನೀನು 'ಇವನೊಡನೆ ಯುದ್ಧ ಮಾಡು' ಎಂದು ಆಜ್ಞೆ ಮಾಡಿದ ಕೂಡಲೇ ಯುದ್ಧಕ್ಕೆ ನಿಂತ.

ಅಷ್ಟೇ ಅಲ್ಲದೆ ಭೀಮನಿಗೆ ಜರಾಸಂಧನ ಮೇಲೆ ಯಾವ ಸೇಡೂ ಇಲ್ಲ, ಅವನ ಪರಾಕ್ರಮದ ಬಗೆಗೆ ಅಸೂಯೆಯೂ ಇಲ್ಲ. ಅವನನ್ನು ಕೊಂದರೆ ತನ್ನ ಕೀರ್ತಿ ಹೆಚ್ಚುವುದೆಂಬ ಅಭಿಮಾನ—ಆಶೆ ಮೊದಲೇ ಇಲ್ಲ. ಅನೇಕ ಮಂದಿ ಸೆರೆ ಸಿಕ್ಕಿದ್ದ ರಾಜರ ಬಿನ್ನಪವನ್ನು ಲಾಲಿಸಿದ ನೀನು ಆಜ್ಞೆ ಮಾಡಿದ್ದರಿಂದಲೇ—ಅದಕ್ಕೂ ಹೆಚ್ಚಾಗಿ, ನೀನೇ ಎದುರಿಗೆ ಸಾಕ್ಷಿಯಾಗಿ ನಿಂತು ನೋಡುತ್ತಿದ್ದುದರಿಂದಲೇ ಆ ಭೀಮ ಹುರುಪಿನಿಂದ ಜರಾಸಂಧನೊಡನೆ ಯುದ್ಧ ಮಾಡಿದ. ಅವನ ‘ ಕಾಯಾಸ್ಥಿಸಂಧಿ ’ಗಳನ್ನು ನೆಜ್ಜುಗುಟ್ಟಿ ಹಣ್ಣುಗಾಯಿ ನೀರುಗಾಯಿಯಂತೆ ಮಾಡಿದ್ದರೂ ಅವನನ್ನು ಸಂಹರಿಸುವುದಕ್ಕೂ ನಿನ್ನ ಸಂಕೇತವನ್ನೇ ಕಾಯುತ್ತಿದ್ದ. ನೀನು ಸಂಕೇತ ಮಾಡಿದ ಕೂಡಲೇ ಮನಸಾ ನಿನಗೆ ವಂದಿಸಿಯೇ ಆ ಶತ್ರುವಿನ ಗತಿ ಕಾಣಿಸಿದನು. ಹೀಗೆ ಹೊಡೆದಾಡುವಾಗಲೂ ಭೀಮನಿಗೆ ತಾನು ಬಲಶಾಲಿ ಎಂಬ ಗರ್ವವಾಗಲಿ ಅಭಿಮಾನವಾಗಲಿ ಎಳ್ಳಷ್ಟೂ ಇರಲಿಲ್ಲ. ತನ್ನೊಳಗೆ ನೀನೇ ಅಂತರ್ಯಾಮಿಯಾಗಿ ನಿಂತು ಯುದ್ಧ ಮಾಡುತ್ತಿದ್ದೀಯೆ ಎಂದೇ ಅವನು ತಿಳಿದಿದ್ದನು—ಹಾಗೆಯೇ ವಿಶ್ವಾಸವಿತ್ತು. ಆದಕಾರಣವೇ ಅವನು ಜರಾಸಂಧನನ್ನು ಕೊಂದದ್ದು ತನ್ನ ಬಲದಿಂದ ಎಂದು ಅರಿತುಕೊಳ್ಳುವುದಕ್ಕೆ ಪ್ರತಿಯಾಗಿ “ ಹೇ ಸ್ವಾಮಿ ಭಗವನ್ ಕೃಷ್ಣ! ಇಗೋ, ಯುದ್ಧವೆಂಬ ಯಜ್ಞವನ್ನು ಮಾಡುತ್ತಿದ್ದೇನೆ. ವಿಷ್ಣು-ವೈಷ್ಣವರ ಕಡುದ್ವೇಷಿಯಾದ ಈ ದೈತ್ಯನನ್ನು ನಿನಗೆ ಪಶುವಾಗಿ ಸಮರ್ಪಿಸುತ್ತಿದ್ದೇನೆ; ಈ ಸೇವೆಯನ್ನು ಸ್ವೀಕರಿಸಿ ಸುಪ್ರೀತನಾಗು ” ಎಂದು ಸಂಕಲ್ಪಿಸಿಯೇ ನಿನ್ನ ಪ್ರೀತ್ಯರ್ಥವಾಗಿಯೇ ಅವನನ್ನು ಸಂಹರಿಸಿದನು. ‘ ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಮ್ ’ ಎಂದು ಆ ಕರ್ಮವನ್ನು ನಿನಗೆ ಸಮರ್ಪಿಸಿದನು.

ಈ ಕಾರಣಗಳಿಂದ ಭೀಮಸೇನ ಮಾಡಿ ಸಮರ್ಪಿಸಿದ ಈ ಯುದ್ಧವೆಂಬ ‘ ಸ್ವಧ್ವರ ’ (ಸು–ಉತ್ತಮವಾದ, ಅಧ್ವರ–ಯಜ್ಞ)ದಿಂದ ನಿನಗೆ ಹೆಚ್ಚು ತೃಪ್ತಿಯಾಯಿತೇ ಹೊರತು ಮೀನ-ಮೇಷ ಮಾಡುತ್ತಾ ಬಹಳ ವೈಭವದಿಂದ ಬಹಳ ಸಂಭ್ರಮದಿಂದ ಧರ್ಮರಾಜ ಮಾಡಿದ ರಾಜಸೂಯ ಅಶ್ವಮೇಧ ಎರಡು ಯಾಗಗಳಿಂದಲೂ ಅಷ್ಟು ತೃಪ್ತಿಯಾಗಲಿಲ್ಲ. ಹೇ ಭಗವನ್,

'ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ' ಎಂಬುದೇ ನಿನ್ನ ಸಂಕಲ್ಪವಲ್ಲವೇ !

268. ಭೀಮಪರವಾಗಿ ಭಾವಾರ್ಥ— ಸೂಚನೆ— ಶ್ರೀಕೃಷ್ಣಪರವಾದ ಭಾವಾರ್ಥದಲ್ಲಿ ಹೇಳಿರುವ ಪ್ರಾಯಶಃ ಎಲ್ಲ ಅಂಶಗಳೂ ಭೀಮಪರವಾಗಿಯೂ ಅನ್ವಯಿಸುತ್ತವೆ. ಆದರೆ ಹೇಳುವ ಧ್ವನಿ ಮಾತ್ರ ಸ್ವಲ್ಪ ವ್ಯತ್ಯಾಸವಾಗುತ್ತದೆ; ಇದನ್ನು ಭೀಮನನ್ನು ಸಂಬೋಧಿಸಿ ಹೇಳಬೇಕಲ್ಲವೆ. ಆದಕಾರಣ ಹೇಳಿದ್ದೇ ಹೇಳುತ್ತಿದ್ದೇನೆ ಎಂದು ಬೇಸರಗೊಳ್ಳಬೇಡಿ ಎಂದು ನಿವೇದಿಸಿ ಈ ಭೀಮಪರ ಭಾವಾರ್ಥಕ್ಕೆ ಹೋಗುವೆನು.

ಹೇ ಭೀಮಸೇನ! ನೀನು ದೇವದೇವೋತ್ತಮರಾದ (ವಿಜರವರ) ವಾಯುದೇವರ ಅವತಾರವಾಗಿದ್ದೀಯೆ. ಆ ಮೂಲರೂಪಿ ವಾಯುವು ಜೀವೋತ್ತಮರೂ ದೇವೋತ್ತಮರೂ ಆಗಿದ್ದಾರೆ. ಅಖಂಡಶಕ್ತಿಯುಳ್ಳವರು. ಮೃತ್ಯುರೂಪ ಅನಿಷ್ಟವಾಗಲಿ ಅಜ್ಞಾನವಾಗಲಿ ಅವರ ಹತ್ತಿರಕ್ಕೇ ಬರುವಂತಿಲ್ಲ. ಆದ್ದರಿಂದಲೇ ಅವರು ರುದ್ರಾದಿದೇವತೆಗಳ ಮೃತ್ಯುರೂಪ ಅನಿಷ್ಟವನ್ನು ಪರಿಹರಿಸಿ ಅವರನ್ನು ಲೋಕಾಧಿಪತಿಗಳಾಗಿ (ಇಂದ್ರಾದಿಗಳನ್ನು ಅಷ್ಟ-ದಿಕ್ಪಾಲಕರನ್ನಾಗಿಯೂ, ಸೂರ್ಯ-ಚಂದ್ರರನ್ನು ಬೆಳಕುಗಳಾಗಿಯೂ) ಮಾಡಿ ನೇಮಿಸಿದರು. ಅವರ ಅನುಗ್ರಹದಿಂದಲೇ ರುದ್ರಾದಿ ದೇವತೆಗಳು ವಿಷ್ಣುವಿನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಹೇ ಭೀಮಸೇನ, ನೀನು ಆ ವಾಯುದೇವರ ದ್ವಿತೀಯಾವತಾರವಾದ್ದರಿಂದ ಮೂಲರೂಪದ ಆ ಗುಣಗಳೆಲ್ಲವೂ ಅಭಿವ್ಯಕ್ತವಾಗದಿದ್ದರೂ ಒಳಗೇ ಅಡಕವಾಗಿವೆ. ನೀನು ಅರ್ಜುನನ ಪಕ್ಷ ಹಿಡಿದಿದ್ದರಿಂದಲೇ ಅವನನ್ನು ಶ್ರೀಕೃಷ್ಣನೂ ಕೈಹಿಡಿದ—ಅರ್ಜುನನಿಗೆ ಜಯವೂ ಆಯಿತು. ಕರ್ಣಾದಿಗಳನ್ನು ನೀನು ಬಿಟ್ಟಿದ್ದರಿಂದಲೇ ಕೃಷ್ಣನೂ ಬಿಟ್ಟ, ಅವರಿಗೆ ಸೋಲೂ ಆಯಿತು. (ಇದೆಲ್ಲ ಗು.ಸಾ. ಟೀಕೆಯಂತೆ 'ವಿಜರ. ವರ'ದ ವಿವರಣೆ)

ಹೇ ಭೀಮಸೇನ! ನಿನ್ನ ಈ ಮಹಿಮೆಗೆ ಶ್ರೀಕೃಷ್ಣನ ಅಪಾರ ಅನುಗ್ರಹವೇ ಕಾರಣ. ನೀನು ಆ ಶ್ರೀಕೃಷ್ಣನ ಅಚ್ಚಿನ್ನ ಏಕಾಂತಭಕ್ತಾಗ್ರೇಸರ. ನೀನು ಶುದ್ಧ ಸಾತ್ವಿಕ ವಿಷ್ಣುಧರ್ಮದಲ್ಲೇ ಬದ್ಧದೀಕ್ಷೆಯುಳ್ಳ ಅತ್ಯಂತ

ನಿಷ್ಠಾವಂತನಾದ ವೈಷ್ಣವಾಗ್ರಣಿಯೂ ಆಗಿದ್ದೀಯೆ. ನಿನಗೆ ಆ ಶ್ರೀಕೃಷ್ಣನ ಮಾತೆಂದರೆ ಅತ್ಯಂತ ಮಾನ್ಯ, ಅದನ್ನು ವಿಚಾರವೇ ಮಾಡದೆ ಶಿರಸಾವಹಿಸಿ ಪರಿಪಾಲಿಸುವಿ. ಶ್ರೀಕೃಷ್ಣ ಮಹಾಸಮರ್ಥ, ಸರ್ವಶಕ್ತ, ದೋಷದೂರ ಅವನ ಆಳವನ್ನು ಯಾರೂ ಅರಿಯಲಾರರೆಂಬುದನ್ನು ನೀನು ಚೆನ್ನಾಗಿ ಬಲ್ಲಿ. ಆದ್ದರಿಂದ ಅವನ ಆಜ್ಞೆಯೆಂದರೆ ನಿನಗೆ ವೇದವಾಕ್ಯವೇ ಆಗಿರುತ್ತಿತ್ತು. ಅವನು ಜರಾಸಂಧನ ಗಿರಿವ್ರಜಕ್ಕೆ ಹೋಗೋಣ ಎಂದ ಕೂಡಲೇ ನೀನು ಮರುಮಾತಾಡದೆ ಹೊರಟುಬಿಟ್ಟೆ. ಆಮೇಲೂ ಸಹ ನೋಡುವುದಕ್ಕೆ ಅಸಂಗತ ವೆಂದು ಕಂಡರೂ (ಗಹನ ವಿಚಾರಗಳನ್ನು ಒಳಗೊಂಡ) ಅವನ ಎಲ್ಲ ಮಾತು ಗಳಿಗೂ ಒಪ್ಪಿ ಅದರಂತೆ ನಡೆದುಕೊಂಡಿ ಮೂವರೇ ಹೋಗಬೇಕು, ಬ್ರಾಹ್ಮಣರ ವೇಷ ಹಾಕಬೇಕು, ಆಯುಧಗಳಿರಬಾರದು, ಅಪರಾತ್ರಿಯ ವೇಳೆಯೇ ಹೋಗಬೇಕು, ಹಿಂಬಾಗಿಲಿಂದಲೇ ಹೋಗಬೇಕು—ತಥಾಸ್ತು, ಹಾಗೆ ಹಾಗೆಯೇ ಮಾಡಿದಿ. ಜರಾಸಂಧನ ಮೇಲೆ ನಿನಗೇನು ದ್ವೇಷ? ಅವನು ಶ್ರೀಕೃಷ್ಣನ ವೈರಿ, ವಿಷ್ಣುಭಕ್ತರ ದ್ವೇಷಿ; ಈ ಜನ್ಮದಲ್ಲಿ ಮಾತ್ರವೇ ಅಲ್ಲ, ಜನ್ಮಾಂತರದಿಂದಲೂ (ವಿಪ್ರಚಿತ್ತಿಯಾಗಿದ್ದಾಗಲೂ) ವಿಷ್ಣು-ವೈಷ್ಣವ ದ್ವೇಷಿ. ಆದ್ದರಿಂದ ನಿನಗೂ ವೈರಿ. ಜೊತೆಗೆ ಅವನು ಶಿವಭಕ್ತಾಗ್ರೇಸರ, ಶಿವಸರ್ವೋತ್ತಮತ್ವದಲ್ಲೇ ಅವನಿಗೆ ವಿಶ್ವಾಸ. ತಾನು ಸೆರೆ ಹಿಡಿದ ಎಂಬ- ತ್ತಾರುಸಾವಿರ ಮಂದಿ ರಾಜರನ್ನೂ ಶಿವಭಕ್ತರಾಗಿ ಎಂದು ಅಪ್ಪಣೆ ಮಾಡಿದ. ಅವರು ಒಪ್ಪದೇಹೋಗಲು ಅವರನ್ನೆಲ್ಲ ನರಮೇಧ ಮಾಡಿ ಶಿವನಿಗೆ ಪಶು ಗಳಾಗಿ ಅರ್ಪಿಸಬೇಕೆಂದು ಹವಣಿಸಿಕೊಂಡಿದ್ದ. ಅವರನ್ನೆಲ್ಲ ಬಿಟ್ಟುಬಿಡಲು ಶ್ರೀಕೃಷ್ಣ ಹೇಳಿಕಳುಹಿಸಿದರೂ ಒಪ್ಪದೆ ಯುದ್ಧಕ್ಕೆ ಸಿದ್ಧನಾಗಿ ನಿಂತ. ಅವನ ಮರಣವು ನಿನ್ನಿಂದಲೇ ಆಗಬೇಕೆಂದು ವಿಧಿನಿಯತ—ಅದೇ ಹರಿಸಂಕಲ್ಪ. ಆದಕಾರಣ ಶ್ರೀಕೃಷ್ಣನ ಅಪ್ಪಣೆಯಾದ್ದರಿಂದ ಅವನ ಜೊತೆಯೇ ಗಿರಿವ್ರಜಕ್ಕೆ ಪ್ರಯಾಣ ಮಾಡಿ ಜರಾಸಂಧನನ್ನು ಎದುರಿಸಿದಿ.

ಆ ಜರಾಸಂಧನಿಗೋ ಅಪರಿಮಿತ ಬಲ. ಅವನಿಗೆ ಚಂಡಕೌಶಿಕರ ಎಂಟು ವರಗಳಲ್ಲದೆ ಬ್ರಹ್ಮ-ರುದ್ರರ ವರಗಳೂ ಬೆಂಗಾವಲಾಗಿದ್ದುವು. ಅವನು ಅಪರಿಮಿತ ಪರಾಕ್ರಮಿಯೂ ಅಜೇಯನೂ ಆಗಿದ್ದ. ಇಷ್ಟಾದರೂ ಸಹ

ಹೇ ಭೀಮಸೇನ ! ನೀನು ಅವನಿಗೆ ಎಳ್ಳಷ್ಟೂ ಸೊಪ್ಪುಹಾಕಲಿಲ್ಲ. ಮೇಲಾಗಿ ನಿಮ್ಮಿಬ್ಬರ ಯುದ್ಧವನ್ನು ಸಾಕ್ಷಾತ್ ಶ್ರೀಕೃಷ್ಣನೇ ಎದುರಿಗೆ ಸಾಕ್ಷಿಯಾಗಿ ನಿಂತು ನೋಡುತ್ತಿದ್ದನು. ಆದರಿಂದ ನಿನ್ನ ಉತ್ಸಾಹ-ಬಲ ಎಲ್ಲವೂ ಅನೇಕ ಪಟ್ಟು ಹೆಚ್ಚಾದುವು. ಈ ಯುದ್ಧವು ನಿನ್ನ ಬಲಪ್ರದರ್ಶನಕ್ಕೆ ಸದವಕಾಶ ಕೊಟ್ಟಿತೆಂದು ಭಾವಿಸುವುದಕ್ಕೆ ಪ್ರತಿಯಾಗಿ ನೀನು ಈ ಯುದ್ಧವೇ ಒಂದು ಸ್ವಧ್ವರ (ಸು+ಅಧ್ವರ)ವೆಂದೂ ವಿಷ್ಣು ವೈಷ್ಣವದ್ವೇಷಿಯಾದ ಜರಾ-ಸಂಧನೇ ಪಶುವೆಂದೂ ತಿಳಿದು ಈ ಸತ್ಕರ್ಮವನ್ನು ಕೃಷ್ಣಪ್ರೀತ್ಯರ್ಥವಾಗಿ ಮಾಡಿ ಅವನಿಗೇ ಸಮರ್ಪಿಸಿದಿ. ಇದರಿಂದ ಇಂಥಾ ಮಹತ್ಕಾರ್ಯವನ್ನು ಸಾಧಿಸಿದ ಬಗ್ಗೆ ನಿನಗೆ ಹೆಮ್ಮೆಯಾಗಲಿ ಜಂಭವಾಗಲಿ ಎಳ್ಳಷ್ಟೂ ಬರಲಿಲ್ಲ. ಅದಕ್ಕೆ ಪ್ರತಿಯಾಗಿ 'ಶ್ರೀಕೃಷ್ಣನ ಸೇವೆಗೆ ನಾನು ನಿಮಿತ್ತಮಾತ್ರ. ಆ ಸ್ವಾಮಿಯೇ ನನ್ನಲ್ಲಿ ಅಂತರ್ಯಾಮಿಯಾಗಿ ನನ್ನ ಬಲವನ್ನು ಪ್ರೇರಿ-ಸುತ್ತಾನೆ' ಎಂದು ಅನುಸಂಧಾನ ಮಾಡಿಕೊಂಡು ನಿನ್ನ ಶಕ್ತಿಯಲ್ಲೂ ಪ್ರೇರಕನಾದ ಭಗವಂತನನ್ನು ಕಾಣುವಿ. ಹೀಗೆ ಜರಾಸಂಧನನ್ನು ಸಂಹಾರ ಮಾಡಿದ್ದೂ ಭಗವತ್ಸೇವೆಯೆಂದು ತಿಳಿದು ಅದನ್ನೂ ಸಹ ನೀನು ಆ ಶ್ರೀ-ಕೃಷ್ಣನಿಗೆ 'ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಮ್' ಎಂದು ಸಮರ್ಪಿಸಿದಿ. ಈ ಕಾರಣಗಳಿಂದ ನಿನ್ನ ಯುದ್ಧವೇ ಶ್ರೀಕೃಷ್ಣನಿಗೆ ಸ್ವಧ್ವರ ವಾಯಿತು, ಆದರಿಂದ ಅವನಿಗೆ ತೃಪ್ತಿಯೂ ಆಯಿತು, ಪರಮ ಪ್ರೀತಿಯೂ ಆಯಿತು.

ಇದಕ್ಕೆ ವಿರುದ್ಧವಾಗಿ ಧರ್ಮರಾಜ ರಾಜಸೂಯಯಾಗ-ಅಶ್ವಮೇಧ ಯಾಗದಂತಹ ಎರಡು ದೊಡ್ಡ ಯಾಗಗಳನ್ನು ಅನುಷ್ಠಾನ ಮಾಡಿದರೂ ಅದನ್ನು ಭಗವಂತನಿಗೆ ಸಮರ್ಪಿಸುವುದಿರಲಿ ಆ ಭಗವಂತ ವ್ಯಾಸರೂಪದಿಂದ ಶ್ರೀಕೃಷ್ಣರೂಪದಿಂದ ಎದುರಿಗೇ ಇದ್ದರೂ ಅವನನ್ನು ಜ್ಞಾನದಿಂದ ಗುರುತಿ-ಸಲೂ ಸಹ ಇಲ್ಲ. ಅದಕ್ಕೆ ಪ್ರತಿಯಾಗಿ 'ಅಗ್ರಪೂಜೆ ಯಾರಿಗೆ ಮಾಡ-ಬೇಕೆಂದು ದೊಡ್ಡ ಪಂಚಾಯಿತಿಯೇ ಮಾಡಿದ. ಭೀಷ್ಮಾಚಾರ್ಯರ ಹೇಳಿಕೆ ಯಂತೆ ಶ್ರೀಕೃಷ್ಣನಿಗೆ ಪಾದಪೂಜೆ ಮಾಡಿದರೂ ಪೂರ್ಣಮನಸ್ಸಿನಿಂದ ಮಾಡಲಿಲ್ಲ, ಬಲಾತ್ಕಾರಕ್ಕೆ ಮಾಡಿದ್ದಾಗಿತ್ತು. ಅಶ್ವಮೇಧದ ಕಡೆಯಲ್ಲೂ

ಮುಂಗಸಿಯ ರೂಪದಲ್ಲಿದ್ದ ದೈತ್ಯನ ಮಾತು ಕೇಳಿ ತಾನು ಮಾಡಿದ್ದೆಲ್ಲ ವ್ಯರ್ಥ ಎಂದುಕೊಂಡನು. ಎಲ್ಲದಕ್ಕೂ ಹೆಚ್ಚಾಗಿ ಧರ್ಮರಾಯನಿಗೆ ಶುದ್ಧ ವೈಷ್ಣವಧರ್ಮದಲ್ಲಿ ಆದರವೇ ಇರಲಿಲ್ಲ, ದೀಕ್ಷೆಯಂತೂ ದೂರತೋಪಾಸ್ತು. ಈ ಕುಂದುಕೊರತೆಗಳಿಂದ ಧರ್ಮರಾಯ ಮಾಡಿದ ಎರಡು ಯಾಗಗಳಿಂದ ಭಗವಂತ ಶ್ರೀಕೃಷ್ಣನಿಗೆ ಆದ ತೃಪ್ತಿಗಿಂತ, ಹೇ ಭೀಮಸೇನ! ನೀನು ವಿಷ್ಣುಪಕ್ಷದ್ವಿಡೀಶನಾದ ಜರಾಸಂಧನನ್ನು ಯುದ್ಧವೆಂಬ ಸ್ವಧ್ವರದಲ್ಲಿ ಪಶುವಾಗಿ ಸಮರ್ಪಿಸಿದ್ದರಿಂದಲೇ ಹೆಚ್ಚು ತೃಪ್ತಿಯಾಯಿತು. ಏಕೆಂದರೆ ಭಗವತ್ಪ್ರೀತಿಗೆ ಜ್ಞಾನ-ಭಕ್ತಿಗಳು ಮುಖ್ಯವೇ ಹೊರತು ಬೇರಾವುದೂ ಅಲ್ಲ.

ಇಲ್ಲಿಗೆ ೨೩ನೇ ಶ್ಲೋಕ ಮುಗಿಯಿತು.

ಶ್ಲೋಕ ೨೪—ಹದಿನೆಂಟು ಅಕ್ಷೋಹಿಣೀ ಸೈನ್ಯನಾಶ

269. ಅವತಾರಿಕೆ — (ಕಕ. ವಿ. ಛ.) ವಾಯುದೇವರಲ್ಲಿ 'ಭೀಮಾವತಾರದಲ್ಲಿ ನೀವು ಮಾಡಿದ ಅದ್ಭುತ ಯುದ್ಧವನ್ನು ವರ್ಣಿಸಲು ಶ್ರೀವಿಷ್ಣು ಮತ್ತು ವಾಯು ಇವರಿಬ್ಬರನ್ನು ಬಿಟ್ಟರೆ ಬೇರೆ ಯಾರಿಂದಲೂ ಸಾಧ್ಯವಿಲ್ಲ'ವೆಂದು ವಿಜ್ಞಾಪಿಸುತ್ತಾ ಅವರಿಬ್ಬರ ಪಾದಕಮಲಗಳನ್ನು ಮೊರೆಹೋಗುತ್ತಾರೆ. (ಪುರಾ.) ಶ್ರೀಕೃಷ್ಣನೂ ಭೀಮಸೇನನೂ ಮಾಡಿದ ಯುದ್ಧವನ್ನು ವರ್ಣಿಸುತ್ತಾ ಅವರ ಪಾದಗಳನ್ನು ಮೊರೆಹೋಗುತ್ತಾರೆ. (ಲೇ.) ಭೂಭಾರಹರಣವೇ ಶ್ರೀಕೃಷ್ಣನ ಮತ್ತು ಭೀಮನ ಅವತಾರದ ಮುಖ್ಯ ಉದ್ದೇಶ. ಈ ಕಾರ್ಯದಲ್ಲಿ ಭೀಮನು ಶ್ರೀಕೃಷ್ಣನಿಗೆ ಪ್ರಧಾನಾಂಗವೆಂದು ತೋರಿಸುತ್ತಾ ಕೌರವ-ಪಾಂಡವರ ಯುದ್ಧದ ನೆಪ ಮಾಡಿಕೊಂಡು ಹದಿನೆಂಟು ಅಕ್ಷೋಹಿಣೀ ಸೈನ್ಯವನ್ನು ನಾಶಮಾಡಿ ಭೂಭಾರವನ್ನು ಇಳುಹಿದನು. ಈ ಯುದ್ಧದ ವೈಖರಿಯನ್ನು ವರ್ಣಿಸುವುದಕ್ಕೆ ಕ್ರಮವಾಗಿ ಹರಿ-ವಾಯುರೂಪರಾದ ಶ್ರೀವೇದವ್ಯಾಸರು ಮತ್ತು ಶ್ರೀಮಧ್ವಾಚಾರ್ಯರು ಈ ಇಬ್ಬರು ಮಾತ್ರವೇ ಸಮರ್ಥರು, ಬೇರೆ ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಾ (ಶ್ರೀವ್ಯಾಸರು ಮಹಾಭಾರತ ರಚಿಸಿ ಈ ಯುದ್ಧವನ್ನು ವಿಸ್ತಾರವಾಗಿ ವರ್ಣಿಸಿದರೆ ವಾಯುದೇವರು ಮಧ್ವರೂಪದಿಂದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ-

ವನ್ನು ರಚಿಸಿ ಮಹಾಭಾರತದಲ್ಲಿ ಅಡಗಿರುವ ಗೂಢಾರ್ಥಗಳನ್ನು ಹೊರಗೆಡಹಿದರು.) ಆ ರೀತಿ ಯುದ್ಧಕೌಶಲವನ್ನು ಮೆರೆಸಿ ದುಷ್ಟರಾಜರನ್ನು ಸಂಹಾರ ಮಾಡಿ ಭೂಭಾರಹರಣ ಮಾಡಿದ ಕೃಷ್ಣ-ಭೀಮರ ಸಮರಮಹಿಮೆಯನ್ನು 'ಕ್ಷ್ವೇಲಾಕ್ಷೀಣಾಟ್ಟಹಾಸಂ....' ಎಂಬ ೨೪ನೇ ಶ್ಲೋಕದಿಂದ ಉಪಸಂಹಾರ ಮಾಡುತ್ತಾರೆ—

ಕ್ಷ್ವೇಲಾಕ್ಷೀಣಾಟ್ಟಹಾಸಂ ತವ ರಣಮರಿಹ (ನ್)-
ನ್ನುದ್ಗದೋದ್ದಾಮಬಾಹೋ*
ಬಹ್ವಕ್ಷೌ*ಹಿಣ್ಯನೀಕ—ಕ್ಷಪಣಸುನಿಪುಣಂ
ಯಸ್ಯ ಸರ್ವೋತ್ತಮಸ್ಯ।
ಶುಶ್ರೂಷಾರ್ಥಂ ಚಕರ್ಥ ಸ್ವಯಮಯಮಥ* ಸಂ-
ವಕ್ತುಮಾನಂದತೀರ್ಥ-
ಶ್ರೀಮನ್ನಾಮನ್ ಸಮರ್ಥ—ಸ್ತ್ವಮಪಿ ಹಿ ಯುವಯೋಃ
ಪಾದಪದ್ಮಂ ಪ್ರಪದ್ಯೇ ॥ ೨೪ ॥

(*ಪಾಠಾಂತರಗಳು — -ದ್ದಾಮಬಾಹೋಃ, ಬಹ್ವಕ್ಷೋಹಿಣ್ಯನೀಕ—, ಸ್ವಯಮಯಮಿಹ ಎಂದೂ ಕಕ. ಪಾಠಾಂತರಗಳು. ....ಮಿಹ ಎಂಬುದು ವಿ. ಪಾಠ ಕೂಡ)

ಪದವಿಭಾಗ—(ಉಭಯ ಪಕ್ಷದಲ್ಲೂ) ಕ್ಷ್ವೇಲಾ....ಹಾಸಂ, ತವ, ರಣಂ, ಅರಿಹನ್, ಉದ್ಗದೋ....ಬಾಹೋ (ಕಕ. ಬಾಹೋಃ), (ಅಥವಾ ವಿ. ಛ. ಪ್ರಕಾರ ಉದ್ಗದ, ಉದ್ದಾಮಬಾಹೋ ಎಂದು ಎರಡು ಬೇರೆ ಬೇರೆ ಪದವಾಗಿಯೂ ಗ್ರಹಿಸಬಹುದು), ಬಹ್ವ....ನಿಪುಣಂ, ಯಸ್ಯ, ಸರ್ವೋತ್ತಮಸ್ಯ, ಶುಶ್ರೂಷಾರ್ಥಂ, ಚಕರ್ಥ ; (ವಾಯುಪಕ್ಷದಲ್ಲಿ ಮಾತ್ರ) ಸ್ವಯಂ, ಅಯಂ, ಅಥ; ಕಕ. ಮತ್ತು ವಿ. ಪಾಠರೀತ್ಯಾ ಸ್ವಯಂ, ಅಯಂ, ಇಹ (ಹರಿಪಕ್ಷದಲ್ಲಿ ಮಾತ್ರ) ಸು + ಅಯಮ = ಸ್ವಯಮ, ಯಂ, ಅಥ; (ಉಭಯ ಪಕ್ಷದಲ್ಲೂ) ಸಂವಕ್ತುಂ, ಆನಂದತೀರ್ಥಶ್ರೀಮನ್ನಾಮನ್ (ಅಥವಾ ಶ್ರೀಮದಾನಂದತೀರ್ಥ, ಶ್ರೀಮನ್ನಾಮನ್), ಸಮರ್ಥಃ, ತ್ವಂ, ಅಪಿ, ಹಿ, ಯುವಯೋಃ, ಪಾದಪದ್ಮಂ, ಪ್ರಪದ್ಯೇ ॥

ಕಠಿನ ಶಬ್ದಾರ್ಥ ವಿವರಣೆ

270. ಕ) ಕ್ಷ್ವೇಲಾ....ಹಾಸಂ ಎಂಬುದು ಮುಂದಿರುವ 'ರಣಂ'ಗೆ ವಿಶೇಷಣ. 'ಕ್ಷ್ವೇಲಾ ತು ಸಿಂಹನಾದಃ ಸ್ಯಾತ್' ಎಂದು ಅಮರವಿರುವುದರಿಂದ (ಕಕ. ವಿ ಛ.) ಕ್ಷ್ವೇಲಾ ಎಂದರೆ ಸಿಂಹನಾದ. ಕ್ಷೀಣ ಶಬ್ದವು ಕ್ಷಿ-ಕ್ಷಯಿಸು ಎಂಬ ಧಾತುವಿನ ಭೂತಕೃದಂತರೂಪ. ಆದಕ್ಕೆ ನಶಿಸಿಹೋದ, ಕ್ಷಯವಾದ ಎಂದರ್ಥ. 'ಕ್ಷಿ ಹಿಂಸಾಯಾಂ' (ಸ್ವಾ.ಪ) ಎಂಬ ಧಾತುವಿನ ಮೇಲೆ ಭೂತಕೃದಂತದ ಕ್ತ ಪ್ರತ್ಯಯ ಬಂದಾಗ 'ನಿಷ್ಠಾಯಾಮಣ್ಯದರ್ಥೇ' (ಪಾ. ೬/೪/೬೦) ಎಂಬ ಸೂತ್ರದಂತೆ ಕ್ಷಿ ಧಾತುವಿನ ಇಕಾರಕ್ಕೆ ದೀರ್ಘಾದೇಶ ಬಂದು ಕ್ಷೀ ಎಂದಾಗುತ್ತದೆ. ಮುಂದೆ 'ಕ್ಷಿಯೋ ದೀರ್ಘಾತ್' (ಪಾ. ೮/೨/೪೬) ಎಂಬ ಸೂತ್ರದಂತೆ ಕ್ತ ಪ್ರತ್ಯಯದ (ನಿಷ್ಠೆಯ) ತಕಾರಕ್ಕೆ ನಕಾರಾದೇಶ ಬರುತ್ತದೆ. ಅನಂತರ ಷಕಾರದ ಯೋಗವಿರುವುದರಿಂದ ನಕಾರಕ್ಕೆ ಣಕಾರಾದೇಶ ಬಂದು ಕ್ಷೀಣ ಎಂದಾಗಿದೆ - ಕ್ಷಿ + ತ = ಕ್ಷೀ + ತ = ಕ್ಷೀ + ನ = ಕ್ಷೀಣ. ಇದರ ವಿರುದ್ಧ ಶಬ್ದ ಅಕ್ಷೀಣ; ನ ಕ್ಷೀಣಃ-ಅಕ್ಷೀಣಃ, ಇದಕ್ಕೆ ಪ್ರವೃದ್ಧವಾದ, ಪುಷ್ಟವಾದ ಅಥವಾ ಉಕ್ಕುವ ಎಂದರ್ಥ. ಹಸ್-ನಗು ಧಾತುವಿನಿಂದ ಹಾಸ ಆಗಿದೆ (ಘಞ್ ಪ್ರತ್ಯಯ); ಹಾಸ ಎಂದರೆ ನಗುವಿಕೆ, ನಗು ಎಂದರ್ಥ. ಆ ನಗು ಬಹಳ ಜೋರಾಗಿದ್ದರೆ ಅಥವಾ ಹೆಚ್ಚಾಗಿದ್ದರೆ ಅಟ್ಟಹಾಸ ಎನ್ನಿಸುತ್ತದೆ; 'ಮಹಾಹಾಸಃ' (ಕಕ. ಛ.). ಈ ಅರ್ಥಕ್ಕಿಂತ ಪ್ರಕೃತ ಸಂದರ್ಭಕ್ಕೆ ಆಡಂಬರ, ಉತ್ಸಾಹ ಅಥವಾ ಹುಮ್ಮಸ್ಸು ಎಂಬ ಅರ್ಥ ಹೆಚ್ಚು ಹೊಂದುತ್ತದೆ. ಹೇಗೆಂದರೆ ಕ್ಷ್ವೇಲಾ-ಸಿಂಹನಾದದಿಂದ, ಅಕ್ಷೀಣ-ಪ್ರವೃದ್ಧವಾದ ಅಥವಾ ಉಕ್ಕುವ; ಅಟ್ಟಹಾಸಂ-ಉತ್ಸಾಹವುಳ್ಳ ಎಂದು ಶಬ್ದಾರ್ಥ; ಇದು ರಣಂ-ಗೆ ವಿಶೇಷಣ. ಯುದ್ಧದಲ್ಲಿ ಕೃಷ್ಣನಿಗೂ ಭೀಮನಿಗೂ ಸಿಂಹನಾದ ಮಾಡುತ್ತಾ ರಣರಂಗದಲ್ಲಿ ನುಗ್ಗಿದರೆ ಅವರ ಉತ್ಸಾಹ ಹೆಜ್ಜೆ ಹೆಜ್ಜೆಗೂ ಹೆಚ್ಚುತ್ತಿತ್ತು ಎಂದು ಭಾವ. ಪುರಾ. ಇದಕ್ಕೆ ಇನ್ನೊಂದು ಅರ್ಥವನ್ನೂ ತೋರಿಸುತ್ತಾರೆ; ಈ ಅರ್ಥದಲ್ಲಿ ಅಕ್ಷೀಣ ಎಂದು ಪದಚ್ಛೇದ ಮಾಡದೆ ಕ್ಷೀಣ ಎಂದೇ ಗ್ರಹಣ ಮಾಡಬೇಕು. ಕ್ಷ್ವೇಲಾ-ಸಿಂಹನಾದದಿಂದ, ಕ್ಷೀಣ-ನಶಿಸಿಹೋದ, ಅಡಗಿಹೋದ, ಅಟ್ಟಹಾಸಂ-ಶತ್ರುಗಳ ಉತ್ಸಾಹವುಳ್ಳ; ಎಂದರೆ ಕೃಷ್ಣನಾಗಲಿ

ಭೀಮನಾಗಲಿ ಸಿಂಹನಾದ ಮಾಡಿದರೇ ಸಾಕು, ಶತ್ರುಗಳ ಹುಮ್ಮಸ್ಸು-ಉತ್ಸಾಹಗಳೆಲ್ಲ ಕಳೆಗುಂದಿ ಅಡಗಿಹೋಗುತ್ತಿತ್ತು ಎಂದರ್ಥ. ಗು.ಸಾ. ಮೂರನೇ ಅರ್ಥವನ್ನೂ ತೋರಿಸುತ್ತಾರೆ—ಕ್ಷ್ವೇಲಾ-ಶತ್ರುಗಳ ಸಿಂಹನಾದದಿಂದ, ಅಕ್ಷೀಣ-ಕುಗ್ಗದ (ಅಥವಾ ಕಡಿಮೆಯಾಗದ), ಅಟ್ಟಹಾಸಂ-(ಕೃಷ್ಣ-ಭೀಮರ) ಉತ್ಸಾಹವುಳ್ಳ, ಅರ್ಥಾತ್ ಎದುರುಪಕ್ಷದವರು ಸಿಂಹನಾದ ಮಾಡುತ್ತಾ ಮೈಮೇಲೆ ಬಂದರೂ ಸ್ವಲ್ಪವೂ ಎದೆಗುಂದದೆ ಉತ್ಸಾಹದಿಂದಲೇ (ಕೃಷ್ಣನೂ ಭೀಮನೂ) ಯುದ್ಧ ಮಾಡುತ್ತಿದ್ದರೆಂದು ಭಾವ. ಕೃಷ್ಣನ ಉತ್ಸಾಹ ಕುಂದುತ್ತಿರಲಿಲ್ಲ ಎಂಬುದಕ್ಕೆ ಈ ನಿದರ್ಶನ ಕೊಡಬಹುದು—ಭೀಷ್ಮಾಚಾರ್ಯರು ಪಾಂಡವರ ಸೈನ್ಯವನ್ನು ಕದಡುತ್ತಾ ಅರ್ಜುನನನ್ನೂ ಧಿಕ್ಕರಿಸಿ ಸಾರಥಿಯಾಗಿದ್ದ ಕೃಷ್ಣನನ್ನೂ ಬಾಣಗಳಿಂದ ಪೀಡಿಸಿದರು. ಅದರಿಂದ ಕುಪಿತನಾದ ಶ್ರೀಕೃಷ್ಣ ಸಾರಥ್ಯ ಮಾಡುವುದನ್ನು ಬಿಟ್ಟು ಕೈಯಲ್ಲಿ ಚಕ್ರವನ್ನು ಹಿಡಿದು ರಥದಿಂದ ಹಾರಿ 'ಈ ಭೀಷ್ಮನನ್ನು ಈ ಕ್ಷಣ ಸಂಹರಿಸಿಬಿಡುವೆನು' ಎಂದು ಹೇಳುತ್ತಾ ಭೀಷ್ಮನ ಮೇಲೆ ನುಗ್ಗಿಹೋದ. ಆಗ ಭೀಷ್ಮರೇ ಕೃಷ್ಣನನ್ನು ಸ್ತೋತ್ರ ಮಾಡಿ ಸಾಂತ್ವನ ಮಾಡುತ್ತಾರೆ. ಈ ಪ್ರಸಂಗ ಮಹಾಭಾರತದಲ್ಲಿ ಭೀಷ್ಮಪರ್ವದ ೫೯ನೇ ಅಧ್ಯಾಯದಲ್ಲಿ ಬಂದಿದೆ. ಭಾಗವತ ಪ್ರಥಮ ಸ್ಕಂಧದಲ್ಲೂ (೮ ಅ. ೪೩-೪೭ ಶ್ಲೋ.) ಈ ಪ್ರಸಂಗ ಸೂಚಿಸಲ್ಪಟ್ಟಿದೆ.

ಇನ್ನು ಭೀಮನೂ ಸಹ ಶತ್ರುಗಳ ಸಿಂಹನಾದಕ್ಕಾಗಲಿ ಅಟ್ಟಹಾಸಕ್ಕಾಗಲಿ ಈಷತ್ತೂ ಅಂಜುತ್ತಿರಲಿಲ್ಲವೆಂಬುದಕ್ಕೆ ಬಕ, ಕಿರ್ಮೀರ, ಹಿಡಿಂಬ, ಕೀಚಕಾದಿಗಳನ್ನು ಸಂಹರಿಸಿದ್ದೇ ಉತ್ತಮ ನಿದರ್ಶನವೆನ್ನಬಹುದು. ಆದರೆ ಪ್ರಸ್ತುತ ವಿಶೇಷಣ ಭಾರತಯುದ್ಧಕ್ಕೆ ಮಾತ್ರ ಸಂಬಂಧಿಸಿದ್ದರಿಂದ ಬೇರೆ ನಿದರ್ಶನ ಕೊಡಬೇಕಾಗುತ್ತದೆ. ಮುಂದೆ ಖಂಡ 274ರಲ್ಲಿ ಭಾರತಯುದ್ಧದ ಪ್ರಸಕ್ತಿಯೇ ಬಂದಿರುವುದರಿಂದ ಆ ಖಂಡದಲ್ಲಿ ಚ ಉಪವಿಭಾಗದಿಂದ ಟ-ವಿಭಾಗದಲ್ಲಿ ಹೇಳುವ ಅಂಶಗಳನ್ನು ಸೂಚಿಸಬಹುದು.

ಖ) ಅರಿಹನ್ ಎಂಬುದು ಸಂಬೋಧನೆ; ಕೃಷ್ಣನಿಗೂ ಭೀಮನಿಗೂ ಅನ್ವಯಿಸುತ್ತದೆ. ಅರೀನ್-ಶತ್ರೂನ್, ಹಂತಿ-ಸಂಹರತೀತಿ ಅರಿಹಾ।

ತಸ್ಯ ಸಂಬುದ್ಧಿಃ ಅರಿಹನ್ । ಹನ್ (ಅದಾದಿ ಪ) ಎಂದರೆ ಕೊಲ್ಲು, ಸಂಹರಿಸು. ಅರಿ–ಶತ್ರುಗಳನ್ನು, ಹನ್–ಸಂಹರಿಸುವವನೇ, ಶತ್ರು-ಸಂಹಾರಕನೇ ಎಂದರ್ಥ. ಪಾಣಿನಿಯು 'ಬ್ರಹ್ಮಭ್ರೂಣವೃತ್ರೇಷು ಕ್ವಿಪ್' (ಪಾ. ೩/೮/೮೭) ಎಂದು ಬ್ರಹ್ಮಹಾ-ಬ್ರಾಹ್ಮಣಘಾತಕ, ಭ್ರೂಣಹಾ-ಮಕ್ಕಳ ಘಾತಕ, ವೃತ್ರಹಾ–ವೃತ್ರಾಸುರನನ್ನು ಕೊಂದ ದೇವೇಂದ್ರ ಎಂದು ಮೂರು ಶಬ್ದಗಳಿಗೆ ಮಾತ್ರ ಕ್ವಿಪ್ ವಿಧಾನ ಮಾಡಿದ್ದಾನೆ. ಆದರೆ ನ್ಯಾಸ-ಕಾರರು 'ಪ್ರಾಯಿಕಶ್ಚಾಯಂ ಕ್ವಿಪ್' ಎಂದು ಹೇಳಿ ಅದು ಅನೇಕ ಕಡೆ ಬಂದಿರುವುದನ್ನು ತೋರಿಸಿದ್ದಾರೆ—ಮಧುಹಾ, ಶತ್ರುಹಾ ಇತ್ಯಾದಿ. ಅದರಂತೆ ಅರಿಹನ್ ಎಂಬ ರೂಪವೂ ಸಾಧು (ಕಕ.). ಇದು ನಕಾರಾಂತ ಪುಲ್ಲಿಂಗಶಬ್ದ. ಪ್ರಥಮಾ ವಿಭಕ್ತಿಯಲ್ಲಿ ಅರಿಹಾ । ಅರಿಹಣೌ । ಅರಿಹಣಃ ಎಂದು ರೂಪ ವಾಗುತ್ತದೆ. ಅರಿ ಶಬ್ದಕ್ಕೆ ಚಕ್ರವೆಂದೂ ಅರ್ಥವಿದೆ. 'ಅರಿಶ್ಚಕ್ರಂ ರಥಪದಂ ರಥಾಂಗಂ ಕೇಶವಾಯುಧಮ್' ಎಂದು ವೈಜಯಂತೀಕೋಶವಿದೆ. ಪದ್ಮ-ಪುರಾಣದಲ್ಲಿ 'ಪವಿತ್ರಂ ಚರಣಂ ನೇಮಿ—ರರಿಶ್ಚಕ್ರಂ ಸುದರ್ಶನಮ್' ಎಂದು ವಿಷ್ಣುಚಕ್ರಕ್ಕೆ ಅನೇಕ ಹೆಸರುಗಳಿವೆಯೆಂದು ಶ್ರೀ ವಾದಿರಾಜರು ಯುಕ್ತಿಮಲ್ಲಿಕಾದಲ್ಲಿ (ಶ್ಲೋ. ೫೯೦) ಹೇಳಿದ್ದಾರೆ. ಆ ಅರ್ಥವನ್ನೇ ಬಳಸಿ-ಕೊಂಡು ಗು.ಸಾ.ದಲ್ಲಿ ಅರಿ–ಸುದರ್ಶನ ಮುದ್ರಾಧಾರಣದಿಂದ, ಹನ್–ಭಕ್ತರ ಪಾಪಗಳನ್ನು ಪರಿಹರಿಸುವವನೇ ಎಂದೂ ಅರ್ಥ ಹೇಳಿದ್ದಾರೆ. ಆದರೆ ಈ ಅರ್ಥ ಪ್ರಕೃತ ಸಂದರ್ಭಕ್ಕೆ (ಕೇವಲ ಯುದ್ಧದ ವರ್ಣನೆಯೇ ಇರುವುದರಿಂದ) ಅಷ್ಟು ಸಮಂಜಸವಾಗಿ ಹೊಂದುವುದಿಲ್ಲ.

ಗ) ಉದ್ಗದೋದ್ದಾಮಬಾಹೋ ಎಂಬುದು ಒಂದೇ ಸಮಾಸ-ಪದವೂ ಆಗುತ್ತದೆ. ಉದ್ಗದ, ಉದ್ದಾಮಬಾಹೋ ಎಂದು ಎರಡು ಭಿನ್ನ-ಪದಗಳೂ ಆಗುತ್ತದೆ. a) ಉತ್ಕೃಷ್ಟಾ ಚ ಸಾ ಗದಾ ಚ—ಉದ್ಗದಾ (ಕಕ. ವಿ. ಥ.)। ಉತ್ ಎಂಬ ಉಪಪದ ಉತ್ಕೃಷ್ಟ ಎಂಬ ಅರ್ಥದಲ್ಲಿ ಬಂದಿದೆ. ಆದ್ದರಿಂದ ಉದ್ಗದಾ ಎಂದರೆ ಉತ್ಕೃಷ್ಟವಾದ ಗದೆ ಎಂದರ್ಥ. ಕೃಷ್ಣನ ಗದೆಗೆ ಕೌಮೋದಕೀ ಎಂದು ಹೆಸರು. ಅದರ ಮಹಿಮೆಯನ್ನು ಮುಂದೆ ವಿವರಿಸಲಾಗಿದೆ. ಭೀಮನ ಗದೆಯ ಮಹಿಮೆಯನ್ನು ಮಯಾಸುರ

(ದೈತ್ಯರ ಬಡಗಿ) ಅರ್ಜುನನ ಮುಂದೆ ಹೀಗೆ ವರ್ಣಿಸಿದ್ದಾನೆ—

ಅಸ್ತಿ ಬಿಂದುಸರಸ್ಯಗ್ರ್ಯಾ ಗದಾ ಚ ಕುರುನಂದನ ॥

ಹೇ ಅರ್ಜುನ, ಬಿಂದುಸರೋವರದಲ್ಲಿ ಒಂದು ಉಗ್ರವಾದ ಗದೆ ಇದೆ.

ನಿಹಿತಾ ಯೌವನಾಶ್ವೇನ ರಾಜ್ಞಾ ಹತ್ವಾ ರಣೇ ರಿಪೂನ್ ।
ಸುವರ್ಣಬಿಂದುಭಿಶ್ಚಿತ್ರಾ ಗುರ್ವೀ ಭಾರಸಹಾ ದೃಢಾ ॥

ಈ ಗದೆಯನ್ನು ಮಾಂಧಾತಚಕ್ರವರ್ತಿಯ ತಂದೆಯಾದ ಯೌವನಾಶ್ವನು ಯುದ್ಧದಲ್ಲಿ ಶತ್ರುಗಳನ್ನು ಸಂಹಾರಮಾಡಿ ಕೊನೆಗೆ ಅದನ್ನು ಬಿಂದುಸರೋವರದಲ್ಲಿ ಇಟ್ಟಿದ್ದನು. (ಅದು ಇದುವರೆಗೂ ಅಲ್ಲೇ ಇದೆ.) ಅದಕ್ಕೆ ಬಂಗಾರದ ಬಿಂದು (ಚುಕ್ಕೆ) ಗಳಿಂದ ಕೆತ್ತನೆ ಕೆಲಸ ಮಾಡಿದೆ. ಬಹಳ ಭಾರವುಳ್ಳದ್ದೂ, ದೃಢವಾದುದೂ ಆಗಿರುವುದಲ್ಲದೆ ಬಹಳ ಬಲಿಷ್ಠರು ಮಾತ್ರವೇ ಅದನ್ನು ಎತ್ತಲು ಸಾಧ್ಯ.

ಸಾ ವೈ ಶತಸಹಸ್ರಸ್ಯ ಸಮ್ಮಿತಾ ಶತ್ರುಘಾತಿನೀ ।
ಅನುರೂಪಾ ಚ ಭೀಮಸ್ಯ ಗಾಂಡೀವಂ ಭವತೋ ಯಥಾ ॥

(ಸಭಾ. ೩ ಅ. ೬-೮ ಶ್ಲೋ.)

'ಅದು ಲಕ್ಷ ಮಣ ಭಾರವುಳ್ಳದ್ದು. ಶತ್ರುಗಳನ್ನು ಧ್ವಂಸ ಮಾಡಲು ಬಹಳ ಪಟುವಾಗಿದೆ. ನಿನಗೆ (ಅರ್ಜುನನಿಗೆ) ಗಾಂಡೀವ ಧನುಸ್ಸು ಹೇಗೆ ಯೋಗ್ಯವಾದ ಆಯುಧವೋ ಹಾಗೆ ಈ ಗದೆ ಭೀಮನಿಗೆ ತಕ್ಕಂಥಾ (ಯೋಗ್ಯವಾದ) ಆಯುಧವಾಗಿದೆ.' ಈ ವಿಷಯವನ್ನು ಬಲ್ಲವರಾದ್ದರಿಂದಲೇ ಪಂಡಿತಾಚಾರ್ಯರು ವಾಯುಸ್ತುತಿಯ ಐದನೇ ಶ್ಲೋಕದಲ್ಲಿ 'ಉದ್ಯದ್ವಿದ್ಯುತ್-ಪ್ರಚಂಡಾಂ ನಿಜರುಚಿನಿಕರವ್ಯಾಪ್ತ'...

b) ಉದ್ಗದಯಾ ಉದ್ದಾಮಃ—ಉಚ್ಛೃಂಖಲಃ ಬಾಹುಃ ಯಸ್ಯ ಸಃ ಉದ್ಗದೋದ್ದಾಮಬಾಹುಃ (ಕಕ.) ತಸ್ಯ ಸಂಬುದ್ಧಿಃ, ಉದ್ಗದೋದ್ದಾಮಬಾಹೋ—ಉಚ್ಛೃಂಖಲ ಹಸ್ತ (ವಿ.ಥ.) ಅಂಥಾ ಗದೆಯಿಂದ, ಉದ್ದಾಮ-ತಡೆಯಿಲ್ಲದ ಅಥವಾ ಆತಂಕವಿಲ್ಲದ, ಬಾಹೋ-ತೋಳುಗಳುಳ್ಳವನೇ! ಕಕ. ಪ್ರಕಾರ— 'ಬಾಹೋಃ' ಎಂದು ಷಷ್ಠ್ಯಂತರೂಪ. ಇದನ್ನು ಅವರು

' ತವ ' ಶಬ್ದಕ್ಕೆ ವಿಶೇಷಣವಾಗಿ ಅನ್ವಯಿಸುತ್ತಾರೆ. c) ಉದ್ಗದ ಎಂಬುದೇ ಬೇರೆ ಪದವಾದರೆ ಹೀಗೆ ವಿಗ್ರಹ ಹೇಳಬೇಕು -- ಉತ್ಕೃಷ್ಟಾ ಗದಾ ಯಸ್ಯ, ತತ್ಸಂಬುದ್ಧಿಃ ಉದ್ಗದ (ವಿ.) ಲಕ್ಷ ಮಣ ಭಾರವುಳ್ಳ, ಸುವರ್ಣಬಿಂದು ಗಳಿಂದ ಚಿತ್ರಿತವಾದ ಮಹಾ ಬಲಿಷ್ಠವಾದ ಗದೆಯನ್ನು ಧರಿಸಿದವನೇ ಎಂದರ್ಥ. d) ಉದ್ದಾಮಃ- ಉಚ್ಛೃಂಖಲಃ ಬಾಹುಃ ಯಸ್ಯ, ತಸ್ಯ ಸಂಬುದ್ಧಿಃ, ಉದ್ದಾಮಬಾಹೋ (ವಿ.) ಉದ್ದಾಮ- ಉಚ್ಛೃಂಖಲವಾದ ಎಂದರೆ ಅಡೆತಡೆಯಿಲ್ಲದ, ಯಥೇಚ್ಛವಾಗಿ ವ್ಯವಹರಿಸುವ, ಬಾಹು-ತೋಳು ಗಳುಳ್ಳವನೇ ಎಂದರೆ ಅಪ್ರತಿಹತವಾದ ಭುಜಪರಾಕ್ರಮವುಳ್ಳವನೇ! ಎಂದರ್ಥ.

e) ಗು ಸಾ. ಟೀಕೆಯಲ್ಲಿ ಹೇಳಿದ ವಿಶೇಷಾರ್ಥ— ಉತ್ಕೃಷ್ಟಾ ಚ ಸಾ ಗದಾ ಚ ಉದ್ಗದಾ। ಉದ್ಗದಯಾ ಉದ್ದಾಮೌ— ಉದ್ಗದೋದ್ದಾಮೌ (ತೃತೀಯಾ ತತ್ಪುರುಷ)। ಉದ್ಗದೋದ್ದಾಮೌ ಬಾಹೂ ಯಸ್ಯ ಸಃ ಉದ್ಗದೋದ್ದಾಮಬಾಹುಃ (ಬಹುವ್ರೀಹಿ)। ತಸ್ಯ ಸಂಬುದ್ಧಿಃ। " ಓ ಮುಖ್ಯಪ್ರಾಣದೇವ! ನೀವು ಮೂಲರೂಪದಲ್ಲಿಯೂ ಭೀಮಸೇನಾವತಾರ ದಲ್ಲಿಯೂ ಗದಾಯುಧವನ್ನು ಕೈಯಲ್ಲಿ ಧರಿಸಿ ಶತ್ರುಗಳನ್ನು ಸಂಹರಿಸಿರುವಿರಿ. ನಿಮ್ಮ........ಗದಗೆ ಸಮಾನವಾದ ಗದೆಯು ಶ್ರೀಹರಿಯನ್ನೂ ನಿಮ್ಮನ್ನೂ ಬಿಟ್ಟು ಉಳಿದ ಶ್ರೀ ರುದ್ರದೇವರೇ ಮೊದಲಾದ ಯಾರಲ್ಲಿಯೂ ಇಲ್ಲ" ಎಂದು ಸಂಕ್ಷೇಪವಾಗಿ ಅರ್ಥ ಹೇಳಿದ್ದಾರೆ. (ಲೇ.) ಇದನ್ನು ವಿಸ್ತರಿಸಿದರೆ ಅವರ ಮಾತಿನ ಸ್ವಾರಸ್ಯ ತಿಳಿಯುತ್ತದೆ.

f) ಗದೆಯಲ್ಲೇ ವೈಶಿಷ್ಟ್ಯ— ಉದ್ಗದಾ ಎಂಬಲ್ಲೇ ವಿಶೇಷವಿದೆ. ಏಕೆಂದರೆ ಅವರು ಹೇಳುವಂತೆ ಶ್ರೀವಿಷ್ಣುವನ್ನೂ ಮುಖ್ಯಪ್ರಾಣನನ್ನೂ ಬಿಟ್ಟು ಬೇರೆ ಯಾವ ದೇವತೆಯೂ ಗದೆಯನ್ನು ಆಯುಧವಾಗಿ ಧರಿಸಿದಂತೆ ಪ್ರಸಿದ್ಧಿಯಿಲ್ಲ. ವಿಷ್ಣುವಿನ ಗದೆಗೆ ' ಕೌಮೋದಕೀ ' ಎಂದು ಹೆಸರು. ಅಮರ ದಲ್ಲಿ ಸಹ ' ಶಂಖೋ ಲಕ್ಷ್ಮೀಪತೇಃ ಪಾಂಚಜನ್ಯಃ ' ಎಂದಾರಂಭಿಸಿ ' ಕೌಮೋದಕೀ ಗದಾ ' ಎಂದು ಹೇಳಿದೆ. ಅಲ್ಲದೆ ಗದಾಮುದ್ರೆ ಧರಿಸುವಾಗ ' ಕೌಮೋದಕೀ ಕರೇ ಯಸ್ಯ ತಂ ನಮಾಮಿ ಗದಾಧರಮ್ '— ಯಾರ ಕೈಯಲ್ಲಿ ಕೌಮೋದಕೀ ಎಂಬ ಗದೆ ಇದೆಯೋ ಅಂಥಾ ಗದಾಧರನನ್ನು

(ವಿಷ್ಣುವನ್ನು) ನಮಸ್ಕರಿಸುತ್ತೇನೆ—ಎಂಬ ಮಂತ್ರ ಹೇಳಿಕೊಳ್ಳುವುದು ಹಿರಿಯರ ಆಚಾರ. ಇದರಲ್ಲಿ ಆ ವಿಷ್ಣು 'ಗದಾಧರ'ನೆಂದೂ, ಅವನ ಗದೆಗೆ 'ಕೌಮೋದಕೀ'ಯೆಂಧು ಹೆಸರೆಂದೂ ಸ್ಪಷ್ಟವಾಗಿ ಹೇಳಿದೆ. ಇನ್ನು ವಾಯು ದೇವರ ತಂತ್ರಸಾರೋಕ್ತ ಧ್ಯಾನಶ್ಲೋಕದಲ್ಲಿ 'ಧ್ಯಾಯೇದ್ ಗದಾಭಯಕರಂ' ಎಂಧು ಬಲಭಾಗದ ಮೇಲ್ಗೈಯಲ್ಲಿ ಗದೆಯನ್ನೂ, ಎಡಭಾಗದ ಮೇಲ್ಗೈಯಲ್ಲಿ ಅಭಯಮುದ್ರೆಯನ್ನೂ ಧರಿಸಿದ್ದಾನೆಂದು ಹೇಳಿದೆ. ಇದರಿಂದ ಮೂಲ ವಾಯುದೇವರೂ ಗದೆಯನ್ನು ಧರಿಸಿದ್ದಾರೆಂದು ಸ್ಪಷ್ಟವಾಯಿತು. ವಾಯು-ದೇವರ ಪ್ರಥಮಾವತಾರ ಹನುಮಂತ ಗದಾ ಧರಿಸಿದ್ದಾನೆಂಬ ವರ್ಣನೆ ನನಗೆ ತಿಳಿದಮಟ್ಟಿಗೆ ಯಾವ ಧ್ಯಾನಶ್ಲೋಕದಲ್ಲೂ ಬಂದಿಲ್ಲ. ಅಷ್ಟೇ ಅಲ್ಲದೆ ರಾಮಾಯಣದಲ್ಲಿ ಎಲ್ಲೂ ಹನುಮಂತ ಗದಾ ಪ್ರಯೋಗ ಮಾಡಿದ ವರ್ಣನೆ ಯಾಗಲಿ, ಗದೆಯಿಂದ ಶತ್ರುಗಳನ್ನು ಸಂಹರಿಸಿದ ಉಲ್ಲೇಖವಾಗಲಿ (ನನಗೆ ತಿಳಿದಮಟ್ಟಿಗೆ) ಬಂದಿಲ್ಲ. ಅನೇಕ ಹನುಮಂತನ ಚಿತ್ರಗಳಲ್ಲಿ (ಚಿತ್ರಪಟಗಳಲ್ಲಿ) ಹನುಮಂತ ಗದೆ ಹಿಡಿದಂತೆ ತೋರಿಸಿದ್ದಾರೆ; ಇದು ಅವನು ವಾಯುಕುಮಾರ ನೆಂಬುದಕ್ಕೆ ಹೆಗ್ಗುರುತೆಂದು ಹೇಳಬೇಕಾಗುತ್ತದೆ. ಅಥವಾ ಹನುಮಂತನ ಪ್ರತಿಮೆ (ಅಥವಾ ಚಿತ್ರ) ಎಲ್ಲೆಲ್ಲಿ ಇರುತ್ತದೋ ಅಲ್ಲೆಲ್ಲಾ ಪ್ರಥಮ ಗೋಲಕ ದಲ್ಲಿ ಹನುಮಂತ-ಭೀಮ-ಮಧ್ವ ಮೂರೂ ರೂಪಗಳನ್ನು ಚಿಂತಿಸಬೇಕೆಂದು ಪ್ರಾಚೀನ ಶಾಸ್ತ್ರೀಯ ಸಂಪ್ರದಾಯವಿದೆ. ಅದರಂತೆ ಹನುಮನ ಚಿತ್ರದಲ್ಲಿರುವ ಗದೆ ಭೀಮರೂಪದ ದ್ಯೋತಕವೆಂದೇ ತಿಳಿಯಬೇಕು. ಭೀಮಸೇನ ಗದಾಪಾಣಿ ಯೆಂಬುದು ಜಗತ್ಪ್ರಸಿದ್ಧ; ಭೀಮನ ಗದೆಯ ಮಹಿಮೆ ಸಭಾಪರ್ವದಲ್ಲಿ ಬಂದಿರುವುದನ್ನು ಈಗತಾನೇ ಗ ಖಂಡದಲ್ಲಿ ಹೇಳಿದ್ದೇವೆ. ಕೌಮೋದಕೀ ಎಂಬ ವಿಷ್ಣುಗದೆಯ ಮಹಿಮೆಯು ನಾರಾಯಣವರ್ಮದಲ್ಲಿ (ಭಾಗವತ ಷಷ್ಠಸ್ಕಂಧ, ೮ ಅ. ೨೪ ಶ್ಲೋ.) ಹೇಳಿರುವ ಆದರ ಪ್ರಾರ್ಥನಾಶ್ಲೋಕದಿಂದ ಹೊರಬೀಳುತ್ತದೆ—

ಗದೇಽಶನಿಸ್ಪರ್ಶನವಿಸ್ಫುಲಿಂಗೇ
ನಿಷ್ಪಿಂಢಿ ನಿಷ್ಪಿಂಢ್ಯಜಿತಪ್ರಿಯಾಽಸಿ ।
ಕೂಷ್ಮಾಂಡ ವೈನಾಯಕ-ಯಕ್ಷ-ರಕ್ಷೋ-
ಭೂತ-ಗ್ರಹಾಂಶ್ಚೂರ್ಣಯ ಚೂರ್ಣಯಾರೀನ್ ॥

(ಶಬ್ದಾರ್ಥ) ಅಶನಿ-ಸಿಡಿಲು ಅಥವಾ ವಜ್ರಾಯುಧ, ವಿಸ್ಫುಲಿಂಗ-ಬೆಂಕಿಯ ಕಿಡಿ, ನಿಷ್ಪಿಂಢಿ ನಿಷ್ಪಿಂಢಿ-ಅರೆದುಹಾಕು, ರುಬ್ಬಿ ಹಿಟ್ಟುಹಿಟ್ಟು ಮಾಡು ಅಥವಾ ಮುದ್ದೆಮುದ್ದೆ ಮಾಡಿಬಿಡು, ಅಜಿತ-(ಜಿತ-ಗೆಲ್ಲಲ್ಪಟ್ಟವನು, ಅಜಿತ-ಸೋಲದವನು) ಯಾರಿಗೂ ಸೋಲದೆ, ಎಲ್ಲರನ್ನೂ ಗೆಲ್ಲುವ, ಭಗವಂತನಾದ ಶ್ರೀಹರಿ. ಅಸಿ-(ಕ್ರಿಯಾಪದ) ಆಗಿದ್ದೀಯೆ. 'ಕೂಷ್ಮಾಂಡ' ಮೊದಲಾದುವು ಬೇರೆ ಬೇರೆ ಗುಂಪಿಗೆ ಸೇರಿದ ದುಷ್ಟ ಭೂತಗಣಗಳು. ಚೂರ್ಣಯ-ಪುಡಿಪುಡಿ ಮಾಡು.

(ಭಾವಾರ್ಥ) ಹೇ ಕೌಮೋದಕೀ ಎಂಬ ವಿಷ್ಣುಗದೆಯೇ! (ಗದಾಶಬ್ದ ಸಂಸ್ಕೃತದಲ್ಲಿ ಸ್ತ್ರೀಲಿಂಗ) ನೀನು ಶ್ರೀವಿಷ್ಣುವಿಗೆ ಪ್ರಿಯಳಾಗಿದ್ದೀಯೆ. ಸಿಡಿಲು ಹೊಡೆದರೆ ಅಥವಾ ಬೆಟ್ಟಗಳ ಮೇಲೆ ವಜ್ರಾಯುಧ ಪ್ರಯೋಗ ಮಾಡಿದಾಗ ಯಾವ ರೀತಿ ಬೆಂಕಿಯ ಕಿಡಿಗಳು ಹೊರಡುವುವೋ ಅದೇ ರೀತಿ ನೀನು ಪ್ರಹಾರ ಮಾಡಿದರೇ ಸಾಕು, ಛಟ್-ಫಟ್ ಎಂದು ಬೆಂಕಿಯ ಕಿಡಿಗಳು ಏಳುವುವು. ನಮ್ಮನ್ನು ಗೋಳಾಡಿಸುವ ದುಷ್ಟಭೂತಗಳಾದ ಕೂಷ್ಮಾಂಡ, ಗಣಪತಿಯ ಕೈಕೆಳಗಿನ ದುಷ್ಟಭೂತಗಳು (ವಿನಾಯಕ-ಗಣೇಶ; ಅವನಿಗೆ ಸೇರಿದ್ದು ವೈನಾಯಕ), ಯಕ್ಷರು, ರಾಕ್ಷಸರು, ಭೂತಗಳು, ದುಷ್ಟಗ್ರಹಗಳು ಇವರೇ ಮೊದಲಾದವರನ್ನು ರುಬ್ಬಿದಂತೆ ಮುದ್ದೆ-ಮುದ್ದೆ ಮಾಡಿ ಓಡಿಸು. ಸಕಲ ಶತ್ರುಗಳನ್ನೂ ಪುಡಿಪುಡಿ ಮಾಡಿಬಿಡು (ಧೂಳೆಬ್ಬಿಸಿಬಿಡು). ಈ ಶ್ಲೋಕ ದಿಂದ ಕೌಮೋದಕೀ ಎಂಬ ವಿಷ್ಣುಗದೆ ತಗಲಿದರೇ ಸಾಕು, ಶತ್ರುಗಳು_ಅನಿಷ್ಟ ಗಳು ಎಲ್ಲವೂ ಹುಡಿಗುಟ್ಟಿ ಹೋಗುತ್ತಾರೆಂಬುದು ಸ್ಪಷ್ಟವಾಗುತ್ತದೆ.

ಅಂತೂ ಒಟ್ಟಿನಲ್ಲಿ ಏನು ಹೇಳಿದಂತಾಯಿತೆಂದರೆ—ಗದೆ ಧರಿಸಿದವರೆಂದರೆ ವಿಷ್ಣು, ಮುಖ್ಯಪ್ರಾಣ ಅಥವಾ ಭೀಮಸೇನ ಈ ಮೂವರೇ, ನಾಲ್ಕನೆಯವರು ಬೇರೆ ಯಾರೂ ಇಲ್ಲ. (ಯಮಧರ್ಮರಾಜನ ಆಯುಧ ದಂಡವೇ ಹೊರತು ಗದೆಯಲ್ಲ; ಆದ್ದರಿಂದಲೇ ಅವನ ಹೆಸರುಗಳು 'ಕಾಲೋ ದಂಡಧರಃ ಶ್ರಾದ್ಧದೇ-ವೋ ವೈವಸ್ವತೋಽನ್ತಕಃ' ಎಂದು ಅಮರದಲ್ಲಿ ಹೇಳಿದೆ.) ಅಷ್ಟೇ ಅಲ್ಲದೆ ಆ ಗದೆಗಳ ಶಕ್ತಿಯೂ ಅದ್ಭುತವಾಗಿದೆ. ಹೀಗೆ ಗದೆಯನ್ನು ಧರಿಸು ವುದೇ ಶ್ರೀಕೃಷ್ಣನ ಮತ್ತು ಭೀಮನ ವೈಶಿಷ್ಟ್ಯ ಎಂಬುದು ಗು.ಸಾ. ಟೀಕಾ-

ಕಾರರ ಹೃದ್ಗತ. ಇದನ್ನು ಸೂಚಿಸುವುದಕ್ಕಾಗಿಯೇ ವಾಯುಸ್ತುತಿಯ ಈ ಶ್ಲೋಕದಲ್ಲಿ ಶ್ರೀಕೃಷ್ಣನನ್ನೂ ಭೀಮನನ್ನೂ ಉದ್ಗದ ಎಂದೂ ಉದ್ಗದೋ-ದ್ದಾಮಬಾಹೋ ಎಂದೂ ಸಂಬೋಧಿಸಿದ್ದಾರೆಂದು ತಿಳಿಯಬೇಕು. ಇಂಥಾ ಗದೆಯನ್ನು ತೋಳಿನಲ್ಲಿ ಹಿಡಿದು ಲೀಲಾಜಾಲವಾಗಿ ತಿರುಗಿಸಬೇಕಾದರೆ, ಪ್ರಯೋಗಿಸಬೇಕಾದರೆ ಆ ಬಾಹುಗಳು ಎಷ್ಟು ಬಲಿಷ್ಠವಾಗಿರಬೇಕೆಂಬುದು ಸ್ವಯಂಸಿದ್ಧ. (ಇನ್ನೊಂದು ಸಣ್ಣ ಸಂಶಯ. ಕಕ. ಟೀಕೆಯಲ್ಲಿ ವಿಗ್ರಹ ಹೇಳುವಾಗ [ಖಂಡ ೧-b] ಉದ್ದಾಮಃ ಬಾಹುಃ ಯಸ್ಯ ಸಃ ಎಂದು ಏಕವಚನ ಗ್ರಹಣ ಮಾಡಿದರು. ಗು.ಸಾ.ದಲ್ಲಿ ಉದ್ಗದೋದ್ದಾಮೌ ಬಾಹೂ ಯಸ್ಯ ಸಃ [ಖಂಡ ೧-c] ಎಂದು ದ್ವಿವಚನ ಹೇಳಿದರು. ಎರಡರಲ್ಲಿ ಯಾವುದು ಸರಿ? ಯಾವುದು ತಪ್ಪು? (ಉತ್ತರ) ಎರಡಕ್ಕೂ ಬೇರೆ ಬೇರೆ ವಿವಕ್ಷೆ (ಹೇಳುವ ಉದ್ದೇಶ)ಇರುವುದರಿಂದ ಎರಡೂ ಸರಿ. ಹೇಗೆಂದರೆ—ಗದೆಯನ್ನು ಧರಿಸುವುದು ಒಂದು ಕೈಯಲ್ಲೇ ಹೊರತಾಗಿ ಎರಡೂ ಕೈಗಳಿಂದ ಒಟ್ಟಿಗೆ ಹಿಡಿಯುವುದಿಲ್ಲ; ಈ ದೃಷ್ಟಿಯಿಂದ ಕಕ. ಟೀಕೆಯಲ್ಲಿ ಏಕವಚನ ಗ್ರಹಣ ಮಾಡಿದರು. ಗದೆ ಹಿಡಿಯುವುದು ಒಂದು ಕೈಯೇ ಆದರೂ ಭೀಮನ ತೋಳುಗಳು ಎರಡೇ ಹೊರತು ಒಂದಲ್ಲ. ಒಂದು ತೋಳು ಬಹಳ ಬಲಿಷ್ಠವಾಗಿದ್ದರೆ ಇನ್ನೊಂದು ತೋಳೂ ಅಷ್ಟೇ ಬಲಿಷ್ಠವಾಗಿರಲೇಬೇಕು. ಈ ದೃಷ್ಟಿ [ವಿವಕ್ಷೆ]ಯಿಂದ ಗು.ಸಾ. ದ್ವಿವಚನ ಮಾಡಿದರು. ಹೀಗೆ ಎರಡೂ ತಪ್ಪಲ್ಲ.)

(g) **ಮಧ್ವಾಚಾರ್ಯರೇ ಹಿಂದೆ ಭೀಮಸೇನ ಆಗಿದ್ದರು**— ಗು.ಸಾ.ದಲ್ಲಿ ಈ ಪದಕ್ಕೆ ಅರ್ಥ ಹೇಳುವ ಪ್ರಸಂಗದಲ್ಲೇ ಮತ್ತೊಂದು ವಿಚಾರವನ್ನೂ ತಿಳಿಸಿದ್ದಾರೆ. ಅದನ್ನೇ ಸಂಗ್ರಹಮಾಡಿ ಸ್ಪಷ್ಟಪಡಿಸುವೆನು. ಮಧ್ವವಿಜಯದ ಹತ್ತನೇ ಸರ್ಗದ ೪೯ನೇ ಶ್ಲೋಕದಲ್ಲಿ ಶ್ರೀಮದಾಚಾರ್ಯರು ಕುರುಕ್ಷೇತ್ರಕ್ಕೆ ಹೋಗಿದ್ದಾಗ ಸತ್ಯತೀರ್ಥಾದಿ ಶಿಷ್ಯರಿಗೆ 'ಭೂಮಿಯ ಅಡಿಯಲ್ಲಿ ಹುದುಗಿದ್ದ' ಭೀಮನ ಗದೆಯನ್ನು ಎತ್ತಿ ತೋರಿಸಿದರೆಂದೂ ಅದರಿಂದ (ಅದನ್ನು ಎತ್ತಿದ್ದರಿಂದ) ಇವರು ಹಿಂದೆ ಭೀಮಸೇನನಾಗಿದ್ದರೆಂಬುದು ಸ್ಪಷ್ಟವಾಗುವುದೆಂದೂ ಆ ಶಿಷ್ಯರೆಲ್ಲ ಆಶ್ಚರ್ಯಚಕಿತರಾದರೆಂದೂ* ಹೇಳಿದೆ,

---

* 'ಸತ್ಯಾತ್ಮಾದ್ಯೈಃ....ವಿಸ್ಮೇರೈಃ - ಸ್ವೈರ್ನಿಜನೃಪತನೂಹೇತಿದೃಷ್ಟ್ವಾ....!'

ಭೂಮಿಯಲ್ಲಿ ಹುದುಗಿದ್ದ ಗದೆಯನ್ನು ಗುರುತಿಸಿ 'ಇದು ಭೀಮನ ಗದೆ' ಎಂದೂ, 'ಈ ಗದೆಯನ್ನು ಭೀಮನಲ್ಲದೆ ಬೇರೆ ಯಾರಿಂದಲೂ ಎತ್ತಲು ಸಾಧ್ಯವಿಲ್ಲ' ಎಂದೂ ಹೇಳಿದ್ದಲ್ಲದೆ ಅದನ್ನು ಹಿಡಿದು ಎತ್ತಿ ತೋರಿಸಿದ್ದರಿಂದಲೂ ಮಧ್ವಾಚಾರ್ಯರೇ ಹಿಂದೆ ಭೀಮಸೇನನಾಗಿದ್ದರೆಂಬುದು ಸ್ಪಷ್ಟವಾಗುವುದು. ಈ ವಿಚಾರವನ್ನೇ ಪಂಡಿತಾಚಾರ್ಯರು ಮುಂದಿನ ೨೫ನೇ ಶ್ಲೋಕದಲ್ಲಿ 'ಪೂರ್ವಭೀಮ' ಎಂಬ ಸಂಬೋಧನೆಯಿಂದ ಸ್ಪಷ್ಟವಾಗಿ ಹೇಳಿದ್ದಾರೆ.

h) ಉದ್ದಾಮಬಾಹೋ—ವಿಶೇಷಾರ್ಥ—'ಉದ್ಗದ' ಎಂಬುದು ಭಿನ್ನಪದವೆಂದು ಗ್ರಹಣ ಮಾಡಿದರೆ ಹೇಗೆ ವಿಶೇಷಾರ್ಥವುಂಟೋ ಉದ್ದಾಮ-ಬಾಹೋ-ಗೂ ವಿಶೇಷಾರ್ಥವುಂಟೆಂದು ಗು.ಸಾ. ತೋರಿಸುತ್ತಾರೆ. ಭೀಮನಿಗೆ ಗದೆಯೇ ಮುಖ್ಯವಾದ ಆಯುಧವಾಗಿದ್ದರೂ, ಅವನ ಬಲ—ಅವನ ಶಕ್ತಿ ಗದೆಗೇ ಸೀಮಿತವಾಗಿರಲಿಲ್ಲ. ಅರ್ಜುನನ ಬಲ-ಶಕ್ತಿ-ಸಾಹಸ ಎಲ್ಲವೂ ಅವನ ಗಾಂಡೀವ ಧನುಸ್ಸನ್ನೇ ಅವಲಂಬಿಸಿತ್ತು. ಆ ಧನುಸ್ಸನ್ನು ಕಳೆದುಕೊಂಡಾಗ ಅರ್ಜುನ ಬಲಹೀನನಾಗುತ್ತಿದ್ದ. ಉದಾಹರಣೆಗೆ ಕೃಷ್ಣ ಪರಂಧಾಮಕ್ಕೆ ತೆರಳಿದ ಮೇಲೆ ಅರ್ಜುನ ಹಿಂದಿರುಗಿ ಹೋಗುವಾಗ ಅವನ ಬಳಿ ಗಾಂಡೀವ ಧನುಸ್ಸು ಇರಲಿಲ್ಲ; ಆದರಿಂದ ಅವನನ್ನು ದಾರಿಗಳ್ಳರೇ ಲೂಟಿ ಮಾಡಿಬಿಟ್ಟರು; ಅವನು ಮಂಕುತಿಮ್ಮನಾದ. ಆದರೆ ಭೀಮನ ವಿಚಾರ ಹಾಗಲ್ಲ. ಭೀಮನಿಗೆ ಗದೆ ಇದ್ದರೆ ಎಷ್ಟು ಬಲ-ಶಕ್ತಿ-ಸಾಹಸ ಉಂಟೋ ಗದೆ ಇಲ್ಲದಿದ್ದರೂ ಅವನ ಬಲವಾಗಲಿ ಶಕ್ತಿಯಾಗಲಿ ಉತ್ಸಾಹವಾಗಲಿ ಎಳ್ಳಷ್ಟೂ ಕುಗ್ಗುವುದಿಲ್ಲ. ಭೀಮನ ಬಲ-ಸ್ವರೂಪಭೂತ ಬಲ, ಆಯುಧವನ್ನಾಗಲಿ ವರವನ್ನಾಗಲಿ ಆಹಾರವನ್ನಾ-ಗಲಿ ವ್ಯಾಯಾಮವನ್ನಾಗಲಿ ಆಶ್ರಯಿಸಿದ ಬಲವಲ್ಲ. (ಈ ಅಂಶವನ್ನು ನಾವು ಮುಂದೆ, ಖಂಡ 316-ಚ-ದಲ್ಲಿ, ಸ್ಪಷ್ಟಪಡಿಸಲಿದ್ದೇವೆ). ಭೀಮನ ಅಂಗಾಂಗಗಳೆಲ್ಲವೂ ಬಲಮಯವೇ ಆಗಿದ್ದುವು. ಗಂಧಮಾದನ ಪರ್ವತದಲ್ಲಿದ್ದ ಸೌಗಂಧಿಕಾ ಪುಷ್ಪಗಳನ್ನು ತರಲು ಹೋದಾಗ ತನಗೆ ಅಡ್ಡಮಾಡಿದ ದೈತ್ಯರನ್ನು

(ಅರ್ಥ) ನಿಜ-ತಮ್ಮ, ನೃಪತನೂ-ಕ್ಷತ್ರಿಯರೂಪದ (ಭೀಮಾವತಾರರೂಪದ), ಹೇತಿ-ಆಯುಧವಾದ ಗದೆಯನ್ನು, ದೃಷ್ಟ್ವಾ-ಕಂಡದ್ದರಿಂದ ; ವಿಸ್ಮೇರೈಃ-ಆಶ್ಚರ್ಯಚಕಿತರಾದ ; ಸತ್ಯಾತ್ಮಾದ್ಯೈಃ-ಸತ್ಯತೀರ್ಥರೇ ಮೊದಲಾದ ; ಸ್ವೈಃ-ಶಿಷ್ಯರಿಂದ.

ಭೀಮ ಕಾಲಿನಿಂದಲೇ ತುಳಿದು ಕೆಲವರನ್ನು ನಾಶಮಾಡಿದನೆಂದೂ, ಕೆಲವರನ್ನು ಎದೆಯಿಂದಲೇ ತಿವಿದು ಸೋಲಿಸಿದನೆಂದೂ, ಕೆಲವರನ್ನು ಕೈಗಳಿಂದ ಬಡಚಿಹಾಕಿದನೆಂದೂ (ಖಂಡ 312 ನೋಡಿ) ವರ್ಣನೆ ಬರುತ್ತದೆ. ಹೀಗಿರುವಾಗ ಅವನ ಬಾಹುಬಲ ಅಪರಿಮಿತವಾಗಿತ್ತೆಂದು ಹೇಳುವುದೇನಿದೆ? ಗದೆಯಿಲ್ಲದಿದ್ದರೂ ಕೇವಲ ಬಾಹುಬಲದಿಂದಲೇ ಅವನಿಗೆ ಶತ್ರುಗಳನ್ನು ನಿಗ್ರಹಿಸುವ ಶಕ್ತಿಯಿತ್ತು. ಬಕನನ್ನೂ ಕಿರ್ಮೀರನನ್ನೂ ಹಿಡಿಂಬ-ಕೀಚಕಾದಿಗಳನ್ನೂ ಸಂಹರಿಸುವಾಗ—ಹೀಗೆಯೇ ಎಷ್ಟೋ ವೇಳೆ ಗದೆಯೇ ಇಲ್ಲದೆ ಕೇವಲ ಬಾಹುಬಲದಿಂದಲೇ ಶತ್ರುಗಳನ್ನು ಸದೆಬಡಿದಿರುವುದು ಇದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ ಭೀಮನಿಗೆ ಉದ್ದಾಮಬಾಹೋ ಎಂಬ ಬಿರುದು ಕೊಟ್ಟಿರುವುದು ಅತ್ಯಂತ ಸಮಂಜಸವಾಗಿದೆ. ಭೀಮನ ವಿಚಾರವೇ ಹೀಗಿರುವಾಗ ಅನಂತಶಕ್ತಿಯುಳ್ಳ ನಿರವಧಿಕ ಬಲಸ್ವರೂಪನಾದ ಶ್ರೀಕೃಷ್ಣನ ಮಹಿಮೆಯನ್ನು ಏನೆಂದು ಹೇಳೋಣ. (ಇಲ್ಲಿಗೆ ಗು.ಸಾ. ವಿಶೇಷ ವಿವರಣೆ ಮುಗಿಯಿತು.)

ಘ) a) ಅಕ್ಷೌ(ಕ್ಷೋ)ಹಿಣೀ—ಬಹ್ವ....ನಿಪುಣಂ ಎಂಬ ದೊಡ್ಡ ಸಮಸ್ತ ಪದದಲ್ಲಿ ಬಹು, ಅಕ್ಷೌಹಿಣೀ, ಅನೀಕ, ಕ್ಷಪಣ, ಸುನಿಪುಣಂ ಎಂದು ಐದು ಶಬ್ದಗಳಿವೆ. ಬಹು-ಶಬ್ದಕ್ಕೆ ವಿವರಣೆ ಅನವಶ್ಯಕ. ಅಕ್ಷೌಹಿಣೀ ಶಬ್ದಕ್ಕೆ ಅತ್ಯವಶ್ಯಕ. ಅನೇಕ ವಾಯುಸ್ತುತಿಯ ಮೂಲಪುಸ್ತಕಗಳಲ್ಲಿ 'ಬಹ್ವಕ್ಷೌಹಿಣ್ಯನೀಕ' ಎಂಬ ಪಾಠವೇ ದೊರಕುತ್ತದೆ. ಸಿದ್ಧಾಂತಕೌಮುದೀ ರೀತ್ಯಾ 'ಅಕ್ಷೌಹಿಣೀ' ಎಂಬ ರೂಪವೇ ಸಾಧು ಎಂದು ಸಿದ್ಧವಾದ್ದರಿಂದ ಈ ಪಾಠವೇ ಹೆಚ್ಚು ಬಳಕೆಯಲ್ಲಿದೆ. ಕಕ.ದಲ್ಲಿ ಮಾತ್ರ 'ಬಹ್ವಕ್ಷೋಹಿಣ್ಯನೀಕ—'ಎಂಬ ಪಾಠ ಬಳಸಿದ್ದಾರೆ. ಈ ಪ್ರಯೋಗವನ್ನು ಪುಷ್ಟೀಕರಿಸುತ್ತಾ ಈ ಪಾಠದ ಪಾದಟಿಪ್ಪಣಿಯಲ್ಲಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಅನೇಕ ಪ್ರಾಚೀನ ಗ್ರಂಥಗಳಲ್ಲೆಲ್ಲಾ 'ಅಕ್ಷೋಹಿಣೀ' ಎಂಬ ರೂಪವೇ ಕಂಡುಬರುತ್ತದೆ. ಆದ ಕಾರಣ ಇದೂ ಶುದ್ಧಪಾಠವೇ ಎನ್ನುತ್ತಾರೆ.

(ಶಬ್ದವ್ಯುತ್ಪತ್ತಿ) (ವ್ಯಾಕರಣಾಂಶ) ಊಹ ವಿತರ್ಕೇ (ಭ್ವಾ-ಆತ್ಮ)= ಊಹಿಸು, ಕಲ್ಪನೆ ಮಾಡು, ಎಂಬ ಧಾತುವಿನಿಂದ ಊಹಃ-ಕಲ್ಪನೆ ಎಂಬ

ಭಾವನಾವು ಆಗಿದೆ. ಊಹಃ ಅಸ್ಯಾಮಸ್ತೀತಿ ಊಹಿನೀ. ಊಹೆಯುಳ್ಳದ್ದು ಎಂಬರ್ಥದಲ್ಲಿ ಇನಿ ಪ್ರತ್ಯಯವೂ ಸ್ತ್ರೀಲಿಂಗದ ಙೀಪ್ (ಈ) ಪ್ರತ್ಯಯವೂ ಬಂದು ಊಹಿನೀ ಆಗುತ್ತದೆ, ಕಲ್ಪನೆಗೆ ಎಟಕುವಂಥಾದ್ದು ಎಂದು ಇದರ ಅರ್ಥ. ಅಕ್ಷ್ಣೋಃ ಊಹಿನೀ ಅಕ್ಷೌಹಿಣೀ । ಎರಡು ಕಣ್ಣುಗಳಿಂದ ನೋಡಿ ಕಲ್ಪನೆಗೆ ಬರುವ ಸೈನ್ಯಕ್ಕೆ ಅಕ್ಷೌಹಿಣೀ ಎಂದು ಹೆಸರು ; ಸಂಸ್ಕೃತದಲ್ಲಿ ಸೇನಾ ಶಬ್ದ ಸ್ತ್ರೀಲಿಂಗವಾದ್ದರಿಂದ (ಪ್ರಾಯಶಃ) ಇದೂ ಸ್ತ್ರೀಲಿಂಗವಾಗಿದೆ. 'ಅಕ್ಷಾ-ದೂಹಿನ್ಯಾಮುಪಸಂಖ್ಯಾನಮ್' ಎಂಬ ವಾರ್ತಿಕದಂತೆ ಅಕ್ಷ ಶಬ್ದದ ಮುಂದೆ ಊಹಿನೀ ಶಬ್ದ ಬಂದಾಗ ಗುಣಸಂಧಿಗೆ ಬದಲು ವೃದ್ಧಿಸಂಧಿಯಾಗುತ್ತದೆ. ಊಕಾರಕ್ಕೆ ವೃದ್ಧಿ ಬಂದು ಔ ಆಗುತ್ತದೆ ; ಆಗ ಅಕ್ಷ+ಔಹಿನೀ ಎಂದಾಗುತ್ತದೆ ; ಅಕಾರದ ಮುಂದೆ ಔಕಾರ ಬಂದದ್ದರಿಂದ ಪುನಃ ವೃದ್ಧಿಯಾಗಿ ಅಕ್ಷೌಹಿಣೀ ಎಂದಾಗುತ್ತದೆ. ವಾರ್ತಿಕದಂತೆ ಊಕಾರಕ್ಕೆ ವೃದ್ಧಿ ಬರದಿದ್ದರೆ ಅಕ್ಷ+ಊಹಿನೀ ಎಂಬುದು ಸೇರಿ ಗುಣಸಂಧಿಯಾಗುವುದರಿಂದ ಅಕ್ಷೋಹಿಣೀ ಎಂದಾಗುತ್ತದೆ. ಅಕ್ಷ ಎಂಬಲ್ಲಿ ಷ-ಕಾರವಿರುವುದರಿಂದ ಮುಂದಿನ ನ-ಕಾರಕ್ಕೆ ಣ-ಕಾರಾದೇಶ ಬಂದು 'ಣೀ' ಎಂದಾಗಿದೆ. ಇದು ವ್ಯಾಕರಣದ ವಿಷಯವಾಯಿತು. ಈಗ ಶಬ್ದಾರ್ಥಕ್ಕೆ ಹೋಗೋಣ.

ಶಬ್ದಾರ್ಥ—ಅಕ್ಷೋ(ಕ್ಷೌ)ಹಿಣೀ ಎಂಬುದು ಸೈನ್ಯದ ಕ್ಲೃಪ್ತಸಂಖ್ಯೆ. ಇದರ ವಿವರಣೆ ಮಹಾಭಾರತದ ಆದಿಪರ್ವದ ಪ್ರಾರಂಭದಲ್ಲೇ ಬಂದಿದೆ. ಅದರಂತೆ ೨೧,೮೭೦ ರಥಗಳೂ ಅಷ್ಟೇ ಆನೆಗಳೂ ಇರಬೇಕು. ಅದರ ಮೂರರಷ್ಟು ಕುದುರೆಗಳೂ, ಐದರಷ್ಟು ಪದಾತಿ (ಕಾಲಾಳು)ಗಳೂ ಇರಬೇಕು. ಎಂದರೆ ೬೫,೬೧೦ ಕುದುರೆಗಳೂ ೧,೦೯,೩೫೦ ಕಾಲಾಳುಗಳೂ ಇರಬೇಕು. ಇಂಥಾ ಚತುರ್ಬಲವುಳ್ಳ ಸೈನ್ಯಕ್ಕೆ ಒಂದು ಅಕ್ಷೋ(ಕ್ಷೌ)ಹಿಣೀ ಎಂದು ಹೆಸರು. ಇದನ್ನೇ ಭಾರತದಲ್ಲಿ—

> ಅಕ್ಷೌಹಿಣ್ಯಾಃ ಪ್ರಸಂಖ್ಯಾತಾ ರಥಾನಾಂ ದ್ವಿಜಸತ್ತಮಾಃ ॥
> ಸಂಖ್ಯಾಗಣಿತ-ತತ್ತ್ವಜ್ಞೈಃ ಸಹಸ್ರಾಣ್ಯೇಕವಿಂಶತಿಃ ॥ ೨೩ ॥
> ಶತಾನ್ಯುಪರಿ ಚೈವಾಷ್ಟೌ ತಥಾ ಭೂಯಶ್ಚ ಸಪ್ತತಿಃ ।
> ಗಜಾನಾಂ ಚ ಪರೀಮಾಣ—ಮೇತದೇವ ವಿನಿರ್ದಿಶೇತ್ ॥ ೨೪ ॥

ಜ್ಞೇಯಂ ಶತಸಹಸ್ರಂ ತು ಸಹಸ್ರಾಣಿ ನವೈವ ತು ।
ನರಾಣಾಮಪಿ ಪಂಚಾಶ—ಚ್ಛತಾನಿ ತ್ರೀಣಿ ಚಾನಘಾಃ ॥ ೨೫ ॥
ಪಂಚಷಷ್ಟಿಸಹಸ್ರಾಣಿ ತಥಾಽಶ್ವಾನಾಂ ಶತಾನಿ ಚ ।
ದಶೋತ್ತರಾಣಿ ಷಟ್ ಪ್ರಾಹು—ರ್ಯಥಾವದಿಹ ಸಂಖ್ಯಯಾ ॥ ೨೬ ॥
ಏತಾಮಕ್ಷೌಹಿಣೀಂ ಪ್ರಾಹುಃ ಸಂಖ್ಯಾತತ್ವವಿದೋ ಜನಾಃ— ॥ ೨೭ ॥
(ಆದಿ., ೨ ಅ., ೨೩—೨೭ ಶ್ಲೋ.)

b) ಅನೀಕ ಎಂಬುದು ಪುನ್ನಪುಂಸಕ ಶಬ್ದ ಎಂದರೆ ಪುಲ್ಲಿಂಗದಲ್ಲೂ ನಪುಂ. ಲಿಂಗದಲ್ಲೂ—ಅನೀಕಃ ಅಥವಾ ಅನೀಕಂ ಎಂದು ನಡೆಯುತ್ತದೆ; ಸೈನ್ಯ ಎಂದರ್ಥ. 'ವರೂಥಿನೀ ಬಲಂ ಸೈನ್ಯಂ ಚಕ್ರಂ ಚಾನೀಕಮಸ್ತ್ರಿಯಾಮ್' ಎಂದು ಅಮರ. c) ಕ್ಷಪಣ ಶಬ್ದವು 'ಕ್ಷಿ ಹಿಂಸಾಯಾಂ' ಕ್ಷಯ ಹೊಂದು, ನಾಶವಾಗು ಎಂಬ ಧಾತುವಿನ (ಸ್ವಾದಿ.ಪ.) ಪ್ರೇರಣಾರ್ಥಕ ರೂಪದ ಭಾವ-ನಾಮ(ಲ್ಯುಡಂತ) ರೂಪ; ಪ್ರೇರಣಾರ್ಥಕವಾದ್ದರಿಂದಲೇ ಪ(ಪುಕ್)-ಪ್ರತ್ಯಯ ಬಂದಿದೆ. ಆದಕಾರಣ ಇದಕ್ಕೆ ಕ್ಷಯವಾಗುವಂತೆ ಮಾಡುವಿಕೆ, ಧ್ವಂಸ ಮಾಡುವಿಕೆ, ವಿಧ್ವಂಸನ, ನಾಶ ಅಥವಾ ವಿಧ್ವಂಸ ಎಂದರ್ಥ. ಸೂಚನೆ—ಕ್ಷ್ವೇಲಾಕ್ಷೀಣ—ಎಂಬಲ್ಲಿ ಕ್ಷೀಣ ಶಬ್ದ ಬಂದಿದೆ; ಇದಕ್ಕೂ ಕ್ಷಪಣಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಎರಡೂ ಕ್ಷಿ ಧಾತುವಿನ ರೂಪಗಳೇ. ಆದರೆ ಕ್ಷೀಣ ಕರ್ಮಣಿಭೂತಕೃದಂತರೂಪ; ಇದರ ಅರ್ಥ 'ತನಗೆ ತಾನೇ ಕ್ಷಯಿಸಿ ಹೋದ ಅಥವಾ ಕುಗ್ಗಿದ ಎಂದಾಗುತ್ತದೆ; ಇದು ಶಕ್ತಿಹೀನತೆಯ ದ್ಯೋತಕ. ಕ್ಷಪಣ ಪ್ರೇರಣಾರ್ಥಕ ರೂಪ; ನಾಶವಾಗುವಂತೆ ಅಥವಾ ಕ್ಷಯಿಸಿಹೋಗುವಂತೆ ಮಾಡುವಿಕೆ ಎಂದರ್ಥ; ಹೀಗೆ ಇದು ಬಲಾಧಿಕ್ಯ ದ್ಯೋತಕ; ತನಗೇ ಶಕ್ತಿಯಿಲ್ಲದಿದ್ದರೆ ಇನ್ನೊಬ್ಬರ ಶಕ್ತಿ ಕುಗ್ಗುವಂತೆ ಮಾಡುವುದು ಹೇಗೆ? d) ಸು-ನಿಪುಣಂ—ಅತ್ಯಂತ ಚತುರವಾದ, ಬಹಳ ಕುಶಲವಾದ ಎಂದು ಸಾಮಾನ್ಯಾರ್ಥ. ಇಲ್ಲಿ 'ಅತ್ಯಂತ ದಕ್ಷವಾದ' ಎಂಬ ಅರ್ಥದಲ್ಲಿ ಬಂದಿದೆ. 'ಬಹ್ವ....ನಿಪುಣಂ' ಎಂಬುದೂ ರಣಂ-ಗೆ ವಿಶೇಷಣ. ಅನೇಕ ಅಕ್ಷೋಹಿಣೀ ಸೈನ್ಯವನ್ನು ಧ್ವಂಸಗೊಳಿಸುವುದರಲ್ಲಿ ಅತ್ಯಂತ ದಕ್ಷವಾದ (ಅಥವಾ ಪಟುವಾದ) ಯುದ್ಧವನ್ನು ನೀನು ಮಾಡಿದಿ

ಎಂದು ಅನ್ವಯ. ಹದಿನೆಂಟು ಅಕ್ಷೋಹಿಣೀ ಸೈನ್ಯ ಕೇವಲ ಹದಿನೆಂಟು ದಿನಗಳಲ್ಲೇ ನಿರ್ನಾಮವಾಗಿ ಹೋದದ್ದನ್ನು ಲಕ್ಷಿಸಿ ರಣಂ-ಗೆ ಈ ವಿಶೇಷಣ ಕೊಟ್ಟಿರುವುದರಿಂದ ಸು-ನಿಪುಣ ಶಬ್ದದ ಔಚಿತ್ಯ ಎದ್ದು ಕಾಣುತ್ತದೆ.

ಙ) ಯಸ್ಯ ಸರ್ವೋತ್ತಮಸ್ಯ ಎಂಬ ಎರಡು ಪದಗಳೂ ಹರಿ-ಪರವಾದ ಅನ್ವಯದಲ್ಲೂ ಭೀಮಪರ ಅನ್ವಯದಲ್ಲೂ ಶ್ರೀಕೃಷ್ಣನಿಗೇ ಅನ್ವಯಿಸುತ್ತವೆ. ಆದರೆ ಕೃಷ್ಣಪರವಾಗಿ ಅನ್ವಯಮಾಡುವಾಗ ಈ ಎರಡು ಪದಗಳೂ (ತವ ರಣಮರಿಹನ್ ಎಂಬಲ್ಲಿರುವ) ತವ-ಶಬ್ದಕ್ಕೆ ವಿಶೇಷಣಗಳಾಗುತ್ತವೆ. ತವ-ಶಬ್ದಕ್ಕೆ ವಿಶೇಷಣವಾದಾಗ ಯಸ್ಯ ಎಂಬುದು ಅಕಾರಾಂತ ಯ ಶಬ್ದದ ಪುಲ್ಲಿಂಗ ಷಷ್ಠ್ಯೇಕವಚನರೂಪವಾಗುವುದೆಂದು ಪುರಾ. ತೋರಿಸುತ್ತಾರೆ. ಏಕಾದಶಸ್ಕಂಧ ಭಾಗವತ ತಾತ್ಪರ್ಯದಲ್ಲಿ (೬ ಅ. ೮ ಶ್ಲೋ.) 'ಯಃ ಪ್ರಕಾಶ-ರೂಪಃ' ಎಂದು ಹೇಳಿರುವುದರಿಂದ ಯಸ್ಯ ಎಂದರೆ 'ಪ್ರಕಾಶರೂಪನಾದ' ಎಂದರ್ಥವಾಗುತ್ತದೆ. ಸರ್ವೋತ್ತಮಸ್ಯ ಎಂಬುದರ ಅರ್ಥ ಸ್ಪಷ್ಟವಾಗಿದೆ.

ಭೀಮಪರ ಅನ್ವಯ ಹೇಳುವಾಗ ಯಸ್ಯ ಎಂಬುದು ಸರ್ವನಾಮ; ಯಚ್ಛಬ್ದದ ಷಷ್ಠ್ಯೇಕರೂಪ, ಸರ್ವೋತ್ತಮಸ್ಯ ಯಸ್ಯ ಶುಶ್ರೂಷಾರ್ಥಂ ಎಂದು ಇದರ ಅನ್ವಯ; ಸರ್ವೋತ್ತಮನಾದ ಯಾವ ಶ್ರೀಕೃಷ್ಣನ ಸೇವೆಗಾಗಿ-ಯುದ್ಧವನ್ನು ಮಾಡಿದಿಯೋ ಎಂದು ಅರ್ಥ.

ಚ) ಶುಶ್ರೂಷಾರ್ಥಂ ಎಂಬುದಕ್ಕೆ ಉಭಯಪಕ್ಷದಲ್ಲೂ ಅರ್ಥ ವ್ಯತ್ಯಾಸವಾಗುತ್ತದೆ. ಕೃಷ್ಣಪಕ್ಷದಲ್ಲಿ ಚತುರ್ಥಚರಣದಲ್ಲಿರುವ 'ಪಾದಪದ್ಮಂ'ಗೆ ವಿಶೇಷಣವಾಗುತ್ತದೆ. ಶ್ರು ಶ್ರವಣೇ (ಭ್ವಾ. ಪ.)-ಕೇಳು, ಶ್ರವಣಮಾಡು ಎಂಬ ಧಾತುವಿನ ಸನ್ನಂತ (ಇಚ್ಛಾರ್ಥಕ) ರೂಪ; ಶ್ರೋತುಮಿಚ್ಛಾ ಶುಶ್ರೂಷಾ। ಕೇಳಿದಂತೆ ಮಾಡಬೇಕೆಂಬ ಇಚ್ಛೆ ಎಂದು ಯೋಗಾರ್ಥವಾದರೂ ರೂಢಿಯಲ್ಲಿ ಪರಿಚರ್ಯೆ, ಉಪಾಸನೆ ಅಥವಾ ಸೇವೆ ಎಂಬ ಅರ್ಥವಿದೆ, 'ಪರಿವಸ್ಯಾ ತು ಶುಶ್ರೂಷಾ ಪರಿಚರ್ಯಾ-ಽಪ್ಯುಪಾಸನಾ' ಎಂದು ಅಮರ. (ಪು.ರಾ.) ಶುಶ್ರೂಷಯಾ, ಅರ್ಯತೇ-ಗಮ್ಯತ ಇತಿ ಶುಶ್ರೂಷಾರ್ಥಃ । ತಂ ಶುಶ್ರೂಷಾರ್ಥಂ ಎಂದು ವಿಗ್ರಹವಾಕ್ಯ. ಉಪಾಸನಾ ರೂಪವಾದ ಸೇವೆಯಿಂದ ಗಮ್ಯವಾದ (ಪ್ರಾಪ್ಯವಾದ ಅಥವಾ ಲಭಿಸತಕ್ಕ, ಲಭ್ಯವಾದ) ಎಂದರ್ಥ.

ಇಂಥಾ (ಶ್ರೀಕೃಷ್ಣನ) ಪಾದಕಮಲವನ್ನು ಮೊರೆಹೋಗುತ್ತೇನೆ ಎಂದು ಅನ್ವಯ ಮಾಡಬೇಕು. ಭೀಮಪಕ್ಷದಲ್ಲಿ—ರಣಂ ಶುಶ್ರೂಷಾರ್ಥಂ (ಸೇವಾರ್ಥಂ) ಚಕರ್ಥ–ಆ ಯುದ್ಧವನ್ನು (ಶ್ರೀಕೃಷ್ಣನ) ಸೇವೆಗೋಸ್ಕರ ಅಥವಾ ಪ್ರೀತ್ಯರ್ಥವಾಗಿ ಮಾಡಿದಿ ಎಂದು ಅನ್ವಯವಾಗುತ್ತದೆ. ಈ ಪಕ್ಷದಲ್ಲಿ ಇದು ಅನ್ವಯ. 'ಶುಶ್ರೂಷಾರ್ಥಂ ಚಕರ್ಥ' ಎಂಬ ವಾಕ್ಯಕ್ಕೆ 'ಅಜೀತಯೋಽಹತಯೋ—' (ಋ ೯/೯೬/೪) ಋಕ್ಕಿನಲ್ಲಿರುವ 'ಸರ್ವತಾತಯೇ ಬೃಹತೇ' ಎಂಬ ಭಾಗ ಸಮಾಖ್ಯೆ ಎಂದು ಯುಕ್ತಿಮಲ್ಲಿಕಾದಲ್ಲಿ ತೋರಿಸಿದ್ದಾರೆ. (ಕೆಳಗೆ ಡ–ಎಂಬ ಉಪಖಂಡ ನೋಡಿ.)

ಛ) ಚಕರ್ಥ—(ನೀನು) ಮಾಡಿದಿ. ಈ ಕ್ರಿಯೆಗೆ 'ರಣಂ' ಕರ್ಮಪದ. ಮೇಲೆ ತೋರಿಸಿದಂತೆ 'ರಣಂ ಶುಶ್ರೂಷಾರ್ಥಂ ಚಕರ್ಥ' ಎಂದು ಭೀಮ-ಪಕ್ಷದಲ್ಲೂ 'ಯಂ ರಣಂ ಚಕರ್ಥ' ಎಂದು ಕೃಷ್ಣಪಕ್ಷದಲ್ಲೂ ಅನ್ವಯ. ಚಕರ್ಥ ಎಂಬುದು ಡುಕೃಞ್ ಕರಣೇ=ಮಾಡು ಎಂಬ ಧಾತುವಿನ (ತನಾದಿ. ಉಭ.) ಲಿಟ್ ಲಕಾರದಲ್ಲಿ ಪರಸ್ಮೈ, ಮಧ್ಯಮ ಪುರುಷೈಕವಚನರೂಪ. ಕರ್ತೃಪದ ಹೇಳಿಲ್ಲವಾದ್ದರಿಂದ ಕ್ರಿಯಾಪದಬಲದಿಂದ 'ತ್ವಂ'-ನೀನು ಎಂಬ ಕರ್ತೃ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

ಜ) ಸ್ವಯಮಯ (ಮಿಹ) ಮಥ—ಉಭಯ ಪಕ್ಷದಲ್ಲೂ ಪದ-ಚ್ಛೇದವೂ ಭಿನ್ನ, ಅರ್ಥವೂ ಭಿನ್ನ. 'ಸ್ವಯಮಯಮಿಹ' ಎಂಬುದು ಕಕ. ಮತ್ತು ವಿ. ಪಾಠಗಳು; ಆದ್ದರಿಂದ ಈ ಪಾಠ ಕೃಷ್ಣಪಕ್ಷದಲ್ಲಿ ಬರುವುದಿಲ್ಲ. (a) ಭೀಮಪಕ್ಷದ ಅರ್ಥ ಸುಲಭವಾದ್ದರಿಂದ ಅದಕ್ಕೇ ಮೊದಲು ಹೋಗೋಣ' ಸ್ವಯಂ, ಅಯಂ, (ಇಹ) ಅಥ ಎಂದು ಪದಚ್ಛೇದ. ಸ್ವಯಂ-ತಾನೇ; ಅಯಂ-ಇವನು ಎಂದರೆ ಪೂರ್ವಪ್ರಸಕ್ತನಾದ ಶ್ರೀಹರಿಯು, ಇಹ-(ಅವ್ಯಯ) ಇಲ್ಲಿ ಎಂದರೆ 'ಅಸ್ಮಿನ್‌ರಣೇ ವಿಷಯೇ' (ಕಕ.) ಈ ಯುದ್ಧದ ವಿಷಯದಲ್ಲಿ ಎಂದರ್ಥ; ಅಥ–ಅನಂತರ ಎಂದರೆ ಹರಿಯ ಅನಂತರ ಅಥವಾ ಹರಿಯನ್ನು ಬಿಟ್ಟಮೇಲೆ ಎಂದರ್ಥ. ಈ ಪದಗಳ ಅನ್ವಯವು-(ಇಹ) ಅಯಂ ಸ್ವಯಂ ಸಂವಕ್ತುಂ ಸಮರ್ಥಃ, ಅಥ ತ್ವಮಪಿ (ಸಮರ್ಥಃ) ಎಂದಾಗುತ್ತದೆ. ಈ ಯುದ್ಧದ ವಿಷಯವನ್ನು ಹೇಳುವುದರಲ್ಲಿ (ಕಕ.ವಿ. ಪಾಠ) ಆ ಶ್ರೀಹರಿಯೇ

ತಾನೇ (ವೇದವ್ಯಾಸರೂಪದಿಂದ) ಹೇಳಲು ಸಮರ್ಥ. ಅವನ ಬಳಿಕ (ಅವನನ್ನು ಬಿಟ್ಟರೆ) ನೀನೂ ಸಹ (ಮಧ್ವರೂಪದಿಂದ) ಸಮರ್ಥ-ಎಂದು ಅರ್ಥ. (b) (ಲೇ) ಹರಿಪಕ್ಷದಲ್ಲಿ-ಸ್ವಯುಮ, ಯಂ, ಅಥ ಎಂದು ಪದಚ್ಛೇದ. ಸ್ವಯುಮ ಎಂಬಲ್ಲಿ ಪುನಃ ಸು+ಅ+ಯುಮ ಎಂದು ಬಿಡಿಸಿಕೊಳ್ಳಬೇಕು. ಯುಮ ಎಂದರೆ ಜೋಡಿ, ಜೊತೆ ಎಂದು ಸಾಮಾನ್ಯಾರ್ಥ; ಅದರಿಂದ ಇಲ್ಲಿ 'ಸದೃಶ-ಸಮಾನ' ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕು. (ಪು.ರಾ.) ನ ವಿದ್ಯತೇ ಯುಮಃ-ಸದೃಶೋ ಯಸ್ಯ ಸಃ ಅಯುಮಃ, ಸರಿಯಿಲ್ಲದವನು, ಎದುರಿಲ್ಲದವನು. ಸು-ಸುಷ್ಠು, ಅಯುಮಃ-ಅಸದೃಶಃ-ಸ್ವಯುಮಃ, ತಸ್ಯ ಸಂಬುದ್ಧಿಃ-ಸ್ವಯುಮ, ಸರ್ವಥಾ ಅಸದೃಶನಾದವನೇ! ಎಂದರ್ಥ. ಅಥ ಶಬ್ದಕ್ಕೆ ಹರಿಪರ ಅರ್ಥವನ್ನು ಹಿಂದೆ (೨೨ನೇ ಶ್ಲೋಕದಲ್ಲಿ ಖಂಡ 253-ಝು ದಲ್ಲಿ) ಹೇಳಿದೆ. ಅದರಂತೆ ದುಃಖಭೋಗರಹಿತನೇ ಅಥವಾ ನಿರ್ದೋಷನೇ ಎಂದರ್ಥ. ಮಧ್ಯದಲ್ಲಿರುವ ಯಂ ಶಬ್ದವು ರಣಂ-ಗೆ ವಿಶೇಷಣ; ಅದನ್ನು 'ಯಂ ರಣಂ ಚಕರ್ಥ'_ಯಾವ ಯುದ್ಧವನ್ನು ಮಾಡಿದೆಯೋ ಎಂದು ಹೊಂದಿಸಬೇಕು.

ಝು) ಶ್ರೀಮದಾನಂದತೀರ್ಥ ಶ್ರೀಮನ್ನಾಮನ್—(a) ವಾಯು-ಪರವಾಗಿ ಒಂದೇ ಪದ_(ಛ.) ಶ್ರೀಮದಾನಂದತೀರ್ಥ ಇತಿ ಶ್ರೀಮತ್-ಸಂಪತ್ಕರಂ, ನಾಮ ಯಸ್ಯ, ತತ್ಸಂಬುದ್ಧಿಃ। (ವಿ.) ಆನಂದತೀರ್ಥ ಇತಿ ಶ್ರೀಮತ್ - ಪೂಜ್ಯಂ ನಾಮ ಯಸ್ಯ ಸ ತಥೋಕ್ತಃ। ತತ್ಸಂಬುದ್ಧಿಃ। ಶ್ರೀಮದಾನಂದತೀರ್ಥರೆಂಬ ಸಂಪತ್ಕರವಾದ ಅಥವಾ ಪೂಜ್ಯವಾದ ಹೆಸರುಳ್ಳವರೇ! ಆನಂದತೀರ್ಥರೆಂಬ ಹೆಸರು ಶ್ರೀಮದಾಚಾರ್ಯರಿಗೆ ಏಕೆ ಬಂತೆಂಬುದನ್ನು ಶ್ಲೋ. ೧ರಲ್ಲಿ ಖಂಡ 34ರಲ್ಲೇ ವಿವರಿಸಿದೆ. (b) ಹರಿಪರವಾಗಿ ಶ್ರೀಮದಾನಂದತೀರ್ಥ, ಶ್ರೀಮನ್ನಾಮನ್ ಎಂದು ಎರಡು ಬೇರೆ ಬೇರೆ ಪದಗಳು. ಹರಿಪರವಾಗಿ ಶ್ರೀಮದಾನಂದತೀರ್ಥಕ್ಕೆ ವ್ಯುತ್ಪತ್ತಿಯನ್ನು ಅದೇ ಪ್ರಥಮಶ್ಲೋಕದಲ್ಲೇ 35ನೇ ಖಂಡದಲ್ಲಿ ತೋರಿಸಿದೆ; ಬ್ರಹ್ಮಾದಿಗಳ ಸುಖಕ್ಕೆ ಕಾರಣನಾದವನೇ ಎಂದರ್ಥ. ಶ್ರೀಮಂತಿ-ಸಂಪತ್ಕರಾಣಿ, ನಾಮಾನಿ ಯಸ್ಯ ಸಃ ಶ್ರೀಮನ್ನಾಮಾ। ತಸ್ಯ ಸಂಬುದ್ಧಿಃ॥ ಸೌಭಾಗ್ಯಕರವಾದ (ಮಂಗಳಪ್ರದವಾದ) ನಾರಾಯಣಾದಿ ಅನಂತ ನಾಮವುಳ್ಳವನೇ! ಎಂದರ್ಥ. ಶ್ರೀಹರಿಯ ನಾಮೋಚ್ಚಾರಣೆಯಿಂದಲೇ

ಸಕಲ ಪಾಪಗಳೂ ಪರಿಹಾರವಾಗುವುದಲ್ಲದೆ ಸಕಲೇಷ್ಟಾರ್ಥಗಳೂ ಸಿದ್ಧಿಸುವುದೆಂಬುದು ಜಗತ್ಪ್ರಸಿದ್ಧವಾದ ವಿಷಯ. ವಿಷ್ಣುಸಹಸ್ರನಾಮವನ್ನೂ ಅಷ್ಟೋತ್ತರಶತ (೧೦೮) ನಾಮಾವಳಿಗಳನ್ನೂ ಪಾರಾಯಣ ಮಾಡುವುದು ಈ ದೃಷ್ಟಿಯಿಂದಲೇ ಅಲ್ಲವೆ.

ಋ) ಯುವಯೋಃ ಎಂಬುದು (a) ಭೀಮಪಕ್ಷದಲ್ಲಿ ಸರ್ವನಾಮ; ಯುಷ್ಮದ್ (ತ್ವಂ) ಶಬ್ದದ ಷಷ್ಠೀ ದ್ವಿವಚನರೂಪ; ಇದಕ್ಕೆ ನಿಮ್ಮಿಬ್ಬರ ಎಂದರ್ಥ. ಅರ್ಥಾತ್ ಈ ಶ್ಲೋಕದಲ್ಲಿ ಪ್ರಸಕ್ತರಾದ ಶ್ರೀಕೃಷ್ಣ ಮತ್ತು ನಿನ್ನ (ಭೀಮನ) ಎಂದು ಭಾವ. ಅಯಂ ಚ ತ್ವಂ ಚ-ಯುವಾಮ್ । ತಯೋಃ— ಯುವಯೋಃ ಎಂದು ಏಕಶೇಷಸಮಾಸ. 'ತ್ಯದಾದೀನಿ ಸರ್ವೈರ್ನಿತ್ಯಮ್' (ಪಾ. ೧/೨/೭೨) ಎಂಬ ಸೂತ್ರದಂತೆ ಇದಂ-ಶಬ್ದ ಲೋಪವಾಗಿ ಯುಷ್ಮಚ್ಛಬ್ದ ಮಾತ್ರ ಉಳಿಯುತ್ತದೆ (ಕಕ.ವಿ.) (b) ಹರಿಪಕ್ಷದಲ್ಲಿ ಸರ್ವನಾಮವಲ್ಲ; ವು.ರಾ. ಪ್ರಕಾರ ಇದರಲ್ಲಿ ಯುವ, ಯು ಎಂದು ಎರಡು ಪದಗಳಿವೆ. ಯು ಮಿಶ್ರಣಾಮಿಶ್ರಣಯೋಃ = ಬೆರೆಸು, ಬೇರೆ ಮಾಡು ಎಂಬ ಧಾತು (ಅದಾ.ಪ) ವಿನಿಂದ ಯೌತಿ, ಲಕ್ಷ್ಮ್ಯಾ ಯುನಕ್ತೀತಿ ಯುಃ ಎಂಬ ವ್ಯುತ್ಪತ್ತಿಯಿಂದ ಯು ಎಂದರೆ ಲಕ್ಷ್ಮಿಯಿಂದ ಕೂಡಿದವನು ಅಥವಾ ಒಡಗೂಡಿದವನು ಎಂದರ್ಥ. 'ಯು' ಎಂಬುದು ಶಂಭು, ಗುರು ಶಬ್ದಗಳಂತೆ ಉಕಾರಾಂತ ಶಬ್ದ. ಯುವಾ ಚಾಸೌ ಯುಶ್ಚ ಯುವಯುಃ । ತಸ್ಯ ಯುವಯೋಃ ಎಂದು ವಿಗ್ರಹವಾಕ್ಯ. ಯುವಾ ಎಂದರೆ ಯುವಕ, ನಿತ್ಯತರುಣ. ನಿತ್ಯತರುಣನೂ ನಿತ್ಯ ಲಕ್ಷ್ಮೀ-ಸಮೇತನೂ ಆದ ಎಂಬುದು ಯುವಯೋಃ ಎಂಬುದರ ಹರಿಪರ ಅರ್ಥ. ಉಕಾರಾಂತ ಯುವಯು ಶಬ್ದದ ಷಷ್ಠೀರೂಪಗಳು ಯುವಯೋಃ । ಯುವ-ಯ್ವೋಃ । ಯುವಯೂನಾಂ ಎಂದಾಗುತ್ತದೆ; ಯುವಯೋಃ ಎಂಬುದು ಷಷ್ಠೀ ಏಕವಚನರೂಪ. ಇದನ್ನು 'ಪಾದಪದ್ಮಂ'ನೊಡನೆ ಜೋಡಿಸಿ 'ಯುವಯೋಃ ಪಾದಪದ್ಮಂ ಪ್ರಪದ್ಯೇ'-ನಿತ್ಯತರುಣನೂ ಸದಾ ಲಕ್ಷ್ಮೀಸಮೇತನೂ ಆಗಿರುವ ನಿನ್ನ ಪಾದಪದ್ಮವನ್ನು ಮೊರೆಹೋಗುತ್ತೇನೆ-ಎಂದು ಅರ್ಥ ಹೇಳಬೇಕು.

ೠ) ಪಾದಪದ್ಮಂ ಎಂಬುದು ಏಕವಚನವಾದರೂ ಜಾತ್ಯೇಕವಚನವೆಂದು ಗಣಿಸಬೇಕು. ಪಾದಕಮಲದ್ವಯವನ್ನು ಎಂದೇ ಅರ್ಥ. ಶ್ರೀಹರಿಯ

ಪಾದಗಳಿಗೆ 'ಸುವಃ' ಎಂದು ಹೆಸರೆಂದೂ, ಸು-ವಃ ಎಂದು ಎರಡು ಅಕ್ಷರಗಳಿರುವಂತೆ ಪಾದಗಳೂ ಎರಡಿವೆಯೆಂದೂ 'ಸುವರಿತಿ ಪ್ರತಿಷ್ಠಾ ದ್ವೇ ಪ್ರತಿಷ್ಠೇ ದ್ವೇ ಏತೇ ಅಕ್ಷರೇ' ಬೃಹದಾರಣ್ಯಕಶ್ರುತಿ (೭/೫/೩-೪) ಹೇಳುತ್ತದೆ. ಅದರ ಭಾಷ್ಯದಲ್ಲಿ ಸು ಎಂದರೆ ಆನಂದವೆಂದೂ ವರ್ (ವಃ) ಎಂದರೆ ಜ್ಞಾನವೆಂದೂ ಅವೆರಡರ ಧ್ಯಾನದಿಂದ ಮೋಕ್ಷದಲ್ಲಿ ಆನಂದವೂ ಜ್ಞಾನವೂ ಲಭಿಸುವುವೆಂದೂ ಹೇಳಿದ್ದಾರೆ. (ನಖಸ್ತುತಿ, ಪುಟ ೨೨೮-೯).

ಠ) ಪ್ರಪದ್ಯೇ—ಪ್ರ-ಉಪಸರ್ಗ, ಪದಗತೌ (ದಿವಾ. ಆ.)-ಹೋಗು, ಸೇರು ಎಂಬ ಧಾತುವಿನ ಲಟ್ (ವರ್ತಮಾನ) ಉತ್ತಮಪುರುಷೈಕವಚನ-ರೂಪ ; (ನಾನು) ಮೊರೆಹೋಗುತ್ತೇನೆ, ಮೊರೆಹೊಂದುತ್ತೇನೆ ಅಥವಾ ಶರಣಾಗುತ್ತೇನೆ ಎಂದರ್ಥ. 'ಶರಣಂ ಗಚ್ಛಾಮಿ' (ಕಕ.ವಿ.) ಶರಣಂ ಯಾಮಿ (ಥ.)

ಈ ಶ್ಲೋಕಕ್ಕೆ ಶ್ರುತಿ ಸಮಾಖ್ಯೆ (ಯುಕ್ತಿಮಲ್ಲಿಕೋಕ್ತ)

ಡ) ಕ್ಷ್ವೇಲಾಕ್ಷೀಣ....ದ್ದಾಮಬಾಹೋ ಎಂಬುದಕ್ಕೆ 'ಅಜೀತಯೇ' ಎಂಬ ಋಙ್ಮಂತ್ರ (ಋ. ೯/೯೬/೪) ಸಮಾಖ್ಯೆಯೆಂದು ತೋರಿಸುತ್ತಾರೆ. ಮಂತ್ರ ಪಾಠ ಹೀಗಿದೆ—

ಅಜೀತಯೇಽಹತಯೇ ಪವಸ್ವ
ಸ್ವಸ್ತಯೇ ಸರ್ವತಾತಯೇ ಬೃಹತೇ ।

ತದುಶಂತಿ ವಿಶ್ವ ಇಮೇ ಸಖಾಯ-
ಸ್ತದಹಂ ವಶ್ಮಿ ಪವಮಾನ ಸೋಮ ॥

(ಮಂತ್ರಾರ್ಥ) ಪವಮಾನ-ಸರ್ವವನ್ನೂ ಪಾವನ ಮಾಡುವ, ಸೋಮ-ಸೋಮವಂಶೋದ್ಭವನಾದ ಹೇ ಭೀಮಸೇನ ! ಅಜೀತಯೇ-(ಪರಪಕ್ಷೀಯರು ಸ್ವಪಕ್ಷೀಯರನ್ನು) ಸೋಲಿಸದಿರುವುದಕ್ಕಾಗಿಯೂ, ಅಹತಯೇ-ಸಂಹರಿಸದೆ ಇರುವುದಕ್ಕಾಗಿಯೂ, ಸ್ವಸ್ತಯೇ (ಸ್ವಪಕ್ಷೀಯರ)

ಕ್ಷೇಮಕ್ಕಾಗಿಯೂ (ಎಂದರೆ ರಕ್ಷಣೆಗಾಗಿಯೂ); ಬೃಹತೇ–ಸರ್ವೋತ್ತಮನಾದ, ಸರ್ವತಾತಯೇ–ಸರ್ವವ್ಯಾಪಿಯೂ ಸರ್ವಾಭೀಷ್ಟಪ್ರದಾಯಕನೂ ಆದ ಶ್ರೀಹರಿಯ ಸೇವಾರ್ಥವಾಗಿಯೂ, ಪವಸ್ವ–ಎಲ್ಲ ಕಡೆಯೂ ಆಡ್ಡಾಡು (ಸುತ್ತಾಡು). ತತ್–ಅದನ್ನು (ಈ ರೀತಿ ಅಡ್ಡಾಡುವುದನ್ನು) ಇಮೇ–ಈ, ವಿಶ್ವೇಸಖಾಯಃ = ಮಿತ್ರರೂ ಸ್ವಪಕ್ಷೀಯರೂ ಆದ ಸಕಲ ವೈಷ್ಣವರೂ, ಉಶಂತಿ–ತಮ್ಮ ರಕ್ಷಣೆಗಾಗಲಿ ಎಂದು ಅಪೇಕ್ಷಿಸುತ್ತಾರೆ. ತತ್–ಅದರಂತೆ, ಅಹಂ–ನಾನೂ ಸಹ, ತತ್–ಅದನ್ನು (ನನ್ನ ರಕ್ಷಣೆಗಾಗಲಿ ಎಂಬುದನ್ನು), ವಶ್ಮಿ–ವಚ್ಮಿ–ಹೇಳುತ್ತೇನೆ.

ತಾತ್ಪರ್ಯ—ಹೇ ಭೀಮಸೇನ, ರಣರಂಗದಲ್ಲಿ ನೀನು ಅಲ್ಲಿಂದಿಲ್ಲಿಗೆ ಅಡ್ಡಾಡುವುದು ಸ್ವಪಕ್ಷೀಯರ ರಕ್ಷಣೆಗಾಗಿಯೂ ಪರಪಕ್ಷೀಯರ ನಾಶಕ್ಕಾಗಿಯೂ ಆಗಿರುತ್ತದೆ. ಎಲ್ಲವನ್ನೂ ನೀನು ಆ ಭಗವಂತನ ಪ್ರೀತಿಗಾಗಿಯೇ ಮಾಡುವೆ. (ಇದು ಈ ಶ್ಲೋಕದ 'ಶುಶ್ರೂಷಾರ್ಥಂ ಚಕರ್ಥ' ಎಂಬ ಭಾಗಕ್ಕೆ ಸಮಾಖ್ಯೆ.) ಆ ಪವನವು (ಅಡ್ಡಾಡುವುದು) ನಮ್ಮ ರಕ್ಷಣೆಗಾಗಲಿ ಎಂದು ಸಕಲ ವೈಷ್ಣವರೂ ತಿಳಿಯುತ್ತಾರೆ. ಅದರಂತೆ ನಾನೂ ಪ್ರಾರ್ಥಿಸುತ್ತೇನೆ. ಇದರಿಂದ ಭೀಮನ ಸಿಂಹನಾದವು ಸ್ವಪಕ್ಷೀಯರಿಗೆ ಉತ್ಸಾಹಕರವೂ ಜಯಪ್ರದವೂ ಆಗಿರುವುದೆಂದೂ ಪ್ರತಿಪಕ್ಷಿಗಳಿಗೆ ಭಯಜನಕವೂ ನಾಶಕರವೂ ಆಗಿದೆ ಎಂಬುದನ್ನು ಸಮರ್ಥಿಸಿದಂತಾಯಿತು. (ಖಂಡ 25ಥ ನೋಡಿ.)

(ಥ) ಉದ್ಗದೋದ್ದಾಮ ಬಾಹೋ—ಎಂಬುದಕ್ಕೆ 'ಪ್ರ ಸೇನಾನೀಃ ಶೂರಃ' ಎಂಬ ಋಕ್ಕು (೯/೯೬/೧) ಸಮಾಖ್ಯೆಯಾಗಿದೆ.

ಪ್ರ ಸೇನಾನೀಃ ಶೂರೋ ಅಗ್ರೇ ರಥಾನಾಂ
ಗವ್ಯಂ ನೇತಿ ಹರ್ಷತೇ ಅಸ್ಯ ಸೇನಾಃ ।
ಭದ್ರಾನ್ ಕೃಣ್ವನ್ನಿಂದ್ರಹವಾನ್ತ್ಸಖಿಭ್ಯ
ಆ ಸೋಮೋ ವಸ್ತ್ರಾ ರಭಸಾನಿ ದತ್ತೇ ॥ (೯/೯೬/೧)

ಮಂತ್ರಾರ್ಥ—ಶೂರಃ = ಮಹಾಶೂರನಾದ, ಸೋಮಃ-ಸೋಮ ವಂಶೋತ್ಪನ್ನನಾದ, ಗವ್ಯಂ ನ (ಗವ್ಯಂ-ರಥವನ್ನು, ನ-ಬಿಟ್ಟು, ಗವಿ-ನೆಲದ ಮೇಲೆ) ರಥವನ್ನು ಬಿಟ್ಟು ನೆಲದ ಮೇಲೆ ಕಾಲ್ನಡಿಗೆಯಿಂದ ಅಡ್ಡಾಡುವ ; ಸೇನಾನೀಃ-ಪಾಂಡವ ಸೇನಾನಾಯಕನಾದ ಭೀಮಸೇನನು, ರಥಾನಾಂ ಅಗ್ರೇ-ಶತ್ರುರಥಗಳ ಮುಂದೆ-ಮುಂದೆಯೇ, ಏತಿ-ನಿರ್ಭಯವಾಗಿ ಅಡ್ಡಾಡುತ್ತಾನೆ. ಅಸ್ಯ ಸೇನಾಃ-ಇವನ (ಪಕ್ಷದ) ಸೈನ್ಯಗಳು (ಸೈನಿಕರು), ಪ್ರ ಹರ್ಷತೇ-(ಭೀಮನ ಪರಾಕ್ರಮವನ್ನು ನೋಡಿ) ಬಹಳ ಸಂತೋಷಪಡುತ್ತವೆ. ಇಂದ್ರ-ಹವಾನ್—ಇಂದ್ರ-ಕವೀಂದ್ರರಾದ ವೇದವ್ಯಾಸರ ಮತ್ತು ಯಾದವೇಂದ್ರನಾದ ಶ್ರೀಕೃಷ್ಣನ, ಹವಾನ್-'ಈ ಪರಾಕ್ರಮವು ಅಪ್ರತಿಮವಾದುದು-ಅದ್ಭುತವಾದುದು ಎಂದು ಆಹ್ವಾನಕ್ಕೆ (ಪ್ರಶಂಸೆಗೆ) ಯೋಗ್ಯವಾದ ; ಭದ್ರಾನ್-ಶೋಭನಪರಾಕ್ರಮಗಳನ್ನು ; ಕೃಣ್ವನ್-ಮಾಡುತ್ತಾ ; ಸೋಮಃ-ಸೋಮವಂಶೋದ್ಭವನಾದ ಭೀಮನು, ಆ-ಆಗತರಾದಂಥಾ (ಬಂದಂಥಾ) ; ಸಖಿಭ್ಯಃ-ಸ್ನೇಹಿತರಾದ ವೈಷ್ಣವರಿಗೆ, ರಭಸಾನಿ-ಸಂಭ್ರಮದಿಂದ ಕೂಡಿದ, ಅಥವಾ ಅವುಗಳಲ್ಲಿ ಚಿತ್ರಚಿತ್ರವಾಗಿ ಕಸೂತಿ ಕೆಲಸ ಮಾಡಿರುವ ; ವಸ್ತ್ರಾ-ವಸ್ತ್ರಗಳನ್ನೂ (ಉಪಲಕ್ಷಣಯಾ ಧನ ಭೂಮಿ ಆಭರಣವೇ ಮೊದಲಾದ ಉದಾರದಾನಗಳನ್ನು) ; ದತ್ತೇ-ಕೊಡುತ್ತಾನೆ. (ಈ ಮಂತ್ರಕ್ಕೆ ಹನುಮತ್ಪರವಾಗಿಯೂ ಅರ್ಥ ತೋರಿಸಿದ್ದಾರೆ. ಅದು ಇಲ್ಲಿ ಅಪ್ರಸಕ್ತವಾದ್ದರಿಂದ, ಆ ಅರ್ಥವನ್ನು ಮಧ್ವಾವತಾರಕ್ಕೆ ಪೀಠಿಕೆ ಬರೆಯುತ್ತಾ ಹನುಮಂತನ ಪ್ರಸಕ್ತಿ ಬರುವ ಕಾರಣ ಖಂಡ 320ರಲ್ಲಿ ಹೇಳುವೆವು.)

ಶ್ರುತಿಗೆ ಭೀಮಪರವಾಗಿ ಭಾವಾರ್ಥ—ಕುರುಕುಲಾಗ್ರಣಿಯಾದ ಭೀಮ-ಸೇನನು ಅಪ್ರತಿಮಶೂರ. ಎಲ್ಲ ವೀರರೂ ರಥಾರೂಢರಾಗಿ ಯುದ್ಧ ಮಾಡಿದರೆ ಈತನು ಹೆಚ್ಚು ಭಾಗ ಯುದ್ಧವನ್ನು ರಥಾರೂಢನಾಗಿ ಮಾಡದೆ ನೆಲದ ಮೇಲೆ ಪಾದಚಾರಿಯಾಗಿಯೇ ಅಡ್ಡಾಡುತ್ತಾ ಮಾಡಿದನು. ಅಂಥಾ ಅಪೂರ್ವ ಸೇನಾಪತಿಯಾದ ಇವನು ನಿರ್ಭಯವಾಗಿ ಶತ್ರುಗಳನ್ನು ಎದುರಿಸುತ್ತಾ ಶತ್ರುಗಳ ರಥಗಳ ಮುಂದೆ-ಮುಂದೆಯೇ ಹೋಗಿ ಅವರನ್ನು ಧ್ವಂಸ ಮಾಡು

ತ್ತಾನೆ. (ಭಾರತಯುದ್ಧದ ಅಸಂಖ್ಯ ಪ್ರಸಂಗಗಳು ಇದಕ್ಕೆ ನಿದರ್ಶನವಾಗಿವೆ. ಕೆಲವು ಪ್ರಸಂಗಗಳನ್ನು ಕೆಳಗೆ ಖಂಡ 274ರಲ್ಲಿ ಘ ದಿಂದ ಟ ಅಂಶಗಳಲ್ಲಿ ಕೊಟ್ಟಿದ್ದೇವೆ.) ಅವನ ಪರಾಕ್ರಮವನ್ನು ಕಂಡು ಅವನ ಪಕ್ಷದ ಸೈನಿಕರಿಗೆ ಬಹಳ ಹರ್ಷವಾಗುತ್ತದೆ. ಕೇವಲ ಸೈನಿಕರಿಗೆ ಮಾತ್ರವಲ್ಲ. ಈ ಭೀಮನ ಅದ್ಭುತ ಸಾಹಸ-ಶೌರ್ಯವನ್ನೂ ಅವನು ಮಾಡಿದ ಕಲ್ಪನಾತೀತವಾದ ಯುದ್ಧವೈಖರಿಯನ್ನೂ ಕಂಡು ವೇದವ್ಯಾಸರೂ ಶ್ರೀಕೃಷ್ಣನೂ 'ಇವು ಅಪ್ರತಿಮ ಪರಾಕ್ರಮಗಳೆಂ'ದು ಶ್ಲಾಘಿಸುತ್ತಾರೆ. ಧರ್ಮರಾಜ ರಾಜ್ಯವಾಳು ತ್ತಿದ್ದಾಗ ಈ ಭೀಮ ಯುವರಾಜಪದವಿಯಲ್ಲಿದ್ದು ತನ್ನ ಬಳಿಗೆ ಬಂದ-ಬಂದ ಸಕಲ ವೈಷ್ಣವರಿಗೂ ಅವರು ಕೇಳಿ-ಕೇಳಿದ ದುಡ್ಡು-ದುಕಾಣಿ ಧನ-ಕನಕ-ಭೂಮಿ-ವಸ್ತ್ರಾದಿ ಇಷ್ಟಾರ್ಥಗಳನ್ನು ಯಥೇಚ್ಛವಾಗಿ ಕೊಡುತ್ತಾನೆ.

ಈ ಋಕ್ಕಿನ ಪೂರ್ವಾರ್ಧದಲ್ಲಿ ಭೀಮನ ಯುದ್ಧಸಾಹಸ ಹೇಳಿರುವುದು 'ಉದ್ಗದೋರ್ದ್ದಾಮ ಬಾಹೋ' ಎಂಬುದಕ್ಕೆ ವಿವರಣರೂಪವಾಗಿರುವುದನ್ನೂ ಉತ್ತರಾರ್ಧದಲ್ಲಿ 'ಇಂದ್ರಹವಾನ್ ಭದ್ರಾನ್ ಕೃಣ್ವನ್' ಎಂದು ಹೇಳಿರು ವುದು 'ಯಸ್ಯ ಸರ್ವೋತ್ತಮಸ್ಯ ಶುಶ್ರೂಷಾರ್ಥಂ ಚಕರ್ಥ' ಎಂಬ ಅಂಶವನ್ನು ಪುಷ್ಟೀಕರಿಸುವುದನ್ನೂ ಮುಖ್ಯವಾಗಿ ಗಮನಿಸಬೇಕು.

ಇಷ್ಟು ವಿವರಣೆ ಓದಿದ ಬಳಿಕ ಈ ಶ್ಲೋಕದ ವಿಶ್ಲೇಷಣೆ ಸುಲಭವಾಗಿ ಅರ್ಥವಾಗುವುದಲ್ಲದೆ ಶ್ಲೋಕದ ಅವಯವಾರ್ಥವೂ ತೊಡಕಿಲ್ಲದೆ ತಿಳಿಯುವು ದೆಂದು ಆಶಿಸಲಾಗಿದೆ.

271. ಶ್ಲೋಕದ ವಿಶ್ಲೇಷಣೆ—ಹರಿ-ವಾಯು ಉಭಯ ಪಕ್ಷದಲ್ಲೂ ಅರಿಹನ್, ಉದ್ಗದೋರ್ದ್ದಾಮ ಬಾಹೋ, ಆನಂದತೀರ್ಥ-ಶ್ರೀಮನ್ನಾಮನ್ ಎಂದು ಮೂರು ಸಂಬೋಧನೆಗಳು. ಹರಿಪಕ್ಷದಲ್ಲಿ ಸ್ವಯಮ್, ಅಥ ಎಂಬ ಎರಡೂ ಸಂಬೋಧನೆಗಳು. ಹರಿ ಪಕ್ಷದಲ್ಲಿ ಎರಡೇ ವಾಕ್ಯಗಳಾಗುತ್ತವೆ. ಒಂದು ಸಂಯುಕ್ತ ವಾಕ್ಯ, ಒಂದು ಸಾಮಾನ್ಯವಾಕ್ಯ. (a) ಯಂ ರಣಂ (ತ್ವಂ) ಚಕರ್ಥ, (ತಂ) ಸಂವಕ್ತುಂ ತ್ವಂ ಹಿ ಸಮರ್ಥಃ—ಯಾವ ಯುದ್ಧ ವನ್ನು (ನೀನು) ಮಾಡಿದೆಯೋ ಅದನ್ನು ಹೇಳುವುದಕ್ಕೆ (ವರ್ಣಿಸುವುದಕ್ಕೆ) ನೀನೇ ಸಮರ್ಥ-ಎಂಬುದು ಸಂಯುಕ್ತವಾಕ್ಯ. (b) ತವ (೧ನೇ ಚರಣದಲ್ಲಿ-

'ತವ ರಣಂ' ಎಂಬಲ್ಲಿದೆ) ಪಾದಪದ್ಮಂ ಪ್ರಪದ್ಯೇ–ನಿನ್ನ ಪಾದಕಮಲವನ್ನು ಶರಣುಹೊಂದುತ್ತೇನೆ ಎಂಬುದು ಸಾಮಾನ್ಯವಾಕ್ಯ. (a) ನಲ್ಲಿರುವ 'ರಣಂ'-ಗೆ (ಕ) ಕ್ಷ್ವೇಲಾ ..ಹಾಸಂ, (ಖ) ಬಹ್ವ....ನಿಪುಣಂ ಎಂದು ಎರಡು ವಿಶೇಷಣಗಳು. (b) ನಲ್ಲಿರುವ ತವ-ಕ್ಕೆ i) ಯಸ್ಯ, ii) ಸರ್ವೋತ್ತಮಸ್ಯ, iii) ಯುವಯೋಃ ಎಂದು ಮೂರು ವಿಶೇಷಣಗಳು. ಪಾದಪದ್ಮಂ-ಗೆ ಶುಶ್ರೂಷಾರ್ಥಂ ಎಂದು ವಿಶೇಷಣ. ಮೊದಲು ಸಂಬೋಧನೆಗಳನ್ನು ಹೇಳಿ (a) (b) ಗಳನ್ನು ವಿಶೇಷ್ಯಗಳಿಗೆ ವಿಶೇಷಣ ಜೋಡಿಸಿದರೆ ದಂಡಾನ್ವಯವಾಗುತ್ತದೆ. (ಕೆಳಗೆ ಕೊಟ್ಟಿರುವ ದಂಡಾನ್ವಯ ಓದಿ ಅರ್ಥಮಾಡಿಕೊಳ್ಳಿ.)

ವಾಯುಪರವಾಗಿ ಮೂರು ವಾಕ್ಯಗಳಾಗುತ್ತವೆ. ಹಿಂದಿನಂತೆ ಮೊದಲನೆಯದು ಸಂಯುಕ್ತವಾಕ್ಯ, ಆಮೇಲೆ ಎರಡು ಸಾಮಾನ್ಯವಾಕ್ಯಗಳು. (a) (ತ್ವಂ) ರಣಂ ಯಸ್ಯ ಶುಶ್ರೂಷಾರ್ಥಂ ಚಕರ್ಥ, ತವ (ತಂ) ಸಂವಕ್ತುಂ ಸ್ವಯಂ ಅಯಂ ಸಮರ್ಥಃ ಹಿ—(ನೀನು) ಭಾರತಯುದ್ಧವನ್ನು ಯಾರ ಸೇವೆಗೋಸ್ಕರ ಮಾಡಿದೆಯೋ, ನಿನ್ನ ಆ ಯುದ್ಧವನ್ನು ವರ್ಣಿಸುವುದಕ್ಕೆ ಸ್ವಯಂ ಆ ಭಗವಂತನೇ ಸಮರ್ಥ–ಎಂಬುದು ಸಂಯುಕ್ತವಾಕ್ಯ. (b) ಅಥ ತ್ವಮಪಿ (ಸಮರ್ಥಃ) ಅನಂತರ (ಆ ಭಗವಂತನನ್ನು ಬಿಟ್ಟರೆ) ನೀನೂ ಸಹ ಸಮರ್ಥ. (c) ಯುವಯೋಃ ಪಾದಪದ್ಮಂ ಪ್ರಪದ್ಯೇ–ನಿಮ್ಮಿಬ್ಬರ ಆ ಪಾದ ಕಮಲವನ್ನು ಮೊರೆಹೋಗುತ್ತೇನೆ. ಈ ಅನ್ವಯದಲ್ಲೂ ರಣಂ-ಗೆ ಹಿಂದಿನಂತೆ 'ಕ್ಷ್ವೇಲಾ....ಹಾಸಂ, ಬಹ್ವ....ನಿಪುಣಂ' ಎಂದು ಎರಡು ವಿಶೇಷಣಗಳು. ಯಸ್ಯ ಎಂಬುದಕ್ಕೆ ಸರ್ವೋತ್ತಮಸ್ಯ ಎಂದು ವಿಶೇಷಣ. ಇಷ್ಟು ವಿಚಾರ ತಿಳಿದುಕೊಂಡರೆ ಭೀಮಪರ ಅನ್ವಯವೂ ಅರ್ಥವೂ ಸುಲಭವಾಗುತ್ತದೆ.

272. (a) ಕೃಷ್ಣಪರವಾಗಿ ದಂಡಾನ್ವಯ—1) ಅರಿಹನ್, 2) ಉದ್ಗದೋದ್ದಾಮ ಬಾಹೋ (ಅಥವಾ ಉದ್ಗದ, ಉದ್ದಾಮಬಾಹೋ), 3) ಸ್ವಯಮ, 4) ಅಥ, 5) ಅನಂದತೀರ್ಥ, 6) ಶ್ರೀಮನ್ನಾಮನ್ (ಶ್ರೀಕೃಷ್ಣ !) (a) (ಕ) ಕ್ಷ್ವೇಲಾ ಹಾಸಂ, (ಖ) ಬಹ್ವ....ನಿಪುಣಂ, (ಗ) ಯಂ (ಸ್ವಯಮಯಮಥ ಎಂಬಲ್ಲಿರುವ 'ಯಂ') ರಣಂ (ತ್ವಂ) ಚಕರ್ಥ, ತಂ (ಅಧ್ಯಾಹಾರ) ಸಂವಕ್ತುಂ ಅಪಿ ತ್ವಂ ಹಿ ಸಮರ್ಥಃ । (b) ಯಸ್ಯ

ಸರ್ವೋತ್ತಮಸ್ಯ ಯುವಯೋಃ ತವ ಶುಶ್ರೂಷಾರ್ಥಂ ಪಾದಪದ್ಮಂ ಪ್ರಪದ್ಯೇ ||

(b) ಅನ್ವಯಾರ್ಥ—1) ಅರಿಹನ್-ಶತ್ರುಸಂಹಾರಕನಾದ, 2) ಉದ್ಗದೋದ್ದಾಮಬಾಹೋ—ಉದ್ಗದ-ಉತ್ಕೃಷ್ಟವಾದ ಕೌಮೋದಕೀ ಎಂಬ ಗದೆಯಿಂದ, ಉದ್ದಾಮ-ಎದುರಿಸಲಸಾಧ್ಯವಾದ, ಬಾಹೋ-ಬಾಹುಬಲವುಳ್ಳ, (ಅಥವಾ ಉದ್ಗದ-ದಿವ್ಯವಾದ ಕೌಮೋದಕೀ ಎಂಬ ಗದೆಯನ್ನು ಆಯುಧವಾಗಿ ಧರಿಸಿದ, ಉದ್ದಾಮ-ಬಾಹೋ-ಅಪರಿಮಿತ ಬಾಹುಬಲವುಳ್ಳ,) 3) ಸ್ವಯಮ (ಸು+ಅ-ಯಮ) ಸರ್ವಥಾ ಎದುರಿಲ್ಲದವನಾದ, 4) ಅಥ-ಅನ್ನಸಂಬಂಧಿ ಜರಾಮರಣ-ವೃದ್ಧಿ-ಹ್ರಾಸ-ರೋಗರುಜಿನಾದಿ ಯಾವ ವಿಧವಾದ ದೋಷವೂ ಇಲ್ಲದ, 5) ಆನಂದತೀರ್ಥ-ಬ್ರಹ್ಮಾದಿ ತೃಣಜೀವರ ಪರ್ಯಂತ ಸಕಲರ ಆನಂದಕ್ಕೂ ಕಾರಣನಾದ, 6) ಶ್ರೀಮನ್ನಾಮನ್-ಸಂಪತ್ಕರವಾದ ವಿಷ್ಣು-ನಾರಾಯಣಾದಿ ಅನಂತನಾಮಗಳುಳ್ಳ ಹೇ ಕೃಷ್ಣನೇ! (a) (ಕ) ಕ್ಷ್ವೇಲಾ.... ಹಾಸಂ—೧) ಸಿಂಹನಾದ ಮಾಡುತ್ತ-ಮಾಡುತ್ತ ಉತ್ಸಾಹವು ಹೆಚ್ಚಾಗುವ, ೨) ನಿನ್ನ ಸಿಂಹನಾದದಿಂದ ಶತ್ರುಗಳ ಅಟ್ಟಹಾಸವನ್ನು ಅಡಗಿಸುಬಿಡುವಂಥಾ, ೩) ಶತ್ರುಗಳು ಸಿಂಹನಾದ ಮಾಡಿ ಅಟ್ಟಹಾಸ ಮಾಡಿದರೂ ಸ್ವಲ್ಪವೂ ಎದೆಗುಂದದ; (ಖ) ಬಹ್ವ....ನಿಪುಣಂ-ಅನೇಕ ಅಕ್ಷೋಹಿಣೀ ಸೈನ್ಯವು ನಾಶವಾಗಿ ಹೋಗುವಂತೆ ಮಾಡುವುದರಲ್ಲಿ ಪಟುವಾದ; (ಗ) ಯಂ ರಣಂ-ಯಾವ ಭಾರತಯುದ್ಧವನ್ನು; (ತ್ವಂ) ಚಕರ್ಥ-ನೀನು ಮಾಡಿದೆಯೋ, (ತಂ-ಅದನ್ನು), ಸಂವಕ್ತುಂ ಅಪಿ-ವರ್ಣಿಸುವುದಕ್ಕೂ ಸಹ; ತ್ವಂ ಹಿ ಸಮರ್ಥಃ-ನೀನೊಬ್ಬನೇ ಸಮರ್ಥನು. (b) ಯಸ್ಯ-ಪ್ರಕಾಶರೂಪನಾದ; ಸರ್ವೋತ್ತ-ಮಸ್ಯ-ಸರ್ವೋತ್ತಮನಾದ; ಯುವಯೋಃ-ನಿತ್ಯತಾರುಣ್ಯದಿಂದ ಕೂಡಿ-ದವನೂ ನಿತ್ಯಾವಿಯೋಗಿನಿಯಾದ ಲಕ್ಷ್ಮೀಸಮೇತನೂ ಆದ; ತವ-ನಿನ್ನ, ಶುಶ್ರೂಷಾರ್ಥಂ-ಉಪಾಸನಾರೂಪ ಸೇವೆಯಿಂದಲೇ ಗಮ್ಯವಾದ; ಪಾದ ಪದ್ಮ-ಪಾದಕಮಲದ್ವಯವನ್ನು; ಪ್ರಪದ್ಯೇ-(ನಾನು) ಮೊರೆಹೋಗುತ್ತೇನೆ.

273. ಭೀಮಪರವಾಗಿ ದಂಡಾನ್ವಯ—ಅರಿಹನ್, ಉದ್ಗದೋ-ದ್ದಾಮಬಾಹೋ (ಉದ್ಗದ, ಉದ್ದಾಮಬಾಹೋ)! (a) (ಕ) ಕ್ಷ್ವೇಲಾ....

ಹಾಸಂ, (ಖ) ಬಹ್ವ....ನಿಪುಣಂ ರಣಂ ಸರ್ವೋತ್ತಮಸ್ಯ ಯಸ್ಯ ಶುಶ್ರೂಷಾರ್ಥಂ ಚಕರ್ಥ, (ಕ.ಕ ಪಾಠದಂತೆ-ಉದ್ಗದೋದ್ದಾಮ ಬಾಹೋಃ) ತವ (ಕ.ಕ, ವಿ.ಪಾಠರೀತ್ಯಾ-ಇಹ) (ತಂ ರಣಂ-ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು) ಸಂವಕ್ತುಂ ಏವ ಸ್ವಯಂ ಅಯಂ ಸಮರ್ಥಃ ಹಿ। (b) ಅಥ ಆನಂದತೀರ್ಥಶ್ರೀಮನ್ನಾಮನ್! ತ್ವಮಪಿ ಸಮರ್ಥಃ ಹಿ । (c) ಯುವಯೋಃ ಪಾದಪದ್ಮಂ ಪ್ರಪದ್ಯೇ ॥

ಅನ್ವಯಾರ್ಥ—ಅರಿಹನ್-ಶತ್ರುಸಂಹಾರಕನಾದ ; ಉದ್ಗದೋ.... ಬಾಹೋ-ಉತ್ಕೃಷ್ಟವಾದ ಗದೆಯಿಂದ ಉಚ್ಛೃಂಖಲವಾದ ಬಾಹುವುಳ್ಳ (ಅಥವಾ, ಉದ್ಗದ-ಲಕ್ಷಮಣ ಭಾರವುಳ್ಳ ಪ್ರಚಂಡಗದೆಯೇ ಮುಖ್ಯವಾದ ಆಯುಧವಾಗಿರುವ, ಉದ್ದಾಮಬಾಹೋ-ಅನನ್ಯಸಾಧಾರಣವಾದ ಬಾಹುಬಲವುಳ್ಳ ;) ಹೇ ಭೀಮಸೇನ ! (a) (ಕ) ಕ್ಷ್ವೇಲಾ....ಹಾಸಂ=ಕ್ಷ್ವೇಲಾ ಸಿಂಹನಾದದಿಂದ, ಅಕ್ಷೀಣ-ಪ್ರವೃದ್ಧವಾದ (ಹೆಚ್ಚುವ), ಅಟ್ಟಹಾಸಂ-ಅಟ್ಟಹಾಸವುಳ್ಳ, (ii) ಅಥವಾ ಕ್ಷ್ವೇಲಾ-ಸಿಂಹನಾದದಿಂದ, ಕ್ಷೀಣ-ಕುಗ್ಗಿಹೋದ, ಅಟ್ಟಹಾಸಂ-ಶತ್ರುಗಳ ಅಟ್ಟಹಾಸವುಳ್ಳ ; (iii) ಅಥವಾ ಕ್ಷ್ವೇಲಾ-ಶತ್ರುಗಳ ಸಿಂಹನಾದದಿಂದ, ಅಕ್ಷೀಣ-ಕುಗ್ಗದೇ ಇರುವ, ಅಟ್ಟಹಾಸಂ-ತನ್ನ ಪ್ರತಾಪವುಳ್ಳ ; (ಖ) ಬಹ್ವ....ನಿಪುಣಂ—ಬಹು-ಅಕ್ಷೌಹಿಣೀ-ಅನೀಕ-ಹದಿನೆಂಟು ಅಕ್ಷೋಹಿಣೀ ಸೈನ್ಯವನ್ನು, ಕ್ಷಪಣ-ಧ್ವಂಸಗೊಳಿಸುವುದರಲ್ಲಿ, ನಿಪುಣಂ ಅತ್ಯಂತ ದಕ್ಷವಾದ ; ರಣಂ-ಭಾರತ ಯುದ್ಧವನ್ನು ; ಸರ್ವೋತ್ತಮಸ್ಯ-ಸರ್ವೋತ್ತಮನಾದ ; ಯಸ್ಯ-ಯಾವ ಶ್ರೀಕೃಷ್ಣನ ; ಶುಶ್ರೂಷಾರ್ಥಂ-ಸೇವಾರ್ಥ (ಪ್ರೀತ್ಯರ್ಥ)ವಾಗಿ ; ಚಕರ್ಥ-ನೀನು ಮಾಡಿದೆಯೋ ; (ಕ.ಕ. ಪಾಠರೀತ್ಯಾ-ಉದ್ಗದೋದ್ದಾಮ ಬಾಹೋಃ- ಉತ್ಕೃಷ್ಟವಾದ ಗದೆಯಿಂದ ಅಸದೃಶವಾದ ಬಾಹುಬಲವುಳ್ಳ) ತವ-ನಿನ್ನ (ಕ.ಕ. ವಿ) ಇಹ-ಈ ಯುದ್ಧದ ವಿಷಯದಲ್ಲಿ, ಅಥವಾ (ತಂ ರಣಂ-ಆ ಯುದ್ಧವನ್ನು) ; ಸಂವಕ್ತುಂ ಏವ= ಹೇಳುವುದಕ್ಕೂ (ವರ್ಣಿಸುವುದಕ್ಕೂ) ; ಸ್ವಯಂ ಅಯಂ=ಈ ಭಗವಂತ ತಾನು ಮಾತ್ರವೇ ; ಸಮರ್ಥಃ ಹಿ-ಸಮರ್ಥನು, ಇದು ಪ್ರಸಿದ್ಧವು. (b) ಅಥ-ಅವನನ್ನು ಬಿಟ್ಟರೆ ; ಆನಂದತೀರ್ಥ-ಶ್ರೀಮನ್ನಾಮನ್-ಆನಂದತೀರ್ಥ

ರೆಂಬ ಪುಣ್ಯಕರವಾದ ಹೆಸರುಳ್ಳ ಹೇ ಮಧ್ವಾಚಾರ್ಯರೇ ! ತ್ವಮಪಿ ಹಿ-ನೀವೂ ಕೂಡ; (ಸಮರ್ಥಃ)-ಸಮರ್ಥರು. (c) ಯುವಯೋಃ-ನಿಮ್ಮಿಬ್ಬರ, ಪಾದಪದ್ಮಂ-ಪಾದಕಮಲದ್ವಯವನ್ನು ; ಪ್ರಪದ್ಯೇ-ಶರಣಂ ಹೊಂದುತ್ತೇನೆ.

ಈ ಶ್ಲೋಕದಲ್ಲಿ ಮುಖ್ಯವಾಗಿ ಪ್ರಸಕ್ತವಾಗಿರುವ ಭೀಮನ ಸಾಹಸ-ಶೌರ್ಯಗಳೂ ಇಡೀ ಶ್ಲೋಕದ ಭಾವಾರ್ಥದ ಧೋರಣೆಯೂ ಸ್ಪಷ್ಟವಾಗಿ ತಿಳಿಯಬೇಕಾದರೆ ಮಹಾಭಾರತ ಯುದ್ಧದ ಕೆಲವು ಮುಖ್ಯ ಘಟನೆಗಳಾದರೂ ಅವಶ್ಯ ತಿಳಿದಿರಲೇಬೇಕು. ಆದಕಾರಣ ಅಂಥಾ ಮುಖ್ಯ ವಿಚಾರಗಳನ್ನೂ ಅವುಗಳ ಜೊತೆ ಭೀಮನ ಶೌರ್ಯಪರಾಕ್ರಮಗಳನ್ನೂ ಮೊದಲು ತಿಳಿಸಿ ಅನಂತರ ಭಾವಾರ್ಥಕ್ಕೆ ಹೋಗುವೆನು.

ಕೌರವ—ಪಾಂಡವರ ಮಹಾಯುದ್ಧ

274 (ಕ) ಮಹಾಭಾರತದ ಯುದ್ಧ—ಅನೇಕ ಪುರಾಣಗಳಲ್ಲೂ ರಾಮಾಯಣದಲ್ಲೂ ಅನೇಕ ಯುದ್ಧಗಳ ವರ್ಣನೆ ಬಂದಿದೆಯಾದರೂ ಯಾವ ಯುದ್ಧವೂ ಮಹಾಭಾರತದಲ್ಲಿ ನಿರೂಪಿತವಾದ ಕೌರವಪಾಂಡವರ ಮಹಾ-ಯುದ್ಧದಷ್ಟು ಘೋರವೂ ರೋಮಾಂಚಕಾರಿಯೂ ವಿಸ್ತರವುಳ್ಳದ್ದೂ ಆಗಿಲ್ಲ. 'ಭಾರತಯುದ್ಧ'ವೆಂಬುದು ಗಾದೆಯ ಮಾತಾಗಿದೆ. ಭಾರತದ ಸಾಹಿತ್ಯದಲ್ಲೇ ಏಕೆ, ಪ್ರಾಯಶಃ ಪ್ರಪಂಚದ ಯಾವ ಸಾಹಿತ್ಯದಲ್ಲೂ ಒಂದು ಯುದ್ಧದ ಇಷ್ಟು ವಿಸ್ತಾರವಾದ ಮತ್ತು ಇಷ್ಟು ಆಕರ್ಷಣೀಯವೂ ರೋಮಾಂಚ-ಜನಕವೂ ಆದ ವರ್ಣನೆ ಬಂದಿರಲು ಸಾಧ್ಯವಿಲ್ಲ. ಮಹಾಭಾರತ ಯುದ್ಧದ ಈ ಕಥೆಯು ಕೆಳಗಿನಂತೆ ಮಹಾಭಾರತದ ಆರು ಪರ್ವಗಳಲ್ಲಿ ಹಂಚಿ ಹರಡಿದೆ: ೧) ಭೀಷ್ಮಪರ್ವ, ಭಗವದ್ಗೀತಾಪರ್ವ ಬಿಟ್ಟು ೮೦ ಅಧ್ಯಾಯ, ೨) ದ್ರೋಣ ಪರ್ವ, ೨೦೩ ಅಧ್ಯಾಯ, ೩) ಕರ್ಣಪರ್ವ, ೧೦೧ ಅಧ್ಯಾಯ, ೪) ಶಲ್ಯ-ಪರ್ವ, ೨೭ ಅಧ್ಯಾಯ, ೫) ಗದಾಪರ್ವ, ೩೯ ಅಧ್ಯಾಯ, ೬) ಸೌಪ್ತಿಕಪರ್ವ ೧೮ ಅಧ್ಯಾಯ. ಕೆಲವರು ಗದಾಪರ್ವವನ್ನು ಶಲ್ಯಪರ್ವದೊಡನೆ ಬೆರಸಿ ಈ ಪರ್ವಗಳನ್ನು ಯುದ್ಧಪಂಚಕ ಎನ್ನುವುದೂ ಉಂಟು. ಈ ಭಾರತಯುದ್ಧವು ಹದಿನೆಂಟು ದಿನಗಳು ನಡೆದು ಕೊನೆಗೊಂಡಿತು. ಆ ಪೈಕಿ ಮೊದಲ ಹತ್ತು

ದಿನ ಭೀಷ್ಮಾಚಾರ್ಯರು ಸೇನಾಪತಿಯಾಗಿ ಯುದ್ಧ ನಡೆಸಿದರು; ಆಮೇಲೆ ದ್ರೋಣಾಚಾರ್ಯರು ಐದು ದಿನವೂ, ಕರ್ಣ ಎರಡು ದಿನಗಳೂ, ಶಲ್ಯ ಒಂದು ಹಗಲೂ ಸೇನಾಪತಿಗಳಾಗಿ ಯುದ್ಧ ನಡೆಸಿದರು. ಕೊನೆಯ ದಿನ ರಾತ್ರಿಯೇ ಗದಾಪರ್ವ-ಸೌಪ್ತಿಕ ಪರ್ವಗಳ ಕಥೆಗಳು ನಡೆದುವು. (ಸುಪ್ತಿ ಎಂದರೆ ಮಲಗಿ ನಿದ್ದೆ ಮಾಡುವಿಕೆ ಅಥವಾ ನಿದ್ದೆ ಮಾಡುವುದು ಎಂದರ್ಥ. ಮಲಗಿ ನಿದ್ದೆಮಾಡುತ್ತಿದ್ದ ಮೂರು ಅಕ್ಷೋಹಿಣೀ ಪಾಂಡವಸೈನ್ಯವನ್ನು ಅಶ್ವತ್ಥಾಮನೊಬ್ಬನೇ ಆ ರಾತ್ರಿಯೇ ನಾಶ ಮಾಡಿದ ಕಥೆ ಹೇಳಿರುವುದರಿಂದ ಈ ಪರ್ವಕ್ಕೆ ಸೌಪ್ತಿಕ ಪರ್ವ ಎಂಬ ಹೆಸರು ಬಂದಿದೆ.)

ಇನ್ನು ಸೈನ್ಯದ ವಿಚಾರಕ್ಕೆ ಹೋಗೋಣ. ಅಕ್ಷೋಹಿಣಿಯ ವರ್ಣನೆ ಹಿಂದೆ ಖಂಡ 270-ಥ-ದಲ್ಲಿ ಬಂದಿದೆ. ಅದರಂತೆ ೨೧ ಸಾವಿರ ಚಿಲ್ಲರೆ ರಥಗಳು ಮತ್ತು ಆನೆಗಳು, ೬೫ ಸಾವಿರ ಚಿಲ್ಲರೆ ಕುದುರೆ ಸವಾರರು, ಒಂದು ಲಕ್ಷ ಚಿಲ್ಲರೆ ಕಾಲಾಳುಗಳಿರುವ ಸೈನ್ಯಕ್ಕೆ ಒಂದು ಅಕ್ಷೋಹಿಣೀ ಎಂದು ಹೆಸರು. ಕೌರವರ ಕಡೆ ಹನ್ನೊಂದು ಅಕ್ಷೋಹಿಣಿಗಳೂ ಪಾಂಡವರ ಕಡೆ ಏಳು ಅಕ್ಷೋಹಿಣಿಗಳೂ ಇದ್ದುವು; ಕೊನೆಯಲ್ಲಿ ಹದಿನೆಂಟು ಅಕ್ಷೋಹಿಣಿಗಳೂ ನಾಶವಾಗಿ ಹೋದುವು. ಆ ನಾಶವೇ ಈ ಶ್ಲೋಕದ ಮುಖ್ಯವಿಚಾರ.

ಈ ರೀತಿ ಭೂಭಾರ ಇಳಿಸಬೇಕೆಂಬುದೇ ಶ್ರೀಕೃಷ್ಣನ ಇಚ್ಛೆಯಾಗಿತ್ತೆಂಬುದು ಕೃಷ್ಣಜನ್ಮಾಷ್ಟಮೀ ತರ್ಪಣ ಮಂತ್ರದಲ್ಲೂ ಬಂದಿದೆ-'ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ' (ಉತ್ತಾರಣ-ಇಳಿಸುವಿಕೆ) ಶ್ರೀಕೃಷ್ಣ ಕಂಸಾದಿ ಅಸುರರನ್ನು ಸಂಹರಿಸುವುದಕ್ಕಾಗಿಯೂ ಭೂಮಿಯ ಭಾರವನ್ನು ಇಳಿಸುವುದಕ್ಕಾಗಿಯೂ ಹುಟ್ಟಿದ್ದನು. ಅವನ ಈ ಕಾರ್ಯದಲ್ಲಿ ಭೀಮ ಪ್ರಧಾನಾಂಗವಾಗಿದ್ದನು. ಭೀಮ ಶ್ರೀಕೃಷ್ಣನ ಸೇವಾರೂಪವಾದ (ಶುಶ್ರೂಷಾರ್ಥಂ ಚಕರ್ಥ) ಈ ಧರ್ಮ ಮಾಡಿದನೆಂದೂ ಅದರಿಂದ ಕೃಷ್ಣನಿಗೆ ಸುಪ್ರೀತಿಯೂ ಆಯಿತೆಂಬುದು ಶ್ರೀಕೃಷ್ಣನ ಮಾತಿನಿಂದಲೇ ತಿಳಿದುಬರುತ್ತದೆ. ಹೇಗೆಂದರೆ—ದುರ್ಯೋಧನಪಕ್ಷಪಾತಿಯಾದ ಬಲರಾಮ (ಗದಾಪರ್ವದ ಕಡೆಯ ಭಾಗದಲ್ಲಿ ಈ ಪ್ರಸಂಗ ಬಂದಿದೆ) ಪಾಂಡವರು ಮಾಡಿದ್ದೆಲ್ಲ ಅಧರ್ಮ-

ಯುದ್ಧವೆಂದು ಹೇಳಿದ. ಅದನ್ನು ಕೇಳಿದ ಜನಗಳ ಸಂಶಯವನ್ನು ದೂರ ಮಾಡುತ್ತಾ ಕೃಷ್ಣ ಎಲ್ಲ ಜನಗಳ ಮುಂದೆಯೂ

ಭೂಭಾರಕ್ಷತಿಜೋ ಧರ್ಮೋ ಮಚ್ಛುಶ್ರೂಷಾತ್ಮಕಶ್ಚ ಯಃ ।
ಭೀಮಸ್ಯೈವ ಭವೇತ್ ಸಮ್ಯಕ್........(ತಾ.ನಿ. ೨೮।೯೫)

(ಕ್ಷತಿ–ಕ್ಷಯ, ನಾಶ; ಜ–ಹುಟ್ಟಿದ, ಉದ್ಭವಿಸಿದ.)

'ಭೀಮ ನನ್ನ ಶುಶ್ರೂಷೆಯು (ಸೇವಾ) ರೂಪವಾಗಿ ಏನು ಭೂಭಾರ ನಾಶ ಮಾಡಿದ್ದಾನೋ ಆದರಿಂದ ನನಗೆ ಪ್ರೀತಿಯೇ ಆಗಿದೆ, ಆದ್ದರಿಂದ ಈ ಯುದ್ಧವು ಧರ್ಮವೇ ಹೊರತು ಅಧರ್ಮವಲ್ಲ. ಈ ಧರ್ಮದ ಪುಣ್ಯಭಾಗ ವೆಲ್ಲ ಅವನಿಗೇ ಸೇರುತ್ತದೆ'—ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಇದರಿಂದ ವಾಯುಸ್ತುತಿಯಲ್ಲಿ ಹೇಳಿದ **ಯಸ್ಯ ಸರ್ವೋತ್ತಮಸ್ಯ, ಶುಶ್ರೂಷಾರ್ಥಂ ಚಕರ್ಥ** ಎಂಬ ಮಾತಿಗೆ ಪ್ರಾಮಾಣ್ಯ ತೋರಿಸಿದಂತಾಯಿತು.

ಖ) 'ಬಹ್ವಕ್ಷೌಹಿಣ್ಯನೀಕಕ್ಷಪಣಂ'ದ ವಿವರ—ಕೌರವ-ಪಾಂಡವರ ಇತ್ತಂಡ ಸೇನೆಯಲ್ಲಿ ಯಾರು ಯಾರು ಎಷ್ಟೆಷ್ಟು ಸೈನ್ಯ ನಾಶ ಮಾಡಿದರೆಂಬ ನಿರ್ಣಯ ೨೮ನೇ ಅಧ್ಯಾಯದಲ್ಲಿ (೪೩–೫ ಶ್ಲೋ.) ಹೀಗೆ ಹೇಳಿದ್ದಾರೆ—

ಏವಮಕ್ಷೌಹಿಣೀಷಟ್ಕಂ ಭೀಮೇನ ನಿಹತಂ ರಣೇ ।
ಪಂಚ ಪಾರ್ಥೇನ ನಿಹತಾ ಅರ್ಧಂ ಕಾಲಿಂಗಕಾನ್ ಋತೇ ॥
ಏಕಾದಶಾಕ್ಷೌಹಿಣೀಭ್ಯಃ ಶಿಷ್ಟಮನ್ಯೈರ್ನಿಷೂದಿತಮ್

(ಷಟ್ಕಂ–ಆರು, ನಿಹತಂ–ಸಂಹರಿಸಲ್ಪಟ್ಟಿತು. ಋತೇ–ಹೊರತು, ಬಿಟ್ಟು. ಶಿಷ್ಟಂ–ಮಿಕ್ಕದ್ದು. ನಿಷೂದಿತಂ–ಕೊಲ್ಲಲ್ಪಟ್ಟಿತು.)

'ಹೀಗೆ ಕೌರವರ ಹನ್ನೊಂದು ಅಕ್ಷೋಹಿಣೀ ಸೈನ್ಯದ ಪೈಕಿ ಭೀಮ ಒಬ್ಬನೇ ಆರು ಅಕ್ಷೋಹಿಣಿಯನ್ನು ಸಂಹಾರ ಮಾಡಿದನು. ಅರ್ಜುನನು, ಕಲಿಂಗರ ಅರ್ಧ ಅಕ್ಷೋಹಿಣೀ ಬಿಟ್ಟು ಐದನ್ನು, ಎಂದರೆ ನಾಲ್ಕೂವರೆ ಅಕ್ಷೌಹಿಣಿ ಯನ್ನು ನಾಶಮಾಡಿದನು. ಮಿಕ್ಕ ಅರ್ಧ ಅಕ್ಷೋಹಿಣಿಯನ್ನು ಧೃಷ್ಟ ದ್ಯುಮ್ನಾದಿ ಪಾಂಡವ ವೀರರೆಲ್ಲಾ ಸೇರಿ ಸಂಹಾರ ಮಾಡಿದರು.

ಅಕ್ಷೌಹಿಣೀಚತುಷ್ಕಂ ಚ ಪಾರ್ಥಾನಾಂ ದ್ರೌಣಿನಾ ಹತಮ್ ॥
ಅನ್ಯೈರನ್ಯಾಃ ಸಮಸ್ತೈಶ್ಚ ದ್ರೋಣ-ಕರ್ಣಮಹಾವ್ರತಾಃ ।

ದುರ್ಯೋಧನೋ ಭೌಮಸೂನುಃ ಪ್ರಾಯಃ ಸೇನಾಹನಃ ಕ್ರಮಾತ್ ||

(ಚತುಷ್ಕಂ – ನಾಲ್ಕು. ದ್ರೌಣಿನಾ – ದ್ರೋಣಾಚಾರ್ಯರ ಮಗನಾದ ಅಶ್ವತ್ಥಾಮನಿಂದ ಭೌಮಸೂನುಃ–ನರಕಾಸುರನ ಮಗನಾದ ಭಗದತ್ತ.)

'ಪಾಂಡವರ ಕಡೆಯ ಏಳು ಅಕ್ಷೌಹಿಣೀ ಸೈನ್ಯದ ಪೈಕಿ ಅಶ್ವತ್ಥಾಮ ಒಬ್ಬನೇ ನಾಲ್ಕು ಅಕ್ಷೌಹಿಣಿಯನ್ನು ನಾಶಮಾಡಿದನು. ಒಂದು ರಾತ್ರಿಯೇ ಮೂರು, ಮಿಕ್ಕ ಹದಿನೆಂಟು ದಿನಗಳಲ್ಲಿ ಒಟ್ಟು ಒಂದು ಅಕ್ಷೋಹಿಣೀ. ಉಳಿದ ಮೂರು ಅಕ್ಷೋಹಿಣಿಯನ್ನು ಮಿಕ್ಕವರೆಲ್ಲಾ ಸೇರಿ ನಾಶಮಾಡಿದರು. ಹಾಗೆ ನಾಶ ಮಾಡಿದವರಲ್ಲಿ ದ್ರೋಣ, ಕರ್ಣ, ಭೀಷ್ಮ, ದುರ್ಯೋಧನ, ಭಗದತ್ತ ಇವರು ಹೆಚ್ಚು-ಹೆಚ್ಚು ಕೊಂದವರ ಕ್ರಮ. ದ್ರೋಣ ಎಲ್ಲರಿಗಿಂತ ಹೆಚ್ಚು, ಅವರನ್ನು ಬಿಟ್ಟರೆ ಕರ್ಣ ಇತ್ಯಾದಿ. ಹೀಗೆ ಭೀಮ ಆರನ್ನೂ, ಅರ್ಜುನ ನಾಲ್ಕೂವರೆಯನ್ನೂ ಅಶ್ವತ್ಥಾಮ ನಾಲ್ಕನ್ನೂ ನಾಶಮಾಡಿದರೂ ಯುದ್ಧ ಮುಗಿಯುವ ಹೊತ್ತಿಗೆ ಯುದ್ಧಕ್ಕೆ ಕಲೆತಿದ್ದ ಹದಿನೆಂಟು ಅಕ್ಷೋಹಿಣಿಯೂ ನಾಶವಾಗಿ ಹೋಯಿತು. ಆದ್ದರಿಂದ ಬಹ್ವ.... ಕ್ಷಪಣಸುನಿಪುಣಂ ಎಂಬ ವಿಶೇಷಣವನ್ನು ಯುದ್ಧಕ್ಕೆ ('ರಣಂ'ಗೆ) ಕೊಟ್ಟಿರುವುದು ಬಹಳ ಸೂಕ್ತವಾಗಿದೆ.

ಗ) ಯುದ್ಧದಲ್ಲಿ ಭೀಮನ ಪಾತ್ರ—ಮೇಲೆ ಹೇಳಿದಂತೆ ಹದಿನೆಂಟು ಅಕ್ಷೋಹಿಣಿಯ ಪೈಕಿ ಭೀಮನೊಬ್ಬನೇ ಆರು ಅಕ್ಷೋಹಿಣಿಯನ್ನು ನಾಶ ಮಾಡಿದನು. ಇದು ಯುದ್ಧದ ಮಾತಾಯಿತು. ಈ ಯುದ್ಧದಲ್ಲಿ ಮಾತ್ರ ವಲ್ಲದೆ ಬೇರೆ ಕಡೆಗಳಲ್ಲೂ ಭೀಮಸೇನ ದೈತ್ಯಸಂಹಾರ ಮಾಡಿ ಭೂಭಾರ ಇಳುಹಲು ಶ್ರೀಕೃಷ್ಣನಿಗೆ ನೆರವಾಗಿದ್ದಾನೆ. ೨೨ನೇ ಶ್ಲೋಕದಲ್ಲಿ ಬಕಾಸುರ ನನ್ನೂ ಕಿರ್ಮೀರನನ್ನೂ ೨೩ರಲ್ಲಿ ಜರಾಸಂಧನನ್ನೂ ೨೮ರಲ್ಲಿ ಮಣಿಮಂತನೇ ಮೊದಲಾದ 'ಬಹ್ವೀಃ ಕೋಟೀಃ' ದೈತ್ಯರನ್ನೂ ವಧಿಸಿದ ವಿಚಾರ ಬಂದಿದೆ. ಇದನ್ನೆಲ್ಲ ಲಕ್ಷಿಸಿಯೇ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ (೨ ಅ. ೧೬ ಶ್ಲೋ.)—

ಭೂಭಾರಹರಣೇ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ ।

'ಭೀಮನು ಭೂಭಾರ ಇಳಿಸುವ ಕಾರ್ಯದಲ್ಲಿ ಶ್ರೀವಿಷ್ಣುವಿಗೆ ಪ್ರಧಾನಾಂಗ'

ವೆಂದು ಹೇಳಿದ್ದಾರೆ. (ಈ ವಿಷಯವನ್ನು ಭೀಮಾವತಾರ ಮಹಿಮೆ ಮುಗಿಸುವ ಮುನ್ನ ಖಂಡ 316 ಐದಲ್ಲಿ ಪುನಃ ವಿವರಿಸುವೆವು.) ಈ ಅಂಶವನ್ನು (ಪ್ರಧಾನಾಂಗವೆಂಬುದನ್ನು) ಸೂಚಿಸುವುದಕ್ಕಾಗಿಯೇ ಈ ಶ್ಲೋಕದಲ್ಲಿ ಭೀಮಸೇನನಿಗೆ ಅರಿಹನ್ ಎಂಬ ವಿಶೇಷಣ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಆ ಭೂಭಾರಹರಣ ಕಾರ್ಯದಲ್ಲಿ ಅವನಿಗೆ ಅವನ ಪ್ರಧಾನಾಯುಧವಾದ ಗದೆಯೂ ಜೊತೆಗೆ ಅಪದೃಶವಾದ ಬಾಹುಬಲವೂ ಸಹಕಾರಿಗಳಾಗಿದ್ದುವೆಂದು ತೋರಿಸುವುದಕ್ಕಾಗಿ ಉದ್ಗದ ಎಂದೂ ಉದ್ದಾಮಬಾಹೋ ಎಂದೂ ವಿಶೇಷಣ ಕೊಟ್ಟಿದ್ದಾರೆ. ಗದೆಯೂ ಬಾಹುಬಲವೂ ಒಂದು ರೀತಿ ನೆರವಾದರೆ ಅವನ ಸಿಂಹನಾದವೇ ಇನ್ನೊಂದು ಸಾಧನವಾಗಿತ್ತು; ಇದನ್ನು ಕ್ಷ್ವೇಲಾ-ಕ್ಷೀಣಾಟ್ಟಹಾಸಂ ಎಂಬ ಶಬ್ದಾವಳಿಯಿಂದ ತೋರಿಸಿದ್ದಾರೆ. ಯುದ್ಧಪರ್ವಗಳೆಂದು ಪ್ರಸಿದ್ಧವಾದ ಐದು ಪರ್ವಗಳಲ್ಲೂ ಭೀಮನಿಗೆ ಈ ಸಹಕಾರಿಗಳೆಲ್ಲ ಹೇಗೆ ನೆರವಾದುವೆಂಬುದರ ವರ್ಣನೆ ಯಥೇಷ್ಟವಾಗಿ ಸಿಗುತ್ತದೆ.

ಭೀಮನ ಯುದ್ಧದ ವೈಖರಿಯು ವರ್ಣನೆ ಎಲ್ಲ ಪರ್ವಗಳಲ್ಲೂ ಹೆಜ್ಜೆ-ಹೆಜ್ಜೆಗೂ ಬಂದಿದೆ—ಭೀಷ್ಮಪರ್ವದಲ್ಲಿ ೫೪, ೬೩, ೬೪, ೭೭, ೮೮, ೯೬, ೧೧೩-೧೪ನೇ ಅಧ್ಯಾಯಗಳಲ್ಲೂ, ದ್ರೋಣಪರ್ವದಲ್ಲಿ ೧೫, ೧೦೮, ೧೩೧-೩೯, ೧೫೬, ೧೫೮, ೧೬೭, ೧೭೮, ೨೦೦ನೇ ಅಧ್ಯಾಯಗಳಲ್ಲೂ, ಕರ್ಣಪರ್ವದಲ್ಲಿ ೯, ೧೨, ೪೦, ೪೭, ೪೫-೬, ೬೨, ೮೦-೮೧, ೮೬-೮೮ರಲ್ಲೂ, ಶಲ್ಯ-ಪರ್ವದಲ್ಲಿ ೧೧, ೨೫-೬ರಲ್ಲೂ ಮುಖ್ಯವಾಗಿ ಬಂದಿದೆ. ಗದಾಪರ್ವದಲ್ಲಂತೂ ಅವನ ಪರಾಕ್ರಮವೇ ತುಂಬಿದೆ. ಈ ವರ್ಣನೆಗಳು ಎಲ್ಲೆಲ್ಲಿ ಬಂದರೂ ಮೈನವಿರೇಳುವಂತಿರುವುವಲ್ಲದೆ ಅವನ ಅತಿಮಾನುಷ ಶಕ್ತಿಯನ್ನೂ ಅವನ ವರ್ಣನಾತೀತವಾದ ಉತ್ಸಾಹ, ಸಾಹಸ, ಪರಾಕ್ರಮಗಳನ್ನೂ ಎತ್ತಿತೋರಿಸುವುವೇ ಆಗಿವೆ. ಭೀಮನ ಸಿಂಹನಾದದ ಮಹಿಮೆ ಎಂಥಾದ್ದು, ಅವನ ಬಾಹುಬಲ, ಸಾಹಸ, ಉತ್ಸಾಹ ಎಲ್ಲವೂ ಎಷ್ಟು ಅದ್ಭುತವಾದವು ಎಂಬುದಕ್ಕೆ ನಿದರ್ಶನರೂಪವಾಗಿ ಮಹಾಭಾರತಯುದ್ಧದ ಒಂದೇ ಒಂದು ಪ್ರಸಂಗವನ್ನು ಸಂಕ್ಷೇಪವಾಗಿ ಕೊಡುವೆನು. ಈ ಪ್ರಸಂಗ ಮಹಾಭಾರತದ ಕರ್ಣಪರ್ವದ ೮೬ ರಿಂದ ೮೮ರ ವರೆಗಿನ ಮೂರು ಅಧ್ಯಾಯಗಳಲ್ಲೂ ತಾತ್ಪರ್ಯನಿರ್ಣಯದ

೨೭ನೇ ಅಧ್ಯಾಯದಲ್ಲಿ ಹದಿನೇಳು (೧೪೩-೫೯) ಶ್ಲೋಕಗಳಲ್ಲೂ ವಿಸ್ತಾರವಾಗಿ ವರ್ಣಿತವಾಗಿದೆ.

ಘ) ದುಶ್ಶಾಸನನ ವಧೆ—ಹದಿನೇಳನೇ ದಿವಸದ ಯುದ್ಧವು ಮುಂದೆ ಸಾಗಿತ್ತು. ಒಂದು ಕಡೆ ಭೀಮ ಕೌರವಸೈನ್ಯವನ್ನು ನಾಶಮಾಡುತ್ತಾ ಮುನ್ನುಗ್ಗುತ್ತಿದ್ದನು. ಅವನನ್ನು ಎದುರಿಸಲು ಹೇಳಿ ದುರ್ಯೋಧನ ತನ್ನ ಮಾವ ಶಕುನಿಯನ್ನು ಕಳುಹಿಸಿದ. ಅವನು ತನ್ನ ತಮ್ಮಂದಿರಿಂದಲೂ ದೊಡ್ಡ ಸೈನ್ಯದೊಡನೆಯೂ ಸಮೇತನಾಗಿ ಭೀಮನನ್ನು ಎದುರಿಸಿ ಅವನ ಮೇಲೆ ಬಾಣದ ಮಳೆಗರೆದ. ಭೀಮ ಅವನ್ನೆಲ್ಲಾ ನಿವಾರಿಸಿ ಅವನ ಮೇಲೆ ಪ್ರಬಲಾಸ್ತ್ರವನ್ನು ಬಿಟ್ಟ. ಶಕುನಿ ಅದನ್ನು ಏಳು ತುಂಡು ಮಾಡಿ ಕತ್ತರಿಸಿದನು. ಆಗ ಭೀಮ ಒಂದು ಕ್ಷಣದಲ್ಲಿಯೇ ಬಾಣ ಹೊಡೆದು ಶಕುನಿಯ ರಥವನ್ನು ಛೇದಿಸಿ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿ ಅವನ ಶಸ್ತ್ರಾಸ್ತ್ರಗಳನ್ನೆಲ್ಲಾ ಛೇದಿಸಿ ಅವನನ್ನು ನೆಲಕ್ಕುರುಳಿಸಿದನು, ಅವನು ಬದುಕುವುದೇ ದುಸ್ತರವಾಯಿತು. ಆಕ್ಷಣ ದುರ್ಯೋಧನ ಧಾವಿಸಿ ಬಂದು ತನ್ನ ಮಾವನನ್ನು ಬೇರೆ ರಥದಲ್ಲಿ ಕೂಡಿಸಿಕೊಂಡು ಹೊರಟುಹೋದನು. ಶಕುನಿಯನ್ನು ಸೋಲಿಸಿದ್ದು ಕಂಡು ದುಶ್ಶಾಸನ ಭೀಮನ ಮೇಲೆ ಬಾಣಗರೆಯುತ್ತಾ ಯುದ್ಧಕ್ಕೆ ಬಂದನು. ಅಷ್ಟೇ ಮಾಡಿದ್ದರೆ ಕ್ಷೇಮವಾಗಿತ್ತು ದುಷ್ಟಸ್ವಭಾವದ ಅವನು ಭೀಮಸೇನನನ್ನು ಹಿಯ್ಯಾಳಿಸುತ್ತಾ ಬಿರುನುಡಿಗಳನ್ನಾಡಿ ಅವನನ್ನು ಕೆರಳಿಸಿಬಿಟ್ಟನು. ಭೀಮನಿಗೆ ಕೋಪವು ಉಕ್ಕೇರಿತು. ಕಣ್ಣುಗಳನ್ನು ಕೆರಳಿಸಿಕೊಂಡು ದುಃಶಾಸನನ ಮೇಲೆ ನುಗ್ಗಿ ಒಂದೇ ಕ್ಷಣದಲ್ಲಿ ಅವನನ್ನು ರಥದಿಂದ ಕೆಡವಿ ನೆಲದ ಮೇಲೆ ಹಾಕಿ ಕಾಲಿಂದ ತುಳಿಯುತ್ತಾ ಗದಾಪ್ರಹಾರದಿಂದ ಅವನ ಎದೆಯನ್ನೇ ಸೀಳಿಬಿಟ್ಟನು. ಒಂದು ಕಾಲನ್ನು ಅವನ ಕುತ್ತಿಗೆಯ ಮೇಲಿಟ್ಟು ಊರಿಕೊಂಡು ಇನ್ನೊಂದು ಕಾಲನ್ನು ಅವನ ಎದೆಯ ಮೇಲೆ ಅದುಮಿ ಕೈಯಿಂದ ಖಡ್ಗವನ್ನು ಎತ್ತಿಕೊಂಡು ಅವನ ಎದೆಯೊಳಗೆ ಚುಚ್ಚಿದನು. ರಕ್ತ ಛಿಳ್ಳೆಂದು ಉಕ್ಕುತ್ತಾ ಮೇಲಕ್ಕೆ ಪುಟಿದು ಬಂತು. ಆಮೇಲೆ ಅವನ ಬಿರುನುಡಿಗಳಿಗೆ ಪ್ರತಿಯಾಗಿ ಮರುಬಿರುಸು ನುಡಿಗಳನ್ನು ಆಡುತ್ತಾ ಅವನು ಹಿಂದೆ ಮಾಡಿದ ದುಷ್ಕೃತ್ಯ-ಅನ್ಯಾಯಗಳನ್ನೆಲ್ಲಾ

ಹೇಳಿ ಹೇಳಿ ಹಂಗಿಸುತ್ತಾ, ಕಾಲಿಂದ ಒದೆಯುತ್ತಾ ಅವನ ರಕ್ತವನ್ನು ಕುಡಿದನೋ ಎಂದು ತೋರುವಂತೆ ರಕ್ತವನ್ನು ಪುನಃ ಪುನಃ ತುಟಿಗಳಿಗೆ ಒರೆಸಿ ಕೊಳ್ಳುತ್ತಾ ಮನ್ಯುಸೂಕ್ತವನ್ನು ಪಠಿಸಿ ನರಸಿಂಹಸ್ವಾಮಿಯನ್ನು ಧ್ಯಾನಿಸಿ ರಕ್ತದಲ್ಲಿರುವ ಸೋಮರಸವನ್ನು ಆ ಸ್ವಾಮಿಗೆ ಅರ್ಪಿಸಿದನು. ಆಮೇಲೆ ಭಯಂಕರವಾಗಿ ಸಿಂಹನಾದ ಮಾಡುತ್ತಾ ರಣರಂಗದಲ್ಲಿ ಎಲ್ಲರಿಗೂ ಕೇಳಿಸು ವಂತೆ ಗಟ್ಟಿಯಾಗಿ 'ಇಗೋ ನೋಡಿ, ಈ ದುಷ್ಟನನ್ನು ಸಂಹರಿಸುತ್ತಿದ್ದೇನೆ. ಇವನನ್ನು ಬಿಡಿಸಿಕೊಳ್ಳುವ ಶೂರರು ಯಾರಾದರೂ ಇದ್ದರೆ ಮುಂದೆ ಬನ್ನಿ' ಎಂದು ಗರ್ಜನೆ ಮಾಡುತ್ತಾ ದುಶ್ಶಾಸನನ ಎದೆಯ ಮೇಲೆಯೇ ನರ್ತನ ಮಾಡಿದನು. ವೀರಾಧಿವೀರರೆನಿಸಿಕೊಂಡ ಕರ್ಣ, ದುರ್ಯೋಧನ, ಅಶ್ವತ್ಥಾಮ ಮೊದಲಾದ ಯಾರೂ, ಭೀಮನನ್ನು ಎದುರಿಸುವುದಿರಲಿ, ಅವನ ಎದುರಿಗೆ ಸಹ ನಿಲ್ಲಲು ಆಗದೆ ಹೆದರಿ ದೂರದೂರ ಹೊರಟು ಹೋದರು. ಕರ್ಣನಿಗೆ ಆ ದೃಶ್ಯವನ್ನು ನೋಡಿದ್ದರಿಂದಲೇ ಮೈಮೇಲೆ ಸ್ಮೃತಿಯೇ ತಪ್ಪಿಹೋಯಿತು. ಕೈಲಿದ್ದ ಧನುಸ್ಸು ತನಗೆ ತಾನೇ ಜಾರಿಬಿತ್ತು. ಭಯತ್ರಸ್ತನಾದ ಅಶ್ವತ್ಥಾಮ ಭೀಮನ ಉಗ್ರರೂಪ ನೋಡಲಾರದೆ ಎಲ್ಲೋ ಕಣ್ಣಿಗೆ ಕಾಣಿಸ ದಂತೆ ದೂರ ಹೊರಟುಹೋದನು. ಸುತ್ತಮುತ್ತ ನಿಂತಿದ್ದ ಸೈನಿಕರ ಕೈ ಗಳಲ್ಲಿದ್ದ ಶಸ್ತ್ರಾಸ್ತ್ರಗಳೆಲ್ಲ ಕಳಚಿಬಿದ್ದುವೆಂದೂ ಭಾರತದಲ್ಲಿ ಹೇಳಿದೆ (ಕ.ಪ.– ೮೭/೩೩–೫). ಯುದ್ಧರಂಗದಲ್ಲಿ ಯಾರೂ ನಿಲ್ಲಲು ಸಾಧ್ಯವಿಲ್ಲದೆ ದಿಕ್ಕಾ ಪಾಲಾಗಿ ಚದರಿ ಓಡಿಹೋದರು.

ಈ ಒಂದು ನಿದರ್ಶನದಿಂದಲೇ ಭೀಮನ ಸಿಂಹನಾದದ ಪರಿಣಾಮ ಏನಾಗುತ್ತಿತ್ತೆಂದು ಅರ್ಥವಾಗುತ್ತದೆ. ದ್ರೋಣಪರ್ವದ ಒಂದು ಪ್ರಸಂಗ ದಲ್ಲೂ ಭೀಮನ ಸಿಂಹನಾದದ ಪರಿಣಾಮದ ಅದ್ಭುತವರ್ಣನೆ ಬರುತ್ತದೆ. ಧರ್ಮರಾಜ ಭೀಮನಿಗೆ 'ಕೃಷ್ಣಾರ್ಜುನರ ಸಮಾಚಾರವೇ ಬಹಳ ಹೊತ್ತಾ ದರೂ ತಿಳಿಯಲಿಲ್ಲ. ಅವರನ್ನು ನೋಡಿಕೊಂಡು ಬಾ' ಎಂದು ಹೇಳಿದನು. ಅದಕ್ಕೆ ಭೀಮ ಅವರು ಕ್ಷೇಮವಾಗಿದ್ದರೆ ಗರ್ಜನೆ ಮಾಡಿ ತಿಳಿಸುತ್ತೇನೆ ಎಂದು ಹೇಳಿ ಹೊರಟ. ಕೃಷ್ಣಾರ್ಜುನರನ್ನು ಕಂಡಕೂಡಲೇ ಭೀಮ ಧರ್ಮರಾಜ ನಿಗೆ ಕೇಳಿಸುವಂತೆ ಯುದ್ಧದ ಕೋಲಾಹಲವೆಲ್ಲವನ್ನೂ ಮೀರಿಸುವ ಬಲವಾದ

ಗರ್ಜನೆ ಮಾಡಿದನು. ಅದರ ಪರಿಣಾಮವನ್ನು ನಿರ್ಣಯಕಾರರು ಹೀಗೆ ವರ್ಣಿಸಿದ್ದಾರೆ—

ಭೀಮಸ್ಯ ನಾನದತ ಏವ ಮಹಾಸ್ವನೇನ
ವಿಣ್ಮೂತ್ರ ಶೋಣಿತಮಥೋ ಮೃತಿಮಾಪುರೇಕೇ॥(ತಾ.ನಿ.೨೬/೧೪೦)

[ನಾನದತಃ–ಪುನಃ ಪುನಃ ಸಿಂಹನಾದ ಮಾಡುತ್ತಿರಲು, ಸ್ವನೇನ–ಧ್ವನಿಯಿಂದ, ವಿಣ್ಮೂತ್ರ–ಮಲಮೂತ್ರ ವಿಸರ್ಜನೆ ಮಾಡಿಕೊಂಡರು. ಶೋಣಿತಂ-ರಕ್ತವನ್ನು (ಕಾರಿಕೊಂಡರು). ಅಥೋ–ಅನಂತರ, ಮೃತಿಂ ಆಪುಃ–ಸತ್ತೇ ಹೋದರು. ಏಕೇ–ಕೆಲವರು.]

'ಭೀಮಸೇನ ಪುನಃಪುನಃ ಸಿಂಹನಾದ ಮಾಡಿದ್ದನ್ನು ಕೇಳಿದ ಮಾತ್ರದಿಂದಲೇ ಆನೆ-ಕುದುರೆಗಳೂ ಸೈನಿಕರೂ ಎಲ್ಲರೂ ಅಲ್ಲಲ್ಲೇ ಮಲಮೂತ್ರ ವಿಸರ್ಜನೆ ಮಾಡಿಕೊಂಡರು. ಅತ್ಯಂತ ಭಯಗ್ರಸ್ತರಾದ ಕೆಲವರು ರಕ್ತಕಾರಿಕೊಂಡರು. ಧೈರ್ಯವಿಲ್ಲದ ಕೆಲವರು ಸತ್ತೂ ಹೋದರು.' ಈ ಎರಡು ದೃಷ್ಟಾಂತಗಳಿಂದಲೇ ವಾಯುಸ್ತುತಿಯ ಕ್ಷ್ವೇಲಾ ಕ್ಷೀಣಾಟ್ಟಹಾಸಂ ಎಂಬ ಉಕ್ತಿಯ ಮಹತ್ವ ಎಷ್ಟೆಂದು ಅರ್ಥವಾಗುತ್ತದೆ.

ಙ) **ಭೀಮನ ಯುದ್ಧದ ವೈಖರಿ**—ಯುದ್ಧ ನಡೆದ ಹದಿನೆಂಟು ದಿನಗಳಲ್ಲಿ ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ, ಕರ್ಣ, ಶಲ್ಯ, ದುರ್ಯೋಧನ, ಅರ್ಜುನ, ಅಭಿಮನ್ಯು ಮೊದಲಾದ ಅನೇಕ ಮಹಾರಥಿಕರು ಯುದ್ಧದಲ್ಲಿ ಭಾಗವಹಿಸಿದರೂ ಅವರೆಲ್ಲರ ಯುದ್ಧದ ರೀತಿಯೇ ಒಂದು ತೆರನಾದರೆ ಭೀಮನ ಯುದ್ಧದ ವೈಖರಿಯೇ ಇನ್ನೊಂದು ತೆರನಾಗಿತ್ತು. ಭೀಮನನ್ನು ಎದುರಿಸಿದ ದೊಡ್ಡ ದೊಡ್ಡ ಮಹಾರಥಿಕರೂ ಸಹ ಜೀವ-ದೊರಸೆ ಉಳಿದರೆ ಸಾಕು ಎನ್ನುವಂತಾಗಿ 'ಸಾಕಪ್ಪ ಇವನ ಸಹವಾಸ' ಎಂದು-ಕೊಳ್ಳುತ್ತಾ ಹಿಂದಿರುಗಿದ್ದಾರೆಯೇ ವಿನಾ ಸುಮ್ಮನೆ ಯುದ್ಧ ಮಾಡಿ ಪಾಡು ಪಡದೆ ಹೋದವರು ಒಬ್ಬರೂ ಇಲ್ಲ. ಇದಕ್ಕೆ ಪ್ರತಿಯಾಗಿ ಭೀಮನನ್ನು ಎದುರಿಸಿ ಅವನಿಗೆ ಸಾಕು-ಸಾಕೆನ್ನುವಂತೆ ಮಾಡಿದ ಒಂದು ಪ್ರಸಂಗವೂ ಮಹಾಭಾರತದಲ್ಲೇ ಎಲ್ಲೂ ಸಿಗುವುದಿಲ್ಲ—ಇದೀಗ ಭೀಮನ ಯುದ್ಧ-ವೈಖರಿಯ ವಿಶೇಷ. ಭೀಮನನ್ನು ಎದುರಿಸಿದ ಭೀಷ್ಮ, ದ್ರೋಣ, ಕರ್ಣ

ಶಲ್ಯ, ಅಶ್ವತ್ಥಾಮ, ಶಕುನಿ, ದುರ್ಯೋಧನ ಎಲ್ಲರೂ ಅವನ ಕೈಗೆ ಸಿಕ್ಕಿ ಪಾಡುಪಟ್ಟು ಹತೋತ್ಸಾಹಿಗಳಾಗಿ ವಿಮುಖರಾದವರೇ ಎಂದ ಬಳಿಕ ಅವನ ಶೌರ್ಯಕ್ಕೂ ಅವನ ಸಾಹಸಕ್ಕೂ ಎದುರೆಲ್ಲಿ ಸಿಗಬೇಕು ! ಯಾರು ಯಾರ ಪಾಡು ಏನೇನಾಯಿತು ? ಸ್ವಲ್ಪ ನೋಡೋಣ, ಬನ್ನಿ.

ಚ) ನಾಲ್ಕನೇ ದಿನದ ಯುದ್ಧದಲ್ಲಿ—ಭೀಷ್ಮಾಚಾರ್ಯರು ವ್ಯೂಹ ರಚನೆ ಮಾಡಿ ಯುದ್ಧಕ್ಕೆ ಸಿದ್ಧರಾದರು. ಅವರ ರಕ್ಷಣೆಗಾಗಿ ಅವರ ಸುತ್ತಾ ನಿಂತು ದ್ರೋಣ, ದುರ್ಯೋಧನ, ಬಾಹ್ಲಿಕ ಜಯದ್ರಥಾದಿಗಳು ಯುದ್ಧ ಮಾಡುತ್ತಿದ್ದರು. (ಭೀಷ್ಮ ಪ. ೬೦ ಅ., ೨-೩ ಶ್ಲೋ.) ಸುತ್ತಮುತ್ತ ತುಮುಲಯುದ್ಧವೇ ನಡೆಯುತ್ತಿತ್ತು. ಇದರಿಂದ ಬೇಸತ್ತ ಭೀಮ ಮುನ್ನುಗ್ಗಿ ಭೀಷ್ಮ-ದ್ರೋಣರನ್ನು ಎದುರಿಸಿ ಅವರ ಸಾರಥಿಗಳನ್ನೂ ಕುದುರೆಗಳನ್ನೂ ಈಡಾಡಿ ಅವರಿಬ್ಬರನ್ನೂ ಕ್ಷಣಮಾತ್ರದಲ್ಲಿ ವಿರಥರನ್ನಾಗಿ ಮಾಡಿಬಿಟ್ಟನು. ಅದನ್ನು ಕಂಡು ದುರ್ಯೋಧನ ತನ್ನ ಇಪ್ಪತ್ತೈದು ಮಂದಿ ತಮ್ಮಂದಿರನ್ನು ಕೂಡಿಕೊಂಡು ಬಂದು ಭೀಮನ ಮೇಲೆ ಬಾಣ ಪ್ರಯೋಗ ಮಾಡಿದನು. ಅದನ್ನು ಕಂಡು ಭೀಮನಿಗೆ ಹರ್ಷವೇ ಆಯಿತು. ಅವನು 'ಭಲಾ, ಬಹುದಿನಗಳಿಂದ ಕಾಯುತ್ತಿದ್ದ ನನ್ನ ಮನೋರಥವೆಂಬ ವೃಕ್ಷವು ಇಂದು ಫಲಿಸಿತು' (ಮನೋರಥದ್ರುಮೋಽಸ್ಮಾಕಂ........ಬಹುವಾರ್ಷಿಕಃ । ಫಲಿತಃ....॥ ಭೀಷ್ಮ ಪ. ೬೪/೯-೧೧) ಎಂದು ಹೇಳುತ್ತಾ ಸ್ವಲ್ಪ ಹೊತ್ತಿನಲ್ಲೇ ಆ ಇಪ್ಪತ್ತೈದು ಮಂದಿ ದುರ್ಯೋಧನನ ತಮ್ಮಂದಿರನ್ನೂ ಭೀಷ್ಮ-ದ್ರೋಣರು ನೋಡ-ನೋಡುತ್ತಲೇ ಯಮಪುರಿಗೆ ಕಳುಹಿಸಿಬಿಟ್ಟನು. (ತಾ. ನಿ. ೨೫/೪೪-೪೬).

ಛ) ಹದಿನಾಲ್ಕನೇ ದಿನದ ಯುದ್ಧದಲ್ಲಿ—ದುಶ್ಶಾಸನನು ಸುಷೇಣ, ದೀರ್ಘನೇತ್ರ, ವಿಂದಾನುವಿಂದರೇ ಮೊದಲಾದ ಧೃತರಾಷ್ಟ್ರನ ಮಕ್ಕಳನ್ನು ಒಟ್ಟುಗೂಡಿಸಿ ಭೀಮನನ್ನು ಎದುರಿಸಲು ಕಳುಹಿಸಿದನು. ಭೀಮ ಅವರೆಲ್ಲರನ್ನೂ ಕೊಂದುಹಾಕುತ್ತಿರಲು ದ್ರೋಣಾಚಾರ್ಯರು ಭೀಮನ ಮಾರ್ಗವನ್ನು ಅಡ್ಡಗಟ್ಟಿನಿಂತರು. ಭೀಮ ತನ್ನ ಗದಾಪ್ರಹಾರದಿಂದ ದ್ರೋಣನ ರಥ ಸಾರಥಿ ಕುದುರೆಗಳು ಎಲ್ಲರನ್ನೂ ಒಂದೇ ಏಟಿಗೆ ಧ್ವಂಸಮಾಡಿಬಿಟ್ಟನು.

ದ್ರೋಣ ಆ ರಥದಿಂದ ಹಾರಿ ಬೇರೆ ರಥ ಏರಿಕೊಂಡು ಭೀಮನ ಮೇಲೆ ಬಾಣಗಳ ಮಳೆಗರೆಯಲಾರಂಭಿಸಿದನು. ಭೀಮ ಬಾಣಗಳಿಗೆ ತಲೆ ಒಡ್ಡಿ ದ್ರೋಣನ ಆ ರಥವನ್ನು ಕೈಯಲ್ಲೇ ಎತ್ತಿ ಮೇಲಕ್ಕೆ ಎಸೆದುಬಿಟ್ಟ. ಮೇಲಿಂದ ಕೆಳಗೆ ಬಿದ್ದು ರಥ ಚೂರು ಚೂರಾಯಿತು. ಎಸೆದ ವೇಗಕ್ಕೇ ಸಾರಥಿಯೂ ಕುದುರೆಗಳೂ ಪ್ರಾಣ ಬಿಟ್ಟವು. ವಿರಥನಾಗಿ ನಿಂತ ದ್ರೋಣನಿಗೆ ಭೀಮ 'ಹೇ ದ್ರೋಣ, ನಾನು ನಿನ್ನನ್ನು ಈ ಕ್ಷಣ ಇಲ್ಲೇ ಕೊಂದುಬಿಡಬಲ್ಲೆ, ಆದರೆ ವಿದ್ಯಾಗುರು ಎಂಬ ಗೌರವದಿಂದ ಜೀವಸಹಿತ ಬಿಟ್ಟಿದ್ದೇನೆ' ಎಂದು ದ್ರೋಣ-ನಿಗೆ ಹೇಳಿದನು. ದ್ರೋಣ ತಲೆ ತಗ್ಗಿಸಿ ನಿಲ್ಲಬೇಕಾಯಿತು (ಈ ಪ್ರಸಂಗ ದ್ರೋಣಪರ್ವದ ೧೨೭-೨೮ನೇ ಅಧ್ಯಾಯದಲ್ಲೂ ತಾ. ನಿ. ೨೭ ಅ., ೧೨೨-೨೯ ಶ್ಲೋ.ಗಳಲ್ಲೂ ವರ್ಣಿತವಾಗಿದೆ.)

ಭೀಷ್ಮಪರ್ವದಲ್ಲೂ (೭೭ ಅ.) ಇಂತಹ ಇನ್ನೊಂದು ಘಟನೆಯ ಕಥೆ ಇದೆ. (ತಾ.ನಿ. ೨೫/೯೨–೯೫) ಭೀಮ ಕೌರವಸೈನ್ಯವನ್ನು ಬಾಣಗಳಿಂದ ಭೇದಿಸುತ್ತಾ ಮುನ್ನುಗ್ಗಿ ಬರುತ್ತಿರಲು ದುಶ್ಶಾಸನ, ದುರ್ವಿಷಹ, ದುಸ್ಸಹ ಮೊದಲಾದ ದುರ್ಯೋಧನನ ತಮ್ಮಂದಿರು ಭೀಮನನ್ನು ಮುತ್ತಿಕೊಂಡು ಸುತ್ತಲಿಂದಲೂ ಅವನ ಮೇಲೆ ಬಾಣಪ್ರಯೋಗ ಮಾಡಲಾರಂಭಿಸಿದರು. ಭೀಮ ದುಶ್ಶಾಸನನನ್ನು ಬಿಟ್ಟು ಉಳಿದವರನ್ನೆಲ್ಲಾ ಗದೆಯಿಂದಲೇ ನಾಶಮಾಡಿದನು. ಅಷ್ಟರೊಳಗೆ ದ್ರೋಣಾಚಾರ್ಯರು ರಥಾರೂಢರಾಗಿ ಭೀಮನ ಮೇಲೆ ಬಾಣಗಳ ಮಳೆ ಸುರಿಸುತ್ತಾ ಬಂದರು. ಭೀಮ ದ್ರೋಣರ ಅಸ್ತ್ರಗಳನ್ನು ಭೇದಿಸಿ ದ್ರೋಣರ ಮೇಲೆ ತಾನೂ ಅಸ್ತ್ರವೃಷ್ಟಿ ಮಾಡಿದನು. ದ್ರೋಣರು ಭೀಮನ ಬಾಣಗಳ ಹೊಡೆತ ತಡೆಯಲಾರದೆ ಮೂರ್ಛಿತರಾಗಿ ಬಿದ್ದರು. ಅವರ ಸಹಾಯಕ್ಕಾಗಿ ಬಂದ ಕೃಪ, ಅಶ್ವತ್ಥಾಮ, ಕೃತವರ್ಮ ಮೊದಲಾದ ಮಹಾರಥಿಕರನೇಕರನ್ನು ಭೀಮನೊಬ್ಬನೇ ಕ್ಷಣಮಾತ್ರದಲ್ಲಿ ವಿರಥರನ್ನಾಗಿ ಮಾಡಿ ತಲ್ಲಣಗೊಳಿಸಿ ಸಿಂಹನಾದ ಮಾಡಿದನು. ಅದನ್ನು ಕೇಳಿ ಕೌರವ ಸೈನ್ಯ 'ಚಾಮಕು ಚೆಲ್ಲಿ' (ದಿಕ್ಕಾಪಾಲಾಗಿ) ಪಲಾಯನ ಮಾಡಿತು. (ಇಂತಹ ಮತ್ತೊಂದು ಪ್ರಸಂಗ ತಾ.ನಿ. ೨೬ ಅ., ೧೨೨–೨೮ ಶ್ಲೋ.ಗಳಲ್ಲೂ ನಿರೂಪಿತವಾಗಿದೆ.)

ಜ) ಶಲ್ಯನೊಡನೆ ಗದಾಯುದ್ಧ—(ಇದರ ವರ್ಣನೆ ಶಲ್ಯಪರ್ವದ ೧೦–೧೧ ಅಧ್ಯಾಯಗಳಲ್ಲೂ ತಾ.ನಿ. ೨೬/೪–೧೦ ಶ್ಲೋ.ಗಳಲ್ಲೂ ಮಾಡಿದೆ.) ಹದಿನೆಂಟನೇ ದಿನದ ಹಗಲಯುದ್ಧ ನಡೆಯುತ್ತಿದೆ. ಶಲ್ಯನು ಭೀಷ್ಮ, ದ್ರೋಣ, ಕರ್ಣ ಈ ಮೂವರು ಸೇನಾನಾಯಕರು ಕಾದು ಕಾದು ಪ್ರಾಣ ತೆತ್ತುಬಿಟ್ಟಿದ್ದ ಕೌರವಸೈನ್ಯ ಉತ್ಸಾಹಶೂನ್ಯವಾಗಿ ಹೋಗಿತ್ತು. ಸೈನ್ಯಕ್ಕೆ ಹುರುಪು ಹುಟ್ಟಿಸುವುದಕ್ಕಾಗಿ ಹುಂಕಾರ ಮಾಡುತ್ತಾ ಪಾಂಡವರ ಸೈನ್ಯದ ಮೇಲೆ ಬಾಣದ ಮಳೆಗರೆಯುತ್ತಾ ನುಗ್ಗಿ ಬಂದನು. ಭೀಮ ಅವನ ಮೇಲೆ ಏಳು ಬಾಣಗಳನ್ನು ಬಿಟ್ಟರೂ ಅವನ್ನು ಹೇಗೋ ನಿವಾರಿಸಿಕೊಂಡು ಧರ್ಮರಾಯನ ಮೇಲೆ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿ ಅವನನ್ನು ತಲ್ಲಣಗೊಳಿಸಿದನು. ಧರ್ಮರಾಯನ ಸಹಾಯಕ್ಕಾಗಿ ಬಂದ ಭೀಮ ಗದೆಯನ್ನು ತಿರುಗಿಸುತ್ತಾ ಶಲ್ಯನ ಮೇಲೆ ಧಾವಿಸಿ ಬಂದ. ಶಲ್ಯನೂ ಗದಾಯುದ್ಧನಿಪುಣ; ಅವನೂ ಗದೆ ಹಿಡಿದು ಯುದ್ಧಕ್ಕೆ ನಿಂತ. ಇಬ್ಬರ ನಡುವೆ ಹಣಾಹಣಿ ಗದಾಯುದ್ಧ ನಡೆಯಿತು. ಇಬ್ಬರೂ ಗದಾಯುದ್ಧ ವಿಶಾರದರು, ಇಬ್ಬರೂ ಅಜೇಯರು, ಇಬ್ಬರೂ ಹಿಮ್ಮೆಟ್ಟುವವರಲ್ಲ. ಹೇಳುವುದೇನಿದೆ ? ಶ್ರೀಮದಾಚಾರ್ಯರು ವರ್ಣಿಸಿರುವಂತೆ—

ಉಭಾವಜೇಯೌ ಗದಿನಾವನುತ್ತಮೌ
ಅತುಲ್ಯವೀರ್ಯೌ ಬಲಿನೌ ಬಲೀಯಸಾಮ್ ।
ವಿಚೇರತುಶ್ಚಿತ್ರತಮಂ ಪ್ರಪಶ್ಯತಾಂ
ಮನೋಹರಂ ತಾವಭಿವರ್ಧಮಾನೌ ॥ (ತಾ.ನಿ. ೨೬/೬)

(ಅನುತ್ತಮೌ–ಅತ್ಯಂತ ಶ್ರೇಷ್ಠ, ಅತುಲ್ಯ–ಎದುರಿಲ್ಲದ, ಬಲೀಯಸಾಂ ಬಲಿನೌ–ಅತಿ ಬಲಿಷ್ಠರಿಗಿಂತಲೂ ಹೆಚ್ಚು ಬಲಿಷ್ಠರು. ವಿಚೇರತುಃ= ಇಬ್ಬರೂ ಅಲ್ಲೇ ಹೊಡೆದಾಡುತ್ತಾ ಅತ್ತ ಇತ್ತ ಅಡ್ಡಾಡಿದರು. ಪ್ರಪಶ್ಯತಾಂ- ಪ್ರೇಕ್ಷಕರಿಗೆ, ತೌ–ಅವರಿಬ್ಬರೂ, ಅಭಿವರ್ಧಮಾನೌ–ಉತ್ಸಾಹಭರಿತರಾಗಿ.) ಇಬ್ಬರೂ ಅಜೇಯರು....ಅದರಿಂದ ಜನಗಳು (ಪ್ರೇಕ್ಷಕರು) ಆಶ್ಚರ್ಯಮಗ್ನ ರಾಗಿ ನೋಡುತ್ತಿರಲು ಇಬ್ಬರೂ ವರಸೆ-ವರಸೆಯಾಗಿ ಸುತ್ತಾಡುತ್ತಾ ಉತ್ಸಾಹಭರಿತರಾಗಿ ಬಹಳ ಹೊತ್ತು ಹೊಡೆದಾಡಿದರು. ಕೊನೆಗೆ

ಗದಾಭಿಘಾತೇನ ವೃಕೋದರಸ್ಯ

ವಿಚೇತನಃ ಪ್ರಾಪತದತ್ರ ಮದ್ರರಾಟ್ ॥ (ತಾ.ನಿ. ೨೬/೭)

(ಗದಾಭಿಘಾತೇನ–ಗದಾಪ್ರಹಾರದಿಂದ, ವಿಚೇತನಃ–ಮೂರ್ಛಿತನಾಗಿ, ಪ್ರಾಪತತ್–ಬಿದ್ದನು. ಅತ್ರ–ಇಲ್ಲಿ, ಯುದ್ಧದಲ್ಲಿ. ಮದ್ರರಾಟ್–ಶಲ್ಯ)

ಶಲ್ಯ ಭೀಮನ ಗದಾಪ್ರಹಾರದಿಂದ ಮೂರ್ಛಿತನಾಗಿ ಬಿದ್ದನು. ಆಕ್ಷಣ

ಅಪೋವಾಹ ಕೃಪಃ ಶಲ್ಯಂ ತೂರ್ಣಮಾಯೋಧನಾದಥ ॥

(ಶಲ್ಯ ಪ. ೧೧ ಅ. ೨೬ ಶ್ಲೋ.)

(ಅಪ+ಉವಾಹ–ಆಚೆಗೆ ಕರೆದುಕೊಂಡು ಹೋದನು. ತೂರ್ಣಂ-ಶೀಘ್ರವಾಗಿ, ಆಯೋಧನಾತ್–ಯುದ್ಧರಂಗದಿಂದ, ಅಥ-ಅನಂತರ)

'ಕೃಪಾಚಾರ್ಯರು ಓಡಿಬಂದು ಶಲ್ಯನನ್ನು ರಣರಂಗದಿಂದ ಆಚೆಗೆ ಕರೆದುಕೊಂಡು ಹೋದರು.' (ಈ ಕಥೆ ಶಲ್ಯಪರ್ವದಲ್ಲಿ ನಿರೂಪಿತವಾದ ವಿಚಾರ. ದ್ರೋಣಪರ್ವದ ೧೫ನೇ ಅಧ್ಯಾಯದಲ್ಲೂ ಇದೇ ರೀತಿ ಹಿಂದೊಂದು ಸಲ ಶಲ್ಯ ಭೀಮನಿಗೆ ಗದಾಯುದ್ಧದಲ್ಲಿ ಪರಾಜಿತನಾದ ವರ್ಣನೆ ಇದೆ.)

ಝ) ಆನೆಗಳ ಸಂಹಾರ—ದ್ರೋಣಾಚಾರ್ಯರು ವ್ಯೂಹರಚನೆ ಮಾಡಿ ಯುದ್ಧ ಆರಂಭಿಸಲು, ಭೀಮ ದ್ರೋಣರ ಮೇಲೆಯೇ ಯುದ್ಧಕ್ಕೆ ಬಂದನು. ದ್ರೋಣನ ರಕ್ಷಣೆಗಾಗಿ ಕೌರವರು ಹಿಂಡು-ಹಿಂಡು ಆನೆಗಳನ್ನು ಭೀಮನ ಮೇಲೆ ಕಳುಹಿಸಿದರು. ಭೀಮ ಗದೆಯನ್ನು ಎತ್ತಿಕೊಂಡು ಸಿಂಹನಾದ ಮಾಡುತ್ತಾ ಗಜಾನೀಕದ ಮೇಲೆ ನುಗ್ಗಿ ಅನೇಕ ಆನೆಗಳನ್ನು ಗದೆಯ ಒಂದೇ ಪ್ರಹಾರದಿಂದ ಬಡಚಿ ಹಾಕಿದನು. ಸಿಂಹನಾದಕ್ಕೂ ಗದಾಪ್ರಹಾರಕ್ಕೂ ತಲ್ಲಣಿಸಿ ಹೋದ ಮಿಕ್ಕ ಆನೆಗಳು, ಭಾರತದಲ್ಲಿ ಹೇಳಿದಂತೆ (ದ್ರೋ. ಪ. ೬೩ ಅ. ೬೪ ಶ್ಲೋ.),—

'ಸ್ವಾನ್ಯನೀಕಾನಿ ಮೃದ್ನಂತಃ ಪ್ರಾದ್ರವನ್ ಕುಂಜರಾಸ್ತವ ॥

(ಸ್ವಾನಿ-ಅನೀಕಾನಿ–ತಮ್ಮ ಪಕ್ಷದ ಸೈನ್ಯಗಳನ್ನೇ, ಮೃದ್ನಂತಃ–ತುಳಿದು ಹಾಕುತ್ತಾ, ಪ್ರಾದ್ರವನ್–ಓಡಿಹೋದುವು, ಕುಂಜರಾಃ–ಆನೆಗಳು, ತವ–ನಿನ್ನ—ಧೃತರಾಷ್ಟ್ರನಿಗೆ ಸಂಜಯ ಹೇಳಿದ ಮಾತು)

ತಮ್ಮ ಕಡೆಯ ಸೈನ್ಯಗಳನ್ನೇ ತುಳಿದುಕೊಂಡು ನಾಶಮಾಡುತ್ತಾ ದಿಕ್ಕಾಪಾಲಾಗಿ ಓಡಿಹೋದವು. (ತಾ. ನಿ. ೨೬ ಅ. ೧೬ ಶ್ಲೋ.) ಹೀಗೆಯೇ ಆನೆಗಳನ್ನು ಭೀಮ ಸಂಹಾರ ಮಾಡಿದ ಪ್ರಸಂಗಗಳು ಇನ್ನೂ ಅನೇಕ ಇವೆ. (ಉದಾ. ಕರ್ಣ ಪ, ೪೦, ೬೩ ಅ. ಇತ್ಯಾದಿ.)

ಝ) ಅಶ್ವತ್ಥಾಮನ ಪರಾಜಯ—(ಈ ಪ್ರಸಂಗ ಕರ್ಣಪರ್ವದ ೧೨ನೇ ಅಧ್ಯಾಯದಲ್ಲೂ, ತಾ. ನಿ. ೨೭ ಅ. ೫-೧೦ ಶ್ಲೋ.ಗಳಲ್ಲೂ ಉಕ್ತವಾಗಿದೆ.) ಹದಿನಾರನೇ ದಿನದ ಯುದ್ಧ ನಡೆಯುತ್ತಿದೆ. ಕೌರವಸೇನೆಗೆ ಹುಮ್ಮಸ್ಸು ಕೊಡುವುದಕ್ಕಾಗಿ ಅಶ್ವತ್ಥಾಮ ಪಾಂಡವರ ಸೈನ್ಯವನ್ನು ನಾಶಮಾಡುತ್ತಾ ಭೀಮನನ್ನು ಎದುರಿಸಿ ಬಂದನು—

ದ್ರೌಣಿರಭ್ಯಯಾತ್ ತೂರ್ಣಂ ಭೀಮಸೇನಂ ಮಹಾಬಲಮ್ ।

(ಕರ್ಣ ಪ. ೧೧ ಅ. ೩೮ ಶ್ಲೋ.)

(ದ್ರೌಣಿಃ = ದ್ರೋಣಪುತ್ರನಾದ ಅಶ್ವತ್ಥಾಮ, ಅಭ್ಯಯಾತ್–ಎದುರಿಸಿ ಬಂದನು. ತೂರ್ಣಂ–ಶೀಘ್ರವಾಗಿ.)

ಆಗ ಅವರಿಬ್ಬರ ನಡುವೆ ಘೋರವಾದ ಯುದ್ಧ ನಡೆಯಿತು. ಆಚಾರ್ಯರು ಹೇಳುವಂತೆ ದೇವತೆಗಳೇ ಇವರಿಬ್ಬರ ಯುದ್ಧವನ್ನು ನೋಡಿ ಆಶ್ಚರ್ಯಚಕಿತರಾಗಿ 'ನೇದೃಗ್ ದೃಷ್ಟಪೂರ್ವಂ ಸುಯುದ್ಧಂ' (ಈದೃಗ್-ಇಂಥಾ) 'ಇಂಥಾ ಅದ್ಭುತ ಯುದ್ಧವನ್ನು ನಾವು ಹಿಂದೆಲ್ಲೂ ನೋಡಿರಲಿಲ್ಲ' ಎಂದು ಹೇಳಿದರಂತೆ. ಇಬ್ಬರೂ ದೇವಾಂಶಸಂಭೂತರು—ಭೀಮ ವಾಯುಕುಮಾರನಾದರೆ ಅಶ್ವತ್ಥಾಮ ರುದ್ರನ ಅವತಾರ. ಇಬ್ಬರೂ ಮಹಾಬಲಿಷ್ಠರು, ಅಪ್ರತಿಮ ಶೂರಾಗ್ರಣಿಗಳು. ಇಬ್ಬರೂ ಬಾಣದ ಮಳೆಗರೆಯುತ್ತಾ ಹೋಗಲು ಆಕಾಶವೆಲ್ಲ ಬಾಣಗಳಿಂದ ಮುಚ್ಚಿಹೋಗಿ ಕಗ್ಗತ್ತಲು ಕವಿದುಕೊಂಡಿತು. ಅವರಿಬ್ಬರ ಬಾಣಗಳ ಸಂಘರ್ಷದಿಂದ ಹುಟ್ಟಿದ ಬೆಂಕಿಯು ಕಿಡಿಕಾರುತ್ತಾ ಎರಡು ಸೈನ್ಯಗಳನ್ನೂ ಸುಟ್ಟುಹಾಕಿತು (ಕರ್ಣ ಪ. ೧೨/೨೬-೨೭). ಇತ್ತ ಈ ಇಬ್ಬರು ಯೋಧರೂ ಪರಸ್ಪರ ಕಣ್ಣು ಕೆಂಪಗೆ ಮಾಡಿಕೊಂಡು ನೋಡುತ್ತಾ ಪರಸ್ಪರ ಧ್ವಜಗಳನ್ನು ಕತ್ತರಿಸಿಹಾಕಿದರು. ಸಾರಥಿಗಳನ್ನೂ ಕುದುರೆಗಳನ್ನೂ ಸಂಹರಿಸಿದರು. ಕಡೆಗೆ ಇಬ್ಬರೂ ಒಬ್ಬರ ಮೇಲೊಬ್ಬರು ಪ್ರಬಲಾಸ್ತ್ರ

ಗಳನ್ನು ಪ್ರಯೋಗಿಸಿದರು (ಅಲ್ಲೇ ೧೨/೪೦). ಅಶ್ವತ್ಥಾಮನ ಬಾಣದಿಂದ ಭೀಮ ಸ್ವಲ್ಪ ವಿಚಲಿತನಾಗಿ ಚೇತರಿಸಿಕೊಂಡ. ಭೀಮನ ಬಾಣದಿಂದ ಅಶ್ವತ್ಥಾಮ ಮೂರ್ಛಿತನಾಗಿ ಬೀಳಲು ಅವನ ಸಾರಥಿಯು ಅವನನ್ನು ಬೇರೆ ರಥದಲ್ಲಿ ಹಾಕಿಕೊಂಡು ಯುದ್ಧರಂಗದಿಂದ ಆಚೆಗೆ ಹೋದನು.

ಟ) **ಕರ್ಣ ಪರಾಭೂತನಾದದ್ದು**—ಭೀಮ ಕರ್ಣನನ್ನು ಪರಾಭವಗೊಳಿಸಿದ ವಿಚಾರ ದ್ರೋಣಪರ್ವದಲ್ಲಿ ಹೆಚ್ಚು ವಿಸ್ತಾರವಾಗಿಯೂ (೧೨೯-೩೪ ಆರು ಅಧ್ಯಾಯಗಳಲ್ಲೂ), ಕರ್ಣಪರ್ವದಲ್ಲಿ (೪೫-೪೭ ಅಧ್ಯಾ.) ಸ್ವಲ್ಪ ಸಂಗ್ರಹವಾಗಿಯೂ ಎರಡು ಕಡೆ ಬಂದಿದೆ. ನಿರ್ಣಯದಲ್ಲಿ (೨೭ ಅ., ೩೮-೪೩ ಶ್ಲೋ.) ಎರಡನೇ ಪ್ರಸಂಗವನ್ನೇ ಎತ್ತಿಕೊಂಡಿದ್ದಾರೆ. ಇಲ್ಲೂ ಆ ಪ್ರಸಂಗವನ್ನೇ ವರ್ಣಿಸಿದ್ದೇನೆ.

ಹದಿನೇಳನೇ ದಿವಸದ ಯುದ್ಧ ಆರಂಭವಾಗಿದೆ. ಕರ್ಣ-ದುರ್ಯೋಧನಾದಿಗಳೆಲ್ಲ ಸೇರಿಕೊಂಡು ಧರ್ಮರಾಯನನ್ನು ಪರಾಭವಗೊಳಿಸಿ ನಿಷ್ಠುರೋಕ್ತಿ ಹೇಳುತ್ತಾ ಅವನನ್ನು ನಿಂದಿಸುತ್ತಿದ್ದಾರೆ. ಅಷ್ಟರಲ್ಲೇ ಅಲ್ಲಿಗೆ ಭೀಮ ಬಂದ, ಧರ್ಮರಾಯನಿಗೆ ಹೊಸ ಪ್ರಾಣ ಬಂದಂತಾಯಿತು. ಭೀಮ ಬಂದವನೇ ದುರ್ಯೋಧನನನ್ನು ಗುರುತಿಸಿದ. ಧರ್ಮರಾಜನಿಗಾದ ತೊಂದರೆಗೆಲ್ಲಾ ಅವನೇ ಮುಖ್ಯ ಕಾರಣನೆಂದು ಅರಿತು ಅವನ ಮೇಲೆ ಹೋಗಿ ಕ್ಷಣಮಾತ್ರದಲ್ಲಿ ಅವನನ್ನು ವಿರಥನನ್ನು ಮಾಡಿ ಅವನ ಧನುಸ್ಸನ್ನೂ ಕತ್ತರಿಸಿಹಾಕಿದ. ದುರ್ಯೋಧನ ದಿಕ್ಕೇ ತೋರದೆ ಕಕ್ಕಾಬಿಕ್ಕಿಯಾಗಿ ನಿಂತ. ಅದನ್ನು ಕಂಡ ಕರ್ಣ ಅವನ ರಕ್ಷಣೆಗಾಗಿ ಮುಂದೆ ಬಂದ. ಅವನನ್ನು ಕಾಣುವುದೇ ತಡ, ಭೀಮನಿಗೆ ಅವನು ಹಿಂದೆ ಆಡಿದ್ದ ನಿಷ್ಠುರೋಕ್ತಿಗಳೆಲ್ಲಾ ನೆನಪಿಗೆ ಬಂದುವು. ತನಗೆ ಆಡಿದ ನಿಷ್ಠುರೋಕ್ತಿಗಳಿಗಿಂತ ಕರ್ಣ ದುರಹಂಕಾರದಿಂದ ಕೃಷ್ಣನನ್ನೂ ಹೀನಾಮಾನಾ ನಿಂದಿಸಿದ್ದನು. ಅದೆಲ್ಲಾ ನೆನಪಿಗೆ ಬಂದದ್ದರಿಂದ ಭೀಮನಿಗೆ ಕರ್ಣನ ಮೇಲೆ ಸಹಿಸಲಾರದ ಕೋಪ ಉಕ್ಕಿ ಬಂತು. ಕಣ್ಣುಗಳನ್ನು ಕೆರಳಿಸಿಕೊಂಡು ಕರ್ಣನನ್ನು ದಹಿಸಿಬಿಡುವಂತೆ ದುರುದುರು ನೋಡಿದನು. ಅವನ ಕೋಪದ ರಭಸಕ್ಕೇ ಇಡೀ ಭೂಮಿ ಗದಗದ ನಡುಗಿತು; ಕೌರವರ ಸೈನ್ಯ ಹೇಳದೆ ಕೇಳದೆ ಪರಾರಿಯಾಯಿತು—

ತಸ್ಯೋಗತಃ ಪ್ರತಿಚಚಾಲ ಧರಾ ಸಮಸ್ತಾ
ವಿದ್ರಾವಿತಾ ಚ ಸಕಲಾ ಪ್ರತಿವೀರಸೇನಾ ॥ (ತಾ. ನಿ. ೨೭/೩೯)
(ವಿದ್ರಾವಿತಾ-ಓಡಿತು, ಪಲಾಯನ ಮಾಡಿತು.)

ಭೀಮನ ಕೋಪವನ್ನು ಲಕ್ಷ್ಯ ಮಾಡದೆ ಕರ್ಣ ಅವನ ಮೇಲೆ ತೀಕ್ಷ್ಣ ಬಾಣಗಳನ್ನು ಬಿಟ್ಟ. ಭೀಮ ಕರ್ಣನ ಬಾಣಗಳನ್ನು ಖಂಡಿಸಿ ಅವನ ಮೇಲೆ ಒಂದು ವಜ್ರಸದೃಶವಾದ ಬಾಣ ಪ್ರಯೋಗಿಸಿದ. ಅದರ ಏಟು ತಿಂದ ಕರ್ಣ ರಥದಿಂದ ಕುಸಿದುಕೊಂಡು ಭೂಮಿಯ ಮೇಲೆ ಮೃತಪ್ರಾಯನಾಗಿ ಬಿದ್ದ. ಅದನ್ನು ಕಂಡ ಭೀಮ ತಾನೂ ರಥದಿಂದಿಳಿದು ಕಾಲುನಡಿಗೆಯಿಂದ ಕರ್ಣನ ಬಳಿಗೆ ಬರುತ್ತಾ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು, 'ಈ ನೀಚ, ನಮ್ಮ ಸ್ವಾಮಿಯನ್ನು (ಕೃಷ್ಣನನ್ನು) ನಿಂದಿಸಿದ್ದಾನೆ. ಇವನ ನಾಲಿಗೆಯನ್ನು ಸೀಳಿಬಿಡುತ್ತೇನೆ' ಎಂದು ಹೇಳುತ್ತಾ ಕರ್ಣ ಬಿದ್ದಿದ್ದ ಸ್ಥಳಕ್ಕೆ ಬಂದ. ಅದನ್ನು ಕಂಡ ಶಲ್ಯ, ಕರ್ಣನ ಅವಸ್ಥೆಯೇ ಮುಗಿಯಿತೆಂದು ನಿರ್ಧರಿಸಿಕೊಂಡು, ಭೀಮನನ್ನೇ ಸಮಾಧಾನ ಮಾಡುತ್ತಾ 'ಹೇ ಭೀಮ, ನಿನಗೆ ಈ ಕರ್ಣನ ನಾಲಿಗೆ ಸೀಳುವುದು ಏನೂ ಕಷ್ಟವಲ್ಲ, ನೀನು ಬಹಳ ಸಮರ್ಥ. ಆದರೆ ಅರ್ಜುನ ಮಾಡಿರುವ ಪ್ರತಿಜ್ಞೆಯನ್ನು ಕಾಪಾಡುವುದೂ ನಿನ್ನ ಧರ್ಮ ವಲ್ಲವೇ ! ಕರ್ಣನನ್ನು ಈ ಸಲಕ್ಕೆ ಬಿಟ್ಟುಬಿಡು' ಎಂದು ಅನುನಯದಿಂದ ಮನವೊಪ್ಪಿಸಿ ಕೇಳಿಕೊಂಡನು. ಆದರೂ ಭೀಮ ಮುನ್ನುಗ್ಗಿ ಬರುತ್ತಿದ್ದು ದನ್ನು ಕಂಡು, ಸ್ವಲ್ಪ ಎಚ್ಚರಗೊಂಡ ಕರ್ಣ ಹೌಹಾರಿದನು. ಶಲ್ಯನೇ ಕರ್ಣನನ್ನು ಎತ್ತಿಕೊಂಡು ಭೀಮನ ಎದುರುತಪ್ಪಿಸಿ ದೂರ ಕರೆದೊಯ್ದನು. ಹೀಗಾಗಿ ಕರ್ಣ ಸತ್ತವನು ಶಲ್ಯನ ಸಾಹಸದಿಂದ ಉಳಿದುಕೊಂಡ.

ಕರ್ಣನಿಗೆ ಭೀಮನ ಹೆಸರು ಹೇಳಿದರೇ ಮೈನಡುಕ ಬರುತ್ತಿತ್ತು ಎಂದು ಸಮರ್ಥಿಸುವುದಕ್ಕೆ ಮತ್ತೊಂದು ಘಟನೆಯ ದೃಷ್ಟಾಂತವನ್ನು ಕೊಡ ಬಹುದು. ಒಂದು ಸಾರಿ ದುರ್ಯೋಧನ ಕರ್ಣನಿಗೆ 'ಹೇಗಾದರೂ ಮಾಡಿ ಭೀಮನನ್ನು ಕೊಂದುಬಿಡು' ಎಂದು ಹೇಳಿದ. ಅದಕ್ಕೆ ಕರ್ಣ "....ನೈಷ ಶಕ್ಯೋ ಹಿ, ಜೇತುಂ ದೇವೈಃ ಸವಾಸವೈಃ । ದೈವಾದ್ ಜೀವಾಮ್ಯಹಂ ರಾಜನ್ ಯುಧ್ಯಂಸ್ತೇನಾತಿಪೀಡಿತಃ" (ತಾ.ನಿ. ೨೬/೨೦೬) (ಸವಾಸವೈಃ-ದೇವೈಃ-

ದೇವೇಂದ್ರಸಹಿತರಾದ ದೇವತೆಗಳಿಂದಲೇ, ಜೇತುಂ-ಗೆಲ್ಲಲು, ಜಯಿಸಲು) "ಅಯ್ಯೋ ರಾಜ, ಈ ಭೀಮನನ್ನು ಗೆಲ್ಲುವುದಕ್ಕೆ ಸಕಲ ದೇವತಾಗಣಸಮೇತ ನಾದ ದೇವೇಂದ್ರ ಬಂದರೂ ಸಾಧ್ಯವಿಲ್ಲ. (ಇನ್ನು ನನ್ನಿಂದ ಏನಾದೀತು ?) ಒಂದು ಸಾರಿ ನಾನು ಇವನೊಡನೆ ಯುದ್ಧ ಮಾಡುವುದಕ್ಕೆ ಹೋಗಿ ಏನೋ ಅದೃಷ್ಟವಶಾತ್ ಉಳಿದುಕೊಂಡೆ. 'ಅವನ ಸಹವಾಸಕ್ಕೇ ಗೋವಿಂದ'" ಎಂದು ಉತ್ತರ ಕೊಟ್ಟನು.

ಹೀಗೆಯೇ ಭೀಮನ ಕೈಗೆ ಸಿಕ್ಕಿದ ಶಕುನಿ ಹೇಗೆ ಉಳಿದದ್ದೇ ಹೆಚ್ಚಾಯಿ ತೆಂಬುದರ ಕಿಂಚಿತ್ ವರ್ಣನೆ ಮೇಲೆ ಛ-ಖಂಡದಲ್ಲಿ ಬಂದಿದೆ. ಆ ಸಂದರ್ಭದಲ್ಲೇ ಶಕುನಿಯನ್ನು ಕೊಲ್ಲುವುದು ಭೀಮನಿಗೆ ಏನೂ ಘನವಾದ ಕೆಲಸವಾಗಿರಲಿಲ್ಲ. ಆದರೆ ಶಕುನಿಯ ಮರಣ ಸಹದೇವನಿಂದಲೇ ಆಗ-ಬೇಕೆಂದು ವಿಧಿನಿಯತವಾಗಿತ್ತು. ಆದಕಾರಣ ಭೀಮ ಆ ಉದ್ಯೋಗಕ್ಕೆ ಹೋಗಲಿಲ್ಲ. ಇತರ ಮಹಾರಥಿಕರಂತೆ ದುರ್ಯೋಧನನೂ ಎಷ್ಟೋ ಸಲ ಭೀಮನ ಕೈಗೆ ಸಿಕ್ಕಿಕೊಂಡು ಪಾಡುಪಟ್ಟಿದ್ದಾನೆ. ಕೊನೆಯಲ್ಲಿ ಅವನಿಂದಲೇ ಮರಣ ಹೊಂದಿದ್ದು ಪ್ರಸಿದ್ಧವಾದ ವಿಷಯವಾದ್ದರಿಂದ ಅದನ್ನು ವರ್ಣಿಸು ವುದು ಅನವಶ್ಯಕ.

ಮೇಲಿನ ಈ ಕೆಲವು ವಿಚಾರಗಳನ್ನು ನೋಡಿದರೇ ಸಾಕು ; ಭೀಮನ ಸಾಹಸ, ಉತ್ಸಾಹ, ಬಲ, ಪರಾಕ್ರಮ, ಬಾಹುಬಲ, ಶಸ್ತ್ರಾಸ್ತ್ರಗಳ ಪ್ರೌಢಿಮೆ ಎಲ್ಲವೂ ಎಂಥಾ ಅಸದೃಶವಾದುವೆಂಬ ಕಲ್ಪನೆ ಯಾರಿಗಾದರೂ ಬಂದೇ ಬರು ತ್ತದೆ. ಇಷ್ಟಾದರೂ ಭೀಮನಿಗೆ ತನ್ನ ಪೌರುಷದ ಬಗ್ಗೆಯಾಗಲಿ ಬಲದ ಬಗ್ಗೆಯಾಗಲಿ ಎಳ್ಳಷ್ಟೂ ಗರ್ವವಾಗಲಿ ಅಹಂಕಾರವಾಗಲಿ ಇರಲಿಲ್ಲ. ತನ್ನ ಶಕ್ತಿಯೆಲ್ಲವೂ ಆ ಪರಮಾತ್ಮನದೇ, ಈ ಅದ್ಭುತಕಾರ್ಯಗಳೆಲ್ಲ ಆ ಭಗವಂತನ ಸೇವೆಯೆಂದೇ ತಿಳಿದಿದ್ದುದು ಮತ್ತೂ ಹೆಚ್ಚಿನ ವಿಶೇಷ. ಈ ವಿಚಾರವನ್ನೇ ವಾಯುಸ್ತುತಿಯಲ್ಲಿ ಯಸ್ಯ ಸರ್ವೋತ್ತಮಸ್ಯ ಶುಶ್ರೂಷಾರ್ಥಂ ಚಕರ್ಥ ಎಂದು ಹೇಳಿದೆ.

ಅರ್ಜುನನಿಗೆ ಭೀಮನ ಬಲವಾಗಲಿ ಸಾಹಸವಾಗಲಿ ಶತಾಂಶವೂ ಇಲ್ಲ ದಿದ್ದರೂ ಅಹಂಕಾರ ಮಾತ್ರ ಬೇಕಾದಷ್ಟು ಇತ್ತು, ಅದಕ್ಕೆ ಬೇಕಾದಷ್ಟು

ನಿದರ್ಶನಗಳಿವೆ. ಆದರೆ ಭೀಮನ ಬಲ ಅಪರಿಮಿತವಾಗಿದ್ದರೂ ಅದನ್ನು ಅವನು ಅತ್ಯಲ್ಪವೆಂದು ತಿಳಿದುಕೊಂಡಿದ್ದನು. ಏಕೆಂದರೆ ಶ್ರೀಕೃಷ್ಣ ತಾನೇ ಮೆಚ್ಚಿ ಆ ಗುಣವನ್ನು ಹೀಗೆ ಹೊಗಳಿದ್ದಾನೆಂದು ಉದ್ಯೋಗಪರ್ವದಲ್ಲಿ ಹೇಳಿದ್ದಾನೆಂದು ತಾತ್ಪರ್ಯನಿರ್ಣಯದಲ್ಲಿ (೨೨ ಅ., ೧೬೯ ಶ್ಲೋ.) ಹೇಳಿದ್ದಾರೆ—

ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥

"ಹೇ ಭೀಮ, ನಿನ್ನಲ್ಲಿ ಏನು ಬಲ ಪೌರುಷಾದಿ ಕಲ್ಯಾಣಗುಣಗಳು ಇವೆಯೆಂದು ನೀನು ತಿಳಿದುಕೊಂಡಿದ್ದೀಯೋ, ಅವು ಅದಕ್ಕಿಂತ ಸಾವಿರ ಪಟ್ಟು ಹೆಚ್ಚಾಗಿಯೇ ಇವೆಯೆಂಬುದನ್ನು ನಾನು ಬಲ್ಲೆ." ಇದಲ್ಲವೆ ನಿಜವಾದ ಪೌರುಷ! ಹೀಗಿರುವುದರಿಂದ ಆ ಭೀಮಸೇನನ ಸಾಹಸವನ್ನೂ ಬಲವನ್ನೂ ಪರಾಕ್ರಮವನ್ನೂ ನಿರಹಂಕಾರ ಪ್ರವೃತ್ತಿಯನ್ನೂ ಅಚಲ ವಿಷ್ಣುಭಕ್ತಿಯನ್ನೂ ನೆನೆಸಿಕೊಂಡರೆ ಯಾರಿಗೆ ತಾನೇ ಮೈ ಉಬ್ಬುವುದಿಲ್ಲ! ಸಾಮಾನ್ಯರಾದ ನಮಗೇ ಹೀಗಿರುವಾಗ ಶ್ರೀಮದಾಚಾರ್ಯರ ಮಹಿಮೆಯನ್ನು ಕಣ್ಣಾರೆ ಕಂಡು ಅನುಭವಿಸಿದ ಪಂಡಿತಾಚಾರ್ಯರಿಗೆ ಭೀಮನ ಬಗ್ಗೆ ಇನ್ನೆಷ್ಟು ಗೌರವ, ಎಷ್ಟು ಆದರ-ಶ್ರದ್ಧೆಯಿರಬೇಕು? ಪಂಡಿತಾಚಾರ್ಯರಂತೆ ಶ್ರೀಮದ್ವಾಯುದೇವರ ಅಚ್ಛಿನ್ನಭಕ್ತರೂ ವಿದ್ವಚ್ಛಿಖಾಮಣಿಗಳೂ ಆದ ಶ್ರೀಪಾದರಾಯರೂ ಶ್ರೀವ್ಯಾಸರಾಯರೂ ಭೀಮನ ಸಾಹಸಕ್ಕೆ ಮೈಯುಬ್ಬಿ ಅವನ ಪರಾಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಶ್ರೀಪಾದರಾಜರಂತೂ 'ಇಂಥಾ ಮಹಾನುಭಾವರೇ ನಮ್ಮ ಕುಲಗುರುಗಳು' ಎಂದು ತುಂಬು ಅಭಿಮಾನದಿಂದ ಹೇಳಿಕೊಂಡಿದ್ದಾರೆ.

ಠ) ಶ್ರೀಪಾದರಾಯರ 'ಮಧ್ವನಾಮ'

ಭೀಮಾವತಾರ ಮಹಿಮೆ

ಆ ಮಾರುತನೆ ಭೀಮನೆಂದೆನಿಸಿ ದ್ವಾಪರದಲ್ಲಿ
(ಪಾಠಾಂ. ಮಾರುತನು ಭೀಮನೆನಿಸಿ)
ಸೋಮಕುಲ(ದೊಳು)ದಲಿ ಜನಿಸಿ ಪಾರ್ಥರೊಡನೆ ।

ಭೀಮ ವಿಕ್ರಮ ರಕ್ಕಸರ ಮುರಿ(ದಟ್ಟಿದ)ದೊಟ್ಟಿದ
ಆ ಮಹಿಮ ನಮ್ಮ ಕುಲಗುರುರಾಯನು ||೧೨||

(ಶಬ್ದಾರ್ಥ)—ಮಾರುತನೆ-ವಾಯುದೇವರೇ. ಸೋಮಕುಲ-ಚಂದ್ರವಂಶ. ಪಾರ್ಥರೊಡನೆ-ಕುಂತಿಯ ಮೂರು ಮಕ್ಕಳಲ್ಲಿ (ಅಥವಾ ಪಂಚಪಾಂಡವರಲ್ಲಿ) ಭೀಮವಿಕ್ರಮ-ಪ್ರಚಂಡಪರಾಕ್ರಮಿಯಾಗಿ (ಭೀಮನಿಗೆ ವಿಶೇಷಣವಾದರೆ) ಪ್ರಚಂಡ ಶೂರರಾದ (ರಕ್ಕಸರ ವಿಶೇಷಣವಾದರೆ), ರಕ್ಕಸರ (ತದ್ಭವ)-ಬಕ, ಕಿರ್ಮೀರ, ಹಿಡಿಂಬ-ಕೀಚಕಾದಿ ರಾಕ್ಷಸರನ್ನು. ಮುರಿದು+ಅಟ್ಟಿದ ಅಥವಾ ಮುರಿದು+ಒಟ್ಟಿದ-ನಾಶಮಾಡಿದಂಥಾ.

(ಭಾವಾರ್ಥ) ಹಿಂದೆ ತ್ರೇತಾಯುಗದಲ್ಲಿ ಹನುಮಂತನಾಗಿ ಅವತಾರ ಮಾಡಿದಂಥಾ ಮುಖ್ಯಪ್ರಾಣನೇ ದ್ವಾಪರಯುಗದಲ್ಲಿ ಚಂದ್ರವಂಶದಲ್ಲಿ ಕುಂತಿಯ ಮಕ್ಕಳಲ್ಲಿ (ಅಥವಾ ಪಂಚಪಾಂಡವರಲ್ಲಿ) ಒಬ್ಬನಾಗಿ ಭೀಮಸೇನ ನೆಂಬ ಹೆಸರಿನಿಂದ ಅವತರಿಸಿದನು. ಅವನು ಸ್ವಯಂ ಮಹಾಪರಾಕ್ರಮಿಯಾಗಿ ಮಹಾಬಲಿಷ್ಠರೂ ಲೋಕಕಂಟಕರೂ ಆಗಿದ್ದ ಬಕ-ಕಿರ್ಮೀರ ಹಿಡಿಂಬ-ಕೀಚಕಾದಿ ಅನೇಕ ರಾಕ್ಷಸರನ್ನು ಸಂಹಾರ ಮಾಡಿದನು. ಇಂಥಾ ಮಹಾನುಭಾವರಾದ ವಾಯುದೇವರೇ ನಮ್ಮ ಕುಲಗುರುಗಳು.

ಹರಿಗಳಾ ಹರಿಗಳಿಂ(ದ) ಕರಿಗಳಾ ಕರಿಗಳಿಂ
ಅರೆವ ವೀರನಿಗೆ ಸುರನರರು ಸರಿಯೇ ||೧೩||

(ಶಬ್ದಾರ್ಥ) ಹರಿ-ಕುದುರೆ, ಕರಿ-ಆನೆ, ಅರೆವ-ಅರೆದು ಹಾಕುವ, ನಾಶಮಾಡುವ.

(ಭಾವಾರ್ಥ) ಯುದ್ಧದಲ್ಲಿ ಕುದುರೆಗಳನ್ನು ಬೇರೆ ಕುದುರೆಗಳಿಂದಲೂ, ಆನೆಗಳನ್ನು ಬೇರೆ ಆನೆಗಳಿಂದಲೂ ಬಡಚಿಹಾಕಿ ಸಾಯಿಸಿದ ಈ ವೀರನಿಗೆ ಸರಿ-ಸಮಾನರಾದವರು ದೇವತೆಗಳಲ್ಲಾಗಲಿ, ಮನುಷ್ಯರಲ್ಲಾಗಲಿ ಬೇರೆ ಯಾರಾದರೂ ಇದ್ದಾರೆಯೇ ?

ವೈರಿ ದುಶ್ಯಾಸನನ ರಣದೊಳಗೆ * ಎಡೆಗೆಡಹಿ
ವೀರ ನರಹರಿಯ ಲೀಲೆಯ ತೋರಿದ ।

---

* ರಣದೊಳುರುಳನೆ ಗೆಡಹಿ.

ಕೌರವರ ಬಲಸವರಿ ವೈರಿಗಳ ನೆಗ್ಗೊತ್ತಿ
ಓರಂತೆ ಕೌರವರ* ಕುಲವ ತರಿದ ||೧೯||

(ಪಾಠಾಂತರ–ಮೇಲಿನ ಪಾಠ ಸುಬೋಧ ರಾಮರಾಯರ 'ಹರಿದಾಸ-ತರಂಗಿಣಿ'ಯದು. ಬೇಲೂರು ಕೇಶವದಾಸರ 'ಭಕ್ತವಿಜಯ'ದ ಪಾಠದಲ್ಲಿ ಪೂರ್ವಾರ್ಧ ಉತ್ತರಾರ್ಧಗಳು ಹಿಂದುಮುಂದಾಗಿರುವುದರ ಜೊತೆ ಈ ಪದ್ಯ ೨೦ನೇ ನುಡಿಯಾಗಿ ಪಠಿತವಾಗಿದೆ.)

(ಶಬ್ದಾರ್ಥ) ಎಡೆಗೆಡಹಿ–ಉರುಳನೆ ಗೆಡಹಿ, ನೆಲದ ಮೇಲೆ ಬೀಳಿಸಿ ಅಥವಾ ಕೆಡವಿಕೊಂಡು. ನರಹರಿಯು....ತೋರಿದ–ನರಸಿಂಹ ಹಿರಣ್ಯ-ಕಶಿಪುವಿನ ಹೊಟ್ಟೆ ಬಗೆದಂತೆ ದುಶ್ಶಾಸನನ ಹೊಟ್ಟೆಯನ್ನು ಬಗೆದುಹಾಕಿದನು. ಬಲ–ಸೈನ್ಯವನ್ನು ಸವರಿ–ನುಚ್ಚುನುರಿ ಮಾಡಿ, ನೆಗ್ಗೊತ್ತಿ–ಸದೆಬಡಿದು, ಪುನಃ ತಲೆ ಎತ್ತದಂತೆ ಮಾಡಿ, ಓರಂತೆ–ನಿಶ್ಶೇಷವಾಗಿ, ನಿರ್ನಾಮವಾಗಿ, ತರಿ–ಒರೆಸಿಹಾಕು, ಅಳಿಸಿಹಾಕು (ಮರದ ಟೊಂಗೆಯಿಂದ ಅಥವಾ ಗಿಡದ ಎಸಳಿಂದ ಎಲೆಗಳನ್ನು 'ತರಿ'ಯುವಂತೆ ಸವರಿಹಾಕು)

(ಭಾವಾರ್ಥ) ಚಿಕ್ಕಂದಿನಿಂದಲೆ ಭೀಮನನ್ನು ದ್ವೇಷಿಸುತ್ತಿದ್ದ ದುಶ್ಶಾಸನನನ್ನು ರಥದಿಂದ ಕೆಳಕ್ಕೆ ಕೆಡವಿಕೊಂಡು ಕಾಲಿಂದ ನೆಲಕ್ಕೆ ಒರಸುತ್ತಾ, ಹಿಂದೆ ನರಸಿಂಹ ಹಿರಣ್ಯಕಶಿಪುವಿನ ಹೊಟ್ಟೆ ಬಗೆದುಹಾಕಿದಂತೆ ದುಶ್ಶಾಸನನ ಹೊಟ್ಟೆಯನ್ನು ಬಗೆದುಹಾಕಿದನು. ಕೌರವರ ಹನ್ನೊಂದು ಅಕ್ಷೋಹಿಣೀ ಸೈನ್ಯವನ್ನು ನುಚ್ಚುನುರಿ ಮಾಡಿ ಅವರು ಪುನಃ ತಲೆಯೆತ್ತದಂತೆ ಅವರನ್ನು ನಿಶ್ಶೇಷವಾಗಿ ನಿರ್ನಾಮ ಮಾಡಿಬಿಟ್ಟನು. (ದುಃಶಾಸನನ ವಧೆಗೆ ಮೇಲೆ ೫-ಖಂಡ ನೋಡಿ.)

ಚಂಡವಿಕ್ರಮನು ಗದೆಯನು ಪಿಡಿದು ಭೂ
ಮಂಡಲದೊಳಿದಿರಾದ ಖಳರನೆಲ್ಲ ।

(ಬೇ.ಕೇ. ಪಾಠ—ಗದೆಗೊಂಡು ರಣದಲಿ ನಿಂದು । ಮಂಡಲದೊಳುದ್ಭವಿಸಿದ ಖಳ ಖಳರ ।)

ಹಿಂಡಿ ಬಿಸುಟಿಹ (-ಟಿದ) ವೃಕೋದರನ ಪ್ರತಾಪವನು

* ಕೌರವರ ತರಿದು ಮೆರೆದ.

ಕಂಡು ನಿಲ್ಲುವರಾರು ತ್ರಿಭುವನದೊಳು ॥೨೧॥
(ಬೇ. ಕೇ. ನಿಲುವವರಾರು ತ್ರ್ಯೈಭುವನದೊಳಗೆ)

(ಶಬ್ದಾರ್ಥ)ಚಂಡವಿಕ್ರಮನ-ಪ್ರಚಂಡ ಪರಾಕ್ರಮಶಾಲಿಯಾದ ಭೀಮ, ಮಂಡಲದೊಳು-ಭೂಮಂಡಲದಲ್ಲಿ, ಇದಿರಾದ-ಎದುರಿಸಿ ಯುದ್ಧಕ್ಕೆ ಬಂದ, ಖಳರನೆಲ್ಲ, ಅಖಿಳ ಖಳರ-ಸಕಲ ದುಷ್ಟ(ದೈತ್ಯ)ರನ್ನೂ ಹಿಂಡಿ ಬಿಸುಟಿ(ದ)ಹ-ನಿಂಬೆಹಣ್ಣಿನ ಹೋಳಿನಿಂದ ರಸವನ್ನೆಲ್ಲ ಹಿಂಡಿಕೊಂಡು ಸಿಪ್ಪೆಯನ್ನು ಬಿಸಾಡುವಂತೆ, ದೈತ್ಯರ (ಖಳರ) ಶಕ್ತಿಯನ್ನೆಲ್ಲಾ ನಾಶಮಾಡಿ ದರ್ಪ(ಗರ್ವ)ವನ್ನೆಲ್ಲ ಅಡಗಿಸಿ ಸೊಕ್ಕು ಮುರಿದುಹಾಕಿದ. ವೃಕೋದರನ-ಭೀಮಸೇನನ (ವಿವರಣೆಗೆ ಕೆಳಗೆ ಖಂಡ 316-ಥ ನೋಡಿ.) ತ್ರಿಭುವನದೊಳು, ತ್ರ್ಯೈಭುವನದೊಳಗೆ-ಮೂರು ಲೋಕದಲ್ಲಿ.

(ಭಾವಾರ್ಥ) ಪ್ರಚಂಡ ಬಾಹುಪರಾಕ್ರಮಶಾಲಿಯಾದ (ಖಂಡ 270-ಗ ನೋಡಿ) ಭೀಮ ಗದೆಯನ್ನು ಕೈಯಲ್ಲಿ ಹಿಡಿದು ರಣರಂಗದಲ್ಲಿ ನಿಂತು ತನ್ನೊಡನೆ ಯುದ್ಧಕ್ಕೆ ಬಂದ (ಬೇ. ಕೇ. ಪಾಠದಂತೆ—ಭೂಮಂಡಲದಲ್ಲಿ ಹುಟ್ಟಿದ್ದ) ಸಕಲ ದುಷ್ಟರನ್ನೂ ಪರಾಭವಗೊಳಿಸಿ ಅವರ ಶಕ್ತಿಯನ್ನೆಲ್ಲ ಹಿಂಡಿಹಾಕಿ ಗರ್ವವನ್ನೆಲ್ಲ ಅಡಗಿಸಿ ರಸ ಹಿಂಡಿದ ನಿಂಬೇಹಣ್ಣನ್ನು ಬಿಸಾಡುವಂತೆ ನಿರ್ವೀರ್ಯರನ್ನಾಗಿ ಮಾಡಿಬಿಡುತ್ತಿದ್ದನು. ಇಂಥಾ ಅಪ್ರತಿಮ ವೀರನಿಗೆ ಸಮರಾದವರು ಮೂರು ಲೋಕ ಹುಡುಕಿದರೂ ಎಲ್ಲಿ ಸಿಗುತ್ತಾರೆ? (ವಾಯುಸ್ತುತಿಯಲ್ಲಿ ಪ್ರಸಕ್ತವಾಗಿಲ್ಲವಾದ ಕಾರಣ ಮಿಕ್ಕ ಪದ್ಯಗಳನ್ನು ಕೊಟ್ಟಿಲ್ಲ.)

ಡ) ಶ್ರೀವ್ಯಾಸರಾಯರು ಮಾಡಿದ ಪ್ರಾರ್ಥನೆ—'ನೀನೆ ವರಗುರು ಮುಖ್ಯಪ್ರಾಣ' ಎಂಬ ಕೀರ್ತನೆಯ ಎರಡನೆಯ ನುಡಿಯಲ್ಲಿ ಶ್ರೀವ್ಯಾಸ-ರಾಯರು ಭೀಮಾವತಾರವನ್ನು ಹೀಗೆ ವರ್ಣಿಸಿ ಪ್ರಾರ್ಥಿಸಿದ್ದಾರೆ—

ಲಂಡ ಕೀಚಕ ಬಕರ(ದ) । ಮಂಡೆಯನು ಒಡೆದು ಉ-
ದ್ದಂಡ ಮಗಧಾಧಿಪನ । ದಂಡವನು ಸೀಳಿ ॥
ಭಂಡ ಕೌರವರ ಶಿರ । ಚಂ(ಚೆಂ)ಡಾಡಿ ಪ್ರಬಲರಣ

ಮಂಡಲದಿ ಚಂಡರಿಪು । ದಂಡುಗಳ ಖಂಡಿಸಿದೆ ॥
ನೀನೆ ವರಗುರು ಮುಖ್ಯಪ್ರಾಣ ॥

(ಶಬ್ದಾರ್ಥ) ಲಂಡ-೧, ಧರ್ಮಶ್ರದ್ಧೆಯಿಲ್ಲದ, ಪಾಷಂಡಿಗಳಾದ, ೨. ದುಷ್ಟರಾದ, ಕೇಡಿಗರಾದ, ಮುಂಡೆ-ತಲೆಬುರುಡೆ, ಉದ್ದಂಡ-ಗರ್ವಿಷ್ಠನಾದ ಅಥವಾ ಕೊಬ್ಬಿದ, ಮಗಧಾಧಿಪನ - ಮಗಧದೇಶದ ರಾಜನಾದ ಜರಾಸಂಧನನ್ನು, ದಂಡವನು-ಶರೀರವನ್ನು, ಭಂಡ-ನಾಚಿಕೆಯಿಲ್ಲದ ಅಥವಾ ನೀಚರಾದ, ರಣಮಂಡಲದಿ-ರಣರಂಗದಲ್ಲಿ, ಯುದ್ಧರಂಗದಲ್ಲಿ.

(ಭಾವಾರ್ಥ) ಹೇ ಮುಖ್ಯಪ್ರಾಣ ! ದ್ವಾಪರಯುಗದಲ್ಲಿ ನೀನು ಭೀಮನಾಗಿ ಅವತಾರ ಮಾಡಿ ಶ್ರೀಹರಿಯ ಪ್ರೀತ್ಯರ್ಥವಾಗಿ ದುರಾತ್ಮರೂ ಪಾಷಂಡಿಗಳೂ ಆಗಿದ್ದ ಕೀಚಕ-ಉಪಕೀಚಕರು ಬಕಾಸುರ ಮೊದಲಾದ ದುಷ್ಟರ ತಲೆಯನ್ನು ಇಳುಹಿ ಸಂಹಾರ ಮಾಡಿದಿ. ಭೂಮಂಡಲದಲ್ಲೀ ತನ್ನ ಸಮಾನರು ಬೇರೆ ಯಾರೂ ಇಲ್ಲವೆಂದು ತಿಳಿದು ಕೊಬ್ಬಿಹೋಗಿ ಗರ್ವಿಷ್ಠನಾಗಿದ್ದ ಜರಾಸಂಧನ ಶರೀರವನ್ನು ಎರಡು ಸೀಳಾಗಿ ಸೀಳಿಹಾಕಿದಿ. ನೀಚರೂ, ಯಾವ ಕೆಟ್ಟ ಕೆಲಸ ಮಾಡಲಿಕ್ಕೂ ನಾಚಿಕೆಯಿಲ್ಲದವರೂ ಆದ ದುರ್ಯೋಧನಾದಿ ನೂರು ಮಂದಿ ಕೌರವರ ತಲೆಗಳನ್ನು ರಣರಂಗದಲ್ಲಿ ಈಡಾಡಿ ಪ್ರಚಂಡರಾಗಿದ್ದ ಶತ್ರುಗಳ ಹನ್ನೊಂದು ಅಕ್ಷೋಹಿಣೀ ಸೈನ್ಯವನ್ನು ನುಚ್ಚುನುರಿಮಾಡಿಹಾಕಿದಿ. ಇಂಥಾ ನೀನು ನಮಗೆಲ್ಲರಿಗೂ ಆದಿಗುರುವಾಗಿದ್ದೀಯೆ.

ಇಷ್ಟು ವಿಷಯಗಳನ್ನೂ ಓದಿ ಮೆಲುಕು ಹಾಕಿದರೆ ಈ ಶ್ಲೋಕದಲ್ಲಿ ಪ್ರತಿಯೊಂದು ಮಾತೂ ಎಷ್ಟು ಅರ್ಥಗರ್ಭಿತವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಆ ಭಾವನೆಗಳನ್ನೇ ಆದಷ್ಟುಮಟ್ಟಿಗೆ ಅಳವಡಿಸಿಕೊಂಡು ಕೆಳಗಿನ ಭಾವಾರ್ಥಗಳನ್ನು ಬರೆಯಲಾಗಿದೆ.

275. (ಕ) ಶ್ರೀಕೃಷ್ಣಪರವಾಗಿ ಭಾವಾರ್ಥ—ಹೇ ಕೃಷ್ಣ ! ನೀನು ಅಪರಿಮಿತಾನಂತ ಬಲವುಳ್ಳವನು, ನಿನ್ನ ಬಲಕ್ಕೆ ಎದುರೇ ಇಲ್ಲ. ಆದಕಾರಣ ನೀನು ಸಕಲ ಶತ್ರುಗಳನ್ನೂ ಲೀಲಾಜಾಲವಾಗಿ ಜಯಿಸಬಲ್ಲ ಮಹಾಸಮರ್ಥನಾಗಿರುವಿ (ಅರಿಹನ್). ನೀನು ನಿನ್ನ ಅನಂತ ಕೈಗಳಲ್ಲಿ ಶಂಖಚಕ್ರಗದಾಪದ್ಮಖಡ್ಗಮುಸಲಾದಿ ಅಸಂಖ್ಯ ಆಯುಧಗಳನ್ನು

ಧರಿಸಿರುವಿಯಲ್ಲದೆ ನಿನ್ನ ಒಂದೊಂದು ಆಯುಧವೂ ಅದ್ಭುತಶಕ್ತಿಯುಳ್ಳವುಗಳಾಗಿವೆ. ನಿನ್ನ ಗದೆಗೆ ಕೌಮೋದಕಿಯೆಂದು ಹೆಸರು. ನಿನ್ನ ಆ ಕೌಮೋದಕೀಗದೆಯೇ ಸಕಲ ಶತ್ರುಗಳನ್ನೂ ಸಕಲಾನಿಷ್ಟಗಳನ್ನೂ ನಾಶ-ಮಾಡಬಲ್ಲುದು, ಇನ್ನು ಅದನ್ನು ಕೈಯಲ್ಲಿ ಧರಿಸಿದ ನಿನ್ನ ಮಹಿಮೆಯನ್ನು ಎಷ್ಟೆಂದು ವರ್ಣಿಸಲಿ! (ಉದ್ಗದೋದ್ದಾಮ ಬಾಹೋ). ಸಕಲ ಪ್ರಾಣಿಗಳಿಗೂ ಅನ್ನವೇ ಜೀವನಾಧಾರ. ಆದರೆ ಆ ಅನ್ನವೇ ಜನನ-ಮರಣ, ವೃದ್ಧಿ-ಹ್ರಾಸ-ರೋಗರುಜಿನಾದಿ ಸಕಲ ಕಾರ್ಪಣ್ಯಗಳಿಗೂ ಮೂಲಕಾರಣ. ಹೇ ಸ್ವಾಮಿ, ಜ್ಞಾನಾನಂದಪ್ರಕಾಶಬಲಾದಿ ಕೇವಲ ಗುಣಮಯವಾದ ಅಪ್ರಾಕೃತ ದೇಹವುಳ್ಳವನಾದ ಕಾರಣ ನಿನಗೆ ಮಾತ್ರ ಅನ್ನವು ಜೀವನಾಧಾರವಲ್ಲ; ಹೀಗೆ ನೀನು ಅ-ಥ- ಅನ್ನನಿಮಿತ್ತವಾದ ಜನನಮರಣ ವೃದ್ಧಿಹ್ರಾಸಾದಿ ಯಾವ ದೋಷವೂ ನಿನ್ನ ಹತ್ತಿರವೇ ಸುಳಿಯುವ ಹಾಗಿಲ್ಲ. ನೀನು ಸ್ವಯಂ ಆನಂದಮಯ ಸ್ವರೂಪಿಯಾಗಿರುವಿಯಲ್ಲದೆ ಲಕ್ಷ್ಮೀದೇವಿಯ ಆನಂದಕ್ಕೂ ಬ್ರಹ್ಮಾದಿ ತೃಣಜೀವರ ಪರ್ಯಂತ ಸಕಲ ಮುಕ್ತಜೀವರ ಸ್ವರೂಪಾನಂದಕ್ಕೂ ಕಾರಣನಾಗಿರುವಿ. ಆದಕಾರಣವೇ ನೀನು **ಆನಂದ-ತೀರ್ಥ** (ತೀರ್ಥ= ಕಾರಣ) ಶಬ್ದವಾಚ್ಯನಾಗಿದ್ದೀಯೆ, ಹೇ ಭಗವಂತ, ನಿನಗೆ ವಿಷ್ಣುಸಹಸ್ರ-ನಾಮಾದಿ ಅನೇಕ ನಾಮಾವಳಿಗಳಲ್ಲಿ ಹೇಳಿರುವ ಅನಂತನಾಮಗಳೂ ಯೋಗದಿಂದಲೂ ರೂಢಿಯಿಂದಲೂ ಪರಮ ಮುಖ್ಯವೃತ್ತಿಯಿಂದಲೇ ಅನ್ವಯಿಸುತ್ತವೆ. ಅವು ನಿನ್ನ ಅನಂತಗುಣಗಳಿಗೆ ವಾಚಕವಾಗಿದ್ದು ಪಾವನವೂ ದೋಷಪರಿಹಾರಕವೂ ಆಗಿ ಮಂಗಳಪ್ರದವಾದ ನಾಮಗಳಾಗಿವೆ (ಶ್ರೀಮನ್ನಾಮನ್). ಈ ಪ್ರಕಾರ ಅನಂತಗುಣ ಪರಿಪೂರ್ಣನಾದ ನಿನಗೆ ಸರಿಸಮಾನರು ಎಲ್ಲಿರಲು ಸಾಧ್ಯ? ನೀನು ಸ್ವಯಮ (ಸು+ಅ+ಯಮ), ಅದ್ವಿತೀಯ, ಸಮಾಧಿಕರಹಿತ.

ಹೇ ಪರಮಾತ್ಮ, ಇಂಥಾ ಕಲ್ಯಾಣಗುಣ ಪರಿಪೂರ್ಣನಾದ ನೀನು 'ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ' ಎಂಬ ನುಡಿಯಂತೆ ಭೂಮಿಯ ಭಾರವನ್ನು ಇಳಿಸುವುದಕ್ಕಾಗಿಯೇ ಶ್ರೀಕೃಷ್ಣನಾಗಿ ಅವತಾರ ಮಾಡಿದಿ. ನಿನ್ನ ಆ ಭೂಭಾರಹರಣಕಾರ್ಯಸಾಧನೆಗೆ

ಭಾರತಯುದ್ಧವನ್ನೇ ನೆಪ(ನಿಮಿತ್ತ)ವಾಗಿ ಮಾಡಿಕೊಂಡಿ. ಆ ಯುದ್ಧಕ್ಕೆ ನೀನೇ ಮುಖ್ಯಪ್ರೇರಕ. ಯುದ್ಧದ ನಿಮಿತ್ತ ಹದಿನೆಂಟು ಅಕ್ಷೌಹಿಣೀ ಸೈನ್ಯವು ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಇತ್ತಂಡ ಸೇನೆಯಾಗಿ ನೆರೆಯಿತು. ಹದಿನೆಂಟು ದಿನಗಳ ಅವಧಿಯೊಳಗಾಗಿ ಈ ಹದಿನೆಂಟು ಅಕ್ಷೋಹಿಣೀ ಸೈನ್ಯವೂ ನಿರ್ನಾಮವಾಗಿ ನಾಶವಾಗಿ ಹೋಯಿತು, ಭೂಭಾರವು ಇಳಿದುಹೋಯಿತು. ಅಷ್ಟು ಬೇಗ ಅಷ್ಟು ಭಾರಿ ಸೈನ್ಯ ನಾಶವಾಗುವುದಕ್ಕೆ ನಿನ್ನ ಸಿಂಹನಾದರೂಪ ವಾದ ಇಚ್ಛೆಯೇ ಕಾರಣವಾಯಿತು. ನಿನ್ನ ಸಿಂಹನಾದವು ಸ್ವಪಕ್ಷೀಯರಾದ ಪಾಂಡವರಿಗೆ ಉತ್ಸಾಹ ತುಂಬುತ್ತಿದ್ದರೆ ಪರಪಕ್ಷದ ಭೀಷ್ಮ-ದ್ರೋಣಾದಿಗಳ ಹೃದಯವಿದಾರಕವಾಗಿರುತ್ತಿತ್ತು. ನಿನ್ನ ಆ ಸಿಂಹನಾದದ ಮಹಿಮೆ ಯನ್ನಾಗಲಿ, ಯುದ್ಧದ ವೈಖರಿಯನ್ನಾಗಲಿ ನಾನು ಎಷ್ಟೆಂದು ವರ್ಣಿಸಲಿ? ಅಥವಾ ಅಂಥಾ ಪ್ರತಿಭೆಯಾಗಲಿ ವಾಕ್ಪಟುತ್ವವಾಗಲಿ ನನಗೆ ಎಲ್ಲಿ ಬರಬೇಕು. ಆ ಯುದ್ಧವನ್ನು ಯಥಾರ್ಥವಾಗಿ ವರ್ಣಿಸಲು ಅಪಾರ ಕವಿತಾಶಕ್ತಿಯುಳ್ಳ ವ್ಯಾಸರೂಪಿಯಾದ ನೀನೊಬ್ಬನೇ ಸಮರ್ಥ. ಏಕೆಂದರೆ ಹೇ ಸರ್ವಜ್ಞ ಶಿಖಾಮಣೀ, ನೀನು ಪ್ರಕಾಶಸ್ವರೂಪನೂ (ಯಸ್ಯ) ಸರ್ವೋತ್ತಮನೂ (ಸರ್ವೋತ್ತಮಸ್ಯ) ಆಗಿರುವುದರಿಂದ ಎಲ್ಲವನ್ನೂ ನೀನು ಸ್ವಯಂಪ್ರಕಾಶ ದಿಂದಲೇ ತಿಳಿಯಬಲ್ಲಿ. ನಿತ್ಯಾವಿಯೋಗಿನಿಯಾದ ಲಕ್ಷ್ಮೀಸಹಿತನಾಗಿ ನಿತ್ಯ-ತಾರುಣ್ಯವುಳ್ಳ ಮೂರ್ತಿಯಾದ್ದರಿಂದ (ಯುವ-ಯೋಃ) ನಿನಗೆ ಅಜ್ಞಾನವೂ ಇಲ್ಲ, ಮರೆವೂ (ವಿಸ್ಮೃತಿಯೂ) ಇಲ್ಲ. ಇಂಥಾ ನಿನ್ನ ಪಾದ-ಕಮಲಗಳು ಎಲ್ಲರಿಗೂ ಸುಲಭವಾಗಿ ದೊರಕತಕ್ಕ ಪದಾರ್ಥಗಳಲ್ಲ. ನಿರಂತರ-ವಾಗಿ ಅನುಷ್ಠಾನಕ್ಕೆ ತಂದುಕೊಂಡ ಜ್ಞಾನಭಕ್ತಿವೈರಾಗ್ಯಾದಿ ಸಾಧನ ಸಂಪತ್ತಿನಿಂದಲೇ ಅವುಗಳ ಧ್ಯಾನ ಲಭ್ಯವಾಗುತ್ತದೆ. ಹೇ ಭಗವಂತ ಶ್ರೀಕೃಷ್ಣ, ನಾನು ಅನನ್ಯಭಾವದಿಂದ ನಿನ್ನ ಆ ಪಾದಪದ್ಮದ್ವಯವನ್ನು ಮೊರೆಹೊಕ್ಕಿ-ದ್ದೇನೆ, ನನ್ನ ಮೇಲೆ ಕೃಪೆ ಮಾಡು, ಉದ್ಧಾರ ಮಾಡು, ಸ್ವಾಮಿ— ಎಂಬುದೇ ಶ್ರೀಕೃಷ್ಣಪರವಾದ ಭಾವಾರ್ಥ.

ಖ) ಭೀಮಪರವಾಗಿ ಭಾವಾರ್ಥ— ವಾಯುಪುತ್ರನಾದ ಹೇ ಭೀಮಸೇನ! ನೀನು ಬಲಾತ್ಮಕನಾದ ಆ ಮಾರುತನ ಅಂಶೋದ್ಭವನೇ

ಅಲ್ಲವೆ. ಅದರಿಂದಲೇ ನೀನು ಅಪರಿಮಿತ ಬಲಪರಾಕ್ರಮಪರಿಶೋಭಿತನಾದ ಅದ್ವಿತೀಯ ವೀರಾಗ್ರಣಿಯೆಂದು ಮೂರು ಲೋಕದಲ್ಲೂ ಪ್ರಖ್ಯಾತನಾಗಿದ್ದೀಯೆ. ನಿನ್ನ ಈ ಬಲ ವರದಿಂದಾಗಲಿ ಆಹಾರಾದಿಗಳ ಸೇವನೆಯಿಂದಾಗಲಿ ಲಬ್ಧವಾದ ಕ್ಷಣಿಕಬಲವಾಗಿರದೆ ಸ್ವರೂಪಭೂತವಾದ ನೈಜಬಲವಾಗಿದೆ. ಈ ಕಾರಣದಿಂದಲೇ ಭಗವಂತ ಶ್ರೀಕೃಷ್ಣನ ಭೂಭಾರಹರಣಕಾರ್ಯದಲ್ಲಿ ನೀನು ಪ್ರಧಾನಾಂಗವಾಗಿ ವರ್ತಿಸಿ ಭೂಮಿಗೆ ಭಾರಭೂತರಾಗಿದ್ದ ಅಸಂಖ್ಯಶತ್ರುಗಳನ್ನು ಸಂಹರಿಸಿ (ಅರಿಹನ್) ಆ ಭಗವಂತನಿಗೆ ನಿರ್ವ್ಯಾಜ ಸೇವೆಯನ್ನು ಸಲ್ಲಿಸಿ ಅವನ ಪೂರ್ಣಾನುಗ್ರಹಕ್ಕೆ ಪಾತ್ರನಾದಿ (ಯಸ್ಯ ಸರ್ವೋತ್ತಮಸ್ಯ ಶುಶ್ರೂಷಾರ್ಥಂ ಚಕರ್ಥ).

ಹೇ ಅರಿಹನ್, ನಿನ್ನಂತೆ ಭೀಷ್ಮದ್ರೋಣಾದಿಗಳೂ ಕರ್ಣಾರ್ಜುನಾದಿಗಳೂ ಶತ್ರುಸಂಹಾರ ಮಾಡಿದ್ದಾರೆ, ನಿಜ. ಆದರೇನು, ಅವರೆಲ್ಲರ ಯುದ್ಧದ ರೀತಿಯೇ ಒಂದಾದರೆ, ನಿನ್ನ ಯುದ್ಧದ ರೀತಿಯೇ ಬೇರೆ—ಸರ್ವಥಾ ಭಿನ್ನ. ಅಷ್ಟೇ ಅಲ್ಲ, ಅತ್ಯದ್ಭುತವೂ ಅತ್ಯಂತ ರೋಮಾಂಚಕಾರಿಯೂ ಆದುದು. ಮಿಕ್ಕ ಎಲ್ಲರ ಸಾಹಸ-ಶೌರ್ಯಗಳೂ ಅವರವರ ಧನುರ್ಬಾಣಗಳನ್ನು—ಖಡ್ಗ-ಮುಸಲಾದ್ಯಾಯುಧಗಳನ್ನು ಅವಲಂಬಿಸಿವೆ, ಆ ಆಯುಧಗಳಿಲ್ಲದಿದ್ದರೆ ಅವರು ನಿಸ್ಸಹಾಯರು, ನಿರ್ವೀರ್ಯರು. ನಿನ್ನ ವಿಚಾರವೇ ಬೇರೆ. ಯಾರೂ ಹಿಡಿಯದ ಅದ್ಭುತ ಗದೆಯೇ ನಿನ್ನ ಮುಖ್ಯ ಆಯುಧ. ಲಕ್ಷ ಮಣ ಭಾರವುಳ್ಳದ್ದೂ ಸುವರ್ಣಬಿಂದುಚಿತ್ರಿತವೂ ಆದ ಆ ಗದೆಯನ್ನು ನೀನು ಕೈಯಲ್ಲಿ ಹಿಡಿದು ನಿಂತೆಯೆಂದರೆ ನೀನು ಶತ್ರುಗಳಿಗೆ ಮೃತ್ಯುಸ್ವರೂಪವೇ ಆಗಿಬಿಡುತ್ತಿದ್ದಿ. ನಿನ್ನ ಗದಾಪ್ರಹಾರಕ್ಕೆ ಅದೆಷ್ಟು ಆನೆಗಳು-ಕುದುರೆಗಳು ತುತ್ತಾಗಿ ಹೋದುವೋ, ಎಷ್ಟು ರಥಗಳು ಪುಡಿಪುಡಿಯಾಗಿ ಹೋದುವೋ, ಎಷ್ಟು ಕಾಲಾಳುಗಳು ಎಷ್ಟು ಶತ್ರುಗಳು ಯಮಪುರಿಗೆ ಸೇರಿದರೋ ಲೆಕ್ಕಕ್ಕೆ ಸಿಕ್ಕುವಂತಿಲ್ಲ. ಶ್ರೀವಿಷ್ಣುವೊಬ್ಬನನ್ನು ಬಿಟ್ಟರೆ ಇಡೀ ಜಗತ್ತಿನಲ್ಲಿ ಗದಾಯುಧ-ಗದಾಪಾಣಿ ಎಂದರೆ ನೀನೊಬ್ಬನೇ, ಬೇರೆ ಯಾರೂ ಇಲ್ಲ (ಉದ್ಗದ).

ಇಷ್ಟಾದರೂ ನಿನ್ನ ಬಲ, ನಿನ್ನ ಪರಾಕ್ರಮ ಯಾವುದೂ ಆ ಗದೆಗೇ ಸೀಮಿತವಾಗಿಲ್ಲ. ಗದೆ ಇದ್ದರೇನು, ಇಲ್ಲದಿದ್ದರೇನು—ನಿನಗೆ ಎರಡೂ ಒಂದೇ.

ಏಕೆಂದರೆ ನೀನು ಸ್ವಯಂ 'ನಾಗಾಯುತ' ಬಲಾಢ್ಯ-ಹತ್ತು ಸಾವಿರ ಆನೆಗಳ ಬಲವುಳ್ಳ ವೀರಾಧಿವೀರ. ನಿನ್ನ ಬಾಹುಬಲದಿಂದಲೇ ನೀನು ತ್ರೈಲೋಕ್ಯವನ್ನೂ ಜಯಿಸಬಲ್ಲಂಥಾ ಅಪ್ರತಿಮ ಮಲ್ಲ (ಉದ್ದಾಮಬಾಹೋ). ಹೇ ಸ್ವಾಮಿ, ಬಕಾಸುರನನ್ನೂ ಕಿರ್ಮೀರನನ್ನೂ ಜರಾಸಂಧಾದಿ ಅನೇಕರನ್ನು ಸಂಹರಿಸಿದ್ದು ಕೇವಲ ನಿನ್ನ ಬಾಹುಬಲದಿಂದಲೇ ಅಲ್ಲವೇ! ಇದು ನಿನ್ನ ಮತ್ತೊಂದು ದೊಡ್ಡ ಸಾಹಸಗುಣ. ಇಂಥಾ ನಿನ್ನ ಭುಜಬಲದ ಜೊತೆಗೆ ಅಂಥಾ ಗದೆಯೂ ಸೇರಿದರೆ ಸುವರ್ಣಕ್ಕೆ ಸುಗಂಧವೂ ಸೇರಿದಂತಾಗುತ್ತಿತ್ತೇ ವಿನಾ ಗದೆ ಇಲ್ಲವೆಂದು ನಿನ್ನ ಬಲ, ನಿನ್ನ ಶೌರ್ಯ, ಸಾಹಸ, ಪರಾಕ್ರಮ ಯಾವುದೂ ಈಷತ್ತೂ ಕೊರತೆಯಾಗುವ ಮಾತೇ ಇಲ್ಲ (ಉದ್ಗದೋ-ದ್ದಾಮ ಬಾಹೋ).

ಶತ್ರುಸಂಹಾರಕಾರ್ಯದಲ್ಲಿ ನಿನ್ನ ಶೌರ್ಯ-ಸಾಹಸ-ಪರಾಕ್ರಮಗಳ ಜೊತೆ ನಿನ್ನ ಗದೆಯೂ ಹೇಗೆ ಅನುಕೂಲವಾಗುತ್ತಿತ್ತೋ ಹಾಗೆ ನಿನ್ನ ಸಿಂಹ-ನಾದವೂ ಸಹ ಯಥೇಷ್ಟ ಸಹಾಯ—ಕಲ್ಪನೆಗೂ ಮೀರಿ, ಸಹಾಯ ಮಾಡಿತು (ಕ್ಷ್ವೇಲಾಕ್ಷೀಣಾಟ್ಟಹಾಸಂ), ಸಿಂಹಗರ್ಜನೆಯೂ ಮಹತ್ವಪೂರ್ಣವಾದ ಸಾಧನವಾಗಿ ಕೆಲಸ ಮಾಡಿತು. ಸಿಂಹನಾದ ಮಾಡುತ್ತಾ-ಮಾಡುತ್ತಾ ಒಂದು ಕಡೆ ನಿನ್ನ ಸಾಹಸ-ಉತ್ಸಾಹಗಳು ಹೇಗೆ ಪ್ರವೃದ್ಧವಾಗುತ್ತಿತ್ತೋ (ಕ್ಷ್ವೇಲಾ-ಅಕ್ಷೀಣ-ಅಟ್ಟಹಾಸಂ), ಹಾಗೆ ಹಾಗೆ ಶತ್ರುಗಳ ಉತ್ಸಾಹ-ಆಟಾಟೋಪಗಳೆಲ್ಲ ಅಡಗಿಹೋಗುತ್ತಿದ್ದುವು (ಕ್ಷೀಣ-ಅಟ್ಟಹಾಸಂ). ಹೇ ಶೂರಸಿಂಹ, ನಿನ್ನ ಸಿಂಹಗರ್ಜನೆ ಕೇಳಿದ ಮಾತ್ರದಿಂದಲೇ ಕೆಲವು ಶತ್ರು-ಸೈನಿಕರೂ ಆನೆ-ಕುದುರೆಗಳೂ ಮಲಮೂತ್ರ ವಿಸರ್ಜನೆ ಮಾಡಿಕೊಂಡು ವೆಂದೂ ಇನ್ನು ಕೆಲವರು ರಕ್ತ ಕಾರಿಕೊಂಡರೆಂದೂ ಮತ್ತೆ ಕೆಲವರು ಮೆದುಗರು ಭಯತ್ರಸ್ತರಾಗಿ ಸತ್ತೇಹೋದರೆಂಬ ವರ್ಣನೆ ಭಾರತದಲ್ಲಿ ಬಂದಿದೆಯಲ್ಲವೆ! (ಖಂಡ 274-ಘ, ಪುಟ ೫೨೧.) ಇದಕ್ಕೆ ಪ್ರತಿಯಾಗಿ ನೀನು ಯಾವ ಶತ್ರುವಿನ ಎಂಥಾ ಅಟ್ಟಹಾಸಕ್ಕೂ ಯಾರ ಸಿಂಹಗರ್ಜನೆಗೂ ಎಳ್ಳಷ್ಟೂ ಮಣಿಯುವವನಲ್ಲ. ಇದಕ್ಕೂ ಉತ್ತಮ ದೃಷ್ಟಾಂತ ಕೊಡಬಹುದು. ಯಾವನ ಆರ್ಭಟದ ಧ್ವನಿಗೇ ರಾತ್ರಿ ಗೂಡುಗಳಲ್ಲಿ ಮಲಗಿ ನಿದ್ರಿಸುತ್ತಿದ್ದ

ಹಕ್ಕಿಪಕ್ಷಿಗಳೂ ಸಹ ಎಚ್ಚೆತ್ತು ಹಾರಾಡಲಾರಂಭಿಸಿದುವೋ ಮತ್ತು ನಿರ್ಬಲವಾಗಿದ್ದ ಸಣ್ಣ ಪುಟ್ಟ ಹಕ್ಕಿಗಳೂ ಮರಿಗಳೂ ಗೂಡುಗಳಲ್ಲೇ ಸತ್ತು ನೆಲದ ಮೇಲೆ ಉದುರಿಬಿದ್ದುವೋ (ಖಂಡ 258, ಪುಟ ೪೪೯) ಅಂಥಾ ಕಿರ್ಮೀರನಿಗೇ ನೀನು ಸ್ವಲ್ಪವೂ ಸೊಪ್ಪು ಹಾಕಲಿಲ್ಲ. (ಶತ್ರುಗಳ ಕ್ಷ್ವೇಲಾದಿಂದ ಅಕ್ಷೀಣ–ಅಟ್ಟಹಾಸಃ–3ನೇ ಅರ್ಥ). ಇಂಥಾ ಕೆಚ್ಚೆದೆಯ ಧೀರಾಗ್ರಣಿ ನೀನು.

ಶೌರ್ಯ ಸಾಹಸ ಪರಾಕ್ರಮ ಬಲ ಎಲ್ಲ ಗುಣಗಳೂ ನಿನ್ನಲ್ಲಿ ನಿಬಿಡವಾಗಿ ತುಂಬಿದ್ದರೂ ನಿನಗೆ ಆ ಬಗ್ಗೆ ಕಿಂಚಿತ್ ಅಭಿಮಾನವಾಗಲಿ, ಹೆಮ್ಮೆಯಾಗಲಿ ಗರ್ವವಾಗಲಿ ಹೆಸರಿಗೆ ಮಾತ್ರವೂ ಇರಲಿಲ್ಲ. ಎಲ್ಲವೂ ಆ ಪರಮಾತ್ಮನ ಅನುಗ್ರಹವೆಂದೂ ಅವನೇ ಸರ್ವಪ್ರೇರಕನೆಂದೂ ಮನಃಪೂರ್ವಕ ಅರಿತುಕೊಂಡು ಎಲ್ಲವನ್ನೂ ಅವನ ಸೇವೆಗಾಗಿಯೇ ಅರ್ಪಿಸಿದಿ. ಭೂಭಾರಹರಣಕ್ಕೆ ಕೌರವ-ಪಾಂಡವರ ಯುದ್ಧವನ್ನೇ ದೊಡ್ಡ ಆಟವಾಗಿ ಹೂಡಿದ ಆ ಶ್ರೀಕೃಷ್ಣಪರಮಾತ್ಮನನ್ನು ತೃಪ್ತಿಪಡಿಸಲು ಪ್ರಧಾನ ಪಾತ್ರವನ್ನು ವಹಿಸಿದ ನೀನೊಬ್ಬನೇ ಆರು ಅಕ್ಷೋಹಿಣೀ ಸೈನ್ಯವನ್ನು ನಾಶಮಾಡಿಬಿಟ್ಟೆ (**ಬಹ್ವಕ್ಷೌಹಿಣ್ಯನೀಕಕ್ಷಪಣ ಸುನಿಪುಣಂ**). ಇಷ್ಟಾದರೂ ಅರ್ಜುನನಿಗೆ ಬಂದಂತೆ ಆತ್ಮಪೌರುಷದ ಹೆಮ್ಮೆಯಾಗಲಿ, ಧರ್ಮರಾಜನಿಗೆ ಬಂದಂತೆ ಬಂಧುನಿಗ್ರಹ ಮಾಡಿದೆನೆಂಬ ಮೋಹವಾಗಲಿ ನಿನಗೊಬ್ಬನಿಗೆ ಈಷನ್ಮಾತ್ರವೂ ಬರಲಿಲ್ಲ. ಇದಕ್ಕೆ ನಿನ್ನ ಅನುಸಂಧಾನವೇ ಮುಖ್ಯವಾಗಿ ಮಾರ್ಗದರ್ಶನ ಮಾಡಿತು. ಯುದ್ಧವನ್ನು ದೊಡ್ಡ ಯಜ್ಞವೆಂದೂ ಮೃತರಾದ ಶತ್ರುಗಳು ಯಜ್ಞಪಶುಗಳೆಂದೂ ರಕ್ತಪಾನವು ಸೋಮರಸಪಾನವೆಂದೂ ಅನುಸಂಧಾನ ಮಾಡಿಕೊಂಡು ಈ ಶತ್ರುಸಂಹಾರವು ಸರ್ವೋತ್ತಮನಾದ ಶ್ರೀಕೃಷ್ಣನ ಪ್ರೀತ್ಯರ್ಥ ಮಾಡಿದ ಸೇವೆಯೆಂದೇ ತಿಳಿದು ಅವನಿಗೇ ಸಮರ್ಪಿಸಿಬಿಟ್ಟೆ (ಯಸ್ಯ-ಸರ್ವೋತ್ತಮಸ್ಯ-ಶುಶ್ರೂಷಾರ್ಥಂ ಚಕರ್ಥ). ಹೇ ಜ್ಞಾನಿಶಿಖಾಮಣಿಯೇ, ಎಂಥಾ ನಿಷ್ಕಾಮ ಸೇವೆ ! ಎಂಥಾ ದೃಢವಾದ ನಿಶ್ಚಲ ಭಕ್ತಿ ಇದು !!

ಹೇ ಕುರುಕುಲಾಧಿಪತಿಯೇ, ಈ ರೀತಿ ಹದಿನೆಂಟು ದಿನ ಕಟಂಕಟಿ ನಡೆದ ಭಾರತಯುದ್ಧವನ್ನಾಗಲಿ, ಅದರಲ್ಲಿ ನೀನು ವಹಿಸಿದ ಅಗ್ರಪಾತ್ರ-

ವನ್ನಾಗಲಿ ಅತ್ಯಲ್ಪಮತಿಗಳೂ ಅತ್ಯಲ್ಪ ಜ್ಞಾನವುಳ್ಳವರೂ ಆದ ನಮ್ಮಂಥ ಕ್ಷುದ್ರಕವಿಗಳು ಏನೆಂದು ವರ್ಣಿಸೇವು? ನಿನ್ನ ಸಾಹಸ-ಶೌರ್ಯಗಳನ್ನೂ ಯುದ್ಧಕೌಶಲವನ್ನೂ ಯಥಾವತ್ತಾಗಿ ವರ್ಣಿಸುವುದಕ್ಕೆ ಶ್ರೀಕೃಷ್ಣಾಭಿನ್ನರಾದ ಆ ವೇದವ್ಯಾಸರೊಬ್ಬರು ಮಾತ್ರ, ಸರ್ವಜ್ಞರೂ ಸರ್ವಶಕ್ತರೂ ಆದಕಾರಣ, ಸರ್ವರೀತಿಯಿಂದಲೂ ಸಮರ್ಥರು (ಸ್ವಯಮಯಂ ಇಹ ಸಂವಕ್ತುಂ ಸಮರ್ಥಃ). ಅವರನ್ನು ಬಿಟ್ಟರೆ (ಅಥ), ಹೇ ಸ್ವಾಮಿ! ಆನಂದತೀರ್ಥ ರೆಂಬ ದಿವ್ಯವಾದ ಶುಭನಾಮಾಂಕಿತರಾದ ಶ್ರೀಮನ್ಮಧ್ವಾಚಾರ್ಯರೇ! (ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ರಚಿಸಿದ ಸರ್ವಜ್ಞಾ-ಚಾರ್ಯರಾದ) ತಾವೊಬ್ಬರೂ ಕೂಡ ಸಮರ್ಥರು. (ತ್ವಮಪಿ ಹಿ ಸಮರ್ಥಃ) ತೃತೀಯಂ ನಾನು ಶುಶ್ರುಮ-ಮೂರನೆಯವರನ್ನು ಎಲ್ಲೂ ಕಾಣೆವು. ಈ ನಿಮ್ಮಿಬ್ಬರ ಸ್ಮರಣೆಯೇ ನನಗೆ ಪಾವನ. (ಯುವಯೋಃ ಪಾದಪದ್ಮಂ ಪ್ರಪದ್ಯೇ) ನಿಮ್ಮಿಬ್ಬರ ಪಾದಕಮಲಯುಗ್ಮವನ್ನು, ಇಗೋ ಶರಣು ಹೊಂದಿದ್ದೇನೆ—ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ.

276. ವಿಶೇಷಾರ್ಥ (i) ಭೀಮನ ಏಕಾಂತಭಕ್ತಿ—(ಪು.ರಾ) ಭೀಮಸೇನ ಸ್ವಕೃತ ಯುದ್ಧವನ್ನು ಭಗವತ್‌ಸೇವಾರೂಪವಾಗಿಯೇ ಮಾಡಿ-ದನೆಂತ ಹೇಳಿದ್ದರಿಂದ ತಜ್ಜನ್ಯ ಫಲಾಭಿಲಾಷೆ ಇಲ್ಲವೆಂತ ಲಭ್ಯವಾಗುತ್ತದೆ. ಆದರಿಂದ ಭೀಮಸೇನ ಏಕಾಂತಭಕ್ತನೆಂದು ಸಿದ್ಧವಾಯಿತು. (ಈ ವಿಚಾರ ಕೆಳಗೆ ೨೮ನೇ ಶ್ಲೋಕದ ಕಡೆಯಲ್ಲಿ ಖಂಡ 316ರಲ್ಲಿ ವಿಮರ್ಶೆ ಮಾಡಲ್ಪ-ಡುವುದು.)

(ii) ಅರಿಹನ್ ಎಂಬಲ್ಲಿ ವಿಶೇಷ—(ಗು.ಸಾ.ದಿಂದ) ಭೀಮಸೇನನಿಂದ ಹತರಾದವರಿಗೆ ಅವರವರ ಯೋಗ್ಯತಾನುಸಾರ ದುರ್ಗತಿಯೋ ಸದ್ಗತಿಯೋ ಆಯಿತೆಂದು ತಾ.ನಿ.ದಲ್ಲಿ ಅಲ್ಲಲ್ಲೇ ತೋರಿಸಿದೆ. ಭೀಮನಿಂದ ಹತರಾದ ಬಾಹ್ಲೀಕಾದಿಗಳಿಗೆ (ಸುಜೀವಿಗಳಿಗೆ) ಅವರ ಮರಣವು ಸಕಲ ದೋಷಗಳ ಪರಿಹಾರಕ್ಕೂ ಶಾಶ್ವತ ವೈಕುಂಠಲೋಕಪ್ರಾಪ್ತಿಗೂ ಕಾರಣವಾಗುತ್ತದೆ. ಅದು ಬಿಟ್ಟು ಹರಿವಾಯುಗಳಲ್ಲಿ ದ್ವೇಷಯುಕ್ತರಾಗಿ ಭೀಮನೊಡನೆ ಯುದ್ಧ ಮಾಡಿ ಸತ್ತವರಿಗೆ (ಉದಾಹರಣೆಗೆ—ಜರಾಸಂಧ, ಬಕ,

ಕೆವರ್ಗೀರ, ದುರ್ಯೋಧನಾದಿಗಳಿಗೆ) ಭೀಮನಿಂದ ಏರ್ಪಟ್ಟ ಮರಣವು ನಿತ್ಯ-ನರಕಪ್ರಾಪ್ತಿಗೆ ಕಾರಣವಾಗುವುದೆಂದು ತಿಳಿಯಬೇಕು

ಹೀಗೆಯೇ ಮೂಲರೂಪಿ ವಾಯುದೇವರನ್ನೂ ಅವರ ಮೂರು ಅವತಾರ ರೂಪಗಳನ್ನೂ ಸ್ಮರಿಸುವುದರಿಂದಲೇ ಕಲಿಯೇ ಮೊದಲಾದ ಸಕಲ ದುಷ್ಟ ದೈತ್ಯರ ಬಾಧೆಯೂ ತಪ್ಪಿ ಅವರ ನಿಗ್ರಹವೂ ಏರ್ಪಡುತ್ತದೆ. ಯಾವ ಸಂದೇಹವೂ ಇಲ್ಲ, ಇದನ್ನೇ ಪುರಂದರದಾಸರಾಯರು "ಅಂಜಿಕಿನ್ಯಾತಕಯ್ಯ ಸಜ್ಜನರಿಗೆ. ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ" ಎಂಬ ದೇವರನಾಮದಲ್ಲಿ ಹೇಳಿ ಸಕಲ ಸಜ್ಜನರಿಗೂ ಭರವಸೆ ನೀಡಿದ್ದಾರೆಂಬ ನಿವೇದನೆಯೊಡನೆ ಈ ೨೪ನೇ ಶ್ಲೋಕದ ವಿವರಣೆಯನ್ನು ಮುಗಿಸುವೆನು; ಆ ಕೀರ್ತನೆಯಲ್ಲಿ 'ಸಂಜೀವರಾಯ'ರೆಂದರೆ ಭಾರತೀರಮಣ ಮುಖ್ಯಪ್ರಾಣದೇವರೆಂದೇ ಅರ್ಥ.

ಯಸ್ಯ ಸ್ಮರಣಮಾತ್ರೇಣ　ಕಿಂಪುನರ್ವಂದನೇನ ಚ ।
ಕಲ್ಯಾದಯೋ ಮಹಾದೈತ್ಯಾ　ವಿದ್ರವಂತಿ ದಿಶೋ ದಶ ॥೧॥
ಜರಾಸಂಧಾಂತಕಂ ವಂದೇ　ಭೀಮಸೇನಂ ಮಹಾಬಲಮ್ ।
ಉದ್ಗದೋದ್ದಾಮ ಬಾಹುಂ ತಂ　ಸ್ಮರಾಮಿ ಚ ಪುನಃಪುನಃ ॥೨॥

(ಭಾವಾರ್ಥ) ಯಾವ ಭೀಮಸೇನನ ಸ್ಮರಣ ಮಾತ್ರದಿಂದಲೆ ಕಲ್ಯಾದಿ ಸಕಲ ದೈತ್ಯರೂ ದಿಕ್ಕಾಪಾಲಾಗಿ ಓಡುತ್ತಾರೋ, ಅಂಥಾ ಭೀಮನ ವಂದನೆಯು ಮಹಾ ಫಲಪ್ರದವೆಂದು ಹೇಳುವುದೇನಿದೆ? ಅಂಥಾ ಜರಾ-ಸಂಧಾಂತಕನೂ ಮಹಾಬಲಶಾಲಿಯೂ ಗದಾಯುಧನೂ ಪ್ರಚಂಡಬಾಹು-ಬಲೋಪೇತನೂ ಆದ ಭೀಮಸೇನನನ್ನು ಭಕ್ತಿಪೂರ್ವಕ ವಂದಿಸಿ ಸ್ತುತಿಸು-ತ್ತೇನೆ. ಅಷ್ಟೇ ಅಲ್ಲದೆ ಹಗಲಿರುಳೂ ಪುನಃಪುನಃ ಅವನ ಸ್ಮರಣೆ ಮಾಡುತ್ತಲೇ ಇರುತ್ತೇನೆ. ಜಯ ಭೀಮಸೇನ!

ಇಲ್ಲಿಗೆ ೨೪ನೇ ಶ್ಲೋಕ ಮುಗಿಯಿತು

(ಅ) ಮಧ್ಯದ ಉಪವಿಭಾಗ (ಶ್ಲೋ. ೨೫-೨೬)

ಪ್ರಾಸಂಗಿಕ ಎರಡು ವಿಚಾರಗಳು

ಶ್ಲೋಕ ೨೫—ಅವಿದ್ಯಾ ಪರಿಹಾರಕ್ಕೆ ಪ್ರಾರ್ಥನೆ

277. ಶ್ಲೋಕಕ್ಕೆ ಅವತಾರಿಕೆ—(ಕಕ.ವಿ.ಘ.) ಅನಾದಿಕಾಲದಿಂದ ಸ್ವರೂಪಕ್ಕೆ ಅಂಟಿಕೊಂಡಿರುವ ಅವಿದ್ಯೆಯನ್ನು ನಿರ್ಮೂಲ ಮಾಡುವುದಕ್ಕಾಗಿಯೂ ಸದ್ವಿದ್ಯಾಪ್ರಾಪ್ತಿಗಾಗಿಯೂ 'ದ್ರುಹ್ಯಂತೀಂ–' ಎಂಬ ಶ್ಲೋಕದಿಂದ ಪ್ರಾರ್ಥಿಸುತ್ತಾರೆ. (ಪು.ರಾ.) ಅಜ್ಞಾನಪರಿಹಾರಪೂರ್ವಕ ತತ್ವ-ಜ್ಞಾನಪ್ರಾಪ್ತಿಯನ್ನು ಪ್ರಾರ್ಥಿಸುತ್ತಾರೆ. (ಲೇ.) ಮಹಾಭಾರತವು ಕೇವಲ ಮನೋರಂಜಕ ಕಥೆ ಮಾತ್ರವಲ್ಲ, ಅದರ ಕೌರವ-ಪಾಂಡವರ ಕಥೆಯಲ್ಲೇ ಆಧ್ಯಾತ್ಮನಿಷ್ಠವಾದ ಗೂಢಾರ್ಥವೂ ಅಡಗಿದೆಯೆಂದೂ ಅದನ್ನು ಎಲ್ಲರೂ ತಿಳಿಯಲು ಅಶಕ್ಯವೆಂದೂ ಹೇಳಿ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ (ಅಧ್ಯಾ. ೨, ೧೪೪-೪೯ ಶ್ಲೋ.) ಆ ಗೂಢವಾದ ಆಧ್ಯಾತ್ಮಿಕಾರ್ಥವನ್ನು ಕಿಂಚಿತ್ ತೋರಿಸಿಕೊಟ್ಟಿದ್ದಾರೆ. ಭೀಮಸೇನನು ಜ್ಞಾನ-ಭಕ್ತಿ-ವೈರಾಗ್ಯಾದಿ ಹತ್ತು ಗುಣಗಳ ಪ್ರತಿನಿಧಿ. ದ್ರೌಪದಿಯು ಸರ್ವವಿದ್ಯೆಯ ಪ್ರತೀಕ. ಮಿಕ್ಕ ಪಾಂಡವರು ಪುಣ್ಯಕಾರ್ಯಗಳಿಗೆ ಪ್ರತೀಕ. ಇದರಂತೆ ಕಲಿಯ ಸ್ವರೂಪನಾದ ದುರ್ಯೋಧನನು ಅಜ್ಞಾನಾದಿಗಳ ಸಾಕ್ಷಾತ್ ಸ್ವರೂಪ. ದುಶ್ಯಾಸನನೇ ಮಿಥ್ಯಾಜ್ಞಾನ (ವಿಪರೀತ ಜ್ಞಾನ ಅಥವಾ ಅನ್ಯಥಾ ಜ್ಞಾನ)ವಾದರೆ ಶಕುನಿಯು ನಾಸ್ತಿಕ್ಯಬುದ್ಧಿ. ದುರ್ಯೋಧನನ ತಮ್ಮಂದಿರೆಲ್ಲ ನಾನಾವಿಧ ದೋಷಗಳು. ರುದ್ರಾಂಶಸಂಭೂತನಾದ ಅಶ್ವತ್ಥಾಮನು ಅಹಂಕಾರದ ಪ್ರತಿನಿಧಿ. ದ್ರೋಣಾದಿಗಳು ಇಂದ್ರಿಯಗಳ ಪ್ರತೀಕರು. ಹೀಗೆಯೇ ಕೌರವಸೈನ್ಯದ ಮಿಕ್ಕ ನಾಯಕರೆಲ್ಲರೂ ಬೇರೆ ಬೇರೆ ಪಾಪಗಳ ಪ್ರತೀಕಗಳು. ಹೇಗೆ ಭಾರತಯುದ್ಧದಲ್ಲಿ ಭೀಮನು ಸಕಲ ಕೌರವರನ್ನೂ ಸದೆಬಡೆದನೋ ಅದರಂತೆ ನಾವು ಸಹ ಜ್ಞಾನ ಭಕ್ತಿವೈರಾಗ್ಯಾದಿ ಸಾಧನಗಳಿಂದ ಅನಾದಿಕಾಲಾರಭ್ಯ ನಮ್ಮ ಸ್ವರೂಪದೇಹಕ್ಕೆ ಅಂಟಿಕೊಂಡು ನಮ್ಮನ್ನು ಗೋಳಾಡಿಸುತ್ತಿರುವ ಅಜ್ಞಾನ-ಮಿಥ್ಯಾಜ್ಞಾನ-ಅಹಂಕಾರಾದಿ ದುಷ್ಟ ಸೈನ್ಯವನ್ನು ಗೆಲ್ಲಬೇಕು; ದ್ರೌಪದೀ ಸ್ವರೂಪವಾದ

ಸದ್ವಿದ್ಯೆಯನ್ನು ಪಡೆಯಬೇಕು ; ಕೊನೆಗೆ ಜ್ಞಾನಭಕ್ತಿವೈರಾಗ್ಯಗಳೇ ಮೊದಲಾದ ಪುಣ್ಯಕರ್ಮಗಳ ರಾಜ್ಯವು ನಮ್ಮ ಜೀವನದಲ್ಲಿ ಸ್ಥಿರವಾಗಿ ನೆಲಸುವಂತೆ ಪ್ರಯತ್ನಪಡಬೇಕು. ಆಗಲೇ ಭಾರತ ಓದಿದ್ದಕ್ಕೂ ಭೀಮಸೇನನ ಅಪ್ರತಿಮ ಸಾಹಸಗಳನ್ನು ಮೆಚ್ಚಿಯುಬ್ಬಿ ಕೊಂಡಾಡಿದ್ದಕ್ಕೂ ಸಾರ್ಥಕ, ಇಲ್ಲದಿದ್ದರೆ ಆ ಅಧ್ಯಯನ-ಶ್ರವಣಾದಿಗಳೆಲ್ಲವೂ ಕೇವಲ ಮನೋರಂಜನೆಯಲ್ಲೇ ಪರ್ಯವಸಾನಗೊಳ್ಳುತ್ತವೆ—ಎಂಬ ಗಹನಾಭಿಪ್ರಾಯವನ್ನು ಸೂಚಿಸುತ್ತಾ, ಶ್ರೀ ಪಂಡಿತಾಚಾರ್ಯರು ತಮಗೆ ಪ್ರತ್ಯಕ್ಷವಾಗಿ ಕಾಣಿಸುತ್ತಿದ್ದ ಶ್ರೀಮದಾಚಾರ್ಯರನ್ನು 'ನಿಮ್ಮ ಹಿಂದಿನ ಅವತಾರವಾದ ಭೀಮಸೇನನು ಕೌರವರ ಸೈನ್ಯವನ್ನು ನಾಶಮಾಡಿದಂತೆಯೇ ನಮ್ಮ ಅನಾದ್ಯವಿದ್ಯಾಜ್ಞಾನವನ್ನು ನಾಶಮಾಡಲೆಂದೂ ಸಕಲ ವೇದಾವಿದ್ಯಾಭಿಮಾನಿಯಾದ ದ್ರೌಪದಿಯು ಸದ್ವಿದ್ಯಾಪ್ರದಾನ ಮಾಡಲೆ'ಂದೂ 'ದ್ರುಹ್ಯಂತೀಂ....' ಎಂಬ ಈ ಶ್ಲೋಕದಿಂದ ಪ್ರಾರ್ಥಿಸುತ್ತಾರೆ.

ದ್ರುಹ್ಯಂತೀಂ ಹೃದ್ರುಹಂ ಮಾಂ ದ್ರುತಮನಿಲ ಬಲಾದ್
　　ದ್ರಾವಯಂತೀಮವಿದ್ಯಾ-
ನಿದ್ರಾಂ ವಿದ್ರಾವ್ಯ ಸದ್ಯೋ ರಚನಪಟುಮಥಾ-
　　ಽಽಪಾದ್ಯ ವಿದ್ಯಾಸಮುದ್ರ ।
ವಾಗ್ದೇವೀ ಸಾ ಸುವಿದ್ಯಾ—ದ್ರವಿಣದ ವಿದಿತಾ
　　ದ್ರೌಪದೀ ರುದ್ರಪತ್ನ್ಯಾ-
ದ್ಯುದ್ರಿಕ್ತಾದ್ರಾಗಭದ್ರಾ—ದ್ರಹಯತು ದಯಿತಾ
　　ಪೂರ್ವಭೀಮಾಽಽಜ್ಞಯಾ ತೇ　　॥೨೫॥

ಪದ ವಿಭಾಗ—ದ್ರುಹ್ಯಂತೀಂ, ಹೃದ್ರುಹಂ (ಹೃತ್+ರುಹಂ), ಮಾಂ, ದ್ರುತಂ, ಅನಿಲ, ಬಲಾತ್, ದ್ರಾವಯಂತೀಂ, ಅವಿದ್ಯಾನಿದ್ರಾಂ, ವಿದ್ರಾವ್ಯ, ಸದ್ಯಃ, ರಚನಪಟುಂ, ಅಥ, ಆಪಾದ್ಯ, ವಿದ್ಯಾಸಮುದ್ರ, ವಾಗ್ದೇವೀ, ಸಾ, ಸುವಿದ್ಯಾದ್ರವಿಣದ, ವಿದಿತಾ, ದ್ರೌಪದೀ, ರುದ್ರಪತ್ನ್ಯಾದ್ಯುದ್ರಿಕ್ತಾ (ಹರಿಪಕ್ಷದಲ್ಲಿ ದ್ರೌಪದೀ....ದ್ರಿಕ್ತಾ ಇದಿಷ್ಟೂ ಒಂದೇ ಪದ), ದ್ರಾಕ್, ಅಭದ್ರಾತ್, ರಹಯತು, ದಯಿತಾ, ಪೂರ್ವಭೀಮ, ಆಜ್ಞಯಾ ತೇ॥

278. ಶ್ಲೋಕದ ವಿಶ್ಲೇಷಣೆ—(ಹೇ) ಅನಿಲ, ವಿದ್ಯಾಸಮುದ್ರ, ಸುವಿದ್ಯಾದ್ರವಿಣದ, ಪೂರ್ವಭೀಮ ಎಂಬ ನಾಲ್ಕೂ ಉಭಯಪರವಾಗಿಯೂ ಸಂಬೋಧನೆಗಳು. ನಾಲ್ಕನೇ ಚರಣದಲ್ಲಿರುವ—ತೇ ದಯಿತಾ ಮಾಂ ದ್ರಾಕ್ ಅಭದ್ರಾತ್ ರಹಯತು–ನಿನ್ನ ಪತ್ನಿಯು (ಹರಿಪಕ್ಷದಲ್ಲಿ ಲಕ್ಷ್ಮೀದೇವಿ, ವಾಯು ಪಕ್ಷದಲ್ಲಿ ದ್ರೌಪದಿಯು) ನನ್ನನ್ನು ಶೀಘ್ರವಾಗಿ ಅಮಂಗಳದಿಂದ ದೂರ ಮಾಡಲಿ ಅರ್ಥಾತ್ ಅಶುಭಗಳಿಂದ ನನ್ನನ್ನು ಪಾರುಮಾಡಲಿ ಎಂಬುದೇ ಪ್ರಧಾನವಾಕ್ಯ. ಇಲ್ಲಿರುವ ದಯಿತಾ-ಶಬ್ದಕ್ಕೆ ಅ) ವಾಗ್ದೇವಿ, ಆ) ಸಾ, ಇ) ವಿದಿತಾ, ಈ) ದ್ರೌಪದೀ ಉ) ರುದ್ರಪತ್ನ್ಯಾದ್ಯುದ್ರಿಕ್ತಾ (ಹರಿಪಕ್ಷದಲ್ಲಿ ದ್ರೌಪದೀರುದ್ರಪತ್ನ್ಯಾದ್ಯುದ್ರಿಕ್ತಾ ಎಂದು ಒಂದೇ ಪದ) ಎಂದು ಐದು ವಿಶೇಷಣಗಳು. ರಹಯತು ಎಂಬ ಕ್ರಿಯೆಗೆ ತೇ ಆಜ್ಞಯಾ ಎಂಬುದು ಕ್ರಿಯಾವಿಶೇಷಣ. ಇಲ್ಲಿಗೆ ಉತ್ತರಾರ್ಧದ ಅನ್ವಯ ಮುಗಿಯಿತು.

ರಹಯತು–ದೂರಮಾಡಲಿ ಎಂಬ ಕ್ರಿಯೆ ನಡೆಯುವುದಕ್ಕೆ ಮೊದಲೇ ಬೇರೆ ಎರಡು ಕಾರ್ಯಗಳು ನಡೆಯಬೇಕೆಂಬುದನ್ನು ಪೂರ್ವಾರ್ಧದಲ್ಲಿ ತೋರಿಸಿದ್ದಾರೆ—ಕ) ಅವಿದ್ಯಾನಿದ್ರಾಂ ದ್ರಾಕ್ ವಿದ್ರಾವ್ಯ–ಅವಿದ್ಯೆಯೆಂಬ ನಿದ್ದೆಯನ್ನು ಬೇಗ ಓಡಿಸಿ, ಖ) ಅಥ ಮಾಂ ಸದ್ಯೋರಚನಪಟುಂ ಆಪಾದ್ಯ–ಅನಂತರ ನನ್ನನ್ನು ಆಶುಕವಿತಾಪಟುವನ್ನಾಗಿ ಮಾಡಿ—ನನ್ನನ್ನು ಅಭದ್ರಾತ್ ರಹಯತು ಎಂದು ಅನ್ವಯ. ಕ-ದಲ್ಲಿರುವ ಅವಿದ್ಯಾನಿದ್ರಾಂ-ಗೆ i) ಮಾಂ ದ್ರುಹ್ಯಂತೀಂ, ii) ಹೃದ್ರುಹಂ, iii) ಬಲಾತ್ ದ್ರಾವಯಂತೀಂ ಎಂದು ಮೂರು ವಿಶೇಷಣಗಳು, ಹೀಗೆ ಒಟ್ಟಿನಲ್ಲಿ ಹೇ ಕೃಷ್ಣ ಅಥವಾ ವಾಯುದೇವ, ನೀನು ನನ್ನ ಅವಿದ್ಯೆಯನ್ನು ದೂರಮಾಡಿ, ನನಗೆ ಕವಿತಾಶಕ್ತಿಯನ್ನು ಕೊಟ್ಟ ಬಳಿಕ ನಿನ್ನ ಪತ್ನಿಯು (ಲಕ್ಷ್ಮಿಯು ಅಥವಾ ದ್ರೌಪದಿಯು) ನನ್ನ ಅಮಂಗಳವನ್ನು ನನ್ನಿಂದ ದೂರಮಾಡಲಿ ಎಂಬುದೇ ಈ ಶ್ಲೋಕದ ಮುಖ್ಯಾಭಿಪ್ರಾಯ.

279. ಕಠಿಣಶಬ್ದಾರ್ಥ—ಕ) ದ್ರುಹ್ಯಂತೀಂ—ದ್ರುಹ ಜಿಘಾಂಸಾಯಾಂ (ದಿವಾದಿ.ಪ)=ದ್ವೇಷಿಸು, ಕೇಡುಬಯಸು ಎಂಬ ಧಾತುವಿನ ಶತೃಂತ ಸ್ತ್ರೀಲಿಂಗರೂಪ ಇದು. (ಕಕ.ವಿ)–ದ್ರೋಹಂ ಕುರ್ವಾಣಾಂ (ಛ)

ದ್ರೋಹಂ ಕುರ್ವಂತೀ=ದ್ರೋಹ ಮಾಡುತ್ತಿರುವ, ಪೀಡೆಯನ್ನು ಕೊಡುತ್ತಿರುವ ಎಂದರೆ ಒಳಗೇ ಸೇರಿಕೊಂಡು ಜೀವನ ನಿಜಸ್ವರೂಪವನ್ನೇ ಮುಚ್ಚಿ-ಹಾಕಿರುವ ಎಂದರ್ಥ. **ಖ) ಹೃದ್ರುಹಂ**—(ಕಠ.ವಿ.ಛ.) ಹೃದಿ ರೋಹತೀತಿ ಹೃದ್ರುಟ್, ತಾಂ-, (ಛ.) ಹೃದಿ ನಿರೂಢಾಮಿತ್ಯರ್ಥಃ। ಹೃತ್-ಹೃದಯದಲ್ಲಿ ರುಹ್=ಬೆಳೆದ, ಹೃದ್ರುಟ್ (ಅಂತ್ಯ ಹಕಾರಕ್ಕೆ ಪ್ರಥಮೈಕವಚನದಲ್ಲಿ ಟಾದೇಶ ಬಂದಿದೆ)=ಹೃದಯದಲ್ಲಿ ಬೆಳೆದಿರುವ ಎಂದರೆ ಹೃದಯದಲ್ಲೇ ನೆಲೆಸಿಕೊಂಡಿರುವ, ಹೃದ್ಗತವಾದ ಎಂದರ್ಥ. **ಗ) ದ್ರುತಂ**,-ದ್ರಾಕ್, ಸದ್ಯಃ ಈ ಮೂರೂ ಶೀಘ್ರವಾಚಕ ಅವ್ಯಯಗಳು. 'ದ್ರಾಙ್ಮಂಕ್ಷು ಸಪದಿ ದ್ರುತೇ' ಎಂದು ಅಮರ. ದ್ರಾಕ್, ದ್ರುತಂ=ಶೀಘ್ರವಾಗಿ ಬೇಗನೇ ಎಂದರ್ಥ. ಸದ್ಯಃ- ಆ ಕ್ಷಣ, ತಕ್ಷಣ, 'ಸದ್ಯಃ ಸಪದಿ ತತ್ಕ್ಷಣೇ' ಅಮರ. **ಘ) ಅನಿಲ**— 'ಗಂಧವಾಹಾನಿಲಾಶುಗಾ' ಅಮರ. ಅನಿಲ=ವಾಯುದೇವರು, ಈಶಾವಾಸ್ಯ ಭಾಷ್ಯದಲ್ಲಿ (೧೮ನೇ ಮಂತ್ರ) ಈ ಪದಕ್ಕೆ 'ಅಃ'- ಪರಮಾತ್ಮಾ, ನಿಲಂ-ನಿಲಯನಂ—ಆಶ್ರಯೋ ಯಸ್ಯ ಸಃ ಅನಿಲಃ' ಎಂದು ಶ್ರೀಮದಾಚಾರ್ಯರೇ ವ್ಯುತ್ಪತ್ತಿಯನ್ನು ತೋರಿಸಿಕೊಟ್ಟಿದ್ದಾರೆ. ಅದರಂತೆ ಅಃ=ಪರಬ್ರಹ್ಮನೇ (ಶ್ರೀವಿಷ್ಣುವೇ), ನಿಲ=ಯಾರಿಗೆ ಆಶ್ರಯನಾಗಿದ್ದಾನೋ ಅವನು ವಾಯು ಎಂದರ್ಥ. (ಗು.ಸಾ.) ಇಲಾ ಎಂದರೆ ಭೂಮಿ. ಅಮರದಲ್ಲಿ ಭೂಮಿಯ ಹೆಸರುಗಳಲ್ಲಿ 'ಗೌರಿಲಾ ಕುಂಭಿನೀ ಕ್ಷಮಾ' ಎಂದು ಹೇಳಿದೆ. 'ನ ಇಲಾ-ಯಾಮೇವಾಧಿಕಾರೋ ಯಸ್ಯ ಸಃ ಅನಿಲಃ' ಎಂದು ವ್ಯುತ್ಪತ್ತಿಯಿಂದ ಭೂ-ಲೋಕದಲ್ಲಿ ಮಾತ್ರವಲ್ಲದೆ ಎಲ್ಲಾ ಲೋಕಗಳಲ್ಲಿಯೂ ಅಧಿಕಾರದ ಆಧಿಪತ್ಯ-ವುಳ್ಳ ಹೇ ವಾಯುದೇವರೇ! ಎಂದೂ ಅರ್ಥವಾಗುತ್ತದೆ. ಹರಿಪರವಾಗಿ ನ ವಿದ್ಯತೇ ನಿಲಃ=ಆಶ್ರಯಃ ಯಸ್ಯ ಸಃ ಅನಿಲಃ ಎಂಬ ವ್ಯುತ್ಪತ್ತಿಯಿಂದ ಸ್ವಾತಿರಿಕ್ತ ಬೇರೆ ಯಾವ ಆಧಾರವೂ ಇಲ್ಲದವನು, ಸರ್ವತಂತ್ರ-ಸ್ವತಂತ್ರ ಎಂದು ಒಟ್ಟು ಭಾವಾರ್ಥ. ಅಥವಾ ನಿ+ಲೀ=ಲೀನವಾಗು, ನಾಶವಾಗು ಎಂಬ ಧಾತುವಿನಿಂದ ನಿಲ=ನಾಶವಾಗುವಂಥಾದ್ದು, ನಶ್ವರವಾದಂಥಾದ್ದು ಅದಕ್ಕೆ ಭಿನ್ನವಾದದ್ದು ಅ-ನಿಲ=ನಾಶವಿಲ್ಲದವನು, ಅನಾದಿಪುರುಷನೆಂದರ್ಥ. (ಪುರಾ.) **ಙ) ದ್ರಾವಯಂತೀಂ**— ಇದೂ ಶತ್ರಂತ ಸ್ತ್ರೀಲಿಂಗ

ರೂಪ. ದ್ರು ಗತೌ (ಭ್ವಾದಿ.ಪ) ಓಡು ಎಂಬ ಧಾತುವಿನ ಪ್ರೇರಣಾರ್ಥಕ ರೂಪದ ಮೇಲೆ ಶತೃಂತ ಪ್ರತ್ಯಯವೂ ಸ್ತ್ರೀಲಿಂಗದಲ್ಲಿ ಙೀಪ್ ಪ್ರತ್ಯಯವೂ ಬಂದು ದ್ರಾವಯಂತೀಂ ಎಂದಾಗಿದೆ. (ಕಕ.ವಿ.) ಧನಾದ್ಯಾದಿತ್ಸಯಾ ಗಮನಂ ಕಾರಯಂತೀ = ಹಣ ಧಾನ್ಯಾದಿಗಳ ಸಂಗ್ರಹಾರ್ಥ ಸುತ್ತಾಡಿಸುತ್ತಿರುವ ಎಂದರ್ಥ. (ಛ) ಅಥವಾ ನಾನಾಯೋನಿಪ್ರಾಪಿಕಾಮಿತ್ಯರ್ಥಃ = ಅನೇಕ ಜನ್ಮಗಳನ್ನೆತ್ತುವಂತೆ ಮಾಡುತ್ತಿರುವ ಎಂದೂ ಅರ್ಥ.

ಚ) ಅವಿದ್ಯಾನಿದ್ರಾಂ—(ಛ) ಅಜ್ಞಾನ ಲಕ್ಷಣನಿದ್ರಾಂ. (ಕಕ) ಅಜ್ಞಾನತಂದ್ರೀಂ–ಅಜ್ಞಾನವೆಂಬ ನಿದ್ದೆಯನ್ನು, (ಗು.ಸಾ.) ಗಾಢನಿದ್ದೆಯಲ್ಲಿರುವವನಿಗೂ, ತೂಕಡಿಸುತ್ತಿರುವವನಿಗೂ ಪಾಠ ಹತ್ತುವುದಿಲ್ಲ; ನಿದ್ರೆ ಹೋದರೆ ಪಾಠ ಹತ್ತುತ್ತದೆ. ಅದರಂತೆ ಅವಿದ್ಯೆ ಎಂಬ ಅಜ್ಞಾನ–ವಿಪರೀತ ಜ್ಞಾನಗಳು ಇರುವವರೆಗೂ ಜ್ಞಾನೋದಯವಾಗುವುದಿಲ್ಲ. ಆದ್ದರಿಂದ ಆ ನಿದ್ದೆಯನ್ನು 'ವಿದ್ರಾವ್ಯ'—ಓಡಿಸಿ ಜ್ಞಾನವನ್ನು ಕೊಡಲಿ ಎಂಬ ಮುಂದಿನ ಅನ್ವಯಕ್ಕೆ 'ನಿದ್ರಾಂ' ಎಂಬುದು ಪುಷ್ಟಿ ಕೊಡುತ್ತದೆ. ಛ) ವಿದ್ರಾವ್ಯ—ವಿ(ಉಪಸರ್ಗ) ದ್ರು ಗತೌ(ಭ್ವಾ.ಪ)—ಓಡು, ಧಾವಿಸು ಎಂಬ ಧಾತುವಿನ ಪ್ರೇರಣಾರ್ಥಕ-ಲ್ಯಬಂತರೂಪ (ಕಕ) ಶಮಯಿತ್ವಾ ಛಿತ್ವಾ ವಾ (ಛ) ದ್ರಾವಯಿತ್ವಾ–ಓಡಿಸಿ, ದೂರಮಾಡಿ ಎಂದರೆ ಶಮನ ಮಾಡಿ ಅಥವಾ ಕತ್ತರಿಸಿಹಾಕಿ ಎಂದರ್ಥ. ಜ) ಸದ್ಯೋರಚನಪಟುಂ—ಸದ್ಯಃ–ತಕ್ಷಣ, ರಚನ = ಕವಿತಾರಚನೆಯಲ್ಲಿ, ಪಟುಂ = ದಕ್ಷ, ನಿಪುಣನನ್ನಾಗಿ, (ಕಕ) ಆಶುಕವಿತಾಕರಣಕುಶಲಂ, (ವಿ) ಸದ್ಯಃ–ಆಶು, ಯದ್ರಚನಂ ಕವಿತಾಕರಣಂ, ತಸ್ಮಿನ್ ಪಟುಂ-ಕುಶಲಂ–ಯೋಚನೆ ಮಾಡದೆ ಯೋಚಿಸಿದ ತಕ್ಷಣ ಭಗವಂತನ ಗುಣಗಳನ್ನು ವರ್ಣಿಸುವ ಕವಿತೆಯನ್ನು ಬರೆಯುವುದರಲ್ಲಿ ಕುಶಲನನ್ನಾಗಿ, ಆಶುಕವಿತೆಯಲ್ಲಿ ನಿಪುಣನನ್ನಾಗಿ. ಝ) (i) ಆಪಾದ್ಯ—ಮಾಡಿ, ಆ (ಉಪಸರ್ಗ) ಪದ ಗತೌ (ಭ್ವಾ.ಪ) ಧಾತು, ಹೊಂದು, ಸೇರು + ಲ್ಯಪ್ ಪ್ರತ್ಯಯ.

ii) ರಚನಪಟುಮಥಾಪಾದ್ಯ ಮತ್ತು ವಾಗ್ದೇವೀ ಸಾ ಸುವಿದ್ಯಾ-ದ್ರವಿಣದ ಎಂಬ ಭಾಗಗಳಿಗೆ 'ಅಸತ್ತೀ—' ಎಂಬ ಶ್ರುತಿ ಸಮಾಖ್ಯೆಯಾಗಿದೆ–

ಯೆಂದು ಯುಕ್ತಿಮಲ್ಲಿಕಾದಲ್ಲಿ ಹೀಗೆ ಸಮರ್ಥಿಸಿದ್ದಾರೆ (ಪು. ೬೪೪)–
(ಪೂರ್ಣಮಂತ್ರಾರ್ಥವನ್ನು ಖಂಡ 341-ಛ (3)ರಲ್ಲಿ ಕೊಟ್ಟಿದೆ)

ಅಸತ್ತ ಉತ್ಸೋ ಗೃಣತೇ ನಿಯುತ್ವಾನ್

ಮಧ್ವೋ ಅಂಶುಃ ಪವತ ಇಂದ್ರಿಯಾಯ ॥

(ಋ. ೯/೮೯/೬)

(ಅಸತ್, ತೇ, ಉತ್ಸಃ ಎಂದು ಪದಚ್ಛೇದ) 'ಮಧ್ವೋ ಅಂಶುಃ' ಎಂಬುದರ ಅರ್ಥ ಹೇಳುತ್ತಾರೆ—

ವಾಯೋ ತವಾಂಶುರಂಶೋಽಸೌ ಮಧ್ವಸ್ತಚ್ಛೀಲಶೀಲವಾನ್ ।

ಅಂಶು ಎಂದರೆ ಅಂಶ ಎಂದೇ ಅರ್ಥ. ಕೊನೆಯಲ್ಲಿ ಸೇರಿರುವ ಉಕಾರವು (ಅಂಶ+ಉ=ಅಂಶು) ಈ ಮಧ್ವಾವತಾರದಲ್ಲಿ ಮೂಲರೂಪದ ಜ್ಞಾನ-ಬಲಾದಿ ಗುಣಗಳೆಲ್ಲವೂ ಸಹಜವಾಗಿಯೇ ಬಂದಿವೆ (ತಚ್ಛೀಲ) ಎಂಬುದನ್ನು ತೋರಿಸುತ್ತದೆ. ಇನ್ನು ನಿಯುತ್ವಾನ್, ಉತ್ಸಃ ಎಂಬ ಪದಗಳ ಅರ್ಥ ಹೇಳುತ್ತಾರೆ—

ನಿತರಾಂ ಯೋಗಯುಕ್ತತ್ವಾನ್ನಿಯುತ್ವಾನುತ್ಸ ಉತ್ಸುಕಃ ॥೫೫೭॥
ಹರಿಸ್ತುತಿಂ ಶ್ರೋತುಕಾಮಃ.... ...

ನಿ-ನಿತರಾಂ, ಅತಿಶಯವಾಗಿ; ಯುತ್ ಎಂದರೆ ಯೋಗ ಎಂದರ್ಥ (ಯು-ಕೂಡಿಸು), ತದ್ವಾನ್-ಯುತ್ವಾನ್ ಕೂಡಿಸುವವನು ಎಂದರ್ಥ. ಆದ್ದರಿಂದ ನಿಯುತ್ವಾನ್ ಎಂದರೆ ಹರಿವಿಷಯಕ ಯೋಗವುಳ್ಳವನು, ಸದಾ ಹರಿಯ ಸಾನ್ನಿಧ್ಯವುಳ್ಳವನು, ಸದಾ ಹರಿಯನ್ನೇ ಧ್ಯಾನಿಸುವವನು ಎಂದರ್ಥ. ಉತ್ಸಃ ಎಂದರೆ ಉತ್ಸುಕ ಅಥವಾ ಆಸಕ್ತಿಯುಳ್ಳವನೆಂದರ್ಥ. ಯಾವುದರಲ್ಲಿ ಆಸಕ್ತಿ ಎಂದರೆ 'ಹರಿಸ್ತುತಿಂ ಶ್ರೋತುಕಾಮಃ'– ಹರಿಯನ್ನು ಸ್ತುತಿಸುವುದರಲ್ಲೂ ಹರಿಯ ಮಹಿಮೆ ಶ್ರವಣ ಮಾಡುವುದರಲ್ಲೂ ಆಸಕ್ತನಾದ ಎಂದರ್ಥ. ಶ್ರುತಿಯಲ್ಲಿರುವ ಅಸತ್-ಶಬ್ದಕ್ಕೆ ಅರ್ಥ ಹೇಳುತ್ತಾರೆ—

'ಸರ್ವೈರಶ್ಯಾದೃಶ್ಯರೂಪತಃ । ಅಸತ್‌ಸಂಜ್ಞಂ ಪರಂ ಬ್ರಹ್ಮ'. ಸತ್ ಎಂದರೆ ಇರುವಂಥದ್ದು, ಕಾಣಿಸುವಂಥಾದ್ದು; ಪರಬ್ರಹ್ಮನೆಂಬ ಶ್ರೀವಿಷ್ಣು ಎಲ್ಲರ ಕಣ್ಣಿಗೂ ಗೋಚರನಾಗುವುದಿಲ್ಲ, ಆದ್ದರಿಂದ ಅವನನ್ನು 'ಅಸತ್' ಎಂದು ಶ್ರುತಿ ಹೇಳಿದೆ. ಗೃಣತೇ ಎಂಬುದರ ಅರ್ಥವನ್ನು ಹೇಳುತ್ತಾರೆ—ಗೃಣತೇ ಸ್ತೋತ್ರಸಂಚಯೈಃ ॥೫೫೪॥ ಗೃಣತೇ-ಕೀರ್ತನೆ ಮಾಡುತ್ತಾರೆ ಎಂದರ್ಥ, ಆದಕ್ಕೆ ಸ್ತೋತ್ರ ಸಮೂಹಗಳಿಂದ ಸ್ತುತಿಸುತ್ತಾರೆ ಎಂದು ಅರ್ಥ ಮಾಡ ಬೇಕು. 'ಪವತ ಇಂದ್ರಿಯಾಯು' ಎಂಬುದರ ಅರ್ಥ ಹೇಳುತ್ತಾರೆ—

ವಾಗಿಂದ್ರಿಯಾಖ್ಯೇಂದ್ರಿಯಾಯು ಪವತೇ ಪ್ರೇರಣೇಚ್ಛಯಾ ।
ಸತ್ಸು ವಾಗ್ವೈಖರೀದಿತ್ಸು—ರೇವ ಸಂಚರತಿ ಕ್ಷಿತೌ ॥೫೫೫॥

ಇಂದ್ರಿಯಾಯು ಎಂದರೆ ಸಜ್ಜನರ ವಾಗಿಂದ್ರಿಯವನ್ನು ಹರಿಸ್ತೋತ್ರ ಮಾಡುವಂತೆ ಪ್ರೇರಿಸುವುದಕ್ಕಾಗಿ ಎಂದರ್ಥ. ಪವತೇ ಎಂದರೆ 'ಗಾಳಿ-ಬೀಸುತ್ತದೆ' ಎಂಬಂತೆ ಅಡ್ಡಾಡುತ್ತಾನೆ ಎಂದರ್ಥ. ಅದರ ಭಾವ ಏನೆಂದರೆ ಸಜ್ಜನರಿಗೆ ಶ್ರುತಿಸ್ಮೃತಿ ಪುರಾಣಾದಿಗಳನ್ನು ಉಪದೇಶಿಸಿ ಅವರು ಬಾಯಿಂದ ಸದಾ ಹರಿಸ್ಮರಣೆ ಮಾಡುವಂತೆ ಪ್ರೇರಿಸುವುದಕ್ಕಾಗಿ ಭೂಮಿಯಲ್ಲಿ ಸಂಚರಿಸುತ್ತಾರೆ ಎಂದು ಭಾವ. ಒಟ್ಟಿನಲ್ಲಿ ಶ್ರುತಿಯ ಅರ್ಥ ಹೀಗಾಗುತ್ತದೆ.

ಶ್ರುತಿಯ ಅರ್ಥ—ಉತ್ಸಃ-ಹರಿಸ್ತೋತ್ರ ಮಾಡುವುದರಲ್ಲೂ ಹರಿಕಥಾ ಶ್ರವಣ ಮಾಡುವುದರಲ್ಲೂ ಉತ್ಸುಕರಾದ ; ನಿಯುತ್ವಾನ್-ಶ್ರೀಹರಿಯ ವಿಶೇಷ ಯೋಗ(ಸಾನ್ನಿಧ್ಯ)ವುಳ್ಳ ಮತ್ತು ಸದಾ ಶ್ರೀಹರಿಯ ಧ್ಯಾನಾಸಕ್ತರಾದ; (ಹೇ ವಾಯೋ ಎಂದು ಸೇರಿಸಿಕೊಳ್ಳಬೇಕು)ಹೇ ಮುಖ್ಯಪ್ರಾಣನೇ;ತೇ-ನಿನ್ನ; ಅಂಶುಃ-ಮೂಲ ರೂಪದಂತೆಯೇ ಜ್ಞಾನಭಕ್ತಿವೈರಾಗ್ಯಾದಿ ಸಕಲ ಗುಣ ಗಳಿಂದಲೂ ಕೂಡಿದ (ಇದು ಅಂಶು ಎಂಬಲ್ಲಿರುವ ಉಕಾರದ ಅರ್ಥ) ಅಂಶ-ವಾದ ಅಥವಾ ಅವತಾರವಾದ; ಮಧ್ವಃ-ಮಧ್ವಾಚಾರ್ಯರು; ಅಸತ್-ಸಕಲರಿಗೂ ಕಾಣಿಸಿದ ಮತ್ತು ತಿಳಿಯಲಶಕ್ಯನಾದ ಪರಬ್ರಹ್ಮವಿಷ್ಣುವನ್ನು ; ಗೃಣತೇ-ಅನೇಕ ಪ್ರಕಾರವಾಗಿ ಸ್ತೋತ್ರ ಮಾಡುತ್ತಾರೆ. ಮತ್ತು, ಇಂದ್ರಿಯಾಯು-ಸಜ್ಜನರ ವಾಗಿಂದ್ರಿಯವನ್ನು ಸದಾ ಶ್ರೀಹರಿಭಜನೆ

ಮಾಡುವಂತೆ ಪ್ರೇರಿಸುವುದಕ್ಕಾಗಿ; ಪವತೆ-ಭೂಮಂಡಲದಲ್ಲಿ ಸಂಚಾರ ಮಾಡುತ್ತಿರುತ್ತಾರೆ.

ಶ್ರುತಿಯ ಭಾವಾರ್ಥ—ಹೇ ಮುಖ್ಯವಾಯುದೇವರೇ! ನಿಮಗೆ ಶ್ರೀ-ಹರಿಯ ಧ್ಯಾನದಲ್ಲೇ ಸದಾ ಆಸಕ್ತಿ. ಆ ಹರಿಯೂ ನಿಮ್ಮ ಕಣ್ಣಿಗೆ ಸದಾ ಗೋಚರನಾಗಿ ಸರ್ವದಾ ನಿಮ್ಮಲ್ಲಿ ಪೂರ್ಣಸಾನ್ನಿಧ್ಯವನ್ನಿಟ್ಟಿದ್ದಾನೆ. ಇಂಥಾ ನಿಮ್ಮ ತೃತೀಯಾವತಾರವೇ ಶ್ರೀಮಧ್ವಾಚಾರ್ಯರು. ಅವರಲ್ಲೂ ಮೂಲ-ರೂಪದಲ್ಲಿರುವಂತೆ ಜ್ಞಾನಬಲಭಕ್ತಿವೈರಾಗ್ಯಾದಿ ಸಕಲ ಗುಣಗಳೂ ಸಹಜ ವಾಗಿಯೇ ಬಂದುಬಿಟ್ಟಿವೆ. ಆದಕಾರಣ ಅವರೂ ಮೂಲರೂಪದಂತೆಯೇ ಸದಾ ಶ್ರೀಹರಿಚಿಂತನೆಯಲ್ಲೇ ಆಸಕ್ತರಾಗಿರುತ್ತಾರೆ. ಜೊತೆಗೆ ಈ ಭೂಲೋಕ ದಲ್ಲಿ ಅವರು ಅವತಾರ ಮಾಡಿರುವುದೇ ಜ್ಞಾನಪ್ರಚಾರಕ್ಕಾಗಿ, ಸಜ್ಜನೋ-ದ್ಧಾರಕ್ಕಾಗಿ. ಆದ್ದರಿಂದ ಆ ಮಧ್ವಾಚಾರ್ಯರು ತಮ್ಮ ಜೀವಿತಕಾಲದಲ್ಲಿ ಭೂಮಿಯಲ್ಲೆಲ್ಲಾ ಸಂಚಾರ ಮಾಡಿ ಸಜ್ಜನರಿಗೆ ಜ್ಞಾನೋಪದೇಶ ಮಾಡಿ ಆ ಶಿಷ್ಯರೆಲ್ಲರೂ ಸದಾ ವಿಷ್ಣುದೀಕ್ಷೆಯುಳ್ಳವರಾಗುವಂತೆ ಮಾಡಿದರು. ಈಗಲೂ ಸಹ ಅವರು ಆ ಭಕ್ತರ ನಾಲಿಗೆಯಲ್ಲೇ ನಿಂತು ಅವರು ನಿಯತವಾಗಿ ಶ್ರೀಹರಿ-ಸ್ಮರಣೆ ಮಾಡುವಂತೆ ಪ್ರೇರಿಸುತ್ತಿರುತ್ತಾರೆ. ಹೀಗೆ ಅದೃಶ್ಯರಾಗಿಯೇ ಭಕ್ತ ರನ್ನು ಉದ್ಧಾರ ಮಾಡುತ್ತಾರೆ ಎಂದು ತಾತ್ಪರ್ಯ. ಈ ಪ್ರಕಾರ ಈ ಶ್ರುತಿಯಲ್ಲಿ 'ಮಧ್ವಃ ಪವತ ಇಂದ್ರಿಯಾಯ' ಎಂದು ಸ್ಪಷ್ಟವಾಗಿ ಹೇಳಿರು-ವುದು 'ರಚನಪಟುಮಥಾಪಾಧ್ಯ' 'ಸುವಿದ್ಯಾದ್ರವಿಣದ' ಎಂಬುದಕ್ಕೆ ಸಮಾಖ್ಯೆಯಾಗಿದೆ.

ಇ) ವಿದ್ಯಾಸಮುದ್ರ—(ವಿ) ವಿದ್ಯಾಭಿಃ ಸಮುದ್ರ ಇವ–ವಿದ್ಯಾ ಸಮುದ್ರಃ, ತತ್ಸಂಬುದ್ಧಿಃ (ಕಕ ಛ) ತತ್ವಜ್ಞಾನರತ್ನಾಕರ–ಸಮುದ್ರವು ನೀರಿ ನಿಂದ ತುಂಬಿರುವಂತೆ ಸಕಲ ವಿದ್ಯೆಗಳಿಂದಲೂ ತುಂಬಿದವನೇ. (ಛ.)ವಿದ್ಯಾಭಿಃ ಶ್ರುತಿಸ್ಮೃತೀತಿಹಾಸಲಕ್ಷಣಾದಿಭಿಃ। ಸಮುದ್ರಃ ಸರ್ವಸರಿತಾಮಾಶ್ರಯಃ ಪತಿಶ್ಚ, ಅಯಮಪಿ ಸರ್ವವಿದ್ಯಾನಾಮಾಶ್ರಯೋ ಪತಿಶ್ಚೇತ್ಯರ್ಥಃ; ಸಮುದ್ರವು ಹೇಗೆ ಸಕಲ ನದಿಗಳಿಗೂ ಆಶ್ರಯನೂ ಪತಿಯೂ ಆಗಿರುವನೋ

ಹಾಗೆಯೇ ಇವನೂ (ಕೃಷ್ಣ ಮತ್ತು ಭೀಮ) ವೇದಾದಿ ಸಕಲ ವಿದ್ಯೆಗಳಿಗೆ ಆಶ್ರಯನೂ ಒಡೆಯನೂ ಆಗಿರುವ ಎಂದರ್ಥ.

ವಿದ್ಯಾಸಮುದ್ರ ಎಂದು ಹೇಳಿದ್ದಕ್ಕೆ ಶ್ರುತಿಸಮಾಖ್ಯೆ ತೋರಿಸಿ ಕೊಡುತ್ತಾರೆ—

'ಪ್ರಾವೀವಿಪದಿ'ತಿ ಶ್ರುತ್ಯಾ—ಪ್ಯೇಷೋಽರ್ಥಃ ಸ್ಪಷ್ಟಮೀರ್ಯತೇ
(ಶ್ಲೋ. ೬೩೦, ಪುಟ ೬೪೧)

'ಪ್ರಾವೀವಿಪತ್' ಎಂಬ ಶ್ರುತಿಯಿಂದಲೂ ಮಧ್ವಾಚಾರ್ಯರು ವಿದ್ಯಾಸಮುದ್ರರೆಂಬ ಅರ್ಥ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹೇಗೆಂದರೆ—

ಪ್ರಾವೀವಿಪದ್ ವಾಚ ಊರ್ಮಿಂ ನ ಸಿಂಧುರ್

ಗಿರಃ ಸೋಮಃ ಪವಮಾನೋ ಮನೀಷಾಃ ॥ (ಋ. ೯/೯೬/೭)

'ಗಿರಃ ಸಿಂಧುಃ' ಎಂಬುದು ಮಧ್ವಾಚಾರ್ಯರನ್ನು ಸೂಚಿಸುತ್ತದೆ ಎಂದು ಹೇಳಿ ಮನೀಷಾ ಶಬ್ದಾರ್ಥವನ್ನೂ 'ವಾಚ ಊರ್ಮಿಂ ನ' ಎಂಬುದರ ಅರ್ಥವನ್ನೂ ಗಿರಃ ಸಿಂಧುಃ ಸ ಮಧ್ವಾಖ್ಯೋ ಮನೀಷಾಶ್ಚ ಮತೋ ರಮಾಃ। ವಾಚಶ್ಚೋರ್ಮಿಂ ನೋರ್ಮಿಮಿವ...... (ಶ್ಲೋ. ೬೩೦–೩೧).

(ಶ್ರುತ್ಯರ್ಥ) ಗಿರಃ-ಮಾತಿಗೆ ಎಂದರೆ ಕ್ಷಣಕ್ಷಣಕ್ಕೂ ತರಂಗತರಂಗವಾಗಿ ಹೊರಡುತ್ತಿರುವ ವಾಕ್ಯಗಳ ಸರಣಿಗೆ (ಇದು ಜಾತ್ಯೇಕವಚನ), ಸಿಂಧುಃ-ಸಮುದ್ರದಂತೆ ಇರುವ. ಇದರ ಭಾವವೇನೆಂದರೆ (ಯುಕ್ತಿ ಮಲ್ಲಿಕಾ ಟೀಕಾನುಸಾರ) ಸುತ್ತಮುತ್ತ ಎಲ್ಲೆಲ್ಲೂ ತುಂಬಿಕೊಂಡಿರುವ ಅಸಂಖ್ಯ ತರಂಗಗಳಿಗೆ ಸಮುದ್ರವು ಹೇಗೆ ನೆಲೆ (ತೌರುಮನೆ)ಯಾಗಿದೆಯೋ ಅದರಂತೆ ಶ್ರೀಮದಾಚಾರ್ಯರು ಸಕಲ ವಿದ್ಯೆಗಳಿಗೂ ಉಪದೇಶಕರಾದ್ದರಿಂದ ಅನಂತ ವೇದವಾಕ್ಯಗಳಿಗೂ ಅಸಂಖ್ಯ ಸ್ಮೃತಿಪುರಾಣ ಪಂಚರಾತ್ರಾದಿ ಪ್ರಮಾಣಗಳಿಗೂ ಆಧಾರಭೂತರಾಗಿದ್ದಾರೆ. (ಶ್ರೀಮಧ್ವಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳೂ ಭಾಗವತತಾತ್ಪರ್ಯವೂ ಇದಕ್ಕೆ ಒಳ್ಳೆಯ ಸಾಕ್ಷಿಗಳು.) ಈ ಪ್ರಕಾರ ಅಸಂಖ್ಯ ವಿದ್ಯೆಗಳಿಗೆ ಗಣಿಯಂತಿರುವ ಮಧ್ವಾಚಾರ್ಯರೆಂಬ,

ಸೋಮಃ ಪವಮಾನಃ ಮೂಲವಾಯುದೇವರ ಅವತಾರವು; ಮನೀಷಾಃ= (ಮತೋ ರಮಾಃ) ಆಯಾ ಸಂದರ್ಭೋಚಿತವಾಗಿ ಮನಸ್ಸಿಗೆ ಹೊಳೆದಂಥಾ; ವಾಚಃ—ವೇದಸ್ಮೃತಿಬ್ರಹ್ಮಸೂತ್ರಾದಿ ಅಸಂಖ್ಯ ವಾಕ್ಯಗಳನ್ನು; ಊರ್ಮಿಂ ನ (ನಕಾರವು ಸಾದೃಶ್ಯ ವಾಚಕ ನ=ಇವ)- ತರಂಗಗಳಂತೆ; ಪ್ರಾವೀವಿಪತ್ (ವಿಪ ಪ್ರವರ್ತನೇ ಇತಿ ಧಾತೋಃ)=ಸಕಲ ಸಜ್ಜನರಿಗೂ ಉಪದೇಶಿಸಿ ಹರಡಿದರು (ಪ್ರಚಾರ ಮಾಡಿದರು). (ಪೂರ್ಣಶ್ರುತಿಯ ಅರ್ಥ ಖಂಡ 349-ಗ-ದಲ್ಲಿ ಕೊಟ್ಟಿದೆ).

ತಾತ್ಪರ್ಯ—ಸಮುದ್ರವು ಅಸಂಖ್ಯತರಂಗಗಳಿಗೆ ನೆಲೆಯಾಗಿರುವಂತೆ ಅಸಂಖ್ಯಶ್ರುತಿಸ್ಮೃತಿಪುರಾಣೇತಿಹಾಸಾದಿ ಶಾಸ್ತ್ರಗಳಿಗೆ ಗಣಿಯಂತಿರುವ ಮಧ್ವ-ರೂಪೀ ವಾಯುದೇವರು ಸಮುದ್ರದ ತೆರೆಗಳಂತೆ ಮೇಲಿಂದ ಮೇಲೆ ಉಕ್ಕಿ ಬರುತ್ತಿರುವ ಅಸಂಖ್ಯ ಶ್ರುತಿಸ್ಮೃತ್ಯಾದಿ ಶಾಸ್ತ್ರವಾಕ್ಯಗಳಿಂದ ಪ್ರಮೇಯ ಗಳನ್ನು ಬೋಧಿಸುತ್ತಾ ತಮ್ಮ ಶಿಷ್ಯರಿಗೆ ಸಕಲ ವಿದ್ಯೆಗಳನ್ನೂ ಬೋಧಿಸುತ್ತಾರೆ. (ಇದರಿಂದ 'ವಿದ್ಯಾಸಮುದ್ರ' ಎಂಬುದೂ 'ರಚನಪಟುಮಥಾಪಾದ್ಯ' ಎಂಬುದೂ ಸಾಧಿತವಾಯಿತು.)

ಟ) ವಾಗ್ದೇವೀ— ವಾಚಾಂ-ವೇದವಚನಾನಾಂ, ದೇವೀ-ಅಭಿ-ಮಾನಿನೀ, ಯದ್ವಾ ವಾಚಃ-ವಾಗಿಂದ್ರಿಯಸ್ಯ, ದೇವೀ-ನಿಯಾಮಿಕಾ। ವಾಕ್ ಎಂದರೆ ವೇದವಚನಗಳಿಗೆ ಮತ್ತು ವಾಗಿಂದ್ರಿಯಕ್ಕೂ, ದೇವೀ=ಅಭಿಮಾನಿ-ಯಾದ. (ಛ.) ವಾಗಭಿಮಾನಿನೀ ಯದ್ವಾ ವಾಕ್–ವಾಗಭಿಮಾನಿನೀ, ದೇವೀ ಕ್ರೀಡಾದಿ ಗುಣವಿಶಿಷ್ಟಾ. ವೇದಾಭಿಮಾನಿನಿಯೂ ವಾಗಿಂದ್ರಿಯಾಭಿಮಾನಿಯೂ ಪ್ರಕಾಶಿಸುವವಳೂ ಆದ ಎಂದರ್ಥ. ಹರಿಪರವಾಗಿ ಲಕ್ಷ್ಮೀ ಎಂದರ್ಥ. ವಾಯು ಪರವಾಗಿ ಭಾರತೀ ಮತ್ತು ದ್ರೌಪದೀ ಎಂದರ್ಥ. ಠ) ಸುವಿದ್ಯಾದ್ರವಿಣದ— ಸು–ಸಮೀಚೀನವಾದ, ವಿದ್ಯಾ–ಜ್ಞಾನವೆಂಬ, ದ್ರವಿಣ–ಧನವನ್ನು (ಹಣ ವನ್ನು), ದ–ಕೊಡುವವನೇ, (ಕಕ.ವಿ) ಶೋಭನವಾದ ಅಧ್ಯಾತ್ಮ ವಿದ್ಯೆ ಯನ್ನು ಅನುಗ್ರಹಿಸುವವನೇ, (ಛ.) 'ದ್ರವಿಣಂ ತು ಧನಂ ಬಲಮ್' ಇತ್ಯಭಿ ಧಾನಂ; ದ್ರವಿಣ ಎಂದರೆ ಧನ-ಬಲ ಎಂದು ಎರಡರ್ಥವಿರುವುದರಿಂದ ಉತ್ತಮ ವಾದ ಶಾಸ್ತ್ರವಿದ್ಯೆಯೆಂಬ ಹಣವನ್ನು ಅಥವಾ ಬಲವನ್ನು ಕೊಡುವವನೇ

ಎಂದರ್ಥ. (ಗು.ಸಾ.) ವಿದ್ಯಾದ್ರವಿಣಂ ದದಾತೀತಿ ವಿದ್ಯಾದ್ರವಿಣದಃ। ಶೋಭನಶ್ಚಾಸೌ ವಿದ್ಯಾದ್ರವಿಣದಶ್ಚ-ಸುವಿದ್ಯಾದ್ರವಿಣದಃ। ತಸ್ಯ ಸಂಬುದ್ಧಿಃ ಸುವಿದ್ಯಾದ್ರವಿಣದ (ಎಂದು ವಿಗ್ರಹದಲ್ಲೀ ವ್ಯತ್ಯಾಸ). ವಿದ್ಯೆಯೆಂಬ ದ್ರವ್ಯವನ್ನು ಕೊಡುತ್ತಿರುವ ಗುರುಗಳಲ್ಲಿ ಶ್ರೇಷ್ಠರಾದ ಎಂದರ್ಥ. ಈ ಅರ್ಥದಲ್ಲಿ 'ಸು' ಎಂಬ ಉಪಪದಕ್ಕೆ 'ಶೋಭನ' ಎಂದರೆ ಲಕ್ಷಣಯಾ ಶ್ರೇಷ್ಠ ಎಂದು ಅರ್ಥ ಮಾಡಿರುವುದೇ ವಿಶೇಷ. (ಲೇ) ರಾಘವೇಂದ್ರಸ್ವಾಮಿಗಳು ಪ್ರಾತಃಸಂಕಲ್ಪ ಗದ್ಯದಲ್ಲಿ 'ಅಶೇಷಗುರ್ವಂತರ್ಯಾಮಿಣಾಂ' ಎಂದು ಹೇಳಿದಂತೆ ಸಕಲ ಗುರುಗಳಲ್ಲೂ ನಿಂತು ಸಚ್ಛಾಸ್ತ್ರ ಬೋಧಿಸುವ, ಆದ್ದರಿಂದಲೇ 'ಆದಿಗುರುಗಳಾದ' ಎಂದರ್ಥ. (ಡ) ವಿದಿತಾ—ವಿದ ಜ್ಞಾನೇ (ಅದಾ.ಪ)-ತಿಳಿದುಕೋ, ಅರಿತುಕೋ ಎಂಬ ಧಾತುವಿನ ಕ್ತಾಂತ (ಭೂತಕೃದಂತ) ಸ್ತ್ರೀಲಿಂಗರೂಪ, ತಿಳಿಯಲ್ಪಟ್ಟವಳು ಅರ್ಥಾತ್‌ಪ್ರಖ್ಯಾತಳಾದವಳು ಎಂದು ಭಾವ. (ಢ) ರುದ್ರಪತ್ನ್ಯಾದ್ಯುದ್ರಿಕ್ತಾ — ರುದ್ರ+ಪತ್ನೀ+ಆದಿ+ಉದ್ರಿಕ್ತಾ। (ಕಕ.ವಿ.ಘ.) ರುದ್ರಪತ್ನೀ-ಪಾರ್ವತೀ, ಸಾ ಆದಿರ್ಯಾಸಾಂ ಸೌಪರ್ಣೀ-ವಾರುಣ್ಯಾದೀನಾಂ, ತಾಭ್ಯ ಉದ್ರಿಕ್ತಾ-ಉತ್ಕೃಷ್ಟಾ। ರುದ್ರಪತ್ನೀ ಎಂದರೆ ಪಾರ್ವತೀ, ಅವಳೇ ಆದಿ-ಮೊದಲಾದ ಸೌಪರ್ಣೀ (ಗರುಡಪತ್ನೀ)ವಾರುಣೀ-(ಶೇಷಪತ್ನೀ)ಮೊದಲಾದ ಉತ್ತಮ ದೇವತಾಸ್ತ್ರೀಯರಿಗಿಂತಲೂ, ಉದ್ರಿಕ್ತಾ-ತಾರತಮ್ಯದಲ್ಲಿ ಶ್ರೇಷ್ಠಳಾದ ಎಂಬುದು ದ್ರೌಪದೀ ಪರವಾಗಿ ಒಂದನೇ ಅರ್ಥ. (ಕಕ.ವಿ.ಘ.) ರುದ್ರಪತ್ನೀ-ಪಾರ್ವತೀ ಆದಿರ್ಯಾಸಾಂ ಶಚ್ಯಾದೀನಾಂ ತಾಸ್ತ-ಥೋಕ್ತಾಃ, ತಾಭ್ಯ ಉದ್ರಿಕ್ತಾ-ಉತ್ಕೃಷ್ಟ ಪ್ರಾಪ್ತಾ। ದ್ರೌಪದಿಯು ಶರೀರದಲ್ಲಿ ಏಕದೇಶದಲ್ಲಿ ನೆಲೆಸಿದ್ದ ಪಾರ್ವತೀ, ಶಚೀ, ಶ್ಯಾಮಳಾ, ಉಷಾಖ್ಯ ದೇವತಾ-ಸ್ತ್ರೀಯರಿಗಿಂತ ಉದ್ರಿಕ್ತಾ-ಶ್ರೇಷ್ಠಳಾದ. (ಈ ಬಗ್ಗೆ ಹೆಚ್ಚಿನ ವಿವರಣೆಗೆ ಕೆಳಗೆ ಖಂಡ 283 ನೋಡಿ.) ಹರಿಪರವಾಗಿ ಅರ್ಥ ಹೇಳುವಾಗ 'ದ್ರೌಪದೀ-ರುದ್ರಪತ್ನ್ಯಾದ್ಯುದ್ರಿಕ್ತಾ' ಎಂದು ಒಂದೇ ಪದ ಮಾಡಿಕೊಂಡು ದ್ರೌಪದೀ (ಭಾರತೀ) ಪಾರ್ವತೀ, ಸೌಪರ್ಣೀ, ವಾರುಣೀ ಮೊದಲಾದ ಉತ್ತಮ ಸ್ತ್ರೀಯರೆಲ್ಲರಿಗಿಂತಲೂ ಶ್ರೇಷ್ಠಳಾದ ಲಕ್ಷ್ಮೀದೇವಿ ಎಂದು ಅರ್ಥ ಹೇಳಬೇಕು. (ಣ) ಅಭದ್ರಾತ್— 'ಶ್ವಶ್ಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಳಂ

ಶುಭಮ್' ಎಂದು ಅಮರ ಹೇಳುವುದರಿಂದ ಭದ್ರ ಎಂದರೆ ಶುಭ, ಮಂಗಳ; ತದ್ವಿರುದ್ಧವಾದುದು ಅಭದ್ರ–ಅಮಂಗಳ, ಅಶುಭ–ಅದರಿಂದ (ಎಂದು ಪಂಚಮ್ಯೇಕವಚನ). (ಭ.) ಅಶುಭವ್ಯಾಪಾರಾತ್, ಜನನ-ಮರಣಾದ್ಯನೇಕಾನರ್ಥಾದ್ವಾ । ಅಶುಭಕಾರ್ಯಗಳನ್ನು ಮಾಡುವುದರಿಂದ ಅಥವಾ ಜನನ-ಮರಣಾದಿ ಅನೇಕ ಅನೇಕ ಅನರ್ಥಗಳ ಪರಂಪರೆಯಿಂದ ಎಂದಾದರೂ ಅರ್ಥ ಹೇಳಬಹುದು. ಸಂಸಾರದ ಬಂಧನವು ನಮ್ಮನ್ನು ಬಿಗಿದಿರುವುದೂ ಭಗವದಿಚ್ಛೆಯಿಂದ; ಅದು ಬಿಡುಗಡೆಯಾಗಬೇಕಾದರೂ ಆ ಭಗವಂತನ ಅನುಗ್ರಹ ಬೇಕೇ ಬೇಕು.

ಬಂಧಕೋ ಭವಪಾಶಾನಾಂ ಭವಪಾಶಾಚ್ಚ ಮೋಚಕಃ

ಎಂಬ ಪ್ರಮಾಣದಂತೆ ಜನನ-ಮರಣಗಳ ಬಂಧನವೆಂಬ ಸಂಸಾರಬಂಧನವು ಬಿಡುಗಡೆಯಾಗಬೇಕಾದರೆ ಶ್ರೀಹರಿಯ ಪ್ರಸಾದವು (ಅನುಗ್ರಹವು) ಬೇಕೇ ಬೇಕು. ಆ ಹರಿಯ ಪ್ರಸಾದವು ವಾಯುದೇವರ ಅನುಗ್ರಹವಿಲ್ಲದೆ ಸಿಗಲಾರದು. ಆದಕಾರಣ ಹೇ ಆಚಾರ್ಯರೇ, ನೀವು ಮೊದಲು ಪ್ರಸನ್ನರಾಗಿರಿ, ಅನಂತರ ವಿಷ್ಣುಪ್ರಸಾದವನ್ನು ಕೊಡಿಸಿ ಸಂಸಾರಬಂಧನದಿಂದ ಮುಕ್ತನನ್ನು ಮಾಡಿರಿ (ರಹಯತು) ಎಂದು ಪ್ರಾರ್ಥನೆ ಮಾಡಿದ್ದಾರೆ.

ತ) ರಹಯತು—ರಹ ವಿಯೋಗೇ ತ್ಯಾಗೇ ವಾ (ಚುರಾದಿ ಉ.ಭ.), =ಬಿಡು, ತ್ಯಜಿಸು ಎಂಬ ಧಾತುವಿನ ಪ್ರೇರಣಾರ್ಥಕ ಲೋಟ್ (ಆಜ್ಞಾರ್ಥ) ಪರಸ್ಮೈಪದ ಪ್ರಥಮಪುರುಷೈಕವಚನರೂಪ, ಬಿಡಿಸಲಿ, ದೂರಮಾಡಲಿ.

ಥ) ದಯಿತಾ—'ದಯಿತಂ ವಲ್ಲಭಂ ಪ್ರಿಯಮ್' ಎಂದು ಅಮರ ಆದ ಕಾರಣ ದಯಿತಾ (ಸ್ತ್ರೀಲಿಂಗ) ಎಂದರೆ ಪ್ರಿಯಳು, ವಲ್ಲಭೆ, ಪತ್ನೀ ಎಂದರ್ಥ. ಹರಿಪರವಾಗಿ ಲಕ್ಷ್ಮೀ, ಭೀಮಪರವಾಗಿ ದ್ರೌಪದೀ ಆಗುತ್ತಾರೆ.

(ದ) ಪೂರ್ವಭೀಮ—ವಾಯುಪಕ್ಷದಲ್ಲಿ (ವಿ.) ಪೂರ್ವಂ ಭೀಮಃ ಪೂರ್ವಭೀಮಃ, ತತ್ಸಂಬುದ್ಧಿಃ; (ಭ.) ಪೂರ್ವಸ್ಮಿನ್ ಜನ್ಮನಿ ಭೀಮಸೇನಾವತಾರ=ಹಿಂದಿನ ಜನ್ಮದಲ್ಲಿ (ದ್ವಾಪರಯುಗದಲ್ಲಿ) ಭೀಮಸೇನನಾಗಿದ್ದ ಹೇ ಮಧ್ವಾಚಾರ್ಯರೇ ಎಂದರ್ಥ. ಹರಿಪಕ್ಷದಲ್ಲಿ (ಪುರಾ) ಪೂರ್ವ, ಭೀಮ ಎಂದು ಬೇರೆ ಬೇರೆ ಪದಗಳಾಗಿ ಗ್ರಹಣ ಮಾಡಬೇಕು. ಪೂರ್ವ–ಜಗತ್ತು

ಸೃಷ್ಟಿಯಾಗುವುದಕ್ಕೆ ಮೊದಲೇ ಇದ್ದವನೇ, ಜಗದಾದಿಯಾದವನೇ ಎಂದರ್ಥ. 'ಘೋರಂ ಭೀಮಂ ಭಯಾನಕಮ್' ಎಂದು ಅಮರವಿರುವುದರಿಂದ ಭೀಮ– ಶತ್ರುಗಳಿಗೆ ಭಯಂಕರನಾದವನೇ ಎಂದರ್ಥ. ಅಥವಾ 'ಭೃತಮೋ ಭೀಮ ಇತ್ಯುಕ್ತಃ' ಎಂಬ ಸ್ಮೃತಿಯಂತೆ ಭೃತಾಃ ಮಾಃ ಪ್ರಮಾಣಾನಿ ಯಸ್ಮಿನ್ ಸಃ ಎಂತ ವಿಗ್ರಹ. ಭೀ = ತುಂಬಿರುವ, ಮಾ = ಪ್ರಮಾಣಗಳುಳ್ಳವನೇ ಎಂದರೆ ಸಕಲ ಶ್ರುತಿಸ್ಮೃತ್ಯಾದಿ ಪ್ರಮಾಣಗಳಿಂದಲೂ ಸರ್ವೋತ್ತಮನೆಂದು ವೇದ್ಯನಾದವನೇ ಎಂದರ್ಥವಾಗುತ್ತದೆ. (ಪುರಾ.) ಮೂಲಶ್ಲೋಕದಲ್ಲಿ 'ದಯಿತಾಪೂರ್ವಭೀಮ—' ಎಂದು ಪಾಠವಿರುವುದರಿಂದ ದಯಿತಾ + ಅಪೂರ್ವ-ಭೀಮ ಎಂದೂ ಪದಚ್ಛೇದ ಮಾಡಬಹುದು. ಹೀಗೆ 'ಅಪೂರ್ವ' ಎಂದು ಪದವಾದರೆ ಅದಕ್ಕೆ ಅರ್ಥ ಹೇಳುತ್ತಾರೆ. ನ ವಿದ್ಯತೇ ಪೂರ್ವಃ– ಕಾರಣಂ ಯಸ್ಯ ಸಃ ಎಂಬ ವ್ಯುತ್ಪತ್ತಿಯಿಂದ ಅಪೂರ್ವ ಎಂದರೆ ಕಾರಣ ರಹಿತನೆಂದರ್ಥ. "ಅಪೂರ್ವಃ ಕಾರಣಾಭಾವಾತ್" ಎಂಬ ಮಾಂಡೂಕ್ಯ ಭಾಷ್ಯಾನುಸಾರ ಈ ಅರ್ಥ ಹೇಳಿದೆ. ಬೀಜವೃಕ್ಷನ್ಯಾಯದಿಂದ ಎಲ್ಲರಿಗೂ ಹುಟ್ಟಲು ಒಂದು ಕಾರಣಬೇಕು. ಆದರೆ ಶ್ರೀಹರಿ ಅನಾದಿಪುರುಷನಾದ್ದರಿಂದ ಅವನಿಗೆ 'ತಂದೆ-ತಾಯಿ' ಎಂಬ ಕಾರಣವೇ ಇಲ್ಲ. ಭೀಮ-ಶಬ್ದಕ್ಕೆ ಹಿಂದಿ ನಂತೆ ಶತ್ರುಗಳಿಗೆ ಭಯಂಕರನಾದ ಅಥವಾ ವೇದಪ್ರತಿಪಾದ್ಯ ಎಂದು ಅರ್ಥ.

ಗು.ಸಾ. ಟೀಕೆಯಲ್ಲಿ 'ಅಪೂರ್ವಭೀಮ' ಎಂಬ ಪದಚ್ಛೇದವನ್ನೇ ಭೀಮಪರವಾಗಿಯೂ ಮಧ್ವಾಚಾರ್ಯಪರವಾಗಿಯೂ ಹೊಂದಿಸಿದ್ದಾರೆ. ಭೀಮಪರವಾಗಿ—ಹನುಮದವತಾರದಲ್ಲಿ ವಿಶೇಷವಾಗಿ ಬಾಹುಬಲದಿಂದಲೇ ಶತ್ರುಗಳನ್ನು ಜಯಿಸಿದ್ದು ಕಂಡುಬರುತ್ತದೆ. ಮಧ್ವಾವತಾರದಲ್ಲಿ ಕೇವಲ ವಾದ (ವಾಗ್ಯುದ್ಧ) ಮಾಡಿ ಶತ್ರುಗಳನ್ನು ಜಯಿಸಿದರು. ಆದರೆ ಭೀಮಾವ- ತಾರದಲ್ಲಿ ವಾಗ್ಯುದ್ಧ ಬಾಹುಯುದ್ಧ ಎರಡೂ ವಿಧ ಯುದ್ಧ ಮಾಡಿದ್ದು (ಹೆಚ್ಚಿನ ವಿವರಣೆಗೆ ೨೮ನೇ ಶ್ಲೋಕದ ಭೀಮಪರವಾದ-ಆರನೇ-ಅರ್ಥ ಖಂಡ 312 ನೋಡಿರಿ) ಕಂಡು ಬರುತ್ತದೆ. ಜರಾಸಂಧಾದಿಗಳೊಡನೆ ಯುದ್ಧ ಮಾಡಿದಾಗ 'ವಾಚಾ ಽಜಯತ್ತಂ ಪ್ರಥಮಂ ವೃಕೋದರಃ' ಎಂದು ತಾತ್ಪರ್ಯನಿರ್ಣಯದಲ್ಲಿ (೨೧ ಅ. ೧೫೬ ಶ್ಲೋ.) ಹೇಳಿದಂತೆ ಭೀಮನು

ಜರಾಸಂಧನನ್ನು ಮೊದಲು ಶಿವಸರ್ವೋತ್ತಮತ್ವದ ಬಗ್ಗೆ ವಾದಿಸಿ ಸೋಲಿಸಿದನು, ಅನಂತರ ಬಾಹುಯುದ್ಧ ಮಾಡಿ ಸಂಹರಿಸಿದನು. ಹೀಗೆಯೇ ಮಣಿಮಂತಾದಿಗಳನ್ನೂ ವಾಗ್ಯುದ್ಧದಲ್ಲೂ ಬಾಹುಯುದ್ಧದಲ್ಲೂ ಜಯಿಸಿದನು. ಈ ಪ್ರಕಾರ ಎರಡೂ ವಿಧ ಯುದ್ಧ ಮಾಡಬಲ್ಲ ಸಮರ್ಥರು ಭೀಮನಿಗೆ ಪೂರ್ವದಲ್ಲಿ ಯಾರೂ ಇರಲಿಲ್ಲವಾದ್ದರಿಂದ ಭೀಮನಿಗೂ 'ಅಪೂರ್ವವಾದ ಭಯಂಕರ ಪುರುಷನೇ !' ಎಂಬ ಸಂಬೋಧನೆ ಹೊಂದಿಕೆಯಾಗಿದೆ.

ಇನ್ನು ಮಧ್ವಪರವಾಗಿ—ಪೂರ್ವ-ಭೀಮ ಎಂದರೆ ಹಿಂದಿದ್ದ ದ್ವಾಪರಯುಗದ ಭೀಮನೆಂದರ್ಥ. ಈ (ದ್ವಾಪರಯುಗದ) ಭೀಮನು ಕ್ಷತ್ರಿಯ ಮತ್ತು ಗೃಹಸ್ಥ. ಅದಕ್ಕೆ ವಿರುದ್ಧವಾಗಿ ಮಧ್ವಾಚಾರ್ಯರು ಬ್ರಾಹ್ಮಣರು ಮತ್ತು ಸನ್ಯಾಸಿಗಳು ; ಆದ್ದರಿಂದ ಅವರು ಪೂರ್ವಭೀಮನಿಗೆ ವಿರುದ್ಧವಾದವರು—ಅ-ಪೂರ್ವಭೀಮ ಎಂದು ಪ್ರತಿಪಾದಿಸಿದ್ದಾರೆ.

280. ಹರಿಪರವಾಗಿ ಅನ್ವಯ—(ಹೇ) ಅನಿಲ! ವಿದ್ಯಾಸಮುದ್ರ! ಸುವಿದ್ಯಾದ್ರವಿಣದ ! ಪೂರ್ವ (ಅಥವಾ ಅಪೂರ್ವ), ಭೀಮ ! ವಿದಿತಾ ಸಾ ದ್ರೌಪದೀರುದ್ರಪತ್ನ್ಯಾದ್ಯುದ್ರಿಕ್ತಾ ವಾಗ್ದೇವೀ ತೇ ದಯಿತಾ, ದ್ರುಹ್ಯಂತೀಂ ಹೃದ್ರುಹಂ ಮಾಂ ದ್ರಾವಯಂತೀಂ ಅವಿದ್ಯಾನಿದ್ರಾಂ ದ್ರುತಂ ವಿದ್ರಾವ್ಯ, ಅಥ (ಮಾಂ ಎಂದು ಆವೃತ್ತಿ ಮಾಡಿಕೊಳ್ಳಬೇಕು) ಸದ್ಯೋರಚನಪಟುಂ ಆಪಾದ್ಯ, ತೇ ಆಜ್ಞಯಾ ದ್ರಾಕ್ ಅಭದ್ರಾತ್ ರಹಯತು ||

ಅನ್ವಯಾರ್ಥ— ಅನಿಲ=ಸ್ವಾತಿರಿಕ್ತ ಆಶ್ರಯರಹಿತನಾದ ಅಥವಾ (ನಿಲ=ನಿಲೀನ, ನಾಶ) ನಾಶವಿಲ್ಲದ ; ವಿದ್ಯಾಸಮುದ್ರ=ಸಕಲ ವಿದ್ಯೆಗಳಿಗೂ ಸಮುದ್ರದಂತೆ ಆಶ್ರಯನಾದ ; ಸುವಿದ್ಯಾದ್ರವಿಣದ=ಉತ್ತಮವಾದ ಅಧ್ಯಾತ್ಮವಿದ್ಯೆಯೆಂಬೋ ಧನವನ್ನು (ಅಥವಾ ಬಲವನ್ನು) ಕೊಡುವಂಥಾ, ಪೂರ್ವ. ಜಗದಾದಿಯಾದಂಥಾ (ಅಥವಾ ಅಪೂರ್ವ - ಕಾರಣರಹಿತನಾದ) ಭೀಮ-೧. ಶತ್ರುಗಳಿಗೆ ಭಯಂಕರನಾದ ಅಥವಾ ೨. ಸಕಲ ಪ್ರಮಾಣಗಳಿಂದ ತುಂಬಿದ (ಅರ್ಥಾತ್ ಶ್ರುತಿಸ್ಮೃತ್ಯಾದಿ ಸಕಲ ಪ್ರಮಾಣಗಳಿಂದ ಸರ್ವೋತ್ತಮನೆಂದು ಪ್ರತಿಪಾದಿತನಾದ) ಹೇ ಕೃಷ್ಣನೇ ! ವಿದಿತಾ-ಲೋಕದಲ್ಲೂ ವೇದಗಳಲ್ಲೂ ಪ್ರಸಿದ್ಧಳಾದ; ಸಾ=ಆ; ದ್ರೌಪದೀರುದ್ರಪತ್ನ್ಯಾದ್ಯುದ್ರಿಕ್ತಾ-

ದ್ರೌಪದೀ (ಭಾರತೀ) ಸೌಪರ್ಣೀ ವಾರುಣೀ ಪಾರ್ವತೀ ಮೊದಲಾದ ಸಕಲ ಉತ್ತಮ ದೇವತಾಸ್ತ್ರೀಯರಿಗಿಂತಲೂ ಉತ್ತಮಳಾದ; ವಾಗ್ದೇವೀ–ಸಕಲ ವೇದವಾಕ್ಯಗಳಿಗೂ ಮುಖ್ಯಾಭಿಮಾನಿಯಾದ; ತೇ–ನಿನ್ನ; ದಯಿತಾ=ಪತ್ನಿಯಾದ ಲಕ್ಷ್ಮೀದೇವಿಯು; ದ್ರುಹ್ಯಂತೀಂ=ಕ್ಲೇಶಕರವಾದಂಥಾ (ನನಗೆ ಪೀಡೆಯನ್ನುಂಟು ಮಾಡುತ್ತಿರುವಂಥಾ); ಹೃದ್ಗೃಹಂ–ಹೃದಯದಲ್ಲಿ ನೆಲೆಸಿರುವ; ಮತ್ತು ಮಾಂ–ನನ್ನನ್ನು; ದ್ರಾವಯಂತೀಂ=ಅನ್ನಪಾನಾದಿಗಳಿಗಾಗಿ ಮನೆ ಮನೆಗೆ ಓಡಾಡಿಸುತ್ತಿರುವಂಥಾ ಅಥವಾ ನಾನಾಯೋನಿಗಳಲ್ಲಿ ಓಡಿಸುತ್ತಿರು-ವಂಥಾ; ಅವಿದ್ಯಾನಿದ್ರಾಂ=ಅಜ್ಞಾನವೆಂಬ ನಿದ್ದೆಯನ್ನು; ದ್ರುತಂ–ಶೀಘ್ರವಾಗಿ, ವಿದ್ರಾವ್ಯ–ಓಡಿಸಿ (ದೂರ ಅಟ್ಟಿ); ಅಥ–ಅನಂತರ; (ಮಾಂ–ನನ್ನನ್ನು; ಸದ್ಯೋರಚನಪಟುಂ ಆಪಾದ್ಯ=ನಿಮ್ಮ ಸ್ತೋತ್ರರೂಪವಾದ ಆಶು ಕವಿತೆಗಳನ್ನು ರಚಿಸಲು ಸಮರ್ಥನನ್ನಾಗಿ ಮಾಡಿ; ತೇ=ನಿನ್ನ; ಆಜ್ಞಯಾ–ಅಪ್ಪಣೆಯಿಂದ; ದ್ರಾಕ್–ಶೀಘ್ರವಾಗಿ; ಅಭದ್ರಾತ್=ಅಮಂಗಳವಾದ ಪ್ರಕೃತಿ ಬಂಧದ ದೆಶೆಯಿಂದ; ರಹಯತು–ವಿಯುಕ್ತನನ್ನು ಮಾಡಲಿ.

281. ಹರಿಪರವಾಗಿ ಭಾವಾರ್ಥ—ಹೇ ಕೃಷ್ಣ! ಸಕಲ ಜಗತ್ತುಗಳ ಸೃಷ್ಟಿಸ್ಥಿತಿಲಯಗಳಿಗೆಲ್ಲಾ ನೀನೇ ಆದಿಕಾರಣ, ನೀನು ಅನಾದಿ ಪುರುಷ (ಪೂರ್ವ). ನಿನಗೆ ಕಾರಣವಾದುದು ಯಾವುದೂ ಇಲ್ಲ; ಆದ್ದರಿಂದ ನಿನ್ನನ್ನು ಉಪನಿಷತ್ತುಗಳು ಅಪೂರ್ವ ಎಂದು ಕರೆಯುತ್ತವೆ (ಅಪೂರ್ವ). ನೀನು ಎಲ್ಲಕ್ಕೂ ಆಧಾರವಾಗಿದ್ದೀಯೆ, ಅಲ್ಲದೆ ನಿನಗೆ ನೀನೇ ಆಶ್ರಯ, ಬೇರೆ ಆಶ್ರಯವಿಲ್ಲ. (ಅನಿಲ) ನಿನಗೆ ಹೇಗೆ ಆದಿಯಿಲ್ಲವೋ ಹಾಗೆ ನಾಶವೂ ಇಲ್ಲ (ನಿಲ–ನಿಲಯನ, ನಾಶ, ಅ ಇಲ್ಲದವನು(. ನೀನು ಸಕಲ ದೈತ್ಯರಿಗೂ ಅಂತಕನಾಗಿ ಯಮಸ್ವರೂಪನಾಗಿದ್ದೀಯೆ (ಭೀಮ=ಭಯಂಕರ). ವೇದಾದಿ ಸಕಲಪ್ರಮಾಣಗಳೂ ನಿನ್ನನ್ನೇ ಸರ್ವೋತ್ತಮನೆಂದು ಪ್ರತಿಪಾದಿಸುತ್ತವೆ (ಭೀ-ಮಾ). ಸಮುದ್ರವು ನೀರಿಗೆ ಅಕ್ಷಯನಿಧಿಯಾಗಿರುವಂತೆ ನೀನು ಲೌಕಿಕ-ವೈದಿಕ ಸಮಸ್ತ ವಿದ್ಯೆಗಳಿಗೂ ನೀನು ದೊಡ್ಡ ಅಕ್ಷಯವಾದ ಆಕರವಾಗಿದ್ದೀಯೆ (ವಿದ್ಯಾಸಮುದ್ರ), ಅಷ್ಟೇ ಅಲ್ಲ ನಿನ್ನ ಅನುಗ್ರಹ ಮಾತ್ರದಿಂದ ನಮಗೆ ಸಕಲ ವಿದ್ಯೆಗಳೂ ಸಿದ್ಧಿಸುತ್ತವೆ (ಸುವಿದ್ಯಾದ್ರವಿಣದ).

ಇಂಥಾ ಅಪಾರ ಮಹಿಮನಾದ ನಿನ್ನ ಪ್ರೇಯಸಿಯೇ ಲಕ್ಷ್ಮೀದೇವಿ (ಸಾ ದಯಿತಾ). ಅವಳು ಸಕಲ ವೇದವಿದ್ಯಾಭಿಮಾನಿಯೂ (ವಾಗ್ದೇವೀ) ವಾಙ್ಮನೋನಿಯಾಮಕಳೂ (ವಾಕ್) ಭಾಗ್ಯದೇವತೆಯೂ ಆಗಿದ್ದಾಳೆ. ಅವಳ ಸಾಮರ್ಥ್ಯವನ್ನು ಶ್ರೀಸೂಕ್ತ ಅಂಭ್ರಣೀಸೂಕ್ತಾದಿಗಳು ಸಾರಿಹೇಳುತ್ತವೆ (ವಿದಿತಾ). ಅಷ್ಟೇ ಅಲ್ಲ, ಆಕೆ ಸರ್ವವಂದ್ಯರೂ ಸರ್ವಮಾನ್ಯರೂ ಸರ್ವ ಪೂಜ್ಯರೂ ಆದ ಸರಸ್ವತೀ–ಭಾರತಿಯರು. ಸೌಪರ್ಣೀ–ವಾರುಣೀ–ಪಾರ್ವತೀ ಮೊದಲಾದ ಉತ್ತಮೋತ್ತಮ ದೇವತಾಸ್ತ್ರೀಯರಿಗಿಂತ ಕೋಟಿಪಟ್ಟು ಉತ್ತಮಳು (ದೌಪದೀ....ದ್ಯುದ್ರಿಕ್ತಾ), ಇಂಥಾ ಮಹಿಮಳೂ ನಿನ್ನ ಪತ್ನಿಯೂ ಆದ ರಮಾದೇವಿಯು ನನ್ನ ಮೇಲೆ ಕೃಪೆಮಾಡಿ ನಿನ್ನ ಆಜ್ಞಾನು ಸಾರ ನನ್ನ ಈ ಮೂರು ಪ್ರಾರ್ಥನೆಗಳನ್ನು ನಡೆಸಿಕೊಡಲಿ.

(೧) ಅವಿದ್ಯೆಯೆಂಬ ಅಜ್ಞಾನವು ನನ್ನ ಸ್ವರೂಪದೇಹವನ್ನೇ ಆವರಿಸಿ-ಕೊಂಡು ಒಳಗೇ ನೆಲೆಸಿಬಿಟ್ಟಿದೆ. ನನಗೆ ಯಥಾರ್ಥಜ್ಞಾನೋದಯವಾಗಲು ಈ ಅವಿದ್ಯೆ ದೊಡ್ಡ ಆತಂಕವಾಗಿದೆ. ಇದರಿಂದ ನಾನು ನಾನಾಯೋನಿಗಳಲ್ಲಿ ಹುಟ್ಟಿ ವಿವಿಧ ಸಾಂಸಾರಿಕ ಕ್ಲೇಶಗಳಿಗೆ ಗುರಿಯಾಗಿ ನೊಂದು ಬಳಲಿ ಹೋಗಿದ್ದೇನೆ. ಆದಕಾರಣ ಆ ದೇವಿಯು ಮೊಟ್ಟಮೊದಲು ಈ ಅವಿದ್ಯೆಯನ್ನು ಬೇಗನೆ ನಾಶಮಾಡಲಿ. (೨) ಅನಂತರ ನನಗೆ ದಿವ್ಯಜ್ಞಾನ ಕೊಟ್ಟು ನಿನ್ನನ್ನು ಸದಾ ಸ್ಮರಿಸಲು ಅನುಕೂಲವಾಗುವಂತೆ ನಿನ್ನ ಸ್ತುತಿಪರವಾದ ಆಶುಕವಿತೆ-ಗಳನ್ನು ರಚಿಸಲು ಸಮರ್ಥನನ್ನಾಗಿ ಮಾಡಲಿ. (೩) ಕಟ್ಟಕಡೆಯದಾಗಿ ಸಂಸಾರವೆಂಬ ಜನನಮರಣಾದಿ ನಾನಾಕ್ಲೇಶಗಳಿಗೆ ತೌರುಮನೆಯಾದ ಪ್ರಕೃತಿ ಬಂಧನದಿಂದ ನನ್ನನ್ನು ಪಾರುಮಾಡಿ ನಿನ್ನ ಪಾದಾರವಿಂದಗಳಲ್ಲಿ ಸೇರಿಸಲಿ— ಮುಕ್ತಿಯನ್ನು ಕೊಟ್ಟು ಉದ್ಧಾರ ಮಾಡಲಿ ಎಂಬುದೇ ಹರಿಪರವಾದ ಭಾವಾರ್ಥ.

282. ವಾಯುಪರವಾಗಿ ಅನ್ವಯ—(ಹೇ) ವಿದ್ಯಾಸಮುದ್ರ ಸುವಿದ್ಯಾದ್ರವಿಣದ ಪೂರ್ವ ಭೀಮ ಅನಿಲ! ದ್ರೌಪದೀ (ಇತಿ) ವಿದಿತಾ ರುದ್ರ ಪತ್ನ್ಯಾದ್ಯುದ್ರಿಕ್ತಾ ತೇ ದಯಿತಾ ಸಾ ವಾಗ್ದೇವೀ ದ್ರುಹ್ಯಂತೀಂ ಹೃದ್ರುಹಂ, ಬಲಾತ್ ಮಾಂ ದ್ರಾವಯಂತೀಂ ಅವಿದ್ಯಾನಿದ್ರಾಂ ತೇ ಆಜ್ಞಯಾ ದ್ರುತಂ

ವಿದ್ರಾವ್ಯ, ಅಥ (ಮಾಂ) ಸದ್ಸ್ತೋರಚನಪಟುಂ ಆಪಾದ್ಯ, ದ್ರಾಕ್ ಅಭದ್ರಾತ್ (ಬಲಾತ್) ರಹಯತು ||

ಅನ್ವಯಾರ್ಥ—ವಿದ್ಯಾಸಮುದ್ರ=ಸಮಸ್ತ ವಿದ್ಯೆಗಳಿಗೂ ಆಶ್ರಯುವಾಗಿರುವ (ಸಮುದ್ರವು ಸಕಲ ನದಿಗಳಿಗೆ ಆಶ್ರಯನೂ ಪತಿಯೂ ಆಗಿರುವಂತೆ ಸಕಲ ವಿದ್ಯೆಗಳಿಗೂ ಆಶ್ರಯವೂ ಒಡೆಯರೂ ಆಗಿರುವ), ಸುವಿದ್ಯಾದ್ರವಿಣದ ಅಧ್ಯಾತ್ಮ ವಿದ್ಯೆಯೆಂಬ ಧನವನ್ನು ಅಥವಾ ಬಲವನ್ನು ಕೊಡುವಂಥಾ; ಪೂರ್ವ ಭೀಮ=ಹಿಂದಿದ ಯುಗದಲ್ಲಿ ಭೀಮಸೇನನಾಗಿದ್ದ; ಅನಿಲ-(ಮತ್ತು ಈಗ ಮಧ್ವಾಚಾರ್ಯರಾಗಿ ಅವತಾರ ಮಾಡಿರುವ) ಹೇ ವಾಯುದೇವರೇ! ದ್ರೌಪದೀ (ಇತಿ) ವಿದಿತಾ=ದ್ರೌಪದೀ ಎಂದು ಪ್ರಸಿದ್ಧಳಾದ; ರುದ್ರಪತ್ನ್ಯಾದ್ಯುದ್ರಿಕ್ತಾ-ಸೌಪರ್ಣೀ ವಾರುಣೀ ಪಾರ್ವತಿಯೇ ಮೊದಲಾದ ಉತ್ತಮ ದೇವತಾಸ್ತ್ರೀಯರಿಗಿಂತಲೂ (ತಾರತಮ್ಯದಲ್ಲಿ) ಶ್ರೇಷ್ಠಳಾದ, ಅಥವಾ ದ್ರೌಪದಿಯ ದೇಹದ ಏಕದೇಶದಲ್ಲಿ ನೆಲೆಸಿರುವ ಪಾರ್ವತೀ ಶಚೀ ಶ್ಯಾಮಲಾ ಉಷಾ ಎಂಬ ಸ್ತ್ರೀಯರಿಗಿಂತಲೂ ಉತ್ಕೃಷ್ಟಳಾದ; ತೇ ದಯಿತಾ=ನಿನ್ನ ಪತ್ನಿಯಾದ; ಸಾ ವಾಗ್ದೇವೀ=ಆ ವಾಗಭಿಮಾನಿಯೂ ವೇದವಾಕ್ಯಗಳಿಗೆ ಅಭಿಮಾನಿಯೂ ಆದ ಭಾರತೀದೇವಿಯು; ದ್ರುಹ್ಯಂತೀಂ-ನನ್ನನ್ನು ಪೀಡಿಸುತ್ತಿರುವ ಎಂದರೆ ಒಳಗೆ ಸೇರಿಕೊಂಡು ನನ್ನ ಜೀವನಸ್ವರೂಪವನ್ನೇ ಮುಚ್ಚಿ ಹಾಕಿರುವ; ಹೃದ್ರುಹಂ=ಹೃದಯದಲ್ಲೇ ಬೆಳೆದು ನೆಲೆಸಿಬಿಟ್ಟಿರುವ; ಬಲಾತ್=ಬಲಾತ್ಕಾರದಿಂದ; ಮಾಂ=ನನ್ನನ್ನು; ದ್ರಾವಯಂತೀಂ-ಧನಧಾನ್ಯಾದಿಗಳಿಗಾಗಿ ಮನೆಮನೆಗೆ ಸುತ್ತಿಸುತ್ತಿರುವ ಅಥವಾ ಅನೇಕ ಯೋನಿಗಳಲ್ಲಿ ಹುಟ್ಟುವಂತೆ ಮಾಡಿ ಸುತ್ತಾಡಿಸುತ್ತಿರುವ; ಅವಿದ್ಯಾನಿದ್ರಾಂ-ಅಜ್ಞಾನವೆಂಬ ನಿದ್ದೆಯನ್ನು, (ತೇ) ಆಜ್ಞಯಾ-ನಿನ್ನ ಆಜ್ಞೆಯಿಂದ, ದ್ರುತಂ=ಬೇಗನೆ (ಶೀಘ್ರವಾಗಿ); ವಿದ್ರಾವ್ಯ=ಓಡಿಸಿ (ಹೋಗಲಾಡಿಸಿ); ಅಥ-ಅನಂತರ, ಮಾಂ-ನನ್ನನ್ನು); ಸದ್ಸ್ತೋ-ರಚನ-ಪಟುಂ-ನಿಮ್ಮ ಮತ್ತು ಭಗವಂತನ ಗುಣಗಳನ್ನು ಸ್ತುತಿಸುವ ಆಶುಕವಿತೆಗಳನ್ನು ರಚಿಸುವ ನಿಪುಣನನ್ನಾಗಿ; ಆಪಾದ್ಯ-ಮಾಡಿ; ದ್ರಾಕ್-ಶೀಘ್ರವಾಗಿ; ಅಭದ್ರಾತ್=ಅಶುಭಕಾರ್ಯಗಳನ್ನು ಮಾಡುವ ಪ್ರವೃತ್ತಿಯಿಂದಲೂ, ಜನನ-ಮರಣಗಳೆಂಬ ಸುಳಿ-

ಯಂತಿರುವ ಸಂಸಾರವೆಂಬ ಪ್ರಕೃತಿಬಂಧನದಿಂದಲೂ ; ರಹಯತು-ಬಿಡಿಸಿ ದೂರ ಒಯ್ಯಲಿ-ದೂರಮಾಡಲಿ-ಎಂದರ್ಥ.

[ಈ ಶ್ಲೋಕದಲ್ಲಿ 'ದ್ರೌಪದೀ ರುದ್ರಪತ್ನ್ಯುದ್ಯದ್ರಿಕ್ತಾ' ಎಂಬ ವಾಕ್ಯದಲ್ಲಿ, ಮಹಾಭಾರತದಲ್ಲೇ ಅತ್ಯಂತ ಮುಖ್ಯವಾದ ಮತ್ತು ತಾತ್ಪರ್ಯ ನಿರ್ಣಯಾದಿ ಗ್ರಂಥಗಳಲ್ಲಿ ವಿಶೇಷವಾಗಿ ವಿಚಾರಮಾಡಿರುವ ಮಹಾಪ್ರಮೇಯವು ಅಡಗಿದೆ. ಅದು ತಿಳಿಯದಿದ್ದರೆ ಈ ಶ್ಲೋಕದ ಭಾವಾರ್ಥವೂ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಮೊದಲು ಆ ಪ್ರಮೇಯವನ್ನು ತಿಳಿಸಿ ಭಾವಾರ್ಥಕ್ಕೆ ಹೋಗುವೆನು.]

283. (ಅ) ದ್ರೌಪದಿಯ ವೃತ್ತಾಂತ—ದ್ರೌಪದಿಯು ಸಾಕ್ಷಾತ್ ಭಾರತೀಸ್ವರೂಪಳು (ಭಾರತೀ ಸಾಕ್ಷಾತ್ ವೇದಿಮಧ್ಯಾತ್ ಸಮುತ್ಥಿತಾ ತಾ. ನಿ. ೧೮/೧೦೩), ಅಯೋನಿಜಳು. ಆದ್ದರಿಂದ ಮಾತೃಗರ್ಭದಲ್ಲಿ ಜನಿಸದೆ, ಪುರೋಹಿತರಾದ ಯಾಜೋಪಯಾಜರು ಮಂತ್ರಪೂತವಾದ ಹವಿಸ್ಸನ್ನು ಬೆಂಕಿಯಲ್ಲೇ ಹಾಕಲು ಅದರಿಂದ ವೇದಿಮಧ್ಯದಿಂದಲೇ (ಹೋಮಕುಂಡದಿಂದಲೇ) ನೇರವಾಗಿ ಮಗುವಾಗಿ ಸರ್ವಾಭರಣಭೂಷಿತಳಾಗಿ ಹೊರಗೆ ಬಂದವಳು. ಆದರೆ ವಿಶೇಷವರಗಳ ಮತ್ತು ಶಾಪಗಳ ಬಲದಿಂದ ಅವಳಲ್ಲಿ ಶಚೀ (ಇಂದ್ರನ ಪತ್ನೀ), ಶ್ಯಾಮಲಾ (ಯಮಧರ್ಮನ ಪತ್ನೀ), ಉಷಾ (ಅಶ್ವಿನೀದೇವತೆಗಳ ಪತ್ನೀ) ಮತ್ತು ಪಾರ್ವತಿಯರ ಆವೇಶವಿತ್ತು, ಭಾರತಿಯು ವಾಯುವನ್ನೂ ಮಿಕ್ಕವರು ಕ್ರಮವಾಗಿ ಇಂದ್ರ, ಯಮ ಮತ್ತು ಅಶ್ವಿನೀದೇವತೆಗಳನ್ನೂ ಆಶ್ರಯಿಸಿರುವುದರಿಂದ ಇವರೆಲ್ಲರಿಗೂ 'ಶ್ರಿಯಃ' (ಶ್ರೀಗಳು) ಎಂಬ ಹೆಸರೂ ಉಂಟು. ಈ ನಾಲ್ವರು ದೇವತಾಸ್ತ್ರೀಯರೂ ಭಾರತಿಯ ಜೊತೆ ಏಕದೇಹಪ್ರವಿಷ್ಟರಾಗಿ ಕ್ರಮವಾಗಿ ವಾಯ್ವಾದಿ ಐದು ಜನ ಗಂಡಂದಿರನ್ನು ಕ್ರಮವಾಗಿ ವರಿಸುವುದಕ್ಕೆ ಬ್ರಹ್ಮದೇವರು ಕೊಟ್ಟ ಶಾಪವೂ, ರುದ್ರದೇವರು ಕೊಟ್ಟ ಒಂದು ವರವೂ ಕಾರಣಗಳು. ಈ ಕಥೆ ಮಹಾಭಾರತದ ಆದಿಪರ್ವದಲ್ಲೂ (ಅಧ್ಯಾಯ ೨೧೨-೨೧೪) ತಾತ್ಪರ್ಯ ನಿರ್ಣಯದಲ್ಲೂ (೧೮ ಅಧ್ಯಾ ೧೦೩-೧೫೧ ಶ್ಲೋ) ವಿಸ್ತಾರವಾಗಿ ವರ್ಣಿತವಾಗಿದೆ. ಗು. ಸಾ. ಟೀಕೆಯಲ್ಲೂ ಸ್ಪಷ್ಟವಾಗಿ ಸಾಕಷ್ಟು ವಿಸ್ತಾರವಾಗಿ ವರ್ಣಿಸಿ

ದ್ದಾರೆ. ಮುಖ್ಯವಾದ ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿ ಹೇಳಿದೆ. ಹೆಚ್ಚಿನ ವಿಚಾರಗಳನ್ನು ಮೂಲಗ್ರಂಥಗಳನ್ನು ಓದಿ ತಿಳಿದು ಕೊಳ್ಳಬಹುದು.

ಅ) ಬ್ರಹ್ಮದೇವರ ಶಾಪ—ಒಂದು ಸರಿ ಪಾರ್ವತೀ ಶಚೀ ಶ್ಯಾಮ-ಲಾದಿ ನಾಲ್ವರೂ ತಮ್ಮ ಭರ್ತೃಸಮೇತರಾಗಿ ಬ್ರಹ್ಮದೇವರ ಸಮುಕ್ಷದಲ್ಲೇ ಹಾವಭಾವವಿಲಾಸಗಳನ್ನು ತೋರಿಸಿದರು. ಅದರಿಂದ ಬ್ರಹ್ಮದೇವರು ಸಿಟ್ಟಾಗಿ ಅವರಿಗೆ 'ನೀವು ಮನುಷ್ಯರಾಗಿ ಹುಟ್ಟಿ ಅನ್ಯಸಮಾಗಮ ಹೊಂದಿರಿ' ಎಂದು ಶಾಪ ಕೊಟ್ಟರು. ಅದಕ್ಕೂ ಪೂರ್ವದಲ್ಲಿ ಈ ನಾಲ್ವರೂ ಒಂದೇ ದೇಹದಲ್ಲಿ ಪ್ರವಿಷ್ಟರಾಗಿ ಬ್ರಹ್ಮದೇವರನ್ನು ವಂಚಿಸಲು ಮೂರಾವರ್ತಿ ಪ್ರಯತ್ನಿಸಿದರು. ಆದರಿಂದ ಬ್ರಹ್ಮನು ಅವರನ್ನು 'ನನ್ನನ್ನು ವಂಚಿಸಲು ಮೂರಾವರ್ತಿ ಯತ್ನಿಸಿದ್ದರಿಂದ ನೀವು ಏಕದೇಹನ್ಯಾಯದಿಂದ ಮೂರಾವರ್ತಿ ಮನುಷ್ಯರಾಗಿ ಹುಟ್ಟಿರಿ' ಎಂದು ಶಪಿಸಿದನು. ಹೀಗೆ ಅವರಿಗೆ ಒಟ್ಟಾಗಿ ನಾಲ್ಕಾವರ್ತಿ ಮನುಷ್ಯರಾಗಿ ಹುಟ್ಟುವುದಲ್ಲದೆ ನಾಲ್ವರೂ ಮೂರಾವರ್ತಿ ಒಂದೇ ದೇಹದಲ್ಲಿರಬೇಕೆಂದೂ ಒಂದು ಸಾರಿ ಮಾತ್ರ ಅನ್ಯಸಂಸರ್ಗವೂ ಆಗುವಂತೆ ಶಾಪ ಬಂತು.

ಇ) ಭಾರತಿಯನ್ನು ಮೊರೆ ಹೊಕ್ಕದ್ದು—ಅದರಿಂದ ಖಿನ್ನರಾದ ಅವರೆಲ್ಲರೂ ಸಾವಿರ ವರ್ಷ ಭಾರತಿಯನ್ನು ಕುರಿತು ತಪಸ್ಸು ಮಾಡಿ ಆಕೆ ಯನ್ನು ಮೊರೆ ಹೊಕ್ಕು "ನಾವೆಲ್ಲ ನಿನ್ನ ದೇಹದಲ್ಲೇ ವಾಸ ಮಾಡುವೆವು. ನಿನಗೆ ವಾಯುದೇವರಲ್ಲದೆ ಅನ್ಯರ ಸಂಸರ್ಗವಾಗುವುದಿಲ್ಲ. ಇದರಿಂದ ನಮಗೂ ವಾಯುದೇವರಲ್ಲದೆ ಬೇರೆಯವರ ಸಹವಾಸವಾಗುವುದಿಲ್ಲ" ಎಂದು ಬೇಡಿ-ಕೊಂಡರು. ಭಾರತಿಯು ಆದಕ್ಕೆ ಒಪ್ಪಿಕೊಂಡು ಅವರು ನಾಲ್ವರೊಡನೆ ಏಕದೇಹನ್ಯಾಯದಿಂದ ಒಂದು ಸಾರಿ ವಿಪ್ರಕನ್ಯೆಯಾಗಿಯೂ ಎರಡನೆಯ ಜನ್ಮದಲ್ಲಿ ನಳನಂದಿನಿಯಾಗಿಯೂ ಮೂರನೆಯ ಜನ್ಮದಲ್ಲಿ ಇಂದ್ರಸೇನೆ ಯಾಗಿಯೂ (ಹೀಗೆ ಮೂರಾವರ್ತಿ ಮನುಷ್ಯಳಾಗಿ) ಹುಟ್ಟಿದಳು. ಮೂರನೆಯ ಜನ್ಮದಲ್ಲಿ ಆ ಇಂದ್ರಸೇನೆಯಲ್ಲಿದ್ದ ಭಾರತಿಯು ರುದ್ರಾಂತರ್ಗತ ಶ್ರೀಹರಿಯನ್ನೂ ಮಿಕ್ಕವರು ರುದ್ರನನ್ನೂ ಕುರಿತು ತಪಸ್ಸು ಮಾಡಿ ತಮ್ಮ

ತಮ್ಮ ಪತಿಗಳನ್ನು ಹೊಂದುವಂತೆ ವರ ಕೇಳಿದರು. ಆ ಐವರೂ ಏಕದೇಹದಲ್ಲಿದ್ದುದರಿಂದ ಐದು ಸ್ವರಗಳು ಹೊರಟವು. ಬ್ರಹ್ಮದೇವರು ಕೊಟ್ಟಿದ್ದ ಶಾಪಕ್ಕೆ ವಿರುದ್ಧವಾಗಿ ರುದ್ರನು 'ಹಾಗೆಯೇ ಆಗಲಿ. ನೀವು ನಿಮ್ಮ ನಿಮ್ಮ ಪತಿಗಳನ್ನು ಐದಿರಿ' ಎಂದನು. ಆ ಮಾತನ್ನು ಇಂದ್ರಸೇನೆ ಅಪಾರ್ಥ ಮಾಡಿಕೊಂಡು ತಾನೊಬ್ಬಳೇ ಐವರು ಗಂಡಂದಿರನ್ನು ಸೇರಬೇಕೆಂದು ಅರ್ಥಮಾಡಿಕೊಂಡು ಗಟ್ಟಿಯಾಗಿ ಅಳಲಾರಂಭಿಸಿದಳು. ಅವಳ ಅಳುವನ್ನು ಕೇಳಿ ದೇವೇಂದ್ರ ಅಲ್ಲಿಗೆ ಬಂದನು.

ಈ) ಇಂದ್ರನಿಗೂ ರುದ್ರನಿಗೂ ಶಾಪಪ್ರಾಪ್ತಿ — ದೇವೇಂದ್ರನಿಗೆ ಅಳುವ ಕಾರಣವನ್ನು ವಿವರಿಸುತ್ತಾ ಇಂದ್ರಸೇನೆ ರುದ್ರನ ಕಡೆ ಕೈತೋರಿಸಿ 'ಈತ ನನ್ನೊಬ್ಬಳಿಗೆ ಐದು ಮಂದಿ ಗಂಡಂದಿರಾಗಲಿ ಎಂದು ಶಾಪ ಕೊಟ್ಟಿದ್ದಾನೆ' ಎಂದು ಹೇಳಿದಳು. ಅದನ್ನು ಕೇಳಿ ಕುಪಿತನಾದ ಇಂದ್ರನು ರುದ್ರನನ್ನು ತಿರಸ್ಕರಿಸಿದನು. ವಿಚಾರ ಮಾಡದೆ ಸಿಟ್ಟಿಗೆದ್ದ ಇಂದ್ರನನ್ನು ರುದ್ರನು 'ನೀನೂ ಮನುಷ್ಯನಾಗಿ ಹುಟ್ಟಿ ಈಕೆಗೇ ಪತಿಯಾಗು. ನಿನ್ನಂತೆಯೇ ನನ್ನನ್ನು ಅವಮಾನ ಮಾಡಿದ ಬೇರೆ ನಾಲ್ವರೂ ಈ ಬೆಟ್ಟದ ಅಡಿಯಲ್ಲಿದ್ದಾರೆ, ನೋಡು' ಎಂದು ಇಂದ್ರನಿಗೇ ಶಾಪ ಕೊಟ್ಟನು. ಅದರಂತೆ ಬೆಟ್ಟದ ಕೆಳಗೆ ನೋಡಲಾಗಿ ವಾಯುದೇವರು, ಯಮ ಮತ್ತು ಅಶ್ವಿನೀದೇವತೆಗಳು ಹೀಗೆ ನಾಲ್ವರು ಗುಪ್ತಾಲೋಚನೆ ಮಾಡುತ್ತಿದ್ದುದನ್ನು ಕಂಡನು. ಆದರೆ ಅವರಾರೂ ಶಿವನನ್ನು ಅವಮಾನಿಸಿರಲಿಲ್ಲ. ಹಾಗೆ ಹೇಳಿದ್ದು ರುದ್ರನ ಅಪರಾಧವಾಗಿತ್ತು. ಇರಲಿ, ಆ ನಾಲ್ವರ ಜೊತೆಯೇ ದೇವೇಂದ್ರನೂ ವಿಷ್ಣುವಿನ ಅನುಗ್ರಹದಿಂದ ನರಾವೇಶಯುಕ್ತನಾಗಿ ಅರ್ಜುನನಾಗಿ ಹುಟ್ಟಿದನು.

ಅತ್ತ ರುದ್ರದೇವರು ಅಹಂಕಾರದಿಂದ ಸುಳ್ಳುಸುಳ್ಳೇ 'ನನ್ನನ್ನು ಅವಮಾನ ಮಾಡಿದ ವಾಯ್ವಾದಿಗಳು ಅಲ್ಲಿದ್ದಾರೆ' ಎಂದು ನುಡಿದದ್ದರಿಂದ ಬ್ರಹ್ಮದೇವರು ಅವರ ಮೇಲೆ ಕೋಪಿಸಿಕೊಂಡು 'ನೀನು ಯಾರ ಮುಂದೆ ಸುಳ್ಳಾಡಿದೆಯೋ ಆತನಿಂದಲೇ (ಇಂದ್ರನಿಂದಲೇ) ಪರಾಜಿತನಾಗು.* ಮತ್ತು ನನ್ನಿಂದ ಶಪ್ತ

* ಈ ಶಾಪದ ಪ್ರಭಾವದಿಂದಲೇ ಅಶ್ವತ್ಥಾಮನಿಗೆ (ರುದ್ರಾಂಶ) ಅರ್ಜುನ (ಇಂದ್ರಾಂಶ)ನಿಂದ ಸೋಲಾಯಿತು. ಭಾರತಯುದ್ಧ ಮುಗಿದ ಮೇಲೆ ಅಶ್ವತ್ಥಾಮ

ರಾದ ದೇವತಾಸ್ತ್ರೀಯರಿಗೆ ನನ್ನನ್ನು ಕೇಳದೆ ಪತಿಸಮಾಗಮವಾಗಲೆಂದು ವರ ಕೊಟ್ಟ ಕಾರಣ ನಿನಗೇ ಪತ್ನೀವಿಯೋಗವಾಗಲಿ, ಈ ಇಂದ್ರಸೇನೆ ದ್ರೌಪದಿಯಾಗಿ ಹುಟ್ಟಿ ಐವರು ಗಂಡಂದಿರನ್ನು ಪಡೆಯಲಿ' ಎಂದು ರುದ್ರನಿಗೂ ಇಂದ್ರಸೇನೆಗೂ ಶಾಪಕೊಟ್ಟರು. ಆ ಪ್ರಕಾರ ರುದ್ರನು ಅಶ್ವತ್ಥಾಮನಾಗಿಯೂ ಇಂದ್ರಸೇನೆ ದ್ರೌಪದಿಯಾಗಿಯೂ ಹುಟ್ಟಿದರು. ಈ ಶಾಪದ ನಿಮಿತ್ತವಾಗಿ ದ್ರೌಪದಿಯ ದೇಹದಲ್ಲೇ ಶಚೀ, ಶ್ಯಾಮಲೆ, ಉಷಾ, ಪಾರ್ವತಿಯರು ವಾಸವಾಗಿದ್ದು ತಮ್ಮ ತಮ್ಮ ಸರದಿ ಬಂದಾಗ ಮಾತ್ರ ತಮ್ಮ ತಮ್ಮ ಪತಿಯ ಸಮಾಗಮವನ್ನು ಪಡೆಯುತ್ತಾರೆಂಬುದು ದೇವತಾರಹಸ್ಯ. ಈ ವಿಚಾರ ಪುರಾಣಗಳಲ್ಲೂ ವೇದಗಳಲ್ಲೂ ಭಾರತದಲ್ಲೂ ವಿವರಿಸಲ್ಪಟ್ಟಿದೆ, ಅದನ್ನೇ ನಮ್ಮ ಶ್ರೀಮದಾಚಾರ್ಯರು ನಿರ್ಣಯಿಸಿ ಹೇಳಿದ್ದಾರೆ.

ಪ್ರಕೃತ ದ್ರೌಪದಿಯ ದೇಹದಲ್ಲಿ ನೆಲೆಸಿರುವ ಶಚೀ ಶ್ಯಾಮಲಾದಿಗಳಿಗಿಂತಲೂ ಭಾರತಿಯು ಶ್ರೇಷ್ಠಳೆಂತಲೂ, ಅಲ್ಲದೆ ತಾರತಮ್ಯದಲ್ಲೂ ಗರುಡ-ಶೇಷರುದ್ರರ ಪತ್ನಿಯರಾದ ಸೌಪರ್ಣೀವಾರುಣೀಪಾರ್ವತ್ಯಾದಿಗಳಿಗಿಂತಲೂ ಶ್ರೇಷ್ಠಳೆಂಬುದನ್ನು ದ್ರೌಪದೀ ರುದ್ರಪತ್ನ್ಯಾದ್ಯುದ್ರಿಕ್ತಾ ಎಂಬ ವಾಕ್ಯ ತಿಳಿಸುತ್ತದೆ. ಹರಿಪರವಾಗಿ ಅರ್ಥ ಹೇಳುವಾಗ ಲಕ್ಷ್ಮೀಪ್ರಸಕ್ತಿ ಬರುತ್ತದೆ. ಅವಳಂತೂ ಭಾರತೀಗಿಂತಲೂ ನೂರು ಕೋಟಿಯಷ್ಟು ಉತ್ತಮಳಾದ್ದರಿಂದ ಪಾರ್ವತ್ಯಾದಿಗಳಿಗಿಂತ ಶ್ರೇಷ್ಠಳೆಂಬುದು ಸ್ವಯಂಸಿದ್ಧವಾಗುತ್ತದೆ.

284. ವಾಯುಪರವಾಗಿ ಭಾವಾರ್ಥ—ಹೇ ವಾಯುದೇವರೇ! ನೀವು ಸಕಲ ವೈದಿಕವಿದ್ಯೆಗಳಿಗೂ ದೊಡ್ಡನಿಧಿಗಳಾಗಿದ್ದೀರಿ (ವಿದ್ಯಾಸಮುದ್ರ). ನಿಮ್ಮನ್ನು ಆಶ್ರಯಿಸಿದವರಿಗೆ ಅಧ್ಯಾತ್ಮವಿದ್ಯೆಯನ್ನು ಅನುಗ್ರಹಿಸಿ ಅವರನ್ನು ಉದ್ಧಾರಮಾಡುವಿರಿ (ಸುವಿದ್ಯಾದ್ರವಿಣದ). ಅಕಾರವಾಚ್ಯನಾದ ಶ್ರೀಹರಿಯು ಸದಾ ನಿಮ್ಮಲ್ಲಿ ಆವಾಸವಾಗಿರುವುದರಿಂದ ನೀವು ಅನಿಲಶಬ್ದವಾಚ್ಯರಾಗಿದ್ದೀರಿ.

ಬ್ರಹ್ಮಾಸ್ತ್ರವನ್ನು ಬಿಡುತ್ತಾನೆ. ಅದನ್ನು ಉಪಸಂಹಾರ ಮಾಡುವ ಕ್ರಮ ಅವನಿಗೆ ತಿಳಿದಿರಲಿಲ್ಲ. ಕೃಷ್ಣನ ಅಪ್ಪಣೆಯಂತೆ ಅರ್ಜುನ ಆ ಅಸ್ತ್ರವನ್ನು ಉಪಸಂಹಾರ ಮಾಡಿ ಅಶ್ವತ್ಥಾಮನ ತಲೆಯಲ್ಲಿದ್ದ ಒಂದು ಅಪೂರ್ವವಾದ ಮಣಿಯನ್ನು ಅಪಹರಿಸಿ ಬಿಡುತ್ತಾನೆ. ಈ ಕಥೆ ಭಾಗವತ ಪ್ರಥಮಸ್ಕಂಧದಲ್ಲೂ (೮ನೇ ಅಧ್ಯಾ.) ಬಂದಿದೆ.

ನೀವು ದ್ವಾಪರಯುಗದಲ್ಲಿ ಭೀಮಸೇನನಾಗಿದ್ದಾಗ ಸಕಲ ವೇದಾಭಿಮಾನಿಯಾದ ಸಾಕ್ಷಾದ್ಭಾರತಿಯೇ ದ್ರೌಪದಿಯೆಂಬ ಹೆಸರಿನಿಂದ ನಿಮ್ಮ ಪತ್ನಿಯಾಗಿದ್ದಳು. ಯದ್ಯಪಿ ಅವಳ ದೇಹದಲ್ಲಿ ಏಕದೇಹನ್ಯಾಯದಿಂದ ಪಾರ್ವತೀ ಶಚೀ ಶ್ಯಾಮಲಾದಿಗಳು ಸನ್ನಿಹಿತರಾಗಿದ್ದರೂ ಭಾರತಿಯೇ ಅವರಿಗೆಲ್ಲ ಇರಲು ಅವಕಾಶ ಕೊಟ್ಟಿದ್ದರಿಂದ ಸ್ವಯಂ ಅವರೆಲ್ಲರಿಗಿಂತಲೂ ಶ್ರೇಷ್ಠಳಲ್ಲದೆ ತಾರತಮ್ಯದಿಂದಲೂ ಸೌಪರ್ಣೀ ವಾರುಣೀ ಪಾರ್ವತಿಯರಿಗಿಂತಲೂ ಉತ್ತಮಳು. ಆದ್ದರಿಂದ ಅವಳಿಗೆ ಅನ್ಯಸಂಸರ್ಗದ ಬಾಧೆಯಿಲ್ಲ. ಇಂಥಾ ದ್ರೌಪದಿಯನ್ನು ಭೀಮಸೇನನಾದ ನೀವು ಹೇಗೆ ಕಲಿಸ್ವರೂಪರಾದ ದುರ್ಯೋಧನಾದಿಗಳ ಉಪಟಳದಿಂದ ತಪ್ಪಿಸಿ ಅವರನ್ನೆಲ್ಲಾ ಸಂಹರಿಸಿ ಸರ್ವವಿದ್ಯಾಪ್ರತೀಕಳಾದ ಆಕೆಯನ್ನು ಸಂರಕ್ಷಿಸಿದಿರೋ ಅದೇ ರೀತಿ ನನ್ನ ದೇಹದಲ್ಲಿ ಸೇರಿಕೊಂಡಿರುವ ಅವಿದ್ಯಾರೂಪಮಹಾಕಲಿಯ ಬಾಧೆಯಿಂದ ನನ್ನನ್ನು ಉದ್ಧಾರಮಾಡಿರಿ. ಈ ಅವಿದ್ಯೆ ನನ್ನನ್ನು ಬಹಳ ಪೀಡಿಸುತ್ತಿದೆ. ಹೃದಯದಲ್ಲೇ ನೆಲೆಸಿ ದಿನೇದಿನೇ ವೃದ್ಧಿಹೊಂದುತ್ತಾ ನನ್ನ ಸ್ವರೂಪಜ್ಞಾನವನ್ನೇ ಮುಚ್ಚಿಹಾಕಿಬಿಟ್ಟಿದೆ. ಧರ್ಮಮಾರ್ಗದಲ್ಲಿ ಪ್ರವೃತ್ತನಾಗಲು ಬಿಡದೆ ಹೊಟ್ಟೆ-ಬಟ್ಟೆ ಹೆಂಡತಿ-ಮಕ್ಕಳು ದುಡ್ಡು-ಕಾಸು ಇದರಲ್ಲೇ ಹೆಣಗಿಹೆಣಗಿ ನಾನು ಹಣ್ಣಾಗಿಹೋಗಿದ್ದೇನೆ. ನಿದ್ದೆ ಬಂದವನಿಗೂ ತೂಕಡಿಸುವವನಿಗೂ ಹೇಗೆ ಪಾಠ ಹತ್ತುವುದಿಲ್ಲವೋ ಹಾಗೆ ನನಗೂ ಅವಿದ್ಯೆಯ ದೋಷದಿಂದ ಜ್ಞಾನೋದಯವಾಗುತ್ತಿಲ್ಲ. ಆದಕಾರಣ ಮೊದಲು ಆ ಅವಿದ್ಯೆಯನ್ನು ದೂರಮಾಡಿರಿ. ಜ್ಞಾನವು ವೃದ್ಧಿಯಾಗುವಂತೆ ಅನುಗ್ರಹಿಸಿರಿ. ನನ್ನ ಮೇಲೆ ಆ ವಾಗ್ದೇವಿಯ ಕೃಪಾಕಟಾಕ್ಷ ಬೀಳಲಿ. ನನ್ನ ಮನಸ್ಸು ವಚನ ಚೇತನ ಎಲ್ಲವೂ ಪರಿಶುದ್ಧವಾಗಲಿ. ಶ್ರೀಹರಿಯ ಧ್ಯಾನದಲ್ಲಿಯೇ ನಿರಂತರ ಆಸಕ್ತಿಯುಂಟಾಗಲಿ. ಆ ವಾಗ್ದೇವಿಯ ಅನುಗ್ರಹದಿಂದ ನನಗೆ ಕವಿತಾಶಕ್ತಿಯೂ ಉಂಟಾಗಲಿ. ಸಂಸಾರವೆಂಬ ಪ್ರಕೃತಿಬಂಧನವು ಶ್ರೀಹರಿಯ ಪ್ರಸಾದ ದೊರಕಿ ದೂರವಾಗಲಿ. ಶ್ರೀಹರಿವಾಯುಗಳ ಕೃಪಾಕಟಾಕ್ಷ ನನ್ನ ಮೇಲೆ ಬೀಳಲಿ ಎಂದು ಪ್ರಾರ್ಥಿಸುತ್ತಾರೆ.

ಶ್ಲೋಕ ೨೬. ಹರಿವಾಯುಗಳಿಗೆ ವಂದನೆ

285. ಅವತಾರಿಕೆ— (ಕಕ.ವಿ.ಛ.) ಕೃಷ್ಣಾವತಾರವು ಮಾತ್ರ ಶ್ರೀವಿಷ್ಣುವಿನ ಸಾಕ್ಷಾತ್ ಅವತಾರವೆಂದೂ ವೇದವ್ಯಾಸರು ಯಾರೋ ಒಬ್ಬ ಮಹರ್ಷಿಗಳು ಮಾತ್ರವೆಂದೂ ವಿಷ್ಣುವಿನ ಅವತಾರವೇ ಅಲ್ಲವೆಂದೂ ಕೆಲವರು ಹೇಳುವುದುಂಟು. ಅದನ್ನು ನಿರಾಸ (ಖಂಡನೆ) ಮಾಡುವುದಕ್ಕಾಗಿ ಶ್ರೀಕೃಷ್ಣ-ವೇದವ್ಯಾಸ ಇಬ್ಬರಿಗೂ ಅಭೇದವನ್ನು ತೋರಿಸುತ್ತಾ ಅವರಿಬ್ಬರ ಸೇವೆಗಾಗಿಯೇ ಭೀಮಸೇನಾವತಾರವಾಗಿದೆಯೆಂದು ಹೇಳುತ್ತಾ ಆ ಹರಿ-ವಾಯುಗಳಿಬ್ಬರಿಗೂ ವಂದಿಸುತ್ತಾರೆ. (ಪು.ರಾ.) ಶ್ರೀಕೃಷ್ಣ ವೇದವ್ಯಾಸರೂಪಗಳಿಗೆ ಅಭೇದವನ್ನು ವ್ಯಕ್ತಪಡಿಸುತ್ತಾ ತದುಭಯರೂಪಿಯಾದ ಶ್ರೀಹರಿಯನ್ನೂ ತತ್ಸೇವಾನಿರತರಾದ ಭೀಮಸೇನದೇವರನ್ನೂ ಕೂಡ 'ಯಾಭ್ಯಾಂ ಶುಶ್ರೂಷುಃ....' ಎಂಬ ಶ್ಲೋಕದಿಂದ ನಮಿಸುತ್ತಾರೆ :—

ಯಾಭ್ಯಾಂ ಶುಶ್ರೂಷುರಾಸೀಃ ಕುರುಕುಲಜನನೇ
ಕ್ಷತ್ರ-ವಿಪ್ರೋದಿತಾಭ್ಯಾಂ
ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿಸುಖವಪುಷಾ
ಕೃಷ್ಣನಾಮಾಸ್ಪದಾಭ್ಯಾಮ್ ।
ನಿರ್ಭೇದಾಭ್ಯಾಂ ವಿಶೇಷಾದ್ ದ್ವಿವಚನವಿಷಯಾ-
ಭ್ಯಾಮುಭಾಭ್ಯಾ-ಮಮೂಭ್ಯಾಂ
ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜವಿಲಸ-
ಲ್ಲೋಚನೇಭ್ಯೋ ನಮೋಽಸ್ತು ॥೨೬॥

[ವಿಶೇಷ] ವಿಶ್ವಪತಿ ಪಾಠದಲ್ಲಿ 'ಯಾಭ್ಯಾಂ ಶುಶ್ರೂಷುರಾಸೀತ್' ಎಂದು ಪಾಠವಿದೆ.

ಪದವಿಭಾಗ— ಯಾಭ್ಯಾಂ, ಶುಶ್ರೂಷುಃ, ಆಸೀಃ, ಕುರುಕುಲ-ಜನನೇ, ಕ್ಷತ್ರವಿಪ್ರೋದಿತಾಭ್ಯಾಂ, ಬ್ರಹ್ಮಭ್ಯಾಂ, ಬೃಂಹಿತಾಭ್ಯಾಂ, ಚಿತಿ-ಸುಖವಪುಷಾ, ಕೃಷ್ಣನಾಮಾಸ್ಪದಾಭ್ಯಾಂ, ನಿರ್ಭೇದಾಭ್ಯಾಂ, ವಿಶೇಷಾತ್, ದ್ವಿವಚನವಿಷಯಾಭ್ಯಾಂ, ಉಭಾಭ್ಯಾಂ, ಅಮೂಭ್ಯಾಂ, ತುಭ್ಯಂ, ಚ, ಕ್ಷೇಮದೇಭ್ಯಃ, ನಮಃ, ಅಸ್ತು ॥

286. ಶ್ಲೋಕದ ವಿಶ್ಲೇಷಣೆ—ಈ ಶ್ಲೋಕದ ಅನ್ವಯ ಜಟಿಲವಾಗಿಲ್ಲ, ಸರಳವಾಗಿಯೇ ಇದೆ. ಶ್ಲೋಕದ ಕಡೆಯಲ್ಲಿರುವ—ಉಭಾಭ್ಯಾಂ ತುಭ್ಯಂ ಚ ನಮಃ ಅಸ್ತು ಎಂಬುದೇ ಪ್ರಧಾನವಾಕ್ಯ; ಇದಕ್ಕೆ—ಈ ಇಬ್ಬರಿಗೂ ನಿನಗೂ ನಮಸ್ಕಾರವಿರಲಿ ಎಂದರ್ಥ. ಇಲ್ಲಿ ಉದ್ದಕ್ಕೂ ಭೀಮಸೇನನ ಪ್ರಸಕ್ತಿ ಇರುವುದರಿಂದ 'ತುಭ್ಯಂ'- ನಿನಗೆ ಎಂದರೆ ಭೀಮಸೇನನಿಗೆ ಎಂದೇ ಅರ್ಥ. 'ಉಭಾಭ್ಯಾಂ=ಇಬ್ಬರಿಗೂ' ಎಂದರೆ ಯಾರಿಗೆ ಎಂದರೆ ಮೊದಲನೆಯ ಮೂರು ಪಾದಗಳಲ್ಲಿ ವರ್ಣಿಸುತ್ತಾರೆ. ಇಲ್ಲಿ 'ಭ್ಯಾಂ' ಕೊನೆಯಲ್ಲಿರುವ ಎಲ್ಲ ಪದಗಳೂ ಚತುರ್ಥೀದ್ವಿವಚನರೂಪಗಳು. ಪೂರ್ವಾರ್ಧದಲ್ಲಿ—ಕುರುಕುಲ-ಜನನೇ ಕೃಷ್ಣನಾಮಾಸ್ಪದಾಭ್ಯಾಂ ಯಾಭ್ಯಾಂ ಶುಶ್ರೂಷುಃ ಆಸೀಃ=ಕುರು-ವಂಶದಲ್ಲಿ ಭೀಮನಾಗಿ ಅವತಾರ ಮಾಡಿದಾಗ ಯಾದವ ಕೃಷ್ಣ-ವಾಸಿಷ್ಠ ಕೃಷ್ಣ (ಅಥವಾ ವೇದವ್ಯಾಸ) ಎಂದು ಹೆಸರುಳ್ಳ ಯಾವ ಇಬ್ಬರಿಗೆ ಸೇವೆ ಮಾಡುವುದಕ್ಕಾಗಿ ಅವತರಿಸಿದೆಯೋ ಆ 'ಉಭಾಭ್ಯಾಂ'- ಇಬ್ಬರಿಗೆ ಎಂದು ವಿಶೇಷಣ ರೂಪ ಅಪೂರ್ಣವಾಕ್ಯ. ಕೃಷ್ಣನಾಮಾಸ್ಪದಾಭ್ಯಾಂ ಎಂಬುದಕ್ಕೆ ಕ) ಕ್ಷತ್ರ-ವಿಪ್ರೋದಿತಾಭ್ಯಾಂ, ಖ) ಚಿತಿಸುಖವಪುಷಾ ಬೃಂಹಿತಾಭ್ಯಾಂ, ಗ) ಬ್ರಹ್ಮಭ್ಯಾಂ ಎಂದು ಮೂರು ವಿಶೇಷಣಗಳು. ಉಭಾಭ್ಯಾಂ ಎಂಬುದಕ್ಕೆ (ಯ) ನಿರ್ಭೇದಾ-ಭ್ಯಾಂ, (ರ) ವಿಶೇಷಾತ್ ದ್ವಿವಚನ ವಿಷಯಾಭ್ಯಾಂ, (ಲ) ಅಮೂಭ್ಯಾಂ ಎಂದು ಮೂರು ವಿಶೇಷಣಗಳು, ಕ್ಷೇಮದೇಭ್ಯಃ, ಸರಸಿಜವಿಲಸಲ್ಲೋಚನೇಭ್ಯಃ ಎಂಬ ಎರಡು ಉಭಾಭ್ಯಾಂ ತುಭ್ಯಂ ಚ ಎಂಬ ಮೂರಕ್ಕೂ ಒಟ್ಟಿಗೆ ವಿಶೇಷಣಗಳು. ಅಂತೂ ಒಟ್ಟಿನಲ್ಲಿ ಅಭಿನ್ನರಾದರೂ ಬೇರೆಯಾಗಿ ಕಾಣುವ ಯಾವ ಕೃಷ್ಣ-ವೇದವ್ಯಾಸರ ಸೇವೆಗಾಗಿ ನೀನು ಅವತಾರ ಮಾಡಿದೆಯೋ ಅಂಥಾ ಕೃಷ್ಣ-ವ್ಯಾಸರಿಗೂ ನಿನಗೂ (ಭೀಮನಿಗೂ) ನಮಸ್ಕಾರ ಎಂಬುದೇ ಈ ಶ್ಲೋಕದ ಒಟ್ಟು ಭಾವ.

287. ಕಠಿನ ಶಬ್ದಾರ್ಥ— ಕ) ಶುಶ್ರೂಷುಃ ಎಂಬುದು ಶ್ರು ಶ್ರವಣೇ(ಭ್ವಾ.ಪ.)=ಕೇಳು, ಶ್ರವಣ ಮಾಡು ಎಂಬ ಧಾತುವಿನ ಸನ್ನಂತ ರೂಪ (ಅಥವಾ ಇಚ್ಛಾರ್ಥಕ ರೂಪ)=ಸೇವಾಕರಣೇಚ್ಛುಃ (ಕಕ.ವಿ.ಫ.) 'ಸನಾಶಂಸಭಿಕ್ಷ ಉಃ' (ಪಾ.೩/೨/೧೬೮) ಎಂಬ ಸೂತ್ರದಂತೆ ಸನ್‌ಪ್ರತ್ಯಯದ

ಮೇಲೆ ಉ-ಪ್ರತ್ಯಯ ಬಂದಿದೆ. ಸೇವೆ ಮಾಡಲು ಇಚ್ಛೆಯುಳ್ಳವನಾಗಿ ಎಂದರ್ಥ. ಆಸೀಃ = ನೀನು ಆದೆಯೋ [ಅಸ್ ಧಾತುವಿನ ಲಙ್ ಮಧ್ಯಮ ಪುರುಷ ಏಕವಚನರೂಪ) ಆಸೀತ್ ಎಂಬ ವಿ. ಪಾಠದಲ್ಲಿ ಪ್ರ.ಪು.ಏಕವಚನ ರೂಪ; 'ಆದನು' ಎಂದರ್ಥ. ಖ) ಕ್ಷತ್ರ-ವಿಪ್ರೋದಿತಾಭ್ಯಾಂ ಕ್ಷತಾತ್ ಅನಿಷ್ಟಾತ್ ತ್ರಾಯತ ಇತಿ ಕ್ಷತ್ರಮ್(ಕಕ.ವಿ.). ಕ್ಷತ ಎಂದರೆ ಏಟುಬಿದ್ದವನು ಅಥವಾ ಪೀಡಿತ ಎಂದರ್ಥ. ತ್ರ ಎಂದರೆ ರಕ್ಷಿಸು ಎಂದರ್ಥ. ಕ್ಷತಾತ್-ಪೀಡಿತನಾದವನನ್ನು ಅನಿಷ್ಟದಿಂದ ನಿವಾರಿಸುವುದರಿಂದ ಕ್ಷತ್ರಿಯರಿಗೆ ಆ ಹೆಸರು ಬಂದಿದೆ. ಕ್ಷತ್ರೇಣ-ಕ್ಷತ್ರಿಯತ್ವೇನ, ವಿಪ್ರೇಣ-ವಿಪ್ರತ್ವೇನ, ಉದಿತಾಭ್ಯಾಂ-ಪ್ರಾದುರ್ಭೂತಾಭ್ಯಾಂ (ಕಕ.) ಕ್ಷತ್ರ-ಕ್ಷತ್ರಿಯರಾದ ಯಾದವ ವಂಶದಲ್ಲೂ, ವಿಪ್ರ-ಬ್ರಾಹ್ಮಣ ವಂಶದಲ್ಲೂ (ವಸಿಷ್ಠರ ಮರಿ ಮೊಮ್ಮಗನಾಗಿಯೂ), ಉದಿತಾಭ್ಯಾಂ = ಅವತಾರ ಮಾಡಿದ; ಶ್ರೀಕೃಷ್ಣನು ಯಾದವರ ವಂಶದಲ್ಲಿ ಕ್ಷತ್ರಿಯನಾಗಿ ಹುಟ್ಟಿದನು ; ವೇದವ್ಯಾಸರು ವಸಿಷ್ಠರ ಮರಿಮೊಮ್ಮಗನಾಗಿ ಬ್ರಾಹ್ಮಣರಾಗಿ ಹುಟ್ಟಿದರು. ಗ) ಬ್ರಹ್ಮಭ್ಯಾಂ (ವಿ.) ಪೂರ್ಣಗುಣತ್ವೇನ ಬ್ರಹ್ಮ ಶಬ್ದವಾಚ್ಯಾಭ್ಯಾಂ। ಬ್ರಹ್ಮಶಬ್ದವು ಗುಣಪೂರ್ಣತ್ವವನ್ನು ಹೇಳುತ್ತದೆ. ಆದಕಾರಣ ಗುಣಪೂರ್ಣರಾದಕಾರಣ ಬ್ರಹ್ಮಶಬ್ದವಾಚ್ಯರಾದ ಎಂದರ್ಥ. ಗು.ಸಾ. ಟೀಕೆಯಲ್ಲಿ ಬ್ರಹ್ಮ ಶಬ್ದಕ್ಕೆ ಹೆಚ್ಚು ವಿಚಾರ ಹೇಳಿದ್ದಾರೆ. ಅದರ ಜೊತೆ ಇನ್ನೂ ಕೆಲವು ಸೂತ್ರಭಾಷ್ಯ ಅನುವ್ಯಾಖ್ಯಾನಾದಿ ಗ್ರಂಥಗಳಲ್ಲಿ ಹೇಳಿದ ಕೆಲವು ಅಂಶಗಳನ್ನು ಸೇರಿಸಿ ಹೇಳುತ್ತೇನೆ. (ಲೇ.) ಬ್ರಹ್ಮನ್ ಶಬ್ದವು 'ಬೃಹಿ ವೃದ್ಧೌ' (ಭ್ವಾ.ಪ.) ಎಂಬ ಧಾತುವಿಗೆ 'ಬೃಂಹೇರ್ನೋಽಚ್ಚ' (ಎಂಬ ಉಣಾದಿ ೪/೧೪೬) ಸೂತ್ರದಂತೆ ಮನಿನ್ ಪ್ರತ್ಯಯ ಸೇರಿ ಆಗಿದೆ. ಬೃಂಹತೇ-ಗುಣೈಃ, ವರ್ಧತೇ, ಪರಿಪೂರ್ಣ ಇತಿ ಯಾವತ್। ಗುಣಗಳಿಂದ ತುಂಬಿದವನು ಎಂದರ್ಥ. ಅನುವ್ಯಾಖ್ಯಾನದಲ್ಲಿ (೧/೧/೧) "ಓತತ್ವವಾಚೀ ಹ್ಯೋಂಕಾರೋ ವಕ್ತ್ಯಸೌ ತದ್ಗುಣೋತತಾಮ್ । ಸ ಏವ ಬ್ರಹ್ಮಶಬ್ದಾರ್ಥೋ ನಾರಾಯಣ-ಪದೋದಿತಃ" ಎಂದು ಹೇಳಿದಂತೆ 'ಓಂಕಾರವು ಗುಣಗಳಿಂದ ಹಾಸು-ಹೊಕ್ಕಾಗಿ (ಓತಪ್ರೋತವಾಗಿ) ಹೆಣೆದುಕೊಂಡಿರು ಕೆಯನ್ನು ಹೇಳುವುದರಿಂದ ಗುಣಪರಿಪೂರ್ಣನನ್ನು ತಿಳಿಸುತ್ತದೆ. ಬ್ರಹ್ಮಶಬ್ದಕ್ಕೂ ನಾರಾಯಣ

ಶಬ್ದಕ್ಕೂ ಅದೇ ಅರ್ಥವಾದ್ದರಿಂದ ಓಂಕಾರವೂ ಬ್ರಹ್ಮಶಬ್ದವೂ ನಾರಾಯಣನನ್ನೇ ಬೋಧಿಸುತ್ತವೆ.' ಇದನ್ನೇ 'ಬ್ರಹ್ಮಶಬ್ದಃ ಪರೇ ವಿಷ್ಣೌ ನಾನ್ಯತ್ರಕ್ವಚಿದಿಷ್ಯತೇ' (ಸೂ.ಭಾ. ೧/೧/೧೨) 'ಬ್ರಹ್ಮಶಬ್ದವು ಸರ್ವೋತ್ತಮನಾದ ಕೇವಲ ವಿಷ್ಣುವಿನಲ್ಲೇ ಪ್ರಯುಕ್ತವಾಗುತ್ತದೆ; ಬೇರೆ ಕಡೆ ಹೊಂದಲಾರದು' 'ಬ್ರಹ್ಮಶಬ್ದೋಽಯಂ ವಿಷ್ಣೋರೇವ ವಿಶೇಷಣಮ್' (ಸೂ.ಭಾ. ೧/೨/೧೨ ಸೂ.) 'ಅಮಿತಗುಣಗಳನ್ನು ಹೇಳುವುದರಿಂದ ಬ್ರಹ್ಮಶಬ್ದವು ಕೇವಲ ವಿಷ್ಣುವಿಗೇ ವಿಶೇಷಣವಾಗಿದೆ' ಮೊದಲಾದ ನೂರಾರು ವಾಕ್ಯಗಳೂ ಸಮರ್ಥಿಸುವುವು. ಏವಂ ಚ ಕೃಷ್ಣ-ವೇದವ್ಯಾಸ ಇಬ್ಬರೂ ಬ್ರಹ್ಮಶಬ್ದವಾಚ್ಯರಾದ್ದರಿಂದಲೂ ಗುಣಪೂರ್ಣರೂ ಆಗಿರುವುದರಿಂದಲೂ ಇಬ್ಬರೂ ವಿಷ್ಣುರೂಪಗಳೇ ಎಂದು ಸಿದ್ಧವಾಗುತ್ತದೆ. ಘ) ಚಿತಿಸುಖವಪುಷಾ ಬೃಂಹಿತಾಭ್ಯಾಂ (ವಿ) ಚಿತಿಃ-ಜ್ಞಾನಂ, ಸಾ ಚ ಸುಖಂ ಚ ತೇ ಏವ ವಪುಃ-ಸ್ವರೂಪಂ, ತೇನ ಬೃಂಹಿತಾಭ್ಯಾಂ = ಪ್ರವೃದ್ಧಾಭ್ಯಾಂ; ಚಿತಿ-ಜ್ಞಾನ, ಸುಖ-ಸೌಖ್ಯ, ಇವುಗಳೇ ವಪುಷಾ = ದೇಹವಾಗಿ ಅಥವಾ ಸ್ವರೂಪವಾಗಿ, ಬೃಂಹಿತಾಭ್ಯಾಂ-ತುಂಬಿತುಳುಕಾಡುವ ಜ್ಞಾನಾನಂದಮಯವಾದ ಅಪ್ರಾಕೃತಶರೀರದಿಂದ ಕೂಡಿದ ಎಂದರ್ಥ. ಶ್ರೀಕೃಷ್ಣನ ಹಾಗೂ ವ್ಯಾಸರ ದೇಹಗಳೆರಡೂ ಕೇವಲ ಜ್ಞಾನಾನಂದಮಯವಾದುವು, ಅವರ ದೇಹವು ಮಜ್ಜಾ-ಮಾಂಸಾದಿ ಪ್ರಾಕೃತವಸ್ತುಗಳಲ್ಲ ಎಂದರ್ಥ. ಙ) ಕೃಷ್ಣನಾಮಾಸ್ಪದಾಭ್ಯಾಂ — ಶ್ರೀಕೃಷ್ಣನನ್ನು ಯಾದವಕೃಷ್ಣನೆಂದೂ ವೇದವ್ಯಾಸರನ್ನು 'ವಾಸಿಷ್ಠಕೃಷ್ಣ'ರೆಂದೂ ಕರೆಯುವುದು ರೂಢಿ. ಹೀಗೆ ಇಬ್ಬರೂ ಕೃಷ್ಣ ಎಂಬ ಹೆಸರಿನಿಂದಲೇ ಪ್ರಸಿದ್ಧರಾದವರು. ಶ್ರೀಕೃಷ್ಣನು ನಾರಾಯಣಾವತಾರವೆಂದು ಪ್ರಸಿದ್ಧವಾದ್ದರಿಂದ ಅದನ್ನು ಬಿಟ್ಟು, ವೇದವ್ಯಾಸರು ನಾರಾಯಣಾವತಾರವೆಂಬುದನ್ನು (ಗು.ಸಾ. ಟೀಕೆಯಲ್ಲಿ ಹೀಗೆ ಸಮರ್ಥಿಸಿದೆ—1) ತಾತ್ಪರ್ಯನಿರ್ಣಯದಲ್ಲಿ (೨ ಅ. ೨೫-೨೮ ಶ್ಲೋ.) ಉದಹರಿಸಿರುವ 'ಮತ್ಸ್ಯಕೂರ್ಮ..ನೈಷಾಂ ಭೇದಃ ಕಥಂಚನ' ಎಂಬ ಬ್ರಹ್ಮಾಂಡಪುರಾಣ ವಾಕ್ಯದಲ್ಲಿ ಮತ್ಸ್ಯಾದಿ ವಿಷ್ಣುರೂಪಗಳ ಜೊತೆಯಲ್ಲೇ 'ರಾಘವಃ ಕೃಷ್ಣಬುದ್ಧೌಚ ಕೃಷ್ಣದ್ವೈಪಾಯನಸ್ತಥಾ' ಎಂದು ವ್ಯಾಸರ ಹೆಸರನ್ನೂ ಸೇರಿಸಿರುವುದರಿಂದ ಕೃಷ್ಣದ್ವೈಪಾಯನರೆಂಬ ವೇದ-

ವ್ಯಾಸರೂ ವಿಷ್ಣು ಅವತಾರವೆಂದು ಸ್ಪಷ್ಟವಾಗುತ್ತದೆ. 2) 'ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪರಮ್। ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ ಭವೇತ್' ಕೃಷ್ಣದ್ವೈಪಾಯನರೆಂಬ ವ್ಯಾಸರನ್ನು ಸಾಕ್ಷಾತ್ ಸರ್ವೋತ್ತಮನಾದ ನಾರಾಯಣನೆಂದು ತಿಳಿ. ಶ್ರೀಹರಿಯಲ್ಲದೆ ಬೇರೆ ಯಾರು ಮಹಾಭಾರತವನ್ನು ರಚಿಸಬಲ್ಲರು ? ಎಂಬ ಮಹಾಭಾರತ ವಾಕ್ಯವೂ ಇದನ್ನು ಸಮರ್ಥಿಸುತ್ತದೆ. 3) ಈ ಶ್ಲೋಕವೇ ವಾಯುಪುರಾಣದಲ್ಲೂ ಬಂದಿರುವುದರಿಂದ 'ಅಭ್ಯಾಸ' ಎಂಬ ಪ್ರಮಾಣದಿಂದ ಮತ್ತಷ್ಟು ದೃಢವಾಗುತ್ತದೆ. 4) (ಲೇ.) ಸೂತ್ರಭಾಷ್ಯ ಗೀತಾಭಾಷ್ಯಾದಿಗಳಲ್ಲಿ ಉದಾಹರಿಸಿರುವ ಸ್ಕಾಂದಾದಿ ಅನೇಕ ಪುರಾಣಗಳ ವಾಕ್ಯಗಳಲ್ಲೂ ನಾರಾಯಣನೇ ವ್ಯಾಸರಾಗಿ ಅವತರಿಸಿದನೆಂದು ಸ್ಪಷ್ಟವಾಗಿ ಹೇಳಿದೆ. ಒಟ್ಟಿನಲ್ಲಿ ವ್ಯಾಸರು ವಿಷ್ಣು ಎಂಬ ಬಗ್ಗೆ ಯಾವ ಸಂಶಯವೂ ಇಲ್ಲ. (ಲೇ.) ಅದೂ ಅಲ್ಲದೆ 'ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ। ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ॥' ಎಂಬ ವ್ಯಾಸಸ್ತುತಿಯಲ್ಲಿ 'ವ್ಯಾಸರು ವಿಷ್ಣುರೂಪವೆಂದೂ ವಿಷ್ಣುವೇ ವ್ಯಾಸರೆಂದೂ' ಅಭೇದ ಹೇಳಿದೆ. ವಸಿಷ್ಠವಂಶೋತ್ಪನ್ನರಾದ ವೇದನಿಧಿಗಳಾದ (ಬ್ರಹ್ಮನಿಧಯೇ) ಅಥವಾ ಪರಬ್ರಹ್ಮಸ್ವರೂಪರಾದ ವ್ಯಾಸರಿಗೆ ನಮಸ್ಕಾರನಮಸ್ಕಾರ ಎಂಬುದು ಶ್ಲೋಕಾರ್ಥ.

ಚ) **ವಿಶೇಷಾತ್ ದ್ವಿವಚನ ವಿಷಯಾಭ್ಯಾಂ**— ವಿಶೇಷಃ ಸ್ವರೂಪಭೂತಶಕ್ತಿವಿಶೇಷಃ (ವಿ.) ವಿಶೇಷ ಎನ್ನುವುದು ಸ್ವರೂಪಭೂತವಾದ ಒಂದು ವಿಶೇಷ ಶಕ್ತಿ. (ಇದರ ಪ್ರಸ್ತಾಪವನ್ನು ಹಿಂದೆ ನಖಸ್ತುತಿಯಲ್ಲಿ ಏಕವಚನದ ಅರ್ಥವನ್ನು ವಿವರಿಸುವಾಗ ಪುಟ ೧೫೬ ಇತ್ಯಾದಿಗಳಲ್ಲಿ ಮಾಡಿದೆ. ಇನ್ನೂ ಹೆಚ್ಚಿನ ವಿವರಣೆಯನ್ನು ಜನ್ಮಾಧಿಕರಣದಲ್ಲಿ 'ವಿಶೇಷೋನಾಮ ಕಥಿತಃ ಸೋಽಸ್ತಿ ವಸ್ತುಷ್ವಶೇಷತಃ' ಎಂಬ ಅನುವ್ಯಾಖ್ಯಾನದ ಸುಧಾದಲ್ಲಿ ಕಾಣಬಹುದು.) ವಿಶೇಷದ ಶಕ್ತಿಯಿಂದ ಒಬ್ಬನೇ ಅನಂತನಾಗಿ ಕಾಣುವುದೂ ಇಬ್ಬರಾಗಿ ಕಾಣುವುದೂ ಸಾಧ್ಯವಾಗುತ್ತದೆ. ಆದ್ದರಿಂದ ಕೃಷ್ಣ-ವ್ಯಾಸರು ವಸ್ತುತಃ ಅಭಿನ್ನರಾದರೂ ವಿಶೇಷದಿಂದ ಇಬ್ಬರಾಗಿ ಕಾಣುತ್ತಾರೆ.

(ಛ) ಸರಸಿಜ-ವಿಲಸಲ್ಲೋಚನೇಭ್ಯಃ, ಸರಸಿಜ=ಕಮಲಗಳಂತೆ, ವಿಲಸತ್-ಪ್ರಕಾಶಿಸುವ, ಲೋಚನೇಭ್ಯಃ-ಕಣ್ಣುಗಳುಳ್ಳ (ಕೃಷ್ಣ-ವ್ಯಾಸರಿಗೂ ಭೀಮ-ಸೇನನಾದ ನಿನಗೂ ಎಂದು ಅನ್ವಯ).

288. ಹರಿಪರವಾಗಿ ಅನ್ವಯ – (ಆಸೀಃ ಎಂಬ ಮ.ಪು.ಏ.ವ. ಕ್ರಿಯೆಯ ಬಲದಿಂದ 'ತ್ವಂ'-ನೀನು ಎಂಬ ಕರ್ತೃಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.) (ತ್ವಂ) ಕುರುಕುಲ ಜನನೇ ಶುಶ್ರೂಷುಃ (ಗುಣೈಃ) ಬೃಂಹಿತಾಭ್ಯಾಂ, ಬ್ರಹ್ಮಭ್ಯಾಂ ಕೃಷ್ಣನಾಮಾಸ್ಪದಾಭ್ಯಾಂ-ಯಾಭ್ಯಾಂ ಕ್ಷತ್ರ ವಿಪ್ರೋದಿತಾಭ್ಯಾಂ ಚಿತಿಸುಖವಪುಷಾ ಆಸೀಃ, (ತಾಭ್ಯಾಂ) ನಿರ್ಭೇದಾಭ್ಯಾಂ ವಿಶೇಷಾತ್ ದ್ವಿವಚನವಿಷಯಾಭ್ಯಾಂ ಉಭಾಭ್ಯಾಂ ಅಮೂಭ್ಯಾಂ ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜವಿಲಸಲ್ಲೋಚನೇಭ್ಯಃ ನಮಃ ಅಸ್ತು ||

ಹರಿಪರವಾಗಿ ಅನ್ವಯಾರ್ಥ—(ಹೇ ಶ್ರೀಹರಿಯೇ ಎಂದು ಸಂಬೋಧನೆ)(ತ್ವಂ–ನೀನು), ಕುರುಕುಲಜನನೇ – ಕುರುವಂಶದಲ್ಲಿ ಅವತಾರಮಾಡಿದ ಭೀಮನ ವಿಷಯದಲ್ಲಿ ; ಶುಶ್ರೂಷುಃ = ತತ್ಕೃತ ಸೇವಾಫಲವನ್ನು ಕೊಡಲು ಇಚ್ಛಿಸಿದವನಾಗಿ, (ಗುಣೈಃ) ಬೃಂಹಿತಾಭ್ಯಾಂ–ಜ್ಞಾನಾನಂದಾದಿಗುಣಗಳಿಂದ ತುಂಬಿದ, (ಆದಕಾರಣವೇ) ಬ್ರಹ್ಮಭ್ಯಾಂ–ಬ್ರಹ್ಮಶಬ್ದವಾಚ್ಯವಾದ, ಕೃಷ್ಣ-ನಾಮಾಸ್ಪದಾಭ್ಯಾಂ = ಯಾದವಕೃಷ್ಣ–ವಾಸಿಷ್ಠಕೃಷ್ಣ ಎಂಬ ಹೆಸರುಳ್ಳ ; ಯಾಭ್ಯಾಂ = ಯಾವ ಎರಡು ರೂಪಗಳಿಂದ; ಕ್ಷತ್ರ-ವಿಪ್ರೋದಿತಾಭ್ಯಾಂ–ಕ್ರಮವಾಗಿ ಕ್ಷತ್ರಿಯವಂಶದಲ್ಲೂ ಬ್ರಾಹ್ಮಣವಂಶದಲ್ಲೂ ಹುಟ್ಟಿದ ವಸುದೇವ-ಪರಾಶರರಿಂದ ; ಚಿತಿಸುಖವಪುಷಾ = ಜ್ಞಾನಾನಂದಮಯವಾದ ದೇಹದಿಂದಲೇ ; ಆಸೀಃ = ಆವಿರ್ಭವಿಸಿದೆಯೋ, (ತಾಭ್ಯಾಂ–ಅಂಥಾ) ನಿರ್ಭೇದಾಭ್ಯಾಂ = ಅನ್ಯೋನ್ಯಪ್ರತಿಯೋಗಿಕ ಭೇದರಹಿತರಾದಂಥಾ ; ವಿಶೇಷಾತ್ ದ್ವಿವಚನ ವಿಷಯಾಭ್ಯಾಂ = ವಿಶೇಷವೆಂಬ ಸ್ವರೂಪಶಕ್ತಿಯಿಂದ ಕೃಷ್ಣ-ವ್ಯಾಸರೆಂಬ ವ್ಯವಹಾರನಾಮಗಳಿಂದ ಕರೆಯಲ್ಪಡುವ, ಉಭಾಭ್ಯಾಂ ಅಮೂಭ್ಯಾಂ = ಈ ಇಬ್ಬರಿಗೂ, ತುಭ್ಯಂ ಚ–ಮೂಲರೂಪಿಯಾದ ನಿನಗೂ ; ಕ್ಷೇಮದೇಭ್ಯಃ = ಕುಶಲಪ್ರದರಾದ ; ಸರಸಿಜವಿಲಸಲ್ಲೋಚನೇಭ್ಯಃ = ಕಮಲದಂತೆ ಕಣ್ಣುಳ್ಳ ನಿಮಗೆ ; ನಮಃ ಅಸ್ತು–ನಮಸ್ಕಾರವು ಆಗಲಿ.

ಹರಿಪರವಾಗಿ ಭಾವಾರ್ಥ—ಹೇ ಭಗವಂತ ಮೂಲರೂಪಿ ನಾರಾಯಣ! ನಿನ್ನ ಸೇವಾರ್ಥವಾಗಿ ಕುರುವಂಶದಲ್ಲಿ ಅವತಾರಮಾಡಿದ ಭೀಮಸೇನನ ಅಪಾರಸೇವೆಯನ್ನು ಸ್ವೀಕರಿಸಿ ಅವನಿಗೆ ಫಲವನ್ನು ಅನುಗ್ರಹಿಸು ವುದಕ್ಕಾಗಿಯೇ ನೀನು ದ್ವಾಪರಯುಗದಲ್ಲಿ ಕೃಷ್ಣ ಎಂಬ ಒಂದೇ ಹೆಸರುಳ್ಳ ಶ್ರೀ ಕೃಷ್ಣ ಮತ್ತು ವೇದವ್ಯಾಸ ಎಂಬ ರೂಪಗಳಿಂದ ಅವತಾರಮಾಡಿದಿ. ಎರಡು ರೂಪ ತಾಳಿದರೂ ಎರಡು ಬೇರೆ ಬೇರೆ ವರ್ಣಗಳಲ್ಲೇ ಅವತಾರ ಮಾಡಿದಿ. ಕ್ಷತ್ರಿಯಪಂಗಡಕ್ಕೆ ಸೇರಿದ ಯಾದವರ ಕುಲದಲ್ಲಿ ಶ್ರೀಕೃಷ್ಣ ನಾಗಿಯೂ ಬ್ರಾಹ್ಮಣವರ್ಗಕ್ಕೆ ಸೇರಿದ ವಸಿಷ್ಠರ ವಂಶದಲ್ಲಿ ಪರಾಶರರಿಂದ ವ್ಯಾಸನಾಗಿಯೂ ಅವತಾರಮಾಡಿದಿ. ಹೀಗೆ ಮನುಷ್ಯರಂತೆ ಕಾಣಿಸಿ ಕೊಂಡಾಗ್ಯೂ ನಿಮ್ಮಿಬ್ಬರಿಗೂ ರಕ್ತಮಾಂಸಾದಿಮಯವಾದ ಪ್ರಾಕೃತ ದೇಹವೂ ಇಲ್ಲ, ನೀವಿಬ್ಬರೂ ಇತರರಂತೆ ಶುಕ್ಲಶೋಣಿತಸಂಬಂಧದಿಂದ ಹುಟ್ಟಿದವರೂ ಅಲ್ಲ. ನಿನ್ನ ಈ ಎರಡು ರೂಪಗಳೂ, ಮಿಕ್ಕ ಎಲ್ಲಾ ರೂಪಗಳಂತೆಯೇ ಕೇವಲ ಜ್ಞಾನಾನಂದಾದಿ ಅನಂತಗುಣಮಯವಾದ ಅಪ್ರಾಕೃತ ದೇಹವುಳ್ಳವುಗಳು; ಆದ್ದರಿಂದಲೇ ಅನಂತಗುಣಬೃಂಹಿತವಾಗಿ ಬ್ರಹ್ಮಶಬ್ದವಾಚ್ಯವಾಗಿವೆ. ಹೀಗೆ ನೋಡುವವರಿಗೆ ಎರಡು ಭಿನ್ನರೂಪಗಳಾಗಿ ಕಂಡರೂ ವಾಸ್ತವಿಕವಾಗಿ ಶ್ರೀಕೃಷ್ಣ-ವೇದವ್ಯಾಸ ಎರಡೂ ಒಂದೇ ಆಗಿವೆ, ಎರಡೂ ಅತ್ಯಂತ ಅಭಿನ್ನ ರೂಪಗಳು. ವಿಶೇಷ ಎಂಬ ಸ್ವರೂಪಶಕ್ತಿಯ ದೆಸೆಯಿಂದ ವಸ್ತುತಃ ಅತ್ಯಂತಾ-ಭಿನ್ನವಾಗಿದ್ದರೂ ಎರಡು ಭಿನ್ನರೂಪಗಳಾಗಿ ಕಾಣುತ್ತವೆ—ಅಷ್ಟೇ. ನಿನ್ನ ಮೂಲರೂಪವೂ ಈ ಅವತಾರರೂಪಗಳೂ ಎಲ್ಲವೂ ಭಕ್ತರ ಸಕಲಾಭೀಷ್ಟ ಗಳನ್ನು ನಡೆಸಿಕೊಡತಕ್ಕವೂ (ಕ್ಷೇಮದೇಭ್ಯಃ) ಕಮಲದ ದಳದಂತೆ ವಿಶಾಲ ವಾದ ಕಣ್ಣುಗಳುಳ್ಳವೂ (ಸರಸಿಜವಿಲಸಲ್ಲೋಚನೇಭ್ಯಃ) ಆಗಿವೆ. ಇಂಥಾ ನಿನ್ನ ಸಕಲ ರೂಪಗಳಿಗೂ ಮೂಲರೂಪಕ್ಕೂ ನಾನು ಭಕ್ತಿಯಿಂದ ನಮಸ್ಕರಿಸು ತ್ತೇನೆ.

289. ವಾಯು (ಭೀಮ) ಪರವಾಗಿ ಅನ್ವಯ—(ಹೇ ವಾಯೋ! (ತ್ವಂ) ಕುರುಕುಲಜನನೇ ಕ್ಷತ್ರವಿಪ್ರೋದಿತಾಭ್ಯಾಂ ಚಿತಿಸುಖ ವಪುಷಾ ಬೃಂಹಿತಾಭ್ಯಾಂ ನಿರ್ಭೇದಾಭ್ಯಾಂ ವಿಶೇಷಾತ್ ದ್ವಿವಚನ

ವಿಷಯಾಭ್ಯಾಂ ಕೃಷ್ಣನಾಮಾಸ್ಪದಾಭ್ಯಾಂ ಅಮೂಭ್ಯಾಂ ಬ್ರಹ್ಮಭ್ಯಾಂ ಯಾಭ್ಯಾಂ ಶುಶ್ರೂಷುಃ ಆಸೀಃ, ಕ್ಷೇಮದೇಭ್ಯಃ ಸರಸಿಜವಿಲಸಲ್ಲೋಚನೇಭ್ಯಃ ಉಭಾಭ್ಯಾಂ ತುಭ್ಯಂ ಚ ನಮಃ ಅಸ್ತು ||.

ವಾಯುಪರವಾಗಿ ಅನ್ವಯಾರ್ಥ—(ಹೇ ವಾಯೋ=ಎಲೈ ವಾಯುದೇವರೇ!) (ತ್ವಂ–ನೀವು) ಕುರುಕುಲಜನನೇ–ಕುರುವಂಶದಲ್ಲಿ ಭೀಮಸೇನನಾಗಿ ಜನಿಸಿದ ಕಾಲದಲ್ಲಿ; ಕ್ಷತ್ರ-ವಿಪ್ರ-ಉದಿತಾಭ್ಯಾಂ–ಕ್ಷತ್ರಿಯ ಸಂಗಡಕ್ಕೆ ಸೇರಿದ ಯಾದವವಂಶದ ವಸುದೇವನಿಂದಲೂ, ಬ್ರಾಹ್ಮಣವರ್ಗಕ್ಕೆ ಸೇರಿದ ವಸಿಷ್ಠವಂಶದ ಪರಾಶರಮಹರ್ಷಿಯಿಂದಲೂ ಅವತಾರ ಮಾಡಿದ; (ಆದರೂ ಕೂಡ) ಚಿತಿ ಸುಖ-ವಪುಷಾ ಬೃಂಹಿತಾಭ್ಯಾಂ=ಜ್ಞಾನಾನಂದ ಮಯವಾದ ದೇಹದಿಂದಲೇ ಕೂಡಿದವರಾದ; ನಿರ್ಭೇದಾಭ್ಯಾಂ=ಮೂಲತಃ ಪರಸ್ಪರ ಅಭೇದರಹಿತರಾಗಿದ್ದರೂ; ವಿಶೇಷಾತ್ ದ್ವಿವಚನ ವಿಷಯಾಭ್ಯಾಂ ='ವಿಶೇಷ'ವೆಂಬ ಸ್ವರೂಪಶಕ್ತಿಯ ದೆಸೆಯಿಂದ ಎರಡು ಭಿನ್ನ-ಭಿನ್ನರೂಪ ಗಳಂತೆ ಕಾಣಿಸಿಕೊಳ್ಳುವ; ಕೃಷ್ಣನಾಮಾಸ್ಪದಾಭ್ಯಾಂ–ಯಾದವಕೃಷ್ಣ-ವಾಸಿಷ್ಠ ಕೃಷ್ಣ ಎಂಬ ಹೆಸರುಗಳಿಂದ ಕರೆಯಲ್ಪಡುವ; ಅಮೂಭ್ಯಾಂ=ಈ ಕೃಷ್ಣ ವೇದವ್ಯಾಸರೆಂಬ; ಬ್ರಹ್ಮಭ್ಯಾಂ-ಅನಂತಗುಣಬೃಂಹಿತರಾದ್ದರಿಂದ ಬ್ರಹ್ಮ ಶಬ್ದವಾಚ್ಯರಾದ; ಯಾಭ್ಯಾಂ=ಯಾರಿಬ್ಬರಿಗೆ; ಶುಶ್ರೂಷುಃ-ಸೇವೆಮಾಡಲು ಇಚ್ಛೆಯುಳ್ಳವನಾಗಿ; ಆಸೀಃ=ಅವತಾರ ಮಾಡಿದೆಯೋ; ಕ್ಷೇಮದೇಭ್ಯಃ–ಶುಭವನ್ನು ಕೊಡುವಂಥಾ; ಸರಸಿಜವಿಲಸಲ್ಲೋಚನೇಭ್ಯಃ–ಕಮಲದಂತೆ ಪ್ರಕಾಶಿಸುವ ವಿಶಾಲವಾದ ಕಣ್ಣುಗಳುಳ್ಳ; ಉಭಾಭ್ಯಾಂ=ಈ ಕೃಷ್ಣ-ವೇದ ವ್ಯಾಸರಿಗೂ; ತುಭ್ಯಂ ಚ–ನಿಮಗೂ; ನಮಃ ಅಸ್ತು=ನಮಸ್ಕಾರವಿರಲಿ.

ವಾಯುಪರವಾಗಿ ಭಾವಾರ್ಥ—ಹೇ ವಾಯುದೇವ! ನೀನು ದ್ವಾಪರದಲ್ಲಿ ಕುರುವಂಶದಲ್ಲಿ ಭೀಮಸೇನನಾಗಿ ಅವತಾರಮಾಡಿದ್ದೇ ಮುಖ್ಯ ವಾಗಿ ಆ ಶ್ರೀಹರಿಯ ಸೇವೆಮಾಡುವುದಕ್ಕಾಗಿಯೇ ಅಲ್ಲವೆ. ಆ ಶ್ರೀಹರಿಯು ದ್ವಾಪರದಲ್ಲಿ ಕೃಷ್ಣ ಎಂಬ ಹೆಸರೇ ಉಳ್ಳ ಎರಡು ರೂಪಗಳಿಂದ ಎರಡು ಭಿನ್ನ ಭಿನ್ನ ವಂಶಗಳಲ್ಲೇ ಆವಿರ್ಭವಿಸಿದನು. ಕ್ಷತ್ರಿಯರಾದ ಯಾದವರ ವಂಶದಲ್ಲಿ ವಸುದೇವನ ಮಗನಾಗಿ ಶ್ರೀಕೃಷ್ಣ ಎಂಬ ಹೆಸರಿನಿಂದಲೂ ವಿಪ್ರೋತ್ತಮರಾದ

ಪರಾಶರಮಹರ್ಷಿಗಳ ಮಗನಾಗಿ ವೇದವ್ಯಾಸ ಎಂಬ ಹೆಸರಿನಿಂದಲೂ ಹುಟ್ಟಿದನು. ಹೀಗೆ ಮನುಷ್ಯರಿಂದ ಹುಟ್ಟಿದಂತೆ ತೋರಿಸಿದರೂ ಆ ಇಬ್ಬರಿಗೂ ಶುಕ್ಲಶೋಣಿತ ಸಂಬಂಧವಾದ ಜನನವೂ ಇಲ್ಲ, ಮಾಂಸಮಜ್ಜಾದಿಮಯವಾದ ಪ್ರಾಕೃತ ದೇಹವೂ ಇಲ್ಲ (ನ ಶುಕ್ರರಕ್ತಪ್ರಭವೋಽಸ್ಯ ಕಾಯಃ—ಭ). ಅದಕ್ಕೆ ಪ್ರತಿಯಾಗಿ ಅವರಿಬ್ಬರೂ ಜ್ಞಾನಾನಂದಮಯವಾದ ಅಪ್ರಾಕೃತದೇಹವುಳ್ಳವರು (ಆ ಪಾದತ ಆ ಪ್ರಣಖಾತ್ ಸರ್ವ ಏವಾನಂದಃ ಇತಿ ಶ್ರುತಿಃ—ಕಠ) (ನಖಸ್ತುತಿಯ ಪುಟ ೧೫೫-೬೩ ನೋಡಿ). ಆದ್ದರಿಂದಲೇ ಇಬ್ಬರೂ ಬ್ರಹ್ಮಶಬ್ದವಾಚ್ಯರಾಗಿದ್ದಾರೆ (ಬ್ರಹ್ಮಶಬ್ದೋಽಪಿ ಹಿ ಗುಣಪೂರ್ತಿಮೇವ ವದತ್ಯಯಮ್—ಸೂತ್ರಭಾಷ್ಯ. ಬ್ರಹ್ಮ ಶಬ್ದವು ಅನಂತಗುಣಪರಿಪೂರ್ಣತ್ವವನ್ನೇ ಹೇಳುತ್ತದೆ). ಒಬ್ಬನು ಕ್ಷತ್ರಿಯ, ಇನ್ನೊಬ್ಬ ಬ್ರಾಹ್ಮಣ; ಅವನು ಕೃಷ್ಣ, ಇವರು ವ್ಯಾಸರು—ಹೀಗೆಲ್ಲ ಇವರಿಬ್ಬರಲ್ಲಿ ಅನೇಕ ಭೇದಗಳು ತೋರಿದರೂ ಇಬ್ಬರೂ ಅತ್ಯಂತಾಭಿನ್ನರಾದ ಒಬ್ಬರೇ ಆಗಿದ್ದಾರೆ. ಆದರೂ ಕೂಡ ವಿಶೇಷವೆಂಬ ಭೇದವಿಲ್ಲದ ಸ್ಥಳದಲ್ಲಿ ಭೇದಕಾರ್ಯವನ್ನು ನಿರ್ವಹಿಸುವಂಥಾ ಶಕ್ತಿವಿಶೇಷದಿಂದ ಇಬ್ಬರಾಗಿ ಕಾಣಿಸುತ್ತಿದ್ದಾರೆ. ಈ ಪ್ರಕಾರ ಆ ಪರಮಾತ್ಮನು ನಿಮ್ಮ ಮೇಲೆ ಎರಡು ರೂಪಗಳಿಂದ ಅನುಗ್ರಹ ಮಾಡುತ್ತಿದ್ದಾನೆ. ನೀವೂ ಆ ಭಗವದ್ರೂಪಗಳೂ ಎಲ್ಲವೂ ಭಕ್ತರಿಗೆ ಶುಭವನ್ನು ಕೊಡತಕ್ಕ ಕಲ್ಪವೃಕ್ಷಗಳಂತಿವೆ. ನಿಮ್ಮ ನೇತ್ರಗಳು ಕಮಲದಂತೆ ಉಜ್ವಲವಾಗಿ ಪ್ರಕಾಶಿಸುತ್ತವೆ. ಇಂಥಾ ನಿಮ್ಮ ಮೂವರಿಗೂ ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ.

290. ವಿಶೇಷ ವಿಚಾರಗಳು—೧. (ಪುರಾ.) 'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ' (೪ ಅ. ೧೧ ಶ್ಲೋ.) 'ಯಾರು ನನ್ನನ್ನು ಯಾವ ರೀತಿ ಉಪಾಸನೆ ಮಾಡುತ್ತಾರೆ ನಾನು ಅವರಿಗೆ ಅದೇ ರೀತಿಯಾಗಿಯೇ ಅನುಗ್ರಹಿಸುತ್ತೇನೆ' ಎಂಬ ಗೀತಾನುಸಾರವಾಗಿಯೂ, 'ಸೇವಯಾಮಿ ಫಲದಾನೇನ ನ ತು ಗುಣಭಾವೇನ'. 'ಅನುಗ್ರಹಿಸುವುದಾದರೂ ಫಲದಾನದಿಂದ' ಎಂಬ ಗೀತಾಭಾಷ್ಯಾನುಸಾರವಾಗಿಯೂ ಭಕ್ತಕೃತ ಸೇವಾನುರೂಪ ಫಲದಾನವೇ ದೇವರು ಮಾಡುವ ಶಿಷ್ಯಸೇವನೆಯಾದ ಕಾರಣ ಇಂಥಾ

ಫಲದಾನರೂಪ ಸೇವೆಯನ್ನೇ ದೇವರು ಭೀಮಸೇನನಿಗೆ ಮಾಡಲಿಚ್ಛಿಸಿದರೆಂದು ತಿಳಿಯತಕ್ಕದು. ೨. (ಪುರಾ.) 'ಕೃಷ್ಣೌ ಸತ್ಯಾ ಭೀಮಪಾರ್ಥೌ ಕೃಷ್ಣೇತ್ಯುಕ್ತಾ ಹಿ ಭಾರತೀ" ಎಂಬ ತಾತ್ಪರ್ಯ ನಿರ್ಣಯ ವಾಕ್ಯಾನುಸಾರ (೩ ಅ., ೭ ಶ್ಲೋ.) ಕೃಷ್ಣಶಬ್ದಕ್ಕೆ ಯಾದವಕೃಷ್ಣನೆಂದೂ ವೇದವ್ಯಾಸರೆಂದೂ ಅರ್ಥವಾಗುತ್ತದೆ. (ಕಕ.ಥ.) 'ಕೃಷ್ಣಾಖ್ಯಾಃ ಶಮನ-ವ್ಯಾಸ-ಧನಂಜಯ-ಜನಾರ್ದನಾಃ' ಇತಿ ವಿಶ್ವಃ। ವಿಶ್ವಕೋಶದಲ್ಲಿ ಕೃಷ್ಣ ಎಂದರೆ ವಸುದೇವನ ಮಗನೂ ವೇದವ್ಯಾಸರೂ ಎಂದೂ ಅರ್ಥವಾಗುತ್ತದೆಯೆಂದು ಹೇಳಿದೆ. ೩. 'ಬ್ರಹ್ಮಶಬ್ದಶ್ಚ ವಿಷ್ಣಾವೇವ'=ಬ್ರಹ್ಮ ಶಬ್ದವು ವಿಷ್ಣುವಿನಲ್ಲೇ ಪ್ರಸಿದ್ಧ ವಾಗಿದೆ ಎಂದು ಸೂತ್ರಭಾಷ್ಯದಲ್ಲಿ ಹೇಳಿ (೧/೧/೧) ಅದನ್ನು ವಿಸ್ತಾರವಾಗಿ ಸಮರ್ಥಿಸಿದ್ದಾರೆ. ಅಲ್ಲದೆ 'ಬ್ರಹ್ಮಶಬ್ದಃ ಪರೇ ವಿಷ್ಣೌ ನಾನ್ಯತ್ರ ಕ್ವಚಿದಿಷ್ಯತೇ'-ಬ್ರಹ್ಮಶಬ್ದವು ಗುಣಪೂರ್ತಿಯನ್ನು ಹೇಳುವುದರಿಂದ ವಿಷ್ಣು ವೊಬ್ಬನಲ್ಲೇ ಅನ್ವಯಿಸುತ್ತದೆ, ಬೇರೆಯವರಿಗೆ ಮುಖ್ಯತಃ ಅನ್ವಯಿಸುವುದಿಲ್ಲ —ಇತ್ಯಾದಿ ಸೂತ್ರಭಾಷ್ಯೋದಾಹೃತ ಅನೇಕ ಪ್ರಮಾಣಗಳಿಂದ ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಪ್ರಸಿದ್ಧ (ಕಕ.). ೪. (ಕಕ.) ತಾತ್ಪರ್ಯನಿರ್ಣಯದಲ್ಲಿ (೨೨೬-೨೯) 'ಮತ್ಸ್ಯಕೂರ್ಮವರಾಹಾಶ್ಚ—' ಎಂದಾರಂಭಿಸಿ 'ರಾಘವಃ ಕೃಷ್ಣಬುದ್ಧೌ ಚ ಕೃಷ್ಣದ್ವೈಪಾಯನಸ್ತಥಾ।' ಎಂದು ಹೇಳಿ 'ಇತ್ಯಾದ್ಯಾಃ ಕೇವಲೋ ವಿಷ್ಣುರ್ನೈಷಾಂ ಭೇದಃ ಕಥಂಚನ' ಎಂದು ಮುಗಿಸಿರುವುದರಿಂದ ಕೃಷ್ಣ-ವೇದವ್ಯಾಸ ಎರಡೂ ವಿಷ್ಣುರೂಪಗಳೇ ಎಂದೂ, ಎರಡಕ್ಕೂ ಕಿಂಚಿದ್ಭೇದವೂ ಇಲ್ಲವೆಂಬುದೂ ಸಿದ್ಧವಾಗುತ್ತದೆ. ೫. ಕೃಷ್ಣ ಶಬ್ದಾರ್ಥ-ವನ್ನು ಗೀತಾಭಾಷ್ಯದಲ್ಲಿ ಪಂಚಮಾಧ್ಯಾಯದ ಪ್ರಥಮ ಶ್ಲೋಕದಲ್ಲಿ ಹೇಳಿದ್ದಾರೆ—ನಿಯಮನಾದಿನಾ ಸಕಲ ಲೋಕಕರ್ಷಣಾತ್ ಕೃಷ್ಣಃ। ಸೃಷ್ಟಿ ಸ್ಥಿತಿ ಸಂಹಾರನಿಯಮನಾದಿಗಳಿಂದ ಸಕಲ ಲೋಕಗಳನ್ನೂ ಕರ್ಷಣ ಮಾಡುವುದ ರಿಂದ ಕೃಷ್ಣನೆಂದು ಹೆಸರು. ರೈತನು ಕಾಳನ್ನು ಬಿತ್ತಿ ಬೆಳೆಸಿ ಕೊಯ್ಲು ಮಾಡುವಂತೆ ಭಗವಂತನೂ ಜಗತ್ತುಗಳ ಸೃಷ್ಟ್ಯಾದಿಕಾರ್ಯಗಳನ್ನು ನಡೆಸು ವುದರಿಂದ ಅವನಿಗೆ ಕೃಷ್ಣನೆಂದು ಹೆಸರು. ತಚ್ಚೋಕ್ತಂ—'ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್। ಅತೋ ವದಂತಿ ಮುನಯಃ

ಕೃಷ್ಣಂ ತ್ವಾಂ ಬ್ರಹ್ಮವಾದಿನಃ' ಇತಿ ಮಹಾಕೌರ್ಮೇ । ಕೂರ್ಮಪುರಾಣದಲ್ಲಿ 'ಹೇ ಸ್ವಾಮಿ, ನೀನು ಸಕಲ ಜಗತ್ತನ್ನೂ ಬಿತ್ತಿ ಬೆಳೆದು ನಿಯಮನ ಮಾಡುವುದರಿಂದ ನಿನ್ನನ್ನು ಬ್ರಹ್ಮಜ್ಞಾನಿಗಳು ಕೃಷ್ಣನೆಂದು ಕರೆಯುತ್ತಾರೆ' ಎಂದು ಹೇಳಿದೆ. ಈ ಅರ್ಥ ಕೃಷ್ಣ-ವೇದವ್ಯಾಸ ಇಬ್ಬರಿಗೂ ಅನ್ವಯಿಸುತ್ತದೆ. ಗು.ಸಾ. ಟೀಕೆಯಲ್ಲಿ ೧) ಕೃಷ್ಣಃ ಇವ ಕೃಷ್ಣಃ (ಕೃಷ್ಣಪಕ್ಷದಂತೆ ಇರುವವನು), ೨) ಕರ್ಷತೀತಿ ಕೃಷ್ಣಃ–ಆಕರ್ಷಿಸುವವನು. ೩) ಕೃಷ್ಯತೇ ಇತಿ ಕೃಷಿಃ, ಭೂಮಿಃ । ಕೃಷೇಃ ಣಂ ಯಸ್ಮಾತ್ ಸಃ । ಉಳಲ್ಪಡುವುದರಿಂದ ಕೃಷಿ ಎಂಬ ಭೂಮಿಗೆ ಯಾರಿಂದ ಣಂ–ಆನಂದ ಆಗುತ್ತದೋ ಅವನು, ಭೂಮಿಗೆ ಆನಂದ ಕೊಡುವವನು, ೪) ಕೃಷಾವಪಿ ಣಂ ಯಸ್ಯ ಸಃ । ಭೂಮಿಯಲ್ಲಿದ್ದರೂ ಸುಖರೂಪಿಯಾದವನು, ೫) ಅನೇಕ ದೈತ್ಯರನ್ನು ದಹನ ಮಾಡಿದ್ದರಿಂದಲೂ (ಕೃಷ್ಣ=ಅಗ್ನಿ) ಕೃಷ್ಣ ಎಂದು ಬೇರೆ ಐದರ್ಥಗಳನ್ನು ತೋರಿಸಿದ್ದಾರೆ.

೬. ಯುಕ್ತಿಮಲ್ಲಿಕಾದಲ್ಲಿ ಹೇಳಿದ ಅಂಶಗಳು :

i) ಯಾಭ್ಯಾಂ ಶುಶ್ರೂಷುರಾಸೀಃ ಎಂಬುದಕ್ಕೆ 'ಬ್ರಹ್ಮ ಬ್ರಹ್ಮ ಯೇ ಜುಜುಷುರ್ಹವಿರ್ಹವಿಃ' ಎಂಬ ಶ್ರುತಿ (ಋ. ೯/೭೭/೩) ಸಮಾಖ್ಯೆಯಾಗಿದೆ. ಯೇ–ಯಾವ ವಾಯುರೂಪಗಳು, ಬ್ರಹ್ಮ ಬ್ರಹ್ಮ-ಪ್ರತಿಯೊಬ್ಬ ಪ್ರಾಣಿಯ ದೇಹದಲ್ಲಿಯೂ ಇರುವ ಭಿನ್ನ ಭಿನ್ನ ಭಗವದ್ರೂಪಗಳನ್ನೂ ಅಥವಾ ಬೇರೆ ಬೇರೆ ಯುಗಗಳಲ್ಲಿ ಅವತಾರ ಮಾಡಿದ ಭಗವಂತನ ರಾಮ-ಕೃಷ್ಣವ್ಯಾಸಾದಿ ನಾನಾ ರೂಪಗಳನ್ನು, ಜುಜುಷಿರೇ–ಸೇವಿಸಿದರೋ ಎಂದು ಹೇಳಿದ್ದರಿಂದ ಭೀಮಸೇನ ದೇವರು, ಜ್ಞಾನಕಾರ್ಯಕ್ಕಾಗಿ ಅವತರಿಸಿದ ವೇದವ್ಯಾಸರನ್ನೂ, ಬಲಕಾರ್ಯಕ್ಕಾಗಿ ಅವತರಿಸಿದ ಕೃಷ್ಣನನ್ನೂ ಸೇವಿಸಿದ್ದು ಯುಕ್ತವಾಗಿದೆ. (ಪೂರ್ಣಮಂತ್ರದ ಅರ್ಥವನ್ನು ಖಂಡ 344 ಪು.ದಲ್ಲಿ ಕೊಟ್ಟಿದೆ).

ii) ತುಭ್ಯಂ ಚ ಕ್ಷೇಮದೇಭ್ಯಃ ಎಂಬುದಕ್ಕೆ ಹಿಂದೆ ೨೪ನೇ ಶ್ಲೋಕದಲ್ಲಿ 270 (ಡ) ಖಂಡದಲ್ಲಿ ಉದಹರಿಸಿದ 'ಅಜೀತಯೇ' ಎಂಬ ಶ್ರುತಿಯಲ್ಲಿ

(ಋ. ೯/೯೬/೪) 'ಸ್ವಸ್ತಯೇ' ಎಂಬುದು ಸಮಾಖ್ಯೆ. 'ಪ್ರಾಪ್ತಸ್ಯ ರಕ್ಷಣಂ ಕ್ಷೇಮಃ'– ಲಭಿಸಿದ್ದು ಹಾಳಾಗದಂತೆ ರಕ್ಷಿಸುವುದಕ್ಕೇ ಕ್ಷೇಮವೆಂದು ಹೆಸರು. ಗು.ಸಾ. ಟೀಕೆಯಲ್ಲಿ ತೋರಿಸಿದಂತೆ ನಮಗೆ ಜ್ಞಾನ-ಭಕ್ತಿ-ವೈರಾಗ್ಯಾದಿ ಗುಣಗಳು ಸಿಗುವುದೇ ದುರ್ಲಭ; ದೊರಕಿದ ಆ ಗುಣಗಳು ಕಾಲಾಂತರದಲ್ಲಿ ಕ್ರಮವಾಗಿ ಕ್ಷೀಣವಾಗಿ ನಶಿಸಿಹೋಗದಂತೆ ರಕ್ಷಿಸುವುದೇ ಬಹಳ ಮುಖ್ಯ. ಭೀಮಸೇನದೇವರೂ ಶ್ರೀಕೃಷ್ಣ ವೇದವ್ಯಾಸರೂ ನಮಗೆ ಪ್ರಾಪ್ತವಾದ ಜ್ಞಾನ-ಭಕ್ತ್ಯಾದಿಗುಣಗಳು ಕ್ಷಯಿಸಿ ನಾಶವಾಗದಂತೆ ರಕ್ಷಿಸುವುದರಿಂದ ಅವರಿಗೆ 'ಕ್ಷೇಮದೇಭ್ಯಃ' ಎಂಬ ವಿಶೇಷಣ ಕೊಟ್ಟಿದ್ದಾರೆ. ಶ್ರೀಕೃಷ್ಣನೂ ವ್ಯಾಸರೂ ಗೀತೆಯಲ್ಲಿ 'ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗ-ಕ್ಷೇಮಂ ವಹಾಮ್ಯಹಮ್ ॥' (೯ ಅ. ೨೨ ಶ್ಲೋ.) ಎಂದು ಹೇಳಿರುವುದು ಇದಕ್ಕೆ ಸಾಧಕವಾಗಿದೆ.

iii) ಯಾಭ್ಯಾಂ ಶುಶ್ರೂಷುರಾಸೀಃ ಎಂಬುದಕ್ಕೆ ಹಿಂದೆ ಖಂಡ 251 ಢ-ದಲ್ಲಿ ಉದಹರಿಸಿದ 'ಭದ್ರಾನ್ ಕೃಣ್ವನ್–' ಎಂಬ ಶ್ರುತಿಯೂ ಸಮಾಖ್ಯೆಯಾಗಿದೆ. ಆ ಶ್ರುತಿ ಪಾಠ (ಉತ್ತರಾರ್ಧ) ಹೀಗಿದೆ—

ಭದ್ರಾನ್ ಕೃಣ್ವನ್ನಿಂದ್ರಹವಾಂತ್ ಸಖಿಭ್ಯ

ಆ ಸೋಮೋ ವಸ್ತ್ರಾ ರಭಸಾನಿ ದತ್ತೇ ॥　　　　(ಋ. ೯/೯೬/೧)

ಶ್ರುತಿಯ ಅರ್ಥ—ಸೋಮಃ-ಸೋಮಕುಲೋತ್ಪನ್ನನಾದ ಭೀಮಸೇನನು, ಇಂದ್ರಹವಾನ್–ದೇವದೇವೋತ್ತಮರಾದ ವೇದವ್ಯಾಸರಿಂದಲೂ ಯಾದವ ಶ್ರೀಕೃಷ್ಣನಿಂದಲೂ 'ಈ ಪರಾಕ್ರಮ ಅಪ್ರತಿಮವಾದದ್ದು' ಎಂಬ ಪ್ರಶಂಸೆಗೆ ಯೋಗ್ಯವಾದ; ಭದ್ರಾನ್-ಶೋಭನ ಪರಾಕ್ರಮಗಳನ್ನು; ಕೃಣ್ವನ್ ಮಾಡುತ್ತಾ; ('ಯುವರಾಜಪದವಿಯಲ್ಲಿದ್ದಾಗ' ಎಂಬ ಯೋಗ್ಯ ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು); ಆ–ಬಂದಂಥಾ. ಸಖಿಭ್ಯಃ ಮಿತ್ರಭೂತರಾದ ವೈಷ್ಣವರಿಗೆ, ವಸ್ತ್ರಾ ರಭಸಾನಿ–ವಸ್ತ್ರ ರತ್ನಾಭರಣ ಧನಧಾನ್ಯಾದಿ ಕೇಳಿಕೇಳಿದ ವಸ್ತುಗಳನ್ನು, ದತ್ತೇ-ಕೊಡುತ್ತಾನೆ. (ಪೂರ್ಣಶ್ರುತಿಯ ಅರ್ಥ ಖಂಡ 270-ಢ ದಲ್ಲಿ ಕೊಟ್ಟಿದೆ).

ತಾತ್ಪರ್ಯ—ಭೀಮನು ಮಾಡುವ ಸಕಲ ಕರ್ಮಗಳೂ ವೇದವ್ಯಾಸರಿಗೂ ಶ್ರೀಕೃಷ್ಣನಿಗೂ ಅತ್ಯಂತ ಪ್ರೀತಿಜನಕವಾಗಿರುತ್ತವೆ. ತನ್ನ ಅಧಿಕಾರ ನಡೆಯುತ್ತಿದ್ದಾಗ ತನ್ನ ಬಳಿಗೆ ಬಂದ ಸಕಲ ವೈಷ್ಣವ ಭಕ್ತರಿಗೂ ಅವರವರು ಕೇಳಿದ ಧನಧಾನ್ಯ ಗೃಹಕೋಶಾದಿ ಸಕಲೇಷ್ಟಾರ್ಥಗಳನ್ನೂ ಕೊಟ್ಟು ತೃಪ್ತಿಪಡಿಸುತ್ತಿದ್ದನು—ಎಂದು ಹೇಳಿರುವುದರಿಂದ ಭೀಮನು ವ್ಯಾಸ-ಕೃಷ್ಣರ ಸೇವೆ ಮಾಡಿದನೆಂಬುದೂ ಭಕ್ತರಿಗೆ ಸಕಲಾಭೀಷ್ಟಗಳನ್ನೂ ಕೊಟ್ಟು ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಾನೆಂಬುದೂ ಶ್ರುತಿಯಿಂದಲೂ ಸಿದ್ಧವಾಯಿತು—ಆದಕಾರಣವೇ ಇಲ್ಲಿ 'ತುಭ್ಯಂ ಚ ಕ್ಷೇಮದೇಭ್ಯೋ ನಮೋಸ್ತು' ಎಂದು ವಂದಿಸಿದ್ದಾರೆ.

ಇಲ್ಲಿಗೆ ೨೬ನೇ ಶ್ಲೋಕದ ವಿವರಣೆ ಮುಗಿಯಿತು.

(ಇ) ಕಡೆಯ ಉಪವಿಭಾಗ (೨೭–೨೮ ಶ್ಲೋಕಗಳು)

ಶ್ಲೋಕ ೨೭. ಸೌಗಂಧಿಕಾಪುಷ್ಪಹರಣ–ಹನುಮದ್ದರ್ಶನ

291. ಅವತಾರಿಕೆ (ಪುರಾ.) ಶ್ರೀಕೃಷ್ಣ–ವ್ಯಾಸರೂಪಗಳಿಗೆ ಅಭೇದೋಕ್ತಿ ಪ್ರಸ್ತಾಪ ಮಾಡಿದ್ದರಿಂದ ಪ್ರಸಂಗವಶಾತ್ ಶ್ರೀರಾಮ-ಪರಶುರಾಮರೂಪಗಳಿಗೂ ಹನುಮದ್ಭೀಮರೂಪಗಳಿಗೂ ದ್ವೇಷಾಭಾವವನ್ನು ಹೇಳುತ್ತಾ ಅಭೇದಸಾಧನೆ ಮಾಡುತ್ತಾರೆ. (ಉಡುಪಿ ಪುಸ್ತಕ) 'ಹನುಮಂತನೂ ಭೀಮನೂ ಒಬ್ಬನೇ ಎಂದು ಹೇಳುವುದು ತಪ್ಪು, ಏಕೆಂದರೆ ಭೀಮನು ಹನುಮಂತನಿಗೆ ಸೋತಿದ್ದಾನೆ' ಎಂಬ ಆಕ್ಷೇಪವನ್ನು ಪರಿಹರಿಸುತ್ತಾರೆ. (ಕಕ.ವಿ.ಭ.) ದ್ರೌಪದಿಯ ಪ್ರೀತ್ಯರ್ಥವಾಗಿ ಸೌಗಂಧಿಕಾಪುಷ್ಪವನ್ನು ತರುವುದಕ್ಕೆ ಹೋಗಿದ್ದಾಗ ಭೀಮನು ಮಧ್ಯಮಾರ್ಗದಲ್ಲಿ ಸಿಕ್ಕಿದ ಹನುಮಂತನ ಬಾಲವನ್ನೇ ಎತ್ತಲಾರದೆ ಹೋದನು, ಮತ್ತು ಆ ಹನುಮಂತನು ಭೀಮನನ್ನು ತನ್ನ ದೊಡ್ಡ ರೂಪದಿಂದ ಹೆದರಿಸಿಬಿಟ್ಟನು ಎಂಬಂತೆ ನಟನೆ ಮಾಡಿದ್ದು ವಿದ್ವಾಂಸರಿಗೆ ಸಂತೋಷಪಡಿಸುವುದಕ್ಕಾಗಿಯೂ ಮತ್ತು ದ್ವೇಷಿಗಳಿಗೆ ಮೋಹವನ್ನುಂಟುಮಾಡುವುದಕ್ಕಾಗಿಯೂ ಆಗಿತ್ತು ಎಂದು ಹೇಳುತ್ತಾರೆ.

ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ
ಪುಚ್ಛಮುಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್‌ಸ ತ್ವಮುಮುರುವಪುಷಾ
ಭೀಷಯಾಮಾಸ ಚೇತಿ ।
ಪೂರ್ಣಜ್ಞಾನೌಜಸೋಸ್ತೇ ಗುರುತಮ ವಪುಷೋಃ
ಶ್ರೀಮದಾನಂದತೀರ್ಥ
ಕ್ರೀಡಾಮಾತ್ರಂ ತದೇತತ್ ಪ್ರಮದದ ಸುಧಿಯಾಂ
ಮೋಹಕ ದ್ವೇಷಭಾಜಾಮ್ ॥ ೨೭ ॥

ಪದವಿಭಾಗ—ಗಚ್ಛನ್, ಸೌಗಂಧಿಕಾರ್ಥಂ, ಪಥಿ, ಸಃ, ಹನುಮತಃ, ಪುಚ್ಛಂ, ಉಚ್ಛಸ್ಯ, ಭೀಮಃ, ಪ್ರೋದ್ಧರ್ತುಂ, ನ, ಅಶಕತ್, ಸಃ (ತ್ವಮು-ಮುರು-ಎಂಬಲ್ಲಿ) ತು, ಅಮುಂ, ಉರುವಪುಷಾ, ಭೀಷಯಾಮಾಸ, ಚ, ಇತಿ, ಪೂರ್ಣಜ್ಞಾನೌಜಸೋಃ, ತೇ, ಗುರುತಮ ವಪುಷೋಃ, ಶ್ರೀಮದಾ-ನಂದತೀರ್ಥ, ಕ್ರೀಡಾಮಾತ್ರಂ, ತತ್, ಏತತ್, ಪ್ರಮದದ, ಸುಧಿಯಾಂ, ಮೋಹಕ, ದ್ವೇಷಭಾಜಾಮ್ ॥

292 ಶ್ಲೋಕದ ವಿಶ್ಲೇಷಣೆ— ಈ ಶ್ಲೋಕಕ್ಕೆ ಹರಿಪರವಾಗಿ ಅರ್ಥ ಹೇಳುವಾಗ ಶ್ರೀರಾಮದೇವರು ಸೀತಾದೇವಿಯ ಪಾಣಿಗ್ರಹಣ ಮಾಡಿ ಮಿಥಿಲಾಪಟ್ಟಣದಿಂದ ಅಯೋಧ್ಯಾಪಟ್ಟಣಕ್ಕೆ ಹಿಂದಿರುಗುವಾಗ ಪರಶು-ರಾಮನು ಸೀತಾರಾಮನನ್ನು ಎದುರಿಸಿದನೆಂದೂ ರಾಮನು ಪರಶುರಾಮನನ್ನು ಪರಾಭವಗೊಳಿಸಿದನೆಂದೂ ಪ್ರಸಿದ್ಧವಾಗಿರುವ ಕಥೆಯು ಪ್ರಸಕ್ತವಾಗಿದೆ. ಈ ಅರ್ಥದಲ್ಲಿ 'ಹನುಮತಃ' ಎಂಬುದಕ್ಕೆ 'ಜ್ಞಾನಪೂರ್ಣರಾದ ಶ್ರೀರಾಮದೇವರ' ಎಂದೂ 'ಭೀಮಃ' ಎಂದರೆ ಕ್ಷತ್ರಿಯಕುಲಕ್ಕೆ ಭಯಂಕರರಾದ ಪರಶುರಾಮನೆಂದೂ ಅರ್ಥವಾಗುತ್ತದೆ. ಈ ಶ್ಲೋಕದ ಪೂರ್ವಾರ್ಧದಲ್ಲಿ ಮುಖ್ಯವಾದ ಎರಡು ವಾಕ್ಯಗಳೂ, ಉತ್ತರಾರ್ಧದಲ್ಲಿ ಒಂದು ವಾಕ್ಯವೂ ಇವೆ. ಅದಕ್ಕೆ ಹೀಗೆ ಅನ್ವಯ(ಮುಖ್ಯಭಾಗ ಮಾತ್ರ)—೧) ಪಥಿ ಹನುಮತಃ ಪುಚ್ಛಂ ಭೀಮಃ ಪ್ರೋದ್ಧರ್ತುಂ ನಾಶಕತ್ = ಮಿಥಿಲಾನಗರದಿಂದ ಅಯೋಧ್ಯೆಗೆ ಹಿಂದಿರುಗುವ ದಾರಿಯಲ್ಲಿ ಶ್ರೀರಾಮಚಂದ್ರನನ್ನು ನಿಗ್ರಹಿಸಲು

(ಸೋಲಿಸಲು) ಪರಶುರಾಮನಿಗೆ ಸಾಧ್ಯವಾಗಲಿಲ್ಲ; ೨) ಸಃ ತು ಅಮುಂ ಉರುವಪುಷಾ ಭೀಷಯಾಮಾಸ ಚ-ಆ ರಾಮಚಂದ್ರನು ಇವನನ್ನು (ಪರಶು-ರಾಮನನ್ನು)ವೈಷ್ಣವಧನುಸ್ಸಿನಲ್ಲಿ ಬಾಣಪ್ರಯೋಗ ಮಾಡಿ ಹೆದರಿಸಿಬಿಟ್ಟನು. (ಉತ್ತರಾರ್ಧದಲ್ಲಿ) ೩) ತದೇತತ್ ಕ್ರೀಡಾಮಾತ್ರಂ=ಇವೆರಡೂ ಕೇವಲ ಆಟ-ಅಷ್ಟೇ. ವಾಯುಪರವಾಗಿಯೂ ಅನ್ವಯ ಹೀಗೆಯೇ ಆಗುತ್ತದೆ. ಆದರೆ ಅರ್ಥಮಾತ್ರ ಈ ರೀತಿ ವ್ಯತ್ಯಾಸವಾಗುತ್ತದೆ. ೧) ಭೀಮಸೇನನು ಸೌಗಂಧಿಕಾಪುಷ್ಪಗಳನ್ನು ತರಲು ಹೋಗಿದ್ದಾಗ ದಾರಿಯಲ್ಲಿ ಸಿಕ್ಕಿದ ಹನುಮಂತನ ಬಾಲವನ್ನು ಎತ್ತಲು ಅಸಮರ್ಥನಾದನು. ೨) ಹನುಮಂತನು ಇವನನ್ನು (ಭೀಮನನ್ನು) ದೊಡ್ಡರೂಪ ಧರಿಸಿ ಹೆದರಿಸಿಬಿಟ್ಟನು. ೩) ಇವೆರಡೂ ಕೇವಲ ಆಟವೇ ಹೊರತು ಸತ್ಯವಲ್ಲ. ಇಷ್ಟನ್ನು ನೆನಪಿಟ್ಟು-ಕೊಂಡರೆ ಮಿಕ್ಕ ಭಾಗವೆಲ್ಲ ತನಗೆ ತಾನೇ ಸ್ಪಷ್ಟವಾಗುತ್ತದೆ.

ಹರಿಪರವಾದ ಅರ್ಥವು ಮನಸ್ಸಿಗೆ ಹತ್ತಬೇಕಾದರೆ ತಾತ್ಪರ್ಯ-ನಿರ್ಣಯದ ನಾಲ್ಕನೇ ಅಧ್ಯಾಯದ ಕಡೆಯಲ್ಲಿ (೪೦-೬೨ ಶ್ಲೋ.) ನಿರೂಪಿತ ವಾದ ಕಥಾಭಾಗವು ತಿಳಿದಿರಬೇಕು. ಆದ್ದರಿಂದ ಮೊದಲು ಆ ಕಥೆಯನ್ನೇ ನಿರೂಪಣ ಮಾಡುವೆನು.

293. **ಶ್ರೀರಾಮನು ಪರಶುರಾಮನನ್ನು ಸೋಲಿಸಿದ ಕಥಾ ರಹಸ್ಯ**—ಸೀತಾವಿವಾಹದ ಸಂಭ್ರಮವನ್ನು ಮುಗಿಸಿಕೊಂಡು ಶ್ರೀರಾಮ-ಲಕ್ಷಣರೇ ಮೊದಲಾದ ಸಕಲ ಪರಿವಾರ ಸಮೇತನಾಗಿ ದಶರಥನು ಮಿಥಿಲಾ ಪಟ್ಟಣದಿಂದ ಅಯೋಧ್ಯಾಭಿಮುಖವಾಗಿ ಪ್ರಯಾಣ ಬೆಳೆಸಿದನು. ಮಾರ್ಗ-ಮಧ್ಯದಲ್ಲಿ ಸಹಸ್ರಲಕ್ಷ ಸೂರ್ಯರಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದ ಪರಶುರಾಮನು ಅವರಿಗೆ ಎದುರಾಗಿ ಬಂದನು. ಅವನನ್ನು ಕಂಡು ದಶರಥನಿಗೆ ಜಂಘಾಬಲವೇ ಅಡಗಿಹೋಯಿತು. ಆದರೆ ಪರಶುರಾಮ ಅಲ್ಲಿಗೆ ಬಂದಿದ್ದ ಉದ್ದೇಶವೇ ಬೇರೆ. ರಾಮಚಂದ್ರನಿಗೂ ತನಗೂ ಇರುವ ಅಭೇದವನ್ನು ಲೋಕಕ್ಕೆಲ್ಲಾ ತಿಳಿಸಿಕೊಡುವುದಕ್ಕಾಗಿಯೇ ಅವನು ಅಲ್ಲಿಗೆ ಬಂದಿದ್ದು. ಆದ-ಕಾರಣ ಅವನು ಶ್ರೀರಾಮನನ್ನು ಯುದ್ಧಕ್ಕೆ ಕರೆಯುವಂತೆ ತೋರಿಸುತ್ತಾ ಹೀಗೆ ಹೇಳಿದನು—"ಹೇ ರಾಮಚಂದ್ರ, ನನ್ನ ಈ ಮಾತನ್ನು ಲಾಲಿಸು.

ಹಿಂದೆ ಹರಿಹರರಲ್ಲಿ ಯಾರು ಬಲಿಷ್ಠರೆಂಬುದನ್ನು ಪರೀಕ್ಷಿಸುವುದಕ್ಕಾಗಿ ಎಲ್ಲ ದೇವತೆಗಳೂ ಸೇರಿ ಎರಡು ಮಹಾಧನುಸ್ಸುಗಳನ್ನು ತಯಾರಿಸಿದರು. ಅವುಗಳಲ್ಲಿ ದೊಡ್ಡದನ್ನು ವಿಷ್ಣುವೂ ಚಿಕ್ಕದನ್ನು ಶಿವನೂ ಹಿಡಿದು ಯುದ್ಧಕ್ಕೆ ನಿಂತರು. ಆಗ ಶಂಕರನು ಸರ್ವನಿಯಾಮಕನಾದ ವಿಷ್ಣುವಿನೊಡನೆ ಯುದ್ಧ ಮಾಡುವುದಿರಲಿ, ಅವನ ಎದುರಿಗೆ ಕಣ್ಣು ತೆರೆದು ನಿಲ್ಲುವುದೇ ಅಸಾಧ್ಯವಾಯಿತು. ಅದರಿಂದಲೇ ಎಲ್ಲ ದೇವತೆಗಳಿಗೂ ಶಿವನಿಗಿಂತ ವಿಷ್ಣು ಅಪರಿಮಿತವಾಗಿ ಬಲಶಾಲಿಯೆಂಬುದು ಮನದಟ್ಟಾಗಿ ಹೋಯಿತು. ಕೊನೆಗೆ ಶಂಕರನು ವಿಷ್ಣುವಿಗೆ ನಮಸ್ಕಾರ ಮಾಡಿ ಕೈಲಾಸಕ್ಕೆ ತೆರಳಿದನು. ಹೇ ರಾಮಚಂದ್ರ, ಶಿವನು ಹಿಡಿದು ಯುದ್ಧ ಮಾಡಿದ ಆ ಮಹಾಧನುಸ್ಸೇ ಜನಕನಿಗೆ ತಪಸ್ಸಿನಿಂದ ಪ್ರಾಪ್ತವಾಗಿತ್ತು. ನೀನು ಆ ಶಿವಧನುಸ್ಸನ್ನು ಭಂಗ ಮಾಡಿಯೇ ಜಾನಕಿಯನ್ನು ವರಿಸಿದಿ, ತಿಳಿಯಿತೇ. ಇದೋ ನೋಡು, ನಾನು ಹಿಡಿದಿರುವ ಈ ಮಹಾಧನುಸ್ಸೇ ಆಗ ವಿಷ್ಣು ಹಿಡಿದಿದ್ದ ಮಹಾಧನುಸ್ಸು. ಇದು ಶಿವನ ಆ ಮಹಾಧನುಸ್ಸಿಗಿಂತ ಕೋಟಿಗುಣ ಉತ್ತಮವಾದುದು. ಇದನ್ನು ವಿಷ್ಣುವಲ್ಲದೆ ಬೇರೆ ಯಾರೂ ಧರಿಸಲಾರರು. ನನ್ನ ಧನುಸ್ಸನ್ನು ಈಗ ನಿನಗೆ ಕೊಡುತ್ತೇನೆ, ಹಿಡಿದುನೋಡು. ಇದನ್ನು ನೀನೂ ಹಿಡಿದು ಬಾಣಪ್ರಯೋಗ ಮಾಡಲು ಸಮರ್ಥನಾದರೆ ನೀನು ಸಾಕ್ಷಾದ್ವಿಷ್ಣುವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಧನುಸ್ಸು ಹಿಡಿದು ಬಾಣ ಪ್ರಯೋಗ ಮಾಡು" ಎಂದು ಹೇಳಿ ಶ್ರೀರಾಮನಿಗೆ ತಾನು ಹಿಡಿದಿದ್ದ ಧನುಸ್ಸನ್ನು ಕೊಟ್ಟನು.

ಆಕ್ಷಣ ಶ್ರೀರಾಮನು ಆ ಧನುಸ್ಸನ್ನು ಅನಾಯಾಸವಾಗಿ ಹಿಡಿದುದಲ್ಲದೆ ಬಾಣವನ್ನೂ ಹೂಡಿ "ಈ ಬಾಣವನ್ನು ಯಾರ ಮೇಲೆ ಹೊಡೆಯಲಿ, ಹೇಳು" ಎಂದು ಪರಶುರಾಮನನ್ನು ಕೇಳಿದನು. ಅದಕ್ಕೆ ಪರಶುರಾಮನು ಪುನಃ ಹೀಗೆ ಹೇಳಿದನು— "ಎಲೈ ರಾಮ, ನೀನು ಈ ಮಹಾಧನುಸ್ಸನ್ನು ನಿರಾಯಾಸವಾಗಿ ಹಿಡಿದಿದ್ದರಿಂದಲೇ ನೀನು ಸರ್ವೋತ್ತಮನಾದ ಆ ನಾರಾಯಣನೇ ಆಗಿದ್ದೀಯೆ, ಇದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ. ಇನ್ನು ಹೂಡಿದ ಈ ಬಾಣವನ್ನು ನನ್ನಲ್ಲಿ ಸೇರಿಕೊಂಡಿರುವ ಅತುಲನೆಂಬ ಮಹಾದೈತ್ಯನ ಮೇಲೆ ಹೊಡಿ. ಏಕೆಂದರೆ ಹಿಂದೆ ಈ ದೈತ್ಯನು ಬ್ರಹ್ಮನ ವರದಿಂದ

ಮಹಾಬಲಿಷ್ಠನಾಗಿದ್ದನು. ಅವನಿಗೆ ಬ್ರಹ್ಮನು ಪುನಃ 'ವಿಷ್ಣುವು ಯಾವಾಗ ಸೋಲುವನೋ ಆಗ ನೀನೂ ಸಾಯುವೆ' ಎಂದು ಹೇಳಿದ್ದನು. ಆಗ ಅವನು ಶಿವನ ವರಪ್ರಸಾದದಿಂದ ಅಜೇಯನಾದ ನನ್ನ ಶರೀರಕ್ಕೆ ಬಂದು ಸೇರಿ-ಕೊಂಡನು. ನಾನು ಸ್ವತಃ ಅಜೇಯನಾದರೂ ಈ ದೈತ್ಯನ ವಧಾರ್ಥ ನಿನ್ನಿಂದ ಪರಾಜಿತನಾಗುವೆನು. ಆ ಬಾಣವನ್ನು ಈ ಅಸುರನ ಮೇಲೆ ಬಿಡು" ಎಂದು ಹೇಳಿದನು. ಅದರಂತೆ ರಾಮಚಂದ್ರನು ಬಾಣವನ್ನು ಪರಶುರಾಮನ ಮೇಲೆ ಹೊಡೆದಕೂಡಲೆ ಪರಶುರಾಮನ ಶರೀರದಲ್ಲಿ ಅಡಗಿದ್ದ ಅತುಲನೆಂಬ ಮಹಾಸುರನು ದೇಹದಿಂದ ಹೊರಬಿದ್ದು ರಾಮನ ಬಾಣದಿಂದ ಭಸ್ಮವಾಗಿ ಹೋದನು. ಹೀಗೆ ಮಹಾಸುರನ ಸಂಹಾರಕ್ಕಾಗಿ ಅಜೇಯನಾದ ಪರಶು-ರಾಮನು ತನ್ನ ಸ್ವರೂಪವೇ ಆದ ಶ್ರೀರಾಮನಿಂದ ಪರಾಜಿತನಾದಂತೆ ನಟನೆ ಮಾಡಿದನು.

ಅನಂತರ ಸಮಸ್ತಲೋಕಕ್ಕೂ ತಾನೂ ಶ್ರೀರಾಮನೂ ಒಂದೇ, ಇಬ್ಬರೂ ವಿಷ್ಣುರೂಪಗಳೇ, ಇಬ್ಬರಲ್ಲೂ ಕಿಂಚಿದ್ಭೇದವೂ ಇಲ್ಲವೆಂಬುದನ್ನು 'ಸ್ಪಷ್ಟವಾಗಿ ಪ್ರಕಟಿಸುವುದಕ್ಕಾಗಿ ಸ್ವಲ್ಪ ಹೊತ್ತು ಇಬ್ಬರೂ ಒಂದಾದಂತೆಯೂ ಸ್ವಲ್ಪ ಹೊತ್ತು ಬೇರೆಯಾಗಿದ್ದಂತೆಯೂ ತೋರಿಸಿ ತಾನು ಹಿಡಿದಿದ್ದ ಧನುಸ್ಸನ್ನು ರಾಮನಿಗೇ ಕೊಟ್ಟು ಪರಶುರಾಮನು ಹೊರಟುಹೋದನು. ಇದೇ ತಾತ್ಪರ್ಯನಿರ್ಣಯದಲ್ಲಿ ಹೇಳಿರುವ ಪರಶುರಾಮನು ರಾಮನಿಗೆ ಸೋತ ರಹಸ್ಯದ ಕಥೆ. ಈ ವಿವರಣೆಯಿಂದ ಶ್ರೀರಾಮನೂ ಪರಶುರಾಮನೂ ಇಬ್ಬರೂ ಅಭಿನ್ನರೆಂಬುದೂ ಇಬ್ಬರೂ ವಿಷ್ಣುರೂಪಗಳೇ ಆದರೂ ದೈತ್ಯನ ವಧಾರ್ಥವಾಗಿ ಒಬ್ಬರು ಗೆದ್ದಂತೆಯೂ ಇನ್ನೊಬ್ಬ ಸೋತಂತೆಯೂ ನಟನೆ ಮಾಡಿದರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಅರ್ಥ ಮನವರಿಕೆ ಯಾದರೆ ವಾಯುಸ್ತುತಿಯಲ್ಲಿ ಹೇಳಿರುವ ಪ್ರಮೇಯ ಸ್ಪಷ್ಟವಾಗಿ ಮನಸ್ಸಿಗೆ ಹತ್ತುತ್ತದೆ. ಈಗ ಮೊದಲು ಕಠಿನ ಶಬ್ದಾರ್ಥ ಹೇಳಿ ಅನ್ವಯಾರ್ಥಕ್ಕೆ ಹೋಗುವೆನು.

294. ಕಠಿನ ಶಬ್ದಾರ್ಥ—ಕ) ಗಚ್ಛನ್—ಗಮ್ಲೃ ಗತೌ ಎಂಬ (ಭ್ವಾ.ಪ.) ಧಾತುವಿನ ಶತ್ರಂತ (ವರ್ತಮಾನಕೃದಂತ) ಪುಲ್ಲಿಂಗ ರೂಪ.

ಭೀಮಪಕ್ಷದಲ್ಲಿ ಹೋಗುತ್ತಾ' ಅಥವಾ ಹೋಗುವ ಸಮಯದಲ್ಲಿ ಎಂದರ್ಥವಾಗುತ್ತದೆ. ಹರಿಪಕ್ಷದಲ್ಲಿ 'ಪ್ರಾಪ್ತಃ ಸನ್' = ಹೊಂದಿದವನಾಗಿ, ಎದುರುಗೊಂಡವನಾಗಿ ಎಂದರ್ಥವಾಗುತ್ತದೆ. ೩) ಸೌಗಂಧಿಕಾರ್ಥಂ ಎಂಬುದು ಭೀಮಪಕ್ಷದಲ್ಲಿ ಅವ್ಯಯ; 'ಸೌಗಂಧಿಕಾಯ' (ವಿ.) 'ಸೌಗಂಧಿಕಾಹರಣಾರ್ಥಂ' (ಕಕ.) ಸೌಗಂಧಿಕವೆಂಬ ಪುಷ್ಪಗಳನ್ನು ತರುವುದಕ್ಕಾಗಿ ಎಂದು ತಾದರ್ಥ್ಯದಲ್ಲಿ ಬಳಸಿದೆ. ಬನ್ನಂಜೆ ಗೋವಿಂದಾಚಾರ್ಯರು 'ಸೌಗಂಧಿಕಂ ತು ಕಲ್ಹಾರಂ' ಎಂದು ಅಭಿಧಾನವಿದೆಯೆಂದು ಹೇಳಿ ಕಲ್ಹಾರವೆಂಬ ನೀರಿನಲ್ಲಿ ಬೆಳೆಯುವ ಪುಷ್ಪ ಎಂದು ಸೂಚಿಸಿದ್ದಾರೆ. ಕೌಜಲಗಿ ಬಂಡಾಚಾರ್ಯರು 'ಪಂಚವರ್ಣಾತ್ಮಕವಾದ' ಒಂದು ಸುಗಂಧಮಯವಾದ 'ಕುಸುಮ' ಎನ್ನುತ್ತಾರೆ. ಮಹಾಭಾರತದಲ್ಲಿ ಕುಬೇರನ ತೋಟದಲ್ಲಿ ಬೆಳೆದಿದ್ದ ಸುಗಂಧಮಯವಾದ ಕಮಲದಂತಹ ಪುಷ್ಪ ಎಂದು ಹೇಳಿದೆ. ಮಹಾಭಾರತದ ಕಥೆಯನ್ನೂ ಶ್ರೀಮದಾಚಾರ್ಯರ ತಾತ್ಪರ್ಯನಿರ್ಣಯವನ್ನೂ ಚೆನ್ನಾಗಿ ಓದಿದರೆ ಸೌಗಂಧಿಕಾ ಎಂಬುದು ಎರಡು ವಿಧ ಪುಷ್ಪವೆಂದು ತಿಳಿದುಬರುತ್ತದೆ. ಒಂದು ಪುಷ್ಪ ಉದಯಿಸುತ್ತಿರುವ ಸೂರ್ಯನಂತೆ ಹೊಂಗೆಂಪು ಬಣ್ಣದ್ದು; ಇದು ಗಂಧಮಾದನ ಪರ್ವತದಲ್ಲಿದ್ದ ಕುಬೇರನ ಸರೋವರದಲ್ಲಿ ಬೆಳೆದಿತ್ತು. ಇನ್ನೊಂದು ಸೌಗಂಧಿಕಾ ಪುಷ್ಪ ಪಂಚವರ್ಣದ್ದು. ಇವು ಮೇರುಪರ್ವತದ ಮೇಲ್ಭಾಗದಲ್ಲಿದ್ದ ಕುಬೇರನ ತೋಟದಲ್ಲಿದ್ದ ಕೊಳದಲ್ಲಿ ಬೆಳೆದಿದ್ದುವು. ಈ ಪುಷ್ಪಗಳನ್ನು ರಕ್ಷಿಸುವುದಕ್ಕೆ ಮುನ್ನೂರು ಕೋಟಿ ದೈತ್ಯರು ಮಣಿಮಂತನೆಂಬ ಮಹಾದೈತ್ಯನ ಅಧೀನದಲ್ಲಿ ನಿಯುಕ್ತರಾಗಿದ್ದರು. ಗಂಧಮಾದನ ಪರ್ವತದ ಮೇಲಿದ್ದ ಸುವರ್ಣಬಣ್ಣದ ಸೌಗಂಧಿಕಪುಷ್ಪಗಳನ್ನು ರಕ್ಷಿಸುವುದಕ್ಕೆ ಒಂದು ಲಕ್ಷ ಮಂದಿ ಬೇರೆ ದೈತ್ಯರು ನಿಯುಕ್ತರಾಗಿದ್ದರು. ಭೀಮಸೇನನು ಈ ಎರಡೂ ವಿಧ ಸೌಗಂಧಿಕಾಪುಷ್ಪಗಳನ್ನೂ ದ್ರೌಪದಿಗೆ ತಂದುಕೊಟ್ಟನೆಂದು ಭಾರತದ ಕಥೆಯಿದೆ. ಹೆಚ್ಚಿನ ವಿವರಣೆಗೆ 311-13 ಖಂಡಗಳನ್ನು ನೋಡಿ. ಹರಿಪಕ್ಷದಲ್ಲಿ ಇದು 'ಪುಚ್ಛಂ'ಗೆ ವಿಶೇಷಣವಾಗಿ ಬಹುವ್ರೀಹಿಯಾಗುತ್ತದೆ. ಸೌಗಂಧಿಕಾ ಎಂದರೆ ಸುಗಂಧಮಯಳಾದ ಸೀತಾದೇವಿ ಎಂದು ಅರ್ಥ ಮಾಡಬೇಕು. ಸೌಗಂಧಿಕಾ ಏವ ಅರ್ಥಃ-ಧನಂ

ಯಸ್ಯ ತತ್ ಸೌಗಂಧಿಕಾರ್ಥಂ ಎಂತ ವಿಗ್ರಹ ಮಾಡಿ ಸುಗಂಧಪೂರ್ಣ ದೇಹ-ವುಳ್ಳ ಸೀತಾದೇವಿಯೆಂಬ ಧನವುಳ್ಳಂಥಾ ಅರ್ಥಾತ್ ಸೀತಾ ಸಹಿತರಾದಂಥ ಎಂತರ್ಥ (ಪುರಾ.) ಮತ್ತು (ಪುರಾ.) ಲಕ್ಷ್ಮೀದೇವಿಯನ್ನು 'ಗಂಧದ್ವಾರಾಂ ದುರಾಧರ್ಷಾಂ' – 'ಸರ್ವಾವಯವಗಳೂ ಸುಗಂಧಮಯವಾಗಿರುವ ಮತ್ತು ನಿರ್ಭಯಳಾದ' ಎಂಬ (ಶ್ರೀಸೂಕ್ತ) ಶ್ರುತ್ಯನುಸಾರ ಸುಗಂಧಪೂರ್ಣವಾದ ಶರೀರವುಳ್ಳವಳಾದ ಕಾರಣ ಸೀತಾದೇವಿಗೆ 'ಸೌಗಂಧಿಕಾ' ಶಬ್ದಬೋಧ್ಯತ್ವ ಯುಕ್ತವಾಗಿದೆ. ಗ) ಪಥಿ ಎಂಬುದು ನಕಾರಾಂತಪುಲ್ಲಿಂಗ ಪಥಿನ್ ಶಬ್ದದ ಸಪ್ತಮ್ಯೇಕವಚನರೂಪ; ಇದೊಂದು ವಿಶೇಷ ಶಬ್ದ; ಪಂಥಾಃ । ಪಂಥಾನೌ। ಪಂಥಾನಃ ॥ ಇತ್ಯಾದಿ ವಿಶೇಷ ರೂಪಗಳಾಗುತ್ತವೆ. ಸಪ್ತಮಿಯಲ್ಲಿ ಪಥಿ । ಪಥೋಃ । ಪಥಿಷು ॥ ಎಂದು ರೂಪಗಳು. ಪಥಿ = ಮಾರ್ಗದಲ್ಲಿ, ದಾರಿಯಲ್ಲಿ. ಘ) ಹನುಮತಃ (ಷಷ್ಠ್ಯೇಕವಚನರೂಪ) ಭೀಮಪರವಾಗಿ 'ಹನುಮಂತನ' ಎಂದೇ ಅರ್ಥ. ಹರಿಪರವಾದಾಗ 'ಹನುಶಬ್ದೋ ಜ್ಞಾನ-ವಾಚೀ' (೧೭ನೇ ಶ್ಲೋಕದ ವಿವರಣೆಯಲ್ಲಿ ಖಂಡ 201, ಪು.೩೨೯ ನೋಡಿ) ಎಂಬ ಪ್ರಮಾಣದಂತೆ ಜ್ಞಾನಪೂರ್ಣರಾದ ರಾಮದೇವರ ಎಂದರ್ಥ ಮಾಡ ಬೇಕು. ಙ) ಅಚ್ಛಸ್ಯ ಎಂಬುದು 'ಹನುಮತಃ' ಎಂಬುದಕ್ಕೆ ವಿಶೇಷಣ. ಹನುಮತ್ಪರವಾಗಿ (ಕಕ.ವಿ.) 'ಸ್ವಚ್ಛಸ್ಯ'–ಸ್ವಚ್ಛನಾದ, ಪರಿಶುದ್ಧನಾದ ಎಂದೂ, (ಛ.)ನೈಷ್ಠಿಕ ಬ್ರಹ್ಮಚರ್ಯಾದಿಧರ್ಮೈಃ ಸ್ವಚ್ಛಸ್ಯ–ನೈಷ್ಠಿಕಬ್ರಹ್ಮ-ಚರ್ಯವೇ ಮೊದಲಾದ ವ್ರತಗಳಿಂದ ಪರಿಶುದ್ಧನಾದ ಎಂದರ್ಥ. ರಾಮಪರ ವಾಗಿ ನಿರ್ದೋಷವಾದ ಎಂದರ್ಥ. ಪುಚ್ಛಂ–ಬಾಲವನ್ನು ; ಹರಿಪಕ್ಷದಲ್ಲಿ 'ಬ್ರಹ್ಮಪುಚ್ಛಂ ಪ್ರತಿಷ್ಠಾ' ಎಂಬ ಶ್ರುತ್ಯನುಸಾರ ರಾಮನ ಅವಯವರೂಪ ವಾದ, ತದಭಿನ್ನನಾದ ರಾಮನನ್ನು ಎಂದರ್ಥ.

ಚ) ಭೀಮಃ ಎಂದರೆ ಭಯಂಕರನಾದ ಎಂದರ್ಥವಾಗುವುದರಿಂದ ಹರಿಪಕ್ಷದಲ್ಲಿ ದುಷ್ಟ ಕ್ಷತ್ರಿಯರಿಗೆ ಭಯಂಕರನಾದ ಪರಶುರಾಮನೆಂದು ಅರ್ಥ ಮಾಡಬೇಕು. ಭೀಮಪಕ್ಷದಲ್ಲಿ ಭೀಮಸೇನನೆಂದೇ ಅರ್ಥ. ಛ) ಪ್ರೋದ್ಧರ್ತುಂ (ಪ್ರ+ಉತ್+ಧೃ+ತುಂ) (ಭೀಮಪಕ್ಷದಲ್ಲಿ) ಮೇಲಕ್ಕೆ ಎತ್ತುವುದಕ್ಕೆ ಎಂದೂ (ಹರಿಪರವಾಗಿ) ನಿಗ್ರಹಿಸುವುದಕ್ಕೆ, ಸೋಲಿಸುವುದಕ್ಕೆ

ಎಂದರ್ಥ. ಜ) ನ ಅಶಕತ್—ಶಕಲೃ ಶಕ್ತೌ(ಸ್ವಾ.ಪ.) ಎಂಬ ಧಾತುವಿನ ಲುಙ್ ಪ್ರ.ಪು. ಏಕವಚನರೂಪ. ಅಶಕತ್ । ಅಶಕತಾಂ । ಅಶಕನ್ ಇತ್ಯಾದಿ ರೂಪಗಳು. ಸಮರ್ಥನಾಗಲಿಲ್ಲ, ಸಾಧ್ಯವಾಗಲಿಲ್ಲ ಎಂದರ್ಥ. (ಕಕ.) ಲೃದಿತ್ವಾದಙ್ ಲುಙ್‌ನಲ್ಲಿ ಅಙ್‌ಪ್ರತ್ಯಯ ಬಂದಿದೆ. ಝ) ಉರುವಪುಷಾ (ಕಕ.) ಮಹಾಕಾಯೇನ ಉಪಲಕ್ಷಿತಃ=ಸಮುದ್ರವನ್ನು ದಾಟುವಾಗ ಧರಿಸಿದ್ದಂಥಾ ದೊಡ್ಡ ಆಕಾರವನ್ನು ಧರಿಸಿದವನಾಗಿ–ಎಂದು 'ಇತ್ಥಂ ಭೂತ-ಲಕ್ಷಣಾರ್ಥ'ದಲ್ಲಿ ತೃತೀಯಾ ಬಂದಿದೆ. ಉರು–ದೊಡ್ಡ, ಭಾರಿಯಾದ, ವಪುಃ–ದೇಹ. ಹರಿಪರವಾಗಿ 'ದೊಡ್ಡ (ಕೋಟಿಗುಣ ಅಧಿಕವಾದ) ಆಕಾರ-ವುಳ್ಳ ವಿಷ್ಣುಧನುಸ್ಸಿನಿಂದ' ಎಂದು ಅರ್ಥ ಹೇಳಬೇಕು. ಞ) ಭೀಷಯಾ-ಮಾಸ=ಹೆದರಿಸಿದನು, ಭಯಪಡಿಸಿದನು. 'ಞಿಭೀ ಭಯೇ' (ಜುಹೋ. ಪ.)=ಹೆದರಿಕೆ, ಭಯಪಡು ಎಂಬ ಧಾತುವಿಗೆ 'ಹೇತುಮತಿ ಚ' (ಪಾ. ೩/೧/೨೬) ಎಂಬ ಸೂತ್ರದಂತೆ ಪ್ರೇರಣಾರ್ಥದಲ್ಲಿ ಣಿಚ್ ಪ್ರತ್ಯಯವು ಬರಲು 'ಭಿಯೋ ಹೇತುಭಯೇ ಷುಕ್' (ಪಾ. ೭/೩/೪೦) ಎಂಬ ಸೂತ್ರ ದಂತೆ ಷುಕ್ (ಷ) ಪ್ರತ್ಯಯವೂ ಬಂದಿದೆ (ಕಕ.) ಈ ಕ್ರಿಯೆಯ ಪ್ರಯೋಗ ದಲ್ಲೇ ಒಂದು ಸೂಕ್ಷ್ಮ ವ್ಯಾಕರಣವಿಶೇಷವಿದೆಯೆಂದು ಕಕ. ತೋರಿಸು ತ್ತಾರೆ. 'ವಪುಷಾ' ಎಂಬುದು ಕರಣೇ ತೃತೀಯಾ ಅಲ್ಲ, ಹೇತೌ (ಇತ್ಥಂ-ಭೂತಲಕ್ಷಣೇ) ತೃತೀಯಾ ಎಂದು ತೋರಿಸುತ್ತಾರೆ.

ಟ) ಪೂರ್ಣಜ್ಞಾನೌಜಸೋಃ ವಪುಷೋಃ । (ಕಕ.ವಿ) ಪೂರ್ಣೇ–ಸಂಪೂರ್ಣೇ, ಜ್ಞಾನೌಜಸೀ-ಜ್ಞಾನಬಲೇ, ಯಯೋಸ್ತಯೋರ್ವಪುಷೋಃ–ಅವತಾರಯೋಃ । ಓಜಸ್ ಎಂದರೆ ಬಲ. (ಛ.) 'ಓಜೋ ಬಲಂ ಚ ದೀಪ್ತೌ ಚ' ಇತಿ ವಿಶ್ವಃ । ಪೂರ್ಣವಾದ ಜ್ಞಾನವೂ ಬಲವೂ ಉಳ್ಳ ಅವತಾರ ಗಳಾದ ಎಂದರ್ಥ. ವಾಯು ಶಬ್ದದಲ್ಲಿರುವ ವ-ಕಾರವು ಬಲವಾಚಿ, ವ-ಬಯೋರಭೇದಾತ್ । ಅಯ ಪಯ ಗತೌ ಎಂದು ಧಾತುಪಾಠವಿರುವುದರಿಂದ ಅಯ ಶಬ್ದವು ಜ್ಞಾನವಾಚಿ. ಹನುಮ-ಭೀಮ ಎರಡು ಅವತಾರಗಳಲ್ಲೂ ಜ್ಞಾನವೂ ಬಲವೂ ಎರಡೂ ಅಧಿಕವಾಗಿವೆ (ಪ್ರಾಚುರ್ಯ) ಎಂದು ಭಾವ. (ಮುಂದೆ ಖಂಡ 297 (ಐ) ನೋಡಿ.) ಹರಿಪರವಾಗಿ ರಾಮ-ಪರಶುರಾಮ

ಎರಡು ಅವತಾರಗಳೂ ಒಂದೇ ರೀತಿ ಜ್ಞಾನ-ಬಲೋಪಲಕ್ಷಿತ ಸಕಲ ಗುಣ ಪೂರ್ಣವಾಗಿವೆಯೆಂದರ್ಥ. ಹರಿಪರವಾಗಿ ಅರ್ಥ ಹೇಳುವಾಗ ಗುರುತವು-ವಪುಷೋಃ ಎಂದು ಒಂದೇ ಪದವಾಗಿ ಭಾವಿಸಬೇಕು. ಠ) ಕ್ರೀಡಾ-ಮಾತ್ರಂ=(ಭ.)ಕ್ರೀಡೈವ । 'ಮಾತ್ರಂ ಕಾರ್ತ್ಸ್ನ್ಯೇಽವಧಾರಣೇ' ಇತ್ಯಮರಃ। (ಕಕ.) ಕ್ರೀಡೈವ-ಲೀಲೈವ । ಮಾತ್ರ ಶಬ್ದಕ್ಕೆ ಅವಧಾರಣಾರ್ಥವಿರುವುದರಿಂದ ಕೇವಲ ಲೀಲೆ, ಆಟವೇ ಹೊರತು ಸತ್ಯವಾದ ವಿಚಾರವಲ್ಲ ಎಂದರ್ಥ. ಈ ಕ್ರೀಡೆಗೂ ಎರಡು ಉದ್ದೇಶ ತೋರಿಸುತ್ತಾರೆ— ೧) **ಸುಧಿಯಾಂ ಪ್ರಮುದದ,** ೨) **ದ್ವೇಷಭಾಜಾಂ ಮೋಹಕ.** ೧) ತತ್ವಜ್ಞಾನಿಗಳಿಗೆ ಹೆಚ್ಚು ಆನಂದಪ್ರದ, ೨) ದ್ವೇಷಿಗಳಿಗೆ ಮತ್ತಷ್ಟು ಮೋಹ ಮಾಡುವುದೇ ಇದರ ಪ್ರಯೋಜನ. ಡ) 'ಮೋಹಕ ದ್ವೇಷಭಾಜಾಂ' ಎಂಬ ಅಭಿಪ್ರಾಯವು ಶ್ರೀಮದಾನಂದತೀರ್ಥ ಎಂಬ ಸಂಬೋಧನೆಯಲ್ಲೇ ಅಡಗಿದೆ ಎಂದು ಗು.ಸಾ. ಟೀಕಾಕಾರರು ತೋರಿಸಿದ್ದಾರೆ. ಶ್ರೀಮದಾನಂದ-ತೀರ್ಥ ಎಂಬುದನ್ನು ಶ್ರೀಮದ+ಅನಂದ+ತೀರ್ಥ ಎಂದು ಬಿಡಿಸಿಕೊಳ್ಳಬೇಕು. ಶ್ರೀ-ಸಂಪತ್ತಿನಿಂದ (ವಿದ್ಯಾಧಿಕ್ಯ ಅಥವಾ ಪ್ರೌಢಿಮೆಯ ಬಲದಿಂದ), ಮದ-ಕೊಬ್ಬಿದವರಿಗೆ, ಅನಂದ (ನಂದ ಎಂದರೆ ಸಂತೋಷ, ಆನಂದ, ಅದಕ್ಕೆ ವಿರುದ್ಧವಾದುದು ಅ-ನಂದ-) ದುಃಖವನ್ನು ಕೊಡುವ ಅಥವಾ ದ್ವೇಷವನ್ನು ಹೆಚ್ಚಿಸುವ, ತೀರ್ಥ-ಶಾಸ್ತ್ರವುಳ್ಳವರೇ ! ಎಂದರ್ಥ. ಮಧ್ವಾಚಾರ್ಯರ ಭಾಷ್ಯಗಳಲ್ಲಿ ಹೇಳಿದ ಖಂಡನೆಗಳಿಗೆ ಪ್ರತಿ ಹೇಳುವುದಕ್ಕಾಗದೆ ದೈತ್ಯರು ಒಳಗೊಳಗೇ ಕರುಬುತ್ತಾರೆ ದುಃಖಪಡುತ್ತಾರೆಂದು ಭಾವ. ಈ ಭಾವವನ್ನೇ ಮುಂದೆ ೩೦-೩೧ನೇ ಶ್ಲೋಕಗಳಲ್ಲಿ ವಿಸ್ತರಿಸಿದ್ದಾರೆ. ಢ) **ಯುಕ್ತಿಮಲ್ಲಿಕಾದ ವಿವರಣೆ**— 'ಪ್ರಮುದದ ಸುಧಿಯಾಂ ಮೋಹಕ ದ್ವೇಷ ಭಾಜಾಂ' ಎಂಬ ವಾಕ್ಯಕ್ಕೆ 'ಇಷಿತಸ್ತಿರೋ ರಜಃ । ಸ ಮಧ್ವ ಆ ಯುವತೇ ವೇವಿಜಾನಃ' ಎಂಬ ಶ್ರುತಿ (ಋ. ೯/೭೭/೨)ಯು ಸಮಾಖ್ಯೆ ತೋರಿಸುತ್ತಾರೆ. (ಶ್ರುತಿಯ ಅರ್ಥ) ಸಃ ಮಧ್ವಃ-ಆ ಮಧ್ವಾಚಾರ್ಯರು, ಇಷಿತಃ-ಸಜ್ಜನರಿಗೆ ಇಷ್ಟರಾದವರು. (ಇದರಿಂದ ಪ್ರಮುದದ ಸುಧಿಯಾಂ

ಎಂಬುದು ಸಿದ್ಧಿಸಿತು.) ಅವರು, ರಜಃ-ರಜೋಗುಣ ತಮೋಗುಣ ನಿರ್ಮಿತ ವಾದ ದುಃಶಾಸ್ತ್ರವನ್ನು, ತಿರಃ-ತಿರಸ್ಕರಿಸಿ (ಖಂಡಿಸಿ), ವೇವಿಜಾನಃ- (ವಿಜ್ರ ಪೃಥಗ್ಭಾವೇ ಎಂದು ಧಾತುಪಾಠ) ಪಂಚಭೇದ ತಾರತಮ್ಯಗಳನ್ನು ಸ್ಥಾಪನೆ ಮಾಡಿದವರಾಗಿ; ಆ- (ಸಮಂತಾತ್) ಸರ್ವರೀತಿಯಿಂದಲೂ; ಯುವತೇ- (ಯು ಮಿಶ್ರಣಾಮಿಶ್ರಣಯೋಃ ಎಂದು ಧಾತುಪಾಠವಿರುವುದರಿಂದ) ೧. ಸರ್ವದಾ ಸಜ್ಜನರೊಡನೆ ಮಿಶ್ರಿತರಾಗುತ್ತಾರೆ; ೨. ಅದೇ ರೀತಿ ದ್ವೇಷ ಮಾಡುವ ದುರ್ಜನರಲ್ಲಿ ಬೆರೆಯದೆ ದೂರವಾಗಿರುತ್ತಾರೆ. ಈ ಪ್ರಕಾರ 'ಪ್ರಮದದ ಸುಧಿಯಾಂ, ಮೋಹಕ ದ್ವೇಷ ಭಾಜಾಂ' ಎರಡೂ ಸಿದ್ಧಿಸಿತು. (ಪೂರ್ಣ ಮಂತ್ರದ ಅರ್ಥವನ್ನು ಖಂಡ 333-ಕ ದಲ್ಲಿ ಕೊಟ್ಟಿದೆ. ಣ) ಹೀಗೆಯೇ 'ಗಚ್ಛನ್ ಸೌಗಂಧಿಕಾರ್ಥಂ' ಎಂಬ ವಾಕ್ಯಕ್ಕೆ 'ಅಜೀತಯೇ ಽಹತಯೇ—' (ಋ ೯/೯೬/೪) ಎಂಬ ಶುತ್ರಿಯು ಸಮಾಖ್ಯೆ ಎಂದೂ ತೋರಿಸಿದ್ದಾರೆ. ಈ ಶ್ರುತಿಯ ಅರ್ಥವನ್ನು ಹಿಂದೆಯೇ ಖಂಡ 270 (ಡ)ದಲ್ಲಿ ಹೇಳಿದೆ. ಆ ಋಕ್ಕಿನಲ್ಲಿ 'ಪವಸ್ವ'=ಅಡ್ಡಾಡು, ಓಡಾಡು ಎಂಬ ಕ್ರಿಯೆ ಇರುವುದರಿಂದ ಅದರ ವಿವರಣೆಯೇ 'ಗಚ್ಛನ್ ಸೌಗಂಧಿಕಾರ್ಥಂ' (ಈ ಶ್ಲೋಕದಲ್ಲಿ), 'ಬಹ್ವೀಃ ಕೋಟೀರಟೀಕಃ' (ಮುಂದಿನ ಶ್ಲೋಕದಲ್ಲಿ) ಮುಂತಾದ ವಾಕ್ಯಗಳು. ಈ ಶ್ರುತಿಯಲ್ಲೂ 'ಅಜೀತಯೇ ಅಹತಯೇ ಸ್ವಸ್ತಯೇ' ಎಂಬ ಪದಗಳು 'ಪ್ರಮದದ ಸುಧಿಯಾಂ, ಮೋಹಕ ದ್ವೇಷ-ಭಾಜಾಂ' ಎಂಬುದನ್ನು ಸಮರ್ಥಿಸುತ್ತವೆ.

295. ಹರಿಪರವಾಗಿ ಅನ್ವಯ—ಸುಧಿಯಾಂ ಪ್ರಮದದ! ದ್ವೇಷ-ಭಾಜಾಂ ಮೋಹಕ! ಶ್ರೀಮದಾನಂದತೀರ್ಥ! ಭೀಮಃ ಸಃ ಅಚ್ಛಸ್ಯ ಹನುಮತಃ ಸೌಗಂಧಿಕಾರ್ಥಂ ಪುಚ್ಛಂ ಪಥಿ ಗಚ್ಛನ್, ಪ್ರೋದ್ಧರ್ತುಂ ನಾಶಕತ್ । ಸಃ ತು ಅಮುಂ ಉರುವಪುಷಾ ಭೀಷಯಾಮಾಸ ಚ । ಇತಿ ತದೇತತ್ ತೇ ಪೂರ್ಣಜ್ಞಾನೌಜಸೋಃ ಗುರುತಮವಪುಷೋಃ ಕ್ರೀಡಾ-ಮಾತ್ರಮ್ ॥

ಹರಿಪರವಾಗಿ ಅರ್ಥ ಸುಧಿಯಾಂ (ಸು=ಸಮೀಚೀನವಾದ, ಒಳ್ಳೆಯ ಧೀ=ಬುದ್ಧಿಯುಳ್ಳ)-ಸದ್ಬುದ್ಧಿಯುಳ್ಳ ಸಜ್ಜನರಿಗೆ; ಪ್ರಮದದ-

(ಪ್ರ-ಉತ್ಕೃಷ್ಟವಾದ, ಮುದ-ಹರ್ಷವನ್ನು, ದ-ಕೊಡುವ) ಹೆಚ್ಚು ಸಂತೋಷವನ್ನುಂಟು ಮಾಡುವಂಥಾ; ದ್ವೇಷಭಾಜಾಂ-ದ್ವೇಷ ಮಾಡುವಂಥಾ ದುರ್ಜನರಿಗೆ; ಮೋಹಕ-ಅನ್ಯಥಾಜ್ಞಾನಜನಕನಾದಂಥಾ; ಶ್ರೀಮತ್-ಆನಂದ-ತೀರ್ಥ-(ಶ್ರೀಮತ್) ಸಂಪತ್ತುಳ್ಳ ಬ್ರಹ್ಮಾದಿಗಳಿಗೆ (ಆನಂದ) ಸ್ವರೂಪಾನಂದಾವಿರ್ಭಾವಕ್ಕೆ (ತೀರ್ಥ) ಕಾರಣನಾದಂಥಾ ಹೇ ಶ್ರೀಹರಿಯೇ! ಭೀಮಃ =(ದುಷ್ಟಕ್ಷತ್ರಿಯರಿಗೆ) ಭಯಂಕರನಾದ, ಸಃ-ಆ ಪರಶುರಾಮನು; ಅಚ್ಛಸ್ಯ-ನಿರ್ದೋಷನಾದ; ಹನುಮತಃ = ಜ್ಞಾನಪೂರ್ಣನಾದ; ಸೌಗಂಧಿಕಾರ್ಥಂ-ಸುಗಂಧಪೂರ್ಣವಾದ ದೇಹವುಳ್ಳ ಸೀತಾದೇವಿಯ ಸಮೇತನಾದ; ಪುಚ್ಛಂ-ಪುಚ್ಛಾಖ್ಯ ಅವಯವಭೂತನಾದ ಶ್ರೀರಾಮಚಂದ್ರನನ್ನು; ಪಥಿ-(ಮಿಥಿಲಾಪಟ್ಟಣದಿಂದ ಅಯೋಧ್ಯೆಗೆ ಹೋಗುವ) ಮಾರ್ಗದಲ್ಲಿ; ಗಚ್ಛನ್ (ಸನ್) = ಹೊಂದಿದವನಾಗಿ (ಎದುರುಗೊಂಡು); ಪ್ರೋದ್ಧರ್ತುಂ-ಅವನನ್ನು ನಿಗ್ರಹಿಸುವುದಕ್ಕೆ (ಸೋಲಿಸುವುದಕ್ಕೆ), ನ ಅಶಕತ್-ಸಮರ್ಥನಾಗಲಿಲ್ಲ. ಸಃ ತು-ಆ ಶ್ರೀರಾಮಚಂದ್ರನಾದರೋ, ಅಮುಂ =(ಹಿಂದೆ ಪ್ರಸಕ್ತನಾದ) ಈ ಪರಶುರಾಮನನ್ನು; ಉರು-ವಪುಷಾ- (ರಾಮದೇವರ ಪರೀಕ್ಷಾರ್ಥ ಪರಶುರಾಮನು ಅವನ ಕೈಗೆ ಕೊಟ್ಟ) ದೊಡ್ಡ(ಎಂದರೆ ಕೋಟಿಗುಣ ಉತ್ತಮವಾದ) ಆಕಾರವುಳ್ಳ ಧನುಸ್ಸಿನ ನೆಪಮಾಡಿ; ಭೀಷಯಾಮಾಸ ಚ = ಹೆದರಿಸಿಯೂ ಬಿಟ್ಟನು. ಇತಿ ತದೇತತ್-ಹೀಗೆಂಬ ಏನು ಜನಗಳ ಹೇಳಿಕೆ ಇದೆಯೋ ಅದು; ತೇ = ನಿನ್ನ (ಶ್ರೀಹರಿಯ); ಪೂರ್ಣ-ಜ್ಞಾನೌಜಸೋಃ-ಅಪರಿಚ್ಛಿನ್ನವಾದ ಜ್ಞಾನಾನಂದಬಲಾದಿಸ್ವರೂಪವುಳ್ಳ; ಗುರುತಮ ವಪುಷೋಃ-ಅತಿ ಶ್ರೇಷ್ಠವಾದ ಅವತಾರಭೂತರಾದ ರಾಮಚಂದ್ರ-ಪರಶುರಾಮರೆಂಬ ಎರಡು ರೂಪಗಳ; ಕ್ರೀಡಾಮಾತ್ರಂ-ಕೇವಲ ಆಟವು, (ನಟನೆಯೇ ಹೊರತು ವಾಸ್ತವಿಕವಾದ ಸಂಗತಿಗಳಲ್ಲ) ಎಂದು ಭಾವ.

ಹರಿಪರವಾಗಿ ಭಾವಾರ್ಥ— ಭಗವಂತ ಶ್ರೀಮನ್ನಾರಾಯಣನ ವ್ಯಾಪಾರಗಳು ಅಚಿಂತ್ಯಾದ್ಭುತವಾಗಿರುತ್ತವೆ, ಆದರಿಂದ ಅವುಗಳ ರಹಸ್ಯವನ್ನು ಅರಿತುಕೊಳ್ಳುವುದು ಸಾಮಾನ್ಯರಿಗೆ ದುಸ್ತರವೇ ಆಗಿದ್ದು ಶ್ರೀಮದಾಚಾರ್ಯರಂತಹ ಜ್ಞಾನಿಗಳು ತಿಳಿಸಿಕೊಡದಿದ್ದರೆ ನಾಸ್ತವಿಕ ಸಂಗತಿ ಅರ್ಥವಾಗುವುದೇ

ಇಲ್ಲ. ಶ್ರೀರಾಮನು ಪರಶುರಾಮನನ್ನು ಭೇಟಿಯಾಗಿ ರಾಮನಿಂದ ಪರಾಜಿತನಾದನೆಂಬ ಸಂಗತಿಯೂ ಇಂತಹುದೇ ಆದ ವಿಚಿತ್ರವಾದ ಅದ್ಭುತ ಸಂಗತಿ. ತಾತ್ಪರ್ಯನಿರ್ಣಯ ಓದದವರಿಗೆ ಈ ರಹಸ್ಯ ಅರಿವಾಗುವ ಸಂಭವವೇ ಇಲ್ಲ. ಏಕೆಂದರೆ ಶ್ರೀರಾಮನೂ ಪರಶುರಾಮನೂ ಇಬ್ಬರೂ ವಿಷ್ಣುವಿನ ದಶಾವತಾರಗಳ ಪ್ಕೈಕಿಯೇ ಆಗಿದ್ದರೂ ಇಬ್ಬರೂ ಪರಸ್ಪರ ಭೇದ-ರಹಿತರಾಗಿದ್ದರೂ ಭಿನ್ನ ಭಿನ್ನರಾಗಿಯೇ ಕಾಣಿಸುತ್ತಿದ್ದರು; ಶ್ರೀರಾಮ ಕ್ಷತ್ರಿಯನೂ ಚಿಕ್ಕವಯಸ್ಸಿನವನೂ ಆಗತಾನೇ ಜಾನಕೀಸಮೇತನೂ ಆಗಿದ್ದರೆ ಪರಶುರಾಮ ಬ್ರಾಹ್ಮಣನೂ (ಋಷಿಯೂ) ವಯಸ್ಸಾದವನೂ ಒಬ್ಬಂಟಿಗನೂ ಕೋಪಿಷ್ಠನೂ ಆಗಿದ್ದಂತೆ ಕಾಣಿಸುತ್ತಿದ್ದನು. ಪರಶುರಾಮ ರಾಮನ ಶಕ್ತಿಯನ್ನು ಪರೀಕ್ಷಿಸುವನೋ ಎಂಬಂತೆ ಅವನನ್ನು ಯುದ್ಧಕ್ಕೆ ಕರೆಯುತ್ತಾ 'ನಿನಗೆ ಶಕ್ತಿಯಿದ್ದರೆ ಈ ಧನುಸ್ಸು ಹಿಡಿದು ನನ್ನ ಮೇಲೆ ಬಾಣ ಹೊಡಿ, ನೋಡೋಣ' ಎನ್ನುತ್ತಾನೆ. ರಾಮನೂ ಸಹ ಧನುಸ್ಸಂಧಾನ ಮಾಡಿ ಬಾಣ ಹೊಡದೇಬಿಡುತ್ತಾನೆ, ಪರಶುರಾಮನು ಸೋತೂ ಹೋಗುತ್ತಾನೆ. ಆದರೆ ಇದೆಲ್ಲ ಪರಶುರಾಮನಲ್ಲಿ ಅಡಗಿಕೊಂಡಿದ್ದ ಅತುಲನೆಂಬ ಮಹಾಸುರನ ವಧೆಗಾಗಿ ಹೂಡಿದ ಆಟವೇ ಹೊರತು ಎರಡು ವಿಷ್ಣುರೂಪಗಳ ನಡುವೆ ಸೋಲು-ಗೆಲುವು ಎಂಬ ಮಾತೆಲ್ಲಿದೆ? ಪರಶುರಾಮ ಧನುಸ್ಸು ಕೊಟ್ಟದ್ದಾದರೂ ಶ್ರೀರಾಮ ಸಾಕ್ಷಾದ್ವಿಷ್ಣುವೆಂದು ಪ್ರಕಟಿಸುವುದಕ್ಕಾಗಿಯೇ ಹೊರತು ಸ್ಪರ್ಧೆಯ ಸಲುವಾಗಿ ಅಲ್ಲವೆಂಬುದು ತಾತ್ಪರ್ಯನಿರ್ಣಯದ ವಿವರಣೆಯಿಂದ ತಿಳಿಯುತ್ತದೆ.

ಇರಲಿ. ಹೀಗೆಲ್ಲಾ ಏಕೆ ಆಟವಾಡಬೇಕು? ಎಂದು ಕೇಳಿದರೆ ಅವನು ಲೀಲಾಮಾನುಷವಿಗ್ರಹ, ಅವನು ಸ್ವತಂತ್ರಮೂರ್ತಿಯೆಂಬುದನ್ನು ಸಜ್ಜನ-ರಿಗೆ ತೋರಿಸಿಕೊಟ್ಟು ಒಂದು ಕಡೆ ಅವರ ಆನಂದವನ್ನು ಹೆಚ್ಚಿಸಿದರೆ ಇನ್ನೊಂದು ಕಡೆ ಹರಿದ್ವೇಷಿಗಳನ್ನು ಮೋಹಗೊಳಿಸಿ ಅವರು ನಿಂದಿಸಿ-ನಿಂದಿಸಿ ಸಾಧನೆ ಸಂಪೂರ್ತಿಯಾಗುವುದಕ್ಕಾಗಿಯೂ ಮಾಡುತ್ತಾನೆ. ಇದೂ ಅವನ ಸತ್ಯಸಂಕಲ್ಪವೆಂದೇ ತಿಳಿಯಬೇಕೆಂದು ಪಂಡಿತಾಚಾರ್ಯರು ಈ ಶ್ಲೋಕದಲ್ಲಿ ತೋರಿಸಿಕೊಡುತ್ತಾರೆ.

296. ವಾಯುಪರವಾಗಿ ಅನ್ವಯ—ಸೌಗಂಧಿಕಾರ್ಥಂ ಗಚ್ಛನ್ ಸಃ ಭೀಮಃ ಪಥಿ ಅಚ್ಛಸ್ಯ ಹನುಮತಃ ಪುಚ್ಛಂ ಪ್ರೋದ್ಧರ್ತುಂ ನಾಶಕತ್, ಉರುವಪುಷಾ ಸಃ (ತು) ಅಮುಂ ತು ಭೀಷಯಾಮಾಸ ಚ; ಇತಿ ತದೇತತ್ ಸುಧಿಯಾಂ ಪ್ರಮದದ, ದ್ವೇಷಭಾಜಾಂ ಮೋಹಕ, ಗುರುತಮ ಶ್ರೀಮದಾನಂದತೀರ್ಥ ! ತೇ ಪೂರ್ಣಜ್ಞಾನೌಜಸೋಃ ವಪುಷೋಃ ಕ್ರೀಡಾಮಾತ್ರಮ್॥ (ಸೂಚನೆ- 'ಉರುವಪುಷಾ ಭೀಷಯಾಮಾಸ' ಎಂದು ವಿಶ್ವಪತಿತೀರ್ಥರೂ ಛಲಾರಿಯವರೂ ಅನ್ವಯ ಮಾಡಿದ್ದಾರೆ; ಆದರೆ ಹಾಗೆ ಮಾಡಿದರೆ ಕರಣೇ ತೃತೀಯಾ ಎಂದಾಗಿ 'ಭೀಷಯಾಮಾಸ' ಎಂಬ ರೂಪ ಸಿದ್ಧಿಸುವುದಿಲ್ಲ ಎಂದು ಕ. ಕ. ವ್ಯಾಖ್ಯಾನಕಾರರೂ ಅದರ ಸಂಪಾದಕರಾದ ಶ್ರೀ ಬನ್ನಂಜೆ-ಗೋವಿಂದಾಚಾರ್ಯರೂ ತೋರಿಸಿಕೊಡುತ್ತಾರೆ. ಆದಕಾರಣ ಕಕ.ವನ್ನು ಅನುಸರಿಸಿ ಉರುವಪುಷಾ ಎಂಬುದನ್ನು 'ಸಃ' ಎಂಬುದಕ್ಕೇ ಮೊದಲೇ ಅನ್ವಯ ಮಾಡಿದೆ.)

ವಾಯುಪರವಾಗಿ ಅನ್ವಯಾರ್ಥ— ಸೌಗಂಧಿಕಾರ್ಥಂ-ಕುಬೇರನ ಹೂದೋಟದಲ್ಲಿ ಬೆಳೆದಿದ್ದ ಕಮಲಸದೃಶವಾದ ಪಂಚವರ್ಣದ ಹೂವುಗಳನ್ನು ತರುವುದಕ್ಕಾಗಿ, ಗಚ್ಛನ್-(ಕುಬೇರನ ಹೂದೋಟಕ್ಕೆ) ಹೋಗುತ್ತಾ; ಸಃ ಭೀಮಃ-ಆ ಭೀಮಸೇನನು; ಪಥಿ-ದಾರಿಯಲ್ಲಿ (ಅಡ್ಡಲಾಗಿ ಸಿಕ್ಕಿದ); ಅಚ್ಛಸ್ಯ=ನೈಷ್ಠಿಕಬ್ರಹ್ಮಚರ್ಯಾದಿ ಧರ್ಮಗಳಿಂದ ಪರಿಶುದ್ಧನಾಗಿದ್ದ; ಹನುಮತಃ-ಹನುಮಂತನ; ಪುಚ್ಛಂ-ಬಾಲವನ್ನು; ಪ್ರೋದ್ಧರ್ತುಂ-ಎತ್ತಿಡು-ವುದಕ್ಕೆ; ನಾಶಕತ್-ಸಮರ್ಥನಾಗಲಿಲ್ಲ. ಉರುವಪುಷಾ-(ಸಮುದ್ರವನ್ನು ದಾಟುವಾಗ ಧರಿಸಿದ್ದಂತಹ) ಭಾರೀ ಶರೀರವುಳ್ಳವನಾಗಿ; ಸಃ (ತು)-ಆ ಹನುಮಂತನು; ಅಮುಂ-ಈ ಭೀಮಸೇನನನ್ನು; ತು (ಭ.) (ವಿಶೇಷೇಣ)-ಹೆಚ್ಚಾಗಿ (ತುಂಬಾ); ಭೀಷಯಾಮಾಸ ಚ=ಹೆದರಿಸಿಯೂ ಬಿಟ್ಟನು; ಇತಿ=ಎಂಬ; ತದೇತತ್-ಈ ಸಂಗತಿಯೆಲ್ಲವೂ; ಸುಧಿಯಾಂ-ತತ್ವಜ್ಞಾನವನ್ನು ತಿಳಿದ ಸಜ್ಜನರಿಗೆ; ಪ್ರ-ಮದ-ದ-ಹೆಚ್ಚು ಸಂತೋಷವನ್ನು ಕೊಡತಕ್ಕವನೂ; ದ್ವೇಷಭಾಜಾಂ-ದ್ವೇಷ ಮಾಡುವ ದುರ್ಜನರಿಗೆ; ಮೋಹಕ=ಮೋಹವನ್ನುಂಟುಮಾಡುವವನೂ ಆದ; ಗುರುತಮ-ಸರ್ವೋತ್ತಮ ಗುರು-ಗಳಾದ; ಶ್ರೀಮದಾನಂದತೀರ್ಥ=ಹೇ ಶ್ರೀಮನ್ಮಧ್ವಾಚಾರ್ಯರೇ !

ತೇ–ನಿಮ್ಮ ; ಪೂರ್ಣಜ್ಞಾನೌಜಸೋಃ–ಪೂರ್ಣವಾದ ಜ್ಞಾನಬಲವುಳ್ಳ ; ವಪುಷೋಃ–ಅವತಾರಗಳಾದ ಹನುಮ-ಭೀಮರ ; ಕ್ರೀಡಾಮಾತ್ರಂ–ಕೇವಲ ಕ್ರೀಡೆಯೇ ಆಗಿದೆ.

ಮುಖ್ಯ ತಾತ್ಪರ್ಯ—(ಪುರಾ.) ಸೀತಾವಿವಾಹಾನಂತರ ಅಯೋಧ್ಯೆಗೆ ಹೋಗುವ ಮಾರ್ಗದಲ್ಲಿ ಶ್ರೀರಾಮನಿಗೂ ಪರಶುರಾಮನಿಗೂ ನಡೆದ ಕಲಹವೂ, ಸೌಗಂಧಿಕಾಹರಣಾರ್ಥ ಹೋಗುವ ಮಾರ್ಗದಲ್ಲಿ ಶ್ರೀಹನುಮದ್ಭೀಮರ ನಡುವೆ ಜರುಗಿದ ವಿವಾದವೂ ಕೂಡ ಸಜ್ಜನರಿಗೆ ಸಂತೋಷಕರವೂ ಮತ್ತು ದುರ್ಜನ ಮೋಹಕವೂ ಆದ ಲೀಲಾಮಾತ್ರವಾದಕಾರಣ ಶ್ರೀರಾಮ-ಪರಶುರಾಮರಿಗೂ ಹನುಮದ್ಭೀಮರಿಗೂ ಸ್ವರೂಪದಲ್ಲಿ ಅಭೇದವೇ ಜ್ಞಾತವ್ಯವು.

ಈ ಶ್ಲೋಕದ ವಾಯುಪರವಾದ ಭಾವಾರ್ಥವು ಮಂದಟ್ಟಾಗಬೇಕಾದರೆ ಇದಕ್ಕೆ ಸಂಬಂಧಿಸಿದ ಮಹಾಭಾರತ ಕಥಾಭಾಗವು ತಿಳಿದಿರಬೇಕು. ಆದಕಾರಣ ಮೊದಲು ಆ ಕಥೆಯನ್ನು ಹೇಳಿ ಕೊನೆಗೆ ಭಾವಾರ್ಥಕ್ಕೆ ಹೋಗುವೆನು. ಭೀಮನು ಸೌಗಂಧಿಕ ಪುಷ್ಪವನ್ನು ತರಲು ಹೋದ ಕಥೆಯೂ ಅಲ್ಲಿ ಹನುಮಂತನೊಡನೆ ವಿವಾದ ನಡೆದ ಕಥೆಯೂ ಶ್ರೀಮನ್ಮಹಾಭಾರತದ ವನ-ಪರ್ವದ ೧೪೮ರಿಂದ ೧೫೫ ವರೆಗಿನ ಎಂಟು ಅಧ್ಯಾಯಗಳಲ್ಲಿ ಅಡಗಿದೆ; ಭೀಮನಿಗೂ ಆಂಜನೇಯನಿಗೂ ನಡೆದ ಸಂವಾದವು ೧೪೯ನೇ ಅಧ್ಯಾಯದಲ್ಲಿ ವರ್ಣಿತವಾಗಿದೆ. ಮತ್ತು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸೌಗಂಧಿಕಾಹರಣ ವೃತ್ತಾಂತವು ಇಪ್ಪತ್ತೆರಡನೇ ಅಧ್ಯಾಯದ ೨೮ರಿಂದ ೬೨ರ ವರೆಗಿನ ಸುಮಾರು ಮೂವತ್ತೇಳು ಶ್ಲೋಕಗಳಲ್ಲಿ ನಿರೂಪಿತವಾಗಿದೆ. ಭೀಮಾಂಜನೇಯರ ಭೇಟಿಯ ವಿಚಾರವು ೨೯ರಿಂದ-೩೮ರ ವರೆಗಿನ ಎಂಟು ಶ್ಲೋಕಗಳಲ್ಲೇ ಸಂಗ್ರಹಿಸಲ್ಪಟ್ಟಿದೆ. ಭಾರತದ ಕಥೆ ಬಹುವಿಸ್ತಾರವಾದ್ದರಿಂದ ತಾತ್ಪರ್ಯನಿರ್ಣಯದಲ್ಲಿ ಹೇಳಿದ ವಿಷಯಗಳನ್ನೇ ಹೆಚ್ಚು ಗಮನಿಸಿ ಹನುಮ-ದ್ಭೀಮ ಸಂವಾದದ ಕಥೆಯನ್ನು ಕೆಳಗೆ ಕೊಟ್ಟಿದೆ.

297 (ಕ) ಹನುಮ-ಭೀಮರಿಗೆ ನಡೆದ ಸಂವಾದ—ವನವಾಸದ ಕಡೆಗಾಲದಲ್ಲಿ ತೀರ್ಥಯಾತ್ರೆ ಮಾಡುತ್ತಾ ಸಂಚಾರ ಹೊರಟ ಪಾಂಡವರು ಹಿಮವತ್ಪರ್ವತ ಪ್ರದೇಶದಲ್ಲೆಲ್ಲಾ ಸುತ್ತಾಡಿ ಕೊನೆಗೆ ನರನಾರಾಯಣಾ-

ಶ್ರಮಕ್ಕೆ (ಚಿಕ್ಕ ಬದರೀಕ್ಷೇತ್ರಕ್ಕೆ) ಬಂದು ನರ-ನಾರಾಯಣರ ಸೇವೆ ಮಾಡುತ್ತಾ ಅಲ್ಲೇ ಕೆಲವು ದಿವಸ ತಂಗಿದರು. ಈ ಮಧ್ಯೆ ಒಂದು ದಿನ ಭೀಮಸೇನ ದ್ರೌಪದಿಯೊಡನೆ ಏಕಾಂತದಲ್ಲಿದ್ದಾಗ ಸುಗಂಧಮಯವಾದ ದಿವ್ಯವಾದ ಒಂದು ಸೌಗಂಧಿಕವೆಂಬ ಪುಷ್ಪವು ಆಕಸ್ಮಾತ್ತಾಗಿ ಅವರಿಬ್ಬರ ಮಧ್ಯೆ ಹಾರಿಬಿತ್ತು (ಮಹಾ ಭಾ.ವನಪ. ೧೪೬ ಅ. ೮ ಶ್ಲೋ.). ಗರುಡ ಒಂದು ಸರ್ಪವನ್ನು ಎತ್ತಿಕೊಂಡು ಹಾರಿಹೋಗುವ ರಭಸದಲ್ಲಿ ಅವನ ರೆಕ್ಕೆಗೆ ಸಿಕ್ಕಿಕೊಂಡಿದ್ದ ಈ ಹೂವು ಗಾಳಿಯಿಂದ ಹಾರಿ ಕೆಳಗೆ ಬಿತ್ತು. ಅದರ ಘಮಘಮಿಸುವ ಸುವಾಸನೆಗೂ ದಿವ್ಯವಾದ ಅದರ ಆಕರ್ಷಣೀಯವಾದ ಕೆಂಪು ವರ್ಣಕ್ಕೂ ಬೆರಗಾದ ದ್ರೌಪದಿಯು ಭೀಮಸೇನನನ್ನು ಇನ್ನೂ ಅನೇಕ ಅಂತಹವೇ ಆದ ಹೂವುಗಳನ್ನು ತನಗೆ ತಂದುಕೊಡಬೇಕೆಂದು ಪ್ರಾರ್ಥಿಸಿದಳು. ಆ ಪುಷ್ಪಗಳು ಕುಬೇರನ ಸೌಗಂಧಿಕವನವೆಂಬ ಹೂದೋಟದಲ್ಲಿದ್ದುದರಿಂದ (ವನಪ. ೮೨ ಅ., ೪ ಶ್ಲೋ.) ಭೀಮನು ಆ ಸೌಗಂಧಿಕವನವನ್ನು ಹುಡುಕಿಕೊಂಡು ಹೊರಟನು (ವನಪ. ೧೪೬ ಅ.).

ಸ್ವಲ್ಪ ದೂರ ಹೋದಮೇಲೆ ದಾರಿಯಲ್ಲಿ ಒಂದು ಭಾರಿ ಕಪಿ ಬಾಲ ಅಡ್ಡ ಹಾಕಿಕೊಂಡು ಮಲಗಿದ್ದುದನ್ನು ಕಂಡನು. ಅವನೇ ರಾಮದೂತನಾದ ಹನುಮಂತ. ಆ ಹನುಮಂತ ತ್ರೇತಾಯುಗದವನಾದ್ದರಿಂದ ಆ ಯುಗದ ಧರ್ಮಕ್ಕೆ ತಕ್ಕಂತೆ ಬೃಹದಾಕಾರದವನಾಗಿದ್ದನು. ಭೀಮಸೇನ ದ್ವಾಪರ ಯುಗದವನಾದ್ದರಿಂದ ಅದಕ್ಕೆ ಅನುಗುಣವಾಗಿ ಚಿಕ್ಕವನಾಗಿ ಕಾಣಿಸುತ್ತಿದ್ದನು. ಭೀಮನೂ ಹನುಮಂತನೂ ವಾಯುಪುತ್ರರೇ ಆಗಿ ಒಂದೇ ಆಗಿದ್ದರೂ ಜನಮೋಹನಾರ್ಥವಾಗಿ ಹನುಮಂತ ಭೀಮನಿಗೆ ದಾರಿ ಬಿಡಲೇ ಇಲ್ಲ. ಭೀಮನು ಸರ್ವಜ್ಞನಾದಾಗ್ಯೂ ಅಜ್ಞನಂತೆ ಆ ಹನುಮಂತನಿಗೆ ತನ್ನ ಪರಿಚಯ ಹೇಳಿ 'ನೀನು ಯಾರು? ಇಲ್ಲೇಕೆ ಮಲಗಿದ್ದೀಯೆ? ಏಳು, ನನಗೆ ದಾರಿ ಬಿಡು' ಎಂದು ಕೇಳಿಕೊಂಡನು. ಅದಕ್ಕೆ ಹನುಮಂತ ತಾನೂ ಅಜ್ಞನಂತೆ ನಟಿಸುತ್ತಾ ತಾನು ರಾಮದೂತನಾದ ಹನುಮಂತನೆಂದೂ ಬಹಳ ವೃದ್ಧನಾದುದರಿಂದ ಏಳಲಾರೆನೆಂದೂ ಬಾಲವನ್ನು ಎತ್ತಿಟ್ಟು ದಾರಿ ಬಿಡಿಸಿಕೊಂಡು ಹೋಗೆಂದೂ ಹೇಳಿದನು. ಅದರಂತೆ ಭೀಮನು ಹನುಮಂತನ

ಬಾಲವನ್ನು ಎತ್ತಲು ಪ್ರಯತ್ನಿಸಿ ಸಾಧ್ಯವಾಗದೆ ಬಿಟ್ಟನು. ಆಗ ಹನುಮಂತನೇ ತನ್ನ ಬಾಲವನ್ನು ಸುತ್ತಿಕೊಂಡು ಭೀಮನಿಗೆ ಶತಕೋಟಿ ರಾಮಾಯಣವನ್ನೂ ನಾಲ್ಕು ಯುಗಗಳ ಧರ್ಮವನ್ನೂ ಬೋಧಿಸಿದನು. ಕುತೂಹಲಾವಿಷ್ಟನಾದ ಭೀಮ ಹನುಮಂತನನ್ನು ಸೀತಾನ್ವೇಷಣ ಸಮಯ ದಲ್ಲಿ ಧರಿಸಿದ್ದಂಥಾ ಬೃಹದ್ರೂಪವನ್ನು ತೋರಿಸುವಂತೆ ಪ್ರಾರ್ಥಿಸಿದನು. ಹನುಮಂತನು ಅದರಂತೆ ಮಹಾಕಾಯರೂಪ ತೋರಿಸಲು ಭೀಮ ಅದಕ್ಕೆ ಅಂಜಿದಂತೆ ತನ್ನ ತಮ್ಮನಾದ ಅರ್ಜುನನ ಧ್ವಜದಲ್ಲಿ ಬಂದಿರುವಂತೆಯೂ ಗರ್ಜನೆಯಿಂದ ಶತ್ರುಗಳನ್ನು ಪರಾಭವಗೊಳಿಸುವಂತೆಯೂ ಆಂಜನೇಯನನ್ನು ಪ್ರಾರ್ಥಿಸಿಕೊಂಡನು. ಹನುಮಂತ ಒಪ್ಪಿಗೆ ಕೊಡಲು ಅವನಿಗೆ ನಮಸ್ಕಾರ ಮಾಡಿ ಮುಂದೆ ಹೊರಟನೆಂಬುದು ಭಾರತದಲ್ಲಿ ನಿರೂಪಿತವಾದ ಕಥೆ (ವನಪರ್ವ ೧೪೯ ಅಧ್ಯಾಯ).

(ಖ) **ತಾತ್ಪರ್ಯನಿರ್ಣಯದ ವಿವರಣೆ** — ಹನುಮಂತನೂ ಭೀಮನೂ ವಾಯುದೇವರೇ ಆದರೂ ಇಬ್ಬರೂ ಅಜ್ಞರಂತೆಯೇ ನಡೆದು-ಕೊಂಡದ್ದಾಗಲಿ ಒಬ್ಬನು ಸ್ಥೂಲಕಾಯನೂ ಇನ್ನೊಬ್ಬನು ತದಪೇಕ್ಷಯಾ ಚಿಕ್ಕವನಾಗಿದ್ದುದಾಗಲಿ ವಿಸ್ಮಯಜನಕವಾದ ಸಂಗತಿಗಳಲ್ಲ. ಏಕೆಂದರೆ ಶ್ರುತಿ ಗಳು ಹೇಳುವಂತೆ 'ಪರೋಕ್ಷಪ್ರಿಯಾ ಇವ ಹಿ ದೇವಾಃ' ದೇವತೆಗಳು ಮನುಷ್ಯ ರಾಗಿ ಅವತಾರ ಮಾಡಿದಾಗ ಮನುಷ್ಯರಂತೆಯೇ ವರ್ತಿಸುತ್ತಾರೆಯೇ ವಿನಾ ಅವರು ತಮ್ಮ ಮೂಲರೂಪದ ಶಕ್ತ್ಯಾದಿಗಳನ್ನಾಗಲಿ ಜ್ಞಾನವನ್ನಾಗಲಿ ಪ್ರಕಟಿಸುವುದಿಲ್ಲ, ಅದೇ ಅವರಿಗೆ ಪ್ರಿಯ:—

ಧರ್ಮೋ ದೇವಾನಾಂ ಪರಮೋ ಮಾನುಷತ್ವೇ
ಸ್ವೀಯೇ ರೂಪೇऽಪ್ಯನ್ಯವದೇವ ವೃತ್ತಿಃ । (ತಾ.ನಿ. ೨೨/೨೯೨)

ದೇವತೆಗಳು ಮನುಷ್ಯರಾಗಿ ಅವತಾರ ಮಾಡಿದಾಗ ಮನುಷ್ಯರಂತೆ ನಡೆದು-ಕೊಳ್ಳುವುದೇ ಅವರಿಗೆ ಪರಮಧರ್ಮ. ತಮ್ಮ ರೂಪವನ್ನೇ ಕಂಡರೂ ಸಹ ಬೇರೆ ರೂಪ ಕಂಡರೆ ಹೇಗೆ ನಡೆದುಕೊಳ್ಳಬೇಕೋ ಹಾಗೆಯೇ ವರ್ತಿಸುತ್ತಾರೆ. ಅದರ ಜೊತೆಗೆ—

ಸರ್ವೇ ಗುಣಾ ಆವೃತಾ ಮಾನುಷತ್ವೇ

ಯುಗಾನುಸಾರಾನ್ಮೂಲರೂಪಾನುಸಾರಾತ್ (ಅಲ್ಲೇ. ೨೯೪ ಶ್ಲೋ.) ಮನುಷ್ಯರೂಪಕ್ಕೆ ತಕ್ಕಂತೆ ಯುಗಕ್ಕೆ ಅನುಗುಣವಾಗಿ ರೂಪಾದಿ ಸಕಲಗುಣ ಗಳೂ ಅಭಿವ್ಯಕ್ತವಾಗದೆ ಗುಪ್ತವಾಗುತ್ತವೆ. ಆದ್ದರಿಂದಲೇ ಭೀಮನೂ ಹನುಮಂತನೂ ಭೇಟಿಯಾದಾಗ ಒಬ್ಬರನ್ನೊಬ್ಬರು ಗುರುತಿಸುವುದಕ್ಕೆ ಪ್ರತಿ ಯಾಗಿ 'ಸ್ವೀಯೇ ರೂಪೇಽಪ್ಯನ್ಯವದ್ ವೃತ್ತಿಮೇವ । ಪ್ರದರ್ಶಯಾಮಾಸ, ತದಾಸುರಾಣಾಂ ಮೋಹಾಯೈವಾಶಕ್ತವಚ್ಛಕ್ತರೂಪಃ' (ಅಲ್ಲೇ, ೨೯೬) ಇಬ್ಬರೂ ಅಪರಿಚಿತರಂತೆಯೇ ನಡೆದುಕೊಂಡರು, ಒಬ್ಬ ಮಹಾಸಮರ್ಥ-ನಂತೆಯೂ ಇನ್ನೊಬ್ಬನು ಅಸಮರ್ಥನಂತೆಯೂ ತೋರಿಸಿಕೊಂಡರು. ಹೀಗೆಲ್ಲಾ ಆಟವಾಡುವುದು ಅಸುರರ ಮೋಹಾರ್ಥವಾಗಿ ಎಂದು ಶ್ರೀಮದಾಚಾರ್ಯರು ಸ್ಪಷ್ಟವಾಗಿ ನುಡಿದಿದ್ದಾರೆ. ಇದನ್ನು ಅನುಸರಿಸಿಯೇ ಪಂಡಿತಾಚಾರ್ಯರು ಮೋಹಕ ದ್ವೇಷಭಾಜಾವ್ ಎಂದು ಹೇಳಿದ್ದಾ ರೆಂಬುದು ವಿಶೇಷತಃ ಗಮನಾರ್ಹ ವಿಷಯ. ಈ ಬಗ್ಗೆ ಗು.ಸಾ.ಟೀಕೆಯಲ್ಲಿ ಬಹುವಿಸ್ತಾರವಾದ ವಿವರಣೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಮುಖ್ಯ ಅಂಶಗಳನ್ನು ಮಾತ್ರ ಆರಿಸಿ ಕೆಳಗೆ ಕೊಟ್ಟಿದ್ದೇನೆ.

(ಗ) ಅವತಾರಗಳ ಧರ್ಮರಹಸ್ಯ—ಮನುಷ್ಯಲೋಕದಲ್ಲಿ ಮನುಷ್ಯ ರಂತೆ ಅವತಾರ ಮಾಡಿದಾಗ ಶ್ರೀಹರಿಯೇ ಆಗಲಿ, ಲಕ್ಷ್ಮೀದೇವಿಯೇ ಆಗಲಿ ವಾಯುದೇವರೇ ಆಗಲಿ ಮಿಕ್ಕ ದೇವತೆಗಳೇ ಆಗಲಿ ಮನುಷ್ಯರಂತೆಯೇ ವರ್ತಿಸಬೇಕೇ ವಿನಾ ತಾವು ದೇವತೆಗಳೆಂಬುದನ್ನು ಸಾಮಾನ್ಯವಾಗಿ ಪ್ರಕಟಿಸ-ಬಾರದೆಂಬುದೇ ಅವತಾರದ ರಹಸ್ಯ. ಅದೇ ಅವರಿಗೆ ಧರ್ಮ. 'ಪೂರ್ಣಮದಃ ಪೂರ್ಣಮಿದಂ' ಎಂಬ ಶ್ರುತ್ಯನುಸಾರ (ಬೃ.ಉಪ. ೭/೧/೧) ಶ್ರೀಹರಿಗೆ ಮಾತ್ರ ಮೂಲರೂಪಕ್ಕೂ ಅವತಾರರೂಪಗಳಿಗೂ ಈಷನ್ಮಾತ್ರ ಭೇದವೂ ಇಲ್ಲ. ಆದರೂ ಕೂಡ ಆ ಶ್ರೀಹರಿಯೂ ಸಹ ರಾಮಕೃಷ್ಣಾದ್ಯವತಾರ ಗಳನ್ನು ಧರಿಸಿದಾಗ ಮನುಷ್ಯರಂತೆಯೇ ನಡೆದುಕೊಂಡದ್ದು ಪ್ರಸಿದ್ಧಿಯಿದೆ. ರಾಮನಾದಾಗ ವಿಶ್ವಾಮಿತ್ರನ ಶಿಷ್ಯನಾದದ್ದು, ಸೀತೆಗಾಗಿ ಹುಡುಕಾಡಿದ್ದು-ವಿಲಾಪ ಮಾಡಿದ್ದು ರಾವಣನನ್ನು ಕೊಲ್ಲಲು ಕಪಿಗಳ ಸಹಾಯ ಪಡೆದದ್ದು

ಮೊದಲಾದುವು ಪ್ರಸಿದ್ಧವಾಗಿವೆ. ಕೃಷ್ಣನಾಗಿ ಬಲರಾಮನ ತಮ್ಮನಂತೆ ವರ್ತಿಸಿದ್ದು, ಬೆಣ್ಣೆ ಕದ್ದದ್ದು, ಗೋವುಗಳನ್ನು ಕಾದುದು ಎಲ್ಲವೂ ಮನುಷ್ಯ-ಧರ್ಮಗಳು. ಕೃಷ್ಣ, ವೇದವ್ಯಾಸ, ಪರಶುರಾಮ ಮೂವರೂ ವಿಷ್ಣುರೂಪಗಳೇ ಆದರೂ ಕ್ಷತ್ರಿಯ-ಬ್ರಾಹ್ಮಣಾದಿ ವರ್ಣದಿಂದ ಮಾತ್ರವಲ್ಲದೆ ವ್ಯವಹಾರದಲ್ಲೂ ಮೂವರೂ ಬೇರೆ ಬೇರೆಯಾಗಿ ವರ್ತಿಸಿದರೇ ವಿನಾ ಎಲ್ಲರೂ ಒಂದೇ ಎಂಬು ದನ್ನು ತೋರಗೊಡಲಿಲ್ಲ. ಶ್ರೀಹರಿಯ ವಿಷಯವೇ ಹೀಗಿರುವಾಗ ಮಿಕ್ಕ ದೇವತೆಗಳೂ ಈ ಧರ್ಮಕ್ಕೆ ಒಳಪಟ್ಟಿದ್ದಾರೆಂದು ಹೇಳುವುದೇನಿದೆ? ಈ ಧರ್ಮಕ್ಕೆ ಒಳಪಟ್ಟಿದ್ದರಿಂದಲೇ ಹನುಮಂತನಾಗಲಿ ಭೀಮನಾಗಲಿ ತಾವಿಬ್ಬರೂ ಒಂದೇ ಎಂಬುದನ್ನು ತೋರಗೊಡಲಿಲ್ಲ. ಇಬ್ಬರೂ ವಾಯುಪುತ್ರರೇ ಎಂದು ಹೇಳಿಕೊಳ್ಳುತ್ತಾರಾದರೂ ಹನುಮಂತ ಅಣ್ಣನಂತೆಯೂ ಭೀಮನು ತಮ್ಮ-ನಂತೆಯೂ ವರ್ತಿಸಿದರು.

ಘ) ಅವತಾರ ಮೂಲರೂಪದಂತಲ್ಲ—ಶ್ರೀಹರಿಯನ್ನು ಬಿಟ್ಟರೆ ಮಿಕ್ಕ ಯಾವ ದೇವತೆಗಳಿಗೂ ಅವತಾರದಲ್ಲಿ ಮೂಲರೂಪದ ಪೂರ್ಣ ಗುಣಗಳೂ ಶಕ್ತಿಜ್ಞಾನಾದಿಗಳೂ ಪೂರ್ಣವಾಗಿ ಇರುವುದಿಲ್ಲ. ಆ ಪೈಕಿ ವಾಯುದೇವರ ಶಕ್ತಿಯೇ ಬೇರೆ, ಮಿಕ್ಕ ದೇವತೆಗಳ ಶಕ್ತಿಯೇ ಬೇರೆ. ವಾಯುದೇವರನ್ನು ಬಿಟ್ಟು ಮಿಕ್ಕ ರುದ್ರಾದಿ ದೇವತೆಗಳಲ್ಲೇ ಉತ್ತಮರ ವಿಚಾರವೇ ಬೇರೆ, ಅವರರ (ಕೆಳಗಿನ ದರ್ಜೆಯ ದೇವತೆಗಳ) ವಿಚಾರವೇ ಬೇರೆ. ಉತ್ತಮ ದೇವತೆಗಳು ಅವತಾರ ಎತ್ತಿದಾಗ ಅವತಾರದಲ್ಲಿ ಅವರ ಮೂಲರೂಪದ ಹೆಚ್ಚು ಗುಣಗಳು ತಿರೋಹಿತವಾಗಿ (ಮುಚ್ಚಿಹೋಗಿ) ಸ್ವಲ್ಪ ಭಾಗ ಮಾತ್ರ ಅನುಭವಕ್ಕೆ ಬರುತ್ತದೆ. ಕೆಳಗಿನ ದೇವತೆಗಳಾದರೆ ತಿರೋ ಹಿತವಾದ ಭಾಗವೇ ಹೆಚ್ಚು, ಪ್ರಕಟವಾದ ಭಾಗ ಬಹಳ ಕಡಿಮೆಯಾಗಿರುತ್ತದೆ. ಉತ್ತಮದೇವತೆಗಳಿಗೆ ಆವಶ್ಯಕತೆ ಬಿದ್ದಾಗ ಮಾತ್ರ ಮೂಲರೂಪದ ಶಕ್ತಿ ಯನ್ನು ತೆಗೆದುಕೊಳ್ಳುವ ಸಾಮರ್ಥ್ಯವಿರುತ್ತದೆ, ಕೆಳಗಿನ ದೇವತೆಗಳಿಗೆ ಆ ಶಕ್ತಿಯೂ ಇರುವುದಿಲ್ಲ. ಇದು ಒಂದು ಧರ್ಮವಿಶೇಷ.

ಒಬ್ಬನೇ ದೇವತೆ ಬೇರೆ ಬೇರೆ ಯುಗಗಳಲ್ಲಿ ಅವತಾರ ಮಾಡಿದರೆ ಯುಗಧರ್ಮಕ್ಕೆ ಅನುಗುಣವಾಗಿ ಅವನ ಗುಣಗಳೂ ಹೆಚ್ಚು ಹೆಚ್ಚು ತಿರೋ-

ಭಾವವನ್ನು ಹೊಂದುತ್ತವೆ. ಕೃತಯುಗಕ್ಕಿಂತ ತ್ರೇತಾಯುಗದಲ್ಲಿ ಹೆಚ್ಚು ಭಾಗ ಮರೆಹೊಂದಿದರೆ ದ್ವಾಪರಯುಗದಲ್ಲಿ ಮತ್ತಷ್ಟು ಕಡಿಮೆಯಾಗುತ್ತದೆ. ಕೃತಯುಗದಲ್ಲಿ ಮನುಷ್ಯರ ಎತ್ತರ ೨೮ ಹಸ್ತ (ಸುಮಾರು ೪೨ ಅಡಿ) ಇದ್ದರೆ, ತ್ರೇತೆಯಲ್ಲಿ ೧೪ ಹಸ್ತವೂ (ಸುಮಾರು ೨೧ ಅಡಿಗಳೂ), ದ್ವಾಪರದಲ್ಲಿ ೭ ಹಸ್ತವೂ (ಸು. ೧೧ ಅಡಿಯೂ) ಕಲಿಯುಗದಲ್ಲಿ ಮೂರುವರೆ ಹಸ್ತವೂ (ಸುಮಾರು ಐದೂವರೆ ಆರು ಅಡಿಗಳೂ) ಇರುತ್ತದೆ. ಇದರಂತೆ ಹನುಮ ತ್ರೇತಾಯುಗದವನೂ ಭೀಮ ದ್ವಾಪರದವನೂ ಆದ್ದರಿಂದ ಸ್ವಾಭಾವಿಕವಾಗಿಯೇ ಅವರ ವೈಕಟ್ಟಿನಲ್ಲೇ ವ್ಯತ್ಯಾಸ ಇರುವುದು ಸಹಜವಾಗಿದೆ. ಆದ್ದರಿಂದ ಭೀಮ ಹನುಮಂತನನ್ನು ತನ್ನ 'ಅಣ್ಣ'ನೆಂದು ಹೇಳಿಕೊಂಡನೇ ಹೊರತು ತಾವಿಬ್ಬರೂ ಒಂದೇ ಎಂಬುದನ್ನು ತೋರಗೊಡಲಿಲ್ಲ.

ಇ) **ವಾಯುದೇವರ ವಿಶೇಷ ಶಕ್ತಿ**—ರುದ್ರಾದಿ ಉತ್ತಮದೇವತೆಗಳಿಗೂ ಸಹ ಅವತಾರದಲ್ಲಿ ವಿಶೇಷಕಾರಣವಿಲ್ಲದೆ ಮೂಲರೂಪದ ಶಕ್ತಿಯನ್ನು ಗ್ರಹಣಮಾಡುವ ಅಧಿಕಾರವಿಲ್ಲ. ಆದರೆ ಮುಖ್ಯಪ್ರಾಣದೇವರಿಗೆ ಮಾತ್ರ ಹಾಗಿಲ್ಲ—

ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯ
ತದನ್ಯೇಷಾಂ ವ್ಯಕ್ತತಾ ಕಾರಣೇನ ॥ (ತಾ.ನಿ. ೨೨/೫೯೮)

ವಾಯುದೇವರಿಗೆ ಮಾತ್ರ ಯಾವ ಅವತಾರದಲ್ಲಿ ಯಾವಾಗ ಬೇಕಾದರೂ ಮೂಲರೂಪದ ಪೂರ್ಣ-ಬಲಜ್ಞಾನಾದಿಗುಣಗಳನ್ನು ಪಡೆಯಬಹುದು; ಹಾಗೆ ಮೂಲರೂಪದ ಗುಣಗಳು ವ್ಯಕ್ತವಾಗುವುದು ಅವರ ಇಚ್ಛಾಧೀನ. ಇದನ್ನು ಲಕ್ಷಿಸಿಯೇ ಶ್ರೀಮದ್ವಾದಿರಾಜರು ಮಧ್ವಾಚಾರ್ಯರಲ್ಲಿ ಮೂಲರೂಪದ ಪೂರ್ಣಬಲಜ್ಞಾನಗಳು ಇವೆಯೆಂದು ಯುಕ್ತಿಮಲ್ಲಿಕಾದಲ್ಲಿ ಹೇಳಿದ್ದಾರೆ. ಹನುಮ-ಭೀಮ ಅವತಾರಗಳನ್ನು ಲಕ್ಷಿಸಿ ಪಂಡಿತಾಚಾರ್ಯರು 'ಪೂರ್ಣಜ್ಞಾನೌಜಸೋಸ್ತೇ....ವಪುಷೋಃ' ಎಂದು ಹೇಳಿದ್ದಾರೆ. ಮಧ್ವಾಚಾರ್ಯರು ಕಲಿಯುಗದಲ್ಲಿ ಅವತಾರ ಮಾಡಿದ್ದರಿಂದ ನ್ಯಾಯವಾಗಿ ಅವರಲ್ಲಿ ಜ್ಞಾನ-ಭಕ್ತ್ಯಾದಿ ಹೆಚ್ಚು ಗುಣಗಳು ತಿರೋಭಾವ ಹೊಂದಬೇಕಾಗಿತ್ತು. ಆದರೆ ಅವರು ಜ್ಞಾನಕಾರ್ಯ ಸಾಧಿಸಬೇಕಾದ್ದರಿಂದ ಜ್ಞಾನಭಕ್ತ್ಯಾದಿ ಗುಣಗಳೆಲ್ಲ

ಪ್ರಕಟವಾಗುವಂತೆ ಸ್ವೇಚ್ಛೆಯಿಂದ ಆ ಗುಣಗಳನ್ನು ಉದ್ದೀಪ್ತಮಾಡಿಕೊಂಡಿದ್ದರು ಎಂಬ ಪ್ರಮೇಯ ಸೂಚಿಸುವುದಕ್ಕಾಗಿಯೇ ಕವಿಕುಲಶಿಖಾಮಣಿಗಳು ಅವರನ್ನು 'ಗುರುತಮ ಶ್ರೀಮದಾನಂದತೀರ್ಥ !' ಎಂದು ಸಂಬೋಧಿಸಿದ್ದಾರೆ. ರುದ್ರಾದಿ ಎಲ್ಲ ದೇವತೆಗಳಿಗೂ ದೈತ್ಯಾವೇಶವೂ ಕಿಂಚಿದಜ್ಞಾನವೂ ಉಂಟು ; ವಾಯುದೇವರ ಅವತಾರವಾದ್ದರಿಂದ ಶ್ರೀಮದಾಚಾರ್ಯರಿಗೆ ಅಜ್ಞಾನವಾಗಲಿ ದೈತ್ಯಾವೇಶವಾಗಲಿ ಇಲ್ಲ ; ಆದ್ದರಿಂದಲೇ ಅವರು ಗುರುತಮರು. (ಈ ವಿಷಯವನ್ನು ಮುಂದೆ ೩೬ನೇ ಶ್ಲೋಕಕ್ಕೆ ವ್ಯಾಖ್ಯಾನಮಾಡುವಾಗ ಸ್ಪಷ್ಟಪಡಿಸುವೆವು.)

298 (ಕ) ವಾಯುಪರವಾಗಿ ಭಾವಾರ್ಥ—ಮಹಾಭಾರತದ ವನಪರ್ವದಲ್ಲಿ ಹನುಮಂತನಿಗೂ ಭೀಮನಿಗೂ ಭೇಟಿಯಾದ ಕಥೆಯೂ ಅವರಿಬ್ಬರಿಗೂ ನಡೆದ ಸಂವಾದದ ವಿವರವೂ ನಿರೂಪಿತವಾಗಿದೆ. ಅದು ಈ ರೀತಿ ಇದೆ—ಭೀಮನು ಸೌಗಂಧಿಕಾಪುಷ್ಪವನ್ನು ತರಲು ಹೊರಟದ್ದಾಗ ದಾರಿಯಲ್ಲಿ ಬಾಲ ಚಾಚಿಕೊಂಡು ಮಲಗಿದ್ದ ಹನುಮಂತನನ್ನು ಕಂಡು ತನಗೆ ದಾರಿ ಬಿಡುವಂತೆ ಹೇಳಿದನು. ಅದಕ್ಕೆ ಹನುಮಂತ 'ನಾನು ತುಂಬ ವೃದ್ಧನಾಗಿದ್ದೇನೆ, ನೀನೇ ಬಾಲ ಸರಿಸಿ ದಾರಿ ಮಾಡಿಕೋ' ಎಂದು ಉತ್ತರಕೊಟ್ಟನು. ಅದನ್ನು ಕೇಳಿ ಭೀಮ ಬಾಲ ಸರಿಸಲು ಹೋದನು. ಆದರೆ ತಾನು ಸ್ವತಃ ಮಹಾಬಲಶಾಲಿಯಾದರೂ ಎಷ್ಟು ಪ್ರಯತ್ನ ಪಟ್ಟರೂ ಭೀಮನಿಗೆ ಹನುಮಂತನ ಬಾಲ ಎತ್ತಲು ಸಾಧ್ಯವಾಗಲಿಲ್ಲ. ಹನುಮಂತ ಸಮುದ್ರ ಲಂಘನ ಮಾಡಿದ್ದ ವಿಚಾರವನ್ನು ಅವನಿಂದ ಕೇಳಿ ಅವನ ಆ ಬೃಹದ್ರೂಪವನ್ನು ತನಗೆ ತೋರಿಸಬೇಕೆಂದು ಭೀಮ ಕೇಳಿಕೊಂಡನು. ಆಂಜನೇಯನು ಧರಿಸಿದ ಆ ಅದ್ಭುತರೂಪವನ್ನು ನೋಡಿ ಭೀಮ ಹೆದರಿಕೊಂಡುಬಿಟ್ಟನು. ಅನಂತರ ಹನುಮಂತನನ್ನು ಅರ್ಜುನನ ಧ್ವಜದಲ್ಲಿ ಬಂದು ನೆಲಸುವಂತೆ ಪ್ರಾರ್ಥಿಸಿಕೊಂಡು ಅವನಿಗೆ ವಂದಿಸಿ ಭೀಮ ಮುಂದೆ ನಡೆದನೆಂದು ಆ ಕಥೆ ಇದೆ. ಕಥೆ ಹೀಗಿದ್ದರೂ ಒಳಗಿನ ರಹಸ್ಯವೇ ಬೇರೆ ಇದೆ. ಏಕೆಂದರೆ ಹನುಮ ಭೀಮ ಎರಡೂ ಪೂರ್ಣಜ್ಞಾನಸ್ವರೂಪರೂ ಪೂರ್ಣಬಲಾತ್ಮಕರೂ ಆದ ವಾಯುದೇವರ ಅವತಾರಗಳೇ ಆಗಿದ್ದರೂ ಅವತಾರಧರ್ಮವನ್ನು ಅನುಸರಿಸಿ

ಅವರಿಬ್ಬರೂ ಹಾಗೆ ತೋರಿಸಿದರು. ಹಾಗೆ ಅವರಿಬ್ಬರೂ ಬೇರೆ ಬೇರೆ ಇದ್ದಂತೆ ಕಂಡದ್ದು ನಿಜವಾದರೂ ವಾಸ್ತವಿಕವಾಗಿ ಅವರಿಬ್ಬರೂ ಸಮಾನರೇ ಆಗಿದ್ದಾರೆ. ಹೀಗೇಕೆ ಮಾಡಿದರು? ಎಂದರೆ ಅಸುರಜನಮೋಹನಾರ್ಥವಾಗಿ ಎಂದು ಉತ್ತರ. ಇದಕ್ಕೆ ಪ್ರತಿಯಾಗಿ ತತ್ವಜ್ಞಾನಿಗಳಾದ ವಿವೇಕಶಾಲಿಗಳು ವಾಯುದೇವರ ಈ ಮಹಿಮೆಯನ್ನು ನೆನೆನೆನೆದು ಆನಂದಪುಲಕಿತರಾಗುತ್ತಾರೆಂಬುದೇ ಈ ಶ್ಲೋಕದ ವಾಯುಪರವಾದ ಭಾವಾರ್ಥ.

(ಖ) ವಾಸಿಷ್ಠರಾಮಾಯಣದ ಸಮಾಖ್ಯೆ—ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳಿರುವ ವಿಚಾರವೇ ವಾಸಿಷ್ಠರಾಮಾಯಣದ ಈ ಶ್ಲೋಕಗಳಿಂದಲೂ ತಿಳಿದುಬರುತ್ತದೆಯೆಂದು ತೋರಿಸುತ್ತಾ ಛಲಾರೀ ವ್ಯಾಖ್ಯಾನಕಾರರು ಆ ಶ್ಲೋಕಗಳನ್ನು ಉದ್ಧರಿಸಿದ್ದಾರೆ. ಆ ಶ್ಲೋಕಗಳನ್ನೇ ಅರ್ಥಸಹಿತ ಕೆಳಗೆ ಕೊಟ್ಟಿದ್ದೇನೆ—

ಅಷ್ಟಾವಿಂಶೇ ದ್ವಾಪರೇ ತು ಕದಾಚಿತ್ ಸ್ವೇಚ್ಛಯಾ ಹರಿಃ ।
ಗಂಧಮಾದನಮಾಸಾದ್ಯ ಶಿಶ್ಯೇ ಕದಲಿಕಾವನೇ ॥ ೧ ॥

(ತಾತ್ಪರ್ಯ) ಇಪ್ಪತ್ತೆಂಟನೇ ದ್ವಾಪರಯುಗದಲ್ಲಿ ಒಂದು ಸಾರಿ ಶ್ರೀಹರಿಯು ಎಂದರೆ ಶ್ರೀಕೃಷ್ಣನು ಸ್ವೇಚ್ಛೆಯಿಂದ ಗಂಧಮಾದನ ಪರ್ವತಕ್ಕೆ ಹೋಗಿ ಅಲ್ಲಿ ಕದಲೀ (ಬಾಳೆ) ವನದಲ್ಲಿ ಮಲಗಿಕೊಂಡನು.

ತದಾ ದ್ಯೂತಜಿತಾಃ ಪಾರ್ಥಾ ವನವಾಸಾಯ ದೀಕ್ಷಿತಾಃ ।
ವನೇಷು ವಿಚರಂತೋ ವೈ ತೀರ್ಥಯಾತ್ರಾಂ ಪ್ರಚಕ್ರಿರೇ ॥ ೨ ॥

ಆಗ ಪಗಡೆಜೂಜಿನಲ್ಲಿ ಸೋತ ಪಾಂಡವರು ಶರ್ತಿನಂತೆ ವನವಾಸ ಮಾಡುತ್ತಾ ಕಾಡುಗಳಲ್ಲಿ ಸಂಚರಿಸುತ್ತಾ ತೀರ್ಥಯಾತ್ರೆ ಹೊರಟರು.

ಚರಂತಃ ಸರ್ವತೀರ್ಥಾನಿ ತೇ ಕ್ರಮಾದ್ ಗಂಧಮಾದನಮ್ ।
ಯಯುರ್ಧೌಮ್ಯೇನ ಸಹಿತಾ ದ್ರೌಪದ್ಯಾ ಸಹಿತಾ ಗಿರಿಮ್ ॥ ೩ ॥

ಅವರು ಸಕಲ ತೀರ್ಥಗಳನ್ನೂ ಸಂದರ್ಶಿಸುತ್ತಾ ಪುರೋಹಿತರಾದ ಧೌಮ್ಯರ ಸಹಿತವಾಗಿಯೂ ದ್ರೌಪದೀಸಮೇತರಾಗಿಯೂ ಮಾರ್ಗಕ್ರಮವಾಗಿ ಗಂಧಮಾದನ ಪರ್ವತಕ್ಕೆ ಬಂದರು.

ತತ್ರ ಸೌಗಂಧಿಕಂ ಪುಷ್ಪಂ ಪಾಂಚಾಲೀ ಭೀಮಮಿಷ್ಟದಮ್ ।
ಪ್ರಣಯಾತ್ ಪ್ರಾರ್ಥಯಾಮಾಸ ಜಾನಂತೀ ತತ್ಪರಾಕ್ರಮಮ್ ॥೪॥

ಅಲ್ಲಿ ದ್ರೌಪದಿಯು ಸೌಗಂಧಿಕಪುಷ್ಪವನ್ನು ಕಂಡು ಪ್ರೇಮಭರದಿಂದ ತನಗೆ ಪ್ರಿಯನಾದ ಭೀಮನನ್ನು ಅವನ ಪರಾಕ್ರಮವನ್ನು ತಿಳಿದವಳಾದ ಕಾರಣ ಅಂತಹ ಪುಷ್ಪಗಳನ್ನು ತಂದುಕೊಡಲು ಪ್ರಾರ್ಥಿಸಿದಳು.

ತಯಾ ಸ ಚೋದಿತೋ ವೀರೋ ಭೀಮಸೇನೋ ಮಹಾಬಲಃ ।
ಜಗಾಮ ಪುಷ್ಪಾಣ್ಯಾಹರ್ತುಂ ಪಂಚವರ್ಣಾನಿ ರೋಧತಃ ॥ ೫ ॥

ಆ ಪ್ರಕಾರ ಆ ದ್ರೌಪದಿಯಿಂದ ಪ್ರೇರಿತನಾದ ಮಹಾಬಲಿಷ್ಠನೂ ವೀರನೂ ಆದ ಭೀಮನು ಆ ಪಂಚವರ್ಣದ ಹೂವುಗಳನ್ನು ಅವುಗಳು ಬೆಳೆದಿದ್ದ ಹೂದೋಟದಿಂದ ತರುವುದಕ್ಕೆ ಹೊರಟನು.

ನಿರ್ಭಯಃ ಸರ್ವಲೋಕೇಷು ಕೃಷ್ಣಪಾದಾಂಬುಜಾಶ್ರಯಃ ।
ಗಚ್ಛನ್ ಸೌಗಂಧಿಕಾರ್ಥಂ ಸ ದದರ್ಶಾಧ್ವನಿ ಮಾರುತಿಮ್ ॥ ೬ ॥

ಶ್ರೀಕೃಷ್ಣನ ಪಾದಕಮಲಗಳನ್ನು ಆಶ್ರಯಿಸಿದ ಅವನು ಸೌಗಂಧಿಕಾಪುಷ್ಪ ತರುವುದಕ್ಕಾಗಿ ಹೊರಟವನು ನಿರ್ಭಯವಾಗಿ ಸಂಚರಿಸುತ್ತಾ ದಾರಿಯಲ್ಲಿ ಅಡ್ಡಲಾಗಿದ್ದ ಹನುಮಂತನನ್ನು ಕಂಡನು.

ಹನುಮಂತಂ ಮಹಾಕಾಯಂ ಮಾರ್ಗಮಾವೃತ್ಯ ಸಂಸ್ಥಿತಮ್ ।
ತಮಪೃಚ್ಛನ್ಮಹಾಭೂತಂ ಜ್ಞಾನವಾನಪಿ ಲೀಲಯಾ ॥ ೭ ॥

ದೊಡ್ಡಕಾಯವುಳ್ಳವನಾದ ಹನುಮಂತನು ದಾರಿಗೆ ಅಡ್ಡಾಗಿ ಇದ್ದುದನ್ನು ಕಂಡು ಭೀಮಸೇನನು ಆ ಕಪಿಯು ಯಾರೆಂಬುದನ್ನು ತಿಳಿದಿದ್ದರೂ ಕೂಡ ಲೀಲೆಯಿಂದ ಅವನನ್ನು ಪ್ರಶ್ನೆಮಾಡಿದನು.

'ಕಸ್ತ್ವಂ ವಾನರಶಾರ್ದೂಲ ದೇಹಿ ಮಾರ್ಗಂ ಮಮಾಚಿರಮ್' ।
ಇತ್ಯುಕ್ತೋ ಹನುಮಾನ್ ಪ್ರಾಹ 'ನಾಹಂ ಮಾರ್ಗನಿರೋಧಕಃ'
॥ ೮ ॥

'ಹೇ ಕಪೀಶ್ವರ, ನೀನು ಯಾರು ? ನನಗೆ ಬೇಗ ದಾರಿ ಬಿಟ್ಟುಕೊಡು' ಎಂದು ಕೇಳಿದನು. ಅದನ್ನು ಕೇಳಿ ಹನುಮಂತ ಹೀಗೆ ಹೇಳಿದನು—'ನಾನು ನಿನ್ನ ದಾರಿಗೆ ಅಡ್ಡಹಾಕಿಲ್ಲ.'

ಮತ್ಪುಚ್ಛೋ ಮಾರ್ಗಮಾವೃತ್ಯ ವರ್ತತೇ ನರಸತ್ತಮ ।
ಅಹಂ ರಾಮಸ್ಯ ದಾಸೋ ವೈ ಹನುಮಾನಿತಿ ವಿಶ್ರುತಃ ॥ ೯ ॥

ನನ್ನ ಬಾಲವಾತ್ರ ದಾರಿಗೆ ಅಡ್ಡಲಾಗಿ ಬಿದ್ದಿದೆ. ಹೇ ಪುರುಷೋತ್ತಮ ! ನಾನು ರಾಮನ ದೂತ. ನನ್ನನ್ನು ಹನುಮಂತನೆಂದು ಹೇಳುತ್ತಾರೆ.

'ಪೂಜಯನ್ ರಘುನಾಥಸ್ಯ ಪ್ರತಿಮಾಮಿಷ್ಟದಾಯಿನೀಮ್ ।
ವಸಾಮಿ ಭುವಿ ಸಂಗಾಯನ್ ಯಶೋ ರಾಮಸ್ಯ ನಿರ್ಮಲಮ್ ॥೧೦॥

ಸಕಲೇಷ್ಟಾರ್ಥಪ್ರದವಾದ ಶ್ರೀರಾಮನ ಪ್ರತಿಮೆಯನ್ನು ಪೂಜಿಸುತ್ತಾ ಅವನ ನಿರ್ಮಲವಾದ ಕೀರ್ತಿಯನ್ನು ಗಾನಮಾಡುತ್ತಾ ಈ ಭೂಲೋಕದಲ್ಲಿ ವಾಸ ಮಾಡಿಕೊಂಡಿದ್ದೇನೆ.

'ಕಸ್ತ್ವಂ ಬ್ರೂಹಿ ನರಶ್ರೇಷ್ಠ ಕಿಮರ್ಥಂ ತ್ವಮಿಹಾಗತಃ ? ।
ಪುಚ್ಛೋದ್ಧರಣಶಕ್ತಿರ್ಮೇ ನಾಸ್ತಿ ವೃದ್ಧತಮೋ ಯತಃ ॥ ೧೧ ॥

ಹೇ ನರಶ್ರೇಷ್ಠ, ನೀನು ಯಾರು ? ಇಲ್ಲಿಗೆ ಏತಕ್ಕೆ ಬಂದಿದ್ದೀಯೆ ? ಹೇಳು. ನಾನು ಬಹಳ ಮುದುಕನಾಗಿಬಿಟ್ಟಿದ್ದೇನೆ. ಆದಕಾರಣ ನನಗೆ ನನ್ನ ಬಾಲವನ್ನು ಎತ್ತುವಷ್ಟು ಶಕ್ತಿಯಿಲ್ಲ.

'ಉದ್ಧೃತ್ಯ ಪುಚ್ಛಂ ಯಾಹಿ ತ್ವಂ ಶಕ್ತೋ ಯದಿ ನರೋತ್ತಮ' ।
ಆಂಜನೇಯವಚಃ ಶ್ರುತ್ವಾ ಕೌಂತೇಯೋ ವಾಕ್ಯಮಬ್ರವೀತ್ ॥ ೧೨ ॥

'ಹೇ ಪುರುಷಶ್ರೇಷ್ಠ, ನಿನಗೆ ಸಾಧ್ಯವಾದರೆ ನೀನು ನನ್ನ ಬಾಲವನ್ನು ಎತ್ತಿಟ್ಟು ದಾರಿಬಿಡಿಸಿಕೊಂಡು ಹೋಗು' (ಎಂದು ಹನುಮಂತ ಹೇಳಿದನು.) ಹನುಮಂತನ ಮಾತನ್ನು ಕೇಳಿ ಕುಂತಿಯ ಮಗನಾದ ಭೀಮಸೇನನು ಹೀಗೆ ಹೇಳಿದನು.

ಅಹಂ ಭಾರತವಂಶೀಯೋ ಭೀಮಸೇನ ಇತಿ ಶ್ರುತಃ ।
ಸೌಗಂಧಿಕಾನಿ ಕೀಶೇಶ—ಪುಷ್ಪಾಣ್ಯಾಹರ್ತುಮುದ್ಯತಃ ॥ ೧೩ ॥

ನಾನು ಭರತಕುಲೋತ್ಪನ್ನನಾದವನು. ನನ್ನನ್ನು ಭೀಮಸೇನನೆಂದು ಕರೆಯುತ್ತಾರೆ. (ಕೀಶ–ವಾನರ, ಕೀಶೇಶ–) ಹೇ ವಾನರೋತ್ತಮನೆ, ನಾನು ಈಗ ಸೌಗಂಧಿಕಾಪುಷ್ಪಗಳನ್ನು ತರುವುದಕ್ಕಾಗಿ ಹೊರಟಿದ್ದೇನೆ.

ಇತ್ಯುಕ್ತ್ವಾ ತಂ ಹನುಮಂತಂ ಪುಚ್ಛಮುದ್ಧರ್ತುಮುದ್ಯತಃ ।
ನ ಶಶಾಕ ತದೋದ್ಧರ್ತುಂ ತತ್ಪುಚ್ಛಂ ಪಾಂಡುನಂದನಃ ॥ ೧೪ ॥

ಹೀಗೆ ಹನುಮಂತನಿಗೆ ಹೇಳಿ ಅವನು ಅವನ ಬಾಲವನ್ನು ಎತ್ತಲು ಪ್ರಯತ್ನಿಸಿದನು. ಆದರೆ ಆ ಪಾಂಡುಕುಮಾರನಿಗೆ ಆ ಬಾಲವನ್ನು ಎತ್ತುವುದಕ್ಕೆ ಸಾಧ್ಯವಾಗಲಿಲ್ಲ.

ಪ್ರಯತ್ನೇನಾಪಿ ವಿಪ್ರೇಂದ್ರ ತತೋ ವಿಸ್ಮಯಮಾಗತಃ ।
ಹನುಮಾನ್ ಭೀಷಯಾಮಾಸ ಭೀಮಸೇನಂ ಮಹಾಬಲಃ ॥ ೧೫ ॥
ಗುರುಣಾ ವಪುಷಾ ತತ್ರ ತದಾ ಪ್ರತಿಭಯೇನ ಚ ।

ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಅದರಿಂದ ಭೀಮನಿಗೆ ಬಹಳ ಆಶ್ಚರ್ಯವಾಯಿತು. ಅನಂತರ, ಹೇ ಬ್ರಾಹ್ಮಣೋತ್ತಮ, ಮಹಾಬಲಿಷ್ಠನಾದ ಹನುಮಂತನು ಭಯಂಕರವಾದ ದೊಡ್ಡರೂಪಧಾರಣಮಾಡಿ ಭೀಮಸೇನನನ್ನು ಹೆದರಿಸಿದನು.

ಏವಂ ಭೀಮೇನ ಕ್ರೀಡಿತ್ವಾ ವಾಯುಸೂನುರ್ಮಹಾಮತಿಃ ॥ ೧೬ ॥
ಪುಚ್ಛಮುದ್ಧೃತ್ಯ ಯಾಹೀತಿ ತಸ್ಯ ಮಾರ್ಗಮದರ್ಶಯತ್ ।
ಪ್ರಣಮ್ಯ ಭೀಮಸೇನಸ್ತಂ ಪ್ರಾಹ ಹರ್ಷಸಮಾಕುಲಃ ॥ ೧೭ ॥ ಇತಿ ॥

ಈ ಪ್ರಕಾರ ಸ್ವಲ್ಪಹೊತ್ತು ಭೀಮಸೇನನೊಡನೆ ಆಟವಾಡಿ ಬುದ್ಧಿಶಾಲಿಯಾದ ಹನುಮಂತನು ಬಾಲವನ್ನು ಎತ್ತಿ 'ಹೋಗು' ಎಂದು ಅವನಿಗೆ ಮಾರ್ಗ ತೋರಿಸಿದನು. ಆಗ ಭೀಮನು ಆಂಜನೇಯನಿಗೆ ನಮಸ್ಕಾರ ಮಾಡಿ ಈ ಮಾತನ್ನು ಹೇಳಿದನು—ಎಂದು ವಾಸಿಷ್ಠರಾಮಾಯಣದಲ್ಲಿ ಹೇಳಿದೆಯೆಂದು ಫಲಾರಿಟೀಕೆ ತೋರಿಸುತ್ತದೆ. ಈ ವಾಸಿಷ್ಠರಾಮಾಯಣದಲ್ಲೂ ಸಹ ಏವಂ ಭೀಮೇನ ಕ್ರೀಡಿತ್ವಾ–'ಹೀಗೆ ಭೀಮನೊಡನೆ ಕ್ರೀಡೆಮಾಡಿ' ಎಂದೂ ಜ್ಞಾನವಾನಪಿ-ಲೀಲಯಾ (ಶ್ಲೋ.೯.೭)–'ತಿಳಿದಿದ್ದರೂ ಲೀಲೆಯಿಂದ' ಎಂದೂ ಹೇಳಿರುವುದರಿಂದ ವಾಯುಸ್ತುತಿಯಲ್ಲಿ ಕ್ರೀಡಾಮಾತ್ರಂ ತದೇತತ್ ಎಂದು ಹೇಳಿದ್ದು ಯುಕ್ತವಾಗಿದೆ.

ಶ್ಲೋಕ ೨೮ ಸೌಗಂಧಿಕಾಹರಣ—ಮಣಿಮಂತನೇ ಮೊದಲಾದ ದೈತ್ಯರ ವಧೆ

299. ಅವತಾರಿಕೆ—(ಕಕ. ವಿ.ಛ.) ಭೀಮಸೇನನು ಸೌಗಂಧಿಕಾ-ಹರಣ ಸಮಯದಲ್ಲಿ ಮಣಿಮಂತನೇ ಮೊದಲಾದ ಅನೇಕ ಕೋಟಿ ದೈತ್ಯರನ್ನು ಸಂಹಾರಮಾಡಿ ದ್ರೌಪದಿಗೆ ಇಷ್ಟವಾದ ಸೌಗಂಧಿಕಪುಷ್ಪಗಳನ್ನು ತಂದುಕೊಟ್ಟ ನೆಂದು ಹೇಳುತ್ತಾ ಭೀಮಸೇನನಿಗೆ ವಂದಿಸುತ್ತಾರೆ. (ಪುರಾ.) ಶ್ರೀಕೃಷ್ಣ-ಭೀಮಸೇನರುಗಳ ಇನ್ನೂ ಕೆಲವು ಚರಿತ್ರೆಗಳನ್ನು ಪ್ರಸ್ತಾಪಿಸಿ ಸ್ತುತಿಸುತ್ತಾ ಅವರನ್ನು ವಂದಿಸುತ್ತಾರೆ. (ಲೇ.) ಸೌಗಂಧಿಕಾಹರಣಾರ್ಥ ಹೊರಟ ಭೀಮನ ವೃತ್ತಾಂತ ಹನುಮತ್ಪ್ರಸಕ್ತಿಯಿಂದ ಅರ್ಧಕ್ಕೇ ನಿಂತುಹೋಗಿದ್ದ ಕಾರಣ ಆ ಕಾರ್ಯಸಾಧನೆ ಮಾಡಿದ ವಿಷಯವನ್ನೇ ಮುಂದುವರಿಸಿ ಸೌಗಂಧಿಕಾಹರಣಕ್ಕೆ ಮುಖ್ಯಪ್ರಯೋಜನವಾದ ದೈತ್ಯಸಂಹಾರವನ್ನು ನಿರೂಪಣೆಮಾಡಿ ಮಧ್ವಾವ-ತಾರಕ್ಕೆ ಬೀಜರೂಪವಾದ ಮಣಿಮಂತನ ವಧೆಯನ್ನು ಹೇಳಿ ಭೀಮಾವತಾರದ ಮಹಿಮೆಯನ್ನು ಉಪಸಂಹರಿಸಿ ಭೀಮಸೇನನಿಗೂ ವಂದಿಸುತ್ತಾರೆ. ಅಲ್ಲದೆ ಈ ಶ್ಲೋಕಕ್ಕೆ ಶ್ರೀಹರಿಪರವಾಗಿಯೇ ಐದು ಅರ್ಥಗಳಿರುವುದರಿಂದ ಶ್ರೀಕೃಷ್ಣನ ಅನೇಕ ಚರಿತ್ರೆಗಳನ್ನೂ ಈ ಶ್ಲೋಕದಲ್ಲಿ ಸೂಚಿಸಿ ಕೃಷ್ಣಾವತಾರದ ಕಥೆ ಯನ್ನೂ ಮುಗಿಸುತ್ತಾ ಕೃಷ್ಣನಿಗೂ ವಂದಿಸುತ್ತಾರೆ—

> ಬಹ್ವೀಃ ಕೋಟೀರಟೀಕಃ ಕುಟಿಲಕಟುಮತೀ-
> ನುತ್ಕಟಾಟೋಪಕೋಪಾನ್
> ದ್ರಾಕ್ ಚ ತ್ವಂ ಸತ್ವರತ್ವಾ—ಚ್ಛರಣದ ಗದಯಾ
> ಪೋಥಯಾಮಾಸಿಥಾರೀನ್ ।
> ಉನ್ಮಥ್ಯಾತಥ್ಯಮಿಥ್ಯಾ—ತ್ವವಚನ ವಚನಾ-
> ನುತ್ಪಥಸ್ಥಾಂಸ್ತಥಾಽನ್ಯಾನ್
> ಪ್ರಾಯಚ್ಛಃ ಸ್ವಪ್ರಿಯಾಯೈ ಪ್ರಿಯತಮಕುಸುಮಂ
> ಪ್ರಾಣ ತಸ್ಮೈ ನಮಸ್ತೇ ॥ ೨೮ ॥

ಸೂಚನೆ—ಈ ಶ್ಲೋಕಕ್ಕೆ ಹರಿಪರವಾಗಿ ಐದು ಅರ್ಥಗಳೂ, ವಾಯು-ಪರವಾಗಿ ಒಂದು ಅರ್ಥವೂ ಇವೆ. ಹರಿಪರವಾಗಿ ಪದವಿಭಾಗ ಬೇರೆ ಬೇರೆ

ಆಗುವುದರಿಂದ ಅದನ್ನು ಆಯಾ ಅರ್ಥಕ್ಕೆ ಮೊದಲೇ ತೋರಿಸಿದೆ. ವಾಯು ಪರವಾದ ಸಾಮಾನ್ಯ ಪದವಿಭಾಗವನ್ನು ಕೆಳಗೆ ತೋರಿಸಿದೆ.

ಸಾಮಾನ್ಯ ಪದವಿಭಾಗ—ಬಹ್ವೀಃ, ಕೋಟೀಃ, ಆಟೀಕಃ, ಕುಟಿಲ.... ಮತೀನ್, ಉತ್ಕಟಾ....ಕೋಪಾನ್, ದ್ರಾಕ್, ಚ, ತ್ವಂ, ಸತ್ವರತ್ವಾತ್, ಶರಣದ, ಗದಯಾ, ಪೋಥಯಾಮಾಸಿಥ, ಅರೀನ್ ; (ಉನ್ಮಥ್ಯ, ಅತಥ್ಯ-ಮಿಥ್ಯಾತ್ವ-ವಚನ-ವಚನಾನ್, ಉತ್ಪಥಸ್ಥಾನ್, ತಥಾ, ಅನ್ಯಾನ್, ಪ್ರಾಯಚ್ಛಃ, ಸ್ವಪ್ರಿಯಾಯೈ, ಪ್ರಿಯತಮಕುಸುಮಂ, ಪ್ರಾಣ, ತಸ್ಮೈ, ನಮಃ, ತೇ ||

ಈ ಶ್ಲೋಕಕ್ಕೆ ಪುಂಗನೂರು ರಾಘವೇಂದ್ರಾಚಾರ್ಯರು ಭೀಮಪರವಾದ ಒಂದರ್ಥವಲ್ಲದೆ ಹರಿಪರವಾಗಿಯೇ ಐದು ಪ್ರಕಾರ ಅರ್ಥ ಹೇಳಿ ಒಂದೊಂದು ಅರ್ಥದಲ್ಲೂ ಶ್ರೀಹರಿಯ ಒಂದೊಂದು ವಿಶೇಷವ್ಯಾಪಾರವನ್ನು (ಮಹಿಮೆಯನ್ನು) ತೋರಿಸಿಕೊಟ್ಟಿದ್ದಾರೆ. ಐದು ಅರ್ಥಗಳಿಗೆ ಐದು ರೀತಿ ಬೇರೆಬೇರೆ ಪ್ರಕಾರ ಪದವಿಭಾಗವೂ ಅನ್ವಯಕ್ರಮವೂ ಆಗುವುದರಿಂದ ಒಟ್ಟಿಗೆ 'ವಿಶ್ಲೇಷಣೆ'ಯನ್ನು ತೋರಿಸಿಲ್ಲ. ಒಂದೊಂದು ಅರ್ಥಕ್ಕೂ ಪದವಿಭಾಗ, ಕಠಿನ ಶಬ್ದಾರ್ಥ, ಅನ್ವಯಕ್ರಮ ಎಲ್ಲವನ್ನೂ ಬೇರೆಬೇರೆಯಾಗಿಯೇ ತೋರಿಸಿದೆ.

300 ಹರಿಪರವಾಗಿ ಒಂದನೇ ಅರ್ಥ (ಕಠಿನ ಶಬ್ದಾರ್ಥ) ಕ) ಹರಿಪರವಾಗಿ ಐದು ಅರ್ಥಗಳಲ್ಲೂ ವಾಯುಪರವಾಗಿಯೂ ಕೂಡ—ಶರಣದ, ಪ್ರಾಣ ಎಂಬ ಎರಡು ಪದಗಳು ಉದ್ದಕ್ಕೂ ಸಂಬೋಧನೆಗಳು. ಹರಿಪರವಾಗಿ ಶ್ರೀಹರಿಯೇ ಎಂದೂ ವಾಯುಪರವಾಗಿ ಹೇ ವಾಯುದೇವನೇ ಎಂದೂ ಅರ್ಥ. ಶರಣಂ ದದಾತೀತಿ ಶರಣದಃ, ತತ್ಸಂಬುದ್ಧಿಃ. ಹೇ ಶರಣದ ಮೊರೆಹೊಕ್ಕವರಿಗೆ ಆಶ್ರಯವನ್ನು ಕೊಡುವವನೇ ಎಂದು ಸಾಮಾನ್ಯವಾದ ಅರ್ಥ. ಹರಿಪರ ಅರ್ಥಮಾಡುತ್ತಾ ಪುರಾ. ಎರಡು ವಿಶೇಷಾರ್ಥ ತೋರಿಸಿದ್ದಾರೆ. ೧) ಶರಣಂ–ಮೋಕ್ಷವನ್ನು, ದ–ಕೊಡುವವನೇ. ೨) ಶರಣಂ–ಸತ್ಯಲೋಕಾದಿ ವಾಸ-ಸ್ಥಾನವನ್ನು ಕೊಡುವವನೇ. 'ಪ್ರಾಣಸ್ಯ ಪ್ರಾಣಃ' ಎಂಬ ಶ್ರುತಿಯಿಂದ ಮುಖ್ಯಪ್ರಾಣನಿಗೂ ಚಲನಾದಿ ಶಕ್ತಿಯನ್ನು ಕೊಡುವನಾದ್ದರಿಂದ (ಅನ

ಚೇಷ್ಟಾಯಾಂ, ಧಾತು, ಪ್ರ-ಉಪಸರ್ಗ) ಶ್ರೀಹರಿಯೇ ಮುಖ್ಯವಾಗಿ ಪ್ರಾಣ ಶಬ್ದಾರ್ಥ.

ಖ) ಅರೀನ್-ಶತ್ರುಗಳನ್ನು ಎಂಬುದಕ್ಕೆ ೧) ಬಹ್ವೀಃ ಕೋಟೀಃ, ೨) ಕುಟಿಲಕಟುಮತೀನ್, ೩) ಉತ್ಕಟಾಟೋಪಕೋಪಾನ್, ೪) ಆತಥ್ಯ-ಮಿಥ್ಯಾತ್ವ-ವಚನ-ವಚನಾನ್, ೫) ಉತ್ಪಥಸ್ಥಾನ್, ೬) ಅನ್ಯಾನ್— ಎಂದು ಆರು ವಿಶೇಷಣಗಳು. ಇವುಗಳ ಅರ್ಥವನ್ನು ಅನ್ವಯಾರ್ಥದಲ್ಲೇ ಕೊಟ್ಟಿದೆ. ಗ) ಅಟೀಕಃ ಎಂಬುದು ಕ್ರಿಯಾಪದ, (ಕಕ.ವಿ.ಭ.) ಟೀಕೃ ಗತೌ (ಭ್ವಾದಿ ಆತ್ಮ)-ಹೋಗು ಎಂಬ ಧಾತುವಿನ ಲಙ್ (ಅನದ್ಯತನಭೂತ) ಮಧ್ಯಮ ಪುರುಷೈಕವಚನರೂಪ, ನೀನು ಹೋಗಿ, ಎದುರಿಸಿದಿ ಎಂದರ್ಥ. ಟೀಕೃ ಧಾತು ಆತ್ಮನೇ ಪದಿಯಾದ್ದರಿಂದ ಸಾಮಾನ್ಯವಾಗಿ ಈ (ಪರಸ್ಮೈಪದಿ) ರೂಪ ಬರುವುದಿಲ್ಲ. ಆದರೆ 'ಆತ್ಮನೇಪದವಿಧೇರನಿತ್ಯತ್ವಾತ್'-ಆತ್ಮನೇ ಪದದ ವಿಧಿಗಳು ಅನಿತ್ಯವಾದ್ದರಿಂದ ಈ ರೂಪ ಬಂದಿದೆ. ಅಟೀಕಃ। ಅಟೀಕತಂ। ಅಟೀಕತ॥ ಎಂಬುವು ಮಧ್ಯಮಪುರುಷದ ರೂಪಗಳು. ಅಟೀಕಃ-ನೀನು ಹೋದಿ, ನಡೆದು ಹೋದಿ ಅಥವಾ ಸೇರಿದಿ, ಸಮೀಪಿಸಿದಿ ಎಂದರ್ಥ. (ಕಕ.ವಿ.) ಪ್ರಹರ್ತುಮಗಚ್ಛಃ-ಹೊಡೆಯುವುದಕ್ಕೆ ಹೋದಿ (ಭ.) ಪ್ರಥಮಮಗಚ್ಛಃ-ಮೊದಲು ಹೋದಿ ಎಂದರ್ಥ. (ಘ) ದ್ರಾಕ್-ಶೀಘ್ರವಾಗಿ 'ದ್ರಾಕ್ ಮಂಕ್ಷು ಸಪದಿ ದ್ರುತೇ' ಎಂದು ಅಮರ. (ಙ) ಉನ್ಮಥ್ಯ-ಕಡೆದು ಹಾಕಿ, ಪರಾಭವಗೊಳಿಸಿ, ಸೋಲಿಸಿ ಎಂದರ್ಥ. (ಚ) ಘೋಷಯಾಮಾಸಿಥ (ಮ. ಪು. ಏಕವಚನ) (ಕಕ) ಮಾರಯಾಂಚಕರ್ಥ (ಭ) ಘಾತಯಾಂಚಕರ್ಥ-ನಾಶಮಾಡಿದಿ, ಕೊಂದು ಹಾಕಿದಿ, ಘುಷ ಭಾಷಣೇ (ಚುರಾದಿ ಉಭ) ಲಿಟ್‌ರೂಪ, (ಛ) ಪ್ರಾಯಚ್ಛಃ-(ಕಕ) ಪ್ರಾದಾಃ-ನೀನು ಕೊಟ್ಟೆ 'ದಾಣ್ ದಾನೇ' (ಭ್ವಾದಿ-ಪ) ಇತ್ಯಸ್ಮಾದ್ಧಾತೋಃ ಪ್ರಪೂರ್ವಾತ್ ಲಙಿ "ಪಾಘ್ರಾ-" (ಪಾ ೭/೩/೭೮) ಇತ್ಯಾದಿನಾಯಚ್ಛಾದೇಶಃ, ದಾ-ಧಾತುವಿಗೆ 'ಯಚ್ಛ' ಎಂಬ ಆದೇಶ ಬಂದಿದೆ. (ಜ) ಬಹ್ವೀಃ ಕೋಟೀಃ 'ಲಕ್ಷಾಕೋಟಿಃ ಸ್ತ್ರಿಯಾಂ' ಎಂದು ಲಿಂಗಾನುಶಾಸನದಲ್ಲಿ ಹೇಳಿರುವುದರಿಂದ ಲಕ್ಷಾ ಎಂಬುದೂ ಕೋಟಿಃ ಎಂಬುದೂ ಸಂಸ್ಕೃತದಲ್ಲಿ ಸ್ತ್ರೀಲಿಂಗ

ಶಬ್ದಗಳು. ಕೋಟೀಃ ಎಂಬುದು ದ್ವಿತೀಯಾ ಬಹುವಚನ, ಅದರಂತೆ ಬಹ್ವೀಃ ಎಂಬುದೂ ಸ್ತ್ರೀ ದ್ವಿಬಹುವಚನಾಂತವಾಗಿದೆ. ಬಹ್ವೀಃ-ಅನೇಕಾಃ ಕೋಟೀಃ ಸಂಖ್ಯಾಃ (ಕಕ) (ಥ) ಅನೇಕಕೋಟಿಸಂಖ್ಯಾಕ ದೈತ್ಯಾನ್-ಅನೇಕ ಕೋಟಿ ಸಂಖ್ಯೆಯ ದೈತ್ಯರನ್ನು ಎಂದರ್ಥ.

ವಿಶ್ಲೇಷಣೆ—ಒಂದನೇ ಅರ್ಥದಲ್ಲಿ ಮುಖ್ಯವಾಗಿ ಹೀಗೆ ನಾಲ್ಕು ವಾಕ್ಯಗಳಿವೆ. I ಹೇ ಶರಣದ, ಪ್ರಾಣ! ತ್ವಂ ಅರೀನ್ ಅಟೀಕಃ, II ಚ ಗದಯಾ ದ್ರಾಕ್ ಉನ್ಮಥ್ಯ ಸತ್ವರತ್ವಾತ್ ಪ್ರೋಥಯಾಮಾಸಿಥ, III ತಥಾ ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಯಚ್ಛಃ, IV ತಸ್ಮೈ ತೇ ನಮಃ ॥ ಇವಕ್ಕೆ ಕ್ರಮವಾಗಿ ಹೀಗೆ ಅರ್ಥ—I ಹೇ ಮೋಕ್ಷಪ್ರದನಾದ ಶ್ರೀಕೃಷ್ಣನೇ! ನೀನು (ಅನೇಕ ಕೋಟಿ ಸಂಖ್ಯಾಕರಾದ) ಶತ್ರುಗಳನ್ನು ಎದುರಿಸಿದಿ, II ಮತ್ತು ಅವರನ್ನು ಬೇಗನೆ ಗದೆಯಿಂದ ಬಾಧಿಸಿ (ಹೊಡೆದು) ವೇಗವಾಗಿ ಮುಂದೆ ಹೋದಕಾರಣ ನುಚ್ಚುನುರಿಮಾಡಿದಿ, III ಅಲ್ಲದೆ ನಿನ್ನ ಪ್ರಿಯತಮಳಾದ ರುಕ್ಮಿಣೀದೇವಿಗೆ ಪಾರಿಜಾತಕುಸುಮವನ್ನು ಕೊಟ್ಟೆ, IV ಇಂಥಾ ನಿನಗೆ ನಮಸ್ಕಾರ.

ಅನ್ವಯ—ಶರಣದ, ಪ್ರಾಣ! I ತ್ವಂ ೧) ಬಹ್ವೀಃ ಕೋಟೀಃ ೨) ಕುಟಿಲಕಟುಮತೀನ್ ೩) ಉತ್ಕಟಾ....ಕೋಪಾನ್ ೪) ಅತಥ್ಯ....ವಚನಾನ್ ೫) ಉತ್ಪಥಸ್ಥಾನ್ ೬) ಅನ್ಯಾನ್ ಅರೀನ್ ಅಟೀಕಃ! II ಚ ಗದಯಾ ದ್ರಾಕ್(ಅರೀನ್)ಉನ್ಮಥ್ಯ ಸತ್ವರತ್ವಾತ್ ಪ್ರೋಥಯಾಮಾಸಿಥ(ಚ)! III ತಥಾ ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಯಚ್ಛಃ! IV ತಸ್ಮೈ ತೇ ನಮಃ

ಹರಿಪರವಾಗಿ ೧ನೇ ಅನ್ವಯಾರ್ಥ—ಶರಣದ-i) 'ಶರಣಂ ಗೃಹ-ರಕ್ಷಿತ್ರೋಃ' ಎಂಬ ಅಮರದಂತೆ ಶರಣು ಬಂದವರಿಗೆ ರಕ್ಷಣೆ ಕೊಡುವಂಥಾ, ಅಥವಾ ii) ಮೋಕ್ಷಪ್ರದನಾದಂಥಾ, ಅಥವಾ iii) ಸತ್ಯಲೋಕಾದಿ ವಾಸ ಸ್ಥಾನವನ್ನು ಕೊಡುವಂಥಾ; ಪ್ರಾಣ-ರಮಾಬ್ರಹ್ಮಾದಿ ಸಕಲರಿಗೂ ಚೇಷ್ಟಾ-ಪ್ರದನಾದ ಕಾರಣ ಪರಮ ಮುಖ್ಯವೃತ್ತಿಯಿಂದ ಪ್ರಾಣಶಬ್ದವಾಚ್ಯನಾದ ಹೇ ಶ್ರೀಕೃಷ್ಣಪರಮಾತ್ಮನೇ! ತ್ವಂ-ನೀನು; ೧) ಬಹ್ವೀಃ ಕೋಟೀಃ-ಅನೇಕ ಕೋಟಿ ಸಂಖ್ಯಾಕರಾದ; ೨)ಕುಟಿಲ....ಮತೀನ್—ಕುಟಿಲ-ವಕ್ರವೂ, ಕಟು-

ಕ್ರೂರವೂ ಆದ, ಮತೀನ್-ಬುದ್ಧಿಯುಳ್ಳಂಥಾ; ೩) ಉತ್ಕಟಾ....ಕೋಪಾನ್ ಉತ್ಕಟ-ಉಲ್ಬಣವಾದ (ಕೆರಳಿದ ಅಥವಾ ಹೆಚ್ಚಾದ), ಆಟೋಪ-ಆಗ್ರಹವೂ, ಕೋಪಾನ್-ಕ್ರೋಧವೂ ಉಳ್ಳಂಥಾ ; ೪) ಅತಥ್ಯ....ವಚನಾನ್—ಅತಥ್ಯ-ಅಯಥಾರ್ಥವಾದ (ವಸ್ತುಸ್ಥಿತಿಗೆ ವಿರುದ್ಧವಾದ), ಮಿಥ್ಯಾತ್ವವಚನ-ಸುಳ್ಳೆಂದು ಪ್ರತಿಪಾದಿಸುವ, ವಚನಾನ್-ಮಾತುಗಳುಳ್ಳಂಥಾ (ಎಂದರೆ ಯುದ್ಧದಲ್ಲಿ ತಾವೇ ಸಮರ್ಥರೆಂತಲೂ ನೀನು ಅಶಕ್ತ, ಯುದ್ಧದಲ್ಲಿ ನಿಪುಣನಲ್ಲವೆಂದೂ ಸುಳ್ಳುಸುಳ್ಳೇ ವದರುತ್ತಿರುವ ಎಂದರ್ಥ); ೫) ಉತ್ಪಥಸ್ಥಾನ್-ದುರ್ಮಾರ್ಗಪ್ರವರ್ತಕರಾದಂಥಾ ; ೬) ಅನ್ಯಾನ್-ಬೇರೆಯ ಅಥವಾ ವಿರೋಧಿಗಳಾದ; ಪರಪಕ್ಷೀಯರಾದ ; ಅರೀನ್ (ಪ್ರತಿ)-ಶತ್ರುಗಳ ಬಳಿಗೆ (ರೈವತಪರ್ವತದಲ್ಲಿ ಬಲಪರೀಕ್ಷಾ ಕಾಲದಲ್ಲಿ); ಅಟೀಕಃ-ಎದುರಿಸಿದಿಯೋ ; II ಚಃ-ಮತ್ತು ಗದಯಾ-ಗದೋಪಲಕ್ಷಿತ ಸರ್ವಾಯುಧಗಳಿಂದಲೂ ; ದ್ರಾಕ್-ಶೀಘ್ರವಾಗಿ ; (ಅರೀನ್-ಆ ಶತ್ರುಗಳನ್ನು) ; ಉನ್ಮಥ್ಯ-ಬಾಧಿಸಿ (ಹಿಂಸಿಸಿ) ; ಸತ್ವರತ್ವಾತ್-ಶತ್ರುಗಳಿಗಿಂತಲೂ ಹೆಚ್ಚು ವೇಗವುಳ್ಳದ್ದರಿಂದ (ಅವರಿಗಿಂತ ಬೇಗ ಹೋಗಿ) ; ಪೋಥಯಾಮಾಸಿಥ (ಚ)-ದೃಢವಾಗಿ ಪ್ರಹರಿಸಿದಿ (ನಾಶಮಾಡಿದಿ) ; III ತಥಾ-ಹಾಗೆಯೇ (ಮತ್ತು) ; ಸ್ವಪ್ರಿಯಾಯೈ-ನಿನ್ನ ಪ್ರಿಯಪತ್ನಿಯಾದ ರುಕ್ಮಿಣೀದೇವಿಗೆ ; ಪ್ರಿಯತಮಕುಸುಮಂ-(ನಾರದರು ತಂದ) ಅತಿಪ್ರಿಯವಾದ ಪಾರಿಜಾತ ಪುಷ್ಪವನ್ನು ; ಪ್ರಾದಾಃ-ಕೊಟ್ಟೆ; ತಸ್ಮೈ-ಅಂಥಾ ; ತೇ-ನಿನಗೆ ; ನಮಃ-ನಮಸ್ಕಾರವು.

ಭಾವಾರ್ಥ—ಶ್ರೀಕೃಷ್ಣನೊಡನೆ ಕೌರವ ಪಾಂಡವರೇ ಮೊದಲಾದ ಅನೇಕ ರಾಜರು ಸ್ಪರ್ಧಿಸಿದರು. ಅವರೊಡನೆ ಯುದ್ಧಕ್ಕೆ ಹೋಗಲು ಆ ರಾಜರು ಜಂಭದಿಂದ ತಾವೇ ಮಹಾಸಮರ್ಥರೆಂದೂ ಶ್ರೀಕೃಷ್ಣನೇ ಅಸಮರ್ಥನೆಂದೂ ಅವನನ್ನು ಪರಾಜಯಗೊಳಿಸಿ ಸಂಹಾರಮಾಡಿಬಿಡುತ್ತೇವೆಂದು ಬಾಯಿಂದ ಆತ್ಮಪೌರುಷ ಕೊಚ್ಚಿಕೊಳ್ಳುತ್ತಾ ಅಸಂಖ್ಯ ರಾಜರು ಯುದ್ಧಕ್ಕೆ ಬಂದರು. ಶ್ರೀಕೃಷ್ಣನು ಅವರನ್ನೆಲ್ಲಾ ರೈವತಪರ್ವತ ಬಳಿ ಎದುರಿಸಿ ಅವರಿಗಿಂತ ವೇಗವಾಗಿ ಮುಂದೆ ನುಗ್ಗಿ ಗದಾದ್ಯಾಯುಧಗಳಿಂದ ಅವರನ್ನೆಲ್ಲಾ ಪರಾಜಯ ಗೊಳಿಸಿದನು. ಅನಂತರ ನಾರದರು ತಂದುಕೊಟ್ಟ ಪಾರಿಜಾತ

ಪುಷ್ಪವನ್ನು ಪ್ರಿಯತಮಳಾದ ರುಕ್ಮಿಣೀದೇವಿಗೆ ಕೊಟ್ಟು ಸಂತೋಷಪಡಿಸಿದನು. ಅಂಥಾ ಶ್ರೀಕೃಷ್ಣನಿಗೆ ನಮಸ್ಕಾರ ಎಂದು ಭಾವಾರ್ಥ. (ಪುರಾ) ಶ್ರೀಕೃಷ್ಣ ದೇವರಲ್ಲಿ ಸ್ಪರ್ಧೆಯಿಂದ ಬಲಪರೀಕ್ಷೆಯನ್ನು ಅಪೇಕ್ಷಿಸಿದ ದುಷ್ಟ ರಾಜರನ್ನು ರೈವತಪರ್ವತದಲ್ಲಿ ಜಯಿಸಿ ನಾರದಾನೀತ ಪಾರಿಜಾತಪುಷ್ಪವನ್ನು ಶ್ರೀರುಕ್ಮಿಣೀದೇವಿಯವರಿಗೆ ಕೊಟ್ಟ ಹರಿವಂಶಕಥೆಯು ಈ ಅರ್ಥದಿಂದ ಸಂಗೃಹೀತವಾಯಿತು.

301 ಹರಿವಂಶದ ಕಥೆ (ಶ್ರೀಕೃಷ್ಣನು ಸಕಲ ರಾಜರನ್ನೂ ಗೆದ್ದು ರುಕ್ಮಿಣೀಗೆ ಪಾರಿಜಾತಪುಷ್ಪ ಕೊಟ್ಟದ್ದು)—ಕ) ಹರಿವಂಶದ ಈ ಕಥೆಯು ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರಿಂದಲೇ ಇಪ್ಪತ್ತನೇ ಅಧ್ಯಾಯದಲ್ಲಿ (೬೩ ರಿಂದ ೮೨ರ ವರೆಗಿನ ಇಪ್ಪತ್ತು ಶ್ಲೋಕಗಳಲ್ಲಿ) ಸಂಗ್ರಹವಾಗಿ ನಿರೂಪಿತವಾಗಿದೆ ತಾತ್ಪರ್ಯನಿರ್ಣಯದಲ್ಲಿ ಹೇಳಿದ ಪ್ರಸಂಗವು ನನಗೆ ದೊರೆತ ಯಾವ ಹರಿವಂಶದಲ್ಲೂ ಒಂದೇ ಅಧ್ಯಾಯದಲ್ಲಾಗಲಿ ಒಂದೇ ಕಡೆಯಾಗಲಿ ಹೇಳಲ್ಪಟ್ಟಿಲ್ಲ. ಪುಣೆಯ ಭಂಡಾರಕರ್ ಸಂಸ್ಥೆಯ ಪುಸ್ತಕದಲ್ಲಿ ರುಕ್ಮಿಣಿಗೆ ಪಾರಿಜಾತ ಕೊಟ್ಟ ಪ್ರಸಂಗ ಕಾಣುವುದಿಲ್ಲ ; ನೀ. (ಗೋಪಾಲನಾರಾಯಣ ಸಂಸ್ಕರಣ) ಮತ್ತು ಉ.(ಉಡುಪಿ,ಕನ್ನಡಾನುವಾದ,)ಎರಡು ಪುಸ್ತಕಗಳಲ್ಲೂ ವಿಷ್ಣುಪರ್ವದ ೬೫ನೇ ಅಧ್ಯಾಯದಲ್ಲೂ ಬಾಂ. (ದೇವಳೀಕರ್ ಸಂಸ್ಕರಣದ) ೧೨೦ನೇ ಅಧ್ಯಾಯದಲ್ಲೂ ನಿರೂಪಿತವಾಗಿದೆ. ನಾರದರು ಕೃಷ್ಣನ ಮಹಿಮೆ ವರ್ಣಿಸಿದ ಪ್ರಸಂಗವು 'ಧನ್ಯೋಪಾಖ್ಯಾನ'ವೆಂಬ ಅಧ್ಯಾಯದಲ್ಲಿ ನಿರೂಪಿಸಲ್ಪಟ್ಟಿದೆ. ಈ ಧನ್ಯೋಪಾಖ್ಯಾನವು ಪುಣೆಯ ಭ. ಪುಸ್ತಕದಲ್ಲಿ ೧೧೦ನೇ ಅಧ್ಯಾಯವಾಗಿಯೂ, ಉ. ಮತ್ತು ನೀ. ಗಳಲ್ಲಿ ವಿಷ್ಣುಪರ್ವದ ೧೧೧ನೇ ಅಧ್ಯಾಯವಾಗಿಯೂ ಬಾಂ. ಪುಸ್ತಕದಲ್ಲಿ ೧೯೫ನೇ ಅಧ್ಯಾಯವಾಗಿಯೂ ಪಠಿತವಾಗಿದೆ, ಅದೇ ವಿಚಾರವು ಗ. (ಗಲಗಲಿಯವರ ಅನುವಾದ)ದಲ್ಲಿ ಪು. ೭೦೪–೦೭ ಪುಟಗಳಲ್ಲಿದೆ. ಆ ಎಲ್ಲವನ್ನೂ ಸಂಗ್ರಹಿಸಿ ಇಲ್ಲಿ ತಾತ್ಪರ್ಯನಿರ್ಣಯವನ್ನು ಅನುಸರಿಸಿ ಒಟ್ಟಿಗೆಯೇ ಹೇಳಿದ್ದೇನೆ.

ಖ) ರೈವತಪರ್ವತದಲ್ಲಿ ರಾಜರ ಸಮಾವೇಶ—ಒಂದು ಸರಿ ದುರ್ಯೋಧನಾದಿ ಸಕಲ ರಾಜರೂ ಶ್ರೀಕೃಷ್ಣನ ಬಲವನ್ನು ಪರೀಕ್ಷಿಸಬೇಕೆಂಬ

ಉದ್ದೇಶದಿಂದ ರೈವತಪರ್ವತಕ್ಕೆ ಬಂದು ಸೇರಿದರು. ದುರ್ಯೋಧನಾದಿಗಳು ಮಾತ್ರವಲ್ಲದೆ ಪಾಂಡವರೂ ನಾನಾದೇಶದ ರಾಜರುಗಳೆಲ್ಲರೂ ಬಂದು ಸೇರಿದರು. ತನ್ನ ಬಲಪರೀಕ್ಷೆಗಾಗಿಯೇ ಇವರೆಲ್ಲ ಬಂದು ಸೇರಿದ್ದಾರೆಂಬುದನ್ನು ತಿಳಿದ ಶ್ರೀಕೃಷ್ಣನೂ ರುಕ್ಮಿಣೀಸಮೇತನಾಗಿ ಅಲ್ಲಿಗೆ ಹೋದನು. ಅದೇ ಸಮಯದಲ್ಲಿ ಬ್ರಹ್ಮನಿಂದ* ಆಜ್ಞಪ್ತರಾದ ನಾರದರೂ ಸಹ ಸ್ವರ್ಗದಲ್ಲಿ ಮಾತ್ರ ಬೆಳೆಯುವ ಪಾರಿಜಾತಪುಷ್ಪಸಮೇತರಾಗಿ ಅಲ್ಲಿಗೆ ಬಂದು ಸೇರಿದರು. ನಾರದರು ಬಂದವರೇ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ ಎಲ್ಲಾ ರಾಜರಿಗೂ ಕೇಳಿಸುವಹಾಗೆ ಸ್ಪಷ್ಟವಾಗಿ 'ಸರ್ವೋತ್ತಮಸ್ತ್ವಂ, ತ್ವಾದೃಶೋ ನಾಸ್ತಿ ಕಶ್ಚಿತ್' ಎಂದರೆ 'ನೀನೇ ಸರ್ವೋತ್ತಮ, ನಿನ್ನ ಸರಿಸಮಾನರು ಬೇರೆ ಯಾರೂ ಇಲ್ಲ' ಎಂದು ಹೇಳಿದರು. ಆ ಮಾತನ್ನು ಕೇಳಿ ಶ್ರೀಕೃಷ್ಣನು ಹೌದು ಎಂಬ ಒಪ್ಪಿಗೆಯನ್ನು ಸೂಚಿಸುತ್ತಾ 'ದಕ್ಷಿಣಾಭಿಃ ಸಾಕಂ'–'ದಕ್ಷಿಣೆಯೊಡನೆ' ಎಂದು ಉತ್ತರ ಕೊಟ್ಟನು. ಕೃಷ್ಣನ ಮಾತಿನ ರಹಸ್ಯ ಯಾರಿಗೂ ಅರ್ಥವಾಗಲಿಲ್ಲ. ಆದಕಾರಣ ಅವರೆಲ್ಲರೂ ನಾರದರನ್ನೇ ಈ ಮಾತಿನ ಅಭಿಪ್ರಾಯವೇನೆಂದು ಕೇಳಿದರು. ಅದಕ್ಕೆ ನಾರದರು ತಮ್ಮ ಹಿಂದಿನ ಅನುಭವವನ್ನು ಹೇಳಿ ಈ ಮಾತಿನ ಅರ್ಥವನ್ನು ವಿವರಿಸಿದರು. ಈ ಉಪಾಖ್ಯಾನವೇ ಹರಿವಂಶದಲ್ಲಿ ಧನ್ಯೋಪಾಖ್ಯಾನ ಎಂದು ಪ್ರಸಿದ್ಧವಾಗಿದೆ.

ಗ) ಧನ್ಯೋಪಾಖ್ಯಾನ-ನಾರದರ ಅನುಭವ—ರಾಜರುಗಳಿರಾ ಕೇಳಿ, ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನಾನು ಹಿಂದೊಮ್ಮೆ ಭಾಗೀರಥೀ ಸ್ನಾನಕ್ಕೆ ಹೋಗಿದ್ದಾಗ ಒಂದು ಕೂರ್ಮವನ್ನು ಕಂಡೆ. ಅದನ್ನು ಕಂಡು ಆಶ್ಚರ್ಯದಿಂದ ನಾನು ಅದಕ್ಕೆ 'ತ್ವಮುತ್ತಮೋ ನಾಸ್ತ್ಯಧಿಕಸ್ತವ'—'ನೀನು ಸರ್ವೋತ್ತಮ, ನಿನಗಿಂತ ದೊಡ್ಡವಸ್ತುವಿಲ್ಲ' ಎಂದು ಹೇಳಿದೆ. ಅದಕ್ಕೆ ಕೂರ್ಮವು 'ನನಗಿಂತ ಗಂಗೆ ದೊಡ್ಡವಳೆಂ'ದು ಹೇಳಿತು. ಗಂಗೆಯು 'ನನಗಿಂತ ವರುಣ ದೊಡ್ಡವನೆಂದ'ಳು ; ಅವನು 'ಭೂದೇವಿಯೇ (ಪಾರ್ವತೀ) ನನಗಿಂತ ದೊಡ್ಡಾಕೆ' ಎಂದ. ಭೂಮಿ (ಪಾರ್ವತಿಯು) 'ಬೆಟ್ಟಗಳು ನನ್ನನ್ನು ಹೊತ್ತಿವೆ, ಆದ್ದರಿಂದ ಬೆಟ್ಟಗಳೇ ಶ್ರೇಷ್ಠ' ಎಂದಳು. ಇಲ್ಲಿ ಗಿರಿ ಶಬ್ದದಿಂದ

* ಮುದ್ರಿತ ಹರಿವಂಶಗಳಲ್ಲಿ ನಾರದರು ಬ್ರಹ್ಮನ ಆಜ್ಞೆಯಿಂದ ಬಂದಿದ್ದರೆಂಬ ವಿಷಯ ಉಕ್ತವಾಗಿಲ್ಲ.

ಗರುಡ ಶೇಷರುದ್ರರನ್ನು ಗ್ರಹಣ ಮಾಡಬೇಕು. ಆ ಗಿರಿಗಳು ತಮಗಿಂತ ಬ್ರಹ್ಮ ದೊಡ್ಡಾತ ಎಂದರು. ಬ್ರಹ್ಮನನ್ನು ಕೇಳಲಿಕ್ಕೆ ಆತ 'ನನಗಿಂತ ವೇದ ದೊಡ್ಡದು' ಎಂದ. ಇಲ್ಲಿ ವೇದ ಎಂದರೆ ವೇದಾಭಿಮಾನಿ ಶ್ರೀಲಕ್ಷ್ಮೀ ಎಂದು ತಿಳಿಯಬೇಕು. ಲಕ್ಷ್ಮಿಯನ್ನು ಕೇಳಲು ಆಕೆ 'ನನಗಿಂತ ಯಜ್ಞಾಭಿಮಾನಿ ದೊಡ್ಡಾಕೆ' ಎಂದಳು. ಆವಳ ಅಭಿಪ್ರಾಯವೇನೆಂದರೆ 'ಕೇವಲ ನಾನು ಉತ್ತಮಳಲ್ಲ, ಯಜ್ಞನಾಮಕ ಪರಮಾತ್ಮನ ಸಹಿತಳಾಗಿದ್ದರೆ ಮಾತ್ರ ಉತ್ತಮಳು' ಎಂದು ಹೇಳಿದ್ದಳು. ಆ ಮಾತನ್ನೇ ಈಗ ಕೃಷ್ಣ 'ದಕ್ಷಿಣಾಭಿಃ ಸಾಕಂ' ಎಂದು ಪುನರುಕ್ತಿಯಾಗಿ ಹೇಳಿದ. ಲಕ್ಷ್ಮೀದೇವಿಯೇ ರುಕ್ಮಿಣಿಯಾಗಿ ಅವತರಿಸಿದ್ದಾಳಾದ್ದರಿಂದ 'ದಕ್ಷಿಣೆಯ ಜೊತೆ' ಎಂದರೆ 'ರುಕ್ಮಿಣೀಸಮೇತನಾಗಿ ನಾನು ಸರ್ವೋತ್ತಮನು, ನನ್ನ ಸಮಾನರು ಯಾರೂ ಇಲ್ಲ' ಎಂದು ಹೇಳಿದ—ಎಂದು ನಾರದರು ಕೃಷ್ಣನ ಮಾತಿನ ರಹಸ್ಯವನ್ನು ತಿಳಿಸಿದರು.

ಘ) ಕೃಷ್ಣನ ಬಲಪರೀಕ್ಷೆ—ನಾರದರ ಮಾತನ್ನು ಕೇಳಿ ಅಲ್ಲೇ ಕುಳಿತಿದ್ದ ಕುಂತೀದೇವಿ ಶ್ರೀಕೃಷ್ಣನಿಗೆ 'ನಿನ್ನ ಶಕ್ತಿಯನ್ನು ನಾನು ನೋಡಬೇಕೆಂದಿದ್ದೇನೆ. ಅದನ್ನು ನನಗೆ ತೋರಿಸು' ಎಂದಳು. ಆಗ ಕೃಷ್ಣ ಎಲ್ಲಾ ರಾಜರನ್ನೂ ಒಟ್ಟಿಗೆ ತನ್ನಮೇಲೆ ಯುದ್ಧಕ್ಕೆ ಬರುವಂತೆ ಆಹ್ವಾನಿಸಿದನು. ಮೊದಲು ಭೀಮನನ್ನು ಬಿಟ್ಟು ಮಿಕ್ಕ ಪಾಂಡವರೆಲ್ಲಾ ಯುದ್ಧಕ್ಕೆ ಬಂದು ಸೋತು ಹಿಂದಿರುಗಿದರು. ಆಮೇಲೆ ದುರ್ಯೋಧನಾದಿ ನೂರು ಮಂದಿ ಅಣ್ಣತಮ್ಮಂದಿರು ಯುದ್ಧಕ್ಕೆ ಬಂದು ಪರಾಜಿತರಾದರು. ಹೀಗೆ ಭೀಷ್ಮ, ದ್ರೋಣ ಕರ್ಣಾದಿಗಳೂ ಕೃಪಾಶ್ವತ್ಥಾಮಾದಿಗಳೂ ಅಲ್ಲಿ ನೆರೆದಿದ್ದ ಸಕಲ ರಾಜರೂ ಯುದ್ಧಮಾಡಿ ಸೋತುಹೋದರು. (ಹೀಗೆ ಅನೇಕ ಮಂದಿಯನ್ನು ಸೋಲಿಸಿದ್ದರಿಂದ ವಾಯುಸ್ತುತಿಯಲ್ಲಿ ಬಹ್ವೀಃ ಕೋಟೀರಟೀಕಃ-ಅನೇಕ ಕೋಟಿ ಎಂದರೆ ಅಳತೆಗೆ ಮೀರಿದ ಬಹುಸಂಖ್ಯಾಕರಾದ ರಾಜರನ್ನು ಎದುರಿಸಿದಿ—ಎಂದು ಹೇಳಿದೆಯೆಂದು ತಿಳಿಯತಕ್ಕದ್ದು.) ಭೀಮಸೇನ ಒಬ್ಬ ಮಾತ್ರ ಶ್ರೀಕೃಷ್ಣನೊಡನೆ ಯುದ್ಧಮಾಡಬಾರದೆಂದು ದೂರ ನಿಂತಿದ್ದ. ಕೃಷ್ಣ ಅವನನ್ನೂ ಕೂಗಿ 'ಗದಾ ಹಿಡಿದುಕೊಂಡು ನನ್ನ ಜೊತೆ ಯುದ್ಧಕ್ಕೆ ಬಾ'

ಎಂದು ಆಹ್ವಾನಿಸಿದನು.* ಸ್ವಾಮಿಯ ಆಜ್ಞೆ ಮೀರಬಾರದೆಂದು ಭೀಮ ಗದಾಪಾಣಿಯಾಗಿ ಹೋಗಿ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ ರಥದ ಎರಡು ಗಾಲಿಗಳನ್ನೂ ಹಿಡಿದು ಒತ್ತಿದನು. ಆಗ ಶ್ರೀಕೃಷ್ಣ ತನ್ನ ಅನಂತಬಲ ಪ್ರಕಟಿಸುವುದಕ್ಕಾಗಿ ಭೀಮನಸಹಿತ ರಥವನ್ನು ಎಳೆದುಕೊಂಡು ಹೋದನು. ಹೀಗೆ ಎಲ್ಲರನ್ನೂ ಶ್ರೀಕೃಷ್ಣ ಪರಾಜಯಿಸಿದ್ದನ್ನು ಕಂಡು ಕುಂತೀದೇವಿ ಲಜ್ಜಿತಳಾಗಿ 'ನಿನ್ನ ಬಲಪರೀಕ್ಷೆ ಮಾಡಿದ್ದು ಮಹಾಪರಾಧವಾಯಿತು, ನನ್ನನ್ನು ಕ್ಷಮಿಸು, ಸ್ವಾಮಿ' ಎಂದು ಬೇಡಿಕೊಂಡಳು. ಆಗ ಅಲ್ಲಿ ನೆರೆದಿದ್ದ ಎಲ್ಲ ರಾಜರೂ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದರು. ಕೊನೆಗೆ ನಾರದರು ಆ ಸಭಾಮಧ್ಯದಲ್ಲಿ ಶ್ರೀಕೃಷ್ಣನ ಕೈಗೆ ತಾನು ಸ್ವರ್ಗಲೋಕದಿಂದ ತಂದಿದ್ದ ಪಾರಿಜಾತಪುಷ್ಪವನ್ನು ಕೊಟ್ಟರು. ಅದನ್ನು ಅಪೂರ್ವವಾದ ಉಡುಗೊರೆಯೆಂದು ತಿಳಿದು ಶ್ರೀಕೃಷ್ಣ ರುಕ್ಮಿಣೀದೇವಿಗೆ ಕೊಟ್ಟನು. ರುಕ್ಮಿಣೀ ಅದನ್ನು ಪ್ರೀತ್ಯಾದರದಿಂದ ತಲೆಯಲ್ಲಿ ಮುಡಿದುಕೊಂಡಳು. ಈ ಕಥೆಯನ್ನೇ ಈ ಪ್ರಥಮಾರ್ಥ ತಿಳಿಸಿಕೊಡುತ್ತದೆ.

302. ಹರಿಪರವಾಗಿ ೨ನೇ ಅರ್ಥ—(ಪುರಾ.) ನರಕಾಸುರ ಸಂಹಾರಾದಿ ಮಾಹಾತ್ಮ್ಯ ಸಂಗ್ರಹಾರ್ಥವಾಗಿ ಈ ಎರಡನೇ ವ್ಯಾಖ್ಯಾನ ಮಾಡಲಾಗಿದೆ. (ಲೇ.) ಈ ವ್ಯಾಖ್ಯಾನಕಾರರು (ಪುಂಗನೂರು ರಾಘವೇಂದ್ರಾಚಾರ್ಯರು) ವ್ಯಾಖ್ಯಾನದ ಮಧ್ಯದಲ್ಲಿ ನರಕಾಸುರನಿಗೆ 'ಜೀವದ್ವಯಾವೇಶವಿತ್ತು' ಎಂಬ ಪ್ರಮೇಯವನ್ನು ಉಲ್ಲೇಖಿಸಿ ಅರ್ಥಮಾಡಿದ್ದಾರೆ. ಆದಕಾರಣ ಈ ಅರ್ಥ ಮನಸ್ಸಿಗೆ ನಾಟಬೇಕಾದರೆ ನರಕಾಸುರನ ಕಥೆಯೂ ಅವನ ಜೀವ-ದ್ವಯಾವೇಶದ ವಿಚಾರವೂ ತಿಳಿದಿರಬೇಕಾಗುತ್ತದೆ. ಆದಕಾರಣ ಭಾಗವತದಲ್ಲೂ (ದಶಮಸ್ಕಂಧ ಉತ್ತರಾರ್ಧ ೬೩-೬೪ನೇ ಅಧ್ಯಾಯ), ಹರಿವಂಶದಲ್ಲೂ (ಭ. ೯೧, ಬಾಂ. ೧೧೮, ಸೀ.ಉ. ವಿಷ್ಣುಪರ್ವದ ೬೩ ಅಧ್ಯಾಯ ಗ. ಪುಟ ೬೦೪-೧೦) ತಾತ್ಪರ್ಯನಿರ್ಣಯದಲ್ಲೂ (೨೦ ಅಧ್ಯಾ. ೮೩ರಿಂದ ೧೧೮ರವರೆಗಿನ ಮೂವತ್ತಾರು ಶ್ಲೋಕಗಳಲ್ಲೂ) ಹೇಳಿದ ಕಥೆಗಳನ್ನು ಸಂಗ್ರಹಿಸಿ ಮೊದಲು ಹೇಳಿ ಅನಂತರ ಜೀವದ್ವಯಾವೇಶದ ವಿಚಾರವನ್ನೂ ತಿಳಿಸಿ ಕೊನೆಗೆ ಅರ್ಥಕ್ಕೆ ಹೋಗುವೆನು.

---

* ಈ ಕಥೆಯೂ ಹರಿವಂಶಗಳಲ್ಲಿ ದೊರಕುವುದಿಲ್ಲ.

ಕ) ನರಕಾಸುರನ ಹಾವಳಿ—ನರಕಾಸುರನು ವರಾಹರೂಪಿ ಭಗವಂತನಿಂದ ಭೂದೇವಿಯಲ್ಲಿ ಹುಟ್ಟಿದ ಮಗ.[1] ಆದ್ದರಿಂದಲೇ ಅವನನ್ನು 'ಭೌಮ' (ಭೂಮಿಯ ಮಗ)ನೆಂದೂ ಕರೆಯುತ್ತಾರೆ. ವಿಷ್ಣುಪುತ್ರನಾದ ಕಾರಣ ಬ್ರಹ್ಮನು ಅವನ ವಾಸಕ್ಕಾಗಿ ಪ್ರಾಗ್ಜ್ಯೋತಿಷಪುರವೆಂಬ ದುರ್ಗಮವಾದ ಕೋಟೆಯನ್ನು ಕಟ್ಟಿಸಿಕೊಟ್ಟನು.[2] ನರಕಾಸುರ ಅದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡನಲ್ಲದೆ ಅದರ ಕೋಟೆಕೊತ್ತಲಗಳೆಲ್ಲ ಅಭೇದ್ಯವಾಗಿರುವಂತೆಯೂ ದುರ್ಗಮ್ಯವಾಗಿರುವಂತೆಯೂ ಬ್ರಹ್ಮನನ್ನು ಒಲಿಸಿಕೊಂಡು ವರ ಪಡೆದನು.[3] ಆ ಪ್ರಾಗ್ಜ್ಯೋತಿಷಪುರಕ್ಕೆ ಗಿರಿದುರ್ಗ, ಜಲದುರ್ಗ, ಪಾಶದುರ್ಗಗಳು ಮಾತ್ರವಲ್ಲದೆ ಮುರನೆಂಬ ಅಸುರನ ತಂತ್ರದಿಂದ ಖಡ್ಗದ ಅಲುಗಿನಂತೆ ಹರಿತವಾದ ಬಾಯುಳ್ಳ ಆರುಸಾವಿರ ಪಾಶದುರ್ಗಗಳೂ ಇದ್ದುವು.[4] ಜೊತೆಗೆ ಸ್ವಯಂ ನರಕಾಸುರನೂ ಅವನ ಐದು ಜನ ಮಂತ್ರಿಗಳೂ ಬ್ರಹ್ಮನ ವರದಿಂದ ಅವಧ್ಯರಾಗಿದ್ದರು.[5] ಒಬ್ಬೊಬ್ಬ ಮಂತ್ರಿಗೂ ಏಳೇಳು ಜನ ಮಕ್ಕಳಿದ್ದರು; ಹೀಗೆ ಆ ಮಂತ್ರಿಮಕ್ಕಳೇ ಮೂವತ್ತೈದು ಜನ ಇದ್ದರು. ಅವರೆಲ್ಲರೂ ಈಶ್ವರನ ವರದಿಂದ ಅವಧ್ಯರಾಗಿದ್ದರು.

ಹೀಗೆ ಅವನೂ ಅವನ ಮಂತ್ರಿಗಳೂ ಮಂತ್ರಿಪುತ್ರರೂ ಎಲ್ಲರೂ ವರಗಳ ಬಲದಿಂದ ಅವಧ್ಯರಾಗಿದ್ದುದರಿಂದ ಅವರನ್ನು ಎದುರಿಸುವವರೇ ಇಲ್ಲದಂತಾಯಿತು. ನರಕಾಸುರ ಲೋಕಕಂಟಕನಾಗಿ ಮೂರು ಲೋಕಗಳಲ್ಲೂ ಧಾಳಿಮಾಡಿ ಎಲ್ಲೆಲ್ಲಿ ಏನೇನು ಅಮೂಲ್ಯರತ್ನಗಳು ಸಿಕ್ಕರೂ ಎಲ್ಲವನ್ನೂ ತನ್ನ ರಾಜಧಾನಿ ಪ್ರಾಗ್ಜ್ಯೋತಿಷಪುರಕ್ಕೆ ತಂದು ಇಟ್ಟುಕೊಳ್ಳಲಾರಂಭಿಸಿದನು.

---

1 ಕ್ರೋಡರೂಪಾತ್ । ವಿಷ್ಣೋರ್ಜಾತಾಯ (ತಾ.ನಿ. ೨೦/೯೧) 2 ಬ್ರಹ್ಮಣಾ.... ಅಸ್ಯ ದುರ್ಗಂ ಚ ದತ್ತಂ ಪ್ರಾಗ್ಜ್ಯೋತಿಷಂ ನಾಮ ಪುರಂ (ಅಲ್ಲೇ) 3 ಅಭೇದ್ಯತ್ವಮರಿಭಿರತಾಯುರ್ಗತಾ ಚ ದತ್ತಾ ದುರ್ಗಾಣಾಂ ಬ್ರಹ್ಮಣಾಽಽರಾಧಿತೇನ (ಅಲ್ಲೇ ೯೩ಶ್ಲೋ.) 4 ಗಿರಿದುರ್ಗೈಃ ಶಸ್ತ್ರದುರ್ಗೈರ್ಮುರಪಾಶಾಯುತೈರ್ವೃತಮ್ (ಭಾಗ ೧೦/೬೩/೫) ಆಸೀತ್ಬಾಹ್ಯೇ ಗಿರಿದುರ್ಗಂ ತದಂತಃ ಪಾನೀಯದುರ್ಗಂ ಮೌರವಂ ಪಾಶದುರ್ಗಮ್। ತಸ್ಯಾಪ್ಯಂತಃ ಕ್ಷುರಧಾರೋಪಮಂತತ್ ಪಾಶಾಶ್ಚತೇ ಷಟ್ಸಹಸ್ರಾಃ (ತಾ.ನಿ, ೯೨ ಶ್ಲೋ.) 5 ಭೌಮೋಽಪ್ಯಾಸೀದ್ ಬ್ರಹ್ಮವರಾದವಧ್ಯಃ । ತಸ್ಯಾಮಾತ್ಯಾನಾಂ ತದ್ವದವಧ್ಯತಾ ಚ: (ಅಲ್ಲೇ, ೯೦ ಶ್ಲೋ.)

ಸ್ವರ್ಗಕ್ಕೆ ಮುತ್ತಿಗೆ ಹಾಕಿ ದೇವತೆಗಳ ತಾಯಿಯಾದ ಅದಿತಿದೇವಿ ಧರಿಸಿದ್ದ ಕರ್ಣಕುಂಡಲಗಳನ್ನೂ ವರುಣನ ದಿವ್ಯವಾದ ಸದಾ ನೀರು ಸ್ರವಿಸುವ ಛತ್ರವನ್ನೂ ಅಪಹರಿಸಿಕೊಂಡು ಬಂದನು. ಇನ್ನೂರು ಯೋಜನ ಉದ್ದಗಲವಿದ್ದ ದೇವೇಂದ್ರನ ರತ್ನಪರ್ವತವನ್ನು ತನ್ನೂರಿಗೆ ಸಾಗಿಸಿದನು. ನೈಋತ್ಯ ಕೋಣಾಧಿಪತಿಯಾದ ನಿಋತಿರಾಕ್ಷಸನನ್ನು ಸೋಲಿಸಿ ಅವನ ವಶದಲ್ಲಿದ್ದ ಇನ್ನೂರು ಯೋಜನ ಉದ್ದದ ಹೇಮರಾಶಿಯನ್ನೂ ರತ್ನರಾಶಿಯನ್ನೂ ತಂದು ತನ್ನ ಬೊಕ್ಕಸಕ್ಕೆ ಸೇರಿಸಿದನು. ಚತುರ್ದಂತಯುಕ್ತವಾದಂಥಾ ಐರಾವತದ ಜೊತೆ ಕ್ಷೀರಸಮುದ್ರದಲ್ಲಿ ಹುಟ್ಟಿದಂಥಾ ಆರು ಸಾವಿರ ಆನೆಗಳನ್ನು ತಂದು ತನ್ನ ಪಟ್ಟಣದಲ್ಲಿಟ್ಟುಕೊಂಡನು. ಹೋದಹೋದಲ್ಲೆಲ್ಲಾ ರಾಜರನ್ನು ಸೋಲಿಸಿ ಅವರ ರಾಜಕನ್ನಿಕೆಯರನ್ನೂ ಸುಂದರ ದೇವಕನ್ಯೆಯರನ್ನೂ ಗಂಧರ್ವ ಕನ್ನಿಕೆಯರನ್ನೂ ಸೇರಿಸಿ ಹದಿನಾರು ಸಾವಿರದ ಒಂದುನೂರ ಕನ್ಯಾ-ಮಣಿಗಳನ್ನು ಕೈಸೆರೆ ತಂದು ರಾಣಿವಾಸದಲ್ಲಿ ಬಂಧಿಸಿದನು. ಅದಕ್ಕೂ ಹೆಚ್ಚಾಗಿ ಹಿಮವತ್ಪರ್ವತ ಪ್ರದೇಶದಲ್ಲಿ ತಪಸ್ಸು ಮಾಡುತ್ತಿದ್ದ ಮಹರ್ಷಿಗಳಿಗೆಲ್ಲಾ ತಪಸ್ಸು ಭಂಗಮಾಡುತ್ತಾ ವಿಚಿತ್ರ ಹಿಂಸೆ ಕೊಡುತ್ತಿದ್ದನು. ಹೀಗೆ ನರಕಾಸುರನು ಮೂರು ಲೋಕಗಳನ್ನೂ ನಾನಾರೀತಿಯಿಂದ ಹಿಂಸಿಸಲಾರಂಭಿಸಿದನು.

ಖ) ಅವನ ವಧೆಗಾಗಿ ಪ್ರಾರ್ಥನೆ—ಅತ್ತ ರೈವತಪರ್ವತದಲ್ಲಿ ಸಕಲ ರಾಜಾಧಿರಾಜರ ಸಮ್ಮುಖದಲ್ಲಿ ಶ್ರೀಕೃಷ್ಣನು ರುಕ್ಮಿಣೀದೇವಿಗೆ ಪಾರಿಜಾತ ಪುಷ್ಪವನ್ನು ಕೊಟ್ಟು ಗೌರವಿಸಿದ ವಿಚಾರವನ್ನು ಕೇಳಿ ಈರ್ಷ್ಯಾಸೂಯಾದ್ಯ-ಶೇಷ ದೋಷದೂರಳಾದರೂ ಸತ್ಯಭಾಮಾದೇವಿ ಪ್ರಾಕೃತಸ್ತ್ರೀಯಂತೆ ತನಗೆ ಅಂಥಾ ಗೌರವ ಕೊಡಲಿಲ್ಲವೆಂದು ಕೃಷ್ಣನ ಮೇಲೆ ಮುನಿಸಿಕೊಂಡಳು.[1] ಶ್ರೀಕೃಷ್ಣ ಅವಳನ್ನು ಸಮಾಧಾನಮಾಡಿ ಅವಳಿಗೆ ದೇವೇಂದ್ರನ ಸಭೆಯಲ್ಲೇ

1 ತಥಾಪಿ ಸಾ ಪ್ರಮದಾನಾಂ ಸ್ವಭಾವ-ಪ್ರಕಾಶನಾರ್ಥಂ ಕುಪಿತೇವಾಸ ಸತ್ಯಾ। ಸಾಕಂ ರುಕ್ಮಿಣ್ಯಾ ರಾಜಮಧ್ಯೇ ಪ್ರವೇಶಾತ್ ಸ್ತವಾದೃಷೇಃ ಪುಷ್ಪದಾನಾಚ್ಚ ದೇವೀ (ತಾ.ನಿ. ೮೩-೪) ತಥಾಪಿ-ಸತ್ಯಭಾಮೆಯೂ ಸಹ ಸಾಕ್ಷಾಲ್ಲಕ್ಷ್ಮೀಸ್ವರೂಪಳೇ ಆಗಿ ನಿರ್ದೋಷಳಾಗಿದ್ದರೂ ಸಹ, ಸ್ತವಾದ್ ಋಷೇಃ-ನಾರದರು ಅವಳನ್ನು ಹೊಗಳಿದ್ದರಿಂದಲೂ ಎಂದರ್ಥ.

ಪೂಜೆಮಾಡಿಸಿ ಪಾರಿಜಾತದ ಒಂದು ವೃಕ್ಷವನ್ನೇ ಅವಳ ಅರಮನೆಯ ಅಂಗಳದಲ್ಲಿ ಸ್ಥಾಪಿಸುವುದಾಗಿ ಭರವಸೆ ಕೊಟ್ಟು ಸಮಾಧಾನಮಾಡುತ್ತಿದ್ದನು. ಆ ಹೊತ್ತಿಗೆ ಸರಿಯಾಗಿ ಒಂದು ಕಡೆ ಸ್ವರ್ಗಲೋಕದಿಂದ ದೇವೇಂದ್ರನು ಸಕಲ ದೇವತೆಗಳೊಡನೆ ಬಂದು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ನರಕಾಸುರ ಅಪಹರಿಸಿಕೊಂಡು ಹೋಗಿದ್ದ ಅದಿತಿಯ ಕರ್ಣಕುಂಡಲಗಳನ್ನು ಕೊಡಿಸಬೇಕೆಂದು ಪ್ರಾರ್ಥಿಸಿಕೊಂಡನು. ಇನ್ನೊಂದು ಕಡೆಯಿಂದ ನರಕಾಸುರನಿಂದ ಪೀಡಿತರಾದ ಋಷಿಗಳೂ ಸಹ ಬದರಿಯಿಂದ ಬಂದು ಶ್ರೀಕೃಷ್ಣನಿಗೆ ತಮಗೆ ನರಕಾಸುರನಿಂದ ಆಗುತ್ತಿದ್ದ ಬಾಧೆಯನ್ನು ವಿವರಿಸಿ ಅವನನ್ನು ಸಂಹರಿಸುವಂತೆ ಕೇಳಿಕೊಂಡರು. ಆದರಿಂದ ಶ್ರೀಕೃಷ್ಣ ನರಕಾಸುರನನ್ನು ವಧಿಸಲು ಹೊರಟನು.

ಗ) ನರಕಾಸುರನ ವಧೆ—(ಹರಿವಂಶದಲ್ಲೂ ಭಾಗವತದಲ್ಲೂ ತಾತ್ಪರ್ಯನಿರ್ಣಯದಲ್ಲಿ ಕೂಡ ನರಕಾಸುರನೊಡನೆ ನಡೆದ ಯುದ್ಧದ ವರ್ಣನೆ ವಿಸ್ತಾರವಾಗಿ ಹೇಳಿದೆ. ನಮಗೆ ಆ ವರ್ಣನೆ ಅಪ್ರಸಕ್ತವಾದ್ದರಿಂದ ವಧೆಯ ಮುಖ್ಯವಿಷಯಗಳನ್ನು ಮಾತ್ರ ಸಂಗ್ರಹಿಸಿ ಇಲ್ಲಿ ಹೇಳಿದೆ.) ಪ್ರಾಗ್-ಜ್ಯೋತಿಷಪುರಕ್ಕೆ ಹೋಗುವುದಕ್ಕಾಗಿ ಶ್ರೀಕೃಷ್ಣ ಗರುಡನನ್ನು ಸ್ಮರಿಸಿಕೊಂಡನು. ಆ ಕ್ಷಣ ಗರುಡ ಎದುರಿಗೆ ಬಂದು ನಿಂತ. ಭಗವಂತ ಸತ್ಯಭಾಮಾಸಮೇತನಾಗಿ ಗರುಡಾರೂಢನಾಗಿ ಪ್ರಾಗ್ಜ್ಯೋತಿಷಪುರಕ್ಕೆ ಪ್ರಯಾಣ ಬೆಳೆಸಿದನು.[1] ಕೋಟೆಯ ಬಳಿ ಹೋಗುತ್ತಲೇ ಸ್ವಾಮೀ ಶ್ರೀಕೃಷ್ಣ ಗದೆಯಿಂದ ಗಿರಿದುರ್ಗವನ್ನೂ ವಾಯುವ್ಯಾಸ್ತ್ರದಿಂದ ಜಲದುರ್ಗವನ್ನೂ ಕೌಮೋದಕೀಖಡ್ಗದಿಂದ ಪಾಶದುರ್ಗವನ್ನೂ ಭೇದಿಸಿ ಪುರಪ್ರವೇಶಮಾಡಿ ಶಂಖನಾದ ಮಾಡಿದನು. ಆ ಧ್ವನಿಯನ್ನು ಕೇಳಿ ಮೊದಲು ಪಂಚಮಂತ್ರಿಗಳೂ ಅನಂತರ ಅವರ ಮೂವತ್ತೈದು ಮಂದಿ ಮಂತ್ರಿಪುತ್ರರೂ ಕ್ರಮವಾಗಿ ಯುದ್ಧಕ್ಕೆ ಬಂದರು. ಅವರೆಲ್ಲರೂ ಬ್ರಹ್ಮ-ರುದ್ರರ ವರಗಳಿಂದ ಅವಧ್ಯರಾಗಿದ್ದರೂ ಕೃಷ್ಣ ಎಲ್ಲರನ್ನೂ ಮೃತ್ಯುವಿನ ಬಾಯಿಗೆ ತುತ್ತುಮಾಡಿಬಿಟ್ಟನು. ಅನಂತರ ನರಕಾಸುರನೇ ಮೂವತ್ತು ಅಕ್ಷೋಹಿಣೀಸೈನ್ಯ ಸಮೇತನಾಗಿ ಯುದ್ಧಕ್ಕೆ ಬಂದನು. ನರಕಾ-

---

7 ಸಭಾರ್ಯೋ ಗರುಡಾರೂಢಃ-ಪ್ರಾಗ್ಜ್ಯೋತಿಷಪುರಂ ಯಯೌ (ಭಾಗ ೧೦/೬೪/೪)

ಸುರನ ಸೈನ್ಯವು ಕೃಷ್ಣನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದುವು.1 ಅತ್ತ ನರಕನೂ ಅನೇಕ ಬಾಣಗಳನ್ನು ಹೊಡೆಯುತ್ತಿರಲು ಕೃಷ್ಣ ಮಂದಹಾಸದಿಂದ ಅವನ್ನೆಲ್ಲಾ ಕತ್ತರಿಸಿ ಹಾಕುತ್ತಿದ್ದನು. ಅವರಿಬ್ಬರ ಯುದ್ಧವು ಅದ್ಭುತವಾಗಿತ್ತು. ಭೌಮನ ಸೈನ್ಯದಲ್ಲಿ ಕಾಲು ಭಾಗವನ್ನು (ಏಳು ಅಕ್ಷೋಹಿಣಿಯನ್ನು) ಗರುಡನೇ ರೆಕ್ಕೆಗಳಿಂದ ಬಡಿಬಡಿಯೇ ಕೊಂದುಬಿಟ್ಟನು. ಮಿಕ್ಕದ್ದನ್ನು ಕೃಷ್ಣ ಬಾಣಗಳಿಂದ ಲೀಲಾಮಾತ್ರದಲ್ಲಿ ನಾಶಮಾಡಿದನು. ಅದರಿಂದ ಕ್ರುದ್ಧನಾದ ನರಕಾಸುರ ಕೃಷ್ಣನ ಮೇಲೆ ಬ್ರಹ್ಮದತ್ತವಾದ ಅಮೋಘವಾದ ಶತಘ್ನೀ ಎಂಬ ಆಯುಧವನ್ನು ಪ್ರಯೋಗಿಸಿದನು. ಯದ್ಯಪಿ ಶ್ರೀಕೃಷ್ಣನಿಗೆ ಯಾವ ಅಸ್ತ್ರ-ಶಸ್ತ್ರದಿಂದಲೂ ಬಾಧೆಯಿಲ್ಲವಾದರೂ ಬ್ರಹ್ಮನಿಗೆ ಕಿಂಚಿತ್ ಗೌರವ ಕೊಡುವುದಕ್ಕಾಗಿ ಮೂರ್ಛಿತನಾದಂತೆ ನಟಿಸಿದನು. ಕೃಷ್ಣ ಮೂರ್ಛಿತನಾದುದನ್ನು ಕಂಡು ಸತ್ಯಭಾಮೆ ತಾನೇ ಕೃಷ್ಣನ ಧನುಸ್ಸು ಹಿಡಿದು ಬಾಣಗಳಿಂದ ನರಕಾಸುರನ ಬಾಣಗಳನ್ನು ಛೇದಿಸಿ ಅವನ ರಥವನ್ನೂ ನಾಶಮಾಡಿಬಿಟ್ಟಳು. ಅಷ್ಟರಲ್ಲೇ ಕೃಷ್ಣ ಚೇತರಿಸಿಕೊಂಡು ನರಕಾಸುರನೊಡನೆ ಯುದ್ಧಕ್ಕೆ ಸಿದ್ಧನಾದ. ನರಕಾಸುರನೂ ಬೇರೆ ರಥದಲ್ಲಿ ಯುದ್ಧ ಮಾಡಲಾರಂಭಿಸಿದ. ಇಬ್ಬರಿಗೂ ಸ್ವಲ್ಪಹೊತ್ತು ಭಯಂಕರ ಯುದ್ಧವಾಯಿತು. ಕೊನೆಗೆ ನರಕಾಸುರ ಕೃಷ್ಣನನ್ನು ಹೊಡೆಯುವುದಕ್ಕೆಂದು ಒಂದು ಶೂಲವನ್ನು ಎತ್ತಿಕೊಂಡ. ಅದನ್ನು ಹೊಡೆಯುವಷ್ಟರಲ್ಲೇ ಸ್ವಾಮಿ ಅವನ ತಲೆಯನ್ನು ಚಕ್ರದಿಂದ ಕತ್ತರಿಸಿಹಾಕಿಬಿಟ್ಟ:—ಶೂಲಂ ಭೌಮೋಽಚ್ಯುತಂ ಹಂತುಮಾದದೇ ವಿತಥೋದ್ಯಮಃ । ತದ್ವಿಸರ್ಗಾತ್ ಪೂರ್ವಮೇವ ನರಕಸ್ಯ ಶಿರೋ ಹರಿಃ। ಅಪಾಹರದ್ ಗಜಸ್ಥಸ್ಯ ಚಕ್ರೇಣ ಕ್ಷುರನೇಮಿನಾ॥ (ಹಂತುಂ-ಹೊಡೆಯಲು, ಆದದೇ—ಎತ್ತಿಕೊಂಡನು. ವಿತಥೋದ್ಯಮಃ-ಅವನ ಪ್ರಯತ್ನ ಕೈಗೂಡಲಿಲ್ಲ, ತದ್ವಿಸರ್ಗಾತ್-ಅದನ್ನು ಬಿಡುವುದಕ್ಕೆ (ಮೊದಲೇ), ಅಪಾಹರತ್-ಅಪಹರಿಸಿದನು, ಕತ್ತರಿಸಿಹಾಕಿದನು. ಕ್ಷುರನೇಮಿನಾ-ಕ್ಷೌರದ ಕತ್ತಿಯಂತೆ ಹರಿತವಾಗಿದ್ದ (ಭಾಗ. ೬೪/೧೧)

1 ವರೂಥಿನೀ ದೈತ್ಯಪತೇಃ ಸುಘೋರಾನ್ ಶರಾನ್ ವವರ್ಷಾಚ್ಯುತಮೂರ್ಧ್ನಿ ದುರ್ಜಯಾ (ಭಾಗ ೬೩/೨೪)

ಘ) ವಧಾನಂತರ—ಸ್ವಾಮಿ ಶ್ರೀಕೃಷ್ಣ ನರಕಾಸುರನನ್ನು ವಧೆ ಮಾಡಿ ಪ್ರಾಗ್ಜ್ಯೋತಿಷಪಟ್ಟಣವನ್ನು ಪ್ರವೇಶ ಮಾಡಿದನು. ಆ ಕೂಡಲೇ ನರಕಾಸುರನ ಭೂದೇವಿ ಅದಿತಿಯ ಕುಂಡಲಗಳನ್ನೂ ವೈಜಯಂತೀಮಾಲೆಯನ್ನೂ ಹಿಡಕೊಂಡು ನರಕಾಸುರನ ಮಗನೂ ತನ್ನ ಮೊಮ್ಮಗನೂ ಆದ ಭಗದತ್ತನನ್ನು ಮುಂದಿಟ್ಟುಕೊಂಡು ಬಂದು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಸ್ತೋತ್ರ ಮಾಡಿದಳು (ಭಾಗ ೬೪/೧೮-೨೬). ಅವಳ ಪ್ರಾರ್ಥನೆಯಂತೆ ಭಗದತ್ತನಿಗೆ ಆ ರಾಜ್ಯದಲ್ಲಿ ಅಭಿಷೇಕಮಾಡಿ ಸುಪ್ರತೀಕವೆಂಬ ಒಂದು (ನಾಲ್ಕು ದಂತದ, ಕ್ಷೀರಸಮುದ್ರದಲ್ಲಿ ಹುಟ್ಟಿದ) ಆನೆಯನ್ನು ಕೊಟ್ಟು ಮಿಕ್ಕ ರತ್ನಾ-ಭರಣಗಳನ್ನೆಲ್ಲಾ ಅಲ್ಲದೆ ಆರು ಸಾವಿರ ಆನೆಗಳನ್ನೂ ದ್ವಾರಾವತೀಗೆ ಕಳುಹಿಸಿಬಿಟ್ಟನು. ಇನ್ನೂರು ಯೋಜನದ ರತ್ನಪರ್ವತವನ್ನು ಗರುಡನ ಮೇಲೆ ಹೇರಿಸಿ ಸ್ವರ್ಗಕ್ಕೆ ಕಳುಹಿಸಿದನು. ವರುಣನ ಛತ್ರವನ್ನು ಅವನಿಗೆ ಕೊಡಿಸಿಬಿಟ್ಟನು. ಸೆರೆಸಿಕ್ಕಿದ್ದ ಹದಿನಾರು ಸಾವಿರದ ನೂರು ಮಂದಿ ಕನ್ನಿಕೆಯರನ್ನೂ ದ್ವಾರಾವತೀಗೆ ಮೇನಾಗಳಲ್ಲಿ ಕೂಡಿಸಿ ಕಳುಹಿಸಿಬಿಟ್ಟನು. ಅದಿತಿಯ ಕುಂಡಲಗಳನ್ನು ತಾನೇ ಮುದ್ದಾಂ ಅದಿತಿಗೆ ಕೊಡಬೇಕೆಂದು ಸತ್ಯಭಾಮೆಯನ್ನೂ ಗರುಡನ ಮೇಲೆ ಕೂಡಿಸಿಕೊಂಡು ದೇವಲೋಕಕ್ಕೆ ಹೋಗಿ ಅದಿತಿಯನ್ನು ಕಂಡು ನಮಸ್ಕಾರಮಾಡಿ ಅವಳಿಗೆ ಕರ್ಣಕುಂಡಲಗಳನ್ನು ಒಪ್ಪಿಸಿಬಿಟ್ಟನು.

ಙ) ಅರವತ್ತು ಸಾವಿರ ಕನ್ನಿಕೆಯರ ವಿಚಾರ—ಈ ಎರಡನೇ ಅರ್ಥದಲ್ಲಿ ಈ ಕನ್ನಿಕೆಯರ ವಿಚಾರವೂ ಕಿಂಚಿತ್ ಪ್ರಸಕ್ತವಾಗಿದೆಯಾದರೂ ಇವರ ಬಗ್ಗೆ ಹೆಚ್ಚಿನ ಈ ವಿಷಯಗಳು ತಾತ್ಪರ್ಯದಲ್ಲಲ್ಲದೆ ಬೇರೆ ಎಲ್ಲೂ ಉಪಲಭ್ಯವಾಗಿಲ್ಲವಾದಕಾರಣ ಪ್ರಸಂಗವಶಾತ್ ಅವರ ಬಗ್ಗೆ ನಾಲ್ಕು ಮಾತುಗಳನ್ನು ತಾತ್ಪರ್ಯನಿರ್ಣಯದಲ್ಲಿ ಹೇಳಿದ್ದನ್ನೇ (ಅಧ್ಯಾ ೨೦, ೧೧೨-೧೬; ೧೪೦-೪೧) ಹೇಳುವೆನು. ನರಕಾಸುರನನ್ನು ಸಂಹಾರಮಾಡಿದ ಬಳಿಕ ನಮ್ಮ ಸ್ವಾಮೀ ಆ ಅಸುರನ ಪಟ್ಟಣಪ್ರವೇಶಮಾಡಿ ನರಕಾಸುರ ಹೊತ್ತು ತಂದಿದ್ದ ಅಪೂರ್ವ ರತ್ನಗಳನ್ನೆಲ್ಲಾ ಪರೀಕ್ಷಿಸಿದನು. ಅವನ ಅಂತಃಪುರಕ್ಕೆ ಹೋದಾಗ ಅವನು ಸೆರೆಹಿಡಿದು ತಂದು ತಂದು ಕೂಡಿ ಹಾಕಿದ್ದ ಅರವತ್ತು ಸಾವಿರದ ಒಂದುನೂರು ಮಂದಿ ಕನ್ಯೆಯರನ್ನು ಕಂಡನು. ಅವರು ಯಾರೆಂದರೆ ಕೆಲವರು

ರಾಜಕನ್ನಿಕೆಯರು, ಅವರನ್ನು ಅವರ ತಂದೆಗಳನ್ನು ಸೋಲಿಸಿ ಸೆರೆಹಿಡಿದು ತಂದಿದ್ದನು. ಕೆಲವರು ದೇವಕನ್ನಿಕೆಯರೂ ಕೆಲವರು ಗಂಧರ್ವಕನ್ನಿಕೆಯರೂ ಇದ್ದರು. ಅವರಿಗೆ ಯಾರಿಗೂ ಇನ್ನೂ ರಜೋದರ್ಶನವಾಗಿರಲಿಲ್ಲ. ಗಂಧರ್ವ ಕನ್ನಿಕೆಯರ ಪೈಕಿ ತ್ವಷ್ಟೃ ಎಂಬ ಆದಿತ್ಯನ ಮಗಳಾದ ಕಶೇರು ಎಂಬುವಳು ಎಲ್ಲರಿಗಿಂತ ಗುಣಜ್ಯೇಷ್ಠಳು. ಆ ಆರವತ್ತು ಸಾವಿರದ ಒಂದು ನೂರು ಮಂದಿಯೂ ಮೊದಲಿಗೆ ಅಗ್ನಿಪುತ್ರರಾಗಿದ್ದರು. ಭಗವಂತನ ಅಂಗಸಂಗ ಅಪೇಕ್ಷಿಸಿ ಮುಖ್ಯಪ್ರಾಣದೇವರನ್ನು ಕುರಿತು ತಪಸ್ಸು ಮಾಡಿ ಎಲ್ಲರೂ ಹೆಂಗಸರಾದರು. ಆದರೂ ಅವರಿಗೆ ಸ್ತ್ರೀಯರ ಹಾವಭಾವಗಳು ಬರಲಿಲ್ಲ. ಆದರಿಂದ ಅವರೆಲ್ಲ ಪುನಃ ಬದರಿಕಾಶ್ರಮಕ್ಕೆ ಹೋಗಿ ನರನಾರಾಯಣರ ಸೇವೆ ಮಾಡುತ್ತಾ ನಾರಾಯಣನನ್ನು ಕುರಿತು ತಪಸ್ಸುಮಾಡಿ ಅವನ ಅನುಗ್ರಹ ದಿಂದ ಎಲ್ಲರೂ ಅಪ್ಸರಸ್ತ್ರೀಯರಾಗಿ ಹುಟ್ಟಿ ಸ್ತ್ರೀಯರಿಗೆ ಉಚಿತವಾದ ಹಾವ-ಭಾವಗಳನ್ನು ಹೊಂದಿದರು. ಕೊನೆಗೆ ದ್ವಾಪರದಲ್ಲಿ ಪುನಃ ದೇಶ ದೇಶದ ರಾಜರ ಕನ್ನಿಕೆಯರಾಗಿ ಹುಟ್ಟಿದರು. ಅನರೆಲ್ಲ ಆಜಾನದೇವತೆಗಳೆಂಬ ದೇವತೆಗಳ ಗುಂಪಿಗೆ ಸೇರಿದವರು. ಕೈವಲ್ಯದೇವತೆಗಳು ಗಂಧರ್ವರ ಮಕ್ಕಳಾಗಿ ಹುಟ್ಟಿದ್ದರು. ಅವರನ್ನೆಲ್ಲ ನರಕಾಸುರ ಕೈಸೆರೆಹಿಡಿದು ರಾಣೀವಾಸದಲ್ಲಿಟ್ಟಿದ್ದ. ರಾಣಿವಾಸಕ್ಕೆ ಶ್ರೀಕೃಷ್ಣ ಹೋಗಿ ಪರೀಕ್ಷಿಸಿದಾಗ ಅವರೆಲ್ಲ ಕೃಷ್ಣನನ್ನೆ ಭಗವಂತನೆಂದು ತಿಳಿದು ಅವನಲ್ಲಿ ಮೋಹಿತರಾದರು. ಅದನ್ನು ಕಂಡು ಶ್ರೀಕೃಷ್ಣ ಅವರೆಲ್ಲರನ್ನೂ ಮೇನೆಗಳಲ್ಲಿ ದ್ವಾರಾವತೀಗೆ ಕಳುಹಿಸಿಕೊಟ್ಟು ಸ್ವರ್ಗದಿಂದ ಹಿಂದಿರುಗಿದ ಮೇಲೆ ಅವರೆಲ್ಲರನ್ನೂ ವಿಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಂಡು ಅವರೆಲ್ಲರಿಗೂ ಬೇರೆ ಬೇರೆ ಅರಮನೆಗಳನ್ನು ಕಟ್ಟಿಸಿಕೊಟ್ಟು ಅವರೆಲ್ಲರಿಗೂ ಭೋಗ ಕೊಟ್ಟು ತೃಪ್ತಿ ಪಡಿಸಿದನು.

ಇನ್ನು ಈ ಎರಡನೇ ಅರ್ಥದಲ್ಲಿ ಜೀವದ್ವಯಾವೇಶದ ವಿಚಾರವೂ ಪ್ರಸಕ್ತವಾಗಿರುವುದರಿಂದ ಆ ಬಗ್ಗೆಯೂ ನಾಲ್ಕು ಮಾತು ಹೇಳುವುದು ಉಚಿತವಾಗಿದೆ.

ಚ) **ಜೀವದ್ವಯಾವೇಶದ ವಿಚಾರ—ಪೂತನಾ, ಕಂಸ, ನರಕಾಸುರ** ಮೊದಲಾದ ವಿಷ್ಣುದ್ವೇಷಿಗಳಲ್ಲಿಯೇ, ದೈತ್ಯರ ಜೊತೆ ಒಬ್ಬೊಬ್ಬ ಸಜ್ಜನರ

(ಎಂದರೆ ವಿಷ್ಣುಭಕ್ತರ) ಆವೇಶವೂ ಇರುವುದರಿಂದ ಅವರಲ್ಲಿ ಉಭಯವಿಧ ವರ್ತನೆ—ದ್ವೇಷ ಮತ್ತು ಭಕ್ತಿ ಎರಡೂ ಕಂಡುಬರುತ್ತದೆಯೆಂದು ಶ್ರೀಮದಾಚಾರ್ಯರು ಅನೇಕ ಕಡೆ ತೋರಿಸಿಕೊಟ್ಟಿದ್ದಾರೆ. ತಾತ್ಪರ್ಯನಿರ್ಣಯದ ಹನ್ನೆರಡನೇ ಅಧ್ಯಾಯದಲ್ಲಿ ಪೂತನಿಯ ವಿಚಾರ ಎತ್ತಿ ರಾಮಾವತಾರದಲ್ಲಿ ತಾಟಕಿಯಾಗಿದ್ದವಳೇ ದ್ವಾಪರದಲ್ಲಿ ಪೂತನಿಯಾದಳೆಂದೂ ಆದರೆ ಅವಳಲ್ಲಿ ಊರ್ವಶೀ ಆವೇಶವಿತ್ತೆಂದೂ ಅದರಿಂದಲೇ ಅವಳಿಗೆ ಶ್ರೀಕೃಷ್ಣನಿಗೆ ಸ್ತನ್ಯ ಕೊಡಬೇಕೆಂಬ ಬುದ್ಧಿ ಹುಟ್ಟಿತೆಂದೂ ಹೇಳಿದ್ದಾರೆ. ಅಲ್ಲದೆ ಶ್ರೀಕೃಷ್ಣನ ಸ್ಪರ್ಶವಾದ್ದರಿಂದ ಊರ್ವಶೀಗೆ ಶಾಪನಿವೃತ್ತಿಯಾಗಿ ಸ್ವರ್ಗವಾಯಿತೆಂದೂ ಪೂತನೀ ಕೃಷ್ಣನನ್ನು ಕೊಲ್ಲುವ ಉದ್ದೇಶಪಟ್ಟಿದ್ದರಿಂದ ಅವಳಲ್ಲಿದ್ದ ತಾಟಕಿಗೆ ನರಕ-ಪ್ರಾಪ್ತಿಯಾಗಿ ಕೊನೆಗೆ ತಮಸ್ಸಿಗೆ ಹೋಗುವಳೆಂದೂ ಸೂಚಿಸಿದ್ದಾರೆ. ಇದೇ ರೀತಿ ಸಪ್ತಮಸ್ಕಂಧ ತಾತ್ಪರ್ಯದಲ್ಲಿ ಕಂಸನ ವಿಚಾರ ಬಂದಾಗ 'ಗೋಪ್ಯಃ ಕಾಮಯುತಾ ಭಕ್ತಾಃ ಕಂಸಾವಿಷ್ಟಃ ಸ್ವಯಂ ಭೃಗುಃ। ಜ್ಞೇಯೋ ಭಯಯುತೋ ಭಕ್ತಃ' (೭ ಸ್ಕಂ. ೧ ಅ. ೩೨ ಶ್ಲೋ.) ಎಂದು ಹೇಳಿದ್ದಾರೆ ಎಂದರೆ ಗೋಪಿಯರು ಶ್ರೀಕೃಷ್ಣನಲ್ಲಿ ಕಾಮದಿಂದ ಭಕ್ತಿಮಾಡುತ್ತಾರೆಂದೂ ಕಂಸನಲ್ಲಿ ಆವಿಷ್ಟನಾಗಿದ್ದ ಭೃಗುಋಷಿ ಕೃಷ್ಣನ ಭೀತಿಯಿಂದ ಹಗಲೂ ರಾತ್ರಿ ಕೃಷ್ಣನ ಧ್ಯಾನವನ್ನೇ ಮಾಡುತ್ತಿದ್ದನೆಂದೂ ಅವನಿಗೆ ಸದ್ಗತಿಯಾಯಿತೆಂದೂ ಕಂಸನಲ್ಲಿದ್ದ ಕಾಲನೇಮಿಗೆ ತಮಸ್ಸಾಯಿತೆಂದೂ ಹೇಳಿದ್ದಾರೆ. ನರಕಾಸುರನಲ್ಲೂ ಇದೇ ಪ್ರಕಾರ ದ್ವೇಷ ಮಾಡುತ್ತಿದ್ದ ಅಸುರನ ಜೊತೆ ವಾಯ್ವಾವೇಶವಿತ್ತೆಂದು ತಾತ್ಪರ್ಯನಿರ್ಣಯದಲ್ಲಿ ಹೇಳಿದ್ದಾರೆ. ದೈತ್ಯನು ಕೃಷ್ಣದ್ವೇಷಮಾಡಿದ್ದರಿಂದ ತಮಸ್ಸಿಗೆ ಹೋದನೆಂದೂ (ಜಗಾಮ ಕೃಷ್ಣಾವಜ್ಞಯಾಂಧತಮಶ್ಚ, ಶ್ಲೋ. ೧೦೫), ಅವಜ್ಞಯಾ-ತಿರಸ್ಕಾರದಿಂದ, ಅಸಡ್ಡೆಮಾಡಿದ್ದರಿಂದ), ಅವನಲ್ಲಿ ಆವಿಷ್ಟನಾಗಿದ್ದ ವಾಯುದೇವರು ಕೃಷ್ಣನನ್ನು ಹೊಂದಿದನೆಂದೂ (ತದಾ-ವಿಷ್ಟೋ ವಾಯುರಗಾಚ್ಚ ಕೃಷ್ಣಮ್—ಶ್ಲೋ. ೧೦೫) ಹೇಳಿದ್ದಾರೆ. ಈ ಪ್ರಕಾರ ನರಕಾಸುರನಲ್ಲಿ ಜೀವದ್ವಯಾವೇಶವಿದ್ದುದರಿಂದ ಅವನಲ್ಲಿ ವಿರುದ್ಧ ಸ್ವಭಾವಗಳು ವ್ಯಕ್ತವಾಗುತ್ತಿದ್ದುವು. ಅದನ್ನು ಸೂಚಿಸಲು 'ಕುಸುಮಂ!' ಎಂಬ ಪದ ವಾಯುಸುತ್ತಿಯಲ್ಲಿ ಬಂದಿದೆ (ಪ್ರಿಯತಮ ಕುಸುಮಂ).

(ಕು-ಕುತ್ಸಿತವಾದ,) ಸು-ಶೋಭನವಾದ, ಮಂ-ಮಂಗಳಕರವಾದ ಬುದ್ಧಿಯುಳ್ಳ ನರಕಾಸುರನನ್ನು ಎಂದು ಅದಕ್ಕೆ ಅರ್ಥಮಾಡಿದ್ದಾರೆ.)

303. ಎರಡನೇ ಅನ್ವಯ—ಈ ಎರಡನೇ ಅನ್ವಯದಲ್ಲಿ ಬಹ್ವೀಃ ಕೋಟೀಃ ಎಂಬುದು 'ಅರೀನ್'ಗೆ ವಿಶೇಷಣವಾಗುವುದಿಲ್ಲ. ಪ್ರತ್ಯುತ ಬೇರೆ ಅನ್ವಯವಾಗಿ ಸ್ತ್ರೀಲಿಂಗವಾದ್ದರಿಂದ 'ಬಹುಸಂಖ್ಯಾಕರಾದ ಎಂದರೆ ಹದಿನಾರು ಸಾವಿರದ ಒಂದು ನೂರು ಕನ್ನಿಕೆಯರನ್ನು' ಎಂದು ಅರ್ಥವಾಗುತ್ತದೆ. ಅರೀನ್-ಗೆ (ಬಹ್ವೀಃ ಕೋಟೀಃ ಎಂಬುದನ್ನು ಬಿಟ್ಟು) 'ಕುಟಿಲಕಟುಮತೀನ್ ಇತ್ಯಾದಿ ಹಿಂದಿನಂತೆಯೇ ಐದು ವಿಶೇಷಣಗಳು. ಪ್ರಿಯತಮಕುಸುಮಂ ಎಂಬುದು ಪ್ರಿಯತಮ,ಕುಸುಮಂ ಎಂದು ಬೇರೆ ಬೇರೆ ಪದಗಳು. ಪ್ರಿಯತಮ ಎಂಬುದು ಶ್ರೀಕೃಷ್ಣನಿಗೆ ಸಂಬೋಧನರೂಪ ವಿಶೇಷಣ. ಕುಸುಮಂ ಎಂಬುದು ಮೇಲೆ (ಚ ಖಂಡದ ಕಡೆಯಲ್ಲಿ) ವಿವರಿಸಿದಂತೆ ನರಕಾಸುರನಿಗೆ ಅನ್ವಯಿಸುವುದರಿಂದ ಪುಲ್ಲಿಂಗ ಆಗುತ್ತದೆ; ಹಿಂದೆ ಪುಷ್ಪ ಎಂದು ಅರ್ಥವಾದ್ದರಿಂದ ನಪುಂಸಕಲಿಂಗವಾಗಿತ್ತು. ಗದಯಾ ಉನ್ಮಥ್ಯ ಪೋಥಯಾಮಾಸಿಥ ಎಂಬುದು ಅರೀನ್-ಗೂ ಕುಸುಮಂ-ಗೂ ಬೇರೆ ಬೇರೆ ಎರಡಾವರ್ತಿ ಅನ್ವಯವಾಗುತ್ತದೆ. ಸ್ವಪ್ರಿಯಾಯೈ ಎಂದರೆ ಹಿಂದೆ ತನಗೆ ಪ್ರಿಯತಮಳಾದ ರುಕ್ಮಿಣಿಗೆ ಎಂದರ್ಥವಾಗಿತ್ತು; ಈ ಅರ್ಥದಲ್ಲಿ ತನಗೆ ಪ್ರಿಯತಮವಾದ ದ್ವಾರಕಾನಗರೀಗೆ ಎಂದು ಅರ್ಥವಾಗುತ್ತದೆ. ಪ್ರಾಯುಙ್ಕ್ಥಾಃ ಎಂದರೆ ಹಿಂದಿನ ಅರ್ಥದಲ್ಲಿ 'ಕೊಟ್ಟೆ' ಎಂದರ್ಥವಾಗಿತ್ತು. ಈಗ 'ಕಳುಹಿಸಿದಿ' ಎಂದು ಲಕ್ಷಣಯಾ ಅರ್ಥವಾಗುತ್ತದೆ. ಒಟ್ಟಿನಲ್ಲಿ ಅನ್ವಯವು ಹೀಗಾಗುತ್ತದೆ.—ಶರಣದ ಪ್ರಿಯತಮ ಪ್ರಾಣ! (೧ನೇ ವಾಕ್ಯ) ತ್ವಂ, ೧) ಕುಟಿಲಕಟುಮತೀನ್,೨) ಉತ್ಕಟಾ....ಕೋಪಾನ್, ೩) ಆತಥ್ಯ....ವಚನಾನ್, ೪) ಉತ್ಪಥಸ್ಥಾನ್, ೫) ಅನ್ಯಾನ್ ಅರೀನ್ ಗದಯಾ ಅಟೀಕಃ ತಥಾ ಉನ್ಮಥ್ಯ ಪೋಥಯಾಮಾಸಿಥ। (೨ನೇ ವಾಕ್ಯ) (ತಥಾ ಚ) ಕುಸುಮಂ ಉನ್ಮಥ್ಯ, ಸತ್ವರತ್ವಾತ್ ಗದಯಾ ಚ ಉನ್ಮಥ್ಯ (ತ್ವಂ) ದ್ರಾಕ್ ಪೋಥಯಾಮಾಸಿಥ, ಬಹ್ವೀಃ ಕೋಟೀಃ ಸ್ವಪ್ರಿಯಾಯೈ ಪ್ರಾಯುಙ್ಕ್ಥಾಃ। ತಸ್ಮೈ ತೇ ನಮಃ॥

304. ಎರಡನೇ ಅನ್ವಯಾರ್ಥ—(ಈ ಅರ್ಥದಲ್ಲಿ 'ಅನ್ಯಾನ್ ಅರೀನ್' ಎಂದರೆ 'ಬೇರೆಯಾದ ಶತ್ರುಗಳನ್ನು' ಎಂದರೆ ನರಕಾಸುರಭಿನ್ನ ರಾದ ನರಕಾಸುರನ ಮಂತ್ರಿಗಳಾದ ೧ ಮುರ, ೨ ಪೀಠ, ೩ ಶುಂಭ, ೪ ಹಯ-ಗ್ರೀವ ಮತ್ತು ೫ ಪಂಚಜನ ಎಂಬ ಐವರನ್ನೂ ಅವರೆಲ್ಲರ ಮಕ್ಕಳಾದ ಮೂವತ್ತೈದು ಮಂದಿ ಮಂತ್ರಿಪುತ್ರರನ್ನೂ ಅವರ ಜೊತೆ ಬಂದಿದ್ದ ಸಮಸ್ತ ಸೈನ್ಯವನ್ನೂ ಎಂದು ಅರ್ಥಮಾಡಬೇಕು. (ಗದಯಾ ಎಂಬುದಕ್ಕೆ ಒಂದು ಸಾರಿ ಗದೆಯಿಂದ ಎಂದೂ ಇನ್ನೊಂದು ಸಾರಿ 'ಗಂ ಮೋಕ್ಷಂ, ದದಾತೀತಿ ಗದಾ' ಎಂಬ ವ್ಯುತ್ಪತ್ತಿಯಿಂದ ಮೋಕ್ಷಪ್ರದರಾದ ಸತ್ಯಭಾಮಾದೇವಿಯಿಂದ ಎಂದೂ ಅರ್ಥ ಹೇಳಬೇಕು)

ಶರಣದ-ಮೋಕ್ಷಪ್ರದರಾದ ; ಪ್ರಿಯತಮ-(ರಮಾಬ್ರಹ್ಮಾದಿ ಸಕಲರಿಗಿಂತಲೂ) ಅತ್ಯಂತ ಪ್ರಿಯತಮನಾದ; ಪ್ರಾಣ-ಓ ಕೃಷ್ಣನೇ ! ತ್ವಂ-ನೀನು, (೧-೪ ಈ ವಿಶೇಷಣಗಳಿಗೆಲ್ಲಾ ಹಿಂದಿನಂತೆಯೇ ಅರ್ಥ) (೧ನೇ ವಾಕ್ಯ) ೧) ಕುಟಿಲಕಟುಮತೀನ್-ವಕ್ರವೂ ಕ್ರೂರವೂ ಆದ ಬುದ್ಧಿಯುಳ್ಳ ; ೨) ಉತ್ಕಟಾ....ಕೋಪಾನ್-ಉತ್ಕಟವಾದ ಆಗ್ರಹವೂ ಕ್ರೋಧವೂ ಉಳ್ಳ; ೩) ಅತಥ್ಯ....ವಚನಾನ್-ನಿಜಕ್ಕೆ ವಿರುದ್ಧವಾದ ಸುಳ್ಳು ಮಾತುಗಳನ್ನೇ ನುಡಿಯುತ್ತಿದ್ದ ; ೪) ಉತ್ಪಥಸ್ಥಾನ್-ದುರ್ಮಾರ್ಗಪ್ರವೃತ್ತಿಯುಳ್ಳ ; ೫) ಅನ್ಯಾನ್ ಅರೀನ್-ನರಕಾಸುರನಲ್ಲದೆ ಬೇರೆಯವರಾದ ಮುರ-ಪೀಠ-ಶುಂಭಾದಿ ಪಂಚಮಂತ್ರಿಗಳನ್ನೂ ಅವರ ಮಕ್ಕಳಾದ ಮೂವತ್ತೈದು ಮಂತ್ರಿ-ಪುತ್ರರನ್ನೂ ಅವರ ಜೊತೆ ಬಂದಿದ್ದ ಸಕಲ ಸೈನವನ್ನೂ ; ಗದಯಾ-ಗದಾ ಧ್ಯಾಯುಧಗಳಿಂದಲೂ ಶಸ್ತ್ರಾಸ್ತ್ರಗಳಿಂದಲೂ, ಅಟೀಕಃ-ಎದುರಿಸಿದಿ (ಎದುರಿಸಿ ಯುದ್ಧಮಾಡಿದಿ) ; ತಥಾ-ಅಲ್ಲದೆ (ಮತ್ತು), ಉನ್ಮಥ್ಯ-ಶಸ್ತ್ರಾಸ್ತ್ರಗಳಿಂದ ಹೊಡೆದು (ಅಥವಾ ಛೇದಿಸಿ), ಪೋಥಯಾಮಾಸಿಥ-ಧ್ವಂಸಮಾಡಿದಿ (ಯಮ ಪುರಿಗೆ ಕಳುಹಿಸಿದಿ) (೨ನೇ ವಾಕ್ಯ) ತಥಾ (ಚ)-ಅದೇ ರೀತಿ; ಕುಮತಿಂ-(ಜೀವದ್ವಯಾವೇಶನಿಮಿತ್ತವಾಗಿ) ಕುತ್ಸಿತವೂ ಸಮೀಚೀನವೂ ಮಂಗಳ ಕರವೂ ಆದ ಬುದ್ಧಿಯುಳ್ಳ ನರಕಾಸುರನನ್ನು ಉನ್ಮಥ್ಯ-(ಮೊದಲನೇ ಯುದ್ಧದಲ್ಲಿ) ಶಸ್ತ್ರಾಸ್ತ್ರಗಳಿಂದ ಭಂಗಗೊಳಿಸಿ, (ಆಮೇಲೆ ಅವನು ಪ್ರಯೋಗಿಸಿದ ಶತಘ್ನಿಯಿಂದ ಮೂರ್ಛಿತನಾದಂತೆ ನಟಿಸಿದ ಕಾರಣ), ಸತ್ವರತ್ವಾತ್-

(ನರಕಾಸುರನಿಗಿಂತ) ಹೆಚ್ಚು ವೇಗವಾಗಿ ಬಾಣಪ್ರಯೋಗ ಸಾಮರ್ಥ್ಯವುಳ್ಳವಳಾದಕಾರಣ; ಗದಯಾ ಚ–ಮೋಕ್ಷಪ್ರದಳಾದ ಸತ್ಯಭಾಮಾದೇವಿಯರಿಂದಲೂ ಸಹ; ಉನ್ಮಥ್ಯ–ಯುದ್ಧದಲ್ಲಿ ಪರಾಜಯಗೊಳಿಸಿ; ತ್ವಂ ನೀನೇ, ದ್ರಾಕ್–ಶೀಘ್ರವಾಗಿ (ಹೆಚ್ಚು ತಡಮಾಡದೆ); ಪ್ರೋಥಯಾಮಾಸಿಥ–ಸಂಹಾರಮಾಡಿಬಿಟ್ಟೆ, (ಇನ್ನೇ ವಾಕ್ಯ)(ಮತ್ತು)ಬಹ್ವೀಃ ಕೋಟೀಃ–(ಅವನಿಂದ ಕೈಸೆರೆಹಿಡಿದು ಅಂತಃಪುರದಲ್ಲಿ ಬಂಧಿಸಲ್ಪಟ್ಟಿದ್ದ) ಹದಿನಾರು ಸಾವಿರದ ಒಂದು ನೂರು ಸಂಖ್ಯಾಕರಾದ ಕನ್ಯೆಯರನ್ನು; ಸ್ವಪ್ರಿಯಾಯ್ಯೈ–ತನ್ನ ಪ್ರಿಯವಾದ ದ್ವಾರಕಾ ನಗರಿಗೆ; ಪ್ರಾಯುಙ್ಕ್ಥಃ–(ಪಲ್ಲಕ್ಕಿಗಳಲ್ಲಿ ಕೂಡಿಸಿ) ಕಳುಹಿಸಿಬಿಟ್ಟೆ. ತಸ್ಮೈ–ಅಂಥಾ, ತೇ–ನಿನಗೆ, ನಮಃ–ನಮಸ್ಕಾರವು).

ಎರಡನೇ ಅನ್ವಯಕ್ಕೆ ಭಾವಾರ್ಥ—ಅನ್ವಯದಲ್ಲಿ ಮೊಟ್ಟಮೊದಲೇ ಶರಣದ ಎಂದು ಸಂಬೋಧನೆ ಮಾಡಿದ್ದರಿಂದ ನರಕಾಸುರನಿಂದ ಪೀಡಿತನಾದ ದೇವೇಂದ್ರನು ವರುಣಾದಿ ಸಕಲದೇವತಾ ಸಮೇತನಾಗಿ ಕೃಷ್ಣನ ಬಳಿಗೆ ಬಂದು ನರಕಾಸುರ ಅಪಹಾರಮಾಡಿದ್ದ ಅದಿತಿಯ ಕುಂಡಲಗಳನ್ನೂ ವರುಣನ ಅಮೃತಸ್ರಾವಿ ಛತ್ರಾದಿಗಳನ್ನೂ ಕೊಡಿಸಬೇಕೆಂದು ವಿಜ್ಞಾಪಿಸಿಕೊಂಡ ವಿಚಾರವೂ ಬದರೀನಿವಾಸಿಗಳಾದ ಮಹರ್ಷಿಗಳು ಬಂದು ಶ್ರೀಕೃಷ್ಣನನ್ನು ಸ್ತುತಿಸಿ ತಮ್ಮ ತಪಸ್ಸಿಗೆ ಭೌಮನಿಂದ ಆಗುತ್ತಿದ್ದ ಬಾಧೆಯನ್ನು ಪರಿಹಾರಮಾಡಬೇಕೆಂದೂ ಪ್ರಾರ್ಥಿಸಿಕೊಳ್ಳಲು ಶ್ರೀಕೃಷ್ಣನು ಅವರಿಗೆಲ್ಲಾ ಅಭಯಪ್ರದಾನ ಮಾಡಿದ ಸಂಗತಿ ಹೊರಬೀಳುತ್ತದೆ. ಹೀಗೆಯೇ ಪ್ರಿಯತಮ ಎಂಬ ವಿಶೇಷಣದಿಂದ ನರಕಾಸುರನ ಕಾಟದಿಂದ ರಕ್ಷಿಸಲು, ಬ್ರಹ್ಮನ ವರಬಲಗಳೇ ಇದ್ದುದರಿಂದ ಕೃಷ್ಣನಲ್ಲದೆ ಬೇರೆ ಯಾರಿಂದಲೂ ಸಾಧ್ಯವಿರಲಿಲ್ಲವೆಂದೂ ಆದ್ದರಿಂದ ಮನುಷ್ಯಲೋಕದಲ್ಲಿದ್ದರೂ ಕೂಡ ದೇವತೆಗಳೂ ಮಹರ್ಷಿಗಳೂ ಕೃಷ್ಣನಲ್ಲಿಗೇ ಬಂದರೆಂಬ ವಿಷಯವನ್ನು ಸಮರ್ಥಿಸುತ್ತದೆ. ಅಥವಾ ಸತ್ಯಭಾಮೆಯು ರಾಜಸಭೆಯಲ್ಲಿ ರುಕ್ಮಿಣೀದೇವಿಗೆ ಆದ ಗೌರವ-ಸತ್ಕಾರಗಳಿಂದ ಸಿಟ್ಟಾಗಿ ಮುನಿಸಿಕೊಂಡದ್ದರಿಂದ ಶ್ರೀಕೃಷ್ಣ ಅವಳನ್ನು ರಮಿಸಿ ಅವಳಿಗೆ ಸಂತೋಷಪಡಿಸಿ ಅವಳ ಮನಸ್ಸು ಒಪ್ಪಿಸಿ ಅವಳಿಗೂ 'ಪ್ರಿಯತಮ'ನಾದ ಕಥಾಭಾಗ ಸೂಚಿತವಾಗುತ್ತದೆ. ಕಡೆಯದಾಗಿ ಪ್ರಾಣಃ

(ಪ್ರಕರ್ಷೇಣ ಅನತಿ–ಚೇಷ್ಟಯತಿ, ಸಕಲಶಕ್ತಿ ನಿಯಾಮಕ ಇತ್ಯರ್ಥಃ ಎಂಬ ವ್ಯುತ್ಪತ್ತಿಯಿಂದ) ಶ್ರೀಕೃಷ್ಣ ನರಕಾಸುರನು ಹೊಡೆದ ಶತಘ್ನಿಗೆ ಮೂರ್ಛಿತನಾಗಿ ಬಿದ್ದದ್ದು ಬ್ರಹ್ಮದೇವರಿಗೆ ಕಿಂಚಿತ್ ಗೌರವ ಕೊಡುವ ನಿಮಿತ್ತವೇ ಹೊರತು ಅದರ ನಿಜವಾದ ಹೊಡೆತದಿಂದಲ್ಲ ; ಇದು ಕೇವಲ ನಟನೆ ಎಂಬುದನ್ನು ಸಮರ್ಥಿಸುತ್ತದೆ. ಆ ಶತಘ್ನಿಗೆ ಮಾತ್ರವೇ ಅಲ್ಲದೆ ಸಾಕ್ಷಾತ್ ಬ್ರಹ್ಮದೇವರಿಗೇ ಸಕಲ ಶಕ್ತಿಪ್ರದನೇ ಶ್ರೀಕೃಷ್ಣನಾಗಿರುವಾಗ ನಿರ್ಜೀವವಾದ ಆ ಶತಘ್ನಿ ಇವನನ್ನು ಏನುತಾನೆ ಮಾಡಬಲ್ಲದು ? ಎಂಬ ಭಾವವನ್ನು ಸೂಚಿಸುತ್ತದೆ. ಹೀಗೆ ಶರಣದ, ಪ್ರಿಯತಮ, ಪ್ರಾಣ ಎಂಬ ಮೂರು ಸಂಬೋಧನೆಗಳೂ ಒಂದೊಂದು ವಿಶೇಷ ಸಮಾಚಾರವನ್ನೇ ಹೊರಗೆಡಹುತ್ತಾ ಅರ್ಥಗರ್ಭಿತವಾಗಿದೆಯೆಂದು ತಿಳಿಯಬೇಕು.

ಶರಣದ ಎಂಬುದಕ್ಕೆ ಇನ್ನೊಂದು ರೀತಿಯಾಗಿಯೂ ಅರ್ಥಮಾಡಲು ಬರುತ್ತದೆ (ಲೇ). ಶರಣಂ-ರಕ್ಷಾಭೂತಂ ಪ್ರಾಕಾರನಿಚಯಂ। ದ್ಯತಿ–ಖಂಡಯತೀತಿ ವಾ ಶರಣದಃ । ದೋ ಅವಖಂಡನೇ (ದಿವಾದಿ. ಪ) ಇತಿ ಧಾತೋಃ ರೂಪಮೇತತ್ । ಸಂಸ್ಕೃತದಲ್ಲಿ ದ ಎಂದರೆ ಕತ್ತರಿಸು (ದ್ಯತಿ), ಛೇದಿಸು ಎಂದೂ ಅರ್ಥವಾಗುತ್ತದೆ. ಆದರಂತೆ ಪ್ರಾಗ್ಜ್ಯೋತಿಷಪುರಕ್ಕೆ ರಕ್ಷಣೆಗಳಾಗಿದ್ದ ಗಿರಿದುರ್ಗ, ಜಲದುರ್ಗಾದಿಗಳೆಲ್ಲವನ್ನೂ ಕತ್ತರಿಸಿಹಾಕಿದವನೇ ಎಂಬುದೂ ಶರಣದ ಎಂಬುದಕ್ಕೆ ಮತ್ತೊಂದು ಅರ್ಥವಾಗುತ್ತದೆ. ಅದರಂತೆ ಈ ಸಂಬೋಧನೆಯಿಂದಲೇ ಗದೆಯಿಂದ ಗಿರಿದುರ್ಗವನ್ನೂ ವಾಯವ್ಯಾಸ್ತ್ರದಿಂದ ಜಲದುರ್ಗವನ್ನೂ, ವಾರುಣಾಸ್ತ್ರದಿಂದ ಅಗ್ನಿದುರ್ಗವನ್ನೂ, ಖಡ್ಗದಿಂದ ಪಾಶದುರ್ಗಗಳನ್ನೂ, (ದ) ಕತ್ತರಿಸಿ ಹಾಕಿ ಪ್ರಾಗ್ಜ್ಯೋತಿಷಪಟ್ಟಣವನ್ನು ಶ್ರೀಕೃಷ್ಣ ಪ್ರವೇಶಿಸಿದನೆಂಬ ಇಷ್ಟು ವಿಚಾರವೂ ಸೂಚಿತವಾಗುತ್ತದೆ.

ಹೀಗೆ ಅಚ್ಛೇದ್ಯಾಭೇದ್ಯವಾದ ಎಲ್ಲಾ ದುರ್ಗಗಳನ್ನೂ ಶ್ರೀಕೃಷ್ಣ ಕತ್ತರಿಸಿ ಊರೊಳಗೆ ಪ್ರವೇಶಮಾಡಿ ಪಾಂಚಜನ್ಯವೆಂಬ ಶಂಖವನ್ನೂ ಊದಿದನು. ಆ ಶಂಖಧ್ವನಿಯನ್ನು ಕೇಳಿ ಮೊದಲು ನರಕಾಸುರನ ಪಂಚಮಂತ್ರಿಗಳೂ ಅನಂತರ ಅವರ ಮೂವತ್ತೈದು ಮಕ್ಕಳಾದ ಮಂತ್ರಿಪುತ್ರರೆಲ್ಲರೂ ಸೈನ್ಯಸಮೇತರಾಗಿ ಬಂದರೆಂಬುದನ್ನು ಅನ್ಯಾನ್ ಅರೀನ್ ಅಟೀಕಃ ಎಂಬ

ಪದಗಳಿಂದ ಸೂಚಿಸಿದೆ. ಶ್ರೀಕೃಷ್ಣ ಅವರೆಲ್ಲರನ್ನೂ ಗದೆಯಿಂದಲೂ ಶಸ್ತ್ರಾಸ್ತ್ರಗಳಿಂದಲೂ ಎದುರಿಸಿ (ಉನ್ಮಥ್ಯ) ಒಬ್ಬನೇ ಎಲ್ಲರನ್ನೂ ಯಮಪುರಿಗೆ ಕಳುಹಿಸಿಬಿಟ್ಟನು. ಇದು ಯುದ್ಧದ ಪೂರ್ವಭಾಗದ ಕಥೆಯಾಯಿತು. (ಇದು ಮೊದಲನೇ ವಾಕ್ಯದ ಭಾವಾರ್ಥ.)

(ಎರಡನೇ ವಾಕ್ಯ) ಮಂತ್ರಿಗಳೂ ಅವರ ಪುತ್ರರೂ ನಾಶವಾಗಿ ಹೋದ ಕಾರಣ ನರಕಾಸುರ ತಾನೇ ಯುದ್ಧಕ್ಕೆ ಬರಬೇಕಾಯಿತು. ಇದು ಆ ಯುದ್ಧದ ಉತ್ತರಾರ್ಧ. ಅವನೊಡನೆ ಯುದ್ಧವೇ ಮೂರು ಹಂತಗಳಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ನಡೆಯಿತು. ಅದನ್ನು ಈ ಶ್ಲೋಕದಲ್ಲಿ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಮೊದಲನೆಯ ಹಂತದಲ್ಲಿ ಶ್ರೀಕೃಷ್ಣನಿಗೂ ನರಕಾಸುರನಿಗೂ ಬಿರುಸಾದ ಯುದ್ಧ ನಡೆಯಿತು. ಶ್ರೀಕೃಷ್ಣ ನರಕಾಸುರನ ಅಸ್ತ್ರ-ಶಸ್ತ್ರಗಳನ್ನೆಲ್ಲಾ ಲೀಲಾಜಾಲವಾಗಿ ಛೇದಿಸಿಬಿಟ್ಟ (ಉನ್ಮಥ್ಯ). ಅದರಿಂದ ಕ್ರುದ್ಧನಾದ ನರಕ ಕೃಷ್ಣನ ಮೇಲೆ ಶತಘ್ನಿಯನ್ನು ಪ್ರಯೋಗಿಸಿದನು. ಅದರಿಂದ ಕೃಷ್ಣ ಮೂರ್ಛಿತನಾಗಿ ಬಿದ್ದಂತೆ ನಟಿಸಿದ. ಇಲ್ಲಿಗೆ ಮೊದಲನೆಯ ಹಂತ ಮುಗಿಯಿತು. ಕೃಷ್ಣ ಮೂರ್ಛಿತನಾದುದನ್ನು ಕಂಡು ಸತ್ಯಭಾಮಾ-ದೇವಿ ತಾನೇ ಕೃಷ್ಣನ ಧನುಸ್ಸು ಹಿಡಿದು ಬಾಣಪ್ರಯೋಗ ಮಾಡುತ್ತಾ ಭೌಮನನ್ನು ಎದುರಿಸಿದಳು. ಭೌಮನ ಶಸ್ತ್ರಾಸ್ತ್ರಗಳನ್ನೆಲ್ಲಾ ಸತ್ಯಭಾಮೆಯೇ ಛೇದಿಸಿಬಿಟ್ಟಿದ್ದಲ್ಲದೆ ಬಾಣ ಹೊಡೆದು ನರಕನ ರಥವನ್ನೇ ಕತ್ತರಿಸಿಹಾಕಿದಳು. ಹೀಗೆ ನರಕಾಸುರ ಸತ್ಯಭಾಮೆಗೂ ಸೋತಂತೆ ಆಯಿತು. ಇಲ್ಲಿಗೆ ಎರಡನೆಯ ಹಂತ ಮುಗಿಯಿತು.

ನರಕಾಸುರ ಮತ್ತೊಂದು ರಥ ಏರಿಕೊಂಡು ಯುದ್ಧಕ್ಕೆ ಬಂದ. ಅಷ್ಟರಲ್ಲೇ ಶ್ರೀಕೃಷ್ಣ ಮೂರ್ಛೆಯಿಂದ ಎಚ್ಚೆತ್ತವನಾಗಿ ಪುನಃ ನರಕನೊಡನೆ ಯುದ್ಧಕ್ಕೆ ಆರಂಭಿಸಿದ. ಯುದ್ಧ ಮಾಡುತ್ತ-ಮಾಡುತ್ತ ಅವನ ಶಿರಚ್ಛೇದ ಮಾಡಿಬಿಟ್ಟ. ಇಲ್ಲಿಗೆ ಮೂರನೆಯ ಹಂತವೂ ಮುಗಿಯಿತು. (೩ನೇ ವಾಕ್ಯ) ನರಕಾಸುರನ ವಧೆಯಾದ ಬಳಿಕ ಕೃಷ್ಣ ಅಂತಃಪುರ ಪ್ರವೇಶಮಾಡಿದಾಗ ಶತಾಧಿಕ ಷೋಡಶಸಹಸ್ರ ಸಂಖ್ಯಾಕ ಕನ್ನಿಕೆಯರನ್ನು ಕಂಡನು. ಅವರೆಲ್ಲಾ ತನ್ನ ಅಂಗಸಂಗಕ್ಕಾಗಿ ಹಿಂದೆ ಬಹಳ ತಪಸ್ಸುಮಾಡಿದ್ದನ್ನು ಅರಿತು ಅವರನ್ನೆಲ್ಲಾ

ದ್ವಾರಕಾಪಟ್ಟಣಕ್ಕೆ ಕಳುಹಿಸಿದನು. ಇಂಥಾ ಕೃಷ್ಣನಿಗೆ ನಮಸ್ಕಾರ. ಹೀಗೆ ಪ್ರಾಗ್ಜ್ಯೋತಿಷಪುರದ ಧಾಳಿಯ ವಿಶಿಷ್ಟ ವಿವರಗಳೂ ಈ ಅರ್ಥದಲ್ಲಿ ಅಡಕವಾಗಿರುವುದು ಗಮನಾರ್ಹವಾಗಿದೆ. (ಈಗ ಪುನಃ ಅನ್ವಯಾರ್ಥ ಓದಿದರೆ ಅರ್ಥವು ಮತ್ತಷ್ಟು ಸುಸ್ಪಷ್ಟವಾಗುವುದು. ಓದಿ ನೋಡಿರಿ.)

305. ಹರಿಪರ ಮೂರನೇ ಅರ್ಥಕ್ಕೆ ಪೀಠಿಕೆ—(ಪುರಾ)ಸ್ವರ್ಗಕ್ಕೆ ಹೋಗಿ ಶ್ರೀಕೃಷ್ಣದೇವರು ಮಾಡಿದ ಚರಿತ್ರಗಳ ಸಂಗ್ರಹಾರ್ಥ ಮುಂದಿನ ವ್ಯಾಖ್ಯಾನ (ಲೇ). ಶ್ರೀಕೃಷ್ಣ ನರಕಾಸುರನ ವಧೆಮಾಡಿದ ಬಳಿಕ ಅವನ ಅರಮನೆಯೊಳಗೆಲ್ಲಾ ಹೋಗಿ ಪರೀಕ್ಷಿಸಿ ಆ ಭೌಮ ಎಲ್ಲೆಲ್ಲಿಂದಲೋ ತಂದಿದ್ದ ಅಪೂರ್ವರತ್ನಗಳಲ್ಲಿ ಕೆಲವನ್ನು ದ್ವಾರಕಾಕ್ಕೆ ಕಳುಹಿಸಿದನು, ಛತ್ರವನ್ನು ವರುಣನಿಗೆ ಕಳುಹಿಸಿದನು, ಭೂದೇವಿ (ನರಕಾಸುರನ ತಾಯಿ) ತಂದುಕೊಟ್ಟ ಅದಿತಿಯ ಕುಂಡಲಗಳನ್ನು ಅವಳಿಗೆ ತಾನೇ ಕೊಡುವುದಕ್ಕಾಗಿ ಸ್ವರ್ಗಕ್ಕೆ ಸತ್ಯಭಾಮಾ ಸಮೇತನಾಗಿ ಗರುಡನ ಮೇಲೇ ಹೋದನು. ಅಲ್ಲದೆ ನರಕಾಸುರ ಅಪಹರಿಸಿ ತಂದಿದ್ದ ಇಂದ್ರನ ರತ್ನಗಿರಿಯನ್ನು ಅವನಿಗೆ ಕೊಡುವುದಕ್ಕಾಗಿ ಅದನ್ನೂ ಗರುಡನ ಮೇಲೆ ಹೇರಿಕೊಂಡು ಸ್ವರ್ಗಕ್ಕೆ ಹೋದನು. ಅಲ್ಲಿ ನಡೆದ ವಿಚಾರಗಳನ್ನು ತಾತ್ಪರ್ಯನಿರ್ಣಯದಲ್ಲಿ ೨೦ನೇ ಅಧ್ಯಾಯದ ೧೧೭ ರಿಂದ ೧೩೭ರವರೆಗಿನ ಸುಮಾರು ಇಪ್ಪತ್ತು ಶ್ಲೋಕಗಳಲ್ಲಿ ನಿರೂಪಣೆಮಾಡಿದರೆ ಭಾಗವತದ ದಶಮಸ್ಕಂಧದಲ್ಲಿ ೯೫ ರಿಂದ ೯೭ರ ವರೆಗಿನ ಮೂರು ಅಧ್ಯಾಯಗಳಲ್ಲೂ ಹರಿವಂಶದಲ್ಲಿ ಭ.ದಲ್ಲಿ ೧೧೯-೨೬ ಅಧ್ಯಾಯಗಳಲ್ಲೂ, ಉ. ಮತ್ತು ನೀ. ವಿಷ್ಣು ಪರ್ವದ ೬೫-೭೫ ಅಧ್ಯಾಯಗಳಲ್ಲೂ ಬಾಂ. ಪ್ರತಿಯ ೧೧೯-೨೬ ಅಧ್ಯಾಯಗಳಲ್ಲೂ, ಗ. (ಅನುವಾದ) ಪುಟ ೯೧೫-೪೨ಗಳಲ್ಲೂ ಹೆಚ್ಚು ವಿಸ್ತಾರವಾಗಿ ವರ್ಣಿಸಲಾಗಿದೆ. ಶ್ಲೋಕದ ಅರ್ಥ ಮಂದಟ್ಟಾಗಬೇಕಾದರೆ ಕಥೆಯು ಚೆನ್ನಾಗಿ ತಿಳಿದಿರಬೇಕಾದ ಕಾರಣ ಮೊದಲು ಸ್ವರ್ಗದಲ್ಲಿ ಶ್ರೀಕೃಷ್ಣನಿಗೆ ದೇವೇಂದ್ರಾದಿಗಳು ಮಾಡಿದ ಗೌರವವನ್ನೂ ಅನಂತರ ಶ್ರೀಕೃಷ್ಣ ಸತ್ಯಭಾಮೆಯ ಅಪೇಕ್ಷೆಯಂತೆ ಪಾರಿಜಾತವೃಕ್ಷವನ್ನು ಭೂಮಿಗೆ ತಂದ ಕಥೆಯನ್ನೂ ಅದರಿಂದ ದೇವತೆಗಳೆಲ್ಲ ಕೃಷ್ಣನೊಡನೆ ಯುದ್ಧಮಾಡಿ ಸೋತು ಶರಣಾಗತರಾದ

ಕಥೆಯನ್ನೂ ಹೆಚ್ಚು ವಿಸ್ತರಿಸದೆ ಶ್ಲೋಕಾರ್ಥವನ್ನೂ ಗ್ರಹಿಸಲು ಉಪಯುಕ್ತವಾದಷ್ಟು ಮಾತ್ರ ಕಥಾ ಭಾಗವನ್ನು ನಿರೂಪಣೆ ಮಾಡುವೆನು.

ಯ) ಸ್ವರ್ಗದಲ್ಲಿ ಶ್ರೀಕೃಷ್ಣ—ಶ್ರೀ ಕೃಷ್ಣ ನರಕಾಸುರನನ್ನು ಸಂಹಾರ ಮಾಡಿದ ಸುದ್ದಿಯನ್ನು ಕೇಳಿದಕೂಡಲೇ ನರಕಾಸುರನ ತಾಯಿಯಾದ ಭೂದೇವಿ ಅದಿತಿಯ ಕುಂಡಲಗಳನ್ನೂ ಕೃಷ್ಣನ ಮುಂದೆ ತಂದಿಟ್ಟು ಅವನನ್ನು ಸ್ತುತಿಸಿ ವಂದಿಸಿ ಜೊತೆಯಲ್ಲೇ ಕರೆದುಕೊಂಡು ಬಂದಿದ್ದ ತನ್ನ ಮೊಮ್ಮಗ ಭೂರಿಶ್ರವನಿಂದಲೂ ಕೃಷ್ಣನಿಗೆ ನಮಸ್ಕಾರಮಾಡಿಸಿದಳು. ಕೃಷ್ಣನು ಭೂದೇವಿಯ ಪ್ರಾರ್ಥನೆಯಂತೆ ಭೂರಿಶ್ರವನಿಗೇ ರಾಜ್ಯದಲ್ಲಿ ಅಭಿಷೇಕಮಾಡಿ ಅವನಿಗೆ ಸುಪ್ರತೀಕವೆಂಬ ಕ್ಷೀರಸಮುದ್ರದಲ್ಲಿ ಹುಟ್ಟಿದ ನಾಲ್ಕು ದಂತದ ಆನೆಯನ್ನು ಬಹುಮಾನವಾಗಿ ಕೊಟ್ಟನು. ಬಳಿಕ ಗರುಡನ ಬೆನ್ನಿನ ಮೇಲೆ ಇಂದ್ರನ ರತ್ನಪರ್ವತವನ್ನು ಹೇರಿಕೊಂಡು ಅದಿತಿಯ ಕರ್ಣಕುಂಡಲಗಳನ್ನು ಹತ್ತಿರ ಇಟ್ಟುಕೊಂಡು ಸತ್ಯಭಾಮಾಸಮೇತನಾಗಿ ಶ್ರೀಕೃಷ್ಣನು ಗರುಡನ ಮೇಲೆ ಕುಳಿತೇ ಸ್ವರ್ಗಲೋಕಕ್ಕೆ ಬಂದು ಪಾಂಚಜನ್ಯವನ್ನು ಊದಿದನು. ಆ ಶಂಖಧ್ವನಿಯನ್ನು ಕೇಳಿ ಇಂದ್ರಾದಿದೇವತೆಗಳೆಲ್ಲ ಬಂದು ದೇವೀಸಹಿತನಾದ ಶ್ರೀಕೃಷ್ಣನನ್ನು ಎದುರ್ಗೊಂಡು ಆದರಿಸಿ ಸತ್ಕರಿಸಿದರು. ಅನಂತರ ಶ್ರೀಕೃಷ್ಣ-ಸತ್ಯಭಾಮೆ ಇಬ್ಬರೂ ತಾವೇ ಹೋಗಿ ಅದಿತಿಗೆ ನಮಸ್ಕಾರ ಮಾಡಿ ಅವಳ ಕುಂಡಲಗಳನ್ನು ಕೊಟ್ಟರು. ಅದಿತಿ ಬಹಳ ಸಂತುಷ್ಟಳಾಗಿ ಶ್ರೀಕೃಷ್ಣ-ಸತ್ಯಭಾಮೆಯರು ಸಾಕ್ಷಾಲ್ಲಕ್ಷ್ಮೀನಾರಾಯಣರೆಂಬ ವಿವೇಕದ ಜ್ಞಾನವಿಲ್ಲದೆ, ಅವರಿಬ್ಬರನ್ನೂ, ದೊಡ್ಡ ಅಜ್ಜಿ ಮೊಮ್ಮಗ-ಸೊಸೆಯನ್ನು ಆಶೀರ್ವದಿಸುವಂತೆ ಹರಸಿ ಕಳುಹಿಸಿದಳು.

ರ) ಪಾರಿಜಾತವೃಕ್ಷಹರಣ—ಅನಂತರ ದೇವೇಂದ್ರಾದಿಗಳಿಂದ ಪೂಜಿತರಾದ ಶ್ರೀಕೃಷ್ಣ-ಸತ್ಯಭಾಮೆಯರು ಅವರನ್ನು ಬೀಳ್ಕೊಂಡು ಸುಂದರವಾದ ದೇವೇಂದ್ರನ ನಂದನವನಕ್ಕೆ ಬಂದು ಅಲ್ಲೇ ಸ್ವಲ್ಪ ವಿಹಾರಮಾಡಿದರು. ಆ ವನದಲ್ಲಿದ್ದ ಪಾರಿಜಾತವೃಕ್ಷವನ್ನು ಕಂಡು ಸತ್ಯಭಾಮೆಗೆ ಬಹಳ ಆಸೆಯಾಯಿತು. ಆ ಮರ ಅಮೃತಮಂಥನಕಾಲದಲ್ಲೇ ಹುಟ್ಟಿತ್ತು. ಅದು ಸರ್ವಾಭೀಷ್ಟಪ್ರದವಾದದ್ದು. ಅದರ ಕೆಳಗೆ ಕುಳಿತರೆ ಲೇಶಮಾತ್ರವೂ ದುಃಖ

ವಾಗದು.[1] ಕೃಷ್ಣ ಬೇಡವೆಂದರೂ ಕೇಳದೆ ಹಠಮಾಡಿದ್ದರಿಂದ ಅವಳ ಸಲುವಾಗಿ ಆ ವೃಕ್ಷವನ್ನು ಕಿತ್ತು ಗರುಡನ ಮೇಲೆ ಇಟ್ಟುಕೊಂಡು ಸತ್ಯಭಾಮಾಸಮೇತನಾಗಿ ಗರುಡನ ಮೇಲೆಯೇ ಶ್ರೀಕೃಷ್ಣ ಹೊರಟುಬಿಟ್ಟನು.

ಲ) ಇಂದ್ರಾದಿದಿಕ್ಪಾಲಕರ ಪರಾಜಯ—ದ್ವಾರಕಾ ಪ್ರವೇಶ—ಕೃಷ್ಣ ಪಾರಿಜಾತವೃಕ್ಷವನ್ನು ಕೀಳುವುದನ್ನು ಕಂಡು ಕೆಲವು ವನಪಾಲಕರು ಕೃಷ್ಣನನ್ನು ತಡೆದರು, ಮತ್ತೆ ಕೆಲವರು ದೇವೇಂದ್ರನ ಬಳಿಗೇ ದೂರು ಒಯ್ದರು:—

ತತೋ ನಿವಾರಯಾಮಾಸು-ರ್ಗೋವಿಂದಂ ವನಪಾಲಕಾಃ ।
ಕೇಚಿನ್ ದ್ರುತತರಂ ಜಗ್ಮು-ರ್ದೇವೇಂದ್ರಾಯ ನಿವೇದಿತುಮ್ ॥

(ಭಾಗ ೧೦/೬೫/೩೧)

ಆಕ್ಷಣ ದೇವೇಂದ್ರ ಮಿಕ್ಕ ದಿಕ್ಪಾಲಕರೊಡನೆ ಕೃಷ್ಣನ ಮೇಲೆ ಯುದ್ಧಕ್ಕೆ ಬಂದನು. ಕುಬೇರೇಂದ್ರಾದಿ ಏಳು ದಿಕ್ಪಾಲಕರು ಸೋತು ಓಡಿದ ವಿವರ ಭಾಗವತದಲ್ಲಿ ೬೫-೬೬ನೇ ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿಸಿದೆ. ಕುಬೇರನನ್ನು ಸತ್ಯಭಾಮೆಯೇ ಸೋಲಿಸಿ ಓಡಿಸಿದರೆ, ವರುಣನನ್ನು ಗರುಡನೇ ಪರಾಭವ ಮಾಡಿದನು. ಮಿಕ್ಕವರನ್ನು ಕೃಷ್ಣ ಸೋಲಿಸಿಬಿಟ್ಟ. ಕೊನೆಗೆ ದೇವೇಂದ್ರನೇ ಯುದ್ಧಕ್ಕೆ ಬಂದ. ಶ್ರೀಕೃಷ್ಣ ಅವನನ್ನು ನಿರಾಯುಧನನ್ನಾಗಿ ಮಾಡಿಬಿಡಲು ದೇವೇಂದ್ರ ದಿಕ್ಕೆಟ್ಟು ಪಲಾಯನ ಮಾಡಲಾರಂಭಿಸಿದ. ಅದನ್ನು ಕಂಡು ಸತ್ಯಭಾಮೆ ಅವನನ್ನು

ಪಲಾಯನಮಯುಕ್ತಂ ಹಿ ಪೌಲೋಮ್ಯಾ ವಲ್ಲಭಸ್ಯ ತೇ ।
ಅವಮಂಸ್ಯತಿ ಸದ್ಯಸ್ತ್ವಾಂ ಭಾರ್ಯಾ ರಣಪರಾಜಿತಮ್ ॥

(ಭಾಗ ೧೦/೬೬/೧೮-೧೯)

---

1 ಅಮೃತಮಂಥನೋದ್ಭವಮ್।....ಸಮಸ್ತ ಕಾಮಪ್ರದಮಾರ್ತಿಹಾರಿಣಮ್ (ತಾ.ನಿ. ೧೨೪)

2 ಉತ್ಪಾಟ್ಯಾರೋಪಯಾಮಾಸ ಪಾರಿಜಾತಂ ಗರುತ್ಮತಿ (ಭಾಗ ೧೦/೬೫/೩೦) ಉತ್ಪಾಟ್ಯ-ಕಿತ್ತು, ಆರೋಪಯಾಮಾಸ-ಹೇರಿದನು, ಇಟ್ಟನು.

'ಹೇ ದೇವೇಂದ್ರ, ಶಚಿಯ ಗಂಡನಾದ ನೀನು ಓಡುವುದು ಸರಿಯಲ್ಲ. ನಿನ್ನ ಹೆಂಡತಿ- ನಿನ್ನನ್ನು ಹಾಸ್ಯಮಾಡಿಯಾಳು' ಎಂದು ಗೇಲಿಮಾಡಿದಳು. ದೇವೇಂದ್ರ ನಾಚಿಕೆ ಬಿಟ್ಟು ಕೃಷ್ಣ-ಸತ್ಯಭಾಮೆಯರಿಗೆ ನಮಸ್ಕಾರಮಾಡಿ ಕ್ಷಮೆ ಬೇಡಿಕೊಂಡು ಹಿಂದಿರುಗಿದ. ಇತ್ತ ಶ್ರೀಕೃಷ್ಣ ದ್ವಾರಕಾಕ್ಕೆ ಬಂದು ಸತ್ಯಭಾಮೆಯ ಅಂಗಳದಲ್ಲಿ ಪಾರಿಜಾತವೃಕ್ಷವನ್ನು ನೆಟ್ಟುಬಿಟ್ಟನು ; ಪ್ರಾಂಗಣೇ ಸತ್ಯಭಾಮಾಯಾಃ ಪಾರಿಜಾತಂ ಮಹಾದ್ರುಮಮ್। ಸ್ಥಾಪಯಾಮಾಸ ಗೋವಿಂದಃ ಸರ್ವತೋ ಮಣಿಕುಟ್ಟಿಮೇ ॥ (ಭಾಗ ೬೭, ಶ್ಲೋ. ೪೫) ಇಷ್ಟು ಕಥೆ ತಿಳಿದರೆ ಶ್ಲೋಕಾರ್ಥ ಚೆನ್ನಾಗಿ ಮನಸ್ಸಿಗೆ ನಾಟುತ್ತದೆ.

ವ) ಪದವಿಭಾಗದಲ್ಲಿಯೂ ಅರ್ಥದಲ್ಲಿಯೂ ವ್ಯತ್ಯಾಸಗಳು— ಈ ಅರ್ಥದಲ್ಲಿ ೧) ಬಹ್ವೀಃ ಎಂಬುದು ಬೇರೆ ಪದವಾದರೂ ಪುಲ್ಲಿಂಗ ಈ-ಕಾರಾಂತ ಶಬ್ದ; ಗ್ರಾಮಣೀ, ಸೇನಾನೀ, ಪ್ರಧೀ ಮೊದಲಾದ ಶಬ್ದಗಳಂತೆ 'ಬಹ್ವೀಃ। ಬಹ್ವ್ಯೌ। ಬಹ್ವ್ಯಃ ಇತ್ಯಾದಿರೂಪಗಳು. ಬಹು+ಈ-ಬಹ್ವೀಃ (ಯಣ್ ಸಂಧಿ). 'ಲಕ್ಷ್ಮೀರೀಕಾರ ಉಚ್ಯತೇ ಎಂಬ ಏಕಾಕ್ಷರ ಕೋಶದಂತೆ ಈ ಕಾರವು* ಲಕ್ಷ್ಮೀವಾಚಕವಾದ್ದರಿಂದ ಸಂಪದರ್ಥಕವಾಗುತ್ತದೆ. ಬಹ್ವೀ ಈ ಯಸ್ಯಃ ಸಃ ಬಹ್ವೀಃ । ಬಹು-ಅಧಿಕವಾದ, ಈ-ಸಂಪತ್ತುಳ್ಳವನು ಎಂಬ ವ್ಯುತ್ಪತ್ತಿಯಿಂದ ಬಹ್ವೀಃ ಎಂಬುದು (ಪೂರ್ಣೈಶ್ವರ್ಯದಿಂದ ಕೂಡಿದವನು ಎಂದು) ಶ್ರೀಕೃಷ್ಣನನ್ನು ತೋರಿಸುತ್ತಾ 'ತ್ವಂ'ಗೆ ವಿಶೇಷಣ. ೨) ಕೋಟೀರ ಟೀಕಃ ಎಂಬುದು ಒಂದೇ ಪದ, ಕೋಟೀರ ಶಬ್ದವು ಕೋಟಿಂ ಅಗ್ರಭಾಗಂ ಈರಯತಿ ಪ್ರೇರಯತೀತಿ ಕೋಟೀರಃ ಎಂಬ ವ್ಯುತ್ಪತ್ತಿಯಿಂದ ಕಿರೀಟವೆಂದು ಅರ್ಥ ಕೊಡುತ್ತದೆ. 'ಮೌಲಿಃ ಕೋಟೀರ ಉಷ್ಣೀಶಂ ಕಿರೀಟಂ ಮುಕುಟೋಽ ಸ್ತ್ರಿಯಾಮ್'—ವೈಜಯಂತೀ ಕೋಶ. 'ಆಹುಃ ಕಿರೀಟಮುಷ್ಣೀಶಂ ಕೋಟೀರಂ ಮುಕುಟಂ ಸಮಮ್'—ಹಲಾಯುಧ. ಟೀಕೃಗತೌ (ಭ್ವಾ. ಆ.) ಎಂಬ ಧಾತುವಿನಿಂದ ಟೀಕತೇ-ಗಚ್ಛತೀತಿ ಕೋಟೀರ ಟೀಕಃ। (ಕೋಟೀರ) ಕಿರೀಟಾದಿ ಲಾಂಛನಗಳೊಡನೆ (ಟೀಕತೇ) ಗಮನವುಳ್ಳಂಥಾ ಎಂದರ್ಥ ಅಥವಾ

---

*ಈ ವಿಷಾದೇಽನುಕಂಪಾಯಾಂ ಲಕ್ಷ್ಮ್ಯಾಂ ಪುನರನವ್ಯಯಮ್—ಮೇದಿನೀ. ಈ ದುಃಖ ಭಾವನೇ ಕ್ರೋಧ. ಈರ್ಲಕ್ಷ್ಮ್ಯಾಂ ತು ಸ್ಯಾವ್ಯಯಮ್—ಅನೇಕಾರ್ಥಸಂಗ್ರಹ.

ಕೋಟೀರ-ಜೀವೋತ್ತಮರಾದ ಅಥವಾ ಜ್ಞಾನಿಶ್ರೇಷ್ಠರಾದ ಬ್ರಹ್ಮಾದಿಗಳಿಂದ, (ಟೀಕ್ಯತೇ)-ಗಮ್ಯನಾದ ಎಂಬುದೂ ತ್ವಂ-ಗೆ ವಿಶೇಷಣ. ೩) ಪ್ರಿಯತಮ ಕುಸುಮಂ ಎಂಬುದು ಲಕ್ಷಣಯಾ ಪಾರಿಜಾತವೃಕ್ಷಕ್ಕೆ ವಾಚಕವಾಗಿದೆ. ೪) ಅರೀನ್ ಎಂಬುದಕ್ಕೆ ನ ರೀಯಂತೇ ಕ್ಷೀಯಂತ ಇತ್ಯರಯಃ ಎಂಬ ವ್ಯುತ್ಪತ್ತಿಯಿಂದ ಮರಣವಿಲ್ಲದವರು ಎಂದರ್ಥವಾಗಿ ಇಂದ್ರಾದಿ ದೇವತೆಗಳನ್ನು ಎಂದರ್ಥ. ೫) ಗದಯಾ ಎಂದರೆ ಇಲ್ಲೂ ಸತ್ಯಭಾಮಾದೇವಿಯಿಂದ ಎಂದೇ ಅರ್ಥ.

306. (ಅ) ಮೂರನೇ ಅನ್ವಯ ಕ್ರಮ—(೧ನೇ ವಾಕ್ಯ) ಶರಣದ ಪ್ರಾಣ ! i) ಬರ್ಹ್ವೀಃ, ii) ಕೋಟೀರ-ಟೀಕಃ ತ್ವಂ ಪ್ರಿಯತಮ-ಕುಸುಮಂ ಉನ್ಮಥ್ಯ, ೧) ಕುಟಿಲ....ಮತೀನ್. ೨) ಉತ್ಕಟಾ.... ಕೋಪಾನ್, ೩) ಅತಥ್ಯ....ವಚನಾನ್, ೪) ಉತ್ಪಥಸ್ಥಾನ್ ಅರೀನ್ ಗದಯಾ ಪೋಥಯಾಮಾಸಿಥ; (೨ನೇ ವಾಕ್ಯ) ತಥಾ ಸತ್ವರತ್ವಾತ್ ಅನ್ಯಾನ್ (ತ್ವಂ) ಪೋಥಯಾಮಾಸಿಥ। (೩ನೇ ವಾಕ್ಯ) ಚ ದ್ರಾಕ್ ಪ್ರಿಯತಮ-ಕುಸುಮಂ ಸ್ವಪ್ರಿಯಾಯೈ ಪ್ರಾಯಚ್ಛಃ। ತಸ್ಮೈ ತೇ ನಮಃ ॥

(ಆ) ಅನ್ವಯಾರ್ಥ—(೧ನೇ ವಾಕ್ಯ) ಶರಣದ-ಮೋಕ್ಷಪ್ರದನಾದ ; ಪ್ರಾಣ-ಹೇ ಕೃಷ್ಣನೇ ! ಬರ್ಹ್ವೀಃ-ಪೂರ್ಣೈಶ್ವರ್ಯಸಂಪನ್ನನೂ ; ಕೋಟೀರ-ಟೀಕಃ-ಕಿರೀಟಾದಿ ಲಾಂಛನಗಳೊಡನೆ ಗಮನವುಳ್ಳವನೂ ಅಥವ ಜೀವೋತ್ತ-ಮರೂ ಜ್ಞಾನಿಶ್ರೇಷ್ಠರೂ ಆದ ಬ್ರಹ್ಮಾದಿ ದೇವತೆಗಳಿಂದ ಗಮ್ಯನಾದ; ತ್ವಂ-ನೀನು ; ಪ್ರಿಯತಮ-ಕುಸುಮಂ-ಸತ್ಯಭಾಮಾದೇವೇರಿಗೆ ಅತ್ಯಂತ ಪ್ರಿಯವಾದ ಪಾರಿಜಾತಪುಷ್ಪದ ವೃಕ್ಷವನ್ನು ; ಉನ್ಮಥ್ಯ-ಉತ್ಪಾಟನಮಾಡಿ (ಕಿತ್ತು); ೧) ಕುಟಿಲ....ಮತೀನ್—ಕುಟಿಲ-ದೈತ್ಯಾವೇಶದಿಂದ ಪಾರಿ-ಜಾತಹ ಣದ ಬಗ್ಗೆ ಕ್ರೂರವಾದ ಬುದ್ಧಿಯುಳ್ಳ ; ೨) ಉತ್ಕಟಾ.... ಕೋಪಾನ್ (ಕೃಷ್ಣನನ್ನು ಅರಿಯದೆ) ಮಿತಿಮೀರಿದ ಆಗ್ರಹವೂ ಕೋಪವೂ ಉಳ್ಳ ; ೩) ಅತಥ್ಯ ...ವಚನಾನ್-ಕೃಷ್ಣನ ವಿಷಯದಲ್ಲಿ ಆಡಬಾರದ ಅನುಚಿತವಾದ ಮಾತುಗಳನ್ನು ಆಡುತ್ತಿದ್ದ (ಶ್ರೀಕೃಷ್ಣನ ಸಾಮರ್ಥ್ಯವನ್ನು

ಅಲ್ಲಗಳೆಯುತ್ತಾ ಅವನನ್ನು ಸಾಮಾನ್ಯ ಮನುಷ್ಯನೆಂದು ಹೇಳುತ್ತಾ ಇದ್ದ ಎಂತ ಭಾವ); ೪) ಉತ್ಪಥಸ್ಥಾನ್–ದುರ್ಮಾರ್ಗಪ್ರವರ್ತಕರಾಗಿದ್ದ (ಶ್ರೀ-ಕೃಷ್ಣ-ಸತ್ಯಭಾಮೆಯರು ಸಕಲ ಲೋಕಗಳಿಗೂ ತಂದೆ-ತಾಯಿಗಳೆಂದು ಅರಿಯದೆ ಅವರ ಮೇಲೇ ಯುದ್ಧಕ್ಕೆ ಬಂದಿದ್ದ ಎಂದು ಅರ್ಥ); ಅರೀನ್–ಕುಬೇರಾದಿ ಕೆಲವು ದೇವತೆಗಳನ್ನು; ಗದಯಾ–ಮೋಕ್ಷಪ್ರದಳಾದ ಸತ್ಯ-ಭಾಮಾದೇವಿಯಿಂದಲೇ; ಪ್ರೋಥಯಾಮಾಸಿಥ–ಪರಾಜಯಗೊಳಿಸಿದಿ. (೨ನೇ ವಾಕ್ಯ) ತಥಾ–ಹಾಗೆಯೇ, ಸತ್ವರತ್ವಾತ್–ವೇಗವುಳ್ಳವರಾದ್ದರಿಂದ; ಅನ್ಯಾನ್–ಅಗ್ನಿವಾಯುದೇವೇಂದ್ರಾದಿ ಮಿಕ್ಕ ಕೆಲವರನ್ನು; (ತ್ವಮೇವ)–ನೀನೇ; ಪ್ರೋಥಯಾಮಾಸಿಥ–ಭಂಗಪಡಿಸಿದಿ. (೩ನೇ ವಾಕ್ಯ) (ತಥಾ) ಚ–ಮತ್ತು; ದ್ರಾಕ್–ಶೀಘ್ರವಾಗಿ; ಪ್ರಿಯತಮಕುಸುಮಂ–ಪಾರಿಜಾತ-ಪುಷ್ಪವೃಕ್ಷವನ್ನು; ಸ್ವಪ್ರಿಯಾಯೈ–ನಿಮಗೆ ಪ್ರಿಯಳಾದ ಸತ್ಯಭಾಮೆಗೆ; ಪ್ರಾಯಚ್ಛಃ–ಕೊಟ್ಟೆ (ಎಂದರೆ ಅವಳ ಅಂಗಳದಲ್ಲಿ ನೆಡಿಸಿದಿ). ತಸ್ಮೈ–ಅಂಥಾ; ತೇ–ನಿನಗೆ; ನಮಃ–ನಮಸ್ಕಾರ.

ಇ) ಮೂರನೇ ಭಾವಾರ್ಥ—(ಈ ಭಾವಾರ್ಥ ಸರಳವಾಗಿಯೇ ಇದೆ. ಆದರೂ ಬರೆಯುತ್ತೇನೆ.) ಹೇ ಕೃಷ್ಣ! ಇಂದ್ರಾದಿ ದೇವತೆಗಳು ನಿನ್ನನ್ನು ಬಂದು ಮೊರೆಹೊಕ್ಕು ಪ್ರಾರ್ಥಿಸಿಕೊಂಡಂತೆಯೇ ನರಕಾಸುರನನ್ನು ಸಂಹರಿಸಿ ಅವನು ಒಯ್ದಿದ್ದ ಅದಿತಿಯ ಕುಂಡಲಗಳನ್ನೂ ಇಂದ್ರನ ರತ್ನ-ಪರ್ವತವನ್ನೂ ವರುಣನ ದಿವ್ಯಛತ್ರವನ್ನೂ ಅವರವರಿಗೆ ಕೊಡಿಸಿದಿ ಎಂಬ ಅರ್ಥವನ್ನು 'ಶರಣದ' ಎಂಬ ವಿಶೇಷಣ ಸೂಚಿಸುತ್ತದೆ. ಆದರೂ ಅವರು ನಿನ್ನ ಮೇಲೆ ಯುದ್ಧಕ್ಕೆ ಅಸುರಾವೇಶದಿಂದ ಬಂದರೂ ಅವರನ್ನು ಪರಾಭವ ಗೊಳಿಸಿ ಅವರಿಗೇ ಬುದ್ಧಿ ಕಲಿಸಿದಿ ಎಂಬುದೂ ಶರಣದ ಎಂಬುದರಿಂದ ಸೂಚಿತವಾಗುತ್ತದೆ. ಪಾರಿಜಾತವೃಕ್ಷವನ್ನು ತೆಗೆದುಕೊಳ್ಳಲು ನಿನಗೆ ಸರ್ವಾಧಿಕಾರವಿತ್ತೆಂಬುದನ್ನು ಬಿಭ್ರೀಃ, ಕೋಟೀರಟೀಕಃ, ಪ್ರಾಣ ಎಂಬ ವಿಶೇಷಣಗಳು ಸೂಚಿಸುತ್ತವೆ. ನೀನು ಸರ್ವಸ್ವಾಮಿ, ಸರ್ವಶಕ್ತ, ಎಲ್ಲವೂ ನಿನ್ನ ವಸ್ತುಗಳೇ! ಹೀಗಿದ್ದರೂ ಪಾರಿಜಾತವೃಕ್ಷವನ್ನು ಒಯ್ದಿದ್ದಕ್ಕೆ ದೇವತೆಗಳಿಗೆ ಸಿಟ್ಟು ಬಂತು. ಅವರೆಲ್ಲ ನಿನ್ನ ಮೇಲೂ ಸತ್ಯಭಾಮೆಯ

ಮೇಲೂ ಯುದ್ಧಕ್ಕೆ ಬಂದರು. ಸತ್ಯಭಾಮೆ ಕೆಲವರನ್ನು ಸೋಲಿಸಿ ಹಿಮ್ಮೆಟ್ಟಿಸಿದಳು. ಮಿಕ್ಕವರನ್ನು ನೀನೇ ಪರಾಭವಗೊಳಿಸಿ ಅವರಿಗೆ ಬುದ್ಧಿ ಕಲಿಸಿದಿ. ಕೊನೆಗೆ ಸತ್ಯವಾದ ನಿನ್ನಿಚ್ಛೆಯೇ ನೆರವೇರಿತು. ಹೇ ಸ್ವಾಮಿ, ನಿನ್ನ ಸಂಕಲ್ಪದ ಮುಂದೆ ಯಾರಾಟವೂ ನಡೆಯುವುದಿಲ್ಲ. ನಿನಗೆ ಸಾಷ್ಟಾಂಗ ನಮಸ್ಕಾರ.

307. **ನಾಲ್ಕನೇ ಅರ್ಥಕ್ಕೆ ಪೀಠಿಕೆ**—(ಪುರಾ.) ಪೂರ್ವೋಕ್ತವಾದ ಬ್ರಹ್ಮ-ತದವತಾರಗಳ ಅಭೇದ-ಗುಣಪೂರ್ಣತ್ವಾದಿ ವಿಷಯದಲ್ಲಿ ವಾದಿಗಳ ವಿವಾದ ಪರಿಹಾರಾರ್ಥವಾಗಿ ಮುಂದಿನ ವ್ಯಾಖ್ಯಾನಕ್ಕೆ ಪ್ರವೃತ್ತಿ. ಈ ಪಕ್ಷದಲ್ಲಿ 'ಕುಟಿಲಕಟುಮತೀನ್' ಇತ್ಯಾದಿ ದ್ವಿತೀಯಾವಿಭಕ್ತಿಗಳಿಗೆ ಷಷ್ಠ್ಯರ್ಥವು ಬರುತ್ತದೆ. (ಲೇ.) ದ್ವೈತಸಿದ್ಧಾಂತಕ್ಕೆ ವಿರುದ್ಧವಾದ ಅನೇಕ ವಿಚಾರಗಳನ್ನು ಅನೇಕ ದುರ್ವಾದಿಗಳು ವಾದಮಾಡಿ ಸಮರ್ಥಿಸಲು ತಮ್ಮ ಗ್ರಂಥಗಳಲ್ಲಿ ಪ್ರಯತ್ನಿಸಿದ್ದಾರೆ ; ಅಂಥಾ ವಿರುದ್ಧತತ್ವಗಳಲ್ಲಿ—ಪರಬ್ರಹ್ಮನು ಜೀವಾಭಿನ್ನ, ಜಗತ್ತೆಲ್ಲ ಮಿಥ್ಯಾ, ಪರಬ್ರಹ್ಮವು ಜಗದುಪಾದಾನ ಕಾರಣ, ಬ್ರಹ್ಮನು ನಿರ್ಗುಣ-ನಿರಾಕಾರ ಮೊದಲಾದುವು ಮುಖ್ಯವಾದುವು. ಇಂಥಾ ವಿಚಾರಗಳು ಬ್ರಹ್ಮಸ್ವರೂಪನಾದ ಶ್ರೀಕೃಷ್ಣನಲ್ಲಿ ಇವೆ ಎಂದು ಪ್ರತಿವಾದಿಗಳು ಅನೇಕ ಸಮರ್ಥನೆಗಳನ್ನು ಕೊಟ್ಟರೂ ಶ್ರೀಮದಾಚಾರ್ಯರ ಯುಕ್ತಿಗಳಿಂದ ಅವೆಲ್ಲ ನಿರಾಕೃತವಾಗುತ್ತವೆ. ಶ್ರೀಮದಾಚಾರ್ಯರ ಸಿದ್ಧಾಂತವನ್ನು ಅಭ್ಯಾಸ ಮಾಡಿದವರಿಗೆ ಮಾತ್ರವೇ ಮುಕ್ತಿಯಾಗುತ್ತದೆ, ಅಭ್ಯಾಸ ಮಾಡದವರಿಗೆ ದುರ್ಗತಿಯಾಗುತ್ತದೆ ಎಂಬ ಪ್ರಮೇಯವನ್ನೂ ಈ ಶ್ಲೋಕದಿಂದ ಸಾಧಿಸಿ ತೋರಿಸುತ್ತಾರೆ. ಈ ಅನ್ವಯದಲ್ಲಿ ಅನೇಕ ಪದಗಳನ್ನು ಆವೃತ್ತಿ ಮಾಡಿಕೊಳ್ಳಬೇಕಾಗುತ್ತದೆಯಲ್ಲದೆ ಅನೇಕ ಶಬ್ದಗಳ ಅರ್ಥವೂ ವ್ಯತ್ಯಾಸವಾಗುತ್ತದೆ. ಆದಕಾರಣ ಅಂಥಾ ಕ್ಲಿಷ್ಟಪದಗಳನ್ನೇ ಮೊದಲು ವಿವರಿಸಿ ಆಮೇಲೆ ಅನ್ವಯಾರ್ಥಗಳಿಗೆ ಹೋಗುವೆನು. ಈ ಅರ್ಥದಲ್ಲಿ ಕಥಾಭಾಗ ಏನೂ ಇಲ್ಲ—ಎಲ್ಲ ಕೇವಲ ಪ್ರಮೇಯಭಾಗಗಳೇ ತುಂಬಿವೆ.

ಅ) **ಕೋಟೀಃ**—ವಾದಿ-ಪ್ರತಿವಾದಿಗಳಿಬ್ಬರ ಮತಗಳೂ (ಅಭಿಪ್ರಾಯಗಳೂ) ಭಿನ್ನ-ಭಿನ್ನವಾಗಿದ್ದಾಗ ಇಬ್ಬರೂ ತಮ್ಮ ತಮ್ಮ ಮತವನ್ನು

(ಅಭಿಪ್ರಾಯವನ್ನು, ವಿಚಾರವನ್ನು) ಸಮರ್ಥಿಸಲು ಅನೇಕ ಕಾರಣಗಳನ್ನು ಅಥವಾ ಸಮರ್ಥನೆಗಳನ್ನು ಮಂಡಿಸುತ್ತಾರೆ; ಇವಕ್ಕೇ 'ಕೋಟಿ'ಗಳೆಂದು ಹೆಸರು. ಉದಾಹರಣೆಗೆ 'ಜೀವೋ ಬ್ರಹ್ಮೈವ ನಾಪರಃ'-ಜೀವನು ಪರಬ್ರಹ್ಮಸ್ವರೂಪನೇ ಹೊರತು, ಬೇರೆಯಲ್ಲ—ಎಂಬುದು ಅದ್ವೈತಿಗಳ ಮುಖ್ಯ ಸಿದ್ಧಾಂತಗಳಲ್ಲಿ ಒಂದು. ಇದನ್ನು ಸಮರ್ಥಿಸುವುದಕ್ಕೆ ಅವರು ಅನೇಕ ಉಪನಿಷದ್ವಾಕ್ಯಗಳನ್ನು ಹೇಳುತ್ತಾರೆ: ಛಾಂದೋಗ್ಯದಲ್ಲಿ 'ತತ್ತ್ವಮಸಿ' ಅದು ನೀನೇ ಆಗಿದ್ದೀಯೆಂದು ಹೇಳಿದೆ; ಬೃಹದಾರಣ್ಯಕದಲ್ಲಿ 'ಅಹಂ ಬ್ರಹ್ಮಾಸ್ಮಿ'-ನಾನು ಬ್ರಹ್ಮನಾಗಿದ್ದೇನೆಂದು ಹೇಳಿದೆ; ಕಠದಲ್ಲಿ 'ನೇಹ ನಾನಾಸ್ತಿ ಕಿಂಚನ'—ಇಹ-ಇಲ್ಲಿ ಎಂದರೆ ಈ ಜಗತ್ತಿನಲ್ಲಿ, ಅಥವಾ ಬ್ರಹ್ಮನಲ್ಲಿ, ನಾನಾ-ಭೇದವು, ಕಿಂಚನ-ಯಾವುದೂ, ನ ಅಸ್ತಿ-ಇಲ್ಲ—ಎಂದರೆ ಬ್ರಹ್ಮನಲ್ಲಿ ಭೇದವಿಲ್ಲ. 'ಸರ್ವಂ ಖಲ್ವಿದಂ ಬ್ರಹ್ಮ'-ಇದೆಲ್ಲವೂ ಬ್ರಹ್ಮವೇ ಆಗಿದೆ ಎಂದು ಮತ್ತೊಂದು ಛಾಂದೋಗ್ಯ ವಾಕ್ಯವಿದೆ. ಹೀಗೆ ಅನೇಕ 'ಮಹಾವಾಕ್ಯಗಳು' ಬ್ರಹ್ಮಭಿನ್ನವಾದ ಬೇರೆ ವಸ್ತುವಿಲ್ಲವೆಂದು ಹೇಳುವುದರಿಂದ ಜೀವನು ಬ್ರಹ್ಮನೇ ಹೊರತು ಬೇರೆಯಲ್ಲ ಎಂದು ವಾದಿಸುತ್ತಾರೆ—ಈ ವಾದಸರಣಿಗೆ 'ಕೋಟಿ'ಗಳೆಂದು ಹೆಸರು. ದ್ವೈತಿಗಳು ಈ ವಾಕ್ಯಗಳನ್ನೇ ಒಂದೊಂದಾಗಿ ತೆಗೆದುಕೊಂಡು ಅವಕ್ಕೆ ಅದ್ವೈತಾರ್ಥ ಕೂಡುವುದಿಲ್ಲ ಎಂದು ಸಮರ್ಥಿಸಲು ಅನೇಕ ಕಾರಣಗಳನ್ನು ಕೊಟ್ಟು ಅವರ ಹೇಳಿಕೆಯನ್ನು ಖಂಡಿಸುತ್ತಾರೆ; ಈ ಖಂಡನೆಗಳೂ ಒಂದು ರೀತಿಯ 'ಕೋಟಿ'ಗಳು. ಒಟ್ಟಿನಲ್ಲಿ ತಮ್ಮ ತಮ್ಮ ಪಕ್ಷವನ್ನು ಸಮರ್ಥಿಸುವ ಯುಕ್ತಿಗಳಿಗೇ 'ಕೋಟಿ'ಗಳೆಂದು ಹೆಸರೆಂದು ಸಾಮಾನ್ಯವಾಗಿ ಹೇಳಬಹುದು. 'ಮಾಧ್ವಸಿದ್ಧಾಂತದ ಕೋಟಿಗಳಿಂದ (ಯುಕ್ತಿಗಳಿಂದ) ಶ್ರೀಕೃಷ್ಣನಲ್ಲಿ ಅನಂತಗುಣಗಳು-ಸರ್ವಜ್ಞತ್ವ, ಸರ್ವೋತ್ತಮತ್ವ, ಸ್ವತಂತ್ರತ್ವಾದಿ ಅನೇಕ ಗುಣಗಳು ಸಿದ್ಧಿಸುವುದರಿಂದ 'ಬಹ್ವೀಃ ಕೋಟೀಃ' ಎಂದರೆ ಅನೇಕ ವಿಧವಾದ 'ಉತ್ಕರ್ಷಗಳು' (ಮಹಿಮೆಗಳು) ಕೂಡಿಬರುತ್ತವೆ ಎಂದು ಅರ್ಥಮಾಡಿ ಆ ಅರ್ಥ ಸಮರ್ಥಿಸಲು ಪುರಾ. ವ್ಯಾಖ್ಯಾನಕಾರರು 'ಕೋಟಿರಗ್ರೇ ಪ್ರಕರ್ಷೇ ಚ' ಎಂಬ ಕೋಶವನ್ನು

ಉದಹರಿಸಿದ್ದಾರೆ. ಕೋಟಿ ಶಬ್ದಕ್ಕೆ ತುದಿ (ಅಗ್ರ, ಕೊನೆ) ಎಂದೂ, 'ಹೆಚ್ಚಿಗೆ, ಪ್ರಕರ್ಷ' ಎಂದೂ ಎರಡರ್ಥವುಂಟೆಂದು ಕೋಶ ಹೇಳುತ್ತದೆ.

ಆ) ಗದಯಾ 'ಗದ ವ್ಯಕ್ತಾಯಾಂ ವಾಚಿ' ಎಂದು ಧಾತುಪಾಠ ವಿರುವುದರಿಂದ ಗದಾ ಶಬ್ದಕ್ಕೆ 'ವಾಕ್ಯ, ಮಾತು' ಎಂಬ ಅರ್ಥವೂ ಇದೆ. ಹಿಂದೆ ಐದನೇ ಶ್ಲೋಕದಲ್ಲೂ ಗದಾ ಶಬ್ದಕ್ಕೆ ಈ ಅರ್ಥ ಹೇಳಲಾಗಿತ್ತು. **ಗದಯಾ** ಚ ಎಂದು ಅನ್ವಯ ಮಾಡಿ ಚ-ಶಬ್ದ ಅವಧಾರಣಾರ್ಥಕವಾದ್ದರಿಂದ 'ಮಾತಿನಿಂದಲೇ' ಎಂದರ್ಥ ಹೇಳಿದ್ದಾರೆ.

ಇ) ಸ್ವಪ್ರಿಯಾಯ್ಯೈ ಎಂಬುದು ಸ್ತ್ರೀಲಿಂಗವಾದ್ದರಿಂದ ಅದಕ್ಕೆ ಅನುಗುಣವಾಗಿ 'ಪ್ರಜಾಯ್ಯೈ' ಎಂಬ ಸ್ತ್ರೀಲಿಂಗವಿಶೇಷ್ಯ ಅಧ್ಯಾಹಾರ ಮಾಡಿಕೊಂಡು ಅದಕ್ಕೆ 'ತನಗೆ ಪ್ರೀತಿವಿಷಯರಾದ ಯೋಗ್ಯಜನಗಳಿಗೆ' ಅರ್ಥಾತ್ ತನ್ನನ್ನು ಸರ್ವೋತ್ತಮ, ಗುಣಪರಿಪೂರ್ಣ ಎಂದು ಸ್ತೋತ್ರಮಾಡುವ ಭಕ್ತ ಜನಗಳಿಗೆ ಎಂದು ಅರ್ಥಮಾಡಬೇಕು.

ಈ) ಪ್ರಿಯತಮಕುಸುಮಂ ಎಂಬುದರ ಅರ್ಥ ಸರ್ವಥಾ ಬೇರೆ. ಹೇಗೆಂದರೆ (ಪುರಾ.) 'ಪುಷ್ಪಂ ಸ್ವರ್ಗಾದಯಃ ಪ್ರೋಕ್ತಾಃ ಫಲಂ ಮೋಕ್ಷ ಉದಾಹೃತಃ'–ಸ್ವರ್ಗಾದಿಗಳು 'ಹೂ'ವೆಂತಲೂ, ಮೋಕ್ಷವು ಫಲ (ಹಣ್ಣು) ಎಂತಲೂ ಹೇಳಲ್ಪಡುತ್ತವೆ ಎಂಬ ವಾಕ್ಯದಂತೆ ಸ್ವರ್ಗಾದಿಗಳು ಪುಷ್ಪವೆಂದು ತಿಳಿಯಬೇಕು. ಅನಂತರ—ಕುಸುಮಾತ್ ಪ್ರಿಯತಮಂ–ಪ್ರಿಯತಮಕುಸುಮಂ ಎಂದು ವಿಗ್ರಹ ; ಇದಕ್ಕೆ ಕುಸುಮರೂಪವಾದ ಸ್ವರ್ಗಾದಿ ಲೋಕಗಳಿಗಿಂತ ಅತ್ಯಂತ ಪ್ರಿಯವಾದ ಮೋಕ್ಷವನ್ನು—ಎಂದರ್ಥವಾಗುತ್ತದೆ. ಸಾಮಾನ್ಯವಾಗಿ ಆದರೆ ಚೋರಭಯಂ ಎಂಬಂತೆ ಕುಸುಮಪ್ರಿಯತಮಂ ಆಗಬೇಕು ; ಆದರೆ ರಾಜದಂತಾದಿಗಳಂತೆ ಪರನಿಪಾತವಾಗಿ (ಕುಸುಮ ಶಬ್ದ ಉತ್ತರಪದವಾಗಿ) 'ಪ್ರಿಯತಮಕುಸುಮಂ' ಎಂದಾಗಿದೆ. ಇದೊಂದು ವ್ಯಾಕರಣವಿಶೇಷ.

308. (ಕ) ಹರಿಪರವಾಗಿ ನಾಲ್ಕನೇ ಅನ್ವಯ—(೧ನೇ ವಾಕ್ಯ) ಶರಣದ (ಹೇ) ಪ್ರಾಣ! ತ್ವಂ ೧) ಕುಟಿಲಕಟುಮತೀನ್, ೨) ಉತ್ಕಟಾ.... ಕೋಪಾನ್, ೩) ಅತಥ್ಯ....ವಚನಾನ್, ೪) ಉತ್ಪಥಸ್ಥಾನ್, ೫) ಅನ್ಯಾನ್

ಅರೀನ್ ಗದಯಾ ಬಹ್ವೀಃ ಕೋಟೀಃ ಅಟೀಕಃ । (೨ನೇ ವಾಕ್ಯ) ತಥಾ ಗದಯಾ ಚ ಬಹ್ವೀಃ ಕೋಟೀಃ ಅಟೀಕಃ । (೩ನೇ ವಾಕ್ಯ) ಅರೀನ್ ದ್ರಾಕ್ ಗದಯಾ ಚ ಉನ್ಮಥ್ಯ ಸತ್ವರತ್ವಾತ್ ಪ್ರೋಥಯಾಮಾಸಿಥ । (೪ನೇ ವಾಕ್ಯ) ತಥಾ ಚ ಸ್ವಪ್ರಿಯಾಯೈ ಪ್ರಿಯತಮಕುಸುಮಂ (ದ್ರಾಕ್) ಪ್ರಾಯಚ್ಛಃ । (೫ನೇ ವಾಕ್ಯ) ತಸ್ಮೈ ತೇ ನಮಃ ॥

(ಖ) ನಾಲ್ಕನೇ ಅನ್ವಯಾರ್ಥ—(೧ನೇ ವಾಕ್ಯ), ಶರಣದ-ಶರಣು ಹೊಂದಿದ ಭಕ್ತಜನರಿಗೆ ಮೋಕ್ಷಪ್ರದನಾದ; ಪ್ರಾಣ-ಸರ್ವತಂತ್ರಸ್ವತಂತ್ರನಾದ ಹೇ ಶ್ರೀಕೃಷ್ಣನೇ ! ತ್ವಂ-ನೀನು, ೧) ಕುಟಿಲ....ಮತೀನ್-ವಕ್ರವಾದ ಕ್ರೂರಬುದ್ಧಿಯುಳ್ಳ (ಅನುಭವವೇದ್ಯವಾದ ಜಗತ್ತೇ ಸುಳ್ಳೆಂದೂ, ಸ್ಪಷ್ಟವಾಗಿ ಭೇದವು ಗೋಚರವಾದರೂ ಅಭೇದವನ್ನೇ ಪ್ರತಿಪಾದಿಸುವುದೇ ಮೊದಲಾದ ಕುಟಿಲ ಬುದ್ಧಿಯುಳ್ಳ) ; ೨) ಉತ್ಕಟಾ....ಕೋಪಾನ್-ಹೆಚ್ಚಾದ ಆಗ್ರಹವೂ ಕೋಪವೂ ಉಳ್ಳ (ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸುವುದಕ್ಕೆ ಹೆಚ್ಚು ಆಗ್ರಹ ಮಾಡುವವರನ್ನು—ಭೇದವನ್ನು ತಿಳಿಯುವವರು ಮೂಢಬುದ್ಧಿಯುಳ್ಳವರು 'ಭೇದಂ ಪಶ್ಯತಿ ಮೂಢಧೀಃ' ಎಂದು ನಿಸ್ಸಂಕೋಚವಾಗಿ ಹೇಳುವ) ; ೩) ಅತಥ್ಯ....ವಚನಾನ್—ಅ-ಅಕಾರವಾಚ್ಯನಾದ ನಿನ್ನ, ತಥ್ಯ-ಸತ್ಯವಾದ ಗುಣಗಳಿಗೆ, ಮಿಥ್ಯಾತ್ವ-ವಚನ-ಮಿಥ್ಯಾತ್ವವನ್ನು ಪ್ರತಿಪಾದಿಸುವ, ವಚನಾನ್-ವಾದಗಳುಳ್ಳ (ಮಾತುಗಳುಳ್ಳ); ೪) ಉತ್ಪಥಸ್ಥಾನ್-ದುರ್ಮಾರ್ಗಪ್ರವೃತ್ತರಾದ ; ೫) ಅನ್ಯಾನ್-ವಿರುದ್ಧ ಸಿದ್ಧಾಂತವುಳ್ಳ (ಪ್ರತಿವಾದಿಗಳಾದ ಎಂದರ್ಥ) ; ಅರೀನ್-ಪ್ರತಿಪಕ್ಷಿಗಳ (ಷಷ್ಠ್ಯರ್ಥದಲ್ಲಿ ದ್ವಿತೀಯಾ ಬಂದಿದೆ) ; ಗದಯಾ ಚ-ವಾಕ್ಯಗಳಿಂದಲೇ (ಅಥವಾ ವಾದಗಳಿಂದ ಮಾತ್ರವೇ) ; ಬಹ್ವೀಃ ಕೋಟೀಃ-ಅನೇಕ ಅಪಸಿದ್ಧಾಂತಗಳನ್ನು (ನಿರ್ಗುಣ, ನಿರಾಕಾರ, ಜೀವಾಭಿನ್ನ, ಜಗದುಪಾದಾನಕಾರಣ ಇವೇ ಮೊದಲಾದ ಪ್ರಮೇಯಗಳನ್ನು ಎಂದರ್ಥ) ; ಅಟೀಕಃ-ಹೊಂದಿದವನಾದಿ. (೨ನೇ ವಾಕ್ಯ) ತಥಾ-ಹಾಗೆಯೇ (ಅದೇ ಪ್ರಕಾರ); ಗದಯಾ ಚ-'ಯದೇಷ ಆಕಾಶ ಆನಂದೋ ನ ಸ್ಯಾತ್' (ತೈ.ಉ. ೨/೭/೧) ಇವೇ ಮೊದಲಾದ ವೇದವಾಕ್ಯಗಳಿಂದಲೇ, ಬಹ್ವೀಃ ಕೋಟೀಃ-ಪೂರ್ಣಾನಂದತ್ವ, ಗುಣಪೂರ್ಣತ್ವ ಸರ್ವಜ್ಞತ್ವಾದಿ ಅಸಂಖ್ಯ ಉತ್ಕರ್ಷಗಳನ್ನು

(ಪ್ರಕರ್ಷಗಳನ್ನು-ಅಸಾಧಾರಣ ಗುಣಗಳನ್ನು), ಅಟೀಕಃ-ನೀನು ಹೊಂದಿದವನಾಗಿದ್ದೀ. (೩ನೇ ವಾಕ್ಯ) ಅರೀನ್-ಪ್ರತಿವಾದಿಗಳನ್ನು; ದ್ರಾಕ್-ಚೆನ್ನಾಗಿ (ಅನೇಕ ಪ್ರಕಾರಗಳಿಂದ, ಅನೇಕ ವಿಧವಾದ ಯುಕ್ತಿಗಳಿಂದ ಎಂದು ಭಾವ); ಗದಯಾ-ವಾಯುದೇವರ ವಾಕ್ಯಗಳಿಂದ; ಉನ್ಮಥ್ಯ-ಖಂಡಿಸಿ, ಸತ್ವರತ್ವಾತ್-ಜಾಗ್ರತೆಯಾಗಿ, ಪ್ರೋಥಯಾಮಾಸಿಥ-ನಿರಾಕರಿಸಿಬಿಟ್ಟೆ; ಮತ್ತು, ಅರೀನ್-ದ್ರಾಕ್ (ಹಿಂದಿನಂತೆ ಅರ್ಥ); ಗದಯಾ-ಭೀಮಸೇನನ ಗದಾಪ್ರಹಾರದಿಂದ, ಉನ್ಮಥ್ಯ-ಹೊಡೆಸಿ, ಸತ್ವರತ್ವಾತ್-ಜಾಗ್ರತೆಯಾಗಿ; ಪ್ರೋಥಯಾಮಾಸಿಥ-ಅಂಧಂತಮಸ್ಸಿನಲ್ಲಿ ಹಾಕಿದಿ. (೪ನೇ ವಾಕ್ಯ) ತಥಾ ಚ-ಸಾಧನಾನುಗುಣವಾಗಿ (ಅಥವಾ ಯೋಗ್ಯತಾತಾರತಮ್ಯಾನುಗುಣವಾಗಿ ಎಂದರ್ಥ); ಸ್ವಪ್ರಿಯಾಯ್ಯೈ ಪ್ರಜಾಯ್ಯೈ-(ತನ್ನನ್ನು ಸರ್ವೋತ್ತಮತ್ವಾದಿ ಗುಣಗಳಿಂದ ಆರಾಧಿಸಿ ಸ್ತುತಿಸುವುದರಿಂದ) ತನಗೆ ಅತ್ಯಂತ ಪ್ರಿಯರಾದ ಭಕ್ತಜನಗಳಿಗೆ ('ಪ್ರಿಯೋ ಹಿ ಜ್ಞಾನಿನೋತ್ಯರ್ಥ-ಮಹಂ ಸ ಚ ಮಮ ಪ್ರಿಯಃ' ಎಂದು ಗೀತೆಯಲ್ಲಿ ೭-೧೭ ಹೇಳಿದ ಪ್ರಕಾರ ಎಂದು ತಿಳಿಯಬೇಕು); ಪ್ರಿಯತಮಕುಸುಮಂ-ಸ್ವರ್ಗಕ್ಕಿಂತಲೂ ಹೆಚ್ಚು ಪ್ರಿಯವಾದ ಮೋಕ್ಷವನ್ನು; ಪ್ರಾಯಚ್ಛಃ-ನೀನು ಕೊಟ್ಟೆ. (೫ನೇ ವಾಕ್ಯ) ತಸ್ಮೈ-ಅಂಥಾ; ತೇ-ನಿನಗೆ, ನಮಃ-ನಮಸ್ಕಾರ.

(ಗ) ನಾಲ್ಕನೇ ಅರ್ಥದ ಭಾವಾರ್ಥ—ಹೇ ಶ್ರೀಕೃಷ್ಣ! ಪರಮಾತ್ಮ! ನಿನ್ನನ್ನು ಯಾರು ಅನನ್ಯಭಾವದಿಂದ ಮೊರೆಹೊಗುತ್ತಾರೋ ಅವರ ಯೋಗಕ್ಷೇಮವನ್ನು ನೀನೇ ವಹಿಸಿಕೊಳ್ಳುವುದಲ್ಲದೆ 'ತೇಷಾಮಹಂ ಸಮುದ್ಧರ್ತಾಮೃತ್ಯುಸಂಸಾರಬಂಧನಾತ್' ಎಂಬ ಗೀತೋಕ್ತಿ (೧೨/೭)ಯಂತೆ ಅವರನ್ನು ಜನನಮರಣಗಳ ಬಂಧನದಿಂದ ದಾಟಿಸಿ ಉದ್ಧಾರಮಾಡುವಿ! (ಎಂಬ ಭಾವವನ್ನು ಶರಣದ ಎಂಬ ಸಂಬೋಧನೆ ಹೊರಗೆಡಹುತ್ತದೆ.) 'ಪ್ರಾಣಸ್ಯ ಪ್ರಾಣಃ' ಎಂಬ ಶ್ರುತಿಯಂತೆ ಸಕಲ ಜಗತ್ತಿಗೂ ಜೀವನಾಧಾರನಾದ ಮುಖ್ಯಪ್ರಾಣನಿಗೇ ನೀನು ಶಕ್ತಿಪ್ರದನಾಗಿದ್ದೀಯೆ! (ಎಂಬ ಭಾವವನ್ನು ಪ್ರಾಣ ಎಂಬ ಸಂಬೋಧನೆ ತಿಳಿಸುತ್ತದೆ.) ಈ ಪ್ರಕಾರ ನೀನು ಸರ್ವೋತ್ತಮನೂ ಸರ್ವಶಕ್ತನೂ ಆದ್ದರಿಂದಲೇ ಸರ್ವಸ್ಮಾತ್ ಭಿನ್ನನೂ ಆಗಿದ್ದರೂ ಸಹ ದುರಾಗ್ರಹದಿಂದ ನಿನ್ನಲ್ಲಿ ಈ ಅನಂತಗುಣಗಳನ್ನು ಕಾಣುವು

ದಕ್ಕೆ ಪ್ರತಿಯಾಗಿ ದುರ್ವಾದಿಗಳೆಲ್ಲರೂ ಒಂದೊಂದು ವಿಧವಾಗಿ ನಿನ್ನಲ್ಲಿ ಕೂಡದಂಥಾ ಅನೇಕ ಅಪಚಾರಗಳನ್ನೇ ಆರೋಪ ಮಾಡುವರು. ಆ ವಿಚಾರಗಳು ಸ್ವಾನುಭವಕ್ಕೆ ವಿರೋಧವಾಗಿ ಕಂಡರೂ ಹೇಗೋ ಅಲ್ಲದ-ಸಲ್ಲದ ಕುಯುಕ್ತಿಗಳಿಂದ ಪುಂಖಾನುಪುಂಖವಾಗಿ ವಾದಿಸಿ ಆ ತಮ್ಮ ಸಿದ್ಧಾಂತಗಳನ್ನೇ ಮಂಡಿಸುವರು (ಬಹ್ವೀಃ ಕೋಟೀಃ ಅಟೀಕಃ). ಅವರ ಯುಕ್ತಿಗಳು ಹೊಂದುವುದಿಲ್ಲ, ಅಸಂಗತ ಎಂದು ತೋರಿಸಿ ಖಂಡಿಸಿದರೆ ಅವರಿಗೆ ಹೇಳಲಾಗದಷ್ಟು ಆಗ್ರಹ, ಹಿಡಿಸಲಾರದಷ್ಟು ಕೋಪ! ಅಂತೂ ತಮ್ಮ ಪಕ್ಷವನ್ನೇ ಹೇಗೋ ಸಾಧಿಸಿ ನೀನು ನಿರ್ಗುಣನೆಂದೂ ನಿರಾಕಾರನೆಂದೂ ಜೀವಾಭೇದನೆಂದೂ ಜಗತ್ತಿಗೆ ಉಪಾದಾನಕಾರಣನೆಂದೂ* ಭಗವದ್ಗೀತೆಯಲ್ಲಿ ನೀನು ಹೇಳಿದ ವಿಚಾರಗಳಿಗೆ ವಿರುದ್ಧವಾದ ಅಂಶಗಳನ್ನೇ ನಿನ್ನಲ್ಲಿ ಸಾಧಿಸುವರು. ಆದರೂ ಕೂಡ ವಾಸ್ತವಿಕವಾಗಿ ಆಲೋಚನೆಮಾಡಿ ನೋಡಿದರೆ ಅವರು ಹೇಳುವ ನಿರ್ಗುಣತ್ವ ನಿರಾಕಾರತ್ವಾದಿ ಗುಣಗಳು ನಿನ್ನಲ್ಲಿ ಸರ್ವಥಾ ಕೂಡುವುದಿಲ್ಲ. ಪುರುಷಸೂಕ್ತದಲ್ಲಿ ನೀನು ಸಹಸ್ರಶೀರ್ಷ ಸಹಸ್ರಾಕ್ಷ ಸಹಸ್ರಪಾತ್ (ಅನಂತ ತಲೆಗಳುಳ್ಳವನು, ಅನಂತ ಕಣ್ಣುಗಳೂ-ಅಕ್ಷ-, ಕಾಲುಗಳೂ-ಪಾತ್ ಉಳ್ಳವನೆಂದು, ಅನೇಕ ಬಾಹೂದರವಕ್ತ್ರನೇತ್ರಂ—ಗೀತೆ ೧೧/೧೬, ಅನಂತ-ಬಾಹುಂ ಶಶಿಸೂರ್ಯನೇತ್ರಂ ೧೧/೧೯) ಆಗಿದ್ದೀಯೆಂದು ಸ್ಪಷ್ಟವಾಗಿ ಹೇಳಿರುವಾಗ ನೀನು ನಿರಾಕಾರ ಹೇಗಾಗುವಿ? 'ಯಸ್ಸರ್ವಜ್ಞಃ ಸರ್ವವಿತ್' (ಅಥರ್ವಣ ೧/೧/೧೦) 'ಯಾರು ಸರ್ವವನ್ನೂ ಬಲ್ಲವನೂ ಸರ್ವವನ್ನೂ

---

* ಉಪಾದಾನಕಾರಣವೆಂದೂ ನಿಮಿತ್ತಕಾರಣವೆಂದೂ ಕಾರಣವು ಎರಡು ಪ್ರಕಾರವಾಗಿರುತ್ತವೆ. ಮಡಕೆಗೆ ಮಣ್ಣು ಉಪಾದಾನಕಾರಣ; ಮಣ್ಣೇ ಮಡಕೆಯಾಗಿ ಮಾರ್ಪಾಡಾಗುವುದು. ಆದರೆ ಮಣ್ಣು ತನಗೆ ತಾನೇ ಮಡಕೆಯಾಗಲಾರದು; ಮಣ್ಣಿಗೆ ಆ ಚೈತನ್ಯವಿಲ್ಲ; ಅದು ಜಡವಸ್ತು. ಮಣ್ಣನ್ನು ಮಡಕೆಯಾಗಿ ರೂಪ ಕೊಡುವುದಕ್ಕೆ ಒಬ್ಬ ಚೈತನ್ಯವುಳ್ಳ ವ್ಯಕ್ತಿ—ಕುಂಬಾರ ಬೇಕು; ಆ ಕುಂಬಾರನೇ ನಿಮಿತ್ತಕಾರಣ. ಅನೇಕ ವಾದಿಗಳು ಪರಬ್ರಹ್ಮವೇ ಜಗತ್ತಾಗಿ ಮಾರ್ಪಾಡಾಗುವುದೆಂದೂ ಆದ್ದರಿಂದ ಜಗತ್ತಿಗೆ ಪರಬ್ರಹ್ಮ ಉಪಾದಾನಕಾರಣನೆಂದೂ ಹೇಳುವರು. ಮಧ್ವಸಿದ್ಧಾಂತದಲ್ಲಿ ಪರಮಾತ್ಮ ಜಗತ್ತಿಗೆ ನಿಮಿತ್ತಕಾರಣನೇ ಹೊರತು ಉಪಾದಾನಕಾರಣವಲ್ಲ. ಆದ್ದರಿಂದಲೇ ಪರಮಾತ್ಮನಿಗೂ ಜಗತ್ತಿಗೂ ಭೇದ ಕೂಡುತ್ತದೆ.

ಹೊಂದಿದವನೂ ಆಗಿದ್ದಾನೋ' 'ಶ್ರೋತಾ ಮಂತಾ ದ್ರಷ್ಟಾऽದೇಷ್ಟಾ ಘೋಷ್ಟಾ ವಿಜ್ಞಾತಾ ಸರ್ವೇಷಾಂ ಭೂತಾನಾಂ' (ಐತರೇಯ ೩/೨/೪) '(ಸಕಲ-ವನ್ನೂ) ಕೇಳುವವನೂ ತಿಳಿದವನೂ, ನೋಡುವವನೂ ಆಜ್ಞಮಾಡುವವನೂ ಘೋಷಿಸುವವನೂ ಸಕಲ ಪ್ರಾಣಿಗಳನ್ನು ತಿಳಿದವನೂ' ಎಂದು ಶ್ರುತಿಗಳು ಸಾರುತ್ತಿರುವಾಗ ನೀನು ನಿರ್ಗುಣ ಎಂಬುದು ಹೇಗೆ ಹೊಂದುತ್ತದೆ? 'ಕೋ ಹ್ಯೇವಾನ್ಯಾತ್—' ಎಂಬ ತೈತ್ತಿರೀಯ ಶ್ರುತಿ (೨/೭/೧) 'ಈ ಭಗವಂತನೇ ಸ್ವಯಂ ಆನಂದಪೂರ್ಣನಾಗಿಲ್ಲದಿದ್ದ ಪಕ್ಷದಲ್ಲಿ ಈ ಜಗತ್ತನ್ನು ಹೇಗೆ ನಡೆಸಲು ಸಾಧ್ಯವಾಗುತ್ತಿತ್ತು? ಈ ಜಗತ್ತನ್ನು ಬೇರೆ ಯಾರು ಬದುಕಿಸುತ್ತಿದ್ದರು?' ಎಂದು ಕೇಳುತ್ತಾ ಆ ಸರ್ವಸ್ವಾಮಿಯಾದ ನೀನು ಆನಂದಪೂರ್ಣನೆಂದೂ ಸರ್ವ-ಶಕ್ತನೆಂದೂ ಸರ್ವನಿಯಾಮಕನೆಂದೂ ಘೋಷಿಸುತ್ತಿರುವಾಗ ಜೀವನೂ ನೀನೂ ಒಂದೇ ಎಂಬುದು ಹೇಗೆ ಸಾಧ್ಯವಾಗುತ್ತದೆ? ಒಟ್ಟಿನಲ್ಲಿ ಸಕಲ ಶ್ರುತಿಗಳೂ ನಿನ್ನ ಉತ್ಕರ್ಷವನ್ನೇ (ಸರ್ವೋತ್ತಮತ್ವವನ್ನೇ) ಹೇಳುತ್ತವೆ. ಈ ರೀತಿ ಶ್ರೀ-ವಾಯುದೇವರು (ಮಧ್ವಾವತಾರ ಎತ್ತಿ) ಅನೇಕ ಯುಕ್ತಿಗಳಿಂದ ಆ ದುರ್ವಾದಿಗಳ ಅಪಸಿದ್ಧಾಂತಗಳನ್ನು ಖಂಡಿಸಿಬಿಟ್ಟರು. ಆದರೆ ಯಾರು ಆಗ್ರಹದಿಂದ ಆ ದುಷ್ಟಸಿದ್ಧಾಂತಗಳನ್ನೇ ಅವಲಂಬಿಸಿ ನಿನ್ನ ಅನಂತಗುಣ ಕ್ರಿಯೆಗಳನ್ನು ಭಕ್ತಿಯಿಂದ-ಶ್ರದ್ಧೆಯಿಂದ ಉಪಾಸನೆ ಮಾಡುವುದಿಲ್ಲವೋ ಅಂತಹವರನ್ನು ನೀನು ನಿನ್ನ ಸಂಕಲ್ಪಾನುಸಾರ ಭೀಮಸೇನನಿಂದ ಗದಾಪ್ರಹಾರ ಮಾಡಿಸಿ ಅಂಧಂ-ತಮಸ್ಸಿನಲ್ಲಿ ಹಾಕುವಿ. ಅದಕ್ಕೆ ಪ್ರತಿಯಾಗಿ ಯಾವ ಭಕ್ತರು ನಿನ್ನ ಸರ್ವೋತ್ತಮತ್ವವನ್ನು ಅರಿತು ನಿನ್ನನ್ನು 'ಸರ್ವಸ್ವಾಮೀ ಮಮ ಸ್ವಾಮೀ' ಎಂದು ಅನನ್ಯಭಾವದಿಂದ ಉಪಾಸನೆ ಮಾಡುತ್ತಾರೋ ಅವರನ್ನು ಸಂಸಾರ-ಸಾಗರದಿಂದ ದಾಟಿಸಿ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' (ಗೀ. ೯/೨೧) ಎಂಬಂತೆ ನಶ್ವರವಾದ ಸ್ವರ್ಗಾದಿ ಲೋಕಗಳಿಗಿಂತಲೂ ಉತ್ತಮವಾದ 'ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ' (ಗೀತೆ ೮/೨೧) 'ಎಲ್ಲಿಗೆ ಹೋದ ಬಳಿಕ ಹಿಂದಿರುಗುವುದಿಲ್ಲವೋ ಅದೇ ನನ್ನ ಉತ್ತಮವಾದ ವೈಕುಂಠ-ಲೋಕ' ಎಂಬುವಂಥಾ ಪುನರಾವೃತ್ತಿವರ್ಜಿತವಾದ ಮೋಕ್ಷವನ್ನು ಅವರಿಗೆ

ಕೊಡುವಿ, ಸ್ವಾಮಿ ನೀನು! ಇಂಥಾ ಕರುಣಾಳುವಾದ ನಿನಗೆ ಅನಂತ ನಮಸ್ಕಾರ ಎಂಬುದೇ ನಾಲ್ಕನೆಯ ಅರ್ಥದ ಭಾವಾರ್ಥ.

309. ಐದನೇ ಅರ್ಥಕ್ಕೆ ಪೀಠಿಕೆ—(ಅ) (ಪು.ರಾ.) ದೇವತೆಗಳು ವೇದವ್ಯಾಸದೇವರ ಅವತಾರಕ್ಕಾಗಿ ಮಾಡಿದ ಸ್ತುತಿಗಳ ಸಂಗ್ರಹಪರವಾಗಿಯೂ ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡಬಹುದು. (ಲೇ.) ತಾತ್ಪರ್ಯನಿರ್ಣಯದ ಹತ್ತನೇ ಅಧ್ಯಾಯದಲ್ಲಿ ವೇದವ್ಯಾಸಾವತಾರದ ಕಥೆ ನಿರೂಪಿತವಾಗಿದೆ. ಈ ಕಥೆಯೇ ಮುಂದೆ ಹರಿವಾಯುಸ್ತುತಿಯ ೩೬-೩೭ನೇ ಶ್ಲೋಕಗಳಲ್ಲಿ ಹೆಚ್ಚು ವಿಸ್ತಾರವಾಗಿ ಪ್ರಸಕ್ತವಾಗಿ ಬರುವುದು. ಆ ಅವತಾರದ ಪ್ರಯೋಜನವನ್ನು ಸೂಚಿಸುವ ಸಲುವಾಗಿ ಹತ್ತನೇ ಅಧ್ಯಾಯದ ಪ್ರಾರಂಭದಲ್ಲಿ (ಶ್ಲೋ. ೩-೩೫) ಹೀಗೆ ಕಥೆ ಬಂದಿದೆ—ದ್ವಾಪರಾಂತ್ಯದಲ್ಲಿ ಕಲಿಯ ಪ್ರಾಬಲ್ಯದಿಂದ ಅಜ್ಞಾನವು ಪ್ರಬಲಿಸಲು ಜ್ಞಾನವು ಕ್ಷೀಣವಾಗುತ್ತಿತ್ತು. ಅದನ್ನು ಕಂಡು ಸಜ್ಜನರಲ್ಲಿ ಮರುಕಗೊಂಡ ಬ್ರಹ್ಮಾದಿ ದೇವತೆಗಳೆಲ್ಲ ಕ್ಷೀರಸಮುದ್ರಕ್ಕೆ ಹೋದರೆಂದೂ ಅಲ್ಲಿ ಆ ಶ್ರೀಹರಿಯನ್ನು ವ್ಯಾಸಾವತಾರ ಎತ್ತಲು ಪ್ರಾರ್ಥಿಸುವುದಕ್ಕೆ ಪೂರ್ವ-ಪೀಠಿಕಾರೂಪವಾಗಿ ಹಿಂದೆ ಆ ಶ್ರೀಹರಿ ತಮಗೆಲ್ಲಾ ಅಮೃತಪ್ರಾಶನಮಾಡಿಸಿದ ಕಥೆಯನ್ನು ಹೇಳಿ, 'ಹೇ ಸ್ವಾಮಿ, ನೀನು ಹಿಂದೆ ಈ ರೀತಿ ಮಹಾನುಗ್ರಹ ಮಾಡಿದಿ. ಈಗ ಮತ್ತೊಂದು ಉಪಕಾರವಾಗಬೇಕಾಗಿದೆ. ವ್ಯಾಸಾವತಾರ ಮಾಡಿ ಅಜ್ಞಾನವನ್ನು ಕಳೆದು ಸಜ್ಜನರಿಗೆ ಜ್ಞಾನೋಪದೇಶ ಮಾಡಬೇಕಾಗಿದೆ' ಎಂದು ಬಿನ್ನವಿಸಿಕೊಂಡರೆಂದು ನಿರೂಪಣೆ ಮಾಡಲಾಗಿದೆ. ಹಾಗೆ ಪ್ರಸಕ್ತವಾದ ಅಮೃತಪ್ರಾಶನದ ಕಥೆಯೇ ಸದ್ಯಃ ಈ ಐದನೇ ಅರ್ಥಕ್ಕೆ ಹಿನ್ನೆಲೆಯಾಗಿದೆಯೆಂದು ತಿಳಿಯಬೇಕು. ಆದಕಾರಣ ಈ ಶ್ಲೋಕಾರ್ಥವನ್ನು ಗ್ರಹಿಸುವುದಕ್ಕೆ ಎಷ್ಟು ಆವಶ್ಯಕವೋ ಅಷ್ಟುಮಾತ್ರ ಕಥೆಯನ್ನು ತಾತ್ಪರ್ಯ-ನಿರ್ಣಯದಿಂದ (೧೦/೬-೩೨ ಶ್ಲೋ.) ಸಂಗ್ರಹಿಸಿ ಕೆಳಗೆ ಕೊಡಲಾಗಿದೆ. ಇದನ್ನು ಓದಿಕೊಂಡರೆ ಐದನೇ ಅರ್ಥ ಸ್ಪಷ್ಟವಾಗಿ ತಿಳಿಯುತ್ತದೆ.

(ಆ) ಅಮೃತಮಥನದ ಕಥೆ—ಹಿಂದೊಮ್ಮೆ ಬಲ್ಯಾದಿ ದೈತ್ಯರಿಂದ ಪರಾಜಿತರಾದ ದೇವತೆಗಳು ಶ್ರೀಹರಿಯ ಸೂಚನೆಯಂತೆ ದೈತ್ಯದಾನವರೊಡನೆ ಹೇಗೋ ಸಂಧಿಮಾಡಿಕೊಂಡ. ಅಮೃತಪ್ರಾಪ್ತಿಗಾಗಿ ಕ್ಷೀರಸಮುದ್ರವನ್ನು

ಮಥನಮಾಡಿದರು. ಅವರಿಗೆ ಮಂಥರಪರ್ವತವೇ ಕಡಗೋಲಾಯಿತು, ವಾಸುಕಿಯೆಂಬ ಮಹಾವಿಷಸರ್ಪವೇ ಹಗ್ಗವಾಯಿತು. ಸಮುದ್ರಮಥನದಿಂದ ಮೊದಲು ಅತ್ಯುಗ್ರವಾದ ಕಾರ್ಕೋಟವಿಷವೂ ಅನಂತರ ಸುರೆಯೂ (ಮದ್ಯವೂ) ಹುಟ್ಟಿದುವು. ಅನಂತರ ಕ್ರಮವಾಗಿ ಉಚ್ಚೈಃಶ್ರವಸ್ಸೆಂಬ ಕುದುರೆಯೂ ಐರಾವತವೇ ಮೊದಲಾದ ನಾಲ್ಕು ದಂತದ ದಿಗ್ಗಜಗಳೂ ಸಹಸ್ರ-ಸಂಖ್ಯಾಕ ಅಪ್ಸರೆಯರೂ ದೇವತೆಗಳ ವಿವಿಧ ಆಯುಧಗಳೂ ಆಭರಣಗಳೂ ಪಾರಿಜಾತವೃಕ್ಷ ಕಲ್ಪವೃಕ್ಷಗಳೂ ಚಿಂತಾಮಣಿ ಕೌಸ್ತುಭಮಣಿಗಳೂ ಚಂದ್ರನೂ ಲಕ್ಷ್ಮೀದೇವಿಯೂ ಉದ್ಭವಿಸಿದರು. ಕೊಟ್ಟಕೊನೆಗೆ ಸಾಕ್ಷಾನ್ನಾರಾಯಣನೇ ಧನ್ವಂತರಿಯ ರೂಪ ಧರಿಸಿ ಬಲಗೈಯಲ್ಲಿ ಅಮೃತಪೂರ್ಣವಾದ ಕಮಂಡುಲ ವನ್ನೂ ಎಡಗೈಯಲ್ಲಿ ಸುಧಾಕಲಶವನ್ನೂ ಹಿಡಿದುಕೊಂಡು ಆವಿರ್ಭವಿಸಿ ಬಂದನು. ಅಮೃತಕಲಶವನ್ನು ಕಂಡದ್ದೇ ತಡ, ದೈತ್ಯದಾನವರೆಲ್ಲ ದೌರ್ಜನ್ಯ-ದಿಂದ ಅವನ ಮೇಲೆ ಬಿದ್ದು ಅಮೃತವನ್ನು ಅಪಹರಿಸಿಬಿಟ್ಟರು. ಧನ್ವಂತರಿ ಮಹಾಸಮರ್ಥನಾದರೂ ದೈತ್ಯರ ದೌರ್ಜನ್ಯವನ್ನು ಪ್ರಕಟಪಡಿಸಿ ಅವರನ್ನು ದಂಡಿಸುವುದಕ್ಕಾಗಿಯೇ ಅಸಮರ್ಥನಂತೆ ಸುಮ್ಮನಿದ್ದನು. ಅತ್ತ ಅಮೃತ-ಕ್ಕಾಗಿ ದೈತ್ಯದಾನವರಲ್ಲೇ ನಾನು-ತಾನೆಂದು ಜಗಳ ಆರಂಭವಾಯಿತು. ದೇವತೆಗಳು ಕೈಗೆ ಬಂದ ತುತ್ತು ಬಾಯಿಗಿಲ್ಲವಲ್ಲಾ ಎಂದು ಹತಾಶರಾದರು.

(ಇ) ಶ್ರೀಹರಿ ಮೋಹಿನಿಯಾಗಿ ದೈತ್ಯರನ್ನು ವಂಚಿಸಿದ್ದು— 'ಕಂಟಕಂ ಕಂಟಕೇನೋದ್ಧರೇತ್' 'ಮುಳ್ಳನ್ನು ಮುಳ್ಳಿನಿಂದಲೇ ಕೀಳಬೇಕು' ಎಂಬ ನೀತಿಯನ್ನು ಅನುಸರಿಸಿ ಅಮೃತವನ್ನು ದೌರ್ಜನ್ಯದಿಂದ ಅಪಹರಿಸಿದ ದೈತ್ಯರನ್ನು ವಂಚಿಸುವುದಕ್ಕಾಗಿಯೇ ಶ್ರೀವಿಷ್ಣು ಅತ್ಯಂತಮೋಹಕವಾದ ಮೋಹಿನೀರೂಪವನ್ನು ಧರಿಸಿ ದೈತ್ಯ-ದಾನವರ ಮಧ್ಯೆ ಬಂದನು. ಅವಳ ಮನಮೋಹಕರೂಪಕ್ಕೆ ಬೆರಗಾದ ದೈತ್ಯರೆಲ್ಲ ಅವಳನ್ನು ಒಲಿಸಬೇಕೆಂದು ಕಾತುರತೆಯಿಂದ ಅಮೃತವನ್ನು ಅವಳ ಕೈಗೇ ಒಪ್ಪಿಸಿ 'ನೀನೇ ನಮಗೆಲ್ಲಾ ಈ ಅಮೃತವನ್ನು ಸಮವಾಗಿ ಹಂಚು' ಎಂದು ಪ್ರಾರ್ಥಿಸಿಕೊಂಡರು. ಮೋಹಿನಿಯು ಅವರನ್ನು ಕಂಡು ನಾಚಿದಂತೆ ನಟಿಸಿ ಅವರನ್ನು ಮೋಹ-ಪಾಶಕ್ಕೆ ಸಿಕ್ಕಿಸಿ ಎಲ್ಲರಿಗೂ ಕ್ಷಣಕಾಲ ಕಣ್ಣುಮುಚ್ಚಿಕೊಳ್ಳುವಂತೆ ಅಪ್ಪಣೆ

ಮಾಡಿದಳು. ಹೀಗೆ ದೈತ್ಯರನ್ನು ವಂಚಿಸಿ ಕಣ್ಣು ಮುಚ್ಚಿಕೊಳ್ಳುವಂತೆ ಮಾಡಿದ ಆ ವಿಷ್ಣು ಆ ಕ್ಷಣಕಾಲದ ಒಳಗೇ ದೇವತೆಗಳಿಗೆಲ್ಲರಿಗೂ ಅಮೃತಪ್ರಾಶನ ಮಾಡಿಸಿಬಿಟ್ಟನು. ಸಾವಿರ ವರ್ಷ ಅಮೃತಪ್ರಾಶನಕ್ಕಾಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ್ದ ರಾಹುವೆಂಬ ದೈತ್ಯ ವಿಷ್ಣುವಿನ ಮೋಸವನ್ನು ತಿಳಿದು ದೈತ್ಯರ ಪಂಕ್ತಿಯನ್ನು ತ್ಯಜಿಸಿ ದೇವತೆಗಳ ಪಂಕ್ತಿಯಲ್ಲಿ ಸೇರಿಕೊಂಡು ಅಮೃತ ವನ್ನು ಗಿಟ್ಟಿಸಿ ಬಾಯಿಗೆ ಹಾಕಿಕೊಂಡ. ಅವನ ಮೋಸಕೃತ್ಯವನ್ನು ಗುರುತಿ ಸಿದ ಸೂರ್ಯ-ಚಂದ್ರರು ಅದನ್ನು ಸಂಕೇತಮಾಡಿ ವಿಷ್ಣುವಿಗೆ ಸೂಚನೆ ಕೊಟ್ಟರು. ಒಡನೆಯೇ ಆ ವಿಷ್ಣು ಮೋಹಿನೀರೂಪವನ್ನು ಮರೆಮಾಡಿ ನಿಜರೂಪ ತಾಳಿ, ಕುಡಿದ ಅಮೃತ ಗಂಟಲೊಳಗೆ ಇಳಿಯುವುದಕ್ಕೆ ಮುಂಚೆಯೇ ಚಕ್ರದಿಂದ ರಾಹುವಿನ ತಲೆಯನ್ನೇ ಕತ್ತರಿಸಿಹಾಕಿದನು. ಅಮೃತದ ಪ್ರಭಾವದಿಂದ ಆ ದೈತ್ಯನ ರುಂಡ-ಮುಂಡಗಳೆರಡೂ ಬೇರೆಯಾ ದರೂ ಎರಡೂ ಜೀವಸಹಿತ ಉಳಿದುಕೊಂಡು ರಾಹು-ಕೇತುಗಳೆಂಬ ಹೊಸ ಗ್ರಹಗಳೇ ಆಗಿ ನವಗ್ರಹಗಳಾಗಿ ಮಾರ್ಪಾಟಾದುವು.

(ಈ) **ದೈತ್ಯ-ದಾನವರು ಯುದ್ಧಕ್ಕೆ ಬಂದದ್ದು**—ಮೋಹಿನಿಯು ಹೇಳಿಕೆಯಂತೆ ದೈತ್ಯ-ದಾನವರೆಲ್ಲ ಒಂದು ಕ್ಷಣಕಾಲ ಕಣ್ಣು ಮುಚ್ಚಿಕೊಂಡಿದ್ದು ಕಣ್ಣು ಬಿಟ್ಟು ನೋಡುತ್ತಾರೆ—ಮೋಹಿನೀ ಮಾಯವಾಗಿದ್ದಾಳೆ, ವಿಷ್ಣು ದೇವತೆಗಳಿಗೆಲ್ಲಾ ಅಮೃತ ಹಂಚಿಬಿಟ್ಟಿದ್ದಾನೆ. ಅದನ್ನು ಕಂಡು ಅವರಿಗೆಲ್ಲಾ ಹೊಟ್ಟೆ ಉರಿದುಹೋಯಿತು. ವಿಷ್ಣುವಿನ ಮೇಲೆ ಕಿಡಿಕಿಡಿಯಾಗಿ ಕೆಲವರು ವಿಷ್ಣುವನ್ನು ವಂಚಕನೆಂದು ಬಾಯಿಗೆ ಬಂದಂತೆ ದೂಷಿಸಿದರು. ಹೆಚ್ಚು ಪರಾಕ್ರಮಶಾಲಿಗಳಾಗಿದ್ದ ಮತ್ತೆ ಕೆಲವರು ಆಯುಧಪಾಣಿಗಳಾಗಿ ಅವನ ಮೇಲೆ ಯುದ್ಧಕ್ಕೇ ಹೋದರು. ಅಪರಿಮಿತ ಬಲವುಳ್ಳ ಆ ಭಗವಂತ ದೈತ್ಯಾರಿ ಯೆಂಬ ಹೆಸರಿಗೆ ತಕ್ಕಂತೆ ತನ್ನ ಚಕ್ರಾದ್ಯಾಯುಧಗಳಿಂದ ಕ್ಷಣಮಾತ್ರದಲ್ಲಿ ಅವರೆಲ್ಲರನ್ನೂ ಸೋಲಿಸಿ ಓಡಿಸಿಬಿಟ್ಟನು. ಪ್ರಸಕ್ತವಾದ ಈ ಐದನೇ ಅರ್ಥವು ತಿಳಿಯುವುದಕ್ಕೆ ಇಷ್ಟು ಕಥೆಯೇ ಸಾಕು.

(ಉ) **ವ್ಯಾಸಾವತಾರದ ಕಥೆಗೆ ಪೀಠಿಕೆ**—ಬ್ರಹ್ಮಾದಿ ದೇವತೆಗಳು ಕ್ಷೀರಸಮುದ್ರಕ್ಕೆ ಹೋಗಿ ಶೇಷಶಾಯಿಯಾಗಿದ್ದ ಭಗವಂತನನ್ನು ಸ್ತುತಿಸಿ

ಆವನಿಗೆ ಈ ಕಥೆಯು ನೆನಪು ಕೊಟ್ಟು 'ಹೇ ಸ್ವಾಮಿ, ನೀನು ನಮಗೆ ಈ ಪ್ರಕಾರ ಅಮೃತಪ್ರಾಶನ ಮಾಡಿಸಿ ಕಾಪಾಡಿದಿ. ಈಗ ಪುನಃ ದೊಡ್ಡ ಆಪತ್ತು ಬಂದಿದೆ. ಗೌತಮರ ಶಾಪದಿಂದ ಎಲ್ಲ ಸಜ್ಜನರಿಗೂ ಅಜ್ಞಾನ ಕವಿದುಕೊಂಡಿದೆ. ಜೊತೆಗೆ ಬ್ರಹ್ಮನ ವರದಿಂದ ಕಲಿಯು ಪ್ರಾಬಲ್ಯವೂ ಮಿತಿ ಮೀರಿ ಹೋಗಿದೆ. ಅವನು ರುದ್ರಾದಿದೇವತೆಗಳ ಮನಸ್ಸನ್ನು ಸಹ ಯಾರಿಗೂ ಅರಿವಾಗದಂತೆ ಪ್ರವೇಶಿಸಿ ಕಲುಷಗೊಳಿಸಿಬಿಟ್ಟಿದ್ದಾನೆ, ಇನ್ನು ಮನುಷ್ಯರ ಪಾಡೇನು ? ಆ ಕಲಿಯನ್ನು ನಿಗ್ರಹಿಸಲು ನೀನಲ್ಲದೆ ಬೇರೆ ಯಾರೂ ಸಮರ್ಥ ರಲ್ಲ. ಆದಕಾರಣ ನೀನು ವೇದವ್ಯಾಸನಾಗಿ ಅವತರಿಸಿ ಕಲಿಯನ್ನು ನಿಗ್ರಹಿಸಿ ಅಜ್ಞಾನವನ್ನು ದೂರಮಾಡಿ ಸಕಲಸಜ್ಜನರಿಗೂ ಜ್ಞಾನೋಪದೇಶಮಾಡಿ ಅವ ರನ್ನು ಉದ್ಧರಿಸೆಂ'ದು ಪ್ರಾರ್ಥಿಸಿಕೊಂಡರು ; ಆದರಿಂದಲೇ ವ್ಯಾಸಾವತಾರ ವಾಯಿತು. ಹೀಗೆ ಈ ಕಥೆ ವ್ಯಾಸಾವತಾರಕ್ಕೆ ಪೀಠಿಕಾರೂಪವಾಗಿದ್ದು ಮುಂದೆ ೩೬-೩೭ನೇ ಶ್ಲೋಕಗಳಲ್ಲಿ ಹೆಚ್ಚು ವಿಸ್ತಾರವಾಗಿ ಹೇಳಲ್ಪಡುವ ವ್ಯಾಸಾವತಾರದ ಮಹಿಮೆಯನ್ನು ತಿಳಿದುಕೊಳ್ಳಲು ಸಹಾಯಕವೂ ಆಗಿದೆ.

(ಊ) ಕಠಿನ ಶಬ್ದಾರ್ಥ—೧) ಅಟೀಕಃ ಎಂಬ ಪದ ಈ ಅರ್ಥದಲ್ಲಿ ಕ್ರಿಯಾಪದವಲ್ಲ. ನ ಟೀಕ್ಯತೇ–ಸಾಕಲ್ಯೇನ ನ ಜ್ಞಾಯತ ಇತ್ಯಟೀಕಃ ಎಂಬ ವಿಗ್ರಹದಿಂದ (ಪು.ರಾ.) 'ತ್ವಂ'ಗೆ ವಿಶೇಷಣ. 'ಟೀಕೃ ಗತೌ' (ಭ್ವಾ.ಆ.) ಎಂಬ ಧಾತುವಿನಿಂದ ಸಮಗ್ರವಾಗಿ ತಿಳಿಯಲು ಶಕ್ಯನಲ್ಲದವನು ಎಂಬ ಅರ್ಥ ದಲ್ಲಿ ಆಟೀಕಃ ಎಂಬ ಶಬ್ದ ಬಂದಿದೆ ; ಇದು ಅಕಾರಾಂತ ಪುಲ್ಲಿಂಗ ಶಬ್ದ. ೨) ಉನ್ಮಥ್ಯ ಎಂಬ ಕೃದಂತಾವ್ಯಯ 'ಕಡೆದು, ಮಥಿಸಿ, ಮಥನಮಾಡಿ' ಎಂದು ಸಹಜಾರ್ಥದಲ್ಲೇ ಬಂದಿದೆ. ೩) ಅರೀನ್ ಎಂಬ ಪದಕ್ಕೆ ಮೂರನೇ ಅರ್ಥದಲ್ಲಿ ಹೇಳಿದ್ದಂತೆ ರೀಙ್ ಕ್ಷಯೇ ಎಂಬ ಧಾತುವಿನಿಂದ ನ ರೀಯಂತೇ- ನ ಕ್ಷೀಯಂತ ಇತ್ಯರಯಃ, ತಾನ್ ಎಂಬ ವ್ಯುತ್ಪತ್ತಿಯಿಂದ ಅಮರರಾದ (ಮರಣವಿಲ್ಲದ) ದೇವತೆಗಳನ್ನು ಕುರಿತು ಎಂದರ್ಥ. ೪) ಅನ್ಯಾನ್ ಎಂದರೆ ದೇವತೆಗಳಿಂದ ಬೇರೆಯವರಾದ ದೈತ್ಯರನ್ನು ಎಂದರ್ಥ. ೫) ಸ್ವಪ್ರಿಯಾಯ್ಮೈ ಎಂಬುದಕ್ಕೆ ವಿಶೇಷಾರ್ಥ ಮಾಡಿದ್ದಾರೆ. (ಪು.ರಾ.) ಸ್ವ–ಸ್ವಕೀಯರಾದ ದೇವತೆಗಳಿಗೆ, ಪ್ರಿಯಾಯ್ಮೈ–ಇಷ್ಟವಾದ ಅಮೃತಕ್ಕಾಗಿ. (ಲೇ.) ಪ್ರಿಯಾಯ್ಮೈ

ಎಂಬಲ್ಲಿ ತಾದರ್ಥ್ಯದಲ್ಲಿ ಚತುರ್ಥೀ ಬಂದಿದೆ—ಅಮೃತಕ್ಯೋಸ್ಕರವಾಗಿ ಎಂದರ್ಥ.

೬) ಪ್ರಿಯತಮಕುಸುಮಂ ಎಂಬುದನ್ನು ಮೂರುಸಾರಿ (ಆವೃತ್ತಿ ಮಾಡಿ) ಅನ್ವಯಿಸಿದ್ದಾರೆ. ಒಂದು ಸಾರಿ ಪ್ರಿಯತಮ, ಕುಸುಮಂ ಎಂದು ಬೇರೆ ಬೇರೆಯಾಗಿಯೂ ಎರಡುಸಾರಿ ಒಟ್ಟಿಗೆಯೂ ಗ್ರಹಣಮಾಡಿದ್ದಾರೆ. ಬೇರೆ ಬೇರೆಯಾಗಿ ಗ್ರಹಣಮಾಡಿದಾಗ—ಪ್ರಿಯತಮ ಎಂಬುದು ಎರಡನೇ ಅರ್ಥದಲ್ಲಿ ಹೇಳಿದಂತೆ ಸಂಬೋಧನೆ; ಭಕ್ತರಿಗೆಲ್ಲ ಅತ್ಯಂತ ಪ್ರೀತಿಪಾತ್ರನಾದ ಶ್ರೀಕೃಷ್ಣನೇ ಎಂದರ್ಥ. ಕುಸುಮಂಗೆ ವಿಶೇಷಾರ್ಥ ಗ್ರಹಣಮಾಡಿದ್ದಾರೆ. 'ಕು'–ಕುತ್ಸಿತವಾದ ದುಃಖಕ್ಕೆ, ಸು–ಬಹಳ ಅಥವಾ ಅತ್ಯಂತವಾಗಿ, ಮಂ–ನಾಶಕವಾದ ಎಂಬ ವ್ಯುತ್ಪತ್ತಿಯಿಂದ ಕುತ್ಸಿತವಾದ ದುಃಖಕ್ಕೆ ಅತ್ಯಂತ ನಾಶಕವಾದ ಕ್ಷೀರಸಮುದ್ರವನ್ನು ಎಂದು ಅರ್ಥಮಾಡಿ 'ಮುಕ್ತಪ್ರಾಪ್ಯ-ಶ್ವೇತದ್ವೀಪದಿಂದ ಕೂಡಿರುವ ಕಾರಣ 'ದುಃಖನಾಶಕತ್ವವು ಕ್ಷೀರ-ಸಮುದ್ರಕ್ಕೆ ಕೂಡುತ್ತದೆ' (ವು.ರಾ.) ಎಂದು ಹೇಳಿದ್ದಾರೆ. ನ್ನು 'ಮ' ಎಂಬುದಕ್ಕೆ 'ನಾಶಕ' ಎಂಬ ಅರ್ಥ ಹೇಗೆ ಕೂಡುತ್ತದೆಯೆಂದರೆ—'ಮಾನಂ ಜ್ಞಾನಂ ಲಯಶ್ಚೈವ' ಎಂಬ ಪ್ರಮಾಣಸ್ಥ ಮಾನಶಬ್ದದ ಧಾತುವಿನಿಂದ ಹುಟ್ಟಿದ ಮಾ ಶಬ್ದವು ಲಯಾರ್ಥಕವಾಗುತ್ತದೆ (ವು.ರಾ.) ಎನ್ನುತ್ತಾರೆ. (ಲೇ.) ಬೃಹದ್ಭಾಷ್ಯದಲ್ಲಿ ಶ್ರೀಮದಾಚಾರ್ಯರು 'ಅಭಿಮಂಸ್ಯೇ' (೩೮, ೨ ಬ್ರಾ, ೫ ಕಂಡಿಕೆ) ಎಂಬ ಉಪನಿಷತ್ಪದಕ್ಕೆ 'ಲೀನಂ ಕರಿಷ್ಯೇ ಚೇತ್' ಎಂದು ಅರ್ಥ ಹೇಳಿ ಅದಕ್ಕೆ 'ಮಾನಂ ಜ್ಞಾನಂ ಲಯಶ್ಚೈವ' ಎಂಬ ಶಬ್ದ-ನಿರ್ಣಯ ಪ್ರಮಾಣ ತೋರಿಸಿದ್ದಾರೆ. ಅದರಂತೆ ಮಾ–ಮಾನ ಶಬ್ದಗಳು ಲಯಾರ್ಥದಲ್ಲಿ ಉಪಯೋಗಿಸಲ್ಪಡುತ್ತವೆ ಎಂದು ಸಿದ್ಧವಾಗುತ್ತದೆ. ಕುಸುಮ ಶಬ್ದಕ್ಕೆ ಅದೇ ವ್ಯುತ್ಪತ್ತಿಯಿಂದ (ಕು–ಕುತ್ಸಿತವಾದ ಜರಾಮರಣಾದಿಗಳಿಗೆ, ಸು–ಬಹಳ, ಮ–ನಾಶಕವಾದ) 'ಅಮೃತವನ್ನು' ಎಂದೂ ಅರ್ಥಮಾಡಿದ್ದಾರೆ. ಆದಕಾರಣ ಪ್ರಿಯತಮ ಕುಸುಮಂ ಎಂದರೆ (೨ನೇ ಅರ್ಥ) ದೇವತೆಗಳಿಗೆ ಪ್ರಿಯವಾದ ಅಮೃತವನ್ನು ಎಂದೂ ಅರ್ಥವಾಗುತ್ತದೆ. ಮೂರನೇ ಅರ್ಥ—ಪ್ರಿಯತಮ–ಅತ್ಯಂತ ಪ್ರಿಯವಾದ, ಕುಸುಮಂ–ಹೂವಾದ ಪಾರಿಜಾತಾದಿ

ವೃಕ್ಷಗಳನ್ನು. ಇಷ್ಟು ಪದಗಳ ಈ ವಿಶೇಷಾರ್ಥಗಳನ್ನು ನೆನಪಿಟ್ಟುಕೊಂಡರೆ ಐದನೇ ಅನ್ವಯವೂ ಅರ್ಥವೂ ಕಷ್ಟವಾಗಲಾರದು.

310. ಐದನೇ ಅನ್ವಯ (ಹರಿಪರವಾಗಿ)—ಪ್ರಿಯತಮ ಶರಣದ (ಹೇ) ಪ್ರಾಣ! ಅಟೀಕಃ ತ್ವಂ ಸ್ವ-ಪ್ರಿಯಾಯೈ ಕುಸುಮಂ ಉನ್ಮಥ್ಯ, ಪ್ರಿಯತಮಕುಸುಮಂ, ಅನ್ಯಾನ್ ಪ್ರಿಯತಮಕುಸುಮಂ ಚ ಬಹ್ವೀಃ ಕೋಟೀಃ ಅರೀನ್ (ಪ್ರತಿ) ಪ್ರಾಯಚ್ಛಃ। ತಥಾ ಕುಟಿಲ....ಮತೀನ್ ಉತ್ಕಟಾ....ಕೋಪಾನ್ ಅತಥ್ಯ....ವಚನಾನ್ ಅನ್ಯಾನ್ ಸತ್ವರತ್ವಾತ್ ದ್ರಾಕ್ ಗದಯಾ ಪೋಥಯಾಮಾಸಿಥ। ತಸ್ಮೈ ತೇ ನಮಃ॥ (ಸೂಚನೆ—ಈ ಅನ್ವಯದಲ್ಲಿ ಪ್ರಿಯತಮಕುಸುಮಂ ಎಂಬುದೇ ಮೂರು ಸಾರಿ ಆವೃತ್ತಿಯಾಗಿ ಬಂದಿದೆ; ಒಂದು ಸಲ ಪ್ರಿಯತಮ, ಕುಸುಮಂ ಎಂದು ಎರಡೂ ಬೇರೆ ಬೇರೆಯಾಗಿವೆ; ಎರಡು ಸಲ ಒಟ್ಟಿಗೆ ಬಂದಿವೆ. ಅನ್ಯಾನ್ ಎಂಬುದು ಎರಡಾವರ್ತಿ ಬಂದಿದೆ.)

ಹರಿಪರವಾಗಿ ಐದನೇ ಅರ್ಥ—ಪ್ರಿಯತಮ-ಭಕ್ತರಿಗೆ ಅತ್ಯಂತ ಪ್ರೀತಿವಿಷಯನಾದ; ಶರಣದ-ಶರಣಾಗತರಾದವರನ್ನು ರಕ್ಷಿಸುವ; ಪ್ರಾಣ-ಸಕಲನಿಯಾಮಕನಾದ ಹೇ ಸ್ವಾಮಿ! ಅಟೀಕಃ-ಸಾಕಲ್ಯದಿಂದ ತಿಳಿಯಲು ಅಶಕ್ಯನಾದ; ತ್ವಂ-ನೀನು; ಸ್ವ-ಪ್ರಿಯಾಯೈ-ಸ್ವಕೀಯರಾದ ದೇವತೆಗಳಿಗೆ ಪ್ರಿಯವಾದ ಅಮೃತಕ್ಕೋಸ್ಕರವಾಗಿ; ಕುಸುಮಂ-ಕುತ್ಸಿತವಾದ ದುಃಖಕ್ಕೆ ಅತ್ಯಂತ ನಾಶಕವಾದ ಕ್ಷೀರಸಮುದ್ರವನ್ನು; ಉನ್ಮಥ್ಯ-ಕಡೆದು; (ಅದರಲ್ಲಿ ಹುಟ್ಟಿದ) ಪ್ರಿಯತಮ-ಕುಸುಮಂ-ದೇವತೆಗಳಿಗೆ ಅತ್ಯಂತ ಪ್ರಿಯವಾದ ಪಾರಿಜಾತಾದಿ ವೃಕ್ಷಗಳನ್ನೂ (ಅದರಿಂದ ಕಲ್ಪವೃಕ್ಷವೂ ಸೇರಿಕೊಳ್ಳುತ್ತದೆ); (ತಥಾ-ಮತ್ತು) ಅನ್ಯಾನ್-ಉಚ್ಚೈಃಶ್ರವಸ್ಸು ಐರಾವತಾದಿಗಳನ್ನೂ ಭೂಷಣಾಯುಧಗಳನ್ನೂ ಸಾವಿರ ಅಪ್ಸರಸ್ತ್ರೀಜನರನ್ನೂ, ಪ್ರಿಯತಮ-ಕುಸುಮಂ ಚ-ಕುತ್ಸಿತವಾದ ಜರಾಮರಣಗಳಿಗೆ ಅತ್ಯಂತ ನಾಶಕವಾದ ಆದ್ದರಿಂದಲೇ ದೇವತೆಗಳಿಗೆ ಅತ್ಯಂತಪ್ರಿಯವಾದ ಅಮೃತವನ್ನೂ ಸಹ; ಬಹ್ವೀಃ ಕೋಟೀಃ-ಅನೇಕ ಕೋಟಿ ಸಂಖ್ಯಾಕರಾದ; ಅರೀನ್ (ಪ್ರತಿ)-ಜರಾಮರಣರಹಿತರಾದ ದೇವತೆಗಳನ್ನುದ್ದೇಶಿಸಿ; ಪ್ರಾಯಚ್ಛಃ-ಕೊಟ್ಟೆ. ತಥಾ-ಹಾಗೆಯೇ;

ಕುಟಿಲ....ಮತೀನ್-ವಕ್ರವೂ ಕ್ರೂರವೂ ಆದ ಬುದ್ಧಿಯುಳ್ಳ (ದೇವಾಸುರರಿಬ್ಬರೂ ಒಟ್ಟಿಗೆ ಕೂಡಿ ಪ್ರಯತ್ನಮಾಡಿದ ಕಾರಣ ದೇವಾಸುರರಿಗೆ ಸಮ-ಸಮಭಾಗ ಬರಬೇಕಾಗಿದ್ದರೂ ದೌರ್ಜನ್ಯಮಾಡಿ ತಾವೊಬ್ಬರೇ ಅಮೃತವನ್ನು ಪ್ರಾಶನ ಮಾಡಿದ್ದರಿಂದ ದುರ್ಬುದ್ಧಿಯುಳ್ಳ); ಉತ್ಕಟಾ....ಕೋಪಾನ್-ಮೋಹಿನಿಯು ತಮ್ಮನ್ನು ವಂಚಿಸಿ ಕಣ್ಣುಮುಚ್ಚಿಕೊಳ್ಳಲು ಹೇಳಿ ದೇವತೆಗಳಿಗೇ ಅಮೃತವನ್ನು ಹಂಚಿದ್ದರಿಂದ ತಮಗೆ ಅಮೃತ ದೊರಕಲಿಲ್ಲವೆಂದು ಆಗ್ರಹಮಾಡಿ ಕೋಪಿಸಿಕೊಂಡಂಥಾ; ಅತಥ್ಯ....ವಚನಾನ್-ಬಾಯಿಗೆ ಬಂದಂತೆ ವಿಷ್ಣುವನ್ನೂ ದೇವತೆಗಳನ್ನೂ ದೂಷಣೆಮಾಡುತ್ತಿದ್ದಂಥಾ; ಅನ್ಯಾನ್-ದೈತ್ಯರನ್ನು; ಸತ್ವರತ್ವಾತ್-ಅವರಿಗಿಂತ ಬಲಶಾಲಿಯಾದ ಕಾರಣ; ದ್ರಾಕ್-ಜಾಗ್ರತೆಯಾಗಿ; ಗದಯಾ-ಗದೋಪಲಕ್ಷಿತ ಚಕ್ರಾದ್ಯಾಯುಧಗಳಿಂದ; ಪೋಥಯಾಮಾಸಿಥ-ಧ್ವಂಸಮಾಡಿಬಿಟ್ಟೆ. ತಸ್ಮೈ-ಅಂಥಾ; ತೇ-ನಿನಗೆ; ನಮಃ-ನಮಸ್ಕಾರ.

ಹರಿಪರವಾಗಿ ಐದನೇ ಭಾವಾರ್ಥ—ಈ ಅನ್ವಯಕ್ರಮದಲ್ಲಿ ಮೊದಲಲ್ಲೇ ಪ್ರಿಯತಮ ಎಂಬ ಸಂಬೋಧನೆ ಇದೆ. ಇದು ಭಗವದ್ಗೀತೆಯಲ್ಲಿ (೭ ಅ, ೧೭ ಶ್ಲೋ.) 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ, ಸ ಚ ಮಮ ಪ್ರಿಯಃ' ಎಂದರೆ 'ನಾನು ಜ್ಞಾನಿಗೆ ಅತ್ಯಂತ ಪ್ರಿಯನಾಗಿದ್ದೇನೆ. ಜ್ಞಾನಿಯನ್ನು ಕಂಡರೆ ನನಗೂ ಬಹಳ ಇಷ್ಟ' ಎಂಬ ಭಗವದುಕ್ತಿಯನ್ನು ಪ್ರತಿ-ಬಿಂಬಿಸುತ್ತದೆ. ಆ ಪ್ರಕಾರ ದೇವತೆಗಳು ಪರಮಾತ್ಮನಲ್ಲಿ ಅನನ್ಯಭಾವದಿಂದ ಪ್ರೀತಿಮಾಡುವುದರಿಂದ ಪರಮಾತ್ಮನೂ ಅವರನ್ನು ಪ್ರೀತಿಸುತ್ತಾನೆ, ಆದ್ದರಿಂದಲೇ ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆ ಎಂಬ ಭಾವ ಹೊರ-ಬೀಳುತ್ತದೆ. ಶರಣದ ಎಂಬ ವಿಶೇಷಣದಿಂದ ದೇವತೆಗಳು ವಿಷ್ಣುವನ್ನೇ ನಂಬಿ ಅವನನ್ನೇ ಮೊರೆಹೊಕ್ಕಕಾರಣ ಅವರಿಗೆ ಹೇಗೋ ಯುಕ್ತಿಯಿಂದ ಅಮೃತ-ಪ್ರಾಶನಮಾಡಿಸಿದನೆಂದೂ ಅದಕ್ಕೆ ವಿರುದ್ಧವಾಗಿ ಬಲ್ಯಾದಿದೈತ್ಯರು ದೌರ್ಜನ್ಯ ಮಾಡಿ ಧನ್ವಂತರಿಯ ಕೈಯಿಂದ ಅಮೃತವನ್ನು ಅಪಹರಿಸಿಕೊಂಡು ಹೋದ ಕಾರಣ ಶ್ರೀಹರಿಯು ಅವರನ್ನು ವಂಚಿಸಿಯೋ ಅಮೃತವನ್ನು ಯುಕ್ತಿಯಿಂದ ಕಿತ್ತುಕೊಂಡನಲ್ಲದೆ ಸ್ವಾರ್ಥಿಗಳಾದ ಅವರಿಗೆ ಅಮೃತವು ದಕ್ಕದಂತೆಯೋ

ಮಾಡಿಬಿಟ್ಟನೆಂದೂ ಭಾಸವಾಗುತ್ತದೆ. ಪ್ರಾಣ ಎಂಬ ಸಂಬೋಧನೆಯಿಂದ ರಾಹುವು ಮೋಸಮಾಡಿ ದೇವತೆಗಳ ಜೊತೆ ಸೇರಿ ಅಮೃತವನ್ನು ಪಡೆದು ಪಾನಮಾಡಿದರೂ ಹೇಗೆ ಅದು ಜೀರ್ಣಿಸದೆ ಶಿರಚ್ಛೇದನವಾಯಿತೋ ಅದೇ ರೀತಿ ದುಷ್ಟರು ಅಯೋಗ್ಯವಾದುದನ್ನು ಬಯಸಿದರೂ ಶ್ರೀಹರಿ ಅಯೋಗ್ಯರಿಗೆ ಅದನ್ನು ಪಡೆಸಿಕೊಡುವುದಿಲ್ಲ ; 'ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ' 'ಅಯೋಗ್ಯವಾದುದನ್ನು ಬಯಸುವವನು ಸ್ಥಾನಚ್ಯುತನಾಗುತ್ತಾನೆ' ಎಂಬ ಪ್ರಮೇಯು ಸೂಚಿತವಾಗುತ್ತದೆ.

ಹೇ ಭಗವಂತ ನಾರಾಯಣ ! ದೈತ್ಯರಿಂದ ಪರಾಜಿತರಾದ ದೇವತೆಗಳು ನಿನ್ನನ್ನು ಮೊರೆಹೊಕ್ಕಕಾರಣ ಅವರಿಗೆ ಎಲ್ಲ ಅನುಕೂಲಗಳನ್ನೂ ಕಲ್ಪಿಸಿ-ಕೊಟ್ಟೆ. ಅಮೃತಪ್ರಾಪ್ತಿಗಾಗಿ ಕ್ಷೀರಸಮುದ್ರವನ್ನು ಕಡೆಯುವಂತೆ ಹೇಳಿದಿ. ಆ ಪ್ರಯತ್ನದಲ್ಲಿ ಅವರಿಗೆ ಬಂದ ಕಷ್ಟಗಳನ್ನೆಲ್ಲಾ ನಿವಾರಣೆ ಮಾಡಿದಿ.* ಕೊನೆಗೆ ಕ್ಷೀರಸಮುದ್ರವನ್ನು ಮಥಿಸುತ್ತಾ ಹೋಗಲು (ಅನಿಷ್ಟವಾದ ಮಹಾ-ವಿಷವೂ ಸುರೆಯೂ [ಮದ್ಯವೂ] ಬಂದ ಬಳಿಕ) ಕ್ರಮವಾಗಿ ಉಚ್ಚೈಃಶ್ರವ-ಸ್ಸೆಂಬ ಕುದುರೆಯೂ ಪಾರಿಜಾತ-ಕಲ್ಪವೃಕ್ಷಾದಿ ತರುಗಳೂ ಐರಾವತಾದಿ ದಿಗ್ಗಜಗಳೂ ಅಪ್ಸರಸ್ತ್ರೀಯರೂ ಕೌಸ್ತುಭಾದಿರತ್ನಗಳೂ ಚಂದ್ರಾದಿ ಇತರ ಅಪೂರ್ವವಸ್ತುಗಳೂ ದೊರಕಿದುವು, ಕಟ್ಟಕಡೆಗೆ ಅಮೃತವೂ ಲಭಿಸಿತು. ಹೇ ಸ್ವಾಮಿ, ಆ ಪದಾರ್ಥಗಳೆಲ್ಲವನ್ನೂ ನಿನ್ನ ಭಕ್ತರಾದ ದೇವತೆಗಳಿಗೇ ಹಂಚಿ-ಕೊಟ್ಟೆಯಲ್ಲದೆ ನಿನ್ನನ್ನೇ ಶರಣು ಹೊಂದಿದ್ದರಿಂದ ಅವರಿಗೆ ಅಮೃತವನ್ನೂ ಪ್ರಾಶನಮಾಡಿಸಿದಿ. ಇದಕ್ಕೆ ವಿರುದ್ಧವಾಗಿ ದೈತ್ಯರು ಅಹಂಕಾರ-ಮಮಕಾರಗಳಿಂದ ನಿನ್ನನ್ನು ಆಶ್ರಯಿಸದೆ ನಿನ್ನನ್ನೇ ವಂಚಿಸಲು ಯತ್ನಿಸಿ ದೌರ್ಜನ್ಯದಿಂದ ಅಮೃತವನ್ನು ಸ್ವಾರ್ಥಕ್ಕಾಗಿ ತಾವೇ ಅಪಹಾರಮಾಡಲು ಅಮೃತವು ಅವರಿಗೆ ದಕ್ಕದಂತೆ ಮೋಹಿನೀರೂಪದಿಂದ ಮೋಹಗೊಳಿಸಿ ಅಮೃತವನ್ನೂ ಅವರಿಂದ ಕಸಕೊಂಡಿ. ಇದನ್ನು ತಿಳಿದು ಅವರೆಲ್ಲ ಬಾಯಿಗೆ ಬಂದಂತೆ ನಿನ್ನನ್ನು ನಿಂದಿಸಿ

*ಇದರ ವಿವರಣೆಗೆ ತಾತ್ಪರ್ಯನಿರ್ಣಯದ ೧೦ನೇ ಅಧ್ಯಾಯದ ಪ್ರಾರಂಭದ ಮೂವತ್ತು ಶ್ಲೋಕಗಳನ್ನು ನೋಡಬೇಕು.

ನಿನ್ನ ಮೇಲೆ ಯುದ್ಧಕ್ಕೆ ಬಂದ ಕಾರಣ ಅವರೆಲ್ಲರನ್ನೂ ಚಕ್ರಾದ್ಯಾಯುಧಗಳಿಂದ ಸದೆಬಡಿದುಬಿಟ್ಟೆ. ಅವರಿಗೆ ಅಮೃತವೂ ದಕ್ಕಲಿಲ್ಲ, ಯುದ್ಧದಲ್ಲಿ ಪರಾಜಯವೂ ಆಗಿ ತಲೆ ಎತ್ತದಂತಾಯಿತು. ಹೀಗೆ ಶರಣಾಗತರಕ್ಷಣದೀಕ್ಷಿತನಾದ ನಿನಗೆ ಸಾಷ್ಟಾಂಗ ನಮಸ್ಕಾರಗಳು—ಎಂಬುದೇ ಹರಿಪರವಾದ ಐದನೆಯ ಭಾವಾರ್ಥ.

ಇಲ್ಲಿಗೆ ಈ ಶ್ಲೋಕಕ್ಕೆ ಹರಿಪರವಾದ ಐದು ಅರ್ಥಗಳೂ ಮುಗಿದುವು. ವಾಯುಪರವಾಗಿ—ಭೀಮಪರವಾಗಿ—ಒಂದೇ ಅರ್ಥವಿದೆ ; ಈಗ ಆ ಅರ್ಥಕ್ಕೆ ಹೋಗೋಣ.

311. ಭೀಮಪರವಾದ ಅರ್ಥಕ್ಕೆ ಪೀಠಿಕೆ—ಭೀಮಪರವಾಗಿ ಅನ್ವಯಮಾಡುವಾಗಲೂ ಹಿಂದಿನಂತೆ **ಶರಣದ, ಪ್ರಾಣ** ಎಂಬ ಎರಡೂ ಸಂಬೋಧನೆಗಳು ಮತ್ತು ಭೀಮನಿಗೇ ವಿಶೇಷಣಗಳು. ಶ್ಲೋಕದ ಮುಂದಿನ ಭಾಗದಲ್ಲಿ ಆ ಭೀಮಸೇನನು ಸೌಗಂಧಿಕಾಪುಷ್ಪಗಳನ್ನು ತರಲು ಹೋಗಿದ್ದಾಗ ಅವನನ್ನು ಎದುರಿಸಿದ ಅನೇಕ ದೈತ್ಯರನ್ನು ಎರಡು ವಿಧವಾಗಿ (ವಾಗ್ಯುದ್ಧದಲ್ಲೂ ಶಸ್ತ್ರಾಸ್ತ್ರಯುದ್ಧದಲ್ಲೂ) ಸೋಲಿಸಿ ವಧೆಮಾಡಿದ ವಿಚಾರವೂ ಕೊನೆಗೆ ಆ ಪುಷ್ಪಗಳನ್ನು ದ್ರೌಪದಿಗೆ ತಂದುಕೊಟ್ಟ ವಿಚಾರವೂ ನಿರೂಪಿತವಾಗಿದೆ. ಆದರೆ ಖಂಡ 294 (ಖ)ದಲ್ಲಿ (ಪುಟ ೫೮೧) ಹಿಂದೆಯೇ ಸೂಚಿಸಿದ್ದಂತೆ ಆ ಸೌಗಂಧಿಕಾಪುಷ್ಪವೇ ಎರಡು ಬಗೆಯದಾಗಿತ್ತು. ಒಂದು ಪುಷ್ಪ ತಾತ್ಪರ್ಯನಿರ್ಣಯದಲ್ಲಿ ಸ್ಪಷ್ಟವಾಗಿ 'ಉದ್ಯದ್‌ಭಾನೋರ್ಮಂಡಲಾಭಂ' (೨೨ ಅ, ೨೯೧ ಶ್ಲೋ.) ಎಂದು ಹೇಳಿದಂತೆ ಉದಯಿಸುತ್ತಿರುವ ಸೂರ್ಯನ ಮಂಡಲದಂತೆ ಹೊಂಗೆಂಪು ಬಣ್ಣದ್ದಾಗಿತ್ತು. ಈ ಕಮಲಗಳು ಗಂಧಮಾದನ ಪರ್ವತದ ಮೇಲಿದ್ದ ಕುಬೇರನ ವನದಲ್ಲಿದ್ದ ಕೊಳದಲ್ಲಿ ಬೆಳೆದಿದ್ದುವು. ಇವನ್ನು ತರಲು ಹೋದಾಗ ಸಂಭವಿಸಿದ ಘಟನೆಗಳು ಮಹಾಭಾರತದ ವನ-ಪರ್ವದಲ್ಲಿ ೧೪೮ರಿಂದ ೧೫೫ರ ವರೆಗಿನ ಎಂಟು ಅಧ್ಯಾಯಗಳಲ್ಲೂ ಶ್ರೀಮನ್ ಮಹಾಭಾರತ ತಾತ್ಪರ್ಯನಿರ್ಣಯದ ೨೨ನೇ ಅಧ್ಯಾಯದ ೨೮೦ರಿಂದ ೩೧೪ರ ವರೆಗಿನ ಸುಮಾರು ಮೂವತ್ತೈದು ಶ್ಲೋಕಗಳಲ್ಲೂ ನಿರೂಪಿತವಾಗಿವೆ. ಈ ಪ್ರಸಂಗದಲ್ಲೇ ಹಿಂದಿನ (ವಾಯುಸ್ತುತಿಯ ೨೭ನೇ) ಶ್ಲೋಕ

ದಲ್ಲಿ ವಿವರಿಸಲ್ಪಟ್ಟ ಹನುಮಂತನಿಗೂ ಭೀಮನಿಗೂ ಆದ ಭೇಟಿಯ ವಿಚಾರವೂ ಮಧ್ಯೆ ಬಂದಿದೆ.

ಇನ್ನೊಂದು ವಿಧವಾದ ಸೌಗಂಧಿಕಾಪುಷ್ಪ ತಾತ್ಪರ್ಯನಿರ್ಣಯದಲ್ಲಿ 'ಪಂಚವರ್ಣಾನಿ ಪುಷ್ಪಾಣಿ' (ಅ. ೨೨, ಶ್ಲೋ. ೩೧೫) ಎಂದು ಹೇಳಿದಂತೆ ಪಂಚವರ್ಣದವಾಗಿದ್ದುವು. ಇವು ಮೇರುಪರ್ವತದ ಮೇಲ್ಭಾಗದಲ್ಲಿದ್ದ ಕುಬೇರನ ಪಟ್ಟಣ ಅಲಕಾನಗರಿಯಲ್ಲಿದ್ದ ಕೊಳದಲ್ಲಿದ್ದುವು. ಇವುಗಳನ್ನು ತರಲು ಹೋದಾಗ ನಡೆದ ಘಟನೆಗಳು ಮಹಾಭಾರತದ ವನಪರ್ವದ ೧೬೧ನೇ ಅಧ್ಯಾಯದಲ್ಲೂ ತಾತ್ಪರ್ಯನಿರ್ಣಯ (೨೨ನೇ ಅಧ್ಯಾಯ)ದಲ್ಲಿ ೩೧೫ರಿಂದ ೩೨೭ರ ವರೆಗಿನ ಹದಿಮೂರು ಶ್ಲೋಕಗಳಲ್ಲೂ ನಿರೂಪಿಸಲ್ಪಟ್ಟಿವೆ.

ಎರಡೂ ವಿಧ ಪುಷ್ಪಗಳನ್ನು ತರುವಾಗಲೂ ಭೀಮಸೇನನಿಗೆ ಅನೇಕ ದೈತ್ಯರನ್ನು ವಾಗ್ಯುದ್ಧದಲ್ಲೂ ಶಸ್ತ್ರಾಸ್ತ್ರಯುದ್ಧದಲ್ಲೂ ಪರಾಭವಗೊಳಿಸಿ ಸಂಹಾರಮಾಡಬೇಕಾಗಿ ಬಂತು. ಹೀಗೆ ಎರಡೂ ಪ್ರಸಂಗಗಳ ಉಭಯವಿಧವಾದ ಯುದ್ಧ ನಡೆದ ವಿಚಾರವನ್ನೂ ಎರಡೂ ವಿಧ ಸೌಗಂಧಿಕಾಪುಷ್ಪಗಳನ್ನು ದ್ರೌಪದಿಗೆ ತಂದುಕೊಟ್ಟ ಸಕಲ ವಿಚಾರಗಳನ್ನೂ ಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯರು ಈ ಒಂದೇ ಶ್ಲೋಕದಲ್ಲೇ ಅಡಕಮಾಡಿ ಹೇಳಿದ್ದಾರೆ. ನಾನು ಆರೇಳು ಬೇರೆ ಬೇರೆ ವ್ಯಾಖ್ಯಾನಗಳನ್ನೂ ಕನ್ನಡ ಟೀಕೆಗಳನ್ನೂ ನೋಡಿದೆ, ಗುರುಸಾರ್ವಭೌಮ ಟೀಕೆಯಲ್ಲಿ ಈ ವಿಚಾರಗಳನ್ನು ಸ್ಪಷ್ಟಪಡಿಸಿದ ಹಾಗೆ ಬೇರೆ ಯಾವ ಟೀಕೆಯಲ್ಲೂ ಸ್ಪಷ್ಟಪಡಿಸಿಲ್ಲ. ನಮ್ಮ ಪಾಠಕರಿಗೆ ಈ ವಿಷಯ ಮಂದಟ್ಟಾಗಲೆಂದು ಈ ವಿಷಯವನ್ನು ಇಷ್ಟು ವಿಸ್ತರಿಸಿದ್ದೇನೆ. ಈ ಶ್ಲೋಕದಲ್ಲಿ ಪ್ರಸಕ್ತವಾಗಿರುವ ನಾಲ್ಕು ವಿಧ ಯುದ್ಧಗಳೂ ಎರಡು ಪಂಗಡ ದೈತ್ಯರ ವಧೆಯ ವಿಚಾರವೂ ಎರಡು ಬಗೆಯ ಸೌಗಂಧಿಕಾಪುಷ್ಪವನ್ನು ದ್ರೌಪದಿಗೆ ತಂದುಕೊಟ್ಟ ವಿಚಾರವೂ ತೊಡಕಾಗದೆ ಅರ್ಥವಾಗಬೇಕಾದರೆ ಸೌಗಂಧಿಕಾಪುಷ್ಪಹರಣದ ಈ ಎರಡು ಪ್ರಸಂಗಗಳ ಕಥೆಗಳೂ ಸ್ಪಷ್ಟವಾಗಿ ತಿಳಿದಿರಬೇಕಾಗುತ್ತದೆ. ಆದಕಾರಣ ಮೊದಲು ಆ ಎರಡು ಪ್ರಸಂಗಗಳ ಕಥೆಯನ್ನೂ ಬೇರೆ ಬೇರೆಯಾಗಿ ಸಂಗ್ರಹವಾಗಿ ನಿವೇದಿಸುತ್ತೇನೆ. ಈ ನಿರೂಪಣೆಯಲ್ಲಿ ನನಗೆ ಮಹಾಭಾರತದ ಮೂಲವೂ ತಾತ್ಪರ್ಯನಿರ್ಣಯವೂ

ಮಾರ್ಗದರ್ಶಕಗಳಲ್ಲದೆ ಗುರುಸಾರ್ವಭೌಮ ಟೀಕೆಯೂ ಯಥೇಷ್ಟ ನೆರವು ಕೊಟ್ಟಿದೆ, ಅದಕ್ಕೆ ಆ ಟೀಕಾಕಾರರಿಗೆ ಆಭಾರಿಯಾಗಿದ್ದೇನೆ.

312. ಹೊಂಗೆಂಪು ಬಣ್ಣದ ಸೌಗಂಧಿಕಾಹರಣ —ತೀರ್ಥಯಾತ್ರೆಯನ್ನೆಲ್ಲ ಮುಗಿಸಿದ ಪಾಂಡವರು ನರನಾರಾಯಣಾಶ್ರಮದಲ್ಲಿ (ಬದರಿಯಲ್ಲಿ) ಕೆಲವುಕಾಲ ವಾಸಮಾಡಿಕೊಂಡಿದ್ದರು. ಆ ವೇಳೆಯಲ್ಲಿ ಒಂದು ದಿನ ಭೀಮ-ದ್ರೌಪದೀ ಇಬ್ಬರೂ ಏಕಾಂತದಲ್ಲಿದ್ದಾಗ ಅವರ ಮಧ್ಯೆ ಸುವಾಸನೆಯಿಂದ ಘಮಘಮಿಸುತ್ತಿದ್ದ ಹೊಂಗೆಂಪು ಬಣ್ಣದ ಒಂದು ಸೌಗಂಧಿಕಾಪುಷ್ಪವು ಅಕಸ್ಮಾತ್ ಬಂದು ಬಿತ್ತು. ಮಹಾಭಾರತದಲ್ಲಿ ಅದು ಗಾಳಿಯಿಂದ ಬಂದು ಬಿತ್ತು ಎಂದು ಹೇಳಿದೆ.

ಅನಿಲೇನಾಹೃತಂ ಭೂಮೌ ಪತಿತಂ ಜಲಜಂ ಶುಚಿ । (೧೪೮ ಅ., ೭ ಶ್ಲೋ.) ಆದರೆ ತಾತ್ಪರ್ಯನಿರ್ಣಯದಲ್ಲಿ ಗರುಡ ಒಂದು ಹೂವನ್ನು ಎತ್ತಿ-ಕೊಂಡು ಹೋಗುವ ರಭಸದಲ್ಲಿ ಅವನ ರೆಕ್ಕೆಯಿಂದ ಹಾರಿಬಿತ್ತು ಎಂದು ಹೇಳಿದೆ. (ಮಹಾಭಾರತದಲ್ಲಿ ಪಂಚವರ್ಣದ ಪುಷ್ಪವು ಗರುಡನ ರೆಕ್ಕೆಯಿಂದ ಬಿತ್ತೆಂದು ಹೇಳಿದೆ. ೧೬೧ ಅ. ೧೬ ಶ್ಲೋ.) ಆದರ ಸುಗಂಧದಿಂದ ಮೋಹಿತಳಾದ ದ್ರೌಪದೀ ಅಂತಹವೇ ಇನ್ನೂ ಅನೇಕ ಪುಷ್ಪಗಳು ಬೇಕೆಂದು ಭೀಮನಿಗೆ ಹೇಳಿದಳು ('ಬಹೂನೀಮಾನ್ಯುಪಾಹರ' ಭಾ. ೧೪೮ ಅ. ೧೧ ಶ್ಲೋ., ಉಪಾಹರ- ತಂದುಕೊಡು). ಹಾಗೆ ಹೇಳುವುದರಲ್ಲಿ ಗಂಧಮಾದನ ಪರ್ವತದಲ್ಲಿದ್ದ ದೈತ್ಯರನ್ನು ವಧಿಸುವುದೇ ಅವಳಿಗೆ ಮುಖ್ಯವಾದ ಹೃದ್ಗತವಾಗಿತ್ತು ಎಂದು ಆಚಾರ್ಯರು ತೋರಿಸುತ್ತಾರೆ. ಇರಲಿ. ಭೀಮನು ಅವನ್ನು ತರುವು-ದಕ್ಕೋಸ್ಕರ ಗಂಧಮಾದನಪರ್ವತ ಏರಿದನು—'ವ್ಯಪೇತಭಯಸಮ್ಮೋಹಃ ಶೈಲಮಭ್ಯಪತದ್‌ಬಲೀ' (೧೪೮/೧೭ ಶ್ಲೋ.) (ವ್ಯಪೇತ–ಹೊರಟುಹೋದ, ಇಲ್ಲದ. ಶೈಲಂ–ಬೆಟ್ಟವನ್ನು, ಗಂಧಮಾದನ ಪರ್ವತವನ್ನು. ಅಭ್ಯಪತತ್–ಸಮೀಪಿಸಿದನು, ಸಮೀಪಕ್ಕೆ ಹೋಗಿ ಏರಿದನು.) ಈ ಗಂಧಮಾದನ ಪರ್ವತವು ಇಲಾವೃತ ವರ್ಷಕ್ಕಿಂತ ಪೂರ್ವದಲ್ಲಿ ಎರಡು ಸಾವಿರ ಯೋಜನ ಆಗಲವಾಗಿಯೂ ಹತ್ತುಸಾವಿರ ಯೋಜನ ಎತ್ತರವಾಗಿಯೂ ಮೂವತ್ತ-ನಾಲ್ಕು ಸಾವಿರ ಯೋಜನ ಉದ್ದವಾಗಿಯೂ ಇದೆಯೆಂದು ಗು.ಸಾ.ಟೀಕೆಯಲ್ಲಿ

ಹೇಳಿದೆ. ಆ ಪರ್ವತದ ಮೇಲೆ ಒಂದು ಸರೋವರವಿತ್ತು. ಅದರಲ್ಲೇ ಈ ಹೊಂಗೆಂಪು ಬಣ್ಣದ ಸುವಾಸನೆಯ 'ಸೌಗಂಧಿಕ' ಎಂಬ ಪದ್ಮಗಳು ಬೆಳೆದಿದ್ದುವು. ಆ ತೋಟವನ್ನೂ ಆ ಕೊಳವನ್ನೂ ಹೂವುಗಳನ್ನೂ ರಕ್ಷಿಸುವುದಕ್ಕಾಗಿ ಕುಬೇರ ಒಂದು ಲಕ್ಷ ದೈತ್ಯಸೈನ್ಯವನ್ನು ನೇಮಿಸಿದ್ದನು. ಅವರೆಲ್ಲ ಶಿವನ ಭಕ್ತರು, ಶಿವನೇ ಸರ್ವೋತ್ತಮನೆಂದು ವಾದಿಸತಕ್ಕವರು. ಮತ್ತು ರುದ್ರನಿಂದ ಅವಧ್ಯತ್ವವರವನ್ನು ಪಡೆದಿದ್ದರು.

ಕೇವಲ ಯಕ್ಷಗಂಧರ್ವಬ್ರಹ್ಮರ್ಷಿಸೇವಿತವಾದ ಆ ಪ್ರದೇಶದಲ್ಲಿ ಭೀಮನು ನಿರ್ಭಯವಾಗಿ ಸಂಚಾರಮಾಡುತ್ತಿದ್ದುದನ್ನು ಕಂಡು ವಿಸ್ಮಿತರಾದ ಆ ದೈತ್ಯರು ಸಿಂಹ ವ್ಯಾಘ್ರ ಕರಡಿ ಮುಂತಾದ ಕ್ರೂರಮೃಗಗಳಾಗಿ ಹೆದರಿಸಲೂ ಕಠೋರವಾದ ಲತಾಗುಲ್ಮಗಿಡ-ಮರಗಳಾಗಿ ಭೀಮನನ್ನು ಅಡ್ಡಗಟ್ಟಲೂ ಯತ್ನಿಸಿದರು. ಭೀಮನಾದರೋ ತನ್ನ ಕಾಲಿನ ಏಟಿನಿಂದಲೇ ಆ ಕ್ರೂರಮೃಗಗಳನ್ನು ಸಂಹರಿಸುತ್ತಲೂ ಎದೆಯ ತಿವಿತದಿಂದಲೂ ಕಾಲಿನ ತುಳಿತದಿಂದಲೂ ಗಿಡಮರಗಳನ್ನೂ ಲತಾಗುಲ್ಮಗಳನ್ನೂ ಧ್ವಂಸಮಾಡುತ್ತಾ ಮುಂದೆ ನಡೆದನು— 'ಉನ್ಮೂಲಯನ್ ಮಹಾವೃಕ್ಷಾನ್ ಪೋಥಯಂಶ್ಚೋರಸಾ ಬಲಿ.' (ವನ. ೧೪೬/೪೨) ಅಲ್ಲೇ ಅವನಿಗೆ ಹನುಮನ ಭೇಟಿಯಾಯಿತು. ಆ ವಿಚಾರ ಹಿಂದಿನ (ವಾಯುಸ್ತುತಿಯ ೨೭ನೇ) ಶ್ಲೋಕದಲ್ಲೇ ಬಂದುಹೋಗಿದೆ.

ಹನುಮಂತನನ್ನು ಬೀಳ್ಕೊಂಡು ಭೀಮ ಆ ಕೊಳದಲ್ಲಿಳಿದು ಕಮಲಗಳನ್ನು ಕೊಯ್ಯಲು ಹೊರಟಾಗ ಆ ದೈತ್ಯರು ಭೀಮನನ್ನು ತಡೆದರು. ಭೀಮ ಅವರನ್ನು ಲೆಕ್ಕಿಸದೆ ಮುನ್ನುಗ್ಗಲು ಭೀಮನಿಗೂ ಆ ದೈತ್ಯರಲ್ಲಿ ಕೆಲವರಿಗೂ ವಾಗ್ಯುದ್ಧ ನಡೆಯಿತು. ಎಂದರೆ ಅವರು ಶಿವನೇ ಸರ್ವೋತ್ತಮನೆಂದು ಸ್ಥಾಪಿಸಲು ಯತ್ನಿಸಿದರು. ಭೀಮನು ಅವರ ವಾದಗಳನ್ನೆಲ್ಲ ಖಂಡಿಸಿ*

---

*ಇಲ್ಲಿ ಪುನಃ ಗು.ಸಾ. ಟೀಕೆಯಲ್ಲಿ ಹೇಳಿದ 'ಕಥಾಲಕ್ಷಣ'ವೆಂಬ ಪ್ರಕರಣಗ್ರಂಥದ ಕೆಲವು ಅಂಶಗಳನ್ನು ಹೇಳಬಹುದು. ವಾದ, ವಿತಂಡ, ಜಲ್ಪ ಎಂದು ಚರ್ಚೆಯು ಮೂರು ವಿಧವಾಗಿದೆ. ತತ್ತ್ವಾಂಶವನ್ನು ತಿಳಿಯಬೇಕೆಂಬ ಉದ್ದೇಶದಿಂದ ಮಾಡುವ ಚರ್ಚೆಗೆ "ವಾದ"ವೆಂದು ಹೆಸರು. ಪ್ರತಿವಾದಿಯ ಸಿದ್ಧಾಂತವನ್ನು ಪ್ರಮಾಣಗಳಿಂದ ನಿರಾಕರಣಮಾಡಿ ಸ್ವಪಕ್ಷವನ್ನು ಸ್ಥಾಪಿಸುವುದಕ್ಕೆ "ಜಲ್ಪ" ಎಂದು ಹೆಸರು.

ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಿದನು. ಹೀಗೆ ಭೀಮನು ಅವರನ್ನು ಮೊದಲು ವಾಗ್ಯುದ್ಧದಲ್ಲಿ ಸೋಲಿಸಿದನು—'ತಾನ್ ವೈಷ್ಣವೈರೇವ ಶಾಸ್ತ್ರೈಃ ಸ ಭೀಮೋ, ವಿಜಿತ್ಯ ಪೂರ್ವಂ ವಾಙ್ಮಯೇ ಸಂಗರೇ ತು' (ತಾ.ನಿ. ೨೨ ಅ. ೩೦೪ ಶ್ಲೋ. ವಿಜಿತ್ಯ-ಗೆದ್ದು, ಜಯಿಸಿ, ಪೂರ್ವಂ-ಮೊದಲು, ಸಂಗರೇ-ಯುದ್ಧದಲ್ಲಿ, ವಾಙ್ಮಯೇ ಸಂಗರೇ-ವಾಗ್ಯುದ್ಧದಲ್ಲಿ, 'ಜಲ್ಪ' ಎಂಬ ವಾದದಲ್ಲಿ ಎಂದರ್ಥ.) ಮಹಾಭಾರತದಲ್ಲಿ ಮಾತ್ರ ಈ ವಾಗ್ಯುದ್ಧದ ಪ್ರಸಕ್ತಿ ಬಂದಿಲ್ಲ. ವಾದದಲ್ಲಿ ಸೋತರೂ ಆ ದುಷ್ಟರು ಒಪ್ಪಿಕೊಳ್ಳದೆ ಭೀಮನ ಮೇಲೆ ಶಸ್ತ್ರಾಸ್ತ್ರಗಳ ಮಳೆಗರೆಯುತ್ತಾ ಯುದ್ಧಕ್ಕೇ ಬಂದರು—'ಗೃಹ್ಣೀತ ಬಧ್ನೀತ ವಿಕರ್ತತೇಮಂ, ಪಚಾಮ ಖಾದಾಮ ಚ ಭೀಮಸೇನಮ್ । ಕ್ರುದ್ಧಾ ಬ್ರುವಂತೋಽಭಿಯಯುರ್ದ್ರುತಂ ತೇ, ಶಸ್ತ್ರಾಣಿ ಚೋದ್ಯಮ್ಯ ವಿವೃತ್ತನೇತ್ರಾಃ॥' (ವನ. ೧೫೫ ಅ. ೧೭ ಶ್ಲೋ.) (ಶಬ್ದಾರ್ಥ—ಗೃಹ್ಣೀತ-ಹಿಡಿಯಿರಿ, ಹಿಡಿದುಕೊಳ್ಳಿ, ಬಧ್ನೀತ-ಕಟ್ಟಿಹಾಕಿರಿ, ವಿಕರ್ತತ-ಕತ್ತರಿಸಿಹಾಕಿ, ತುಂಡು ತುಂಡು ಮಾಡಿರಿ—ಈ ಮೂರೂ ಮಧ್ಯಮಪುರುಷ ಬಹುವಚನ, ಆಜ್ಞಾರ್ಥ ರೂಪಗಳು. ಇಮಂ-ಇವನನ್ನು, ಈ ಭೀಮಸೇನನನ್ನು, ಪಚಾಮ-(ತಿನ್ನಲು ಆಗುವಂತೆ) ಬೇಯಿಸೋಣ, ಖಾದಾಮ-ತಿಂದುಬಿಡೋಣ. ಬ್ರುವಂತಃ-ಹೇಳುತ್ತಾ, ಕಿರುಚುತ್ತಾ, ಅಭಿಯಯುಃ-ಎದುರಿಸಿದರು, ಮೈಮೇಲೆ ಬಿದ್ದರು. ದ್ರುತಂ-ಬೇಗನೆ, ಕ್ಷಿಪ್ರವಾಗಿ, ಉದ್ಯಮ್ಯ-ಎತ್ತಿಕೊಂಡು ಅಥವಾ ಹೊಡೆಯಲು ಮೇಲೆತ್ತಿ, ವಿವೃತ್ತ-ತಿರುಗಿದ, ಅರಳಿದ. ವಿವೃತ್ತನೇತ್ರಾಃ-ಕಣ್ಣುತಿರುಗಿಸುತ್ತಾ ಅಥವಾ ಕೋಪದಿಂದ ಕಣ್ಣುಗಳನ್ನು ಅರಳಿಸಿಕೊಂಡವರಾಗಿ.) (ಭಾವಾರ್ಥ) ವಾದದಲ್ಲಿ ಸೋತುಹೋದ ಕೋಪದಿಂದ ಕಣ್ಣರಳಿಸಿಕೊಂಡು

ಅಯೋಗ್ಯರನ್ನು ನಿಗ್ರಹಿಸುವುದಕ್ಕಾಗಿಯೇ ಉತ್ತಮಾಧಿಕಾರಿಯು ಮಾಡುವ ವಾದಕ್ಕೆ "ವಿತಂಡಾ" ಎಂದು ಹೆಸರು; ಇದರಲ್ಲಿ ಸ್ವಪಕ್ಷ ಸಾಧನೆಯ ಪ್ರಸಂಗವೇ ಇಲ್ಲ. ಜಲ್ಪ ವಿತಂಡಾ ಎರಡೂ ವಿಧ ಚರ್ಚೆಗಳಲ್ಲಿ ಸೋತವನು ಮಧ್ಯಸ್ಥರ ಶಿಕ್ಷೆಯನ್ನು ಒಪ್ಪಬೇಕೆಂಬುದು ನಿಯಮ. ಆದರೆ ಭೀಮನೊಡನೆ ಜಲ್ಪಮಾಡಿ ದೈತ್ಯರು ಸೋತರೂ ಒಪ್ಪದೆ ಅವನ ಮೇಲೆ ಯುದ್ಧಕ್ಕೆ ಹೋದರು. ಆದ್ದರಿಂದಲೇ ಅವರಿಗೆ ವಾಯುಸ್ತುತಿಯಲ್ಲಿ 'ಕುಟಿಲಕಟುಮತೀನ್' ಎಂದೂ 'ಉತ್ಕಟಾಟೋಪಕೋಪಾನ್' ಎಂದೂ ವಿಶೇಷಣ ಕೊಟ್ಟಿದ್ದಾರೆ.

ಆ ದೈತ್ಯರು 'ಏನು ನೋಡುತ್ತೀರೋ, ನುಗ್ಗಿರೋ ಅವನ ಮೇಲೆ, ಈ ಭೀಮನನ್ನು ಹಿಡಿದು ಕಟ್ಟಿಹಾಕಿರಿ. ಅವನನ್ನು ತುಂಡು ತುಂಡು ಮಾಡಿ ಕತ್ತರಿಸಿಹಾಕಿ ಇವನನ್ನು ಬೇಯಿಸಿ ತಿಂದುಬಿಡೋಣ, ಬನ್ನಿ' ಎಂದು ಕೂಗಾಡುತ್ತಾ ಶಸ್ತ್ರಾಸ್ತ್ರಗಳನ್ನು ಧರಿಸಿ ಭೀಮನ ಮೇಲೆ ಯುದ್ಧಕ್ಕೆ ಬಂದರು. ಅವರು* ಯುದ್ಧಕ್ಕೆ ಬರುವುದೇ ತಡ, ಭೀಮಸೇನನು 'ತತಃ ಸ ಗುರ್ವೀಂ ಯಮದಂಡಕಲ್ಪಾಂ, ಮಹಾಗದಾಂ ಕಾಂಚನಪಟ್ಟಬದ್ಧಾಮ್ । ಪ್ರಗೃಹ್ಯ ತಾನಭ್ಯಪತತ್ ತರಸ್ವೀ....' (ಅಲ್ಲೇ, ೧೮ ಶ್ಲೋ.) ಶಬ್ದಾರ್ಥ—ಗುರ್ವೀಂ-ಲಕ್ಷಮಣ ಭಾರವಾದ, ಕಲ್ಪಾಂ-ಸದೃಶವಾದ, ಕಾಂಚನ-ಬಂಗಾರ, ಪ್ರಗೃಹ್ಯ-ಹಿಡಿದುಕೊಂಡು, ಅಭ್ಯಪತತ್-ಯುದ್ಧಕ್ಕೆ ಹೋದನು, ಎದುರಿಸಿದನು, ತರಸ್ವೀ-ವೇಗಶಾಲಿಯಾದ ಭೀಮನು. (ಭಾವಾರ್ಥ) ಆ ದೈತ್ಯರು ಹಾಗೆ ಯುದ್ಧಕ್ಕೆ ಬಂದದ್ದು ಕಂಡು ಅವರಿಗಿಂತಲೂ ಹೆಚ್ಚು ಚಾಕಚಕ್ಯತೆಯುಳ್ಳ (ತರಸ್ವೀ) ಭೀಮನು ಬಂಗಾರದ ಪಟ್ಟಿಹಾಕಿದ್ದ, ಯಮನ ದಂಡಾಯುಧದಂತೆ ಮೃತ್ಯುಸ್ವರೂಪವಾದ, ಮಹಾಭಾರವಾದ ತನ್ನ ಆ ಗದೆಯನ್ನೂ ಹಿಡಿದು-ಕೊಂಡು ಅವರ ಮೇಲೆ ಯುದ್ಧಕ್ಕೆರಗಿದನು. ಸರಿ, ಭೀಮ ಗದಾಪಾಣಿಯಾಗಿ ನಿಂತರೆ ಅವನನ್ನು ಎದುರಿಸಿ ಬದುಕಬಲ್ಲ ವೀರರೆಲ್ಲಿ ಬರಬೇಕು ? ಸರೋವರದ ಕಾವಲಿಗಾಗಿ ನಿಯುಕ್ತರಾಗಿದ್ದ ಲಕ್ಷಜನರೂ ಅವನ ಗದೆಗೆ ತುತ್ತಾಗಿ-ಹೋದರು—'ಪ್ರವೀರಾನ್ ಲಕ್ಷಮೇಷಾಂ ನಿಜಘ್ನೇ' (ತಾ. ನಿ. ೨೨/೩೦೭) (ಏಷಾಂ-ಇವರ,ದೈತ್ಯರ, ನಿಜಘ್ನೇ-ಕೊಂದುಹಾಕಿದನು.)ಹೀಗೆ ದೇವೇಂದ್ರನು ದೈತ್ಯದಾನವರ ಸಂಘವನ್ನು ಸಂಹರಿಸಿದಂತೆ ಭೀಮನು ವನಪಾಲಕರೆಲ್ಲರನ್ನೂ (ಲಕ್ಷಮಂದಿಯನ್ನೂ) ನಾಶಮಾಡಿ ಕೊಳದೊಳಗಿಳಿದು ತನ್ನ ಮನದಣಿಯ ಸೌಗಂಧಿಕಾಕಮಲಗಳನ್ನು ಆರಿಸಿಕೊಂಡು ಹೋಗಿ ದ್ರೌಪದಿಗೆ ಕೊಟ್ಟನು—ಸ ಶಕ್ರವದ್ ದಾನವದೈತ್ಯಸಂಘಾನ್, ವಿಕ್ರಮ್ಯ ಜಿತ್ವಾ ಚ ರಣೇಽರಿಸಂಘಾನ್ । ವಿಗಾಹ್ಯ ತಾಂ ಪುಷ್ಕರಿಣೀಂ ಜಿತಾರಿಃ, ಕಾಮಂ ಸ ಜಗ್ರಾಹ ತತೋಽಂಬುಜಾನಿ॥ (ವನ. ೧೫೪/೨೫) (ಶಬ್ದಾರ್ಥ-ಶಕ್ರವತ್-ದೇವೇಂದ್ರನಂತೆ. ವಿಕ್ರಮ್ಯ-ಆಕ್ರಮಿಸಿ, ಹೊಡೆದಾಡಿ, ರಣೇ-ಯುದ್ಧದಲ್ಲಿ, ವಿಗಾಹ್ಯ-ಒಳಗೆ ಇಳಿದು, ಪ್ರವೇಶಿಸಿ, ಕಾಮಂ-ಯಥೇಷ್ಟವಾಗಿ ಜಗ್ರಾಹ-ತೆಗೆದುಕೊಂಡನು, ಕಿತ್ತು-

ಕೊಂಡನು. ಅಂಬುಜಾನಿ-ಸೌಗಂಧಿಕಾಕಮಲಗಳನ್ನು.) ಸತ್ತುಳಿದ ರಾಕ್ಷಸರೆಲ್ಲ ಕುಬೇರನ ಬಳಿಗೆ ಹೋಗಿ ಭೀಮನ ವೀರ್ಯವನ್ನೂ ಬಲವನ್ನೂ ಪರಾಕ್ರಮವನ್ನೂ ತಿಳಿಸಿದರು. ಆಗ ಕುಬೇರನಿಗೆ ದೈತ್ಯಾವೇಶ ಇರಲಿಲ್ಲವಾದ್ದರಿಂದ 'ಗೃಹ್ಣಾತು ಭೀಮೋ ಜಲಜಾನಿ ಕಾಮಂ, ಕೃಷ್ಣಾನಿಮಿತ್ತಂ ವಿದಿತಂ ಮಮೈ-ತತ್' (ವನ ೧೫೫/೨೭) (ಗೃಹ್ಣಾತು-ತೆಗೆದುಕೊಳ್ಳಲಿ, ಕೃಷ್ಣಾ-ದ್ರೌಪದೀ) 'ಭೀಮಸೇನ ದ್ರೌಪದೀಗಾಗಿ ಈ ಹೂವುಗಳನ್ನು ತೆಗೆದುಕೊಳ್ಳಲಿ, ತಪ್ಪಲ್ಲ. ಈ ವಿಷಯ ನನಗೆ ಗೊತ್ತಿತ್ತು' ಎಂದು ಹೇಳಿ ಸುಮ್ಮನಾದನು. ಇದೇ ಸೌಗಂಧಿಕಾಹರಣದ ಮೊದಲನೆಯ ಪ್ರಸಂಗದ ಕಥೆ.

313. **ಪಂಚವರ್ಣದ ಸೌಗಂಧಿಕಾಹರಣ**—ಹೊಂಗೆಂಪುವರ್ಣದ ಸೌಗಂಧಿಕಪುಷ್ಪಗಳನ್ನು ತಂದ ಮೇಲೂ ಕೂಡ ಕೆಲವು ದಿವಸ ಧರ್ಮರಾಜಾದಿ ಪಾಂಡವರು ಪಾಶುಪತಾಸ್ತ್ರವನ್ನು ಸಂಪಾದಿಸಲು ತಪಸ್ಸಿಗೆ ಹೋಗಿದ್ದ ಅರ್ಜುನನ ದಾರಿ ನೋಡುತ್ತಾ ನರನಾರಾಯಣಾಶ್ರಮದಲ್ಲೇ ಇದ್ದರೆಂದೂ ಈ ಮಧ್ಯೆ ಒಂದು ದಿನ ಗಾಳಿಯಿಂದ ಹಾರಿಬಂದ ಒಂದು ಪಂಚವರ್ಣದ ಸೌಗಂಧಿಕಾಪುಷ್ಪವು ಪಾಂಚಾಲಿಯ ಮುಂದೆ ಬಿತ್ತೆಂದೂ ತಾತ್ಪರ್ಯ-ನಿರ್ಣಯದಲ್ಲಿ ಹೇಳಿದೆ (೨೨ ಅ, ಶ್ಲೋ. ೩೧೪-೧೬). ಆದರೆ ಭಾರತದಲ್ಲಿ (ವನ. ೧೬೧ ಅ.) ಪಾಂಡವರು ಆರ್ಷ್ಟಿಷೇಣಾಶ್ರಮದಲ್ಲಿದ್ದಾಗ ಒಂದು ದಿನ ಗರುಡ ಹಾವನ್ನು ಹೊತ್ತುಕೊಂಡು ಹೋಗುವ ರಭಸದಲ್ಲಿ ಅವನ ರೆಕ್ಕೆಯಿಂದ ಪಂಚವರ್ಣದ ಕಮಲವು ಬಿತ್ತೆಂದು (ಶ್ಲೋ. ೧೩) ಹೇಳಿದೆ. ಅದನ್ನು ಕಂಡ ದ್ರೌಪದೀ ಅಂತಹ ಅನೇಕ ಪುಷ್ಪಗಳನ್ನು ತಂದುಕೊಂಡುವಂತೆ ಭೀಮನನ್ನು ಪುನಃ ಪ್ರಾರ್ಥಿಸಿಕೊಂಡಳು. ಆ ಪುಷ್ಪಗಳು ಮೇರುಪರ್ವತದ ಮೇಲ್ಭಾಗದಲ್ಲಿದ್ದ ಕುಬೇರನ ಅಲಕಾಪಟ್ಟಣದ ವನದಲ್ಲಿದ್ದ ಒಂದು ಕೊಳದಲ್ಲಿ ಬೆಳೆದಿದ್ದುವು. ಅವನ್ನು ರಕ್ಷಿಸುವುದಕ್ಕೆ ಕುಬೇರನು ತನ್ನ ಮಿತ್ರನಾದ ಮಣಿಮಂತನೆಂಬ ದೈತ್ಯನ ಕೈಕೆಳಗಿದ್ದ ಮುನ್ನೂರು ಕೋಟಿ ('ಪದ್ಮತ್ರಯಂ' ತಾ.ನಿ. ೩೧೮ ಶ್ಲೋ.) ಯಕ್ಷರಾಕ್ಷಸಗಂಧರ್ವಸೈನ್ಯಕ್ಕೆ ಒಪ್ಪಿಸಿದ್ದನು. 'ಸಖಾ ವೈಶ್ರವಣ-ಸ್ಯಾಸೀತ್ ಮಣಿಮಾನ್ ನಾಮ ರಾಕ್ಷಸಃ । (ವನ. ೧೬೧ ಅ. ೬೭ ಶ್ಲೋ. ಸಖಾ–ಮಿತ್ರನು, ವೈಶ್ರವಣಸ್ಯ–ಕುಬೇರನ.) ಅವರೆಲ್ಲರೂ ಮಾಯಾಯುದ್ಧ

ಕುಶಲರಾಗಿದ್ದರಲ್ಲದೆ ಶಿವೋಪಾಸಕರೂ ವಿಷ್ಣುದ್ವೇಷಿಗಳೂ ಜಗತ್ತೆಲ್ಲವೂ ಮಿಥ್ಯಾ ಎಂದು ವಾದಿಸುವವರೂ ಆಗಿದ್ದರು.

ಇತ್ತ ದ್ರೌಪದಿಯಿಂದ ಪ್ರೇರಿತನಾದ ಭೀಮನು ಎರಡನೆ ಸಾರಿ ಧನುಸ್ಸನ್ನೂ ಖಡ್ಗವನ್ನೂ ಬಾಣಬತ್ತಳಿಕೆಗಳನ್ನೂ ತನ್ನ ಪೌಂಡ್ರವೆಂಬ ಶಂಖವನ್ನೂ ಗದೆಯನ್ನೂ ತೆಗೆದುಕೊಂಡು ಹೊರಟನು (ವನ. ೧೬೧, ಶ್ಲೋ. ೩೭-೩೮). ಗು.ಸಾ. ಟೀಕೆಯಲ್ಲಿ ವಿವರಿಸಿರುವಂತೆ ನರ-ನಾರಾಯಣಾಶ್ರಮದಿಂದ ಒಂದು ಲಕ್ಷ ಹದಿನಾರು ಸಾವಿರ ಯೋಜನ ದೂರದಲ್ಲಿದ್ದ ಮೇರುಪರ್ವತದ ಮೇಲ್ಭಾಗಕ್ಕೆ ಕ್ಷಣಮಾತ್ರದಲ್ಲಿ (ವಾಯು-ಸ್ತುತಿಯಲ್ಲಿ ೨೮ನೇ ಶ್ಲೋಕದಲ್ಲಿ 'ದ್ರುತಂ'-ಶೀಘ್ರವಾಗಿ ಎಂದು ಹೇಳಿದಂತೆ) ಹೋಗಿ ಸೇರಿ ಅಲ್ಲಿಂದ ಸುಮಾರು ಹದಿನಾರು ಸಾವಿರ ಯೋಜನೆಗಳ ದೂರದಲ್ಲಿದ್ದ ಸೌಗಂಧಿಕಾ ವನಕ್ಕೂ ಹೋಗಿ ತಲುಪಿದನು. ಅಲ್ಲಿಗೆ ಹೋಗಿ ಶಂಖವನ್ನು ಊದಿದನಲ್ಲದೆ ಧನುಷ್ಟಂಕಾರವನ್ನೂ ಮಾಡಿದನು. (ವ.ಪ. ೧೬೧ ಅ, ೫೩ ಶ್ಲೋ.) ಆ ಶಬ್ದದಿಂದ ಬೆಚ್ಚಿಬಿದ್ದ ಕಾವಲುಗಾರರು 'ಗದಾಪರಿಘನಿಸ್ತ್ರಿಂಶ-ಶೂಲಶಕ್ತಿಪರಶ್ವಥಾಃ' (ಪರಿಘ-ಕಬ್ಬಿಣದ ಕಟ್ಟು-ಹಾಕಿರುವ ದಪ್ಪ ಮರದ ದೂಲ, ನಿಸ್ತ್ರಿಂಶ-ಖಡ್ಗ, ಪರಶ್ವಥ-ಕೊಡಲಿ. ೧೬೧ ಅ. ೫೫ ಶ್ಲೋ.) ಗದಾದಿ ಆಯುಧಗಳನ್ನು ಧರಿಸಿ ಭೀಮನೊಡನೆ ಯುದ್ಧಕ್ಕೆ ಬಂದರು. ಭೀಮನು ಅವರ ಮಾಯಾವಾದ-ಜಗನ್ಮಿಥ್ಯಾತ್ವಾದಿ ಸಿದ್ಧಾಂತಗಳನ್ನೆಲ್ಲ ಖಂಡಿಸಿದ್ದಲ್ಲದೆ ಯುದ್ಧಕ್ಕೆ ಬಂದ ಅನೇಕ ಕೋಟಿ ದೈತ್ಯರನ್ನು ನಾಶಮಾಡಿಬಿಟ್ಟನು. ಅವರಲ್ಲಿ ಅಳಿದುಳಿದ ಕೆಲವರು ಓಡಿ ಹೋಗಿ ತಮಗೆ ಭೀಮನಿಂದಾದ ಪರಾಜಯವನ್ನು ಹೇಳಿಕೊಂಡರು. ಆಗ ಮಣಿಮಂತನೇ ಮಿಕ್ಕ ಸೈನ್ಯದೊಡನೆ ಬಂದು ಭೀಮನೊಡನೆ ಉಗ್ರವಾಗಿ ಕಾದಾಡಿದನು. ಅವರಿಬ್ಬರಿಗೂ ನಡೆದ ಯುದ್ಧವನ್ನು ಭಾರತದಲ್ಲಿ ಸುಮಾರು ಹದಿನೈದು ಶ್ಲೋಕಗಳಲ್ಲಿ (೧೬೧ಅ. ೬೮-೮೪) ವರ್ಣಿಸಿದೆ. ಅಗಸ್ತ್ಯರ ಶಾಪದಿಂದ ಮಣಿಮಂತನೂ ಅವನ ಅಧೀನದಲ್ಲಿದ್ದ ಮುನ್ನೂರು ಕೋಟಿ ಯಕ್ಷರಕ್ಷೋ ಗಂಧರ್ವಸೈನ್ಯವೂ ನಾಶವಾಗಿ ಹೋಯಿತು. ಅವರೆಲ್ಲ ಹತರಾದ ವಾರ್ತೆಯನ್ನು ಕೇಳಿದ ಕುಬೇರ ರಥಾರೂಢನಾಗಿ ಅಸುರಾವೇಶದಿಂದ ಭೀಮನ

ಮೇಲೆ ಯುದ್ಧಕ್ಕೆ ಬಂದನು. ಆದರೆ ಭೀಮಸೇನನ ಸಿಂಹನಾದ ಕೇಳಿ ಸ್ತಂಭಿತನಾಗಿ ನಿಂತುಬಿಟ್ಟ. ಅವನ ಅಸುರಾವೇಶ ಹೋಗಲು ಪಾಂಡವರಿಗೆ ಆತಿಥ್ಯ ಮಾಡಿ ಕಳುಹಿಸಿದನು. ಇಲ್ಲಿಗೆ ಪಂಚವರ್ಣದ ಸೌಗಂಧಿಕಾಹರಣದ ಪ್ರಸಂಗವೂ ಮುಗಿಯಿತು. ಈಗ ಕಠಿನ ಶಬ್ದಾರ್ಥವನ್ನು ಹೇಳಿ ಅನ್ವಯ-ಅರ್ಥಗಳಿಗೆ ಹೋಗುವೆನು.

314. ಕಠಿನ ಶಬ್ದಾರ್ಥ—(ಅ) ಅಟೀಕಃ-(ನೀನು) ಹೋದಿ, ಎದುರಿಸಿದಿ ಅಥವಾ ಸಮೀಪಿಸಿದಿ. ಟೀಕೃ ಗತೌ ಧಾತು. (ಖಂಡ 300(ಗ), ಪುಟ ೬೦೨ ನೋಡಿರಿ.) (ಆ) ಕುಟಿಲ ಕಟುಮತೀನ್ ಎಂಬುದು 'ಅರೀನ್'ಗೆ ವಿಶೇಷಣ. (ಕಕ.ಭ.) ಕುಟಿಲಾ-ವಕ್ರಾ, ಕಟುಃ-ಕ್ರೂರಾ, ಮತಿಃ- ಬುದ್ಧಿಃ ಯೇಷಾಂ ತೇ ತಾನ್ । ವಕ್ರವೂ ಕ್ರೂರವೂ ಆದ ಬುದ್ಧಿ-ಯುಳ್ಳ. ಇದನ್ನು ಗು.ಸಾ. ಟೀಕೆಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಈ ದೈತ್ಯರು ಮೊದಲು ಭೀಮನೊಡನೆ ವಾಗ್ಯುದ್ಧಕ್ಕೆ ಹೋದರು. ಅವರು ಪ್ರತಿ-ಪಾದಿಸಿದ ಶಿವಸರ್ವೋತ್ತಮತ್ವವನ್ನು ಭೀಮ ಖಂಡಿಸಿ ವಿಷ್ಣುಸರ್ವೋತ್ತಮ-ತ್ವವನ್ನು ಸ್ಥಾಪಿಸಿದನು. ಆದರೂ ಅವರು ತಮ್ಮ ಸೋಲನ್ನು ಒಪ್ಪಿಕೊಳ್ಳಲು ಸಿದ್ಧವಾಗಿರದೆ ಭೀಮನ ಮೇಲೆ ಬೆಂಕಿ-ಬೆಂಕಿಯಾದರು. ಕೆಲವರಂತು ಕೋಪದಿಂದ ಕೆರಳಿ ಭೀಮನೊಡನೆ ಯುದ್ಧಕ್ಕೇ ಬಂದರು. ಋಜುಮಾರ್ಗ-ದಿಂದ ಗೆಲ್ಲಲು ಸಾಧ್ಯವಾಗದೆಹೋಗಲು ಮಾಯಾಯುದ್ಧವನ್ನೂ ಮಾಡುವುದಕ್ಕೆ ಹವಣಿಸಿಕೊಂಡಿದ್ದರು. ಆದ್ದರಿಂದ 'ಕುಟಿಲ ಕಟುಮತೀನ್' ಎಂಬ ವಿಶೇಷಣ ಕೊಟ್ಟಿದ್ದಾರೆ.

ಇ) ಉತ್ಕಟಾಟೋಪಕೋಪಾನ್—(ಕಕ. ವಿ.) 'ಸಂಭ್ರಮಾ-ಟೋಪಸಂರಂಭಾಃ' ಎಂದು ಯಾದವಕೋಶ ಇರುವುದರಿಂದ ಆಟೋಪ ಎಂದರೆ ಸಂಭ್ರಮ ಅಥವಾ ದರ್ಪ, ಗರ್ವ, ಹೆಮ್ಮೆ.(ಭ.) 'ಆಟೋಪಃ ಆಗ್ರಹಃ', ದುರಾಗ್ರಹ. ಉತ್ಕಟೌ (ಕಕ) ಪ್ರವೃದ್ಧೌ (ವಿ.) ಅಭಿವೃದ್ಧೌ (ಭ.) ಉಲ್ಬಣೌ, ಆಟೋಪಕೋಪೌ ಯೇಷಾಂ, ತಾನ್. ಉಲ್ಬಣವಾದ ಅಥವಾ ಕೆರಳಿದ ಕೋಪ ಮತ್ತು ದರ್ಪ ಅಥವಾ ಗರ್ವವುಳ್ಳಂಥಾ ಭೀಮನಿಂದ ಪರಾಜಿತರಾದ ಕಾರಣ ಅವರ ಗರ್ವವೆಲ್ಲ ಅಡಗಿತು ; ಅದರಿಂದಲೇ ಅವರಿಗೆ

ಸಿಟ್ಟು ಬಂತು. ಸಿಟ್ಟಿನಿಂದಲೇ ತಮ್ಮ ದರ್ಪವನ್ನು ತೋರಿಸಲು ಯುದ್ಧಕ್ಕೆ ಬಂದಂಥಾ ಎಂದು ತಿಳಿಯಬೇಕು. ಈ) ಸತ್ವರತ್ವಾತ್ (ಭ.) ತ್ವರಯಾ ಸಹಿತಃ ಸತ್ವರಃ ! ತಸ್ಯ ಭಾವಃ ಸತ್ವರತ್ವಂ, ತಸ್ಮಾತ್। ಶತ್ರುಗಳ ವೇಗಕ್ಕಿಂತ ಅಧಿಕವಾದ ವೇಗವುಳ್ಳವನಾದ್ದರಿಂದ ಎಂದರ್ಥ (ಕಕ.ವಿ.) 'ಸತ್ವರಂ ಚಪಲಂ ತೂರ್ಣಂ' ಇತ್ಯಮರಃ। ಸತ್ವರಂ–ಶೀಘ್ರವಾಗಿ. ಸತ್ವರತ್ವಾತ್ ಎಂದು ಪಂಚಮಿ ಹೇಳಿರುವುದರಿಂದ 'ಲ್ಯಬ್‌ಲೋಪೇ ಕರ್ಮಣ್ಯಧಿಕರಣೇ ಚ' ಎಂಬ ವಾರ್ತಿಕದಂತೆ* 'ತೂರ್ಣಂ ಪ್ರಾಪ್ಯ' ಎಂದು ('ಪ್ರಾಪ್ಯ'–ಹೋಗಿ, ಸೇರಿ, ಸಮೀಪಿಸಿ ಒಂದು ಪದವನ್ನು ಅಧ್ಯಾಹಾರಮಾಡಿಕೊಂಡು ಅವರ ಬಳಿಗೆ ಬೇಗ ಹೋಗಿ, ಶೀಘ್ರವಾಗಿ ಸೇರಿ ಎಂದರ್ಥ ಮಾಡಬೇಕು ಎಂದು ಕಕ ವಿ ಹೇಳುತ್ತಾರೆ.

ಉ) ಶರಣದ ಎಂಬುದಕ್ಕೆ ಭೀಮಪರವಾಗಿ ಹೀಗೆ ಅನೇಕಾರ್ಥ ಹೇಳಬಹುದು. ೧) (ಕಕ. ವಿ. ಭ.) 'ಶರಣಂ ಗೃಹರಕ್ಷಿತ್ರೋಃ' ಎಂದು ಅಮರವಿರುವುದರಿಂದ, ಶರಣಂ–ರಕ್ಷಕನಾದ ವಿಷ್ಣುವನ್ನು, ದದಾತೀತಿ ವಾ, ದರ್ಶಯತೀತಿ ವಾ ಶರಣದಃ। ಕೊಡುವುದರಿಂದ ಅಥವಾ ತೋರಿಸುವುದರಿಂದ 'ಶರಣದ' (ಲೇ.) 'ಆತೋಽನುಪಸರ್ಗೇ ಕಃ' (ಪಾ. ೩/೨/೩) ಎಂಬ ಸೂತ್ರದಂತೆ ಉಪಸರ್ಗರಹಿತವಾದ ಆಕಾರಾಂತ ಧಾತುಗಳ ಮೇಲೆ ಕರ್ತ್ರರ್ಥದಲ್ಲಿ ಕ ಎಂದರೆ ಅ ಪ್ರತ್ಯಯ ಬರುತ್ತದೆ ಎಂದು ಹೇಳಿದಂತೆ ದಾ-ಧಾತುವಿನ ಮೇಲೆ ಕ ಪ್ರತ್ಯಯ ಬಂದು 'ಶರಣದಃ' ಎಂದಾಗಿದೆ. ಅದರ ಸಂಬೋಧನೆಯ ರೂಪ ಶರಣದ ! ರಕ್ಷಕನಾದ ವಿಷ್ಣುವನ್ನು ಕೊಡತಕ್ಕವನೇ ಅಥವಾ ತೋರಿಸತಕ್ಕವನೇ ! ಎಂದರ್ಥ (ಗು.ಸಾ.) ಕಣ್ಣಿಗೆ ಕಾಣಿಸದ ಅವನನ್ನು ಶಾಸ್ತ್ರಗಳಿಂದ

*ಪ್ರಾಸಾದಾತ್ ಪ್ರೇಕ್ಷತೇ ಎಂಬುದಕ್ಕೆ ಪ್ರಾಸಾದಮಾರುಹ್ಯ ಪ್ರೇಕ್ಷತೇ–ಮಹಡಿ ಹತ್ತಿ ನೋಡುತ್ತಾನೆ ಎಂದೂ ಆಸನಾತ್ ಪ್ರೇಕ್ಷತೇ ಎಂಬುದಕ್ಕೆ ಆಸನೇ ಉಪವಿಶ್ಯ ಪ್ರೇಕ್ಷತೇ–ಆಸನದಲ್ಲಿ ಕುಳಿತೇ ನೋಡುತ್ತಾನೆ ಎಂದೂ ಅರ್ಥ ಹೇಳಬೇಕೆಂದು ಸಿದ್ಧಾಂತಕೌಮುದಿಯಲ್ಲಿ ತೋರಿಸಿದೆ. ಮೇಲೆ ಹೇಳಿದ ಆರುಹ್ಯ, ಉಪವಿಶ್ಯ ಎರಡೂ ಲ್ಯಬ್ ರೂಪಗಳು. ಅದರಂತೆ ಪ್ರಕೃತ ಸಂದರ್ಭದಲ್ಲೂ ಸತ್ವರತ್ವಾತ್ ಎಂದರೆ 'ತೂರ್ಣಂ ಪ್ರಾಪ್ಯ' ಎಂದರ್ಥ. ಪ್ರಾಪ್ಯ ಎಂಬುದೇ ಲ್ಯಬ್ ರೂಪ.

ತಿಳಿಸಿಕೊಡುವ ಎಂಬುದು ಮೊದಲ ಅರ್ಥ. ಶಾಸ್ತ್ರದಲ್ಲಿ ಹೇಳಿದಂತೆ ಶ್ರವಣಮನನನಿಧಿಧ್ಯಾಸನಗಳನ್ನೂ ಶಾಸ್ತ್ರಾಧ್ಯಯನವನ್ನೂ ನಿರಂತರವಾಗಿ ಮಾಡುತ್ತಾ ಹೋದರೆ ಅದು ಪರಿಪಕ್ವವಾದಾಗ ಆ ವಿಷ್ಣುವಿನ ಸಾಕ್ಷಾತ್ಕಾರವೂ (ಅಪರೋಕ್ಷ ಜ್ಞಾನವೂ) ಆಗುವುದೆಂಬುದು ಎರಡನೇ ಅರ್ಥ. ಎರಡಕ್ಕೂ ವಾಯುದೇವರ ಅನುಗ್ರಹ ಮೊದಲು ಬೇಕು. ಅದನ್ನು ತಿಳಿದೇ ಶ್ರೀಮಂತ್ರಾಲಯದ ರಾಯರು ಪ್ರಾತಃಸಂಕಲ್ಪಗದ್ಯದಲ್ಲಿ "ಸ್ವಭಕ್ತಂ ಮಾಮುದ್ದಿಶ್ಯ ಭಗವತಃ ಪುರಃ 'ಪರಮದಯಾಳೋ ಕ್ಷಮಾಸಮುದ್ರ ಭಕ್ತವತ್ಸಲ ಭಕ್ತಾಪರಾಧಸಹಿಷ್ಣೋ ತ್ವದಧೀನಂ ದೀನ ದೂನಂ ಅನಾಥಂ ಶರಣಾಗತಮೇನಮುದ್ಧರೇ'ತಿ ವಿಜ್ಞಾಪನಕರ್ತ್ರ್ಯಾಣಾಂ" ಎಂದರೆ ಭಗವಂತನ ಮುಂದೆ ಭಕ್ತನಾದ ನನ್ನನ್ನು ನಿಲ್ಲಿಸಿ ಹೇ ಕೃಪಾಳೋ ಭಕ್ತವತ್ಸಲ ನಿನ್ನ ಅಧೀನನಾದ ದೀನನೂ ಅಜ್ಞನೂ ಅನಾಥನೂ ಆದ ಮೊರೆ ಹೊಕ್ಕ ಈ ಭಕ್ತನನ್ನು ಉದ್ಧರಿಸು ಎಂದು ವಿಜ್ಞಾಪಿಸಿಕೊಳ್ಳುವಂಥಾ ಎಂದು ಶ್ರೀಮಧ್ವಾಚಾರ್ಯರಿಗೆ ವಿಶೇಷಣ ಕೊಟ್ಟಿದ್ದಾರೆ. ಆ ಅರ್ಥವನ್ನೇ ಶರಣದ ಹೇಳುತ್ತದೆ. ೨) (ಭ) 'ಮೋಕ್ಷಃ ಶಾಂತಿಶ್ಚ ಶರಣಂ ನಿರ್ವಾಣಂ ಚಾಭಿಧೀಯತೇ' ಎಂದು ಅಭಿಧಾನವಿರುವುದರಿಂದ ಶರಣಂ–ಮೋಕ್ಷಂ ದದಾತೀತಿ ವಾ । ಶರಣಂ ಎಂದರೆ ಮೋಕ್ಷವನ್ನು, ದ–ಭಗವಂತನ ಅನುಗ್ರಹ ಕೊಡಿಸಿ ಕೊಡುವಂಥಾ ಎಂದೂ ಅರ್ಥ. 'ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ' ಎಂದು ತಾತ್ಪರ್ಯನಿರ್ಣಯದಲ್ಲಿ (೧ ಅ. ೭೮ ಶ್ಲೋ.) ಹೇಳಿದ ಪ್ರಕಾರ ವಾಯುವೂ ಮೋಕ್ಷದಾತರು. (ಹೆಚ್ಚಿನ ವಿವರಣೆಗೆ ೧೬ನೇ ಶ್ಲೋಕದ 185ನೇ ಖಂಡ ನೋಡಿರಿ.) ೩) (ಪುರಾ.) ಶರಣಾಗತರಾದ ಭಕ್ತರಿಗೆ, ಶರಣಂ–ರಕ್ಷಣೆಯನ್ನು, ಆಶ್ರಯವನ್ನು, ದ–ಕೊಡುವವರೇ ಎಂದರ್ಥ. (ಲೀ.) ಪುರಂದರದಾಸರು 'ಹನುಮನ ಮತವೇ ಹರಿಯ ಮತವು' ಎಂಬ ದೇವರನಾಮದಲ್ಲಿ ಹೇಳಿದಂತೆ ಇಂದ್ರಾಂಶಸಂಭೂತನಾದ ಅರ್ಜುನ ಭೀಮಸೇನನನ್ನು ಆಶ್ರಯಿಸಿದ, ಆದ್ದರಿಂದ ಶ್ರೀಕೃಷ್ಣನೂ ಅವನ ಪಕ್ಷವನ್ನು ವಹಿಸಿದ, ಅರ್ಜುನನಿಗೆ ಎಲ್ಲ ರೀತಿಯಿಂದಲೂ ಜಯವೂ ಆಯಿತು. ಅದೇ ಸೂರ್ಯಾಂಶಸಂಭೂತನಾದ ಕರ್ಣ ಭೀಮನ ಎದುರುಪಕ್ಷ ಸೇರಿದನು.

ಅದರಿಂದ ಕೃಷ್ಣನೂ ಅವನ ಕೈಬಿಟ್ಟ, ಕರ್ಣನಿಗೆ ಸೋಲೂ ಆಯಿತು. ಅಷ್ಟೇ ಅಲ್ಲದೆ ಅರ್ಜುನ ಭೀಮನ ಪಕ್ಷ ಸೇರಿದ್ದರಿಂದಲೇ ಸೌಗಂಧಿಕಾ ಪುಷ್ಪ ತರಲು ಹೋಗಿದ್ದಾಗ ಭೀಮನಿಗೆ ಹನುಮಂತನ ದರ್ಶನವಾದಾಗ ಭೀಮನು ಆ ಹನುಮಂತನನ್ನು ಅರ್ಜುನರಥದ ಪತಾಕೆಯಲ್ಲೇ (ಧ್ವಜದಲ್ಲೇ, ಇದ್ದು ಅವನಿಗೆ (ಅರ್ಜುನನಿಗೆ) ಜಯ ತಂದುಕೊಡಬೇಕೆಂದು ಕೇಳಿಕೊಂಡನು. ಹನುಮಂತ ಅದರಂತೆ ಅರ್ಜುನನ ರಥದ ಧ್ವಜದಲ್ಲಿದ್ದು ಅರ್ಜುನನಿಗೆ ಜಯ ತಂದುಕೊಟ್ಟ. ಅದರಂತೆ ಯಾರು ಯಾರು ಭೀಮನನ್ನು ಆಶ್ರಯಿಸಿದರೋ (ಉದಾ. ಏಕಚಕ್ರಾನಗರಿಯ ಜನರು) ಅವರೆಲ್ಲರಿಗೂ ಆಶ್ರಯಕೊಟ್ಟು ರಕ್ಷಿಸಿದ್ದು ಕಂಡುಬರುತ್ತದೆ. ಆದ್ದರಿಂದ ಶರಣಾಗತರಕ್ಷಕನೆಂಬ ಅರ್ಥವೂ ಹೊಂದುತ್ತದೆ.

ಊ) **ಉನ್ಮಥ್ಯ** ಎಂಬುದಕ್ಕೆ ತಾತ್ಪರ್ಯನಿರ್ಣಯವನ್ನು ಅನುಸರಿಸಿ ವಾಗ್ಯುದ್ಧದಲ್ಲೂ ಬಾಹುಯುದ್ಧದಲ್ಲೂ ಸೋಲಿಸಿ ಎಂದು ಅರ್ಥ ಮಾಡಬೇಕು. (ಕಕ) ಹತ್ವಾ, (ವಿ) ಭಂಕ್ತ್ವಾ–ಕೊಂದುಹಾಕಿ, (ಛ) ವಾಗ್ಯುದ್ಧೇ ಪರಾಜಿತ್ಯೇತ್ಯರ್ಥಃ। ವಾಗ್ಯುದ್ಧದಲ್ಲಿ ಪರಾಜಯಗೊಳಿಸಿ. (ಪುರಾ) ವಾಗ್ಯುದ್ಧದಲ್ಲಿ ಜಗತ್ಸತ್ಯತ್ವವನ್ನು ಸಮರ್ಥಿಸಿ ನಿಗ್ರಹಿಸಿ. ಋು) **ಅತಥ್ಯ ಮಿಥ್ಯಾತ್ವ-ವಚನ-ವಚನಾನ್**—ಇಲ್ಲಿ ಎರಡು 'ವಚನ' ಏಕೆ ಪ್ರಯೋಗಿಸಿದ್ದಾರೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ತಥ್ಯ ಎಂದರೆ ನಿಜ, ಸತ್ಯ, ಯಥಾರ್ಥವಾದುದು. ಅದಕ್ಕೆ ವಿರುದ್ಧವಾದದು ಅತಥ್ಯ–ಸುಳ್ಳು, ಅಸತ್ಯ, ನಿಜವಲ್ಲದು, ಯಥಾರ್ಥವಲ್ಲದ್ದು. ಮಿಥ್ಯಾ ಎಂದರೆ ಸತ್ಯವಲ್ಲದ್ದು, ಕಾಣಿಸಿದಂತೆಯೇ ನಿಜವಾಗಿ ಇಲ್ಲದ್ದು. ಹಗ್ಗದಲ್ಲಿ ಹಾವಿನ ಭ್ರಮೆ ಬರುವುದು, ಅದು 'ಮಿಥ್ಯಾ', ಸುಳ್ಳು, ನಿಜವಲ್ಲ. ಮರೀಚಿಕೆಯಲ್ಲಿ (ಬಿಸಿಲ್ಗುದುರೆಯಲ್ಲಿ) ಕಾಣುವ ನೀರೂ, ಕಪ್ಪೆಚಿಪ್ಪಿನಲ್ಲಿ ಕಾಣುವ ಬೆಳ್ಳಿಯೂ ಮಿಥ್ಯಾಜ್ಞಾನಗಳು. ಸೌಗಂಧಿಕವನದಲ್ಲಿದ್ದ ದೈತ್ಯರು 'ಜಗತ್ತು ನಮಗೆ ಇದ್ದಂತೆ ಕಂಡರೂ ವಸ್ತುತಃ ಸುಳ್ಳು, ಬ್ರಹ್ಮನೇ ಜಗತ್ತಾಗಿ ಕಾಣುತ್ತದೆ. ಆದ್ದರಿಂದ ಜಗತ್ತು ಮಿಥ್ಯಾ, ಎಂದು ಹೇಳುತ್ತಿದ್ದರು. 'ಮಿಥ್ಯಾತ್ವ-ವಚನ'–ಜಗತ್ತು ಮಿಥ್ಯಾ ಎಂಬ ಮಾತನ್ನೇ, ವಚನಾನ್–ಹೇಳುತ್ತಿದ್ದ, ವಾದಿಸುತ್ತಿದ್ದ ಅಥವಾ

ಪ್ರತಿಪಾದಿಸುತ್ತಿದ್ದ ಎಂದರ್ಥ. ಆದರೆ ಯಥಾರ್ಥವಾಗಿ ವಿಚಾರ ಮಾಡಿದರೆ 'ಜಗತ್ತು ಮಿಥ್ಯಾ' ಎಂಬ ಮಾತೇ (ಸಿದ್ಧಾಂತವೇ) 'ಅತಥ್ಯ'-ಸುಳ್ಳು, ಅಪದ್ಧ. ಇದನ್ನು ಎಲ್ಲಾ ಟೀಕಾಕಾರರೂ ತೋರಿಸಿದ್ದಾರೆ. ಆದಕಾರಣ ನಾನೂ ಸಹ ಇದನ್ನು ಆದಷ್ಟು ಸುಲಭವಾಗಿ-ಗ್ರಹಿಸುವಂತೆ-ವಿವರಿಸಲು ಪ್ರಯತ್ನಿಸಿದ್ದೇನೆ. (ಈ ವಿಚಾರವೇ ಸುಧಾದಿ ಗ್ರಂಥದಲ್ಲೂ ಖಂಡನತ್ರಯದಲ್ಲೂ ವಿಸ್ತಾರವಾಗಿ ಚರ್ಚಿಸಲ್ಪಟ್ಟಿದೆ. ಇಲ್ಲಿ ಹೇಳಿರುವುದು ಅತ್ಯಂತ ಸರಳ ವಿಷಯಗಳು.) ಆ ದೈತ್ಯರು 'ಜಗತ್ತೆಲ್ಲವೂ ಮಿಥ್ಯಾ' ಎನ್ನುತ್ತಾರಲ್ಲವೆ! ಅವರನ್ನು ಹೀಗೆ ಪ್ರಶ್ನಿಸಬೇಕು—'ನೀವು ಹೇಳುವ ಈ ಮಾತು ಎಂದರೆ ಜಗತ್ತೆಲ್ಲವೂ ಮಿಥ್ಯಾ ಎಂಬ ಮಾತು—ನಿಜವೋ? ಸುಳ್ಳೋ?' ಅವನು 'ಸುಳ್ಳು' ಎಂದರೆ ತನ್ನ ಮಾತೇ ಸುಳ್ಳು ಎಂದು ಅರ್ಥವಾಗುತ್ತದೆ. ಆದ್ದರಿಂದ ಹಾಗೆ ಹೇಳಲಾರ. ನಿಜ ಎಂದು ಹೇಳಿದರೆ ಪುನಃ ಅವನನ್ನು ಪ್ರಶ್ನಿಸುತ್ತೇವೆ—ನೀವು ಒಂದೇ ಸತ್ಯ ಎಂದು ಹೇಳುತ್ತೀರಲ್ಲ, ಈ ಮಾತೂ ಸತ್ಯ ಹೇಗಾಗುತ್ತದೆ? ಆದ್ದರಿಂದ 'ಬ್ರಹ್ಮ ಒಂದೇ ಸತ್ಯ' ಎಂಬ ಮಾತು ಸುಳ್ಳಾಯಿತಲ್ಲಾ!' ಹೀಗೆ ಅವರ ಸಿದ್ಧಾಂತವೇ ಅತಥ್ಯ-ಸತ್ಯಕ್ಕೆ ವಿರೋಧವಾದುದು; ಆದರೂ ಆ ದೈತ್ಯರು ಆ ವಾದವನ್ನೇ ಸಮರ್ಥಿಸುತ್ತಿದ್ದರು ಎಂಬುದು 'ಅತಥ್ಯ-ಮಿಥ್ಯಾತ್ವ ವಚನ-ವಚನಾನ್' ಎಂಬುದರ ಅರ್ಥ. ವಿಶ್ವಪತಿ ಟೀಕೆಯಲ್ಲಿ ಈ ವಿಶೇಷಣಕ್ಕೆ ಇನ್ನೊಂದು ರೀತಿಯಾಗಿಯೂ ಅರ್ಥಮಾಡುತ್ತಾರೆ. ಅತಥ್ಯಂ ಮಿಥ್ಯಾತ್ವ-ವಚನಮೇವ ವಚನಂ ಯೇಷಾಂ ತೇ ತಥೋಕ್ತಾಸ್ತಾನ್। ಜಗತ್ತೆಲ್ಲವೂ ಮಿಥ್ಯಾ ಎಂಬ ತಪ್ಪು (ಸುಳ್ಳು) ಸಿದ್ಧಾಂತವನ್ನೇ ಹೇಳುತ್ತಿದ್ದ (ವಾದಿಸುತ್ತಿದ್ದ) ಅವರನ್ನು—ಎಂದರ್ಥ. ಜಗತ್ತೆಲ್ಲವೂ ಸುಳ್ಳು (ಮಿಥ್ಯಾ) ಎಂದು ಅವರು ಹೇಳುವುದರಿಂದ ಈ ಮಾತೂ ಸಹ ಜಗತ್ತಿಗೆ ಸಂಬಂಧಿಸಿದ್ದಾದ್ದರಿಂದ ಈ ಸಿದ್ಧಾಂತವೂ ಕೂಡ 'ಮಿಥ್ಯಾ' ಅಥವಾ 'ಅತಥ್ಯ' ಎಂದು ಸಿದ್ಧವಾಗುತ್ತದೆ.

೩೦) ಉತ್ಪಥಸ್ಥಾನ್ — (ಛ.) ಪಥೋ ವೇದಮಾರ್ಗಾತ್ ಉತ್ಕ್ರಾಂತಃ ಉತ್ಪಥಃ-ವೇದಮಾರ್ಗವನ್ನು ಬಿಟ್ಟು ಅನ್ಯಮಾರ್ಗ, ಅವೈದಿಕ ಮಾರ್ಗ. 'ಋಕ್ಪೂರಬ್ಧೂಃ ಪಥಾಮಾನಕ್ಷೇ' (ಪಾ. ೫/೪/೭೪) ಎಂಬ ಸೂತ್ರದಂತೆ ನಕಾರಾಂತವಾದ ಪಥಿನ್ ಶಬ್ದವು ಸಮಾಸದಲ್ಲಿ

ಅಕಾರಾಂತವಾಗಿದೆ. ಉತ್ಪಥೇ ತಿಷ್ಠಂತೀತಿ ಉತ್ಪಥಸ್ಥಾಃ । ತಾನ್ । ದುರ್ಮಾರ್ಗರತರಾದ, (ವಿ.) ಅಧರ್ಮಮಾರ್ಗಾವಲಂಬಿಗಳಾದ, (ಕಕ.) ಉನ್ಮಾರ್ಗವರ್ತಿಗಳಾದ, (ಪುರಾ) ವೇದಮಾರ್ಗವನ್ನು ಬಿಟ್ಟು ಬೇರೆ ಮಾರ್ಗದಲ್ಲಿದ್ದ. ಎ) ಅನ್ಯಾನ್—ಬೇರೆಯವರನ್ನು ಎಂದರೆ ಹಿಂದೆ 'ಪ್ರೋಥಯಾಮಾಸಿಥ' ಎಂದು ಹೇಳಿದ್ದಕ್ಕೆ ಬೇರೆಯವರಾದ. ವಿ. ಟೀಕೆಯಲ್ಲಿ ಭಾರತದಲ್ಲಿ ದೈತ್ಯವಧೆ ಆದದ್ದು ಎರಡು ಕಡೆ ಹೇಳಿರುವುದರಿಂದ ಇಬ್ಬರೂ ಬೇರೆ ಬೇರೆ' ಎಂದು ಸೂಚಿಸುತ್ತಾರೆ. ಈ ವಿಷಯವನ್ನು ನಾವು ಮೊದಲೇ ಸ್ಪಷ್ಟಪಡಿಸಿದ್ದೇವೆ (ಖಂಡ 311).

ಏ) **ಯುಕ್ತಿಮಲ್ಲಿಕಾದಲ್ಲಿ ಹೇಳಿದ ಅಂಶಗಳು**—ಈ ಶ್ಲೋಕದಲ್ಲಿರುವ ಬಹ್ವೀಕೋಟೀರಟೀಕಃ ಎಂಬುದಕ್ಕೆ

'ಅಜೀತಯೇಽಹತಯೇ ಪವಸ್ವ ಸ್ವಸ್ತಯೇ'

ಎಂಬ ಶ್ರುತಿಯು (ಋ. ೯/೯೬/೪) ಸಮಾಖ್ಯೆ ಹೇಳಿದ್ದಾರೆ. ಈ ಶ್ರುತಿಯ ಅರ್ಥವನ್ನು ಹಿಂದೆಯೇ ಖಂಡ 271 (ಡ)ದಲ್ಲಿ ಹೇಳಿದೆ. ಉನ್ಮಾರ್ಗಪ್ರವರ್ತಕರಾದ ದೈತ್ಯರನ್ನು ಜಗತ್ಸತ್ಯತ್ವಸ್ಥಾಪನಮಾಡಿ ವಾದದಲ್ಲಿ ಪರಾಜಯಗೊಳಿಸಿ ಅವರು ಯುದ್ಧಕ್ಕೇ ಬಂದಕಾರಣ ಅವರನ್ನು ಯುದ್ಧದಲ್ಲೂ 'ಪ್ರೋಥಯಾಮಾಸಿಥ'–ನಾಶಮಾಡಿದಿ; ಅವರು 'ಬಹ್ವೀಃ ಕೋಟೀಃ' ಸಂಖ್ಯಾಕರಾಗಿದ್ದರು ಎಂಬುದು 'ಪವಸ್ವ' ಎಂಬುದರಿಂದ ಸೂಚಿತವಾಗುತ್ತದೆ. (೨) ಇದೇ ರೀತಿ 'ಉನ್ಮಥ್ಯಾಽತಥ್ಯಮಿಥ್ಯಾತ್ವವಚನ-ವಚನಾನ್' ಎಂಬುದಕ್ಕೆ

'ಸೋಮಃ ಪವತೇ ಜನಿತಾ ಮತೀನಾಮ್'

ಎಂಬ ಶ್ರುತಿಯು (೯/೯೬/೫) ಸಮಾಖ್ಯೆಯಾಗಿದೆ ಎನ್ನುತ್ತಾರೆ. ಸೋಮಃ–ಸೋಮಕುಲೋತ್ಪನ್ನನಾದ ಭೀಮಸೇನನು, ಮತೀನಾಂ ಜನಿತಾ–ಬುದ್ಧಿಗಳನ್ನು ಕೊಡುವವನು. ಭಕ್ತರಾದ ಸಜ್ಜನರಿಗೆ ಉಪದೇಶಾದಿಗಳ ಮೂಲಕ (ಹೆಚ್ಚೇಕೆ, ಕೇವಲ ಸ್ಮರಣೆಯಿಂದಲೇ) ವೇದಾದಿಶಾಸ್ತ್ರಗಳಲ್ಲಿ ಬುದ್ಧಿಯು ಪ್ರವರ್ತಿಸುವಂತೆ ಮಾಡುತ್ತಾರೆ. ಭಕ್ತರಲ್ಲಿರುವ ಸಂಶಯವಿಪರ್ಯಯ–ವಿಪರೀತಜ್ಞಾನಾದಿಗಳನ್ನೆಲ್ಲಾ ದೂರಮಾಡುತ್ತಾ, 'ಪವತೇ' ಎಲ್ಲಾ

ಕಡೆಯೂ ಅಡ್ಡಾಡುತ್ತಾರೆ ಎಂದು ಹೇಳಿದ್ದರಿಂದ ದೈತ್ಯರನ್ನು ಪರಾಜಯ-ಗೊಳಿಸಿದ ವಿಚಾರವು ಸೂಚಿತವಾಗಿದೆ.

315. ಭೀಮಪರವಾಗಿ ಅನ್ವಯ—(ಕ) (೧ನೇ ವಾಕ್ಯ) ಶರಣದ ಪ್ರಾಣ! ತ್ವಂ ೧) ಕುಟಿಲಕಟುಮತೀನ್ ೨) ಉತ್ಕಟಾಟೋಪಕೋಪಾನ್ ದ್ರಾಕ್ ಅಟೀಕಃ। (೨ನೇ ವಾಕ್ಯ) ಸತ್ವರತ್ವಾತ್ (ತಾನ್) ಗದಯಾ ಪ್ರೋಥಯಾಮಾಸಿಥ ಚ। (೩ನೇ ವಾಕ್ಯ) ತಥಾ i) ಅತಥ್ಯ–ಮಿಥ್ಯಾತ್ವ-ವಚನ-ವಚನಾನ್ ii) ಉತ್ಪಥಸ್ಥಾನ್ ಅನ್ಯಾನ್ iii) ಬಹ್ವೀಃ ಕೋಟೀಃ ಸತ್ವರತ್ವಾತ್ ಉನ್ಮಥ್ಯ, ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಯಚ್ಛಃ। (೪ನೇ ವಾಕ್ಯ) ತಸ್ಮೈ ತೇ ನಮಃ॥

(ಖ) ವಿಶ್ಲೇಷಣೆ—ಮೇಲೆ ಖಂಡ 311ರಲ್ಲಿ ತಿಳಿಸಿದಂತೆ ಭೀಮ ಪರವಾಗಿಯೂ ೧) ಶರಣದ, ೨) ಪ್ರಾಣ ಎಂಬ ಎರಡೂ ಸಂಬೋಧನೆಗಳು; ಆದರೆ ಅರ್ಥದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ. ವಿಶ್ವಪತಿತೀರ್ಥರು ತಮ್ಮ ಟೀಕೆಯಲ್ಲಿ 'ದ್ವಿವಾರಂ ಭಾರತೇ ಸೌಗಂಧಿಕಯಾತ್ರಾಯಾಂ ದೈತ್ಯವಧಃ ಪ್ರತಿಪಾದಿತಃ' ಎಂದರೆ ಭಾರತದಲ್ಲಿ ಸೌಗಂಧಿಕಯಾತ್ರಾಪ್ರಸಂಗದಲ್ಲೇ ಎರಡಾವರ್ತಿ ದೈತ್ಯವಧೆ ಮಾಡಿದ್ದು ಪ್ರತಿಪಾದಿತವಾಗಿರುವುದರಿಂದ ಪೂರ್ವಾರ್ಧ ವನ್ನೂ ಉತ್ತರಾರ್ಧವನ್ನೂ ಬೇರೆ ಬೇರೆಯಾಗಿಯೇ ಅನ್ವಯಿಸಬೇಕು ಎನ್ನು ತ್ತಾರೆ. ಪೂರ್ವಾರ್ಧದಲ್ಲಿ ಭಾರತದ ವನಪರ್ವದ ೧೪೮ ರಿಂದ ೧೫೫ರ ವರೆಗಿನ ಎಂಟು ಅಧ್ಯಾಯಗಳ ಕಥೆ ಸಂಗ್ರಹಿಸಲ್ಪಟ್ಟಿದೆ; ಇಲ್ಲಿ ಹತರಾದವರ ಸಂಖ್ಯೆ ಒಂದು ಲಕ್ಷ ಮಾತ್ರ; ಆದ್ದರಿಂದ ಪೂರ್ವಾರ್ಧದಲ್ಲಿರುವ 'ಬಹ್ವೀಃ ಕೋಟೀಃ' ಎಂಬುದನ್ನು ಉತ್ತರಾರ್ಧದಲ್ಲಿ ಅನ್ವಯಿಸಿಕೊಳ್ಳಬೇಕು; ಅಥವಾ ಕೋಟೀಃಗೆ ಗೌಣಾರ್ಥ ಹೇಳಬೇಕು. ಉತ್ತರಾರ್ಧದಲ್ಲಿ ವನಪರ್ವದ ೧೬೧ನೇ ಅಧ್ಯಾಯದ ಕಥೆ ಸಂಗೃಹೀತವಾಗಿದೆ. ಪೂರ್ವಾರ್ಧದಲ್ಲೂ ಉತ್ತರಾರ್ಧದಲ್ಲೂ ಅನ್ವಯದಲ್ಲಿ ತೋರಿಸಿದಂತೆ ಎರಡೆರಡು ವಾಕ್ಯಗಳಿವೆ. ೧ನೇ ವಾಕ್ಯದಲ್ಲಿರುವ ಅರೀನ್-ಗೆ ೧) ಕುಟಿಲಕಟುಮತೀನ್, ೨) ಉತ್ಕಟಾಟೋಪಕೋಪಾನ್ ಎಂದು ಎರಡು ವಿಶೇಷಣಗಳು. ಮೂರನೇ ವಾಕ್ಯದಲ್ಲಿರುವ ಅನ್ಯಾನ್-ಗೆ i) ಅತಥ್ಯ....ವಚನಾನ್, ii) ಉತ್ಪಥಸ್ಥಾನ್ iii) ಬಹ್ವೀಃ ಕೋಟೀಃ

ಎಂದು ಮೂರು ವಿಶೇಷಣಗಳು. 'ಸತ್ವರತ್ವಾತ್' ಎಂಬುದನ್ನು ಆವೃತ್ತಿ ಮಾಡಿಕೊಂಡು ಉತ್ತರಾರ್ಧದಲ್ಲೂ ಅನ್ವಯಿಸಬಹುದು. ಪೂರ್ವಾರ್ಧದಲ್ಲಿ ಫಲಾರಿಯುವರಂತೆಯೂ ಉತ್ತರಾರ್ಧದಲ್ಲಿ ಕಕ.ವಿ.ಯಂತೆಯೂ ಅರ್ಥ ಹೇಳಿದರೆ ಹೊಂದಿಕೆಯಾಗುತ್ತದೆ. ನಾಲ್ಕನೆಯ ವಾಕ್ಯ 'ತಸ್ಮೈ ತೇ ನಮಃ' ಎಂಬುದು ಭೀಮಸೇನನಿಗೆ ಬೀಳ್ಕೊಡುವಿಕೆಯಂತಿದ್ದು ಭೀಮಾವತಾರ-ಕಥೋಪಸಂಹಾರದ ದ್ಯೋತಕವಾಗಿದೆ. ಇಷ್ಟು ವಿಚಾರಗಳನ್ನು ಗಮನಿಸಿ ಈಗ ಮತ್ತೊಂದು ಬಾರಿ ಮೇಲೆ ಕೊಟ್ಟಿರುವ ಅನ್ವಯಕ್ರಮವನ್ನು ಓದಿ-ಕೊಂಡರೆ ಇಡೀ ಶ್ಲೋಕದ ಭಾವವು (ಅರ್ಥ ಹೇಳದಿದ್ದರೂ) ಕರತಳಾಮಲಕ-ದಂತೆ ತನಗೆ ತಾನೇ ಭಾಸವಾಗುವುದು. ಆದರೂ ನಾವು ಕ್ರಮಪ್ರಕಾರ ಅರ್ಥ ವನ್ನೂ ಭಾವಾರ್ಥವನ್ನೂ ಹೇಳುತ್ತೇವೆ.

ಗ) ಅನ್ವಯಾರ್ಥ—ಶರಣದ—i) ಜಗದ್ರಕ್ಷಕನಾದ ಶ್ರೀಹರಿಯನ್ನು ಕೊಡುವವರೇ, ಮತ್ತು ತೋರಿಸುವವರೇ! ii) ಸಂಸಾರದ ಬಂಧನಗಳಿಂದ ಬಿಡುಗಡೆರೂಪವಾದ ಮೋಕ್ಷವನ್ನು ಕೊಡುವವರೇ! ಅಥವಾ iii) ನಿಮ್ಮನ್ನು ಮೊರೆಹೊಕ್ಕವರಿಗೆ ಆಶ್ರಯಕೊಟ್ಟು ಅವರಿಗೆ ಸರ್ವವಿಧದಿಂದಲೂ ಜಯವನ್ನೂ ಗಳಿಸಿಕೊಟ್ಟು ಭಗವತ್ಪ್ರಸಾದವನ್ನೂ ಕೊಡಿಸುವವರೇ! ಪ್ರಾಣ–ಸಕಲ ಲೋಕಕ್ಕೂ ಜೀವನಪ್ರದರಾಗಿ ಸಕಲ ವ್ಯಾಪಾರಗಳನ್ನೂ ನಡೆಯಿಸುವ ಮುಖ್ಯಪ್ರಾಣನ ಅವತಾರಭೂತನಾದ ಹೇ ಭೀಮಸೇನ! (೧ನೇ ವಾಕ್ಯ) ತ್ವಂ–ನೀನು; ೧) ಕುಟಿಲ....ಮತೀನ್—ಕುಟಿಲ–ವಕ್ರವೂ (ನಿಷ್ಕಾರಣವಾಗಿ ದ್ವೇಷಮಾಡುವಂಥಾ ಎಂದು ಭಾವ), ಕಟು–ಕ್ರೂರವೂ (ಉಗ್ರವೂ) ಆದ ಮತೀನ್–ಬುದ್ಧಿಯುಳ್ಳಂಥಾ ; ೨) ಉತ್ಕಟಾ....ಕೋಪಾನ್—ಉತ್ಕಟ–ಅತಿಯಾದ (ಮಿತಿಮೀರಿದ), ಆಟೋಪ–ದರ್ಪವೂ ಗರ್ವವೂ, ಕೋಪಾನ್–ಕ್ರೋಧವೂ ಉಳ್ಳಂಥಾ; (ಬಹ್ವೀಃ ಕೋಟೀಃ–ಲಕ್ಷಸಂಖ್ಯಾಕರಾದ) ಅರೀನ್–ಗಂಧಮಾದನಪರ್ವತದಲ್ಲಿದ್ದ ಶತ್ರುಸ್ವರೂಪ ದೈತ್ಯರನ್ನು ; ದ್ರಾಕ್–ಬೇಗನೆ (ಎಂದರೆ ಅವರು ಸಿಂಹ-ವ್ಯಾಘ್ರಾದಿ ಕ್ರೂರಮೃಗಗಳಾಗಿಯೂ ಗಿಡ-ಮರ-ಪೊದೆ ಮೊದಲಾದ ರೂಪದಿಂದ ನಿಮ್ಮನ್ನು ತಡೆಗಟ್ಟಿದರೂ ನಿಮ್ಮ ತುಳಿತ

ದಿಂದಲೂ ಬಾಹುಗಳಿಂದಲೂ ಎದೆಯ ತಿವಿತದಿಂದಲೂ ಅವರನ್ನೆಲ್ಲಾ ನಾಶ ಮಾಡುತ್ತಾ ಬೇಗ ಬೇಗ ಕೊಳದ ಬಳಿಗೆ ಹೋಗಿ ಎಂದರ್ಥ) ; ಅಟೀಕಃ-ಆ ಕೊಳದ ರಕ್ಷಕರಾದ ಲಕ್ಷವುಂದಿಯು ಬಳಿಗೆ ಹೋದಿರಿ. (೨ನೇ ವಾಕ್ಯ) ಸತ್ವ-ರತ್ವಾತ್-ಅವರಿಗಿಂತ ಹೆಚ್ಚು ಪ್ರಭೆಯೂ ವೇಗವೂ ಉಳ್ಳವರಾದ್ದರಿಂದ ; ಗದಯಾ-೧. ಮಾತಿನಿಂದಲೂ, ೨. ಗದಾಧ್ಯಾಯುಧಗಳಿಂದಲೂ, ಪ್ರೋಥ-ಯಾಮಾಸಿಥ ಚ-ಪರಾಜಯವನ್ನೂಗೊಳಿಸಿ ಧ್ವಂಸವೂ ಮಾಡಿಬಿಟ್ಟಿರಿ. (೩ನೇ ವಾಕ್ಯ) ತಥಾ-ಹಾಗೆಯೇ (ಎಂದರೆ ಮೊದಲನೇ ಸಾರಿ ಸೌಗಂಧಿಕಾಹರಣಕ್ಕೆ ಯಾವ ರೀತಿ ದ್ರೌಪದಿಯಿಂದ ಪ್ರೇರಿತರಾಗಿದ್ದಿರೋ ಅದೇ ರೀತಿ ಎರಡನೆಯ ಸಾರಿಯೂ ಪಂಚವರ್ಣದ ಸೌಗಂಧಿಕಗಳನ್ನು ತನಗೆ ತಂದುಕೊಡಬೇಕೆಂದು ದ್ರೌಪದಿಯಿಂದ ಪ್ರಾರ್ಥಿತರಾದ್ದರಿಂದ ಎಂದರ್ಥ) ; i) ಅತಥ್ಯ....ವಚ-ನಾನ್—ಅತಥ್ಯ-ತಪ್ಪೇ ಆದ-(ಸುಳ್ಳೇ ಆದ), ಮಿಥ್ಯಾತ್ವ-ವಚನ-'ಪ್ರಪಂಚ ವೆಲ್ಲವೂ ಸುಳ್ಳು—ಜಗನ್ಮಿಥ್ಯಾ' ಎಂಬ ಮಾತನ್ನೇ (ಅಥವಾ ಸಿದ್ಧಾಂತವನ್ನೇ), ವಚನಾನ್-ಪ್ರತಿಪಾದಿಸುತ್ತಿದ್ದ (ಸಾಧಿಸುತ್ತಿದ್ದ) ; ii) ಉತ್ಪಥಸ್ಥಾನ್-ವೇದವಿರುದ್ಧವಾದ ದುರ್ಮಾರ್ಗಾವಲಂಬಿಗಳಾಗಿದ್ದ ; ಅನ್ಯಾನ್-(ಹಿಂದೆ ಗಂಧಮಾದನಪರ್ವತದಲ್ಲಿದ್ದವರಿಗಿಂತಲೂ) ಬೇರೆಯವರಾದ ; iii) ಬಹ್ವೀಃ ಕೋಟೀಃ-ಮುನ್ನೂರು ಕೋಟಿ ಸಂಖ್ಯಾಕರಾದ ಮಣಿಮಂತಾದಿ ದೈತ್ಯರನ್ನು ; ಸತ್ವರತ್ವಾತ್-(ಗು.ಸಾ. ಟೀಕೆಯಲ್ಲಿ ತೋರಿಸಿದಂತೆ ನಾರಾಯಣಾಶ್ರಮ ಅಥವಾ ಬದರಿಕಾಶ್ರಮದಿಂದ ಒಂದು ಲಕ್ಷದ ಹದಿನಾರು ಸಾವಿರ ಯೋಜನ ದೂರದಲ್ಲಿದ್ದ ಮೇರುಪರ್ವತವನ್ನು ಸೇರಿ, ಅಲ್ಲಿಂದ ಸುಮಾರು ಹದಿನಾರು ಸಾವಿರ ಯೋಜನ ದೂರದಲ್ಲಿದ್ದ ಸೌಗಂಧಿಕವನವನ್ನೂ) ಬಹುಬೇಗ ತಲುಪಿ (ಲ್ಯಬ್ಲೋಪನಿಮಿತ್ತಾ ಪಂಚಮೀ) ; ಉನ್ಮಥ್ಯ-ಅವರನ್ನು ವಾದ-ದಲ್ಲಿಯೂ ಶಸ್ತ್ರಾಸ್ತ್ರಯುದ್ಧದಲ್ಲಿಯೂ ನಿಗ್ರಹಿಸಿ ಮತ್ತು ಸಂಹಾರವೂ ಮಾಡಿ ; ಸ್ವಪ್ರಿಯಾಯೈ-ನಿಮ್ಮ ಪ್ರಿಯಪತ್ನಿಯಾದ ದ್ರೌಪದೀದೇವಿಗೆ ; ಪ್ರಿಯತಮಕುಸುಮಂ-ಅತ್ಯಂತ ಪ್ರಿಯವಾದ ಹೊಂಗೆಂಪು ಬಣ್ಣದ ಮತ್ತು ಪಂಚವರ್ಣದ (ಎರಡೂ ವಿಧ) ಹೂವುಗಳನ್ನು (ಕುಸುಮಂ-ಎಂಬುದು

ಜಾತ್ಯೇಕವಚನ) ; ಪ್ರಾಯಚ್ಛ:-ತಂದುಕೊಟ್ಟೆ. (೪ನೇ ವಾಕ್ಯ) ತಸ್ಮೈ-ಅಂಥಾ ಮಹಾನುಭಾವನಾದ; ತೇ-ನಿನಗೆ; ನಮಃ-ಕಡೆಯ ನಮಸ್ಕಾರ.

ಘ) **ಭಾವಾರ್ಥ**—ಹೇ ಭೀಮಸೇನ! ನೀನು ಸಾಮಾನ್ಯನಲ್ಲ, ಜಗತ್ತಿನಲ್ಲಿರುವ ಸಕಲ ಪ್ರಾಣಿಗಳಿಗೂ— ದೇವರ್ಷಿಗಂಧರ್ವಮನುಷ್ಯರಿಂದಾ-ರಂಭಿಸಿ ಕ್ರಿಮಿಕೀಟಸಸ್ಯಾದಿ ಸಕಲಚೇತನವರ್ಗಕ್ಕೂ—ಜೀವನಾಧಾರಭೂತ ನಾದ ಮತ್ತು ಸಕಲವಿಧವಾದ ಚಲನ-ವಲನಗಳಿಗೂ ಪ್ರೇರಕನಾದ (ಇದು ಪ್ರಾಣ ಶಬ್ದಾರ್ಥ) ಮುಖ್ಯಪ್ರಾಣನ ಅಮೋಘವಾದ ದ್ವಿತೀಯಾವತಾರವಾ-ಗಿದ್ದೀಯೆ. ನಿನ್ನನ್ನು ಯಾವ ಭಕ್ತರು, ಯಾವ ವೈಷ್ಣವರು ಮೊರೆಹೊಗು ವರೋ ಅವರಿಗೆ ನೀನು ಸಕಲ ವಿಧದಿಂದಲೂ ಜಯವನ್ನು ಕೊಡುವಿಯಲ್ಲದೆ ಪಾರತ್ರಿಕಸುಖಸ್ವರೂಪವಾದ ಮೋಕ್ಷವನ್ನೂ ಕೊಡಿಸುವಿ. ಮೋಕ್ಷವು ವಿಷ್ಣುವಿನ ಅತ್ಯರ್ಥಪ್ರಸಾದವಿಲ್ಲದೇ ದೊರಕದು. ಆದಕಾರಣ ಕಣ್ಣಿಗೇ ಕಾಣಿಸಿದ ಆ ವಿಷ್ಣುವಿನ ಸ್ವರೂಪವನ್ನು ಪ್ರಪ್ರಥಮವಾಗಿ ಸಚ್ಛಾಸ್ತ್ರಾಧ್ಯಯನ ದಿಂದ ತಿಳಿಸಿಕೊಟ್ಟು ಅವನಲ್ಲಿ ಜ್ಞಾನಭಕ್ತ್ಯಾದರಗಳು ಹುಟ್ಟುವಂತೆ ಮಾಡುವಿ. ಶ್ರವಣಮನನನಿಧಿಧ್ಯಾಸನಗಳಿಂದ ಜ್ಞಾನಭಕ್ತಿವೈರಾಗ್ಯಗಳು ಪರಿಪಕ್ವವಾಗಲು ಆ ವಿಷ್ಣುವಿನ ಸಾಕ್ಷಾತ್ಕಾರವನ್ನು ಕೊಡಿಸುವಿ. ಅಪರೋಕ್ಷಾ-ನಂತರ ಉತ್ಕಟವಾದ ಜ್ಞಾನಭಕ್ತಿಗಳು ಸಿದ್ಧಿಸಲು ವಿಷ್ಣುವಿನ ಅತ್ಯರ್ಥಪ್ರಸಾದ ವನ್ನು ಕೊಡಿಸಿ ಮೋಕ್ಷಕ್ಕೆ ಕಳುಹಿಸುವಿ. ಇದಕ್ಕೆ ಪ್ರತಿಯಾಗಿ ನಿನ್ನನ್ನೂ ಶ್ರೀಹರಿಯನ್ನೂ ಯಾರು ದ್ವೇಷಿಸುವರೋ, ಯಾರು ನಿನ್ನನ್ನು ಪ್ರತಿಸ್ಪರ್ಧಿ-ಸುವರೋ ಅವರನ್ನು ಎಲ್ಲ ವಿಧದಿಂದಲೂ ನಾಶಮಾಡಿ ಗದಾಪ್ರಹಾರ ಮಾಡಿ ಅವರನ್ನು ಅಂಧಂತಮಸ್ಸಿಗೆ ಕಳುಹಿಸುವಿ. (ಇದಿಷ್ಟೂ ಶರಣದ ಎಂಬುದರ ನಾನಾರ್ಥ ವಿವರಣೆ.) ಇದಕ್ಕೆ ಸೌಗಂಧಿಕಾಹರಣದ ಎರಡು ಪ್ರಸಂಗಗಳೂ ಉತ್ತಮ ನಿದರ್ಶನಗಳಾಗಿವೆ.

ಹೇ ಭೀಮಸೇನ! ಮಹಾಬಾಹೋ! ನೀನು ಒಂದು ಸಲ ದ್ರೌಪದಿ ಯೊಡನೆ ಏಕಾಂತದಲ್ಲಿದ್ದಾಗ ಒಂದು ಹೊಂಗೆಂಪು ಬಣ್ಣದ ಕಮಲವು ಗರುಡನ ರೆಕ್ಕೆಯಿಂದ ಹಾರಿಬಂದು ದ್ರೌಪದಿಯ ಎದುರಿಗೆ ಬಿತ್ತು. ಅದಕ್ಕೆ ಆಸೆಪಟ್ಟ ಅವಳು ನಿನಗೆ ಅಂತಹವೇ ಇನ್ನೂ ಕೆಲವು ಪುಷ್ಪಗಳನ್ನು ತಂದುಕೊಡಲು

ಹೇಳಿದಳು. ಸರ್ವಜ್ಞಳಾದ ಆ ದೇವಿಯು ಆ ಪುಷ್ಪಗಳ ರಕ್ಷಕರಾಗಿದ್ದ ದೈತ್ಯರ ನಿಧನಕ್ಕಾಗಿಯೇ ಈ ಪುಷ್ಪಗಳನ್ನು ಬಯಸಿದಳೇ ವಿನಾ 'ತ್ರಿಭುವನ-ಮಹಿತ'ಳಾದ ಆ ದೇವಿಗೆ ಈ ಕ್ಷುಲ್ಲಕ ಪುಷ್ಪಗಳಿಂದೇನಾಗಬೇಕಿತ್ತು? (ಸೀತಾ-ದೇವಿ ಜಿಂಕೆಯ ವೇಷ ತಾಳಿ ಬಂದ ಮಾರೀಚನ ವಧೆಗಾಗಿ ಆ ಜಿಂಕೆ ಬೇಕೆಂದು ಹೇಗೆ ಆಸೆಪಟ್ಟಳೋ ಇದೂ ಹಾಗೆಯೇ.) ಆ ಕಮಲದ ಪುಷ್ಪಗಳು ಗಂಧ-ಮಾದನ ಪರ್ವತದ ಶಿಖರದ ಮೇಲಿದ್ದ ಕುಬೇರನ ಒಂದು ವನದಲ್ಲಿದ್ದ ಕೊಳದಲ್ಲಿ ಬೆಳೆದಿದ್ದುವು. ಆ ಗಂಧಮಾದನ ಪರ್ವತದ ಶಿಖರವು ನೀವು ವಾಸವಾಗಿದ್ದ ನರನಾರಾಯಣಾಶ್ರಮಕ್ಕೆ ಹತ್ತುಸಾವಿರ ಯೋಜನ ಎತ್ತರದಲ್ಲಿತ್ತು. ಆದರೂ ಸಹ ನೀನು ಅಲ್ಲಿಗೆ ಕ್ಷಣಮಾತ್ರದಲ್ಲಿ (ದ್ರಾಕ್) ಏರಿಹೋದಿ. ಮನುಷ್ಯಮಾತ್ರರಿಗೆ ಅತ್ಯಂತ ದುರ್ಗಮವಾಗಿದ್ದ ಆ ಸ್ಥಳದಲ್ಲಿ ನಿನ್ನನ್ನು ಕಂಡ ಆ ವನಪಾಲಕರು ಆಶ್ಚರ್ಯಪಟ್ಟು ಅವರಲ್ಲೇ ಕೆಲವರು ಸಿಂಹ ಹುಲಿ ಕರಡಿ ಮೊದಲಾದ ಕ್ರೂರಮೃಗಗಳಾಗಿ ನಿನ್ನನ್ನು ಸಾಯಿಸಲು ಬಂದರು. ಮತ್ತೆ ಕೆಲವರು ದೊಡ್ಡದೊಡ್ಡ ಅಭೇದ್ಯವಾದ ಗಿಡಮರಗಳಾಗಿಯೂ ಅಚ್ಛೇದ್ಯವಾದ ವಿಷಮಯವಾದ ಮುಳ್ಳುಬಳ್ಳಿಗಳ ಪೊದೆಗಳಾಗಿಯೂ ನಿನ್ನನ್ನು ಅಡ್ಡಗಟ್ಟಲು ಹವಣಿಸಿದರು. ಆದರೆ, ಹೇ ದೇವ, ನೀನು ಯಾರಿಗೂ ಉಪ್ಪು ಹಾಕಲಿಲ್ಲ. ಹಾಗೆ ಅಡ್ಡಬಂದ ಅವರೆಲ್ಲರನ್ನೂ ಕಾಲುತುಳಿತದಿಂದಲೂ ಎದೆಯ ತಿವಿತ-ದಿಂದಲೂ ಕೈಯಿಂದಲೇ ಬಡಚುತ್ತಲೂ ಅವರನ್ನೆಲ್ಲ ಧ್ವಂಸಮಾಡುತ್ತ ಮುಂದೆಸಾಗಿ ಸರೋವರದ ಬಳಿಗೂ ಬಂದೇಬಿಟ್ಟೆ (ಅಟೀಕಃ). ಕೊಳದಲ್ಲಿ ಇಳಿಯುವುದಕ್ಕೆ ಹೋಗಲು ಆ ವನಪಾಲಕರೆಲ್ಲ ಹಿಂಡುಹಿಂಡಾಗಿ ನಿನ್ನನ್ನು ಮುತ್ತಿಕೊಂಡರು. ಅವರು ಒಬ್ಬರಲ್ಲ, ಇಬ್ಬರಲ್ಲ-ನೂರಲ್ಲ, ಸಾವಿರವಲ್ಲ; ಒಂದು ಲಕ್ಷ ಜನರು ನಿನ್ನನ್ನು ಮುತ್ತಿಗೆ ಹಾಕಿದರು. ಅವರೆಲ್ಲ ಶಿವನ ಭಕ್ತರು, ಶಿವಸರ್ವೋತ್ತಮತ್ವ ಸಾಧಕರಾಗಿದ್ದು ಶಿವನ ವರದಿಂದಲೇ ಅವಧ್ಯರೂ ಆಗಿ-ದ್ದರು. ಶಿವನ ಸಖನಾದ ಕುಬೇರನನ್ನು ಆಶ್ರಯಿಸಿಕೊಂಡು ಯಾರನ್ನೂ ಲಕ್ಷಿಸದೆ ಅಲ್ಲಿ ವಾಸವಾಗಿದ್ದರು. ಮೊದಲು ಅವರಿಗೂ ನಿನಗೂ ಉಗ್ರವಾದ ವಾಗ್ಯುದ್ಧ ನಡೆಯಿತು. ಅವರೆಲ್ಲ ಶಿವಸರ್ವೋತ್ತಮತ್ವವನ್ನು ಸ್ಥಾಪಿಸಲು ಎಷ್ಟೆಷ್ಟೋ ಹೆಣಗಾಡಿದರು. ಸರ್ವಶಾಸ್ತ್ರವಿಶಾರದನೂ ಮಹಾಪ್ರತಿಭಾಶಾಲಿಯೂ

ಆದ ನೀನು ಅವರ ವಾದಗಳನ್ನೆಲ್ಲಾ ನಿರಾಕರಣೆಮಾಡಿ (ಗದಯಾ-ವಾಚಾ, ಗದಿ ವ್ಯಕ್ತಾಯಾಂ ವಾಚಿ ಎಂಬ ಧಾತುವಿನ ರೂಪ) ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪನೆ ಮಾಡಿದಿ (ಪ್ರೋಥಯಾಮಾಸಿಥ). ಅದರಿಂದ ಮತ್ತಷ್ಟು ಕ್ರುದ್ಧರಾದ ಅವರು ಸೋಲನ್ನು ಒಪ್ಪಿಕೊಳ್ಳುವುದಕ್ಕೆ ಪ್ರತಿಯಾಗಿ (ಕುಟಿಲಕಟುಮತೀನ್) ಆಗ್ರಹದಿಂದಲೂ ಛಲದಿಂದಲೂ ಕ್ರೋಧದಿಂದಲೂ (ಉತ್ಕಟಾಟೋಪ-ಕೋಪಾನ್) ನಿನ್ನೊಡನೆ ಯುದ್ಧಕ್ಕೆ ಬಂದರು. ನಿನ್ನನ್ನು ಎದುರಿಸಿ ಬದುಕಬಲ್ಲ ಗಂಡುಗಳೆಲ್ಲಿ ಬರಬೇಕು ! ಸರಿ, ಆ ಲಕ್ಷಮಂದಿಯೂ ನಿನ್ನ ಗದಾಪ್ರಹಾರಕ್ಕೆ ಬಲಿಯಾಗಿ ಧ್ವಂಸವಾಗಿ ಹೋದರು. ಬಳಿಕ ನೀನು ಸರೋವರದಲ್ಲಿಳಿದು ಸ್ನಾನಮಾಡಿ ಬೇಕಾದಷ್ಟು ಕಮಲಗಳನ್ನು ಕಿತ್ತುಕೊಂಡು ನಿನ್ನ ಪ್ರೇಯಸಿ ದ್ರೌಪದಿಗೆ ತಂದುಕೊಟ್ಟೆ.

ಇದಾಗಿ ಕೆಲವು ದಿವಸಗಳು ಕಳೆದ ಬಳಿಕ ಪಂಚವರ್ಣದ ಮತ್ತೊಂದು ಸೌಗಂಧಿಕಪುಷ್ಪ ಗಾಳಿಯಿಂದ ಹಾರಿಬಂದು ದ್ರೌಪದಿಯ ಮುಂದೆ ಬಿತ್ತು. ಹಿಂದಿನ ಪುಷ್ಪಗಳಿಗಿಂತ ಈ ಪುಷ್ಪ ಪಂಚವರ್ಣದ್ದಾಗಿದ್ದುದರಿಂದ ಆ ನೆಪ ಮಾಡಿ ಅಂಥಾ ಪುಷ್ಪಗಳನ್ನೇ ತನಗೆ ತಂದುಕೊಡಬೇಕೆಂದು ಆ ಪ್ರಿಯಕಾಂತೆಯು ನಿನ್ನನ್ನು ಕೇಳಿದಳು. ಈ ಪುಷ್ಪಗಳು ಕುಬೇರನ ಅಲಕಾಪುರಿಯ ಹೂದೋಟದಲ್ಲಿದ್ದ ಕೊಳದಲ್ಲಿದ್ದುವು. ಕುಬೇರನ ನಗರಿಯೇ ಮೇರುಪರ್ವತದ ಮೇಲ್ಭಾಗ-ದಲ್ಲಿತ್ತು. ಆ ಭಾಗವೇ ನೀವು ವಾಸವಾಗಿದ್ದ ನರನಾರಾಯಣಾಶ್ರಮದಿಂದ ಒಂದು ಲಕ್ಷ ಹದಿನಾರು ಸಾವಿರ ಗಾವುದ ದೂರದಲ್ಲಿತ್ತು. ಅಲ್ಲಿಂದ ಆ ತೋಟಕ್ಕೆ ಹೋಗಲು ಪುನಃ ಹದಿನಾರು ಸಾವಿರ ಗಾವುದ ದೂರ ನಡೆಯ ಬೇಕಾಗಿತ್ತು. ಹೇ ಸ್ವಾಮಿ, ಭೀಮಸೇನ, ನೀನು ಇಷ್ಟು ದೂರವನ್ನು ಅನಾಯಾಸವಾಗಿ ಬಹುವೇಗದಿಂದ ದಾಟಿ ಆ ಕೊಳದ ಬಳಿಗೆ ಬಂದು ಸೇರಿ (ಸತ್ವರತ್ವಾತ್–ಲ್ಯಬ್‌ಲೋಪನಿಮಿತ್ತ ಪಂಚಮೀ) ನಿನ್ನ ಪೌಂಡ್ರವೆಂಬ ಶಂಖವನ್ನು ಊದಿದಿ.

ಆ ವನಪಾಲಕರಾದ ಯಕ್ಷರಾಕ್ಷಸಗಂಧರ್ವರೆಲ್ಲರೂ ನಿನ್ನ ಶಂಖದ ಧ್ವನಿಯನ್ನು ಕೇಳಿ ದಿಗ್ಭ್ರಾಂತರಾಗಿ ಗದಾಪರಿಘನಿಸ್ತ್ರಿಂಶಶೂಲಶಕ್ತಿಪರಶ್ವಾದಿ ಆಯುಧಗಳನ್ನು ಹಿಡಿದುಕೊಂಡು ಬಂದರು. ಅವರಿಗೂ ನಿನಗೂ ಮೊದಲು

ವಾಗ್ಯುದ್ಧವಾಯಿತು. ಅವರೆಲ್ಲರೂ ಜಗನ್ಮಿಥ್ಯಾತ್ವವಾದಿಗಳೂ ಶಿವದೀಕ್ಷೆಯುಳ್ಳವರೂ ಆಗಿದ್ದರು. ವಾದದಲ್ಲಿ ಅವರೆಲ್ಲರನ್ನೂ ನೀನು ಪರಾಜಯಗೊಳಿಸಿದ ಬಳಿಕ ಅವರ ಮುಖ್ಯಸ್ಥನಾದ ಮಣಿಮಂತನೂ ಬಂದನು. ನೀನು ಅವನನ್ನೂ ವಾದದಲ್ಲಿ ಸೋಲಿಸಿದಿಯಲ್ಲದೆ ಅವರೊಡನೆ ಶಸ್ತ್ರಾಸ್ತ್ರಯುದ್ಧವನ್ನೂ ಮಾಡಿ-ಅಗಸ್ತ್ಯರ ಶಾಪಕ್ಕೆ ಗುರಿಯಾಗಿದ್ದ ಮಣಿಮಂತನನ್ನೂ ಅವನ ಮುನ್ನೂರು ಕೋಟಿ ಸೈನಿಕರನ್ನೂ ನುಚ್ಚುನುರಿಮಾಡಿಬಿಟ್ಟೆ. ಆಮೇಲೆ ಆ ಸರೋವರದಲ್ಲಿ ಬೆಳೆದಿದ್ದ ಹೂವುಗಳನ್ನು ತಂದು ನಿನ್ನ ಪ್ರಿಯಮಾನಿನಿ ದ್ರೌಪದಿಗೆ ಕೊಟ್ಟೆಯಲ್ಲವೇ. ಹೇ ಕುರುಕುಲಶಿಖಾಮಣಿಯೇ, ಇಂಥಾ ಪರಾಕ್ರಮ, ಇಂಥಾ ಸಾಹಸ, ಇಂಥಾ ಯುದ್ಧ ಮಾಡಬಲ್ಲ ಜಗಜಟ್ಟಿಗಳು ಬೇರೆ ಎಲ್ಲಿ ಬರಬೇಕು. ನಿನ್ನ ಭುಜಬಲಕ್ಕೂ ನಿನ್ನ ಸಾಹಸಕ್ಕೂ ನಿನ್ನ ಶೌರ್ಯ-ವೀರ್ಯಗಳಿಗೂ ಅನಂತ ಸಾಷ್ಟಾಂಗ ನಮಸ್ಕಾರಗಳು. ನಿನ್ನ ಪರಾಕ್ರಮವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ. ನನ್ನ ವಾಕ್‌ಶುದ್ಧ್ಯರ್ಥ ಹೀಗೆ ಏನೋ ಅಲ್ಲೊಂದು ಇಲ್ಲೊಂದು ನಿನ್ನ ಪರಾಕ್ರಮವನ್ನು ಸ್ಮರಿಸಿ ನಿನ್ನ ಮಹಿಮೆಯ ವರ್ಣನೆಯನ್ನು ಇಲ್ಲಿಗೇ ಮುಗಿಸುವೆನು. ನಿನ್ನ ಕೃಪಾದೃಷ್ಟಿ ನನ್ನ ಮೇಲೆ ಸದಾ ಇರಲೆಂದು ಇದೋ ಕೈಮುಗಿದು ಕೇಳಿಕೊಳ್ಳುವೆನು— ನಮಸ್ತೇ ನಮಸ್ತೇ.

316. ಭೀಮನ ಶುದ್ಧ ಭಾಗವತಧರ್ಮ ಪ್ರತಿಪಾದನೆ—(ಕ)

ಪೀಠಿಕೆ—ಭೀಮಸೇನಸಂಬಂಧಿ ಏಳು ಶ್ಲೋಕಗಳ ಅರ್ಥ-ತಾತ್ಪರ್ಯಗಳನ್ನು ವಿವರಿಸಿ ಮುಗಿಸಿದ ಬಳಿಕ ಈ ಏಳು ಶ್ಲೋಕಗಳ ರಚನೆಯಲ್ಲಿ ಮುಖ್ಯವಾಗಿ ಯಾವ ಉದ್ದೇಶ—ಯಾವ ಧ್ಯೇಯ ಅಡಗಿದೆಯೋ ಅವನ್ನು ನಿರೂಪಣೆ ಮಾಡುವುದು ಈಗ ಕ್ರಮಪ್ರಾಪ್ತವಾಗಿದೆ. ಹನೂಮನ್ಮಹಿಮೆ ಹೇಳುವಾಗ ಹನುಮಚ್ಚರಿತ್ರೆ ನಿರೂಪಣೆ ಮಾಡುವುದಕ್ಕಿಂತಲೂ ಹೆಚ್ಚಾಗಿ ಅವನ ಅಪೂರ್ವಸೇವಾಮಹಿಮೆಯನ್ನು ವರ್ಣಿಸುವುದೇ ಹೇಗೆ ಕವಿಕುಲತಿಲಕರ ಮುಖ್ಯಧ್ಯೇಯವಾಗಿತ್ತೋ ಇಲ್ಲೂ ಅದೇ ರೀತಿ ಕವಿಗಳ ಮುಖ್ಯಧ್ಯೇಯ ಭೀಮನ ಚರಿತ್ರೆಯಲ್ಲ, ಪ್ರತಿಯಾಗಿ ಭೀಮಸೇನನು ಶುದ್ಧ ವೈಷ್ಣವಧರ್ಮವನ್ನು

ಹೇಗೆ ಅತ್ಯಂತ ನಿಷ್ಠೆಯಿಂದ ಪಾಲಿಸಿದನೆಂಬುದನ್ನು ತಿಳಿಸುವುದೇ ಅವರ ಮುಖ್ಯಧ್ಯೇಯವಾಗಿದೆ. ಆದಕಾರಣ ಈಗ ಆ ವಿಷಯಕ್ಕೇ ಹೋಗೋಣ.

ಖ) ತಪ್ಪು ಭಾವನೆಗಳೇ ಬೆಳೆದಿವೆ—ಹನುಮಂತ ಶ್ರೀರಾಮ-ಚಂದ್ರನ ಅವಿಚ್ಛಿನ್ನ ಏಕಾಂತಭಕ್ತಾಗ್ರಣಿಯೆಂಬ ಪ್ರಸಿದ್ಧಿ ಜನಜನಿತವಾಗಿ ಹೇಗೆ ರೂಢಿಯಲ್ಲಿ ನೆಲೆಸಿಬಿಟ್ಟಿದೆಯೋ ಹಾಗೆ ಭೀಮಸೇನನ ಯಥಾರ್ಥ ಮಹಿಮೆ ಜನಸಾಮಾನ್ಯರಲ್ಲಿ ಪ್ರಸಿದ್ಧಿಗೆ ಬಂದಿಲ್ಲ. ಏಕೆಂದರೆ ಜನಶ್ರುತಿಯಲ್ಲೂ ಸಂಸ್ಕೃತಪ್ರಾಕೃತಾದಿ ಅನೇಕ ಭಾಷೆಗಳಲ್ಲಿ ರಚಿತವಾದ ಕಾವ್ಯ-ನಾಟಕಾದಿ ಸಾಹಿತ್ಯಕೃತಿಗಳಲ್ಲೂ ಭೀಮನ ಸ್ವರೂಪವೇ ಅಸ್ತವ್ಯಸ್ತವಾಗಿ ಚಿತ್ರಿಸಲ್ಪಟ್ಟು ಕಲುಷಿತವಾಗಿ ಹೋಗಿರುವುದರಿಂದ ಭೀಮನ ಬಗ್ಗೆ ಅನೇಕ ತಪ್ಪು ಭಾವನೆಗಳೇ ಬೆಳೆದುಹೋಗಿವೆ. ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಹೇಳಿರುವ ಪ್ರಮೇಯಾಂಶಗಳನ್ನು ಓದಿ ಅರ್ಥಮಾಡಿಕೊಳ್ಳದೇ ಹೋದರೆ ಭೀಮನ ವಾಸ್ತವಿಕಸ್ವರೂಪ ತಿಳಿಯುವುದು ಸರ್ವಥಾ ದುಸ್ತರವೇ ಆಗಿದೆ. ಅದೇ ರೀತಿ ವಾಯುಸ್ತುತಿಯ ಈ ಏಳು ಶ್ಲೋಕಗಳಲ್ಲಿ ಹೇಳಿರುವ ಗುಣವೈಶಿಷ್ಟ್ಯಗಳು ಅರ್ಥವಾಗಬೇಕಾದರೂ ತಾತ್ಪರ್ಯನಿರ್ಣಯೋಕ್ತ ಆ ಪ್ರಮೇಯಾಂಶಗಳ ಹಿನ್ನೆಲೆ ಬೇಕೇಬೇಕು. ಆದ್ದರಿಂದ ಭೀಮನ ವಾಸ್ತವಿಕಸ್ವರೂಪವು ಶ್ರೀ-ಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹೇಗೆ ಚಿತ್ರಿತವಾಗಿದೆಯೆಂಬುದನ್ನು ಮೊದಲು ವಿಶದಪಡಿಸಿ ಆ ಅಂಶಗಳು ವಾಯುಸ್ತುತಿಯ ಭೀಮಪರವಾದ ಏಳು ಶ್ಲೋಕಗಳಲ್ಲಿ ಎಲ್ಲೆಲ್ಲಿ ಹೇಗೆ ನಿರೂಪಿಸಲ್ಪಟ್ಟಿವೆಯೆಂಬುದನ್ನು ಸೂಚಿಸಿ ಭೀಮಾವತಾರದ ವಿಚಾರವನ್ನು ಮುಗಿಸುವೆನು.

ಈಗ ಇಲ್ಲಿ (ಈ ಖಂಡದಲ್ಲಿ) ಮುಂದೆ ಹೇಳುವ ವಿಚಾರಗಳೆಲ್ಲವೂ ಶ್ರೀ-ಮನ್ಮಹಾಭಾರತತಾತ್ಪರ್ಯನಿರ್ಣಯದ ಎರಡನೇ ಅಧ್ಯಾಯದಲ್ಲಿ ಅಲ್ಲಲ್ಲೇ ಮಧ್ಯೆಮಧ್ಯೆಯೂ ಹದಿನೆಂಟನೇ ಅಧ್ಯಾಯದ ಆರಂಭದ ಸುಮಾರು ಮೂವತ್ತು ಶ್ಲೋಕಗಳಲ್ಲೂ ಹೆಚ್ಚು ವಿಶದವಾಗಿ ನಿರೂಪಿಸಲ್ಪಟ್ಟಿವೆ. ನನ್ನ ನಿರೂಪಣೆ ಸಂಕ್ಷಿಪ್ತವೂ ಸಂಗ್ರಹವೂ ಆಗಿರುವುದಲ್ಲದೆ ವಿವರಣೆಯ ಕ್ರಮವೂ ಬೇರೆಯೇ ಆಗಿದೆ. ಅಲ್ಲದೆ ಗ್ರಂಥವಿಸ್ತರಭಯದಿಂದ ಮೂಲಶ್ಲೋಕಗಳನ್ನು ಆದಷ್ಟು ಕಡಿಮೆಮಾಡಿ ವಿವರಣೆಯನ್ನೂ ಬಹಳಮಟ್ಟಿಗೆ ಕನ್ನಡದಲ್ಲೇ

ಮಾಡಿದ್ದೇನೆ. ಇಲ್ಲಿ ಹೇಳಿರುವುದಕ್ಕಿಂತ ಹೆಚ್ಚಿನ ವಿವರಣೆಯನ್ನು ಅಪೇಕ್ಷಿಸುವವರು ತಾತ್ಪರ್ಯನಿರ್ಣಯದ (ಸಂಸ್ಕೃತ) ಮೂಲದಲ್ಲಾಗಲಿ ಅಥವಾ ಶ್ರೀ ತ್ರೈಲೋಕ್ಯಾಚಾರ್ಯ ಸೇವಾ ಸಂಘ, 2ನೇ ಕ್ರಾಸ್, ಹನುಮಂತನಗರ, ಬೆಂಗಳೂರು-19 ಇವರು ಪ್ರಕಟಿಸಿರುವ ಕನ್ನಡ ತಾತ್ಪರ್ಯನಿರ್ಣಯದಲ್ಲಾಗಲಿ ಉಡುಪಿಯ ಮಧ್ವಮುನಿ ಸೇವಾ ಸಂಘದವರು ಪ್ರಕಟಿಸಿದ ಗ್ರಂಥದಲ್ಲಾಗಲಿ ಮೇಲಿನ ಭಾಗಗಳನ್ನು ಓದಿ ತಿಳಿದುಕೊಳ್ಳಬಹುದು.

ಗ) ತಾರತಮ್ಯನಿರ್ಣಯಕ್ಕೆ ಸಾಧನೆಗಳು—ತ್ರೇತಾಯುಗದಲ್ಲಿ ಶ್ರೀವಿಷ್ಣು ಶ್ರೀರಾಮನಾಗಿ ಅವತಾರ ಮಾಡಿದಾಗ ಅವನ ಸೇವೆಗಾಗಿ ದೇವತೆಗಳೆಲ್ಲ ಹೇಗೆ ವಾನರರಾಗಿ ಅವತಾರ ಮಾಡಿದರೋ ಅದೇ ರೀತಿ ದ್ವಾಪರದಲ್ಲಿ ಆ ಶ್ರೀಹರಿ ಶ್ರೀಕೃಷ್ಣನಾಗಿ ಅವತಾರ ಮಾಡಿದಾಗಲೂ ಆ ದೇವತೆಗಳು ಪ್ರಾಯಶಃ ಹೆಚ್ಚಾಗಿ ಕ್ಷತ್ರಿಯರಾಜರಾಗಿಯೇ ಅವತಾರ ಮಾಡಿದರು. ಪ್ರಧಾನವಾಯು ತಾನು ಕುರುಕುಲದಲ್ಲಿ ಭೀಮಸೇನನಾಗಿ ಅವತಾರ ಮಾಡಿದನು. ಕ್ಷತ್ರಿಯರಿಗೆ ಬಲವೇ ಪ್ರಧಾನಗುಣವಾದುದರಿಂದ ದೇವತಾತಾರತಮ್ಯವನ್ನು ಬಲದಿಂದಲೇ ನಿರ್ಣಯಿಸಬೇಕು. ಆದರೆ ಆ ಬಲವು ಜರಾಸಂಧಾದಿ ದೈತ್ಯಾಂಶಸಂಭೂತರಾದ ಕ್ಷತ್ರಿಯರಾಜರಲ್ಲೂ ಇರುವುದರಿಂದ ಕೇವಲ ಬಲವೇ ತಾರತಮ್ಯಕ್ಕೆ ನಿರ್ಣಾಯಕವಾಗಲಾರದು. ಬಲಕ್ಕೆ ವಿರುದ್ಧವಾಗಿ ವಿಷ್ಣುಭಕ್ತಿಯೂ ಜ್ಞಾನವೂ ದೈತ್ಯರಲ್ಲಿ ಇರಲು ಸುತರಾಂ ಶಕ್ಯವಿಲ್ಲವಾದ್ದರಿಂದ ಬಲದ ಜೊತೆ ಈ ಎರಡು ಗುಣಗಳನ್ನೂ—ವಿಷ್ಣುಭಕ್ತಿ-ಜ್ಞಾನಗಳನ್ನು—ಸೇರಿಸಿಕೊಂಡರೆ ದೇವತಾತಾರತಮ್ಯವನ್ನು ಸುಖವಾಗಿ ನಿರ್ಣಯಿಸಿಬಿಡಬಹುದು. ಏವಂ ಚ ಬಲ, ವಿಷ್ಣುಭಕ್ತಿ ಮತ್ತು ಜ್ಞಾನ ಈ ಮೂರರಲ್ಲೂ ಯಾರು ಎಲ್ಲರಿಗಿಂತ ಅಧಿಕರೋ ಅವರೇ ಅತ್ಯಂತ ಶ್ರೇಷ್ಠರೆಂದೂ ಮಿಕ್ಕವರು ಆ ಮೂರು ಗುಣಗಳ ಆಧಿಕ್ಯಕ್ಕೆ ಅನುಗುಣವಾಗಿ ಕೆಳ-ಕೆಳಗಿನವರೆಂದೂ ಸಿದ್ಧವಾಗುತ್ತದೆ. ಪ್ರಕೃತ ಭೀಮನ ವಿಷಯಕ್ಕೇ ಬರೋಣ.

ಘ) ಸರ್ವವಿಧದಲ್ಲೂ ಭೀಮನೇ ಶ್ರೇಷ್ಠ—ವಿರಾಟಪರ್ವದ ಒಂದು ಪ್ರಸಂಗದಲ್ಲಿ ಭೀಮನ ಬಲದ ಅಗ್ಗಳಿಕೆಯನ್ನು ವರ್ಣಿಸುತ್ತಾ ಭೀಮನ ಕಡುವೈರಿಯಾದ ದುರ್ಯೋಧನ ತಾನೇ ಹೀಗೆ ಹೇಳಿದ್ದಾನೆ—'ದೇವ ದಾನವ

ಮನುಷ್ಯ ಎಲ್ಲ ವರ್ಗಗಳಲ್ಲೂ ಹುಡುಕಿದರೆ ಕ್ರಮವಾಗಿ ಭೀಮಸೇನ, ಬಲರಾಮ, ಶಲ್ಯ ಮತ್ತು ಕೀಚಕ ಈ ನಾಲ್ವರೇ* ಅತ್ಯಂತ ಬಲಿಷ್ಠರು. ಐದನೆಯವನು ದೊರಕುವುದು ಅಸಾಧ್ಯ' ಎಂದು ಉದ್ಗಾರಮಾಡಿದ್ದಾನೆ. ಅವನ ಹೇಳಿಕೆಯ ಜೊತೆಗೆ ಇಂತಹ ಇನ್ನೂ ಅನೇಕರ ಹೇಳಿಕೆಗಳು ಇರುವುದರಿಂದ ಭೀಮಸೇನ ಎಲ್ಲರಿಗಿಂತಲೂ ಬಲಜ್ಯೇಷ್ಠನೆಂಬುದು ಸಿದ್ಧವಾಗುತ್ತದೆ. ಇನ್ನೊಂದು ಕಡೆ ಅದೇ ಮಹಾಭಾರತದಲ್ಲೇ—

ತತ್ತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ । ....
ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ॥

(ತಾ.ನಿ. ೨ ಅ. ೧೬೪-೬೫ ಶ್ಲೋ.)

ಎಂದರೆ 'ತತ್ತ್ವಜ್ಞಾನದಲ್ಲಾಗಲಿ, ವಿಷ್ಣುಭಕ್ತಿಯಲ್ಲಾಗಲಿ, ಧೈರ್ಯಸಾಹಸ-ಪರಾಕ್ರಮಗಳಲ್ಲಾಗಲಿ....ಭೀಮನಿಗೆ ಸದೃಶನಾದವನು ಕೌರವ-ಪಾಂಡವರ ಉಭಯಸೈನ್ಯಗಳಲ್ಲೂ ಬೇರೆ ಯಾರೂ ಇಲ್ಲ' ಎಂದು ಸ್ಪಷ್ಟವಾಗಿ ಅನೇಕ ಕಡೆ ಹೇಳಿದೆ. ಇದರಿಂದ ಭೀಮನು ಹೇಗೆ ಬಲದಲ್ಲಿ ಅತ್ಯಂತ ಜ್ಯೇಷ್ಠನೋ ಹಾಗೆ ವಿಷ್ಣುಭಕ್ತಿಯಲ್ಲೂ ಜ್ಞಾನದಲ್ಲೂ ಧರ್ಮರಾಜ ಅರ್ಜುನ ಭೀಷ್ಮ ದ್ರೋಣಾದಿ ಎಲ್ಲರಿಗಿಂತಲೂ ಅತ್ಯಂತ ಹಿರಿಯನೆಂದು ವಿಶದಡುತ್ತದೆ. ಇದರ ಜೊತೆಗೆ ಇನ್ನೊಂದು ವಿಚಾರವನ್ನೂ ಸೇರಿಸಬೇಕಾಗುತ್ತದೆ. ಶುದ್ಧಭಾಗವತಧರ್ಮವನ್ನು ಮೊದಲಿಂದ ಕಡೆಯುವರೆಗೆ ಅಸ್ಖಲಿತವಾಗಿ ನಡೆಸಿದ ಪುಣ್ಯಾತ್ಮರೆಂದರೆ ಗಂಡಸರಲ್ಲಿ ಭೀಮಸೇನನೂ ಸ್ತ್ರೀಯರಲ್ಲಿ ದ್ರೌಪದೀ—ಈ ಇಬ್ಬರು ಮಾತ್ರವೇ ಆಗಿದ್ದಾರೆ. ಮಿಕ್ಕವರೆಲ್ಲರೂ—ಬಲರಾಮನಿಂದ ಹಿಡಿದು ವಯೋಜ್ಯೇಷ್ಠರಾದ ಭೀಷ್ಮದ್ರೋಣರ ವರೆಗೆ ಎಲ್ಲರೂ—ಒಂದಲ್ಲ ಒಂದು ರೀತಿಯಿಂದ ಒಮ್ಮೆಯಾದರೂ ಶುದ್ಧ ಭಾಗವತಧರ್ಮದಿಂದ ಚ್ಯುತರಾಗಿದ್ದಾರೆಂಬುದನ್ನು ಶ್ರೀಮದಾಚಾರ್ಯರು ಹದಿನೆಂಟನೇ ಅಧ್ಯಾಯದಲ್ಲಿ ೧೯ರಿಂದ ೨೭ರ ವರೆಗಿನ ಕೆಲವು ಶ್ಲೋಕಗಳಲ್ಲೇ ಪ್ರಕಟಪಡಿಸಿದ್ದಾರೆ. ಈ ರೀತಿ ಎಲ್ಲ ವಿಷಯಗಳನ್ನೂ ಕೂಡಿಸಿ ಆಲೋಚಿಸಿ ನೋಡಿದರೆ ಬಲದಲ್ಲೂ ವಿಷ್ಣುಭಕ್ತಿಯಲ್ಲೂ ಜ್ಞಾನದಲ್ಲೂ

* ಈ ಪ್ರಸಂಗಕ್ಕೆ ಬಹಳ ಹಿಂದೆಯೇ ಜರಾಸಂಧನ ವಧೆಯಾಗಿಹೋಗಿತ್ತಾದ ಕಾರಣ ಅವನ ಹೆಸರನ್ನು ಇಲ್ಲಿ ಹೇಳಿಲ್ಲ.

ಭೀಮಸೇನನೇ ಎಲ್ಲರಿಗಿಂತ ಶ್ರೇಷ್ಠನೆಂಬುದು ಸಿದ್ಧವಾಗುವುದರಿಂದ ದೇವ-ದಾನವಾಂಶಸಂಭೂತರಾದ ಸಕಲ ಕ್ಷತ್ರಿಯವೀರರಲ್ಲೂ ಅವನೇ ಶ್ರೇಷ್ಠತಮ-ನೆಂದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಅದೇ ರೀತಿ ಸ್ತ್ರೀಯರಲ್ಲೆಲ್ಲಾ ದ್ರೌಪದಿಯು ಭಾಗವತಶ್ರೇಷ್ಠಳೆಂದೂ ನಿರ್ಣಯದಲ್ಲಿ ಪ್ರತಿಪಾದಿಸಲ್ಪಟ್ಟಿದೆ.

೫) ಪ್ರಧಾನಾಂಗಂ ಹಿ ಮಾರುತಿಃ—ಭೀಷ್ಮದ್ರೋಣಕರ್ಣ-ಶಲ್ಯಾಶ್ವತ್ಥಾಮಾದಿ ಅನೇಕ ರೂಪಗಳಿಂದ ಅವತಾರ ಮಾಡಿದ ದೇವತೆಗಳೆಲ್ಲರೂ ಭೂಭಾರಹರಣೋದ್ಯುಕ್ತನಾದ ಶ್ರೀಕೃಷ್ಣನಿಗೆ ಒಂದು ರೀತಿಯಿಂದ ಅಪ್ರತ್ಯಕ್ಷ-ವಾಗಿ ಸಹಾಯಮಾಡಿದ್ದು ನಿಜವೇ ಆದರೂ ಬೇರೆ ಯಾರೂ ಭೀಮಸೇನ ಮಾಡಿದಂತೆ ನೇರವಾಗಿಯಾಗಲಿ ಅಥವಾ ಕೇವಲ ಸೇವಾಬುದ್ಧಿಯಿಂದಲೇ ಆಗಲಿ ಶ್ರೀಕೃಷ್ಣನಿಗೆ ಸಹಾಯಮಾಡಲಿಲ್ಲ. ಅಥವಾ ಭೀಮಸೇನ ಸಲ್ಲಿಸಿದಷ್ಟು ಸೇವೆಯನ್ನೂ ಬೇರೆ ಯಾರೂ ಸಲ್ಲಿಸಲಿಲ್ಲ. ಏಕೆಂದರೆ ಯುದ್ಧದಲ್ಲಿ ನಾಶವಾದ ಹದಿನೆಂಟು ಅಕ್ಷೋಹಿಣಿ ಸೈನ್ಯದಲ್ಲಿ ಹೆಚ್ಚುಭಾಗವನ್ನು ಭೀಮನೇ ಸಂಹರಿಸಿದ ನೆಂಬುದನ್ನು ಹಿಂದೆಯೇ ಹೇಳಿದ್ದೇವೆ. ಅಷ್ಟುಮಾತ್ರವಲ್ಲದೆ ಭೀಮ ತಾನೊಬ್ಬನೇ ಬಕ-ಕಿರ್ಮೀರ, ಹಿಡಿಂಬ-ಕೀಚಕೋಪಕೀಚಕರು, ಜರಾಸಂಧ-ಮಣಿಮಂತ ಮೊದಲಾದ ಅನೇಕ ಅಪ್ರತಿಹತಪರಾಕ್ರಮಶಾಲಿಗಳಾಗಿದ್ದ ದೈತ್ಯಪುಂಗವರನ್ನೂ ಸಹ ಸಂಹರಿಸಿದ್ದಾನೆ. ಇದನ್ನು ಗಮನಿಸಿಯೇ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ (೨ ಅ. ೧೬ ಶ್ಲೋ.)

ಭೂಭಾರಹರಣೇ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ

'ವಿಷ್ಣುವಿನ ಭೂಭಾರಹರಣಕಾರ್ಯದಲ್ಲಿ ಭೀಮನೇ ಮುಖ್ಯ ಅಂಗ'ವೆಂದು ನಿರ್ಣಯಿಸಿದ್ದಾರೆ. ಆಚಾರ್ಯರು ಮಾತ್ರವಲ್ಲ, ಸ್ವಯಂ ಶ್ರುತಿವಾಕ್ಯವೇ ಈ ಅಂಶವನ್ನು ಎತ್ತಿ ಹೇಳಿದೆ. ಬಳಿತ್ಥಾಸೂಕ್ತದ ಎರಡನೇ ಮಂತ್ರಪಾಠವು (ಋ. ೧ ಮಂ. ೧೪೧ ಸೂ. ೨ ಋ.)

'ಪೃಕ್ಷೋ ವಪುಃ ಪಿತುಮಾನ್....ದ್ವಿತೀಯಮಾ....' ಎಂದಿದೆ.

ದ್ವಿತೀಯಂ ವಪುಃ–ಎರಡನೆಯ ಅವತಾರವು, ಪೃಕ್ಷಃ (ಪೃತನಾಕ್ಷಯಕಾರೀ, ಪೃತನಾ–ಸೈನ್ಯ)—ಪೃ–ಪೃತನಗಳ ಎಂದರೆ ಶತ್ರುಗಳ, ಕ್ಷ–ಕ್ಷಯಕಾರೀ,

ನಾಶಕಾರಕವಾದುದು, ಮತ್ತು ಪಿತುಮಾನ್-'ಪಿತು' ಎಂದರೆ ಅನ್ನವೆಂದು ಬ್ರಾಹ್ಮಣದಲ್ಲಿ ಹೇಳಿದೆಯೆಂದು ಶ್ರೀವಾದಿರಾಜರು ಯುಕ್ತಿಮಲ್ಲಿಕಾದಲ್ಲಿ (ಫಲಸೌ. ೬೯೭ ಶ್ಲೋ.) ತೋರಿಸಿದ್ದಾರೆ; ಅದರಂತೆ ಪಿತುಮಾನ್ ಎಂದರೆ 'ಬಂಡಿ ಅನ್ನ ಉಂಡವನೆಂ'ದು ಅರ್ಥವಾಗುತ್ತದೆ. ಇದರಂತೆ ಭೀಮನ ಪ್ರಧಾನಗುಣ 'ಪೃಕ್ಷಃ'-ಅರಿಸೈನ್ಯ ನಾಶಮಾಡುವುದು. ವಾಯುಸ್ತುತಿಯ ೨೪ನೇ ಶ್ಲೋಕದ 'ಕ್ಷ್ವೇಳಾಕ್ಷೀಣಾಟ್ಟಹಾಸಂ....ಬಹ್ವಕ್ಷೌಹಿಣ್ಯನೀಕಕ್ಷಪಣ-ಸುನಿಪುಣಂ' ಇತ್ಯಾದಿ ವಾಕ್ಯಗಳೂ, ೨೮ನೇ ಶ್ಲೋಕದ 'ಬಹ್ವೀಃ ಕೋಟೀರ-ಟೀಕಃ' 'ಪೋಥಯಾಮಾಸಿಥಾರೀನ್' ಮೊಲಾದ ಅಂಶಗಳೂ ಈ 'ಪೃಕ್ಷಃ' ಎಂಬುದರ ಸಮರ್ಥನೆಗಳೇ ಆಗಿವೆಯೆಂಬುದನ್ನು ನಾವು ಗಮನಿಸಬೇಕು.

ಚ) ಭೀಮನ ಬಲ ಸ್ವರೂಪಭೂತವಾದುದು—ದೈತ್ಯಸಂಹಾರದ ಬಗ್ಗೆ ಇನ್ನೊಂದು ಅಂಶವನ್ನೂ ಮುಖ್ಯವಾಗಿ ಗಮನಿಸತಕ್ಕದ್ದಾಗಿದೆ. ಭೀಮನಿಗೆ ಹತ್ತು ಸಾವಿರ ಆನೆಗಳ ಬಲವಿತ್ತೆಂದು ಹೇಳಿದ್ದೇವೆ. ವಾಸುಕಿ ಮೊದಲಾದ ಪಾತಾಳವಾಸಿಗಳಾದ ನಾಗಗಳು ಭೀಮನನ್ನು ಕುರಿತು 'ತಸ್ಮಾ-ನ್ನಾಗಾಯುತಬಲೋ ರಣೇಽಧೃಷ್ಯೋ ಭವಿಷ್ಯಸಿ' 'ನೀನು ಅಮೃತವನ್ನು ಕುಡಿದವನಾದುದರಿಂದ (ನಾಗ-ಆನೆ. ಅಯುತ-ಹತ್ತುಸಾವಿರ. ಅಧೃಷ್ಯ-ಹಿಮ್ಮೆಟ್ಟದವನು) ಹತ್ತುಸಾವಿರ ಆನೆಗಳ ಬಲವುಳ್ಳವನಾಗಿದ್ದೀಯೇ. ಯುದ್ಧದಲ್ಲಿ ಯಾವ ಸಂದರ್ಭದಲ್ಲೂ ಹಿಮ್ಮೆಟ್ಟುವವನಾಗುವುದಿಲ್ಲ' ಎಂದು ಹೇಳಿದರೆಂದು ಆದಿಪರ್ವದಲ್ಲಿ (೧೩೯ ಅ. ೨೪ ಶ್ಲೋ.) ಹೇಳಿದೆ. ಈ ಬಲವು ವರದಿಂದ ಬಂದುದಾಗಲಿ, ಆಹಾರಾದಿಗಳ ಸೇವನೆಯಿಂದಾಗಲಿ, ವ್ಯಾಯಾಮ ಮಾಡಿದ್ದರಿಂದ ಪ್ರಾಪ್ತವಾದುದಾಗಲಿ ಅಲ್ಲ. ಅದು ಸ್ವರೂಪಭೂತವಾದ ನೈಜವಾದ ಜನ್ಮಸಿದ್ಧವಾದ ಬಲ. ಇದನ್ನೇ ಬಳಿತ್ಥಾ ಸೂಕ್ತದ ಮೊದಲನೆಯ ಪದ 'ಬಟ್' (ಬಳಿತ್ಥಾ=ಬಟ್+ಇತ್ಥಾ)-ಬಲಾತ್ಮಕವಾದ ಎಂಬ ಪದ ಹೇಳುತ್ತದೆ. ವಾಯುಶಬ್ದದಲ್ಲಿರುವ ವಕಾರವು (ವಬಯೋರಭೇದಃ) ಬಲ-ವಾಚಕ; ಅದನ್ನೇ ಸೂಕ್ತದ 'ಬಟ್' ಹೇಳುತ್ತದೆ. ಮೂಲರೂಪವು ಮಾತ್ರವಲ್ಲ; ಇತ್ಥಾ-ಹೀಗೆಯೇ ಎಂದರೆ ಬಲಾತ್ಮಕವಾಗಿಯೇ, ವಪುಷೇ-ಮೂರು ರೂಪಗಳಿಗೂ, ಧಾಯಿ-(ಬಲಸ್ವರೂಪವು) ಧರಿಸಲ್ಪಟ್ಟಿತು ಎಂದು

ಬಳಿತ್ಥಾಸೂಕ್ತದ ಮೊದಲ ಮಂತ್ರದಲ್ಲಿ ಹೇಳಿದಂತೆ ಅವತಾರತ್ರಯದಲ್ಲೂ ಮೂಲರೂಪದ ಬಲ-ಜ್ಞಾನಗಳೆರಡೂ ಸ್ವಾಭಾವಿಕವಾಗಿ ಇದ್ದೇ ಇರುತ್ತವೆ. ಆ ಪ್ರಕಾರ ಹನುಮಂತನ ಬಲವೂ ಭೀಮನ ಬಲವೂ ಸಹಜಬಲವಾಗಿದ್ದು ಒಂದೇ ಆಗಿದ್ದರೂ ಅವತಾರಧರ್ಮವನ್ನೂ ಯುಗಧರ್ಮವನ್ನೂ ಅನುಸರಿಸಿ ಭಿನ್ನ ಭಿನ್ನವಾಗಿದ್ದಂತೆಯೂ ಹನುಮ ಸೋಲಿಸಿದ, ಭೀಮ ಸೋತುಹೋದ ಎಂದು ತೋರಿಸಿದ್ದು 'ಕ್ರೀಡಾಮಾತ್ರಂ ತದೇತತ್' ಎಂದು ೨೭ನೇ ಶ್ಲೋಕ-ದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 'ಪ್ರಮುದದ ಸುಧಿಯಾಂ ಮೋಹಕದ್ವೇಷ-ಭಾಜಾಂ' ಎಂದು ಅದಕ್ಕೆ ಸ್ಪಷ್ಟೀಕರಣವನ್ನೂ ಅಲ್ಲೇ ಮಾಡಿದ್ದಾರೆ. ಹಾಗೆ ಭೀಮನ ಬಲವು ಸ್ವರೂಪಭೂತಬಲವಾಗಿಲ್ಲದಿದ್ದರೆ ವರಗಳಿಂದ ಅವಧ್ಯರಾದ ಬಕ-ಕಿರ್ಮೀರರನ್ನೂ, ಜರಾಸಂಧನನ್ನೂ ಅದಕ್ಕೂ ಹೆಚ್ಚಾಗಿ ಸೌಗಂಧಿಕ-ವನಪಾಲಕರಾಗಿದ್ದ 'ಬಹ್ವೀಃ ಕೋಟೀಃ' ದೈತ್ಯರನ್ನು ಗೆಲ್ಲುವುದು ಹೇಗೆತಾನೆ ಸಾಧ್ಯವಾಗುತ್ತಿತ್ತು ? ಗೆದ್ದದ್ದೂ ಸಹ ಆಕಸ್ಮಿಕವಲ್ಲ, ಪ್ರತ್ಯುತ ಬಲಾಧಿಕ್ಯ-ದಿಂದಲೇ ಎಂಬುದನ್ನು ಸೂಚಿಸುವುದಕ್ಕಾಗಿಯೇ 'ಪ್ರೋಥಯಾಮಾಸಿಥಾ-ರೀನ್' = ಶತ್ರುಗಳನ್ನು ನುಚ್ಚುನುರಿ ಮಾಡಿಬಿಟ್ಟ ಎಂಬ ವಿಶೇಷಪದಪ್ರಯೋಗ ಮಾಡಿದ್ದಾರೆ.

ಛ) ಭೀಮನ ಜಠರಾಗ್ನಿ—ಭೀಮನು 'ಬಂಡಿ ಅನ್ನವನುಂಡವ'ನೆಂದು ಪ್ರಸಿದ್ಧನಾಗಿದ್ದಾನಲ್ಲವೆ! ಇದೂ ಸಹ ಅವನ ಸ್ವರೂಪಭೂತವಾದ ಬಲ-ದ್ಯೋತಕವೇ ಆಗಿದೆ. ಈ ಅಂಶವನ್ನೇ ಬಳಿತ್ಥಾಸೂಕ್ತದ ಪಿತುಮಾನ್ ಶಬ್ದ ಹೇಳುತ್ತದೆ. ಭೀಮನಲ್ಲಿದ್ದ ಜಠರಾಗ್ನಿಗೆ ವೃಕ ಎಂದು ಹೆಸರು; ಅದಕ್ಕೇ ಮೂಲೋಕವನ್ನು ತಿಂದರೂ ಜೀರ್ಣಿಸಿಕೊಳ್ಳುವ ಶಕ್ತಿಯಿತ್ತು. ಆದ್ದ-ರಿಂದಲೇ ಭೀಮನಿಗೆ ವೃಕೋದರ ಎಂಬ ಹೆಸರು ಪ್ರಸಿದ್ಧವಾಗಿತ್ತು. ಇದನ್ನೇ ಮಹಾಭಾರತದ ಆದಿಪರ್ವದ (?) ಈ ಶ್ಲೋಕವು ವರ್ಣಿಸುತ್ತದೆ—

ತೀಕ್ಷ್ಣಶ್ಚೈವ ಪ್ರಚಂಡಶ್ಚ ವೃಕೋ ನಾಮಾಽನಲೋ ಮತಃ ।
ಸ ಪಾಂಡವಸ್ಯ ಜಠರೇ ತೇನ ಭೀಮೋ ವೃಕೋದರಃ ॥

(ಕಠಿನ ಶಬ್ದಾರ್ಥ) ಅನಲಃ–ಬೆಂಕಿ, ಜಠರಾಗ್ನಿ. ಜಠರೇ–ಉದರದಲ್ಲಿ. ವೃಕಃ ಉದರೇ ಯಸ್ಯ ಸಃ ವೃಕೋದರಃ ಎಂದು ವಿಗ್ರಹವಾಕ್ಯ. ವೃಕ ಎಂಬ

ತೀಕ್ಷ್ಣವೂ ಪ್ರಚಂಡವೂ ಆದ ಜಠರಾಗ್ನಿಯು ಭೀಮನ ಹೊಟ್ಟೆಯಲ್ಲಿದ್ದುದರಿಂದ ಅವನಿಗೆ ವೃಕೋದರನೆಂಬ ಹೆಸರು ಪ್ರಸಿದ್ಧವಾಯಿತು. ಇನ್ನೊಂದು ಸ್ಮೃತಿವಾಕ್ಯವು ಈ ಅರ್ಥವನ್ನು ವಿಸ್ತರಿಸಿ ಹೀಗೆ ಹೇಳುತ್ತದೆ—

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃಸ್ಥಿತಿಃ ।
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ॥

(ಶಬ್ದಾರ್ಥ) ಪ್ರಜ್ಞಾ–ಬುದ್ಧಿಶಕ್ತಿ. ಮೇಧಾ–ಹೊಸ ಹೊಸ ವಿಚಾರಗಳು ತನಗೆತಾನೇ ಹೊಳೆಯುವ ಶಕ್ತಿ. ಧೃತಿ–ಕೇಳಿದ ಪ್ರಶ್ನೆಗೆ ಉತ್ತರ ಕೊಡುವ ಧೈರ್ಯ ಅಥವಾ ಧಾರಣಾಶಕ್ತಿ. ಸ್ಥಿತಿಃ–ಕಲಿತದ್ದನ್ನು ಮರೆಯದಂತೆ ನೆನೆಪಿಟ್ಟುಕೊಳ್ಳುವ ಶಕ್ತಿ, ಸ್ಮರಣಶಕ್ತಿ. (ತಾತ್ಪರ್ಯ) ಭಕ್ತಿ, ಜ್ಞಾನ, ವೈರಾಗ್ಯ, ಬುದ್ಧಿಶಕ್ತಿ, ಧಾರಣಾಶಕ್ತಿ, ಧೈರ್ಯ, ಸ್ಮರಣಶಕ್ತಿ, ಯೋಗ, ಅಡ್ಡಾಡುವ ಶಕ್ತಿ, ಬಲ ಇವೆಲ್ಲಕ್ಕೂ ವೃಕ ಎಂದು ಹೆಸರು. ಇವೆಲ್ಲ ಗುಣಗಳೂ ಭೀಮನಲ್ಲಿ ಇದ್ದುದರಿಂದ ಅವನಿಗೆ ವೃಕೋದರ ಎಂದು ಹೆಸರು ಸೂಕ್ತವಾಗಿದೆ.

ಈ ಅರ್ಥವನ್ನು ತಿಳಿಯದ ಅಜ್ಞರು ಭೀಮನನ್ನು ಹೊಟ್ಟೆಬಾಕನೋ ಎಂಬಂತೆ ಪ್ರದರ್ಶಿಸುತ್ತಾರೆ. ಅದು ಕೇವಲ ತಪ್ಪು ಭಾವನೆಯೆಂಬುದನ್ನು 'ಜಘ್ನೇ ನಿಘ್ನೇನ ವಿಘ್ನೋ ಬಹುಲಬಲ-ಬಕಧ್ವಂಸನಾತ್' ಎಂಬ ೨೨ನೇ ಶ್ಲೋಕದ ವಿವರಣೆಯಿಂದ ವ್ಯಕ್ತಪಡಿಸಿದ್ದಾರೆ. ಬಕಾಸುರನು ಏಕಚಕ್ರಾನಗರದ ಜನಗಳಿಗೆ ಸರಾಗವಾಗಿ ಉಸಿರಾಡುವುದಕ್ಕೇ ಅಡಚಣೆಯಾಗಿದ್ದನು. ಅವನನ್ನು ಕೊಂದು ಏಕಚಕ್ರಾನಗರದ ಜನಗಳಿಗೂ ವಿಶೇಷತಃ ಆ ಬ್ರಾಹ್ಮಣ ಕುಟುಂಬಕ್ಕೂ ಬಂದಿದ್ದ ಪ್ರಾಣಘಾತಕ ಕಂಟಕನಿವಾರಣೆಗಾಗಿಯೇ ಬಂಡಿ ಅನ್ನವನ್ನು ಉಂಡದ್ದೇ ಹೊರತು ಹೊಟ್ಟೆಬಾಕತನದಿಂದಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ದುರ್ಯೋಧನ ಕೊಟ್ಟ ವಿಷಾನ್ನವನ್ನೂ ಸಹ ಭೀಮ ಜೀರ್ಣಿಸಿಕೊಂಡದ್ದರಿಂದ ಅದು ಅವನ ಜಠರಾಗ್ನಿಯ ಮಹಿಮೆಯೇ ಎಂಬುದು ಮತ್ತಷ್ಟು ಸ್ಪಷ್ಟವಾಗಿ ಕಾಣುತ್ತದೆ.

ಜ) ಪರಿಶುದ್ಧನಾದ ಭಾಗವತಧರ್ಮಾಚರಣೆ—ಮೇಲೆ (ಘ ಖಂಡದಲ್ಲಿ) ಹೇಳಿದಂತೆ ಒಂದು ಸಾರಿಯೂ ಚ್ಯುತಿಯಾಗದ ರೀತಿ ನಿಶ್ಚಲವಾಗಿ

ಪರಿಶುದ್ಧ ವೈಷ್ಣವಧರ್ಮವನ್ನು ಆಚರಿಸಿದವರು ಭೀಮ ಮತ್ತು ದ್ರೌಪದೀ ಈ ಇಬ್ಬರು ಮಾತ್ರವೇ. ಇವರಿಬ್ಬರೂ ಕಾಯಾ ವಾಚಾ ಮನಸಾ ಯಾವ ರೀತಿಯಿಂದಲೂ ಯಾವ ಕಾರಣದಿಂದಲೂ ಒಂದು ಸಾರಿಯೂ ಕೂಡ ವಿಷ್ಣು-ವಲ್ಲದೆ ಬೇರೆ ದೇವತೆಯನ್ನು ಆರಾಧಿಸಿಯೂ ಇಲ್ಲ, ವಂದಿಸಿಯೂ ಇಲ್ಲ. ವಿಷ್ಣುವಿಗೆ ಕಿಂಚಿದ್ ವ್ಯತಿರಿಕ್ತವನ್ನೂ ಯಾವ ಸಂದರ್ಭದಲ್ಲೂ ಮಾಡಿಲ್ಲ. ಇದನ್ನು ಪಂಡಿತಾಚಾರ್ಯರು 'ಯಾಭ್ಯಾಂ ಶುಶ್ರೂಷುರಾಸೀಃ' ಎಂಬ ೨೬ನೇ ಶ್ಲೋಕದಲ್ಲಿ ಪ್ರದರ್ಶಿಸಿದ್ದಾರೆ.

ಝು) ಸಕಲವೂ ವಿಷ್ಣುಪ್ರೀತಿಗಾಗಿ—'ಯತ್ಕರೋಷಿ ಯದಶ್ನಾಸಿ' (ಗೀತಾ ೯/೨೭) ಎಂಬ ಶುದ್ಧಭಾಗವತಧರ್ಮಕ್ಕೆ ಅನುಗುಣವಾಗಿ ಭೀಮ-ನಾಗಲಿ ದ್ರೌಪದಿಯಾಗಲಿ ತಾವು ಮಾಡಿದ ಸಕಲ ಕರ್ಮಗಳನ್ನೂ ಕೇವಲ ಶ್ರೀವಿಷ್ಣುಪ್ರೀತ್ಯರ್ಥವಾಗಿಯೇ ಮಾಡುತ್ತಿದ್ದರೂ, ಅವರಿಬ್ಬರೂ ವಿಷ್ಣುಭಕ್ತ-ರೊಡನೆ ದ್ವೇಷವನ್ನಾಗಲಿ ವಿಷ್ಣುದ್ವೇಷಿಗಳೊಡನೆ ಸ್ನೇಹವನ್ನಾಗಲಿ ಯಾವ ಕಾಲಕ್ಕೂ ಮಾಡಿಲ್ಲ. ಅದಕ್ಕೆ ಅನುಗುಣವಾಗಿ ಭೀಮನು ಜರಾಸಂಧನನ್ನು ವಧಿಸಿದ್ದಾಗಲಿ ದುರ್ಯೋಧನ ದುಃಶಾಸನಾದಿ ಕೌರವರನ್ನು ವಧಿಸಿದ್ದಾಗಲಿ ದ್ವೇಷಾಸೂಯೆಗಳಿಂದಾಗಲಿ ಬಲೋದ್ಧತಿಯಿಂದಾಗಲಿ ಅಲ್ಲ, ಪ್ರತ್ಯುತ ಅವರು ವಿಷ್ಣುದ್ವೇಷಿಗಳಾಗಿದ್ದುದರಿಂದ ಅವರನ್ನು ಯುದ್ಧವೆಂಬ ಯಜ್ಞದಲ್ಲಿ ವಿಷ್ಣು-ಪ್ರೀತ್ಯರ್ಥವಾಗಿ ಪಶುಗಳನ್ನಾಗಿ ಹೋಮಮಾಡಿದನೇ ಹೊರತು ಅನ್ಯಥಾ ಅಲ್ಲ ಎಂಬ ಪ್ರಮೇಯವನ್ನು 'ಶುಶ್ರೂಷಾರ್ಥಂ ಚಕರ್ಥ' (ಶ್ಲೋ. ೨೪) 'ಯಾಭ್ಯಾಂ ಶುಶ್ರೂಷುರಾಸೀಃ' (ಶ್ಲೋ. ೨೬) 'ಪಶುಮಿವ ದಮಯನ್ ವಿಷ್ಣುಪಕ್ಷದ್ವಿಡೀಶಂ' (ಶ್ಲೋ. ೨೩) ಇತ್ಯಾದಿ ಶಬ್ದಗಳಿಂದ ಸ್ಪಷ್ಟಪಡಿಸಿದ್ದಾರೆ. ಅದಕ್ಕೂ ಹೆಚ್ಚಾಗಿ ಶ್ರೀಕೃಷ್ಣನಿಗೆ ಭೀಮನ ಸೇವೆಯಿಂದಾದಷ್ಟು ತೃಪ್ತಿ 'ಕಿಮು ವದ ಭಗವನ್ ರಾಜಸೂಯಾಶ್ವಮೇಧೇ ?' ಎಂಬ ಕಾಕುವಿನಿಂದ ಇದನ್ನು ಮತ್ತಷ್ಟು ದೃಢೀಕರಿಸಿದ್ದಾರೆ.

ಞ) ದ್ರೌಪದಿಯು ವೈರಕ್ಕೆ ಕಾರಣಳು—ದ್ರೌಪದಿಯು ದೈತ್ಯರ ವೈರಕ್ಕೆ ಕಾರಣೀಭೂತಳಾಗಿ ದೈತ್ಯರ ವಧೆಗೆ ಅವಕಾಶಮಾಡಿಕೊಟ್ಟಿದ್ದರಿಂದ ಭೀಮನಿಗೆ ದೈತ್ಯಸಂಹಾರಕಾರ್ಯದಲ್ಲಿ ನೆರವಾದ್ದರಿಂದ ಭೀಮನಿಗೆ ಮುಖ್ಯ

ಸಹಾಯಕಳಾದಳು. ಈ ದೃಷ್ಟಿಯಿಂದ ದ್ರೌಪದಿಯನ್ನು ಶ್ರೀಹರಿಗೆ ದ್ವಿತೀಯಾಂಗವೆಂದು ನಿರ್ಣಯಕಾರರು ಹೇಳಿದ್ದಾರೆ—'ದ್ರೌಪದೀ ವೈರಹೇತುಃ ಸ್ಯಾತ್ ತಸ್ಮಾದ್ ಭೀಮಾದನಂತರಾ' (ತಾ. ನಿ. ೨/೪೩). ಈ ಪ್ರಮೇಯವನ್ನು ಸೂಚಿಸುವುದಕ್ಕಾಗಿಯೇ ೨ಲನೇ ಶ್ಲೋಕದಲ್ಲಿ 'ಪ್ರಾಯಚ್ಛಃ ಸ್ವಪ್ರಿಯಾಯೈ ಪ್ರಿಯತಮಕುಸುಮಂ' ಎಂದು ಪ್ರಿಯಶಬ್ದವನ್ನೂ ೨೫ನೇ ಶ್ಲೋಕದಲ್ಲಿ 'ದ್ರೌಪದೀ ರುದ್ರಪತ್ನ್ಯಾದ್ಯುದ್ರಿಕ್ತಾ....ದಯಿತಾ....ತೇ' ಎಂದು ದಯಿತಾ ಶಬ್ದವನ್ನೂ ಪ್ರಯೋಗಿಸಿದ್ದಾರೆ. ಅಷ್ಟೇ ಸಾಲದೆ ಅವಳ ಶುದ್ಧ ವೈಷ್ಣವಧರ್ಮವನ್ನು ಸೂಚಿಸುವುದಕ್ಕಾಗಿಯೇ ಅವಳ ಅನುಗ್ರಹದಿಂದಲೇ ಸಕಲಾನಿಷ್ಟಗಳೂ ದೂರವಾಗುವುವೆಂದೂ ಸಕಲಾಭೀಷ್ಟಗಳೂ ಸಿದ್ಧಿಸುವುವೆಂದೂ ಪ್ರಕಟಿಸುತ್ತಾ ಅವಳನ್ನು ನೇರವಾಗಿ 'ಅವಿದ್ಯಾನಿದ್ರಾಂ ವಿದ್ರಾವ್ಯ.... ದ್ರಾಗಭದ್ರಾದ್ ರಹಯತಾ' ಎಂದು ಪ್ರಾರ್ಥಿಸಿದ್ದಾರೆ (ಶ್ಲೋ. ೨೫).

ಉಪಸಂಹಾರ—ಒಟ್ಟಿನಲ್ಲಿ ಪ್ರಸಕ್ತವಾದ ಈ ಏಳು ಶ್ಲೋಕಗಳಲ್ಲೂ ಭೀಮಸೇನನ ಮತ್ತು ದ್ರೌಪದಿಯ ಶುದ್ಧವೈಷ್ಣವಧರ್ಮದೀಕ್ಷೆಯನ್ನು ಪ್ರತಿಪಾದಿಸಿ ಅವರಿಬ್ಬರೂ ಪರಶುಕ್ಲತ್ರಯವರ್ಗಕ್ಕೆ ಸೇರಿದವರೆಂದು ಸೂಚಿಸಿ ಅವರಿಬ್ಬರ ಅನುಗ್ರಹದಿಂದ ಸಕಲಾನಿಷ್ಟಗಳೂ ದೂರವಾಗುವುವೆಂದೂ ದೈತ್ಯರ ಬಾಧೆ ತಪ್ಪುವುದೆಂದೂ ಜ್ಞಾನಭಕ್ತಿವೈರಾಗ್ಯಗಳು ಬೆಳೆದು ಮೋಕ್ಷಪ್ರಾಪ್ತಿಗೆ ಸಾಧಕವಾಗುವುದೆಂದೂ ನಿರೂಪಣೆ ಮಾಡಿ ಕೊನೆಗೆ 'ಸ್ವಪ್ರಿಯಾಯೈ' ಎಂದು ಗುರುಪತ್ನಿಯಾದ ದ್ರೌಪದಿಗೂ 'ಪ್ರಾಣ ತಸ್ಮೈ ನಮಸ್ತೇ' ಎಂದು ಜಯಪ್ರದನಾದ ಭೀಮನಿಗೂ ಇಬ್ಬರಿಗೂ ೨ಲನೇ ಶ್ಲೋಕದ ಒಂದೇ ಚರಣದಲ್ಲೇ ವಂದನಾರ್ಪಣೆ ಮಾಡಿ ಭೀಮಾವತಾರಮಹಿಮೆಯನ್ನು ಉಪಸಂಹಾರ ಮಾಡಿದ್ದಾರೆಂಬಲ್ಲಿಗೆ ಭೀಮಾವತಾರನಿರೂಪಣೆ ಮುಗಿಯಿತು.

ಲೇಖಕನ ಮಂಗಳಾಚರಣೆ

ಕೃಷ್ಣಾಯ ರುಕ್ಮಿಣೀಶಾಯ ಪಾರ್ಥಪ್ರೇಷ್ಠತಮಾಯ ಚ ।
ವ್ಯಾಸಾಯ ಜ್ಞಾನದೀಪ್ತಾಯ ನಮಸ್ತೇ ಽನೈಕರೂಪಿಣೇ ॥

(ಅರ್ಥ) ರುಕ್ಮಿಣೀಸತ್ಯಭಾಮಾದ್ಯಷ್ಟಮಹಿಷಿಯರ ಒಡೆಯನೂ, ಪಾಂಡವರ ಪರಮಪ್ರಿಯನೂ, ಭೀಮಸೇನನಿಗೆ ಅತ್ಯಂತ ಪ್ರಿಯತಮನೂ

ಆದ ಶ್ರೀಕೃಷ್ಣನಿಗೂ, ಜ್ಞಾನಕಿರಣಗಳಿಂದಲೇ ಬೆಳಗುವ ಪಾಂಡವರ ಪ್ರಿಯನೂ ಭೀಮಪ್ರೇಷ್ಠತಮನೂ ಆದ ವೇದವ್ಯಾಸನಿಗೂ, ಈ ರೀತಿ ಬೇರೆ ಬೇರೆ ರೂಪದ್ವಯವೆಂದು ಕಾಣಿಸಿದರೂ ವಿಶೇಷವೆಂಬ ಶಕ್ತಿವಿಶೇಷದಿಂದ ವಸ್ತುತಃ ಏಕರೂಪಿಯಾದ ಹೇ ಭಗವಂತ ನಿನಗೆ ಸಾಷ್ಟಾಂಗ ನಮಸ್ಕಾರ.

ಸರ್ವಾರಿದರ್ಪನಾಶಾಯ ಗದಾಮಂಡಿತಪಾಣಯೇ ।
ಶುದ್ಧವೈಷ್ಣವದೀಕ್ಷಾಯ ಭೀಮಸೇನಾಯ ತೇ ನಮಃ ॥ ೨ ॥

(ಅರ್ಥ) ಸಕಲ ಶತ್ರುಗಳ ದರ್ಪವನ್ನೂ ಮುರಿದು ಮಟ್ಟಹಾಕಿದ, ದಿವ್ಯವಾದ ಗದೆಯನ್ನು ಕೈಯಲ್ಲಿ ಹಿಡಿದು ಮೆರೆಯುವ, ಶುದ್ಧ ಭಾಗವತ-ಧರ್ಮದಲ್ಲೇ ಬದ್ಧವಾದ ದೀಕ್ಷೆಯುಳ್ಳ ಹೇ ಭೀಮಸೇನ, ನಿನಗೆ ನಮಸ್ಕಾರ.

ಶ್ರೀಕೃಷ್ಣಚರಿತಂ ಪುಣ್ಯಂ ಭೀಮಸೇನಯಶೋಽಮಲಮ್ ।
ವ್ಯಾಖ್ಯಾಚ್ಛಲೇನ ಯತ್ ಪ್ರೋಕ್ತಂ ಸರ್ವಾಘೌಘವಿನಾಶಕಮ್ ॥ ೩ ॥

(ಅರ್ಥ) ಶ್ರೀಕೃಷ್ಣನ ಚರಿತ್ರೆಯೇ ಪುಣ್ಯಕರವಾದುದು. ಭೀಮ-ಸೇನನ ನಿರ್ಮಲವಾದ ಯಶೋಗಾನವೂ ಅದೇ ರೀತಿ ಪುಣ್ಯಸಾಧಕವಾಗಿದೆ. ವಾಯುಸ್ತುತಿಗೆ ಅರ್ಥ ನಿರೂಪಣೆಮಾಡುವ ನೆಪದಿಂದ ಇವರಿಬ್ಬರ ಕಥಾನು-ವಾದ ಏನು ಮಾಡಿದ್ದೇನೋ ಅದು ಸಕಲ ಪಾಪಪರಿಹಾರಕವಾಗಿದೆ.

(ಹರಿ ಕೃತಿಸಮರ್ಪಣಮ್)

ಹರಿವಾಯುಸ್ತುತಿಪ್ರೋಕ್ತೋ ಮಹಿಮಾ ಹರಿಭೀಮಯೋಃ ।
ವರ್ಣಿತೋ ವಿಷ್ಣುತೀರ್ಥೇನ ಪ್ರೀಯೇತಾಂ ತಾವುಭೌ ಭೃಶಮ್ ॥ ೪ ॥

(ಅರ್ಥ) ಶ್ರೀಹರಿವಾಯುಸ್ತುತಿಯಲ್ಲಿ ಅಡಗಿರುವ ಶ್ರೀಕೃಷ್ಣನ ಮತ್ತು ಭೀಮಸೇನನ ಅಪಾರಮಹಿಮೆಯನ್ನು ವಿಷ್ಣುತೀರ್ಥನೆಂಬ ಈ ಭಕ್ತಾಧಮನು ಯಥಾಮತಿ ವರ್ಣಿಸಿದ್ದಾನೆ. ಅದರಿಂದ ಅವರಿಬ್ಬರೂ ಅತ್ಯಂತ ಪ್ರೀತರಾಗಲಿ.

ಶ್ರೀಕೃಷ್ಣಾರ್ಪಣಮಸ್ತು

ನಾಲ್ಕನೇ ವರ್ಗ—ಮಧ್ವಾವತಾರದ ಮಹಿಮೆ

(೨೯ ರಿಂದ ೪೦ರವರೆಗೆ ಶ್ಲೋಕಗಳು)

ಲೇಖಕನ ಮಂಗಳಾಚರಣೆ

ಸದೋದಿತಾಮಲಾನಂತ—ಜ್ಞಾನಾನಂದಾರ್ಚಿಭಾಸ್ವರ।
ಮಧ್ವಾಂತರ್ಗತ ವೇದೇಶ ವೇದವ್ಯಾಸ ಕೃಪಾಂ ಕುರು ॥ ೧ ॥

(ಶಬ್ದಾರ್ಥ)—ಸದಾ-ಉದಿತ-ಸದಾಕಾಲದಲ್ಲೂ ಜಾಗ್ರತವಾಗಿರುವ, ಅಥವಾ ನಿತ್ಯದಲ್ಲೂ ಪ್ರಜ್ವಲವಾಗಿರುವ (ಎಂದೂ ಮರೆಯೇ ಇಲ್ಲದ), ಅಮಲ-ನಿರ್ದೋಷವಾದ, ಅರ್ಚಿ-ಕಿರಣ, ಭಾಸ್ವರ-ಪ್ರಕಾಶಿಸುವ, ಪ್ರಜ್ವಲಿಸುತ್ತಿರುವ.

(ಭಾವಾರ್ಥ)—ಯಾವಾಗಲೂ ಅಭಿವ್ಯಕ್ತವಾಗಿರುವ, ನಿರ್ದುಷ್ಟವಾದ ಮತ್ತು ಅನಂತವಾದ ಜ್ಞಾನಾನಂದಾದಿ ಗುಣಗಳೆಂಬ ಕಿರಣಗಳಿಂದ ಸದಾ ಪ್ರಜ್ವಲಿಸುತ್ತಿರುವ, ಮಧ್ವಾಂತರ್ಗತರಾದ, ಸಕಲ ವೇದಗಳಿಗೂ ಒಡೆಯರೂ ಪ್ರತಿಪಾದ್ಯರೂ ಆದ ಹೇ ಭಗವನ್ ವೇದವ್ಯಾಸ! ನನ್ನ ಮೇಲೆ ನಿಮ್ಮ ಕೃಪಾದೃಷ್ಟಿಯನ್ನು ಬೀರುವರಾಗಿರಿ.

ಧಿಕ್ಕೃತಾಶೇಷವಾದೀಭಂ ವಿಷ್ಣುಪಾದಾಚಲಾಶ್ರಯಮ್ ।
ಮಧ್ವಸಿಂಹಂ ಪ್ರಪನ್ನೋಽಸ್ಮಿ ವೇದಾಂತವನಚಾರಿಣಮ್ ॥ ೨ ॥

(ಶಬ್ದಾರ್ಥ)—ಧಿಕ್ಕೃತ-ಧಿಕ್ಕರಿಸಲ್ಪಟ್ಟ, ನಿರಾಸಗೊಳಿಸಲ್ಪಟ್ಟ ಅಥವಾ ನಿರುತ್ತರರನ್ನಾಗಿ ಮಾಡಿದ, ಅಶೇಷ-ಸಮಸ್ತ, ವಾದೀ-ಇಭ-ಪ್ರತಿವಾದಿಗಳೆಂಬ ಆನೆಗಳು, ಅಚಲ-ಗ ಬೆಟ್ಟ, ೨-ನಿಶ್ಚಲವಾಗಿ, ಅಲುಗಾಡದಂತೆ, ಪ್ರಪನ್ನೋಽಸ್ಮಿ-ಶರಣು ಹೊಂದಿದ್ದೇನೆ, ಮೊರೆಹೋಗುತ್ತೇನೆ.

(ಭಾವಾರ್ಥ)—ಪ್ರತಿವಾದಿಗಳೆಂಬ ಸಕಲ ಆನೆಗಳನ್ನೂ ಪರಾಜಯಗೊಳಿಸಿ ನಿರುತ್ತರರನ್ನಾಗಿ ಮಾಡಿದಂಥಾ, ವಿಷ್ಣುಪಾದವೆಂಬ ಪರ್ವತವನ್ನು ಎಡೆಬಿಡದೆ ನಿರಂತರವಾಗಿ ಆಶ್ರಯಿಸಿರುವಂಥಾ, ವೇದಾಂತವೆಂಬ ಅರಣ್ಯದಲ್ಲಿ ಸ್ವೇಚ್ಛೆಯಾಗಿ (ನಿರಾತಂಕವಾಗಿ) ಸಂಚಾರ ಮಾಡುತ್ತಿರುವ ಶ್ರೀಮನ್ಮಧ್ವಾ-

ಚಾರ್ಯರೆಂಬ ಮೃಗರಾಜನನ್ನು (ಸಿಂಹವನ್ನು) ಸಕಲ ರೀತಿಯಿಂದಲೂ ಅನನ್ಯಭಾವದಿಂದ ಶರಣುಹೊಂದಿದ್ದೇನೆ.

ಅನಾದಿಮಧ್ವಸಿದ್ಧಾಂತ—ಸಂಪ್ರದಾಯಪ್ರವರ್ತಕಾನ್ ।
ಟೀಕಾಕೃತ್ಪಾದವರ್ಯಾದೀನ್ ಪ್ರಣಮಾಮಿ ಗುರೂನ್ ಮಮ ॥ ೩ ॥

(ಭಾವಾರ್ಥ)—ಅನಾದಿಪರಂಪರಾಪ್ರಾಪ್ತವಾದ ಶ್ರೀಮನ್ಮಧ್ವಸಿದ್ಧಾಂತ ಪದ್ಧತಿಯನ್ನು ರೂಢಿಸಿಕೊಟ್ಟಂಥಾ ಸನಕ-ಸನಂದನಾದಿ ಯೋಗೀಶ್ವರರನ್ನೂ ಶ್ರೀಮದಾಚಾರ್ಯರ ಗ್ರಂಥಗಳಿಗೆ ಟೀಕೆಗಳನ್ನು ಬರೆದು ಮಧ್ವಶಾಸ್ತ್ರವನ್ನು ಪೋಷಿಸಿ ಬೆಳೆಸಿದಂಥಾ ಆದಿಟೀಕಾಕಾರರೆಂದು ಪ್ರಸಿದ್ಧರಾದ ಶ್ರೀಪದ್ಮನಾಭ-ತೀರ್ಥರು ಶ್ರೀನರಹರಿತೀರ್ಥರು ತತ್ವಪ್ರದೀಪಕಾರರಾದ ತ್ರಿವಿಕ್ರಮಪಂಡಿತಾ ಚಾರ್ಯರೇ ಮೊದಲಾದ ಗುರುಗಳನ್ನೂ ಶ್ರೀಮಜ್ಜಯತೀರ್ಥರು, ಶ್ರೀ ವ್ಯಾಸರಾಯರು, ಶ್ರೀವಾದಿರಾಜರು, ಶ್ರೀಮಂತ್ರಾಲಯ ಪ್ರಭುಗಳೇ ಮೊದಲಾದ ಸಕಲ ಟೀಕಾಟಿಪ್ಪಣಿಕಾರರನ್ನೂ ನನ್ನ ವಿದ್ಯಾಗುರುಗಳನ್ನೂ ಸಹ ಭಕ್ತಿಪುರಸ್ಸರವಾಗಿ ವಂದಿಸುತ್ತೇನೆ.

ಅಥ ತತ್ಕೃಪಯಾ ವಾಯು—ಸ್ತುತೌ ಮಧ್ವಯಶಃಪರಾನ್ ।
ಶ್ಲೋಕಾನಪಿ ಯಥಾಪೂರ್ವಂ ವಿವೃಣೋಮಿ ಯಥಾಮತಿ ॥ ೪ ॥

(ಭಾವಾರ್ಥ)—ಹೀಗೆ ದೇವತಾವಂದನೆ ಗುರುವಂದನೆಗಳನ್ನು ಮಾಡಿದ ಬಳಿಕ ಆ ಮಹಾನುಭಾವರೆಲ್ಲರ ಅನುಗ್ರಹಬಲದಿಂದ ವಾಯುಸ್ತುತಿಯಲ್ಲಿ ಉಳಿದುಕೊಂಡಿರುವ ಶ್ರೀಮಧ್ವಾಚಾರ್ಯರ ಕೀರ್ತಿಪ್ರತಿಪಾದಕವಾದ ಹನ್ನೆರಡು ಶ್ಲೋಕಗಳ ಅರ್ಥವನ್ನೂ ಸಹ ಹಿಂದಿನಂತೆ ಉಪಲಬ್ಧವಾದ ಸಕಲಟೀಕೆಗಳನ್ನೂ ನೋಡಿ ಶ್ರೀಹರಿ-ವಾಯು ಉಭಯಪರವಾಗಿ ಸುಲಭವಾಗಿ ತಿಳಿಯುವಂತೆ ನನಗೆ ತಿಳಿದಷ್ಟುಮಟ್ಟಿಗೆ ವಿವರಿಸುತ್ತೇನೆ.

ಮಧ್ವಾವತಾರಕ್ಕೆ ಪೀಠಿಕೆ

317. ವಾಯುದೇವರ ಅವತಾರತ್ರಯ—ಪ್ರಧಾನವಾಯುವು ಶ್ರೀಹರಿಯ ಸೇವೆಗಾಗಿಯೇ ಹನುಮ-ಭೀಮ-ಮಧ್ವ ಎಂಬ ಮೂರು

ಅವತಾರಗಳನ್ನು ಮಾಡಿದನೆಂಬ ವಿಷಯ ಮಹಾಭಾರತ ಪಂಚರಾತ್ರ-ವಾಯು-ಪುರಾಣಾದಿ ಸ್ಮೃತಿಗ್ರಂಥಗಳಲ್ಲಿ ಮಾತ್ರವಲ್ಲದೆ ಋಗ್ವೇದದಲ್ಲೂ ಸಹ ಅನೇಕಕಡೆ ಬಂದಿದೆಯೆಂಬುದನ್ನು ಸಮರ್ಥಿಸುತ್ತಾ ವಾಯುಸ್ತುತಿಯ ಅನೇಕ ವಾಕ್ಯಗಳಿಗೆ ಶ್ರುತಿಸಮಾಖ್ಯೆಗಳನ್ನು ಶ್ರೀಮದ್ವಾದಿರಾಜಸ್ವಾಮಿಗಳು ಯುಕ್ತಿ-ಮಲ್ಲಿಕಾ ಗ್ರಂಥದ ಫಲಸೌರಭದಲ್ಲಿ ತೋರಿಸಿಕೊಟ್ಟಿದ್ದಾರೆ. (ಭೀಮಾವತಾರದ ಶ್ಲೋಕಗಳಿಗೆ ಹೇಳಿದ ಅನೇಕ ಸಮಾಖ್ಯೆಗಳನ್ನು ಹಿಂದಿನ ಏಳು ಶ್ಲೋಕಗಳ ನಿರೂಪಣೆಯಲ್ಲಿ ಅಲ್ಲಲ್ಲೇ ನಾವೂ ಸಹ ತೋರಿಸಿಕೊಟ್ಟಿದ್ದೇವೆ.) ಈ ಪ್ರಕಾರ ವಾಯುದೇವರ ಮೂರೂ ಅವತಾರಗಳ ಪ್ರಚಾರವು ವಿದ್ವದ್ಗೋಷ್ಠಿಯಲ್ಲಿ ಪ್ರಸಿದ್ಧವಾಗಿದ್ದರೂ ಅಜ್ಞಜನರಲ್ಲಿ ಹನುಮ-ಭೀಮ ಇಬ್ಬರ ಪ್ರಚಾರವೇ ಹೆಚ್ಚಾಗಿದ್ದು ಅವರಿಬ್ಬರ ಬಗ್ಗೆ ಯಾರಿಗೂ ಯಾವ ಸಂಶಯವಿಪರ್ಯಯ-ಗಳೂ ಬರುವುದಿಲ್ಲ. ಅದಕ್ಕೆ ಪ್ರತಿಯಾಗಿ ಮಧ್ವಾಚಾರ್ಯರ ಬಗ್ಗೆ ಅನೇಕ ಆಕ್ಷೇಪಗಳು ಬರುವುದನ್ನು ಗಮನಿಸಿದ ಶ್ರೀವಾದಿರಾಜಸ್ವಾಮಿಗಳವರು ಮಧ್ವಾಚಾರ್ಯರು ವಾಯುದೇವರ ಅವತಾರವೇ ಆಗಿದ್ದಾರೆಂಬುದನ್ನು ಸ್ಮೃತಿವಾಕ್ಯಗಳಿಂದ ಮಾತ್ರವಲ್ಲದೆ ಅನೇಕ ಶ್ರುತಿವಾಕ್ಯಗಳ ಆಧಾರದಿಂದಲೂ ಅನೇಕ ಯುಕ್ತಿಗಳಿಂದ ಸ್ಪಷ್ಟವಾಗಿ ವಿಸ್ತಾರವಾಗಿ ಯುಕ್ತಿಮಲ್ಲಿಕಾದಲ್ಲಿ ಸಮರ್ಥಿಸಿಕೊಟ್ಟಿದ್ದಾರೆ. ಆ ಗ್ರಂಥವನ್ನು ಅನುಸರಿಸಿ ಕೆಲವು ಮುಖ್ಯಾಂಶ-ಗಳನ್ನು ಮಾತ್ರ ಕೆಳಗೆ ಸಂಗ್ರಹಿಸಿಕೊಟ್ಟಿದ್ದೇನೆ. ಶ್ರುತಿಗಳ ಅರ್ಥವೂ ಹೆಚ್ಚಿನ ವಿವರಣೆಯೂ ಬೇಕಾದವರು ಫಲಸೌರಭದಲ್ಲಿ ೫೦೧ ರಿಂದ ೭೨೦ರ ವರೆಗಿನ ಶ್ಲೋಕಗಳನ್ನು ನೋಡಬಹುದು. ಬಳಿತ್ಥಾಸೂಕ್ತದ ಐದೂ ಮಂತ್ರಗಳ ವಿಸ್ತಾರವಾದ ವಿವರಣೆಯೂ ಅಲ್ಲೇ ಪುಟ ೬೬೭ ರಿಂದ ೬೭೨ರವರೆಗಿನ ಆರು ಪುಟಗಳಲ್ಲಿ ಸಿಗುತ್ತದೆ.

318. ವಾಯುಪುರಾಣದ ಹೇಳಿಕೆ—ಶ್ರೀವಾದಿರಾಜಸ್ವಾಮಿಗಳು ಉದಹರಿಸಿರುವ ಪ್ರಮಾಣವಾಕ್ಯಗಳಲ್ಲಿ ವಾಯುಪುರಾಣದ ವಾಕ್ಯಗಳು ಬಹಳ ಸರಳವಾಗಿರುವುದರಿಂದ ಮೊದಲು ಅವನ್ನೇ ಉದಹರಿಸುವೆನು. ಈ ಪ್ರಮಾಣ ವಾಕ್ಯಗಳಲ್ಲೂ (ಯು. ಮ. ೭೧೪–೧೮ ಶ್ಲೋ. ಫಲಸೌರಭ) ವಾಯುದೇವರ ಮೂರು ಅವತಾರಗಳೂ ಕ್ರಮವಾಗಿ ವರ್ಣಿಸಲ್ಪಟ್ಟಿವೆ :—

ವಾಯೋರ್ದಿವ್ಯಾನಿ ರೂಪಾಣಿ ಪದ್ಮತ್ರಯಯುತಾನಿ ಚ ।

(ಅರ್ಥ)—ವಾಯುದೇವರ ದಿವ್ಯವಾದ ಸಕಲರೂಪಗಳೂ ಮೂರು ಪದ್ಮ ರೇಖೆಗಳುಳ್ಳವುಗಳಾಗಿರುತ್ತವೆ. (ಇದು ವಾಯುದೇವರ ರೂಪಗಳ ವಿಶೇಷ ಲಕ್ಷಣವೆಂದು ತಿಳಿಯಬೇಕು. ಈ ವಿಶೇಷ ಲಕ್ಷಣದಿಂದಲೇ ಅವು ವಾಯುರೂಪಗಳೆಂದು ನಿರ್ಧರಿಸಬೇಕು.

ತ್ರಿಕೋಟಿಮೂರ್ತಿಸಂಯುಕ್ತ—ಸ್ತ್ರೇತಾಯಾಂ ರಾಕ್ಷಸಾಂತಕಃ ।
ಹನುಮಾನಿತಿ ವಿಖ್ಯಾತೋ ರಾಮಕಾರ್ಯಧುರಂಧರಃ ॥ ೧ ॥

(ಅರ್ಥ) ಆ ವಾಯುದೇವರು ಪರಮಾತ್ಮನ ಸೇವೆಗಾಗಿ ಮೂರು ಕೋಟಿ ರೂಪಗಳನ್ನು ಧರಿಸಿದ್ದಾರೆ. (ಇದರ ವರ್ಣನೆ ಹರಿಕಥಾಮೃತಸಾರ-ದಲ್ಲಿ ೨೩ನೇ ಸಂಧಿಯಲ್ಲಿ ೨೧ನೇ ಪದ್ಯದಲ್ಲಿ ಹೀಗೆ ಬಂದಿದೆ—"ಖೇಟ ಕುಕ್ಕುಟ ಜಲಟವೆಂಬ ತ್ರಿ- । ಕೋಟಿರೂಪವ ಧರಿಸಿ"॥ ಖೇಟ—ಖೇ-ಆಕಾಶದಲ್ಲಿ, ಅಟ-ಅಡ್ಡಾಡುವ ಪಕ್ಷಿಗಳಲ್ಲಿರುವ ಕೋಟಿ ರೂಪಗಳು, ಕುಕ್ಕುಟ-ಭೂಚರ ಪ್ರಾಣಿಗಳಲ್ಲಿರುವ ಕೋಟಿರೂಪಗಳು, ಜಲಟ (ಜಲ+ಅಟ) ಜಲಚರಪ್ರಾಣಿಗಳಲ್ಲಿ ಸನ್ನಿಹಿತವಾದ ಕೋಟಿರೂಪಗಳು.) ಆ ವಾಯುದೇವರು ತ್ರೇತಾಯುಗದಲ್ಲಿ ಶ್ರೀರಾಮನ ಕಾರ್ಯನಿರ್ವಹಣೆಗಾಗಿ ಹನುಮಾನ್ ಎಂಬ ಪ್ರಸಿದ್ಧವಾದ ಹೆಸರಿನಿಂದ ಅವತಾರ ಮಾಡಿ ಅನೇಕ ರಾಕ್ಷಸರನ್ನು ನಾಶಮಾಡಿದನು.

ಸ ವಾಯುರ್ಭೀಮಸೇನೋಽಭೂದ್ ದ್ವಾಪರಾಂತೇ ಕುರೂದ್ವಹಃ ।
ಕೃಷ್ಣ ಸಂಪೂಜಯಾಮಾಸ ಹತ್ವಾ ದುರ್ಯೋಧನಾದಿಕಾನ್ ॥ ೨ ॥

(ಅರ್ಥ)—ಆ ವಾಯುವೇ ದ್ವಾಪರಯುಗದ ಕಡೆಯ ಭಾಗದಲ್ಲಿ ಕುರು-ಕುಲದಲ್ಲಿ ಭೀಮಸೇನನೆಂಬ ಹೆಸರಿನಿಂದ ಎಲ್ಲರಿಗಿಂತಲೂ ಶ್ರೇಷ್ಠನಾಗಿ ಅವತರಿಸಿ ದುರ್ಯೋಧನಾದಿಗಳನ್ನು ಸಂಹರಿಸಿ ಶ್ರೀಕೃಷ್ಣನಿಗೆ ಸೇವೆಸಲ್ಲಿಸಿದನು.

ತತಃ ಕಲಿಯುಗೇ ಪ್ರಾಪ್ತೇ ತೃತೀಯೋ ಮಧ್ವನಾಮಕಃ ॥ ೩ ॥
ಭೂರೇಖಾದಕ್ಷಿಣೇ ಭಾಗೇ ಮಣಿಮದ್ಗರ್ವಶಾಂತಯೇ ।
ದಿಕ್ಪರ್ವಂಸ್ತತ್ರಭಾಂ ಸದ್ಯೋಽವತೀರ್ಣೋತ್ರ ದ್ವಿಜಾನ್ವಯೇ ॥ ೪ ॥

(ಅರ್ಥ)—ಅನಂತರ ಕಲಿಯುಗವು ಪ್ರಾಪ್ತವಾಗಲು ದಕ್ಷಿಣ ಭಾರತದಲ್ಲಿ ಒಂದು ಸತ್ಕುಲಪ್ರಸೂತ ಬ್ರಾಹ್ಮಣವಂಶದಲ್ಲಿ ಆ ವಾಯುವು ಮೂರನೇ ಸಾರಿ ಮಧ್ವ ಎಂಬ ಹೆಸರಿನಿಂದ ಮಣಿಮಂತನೆಂಬ ದೈತ್ಯನ ಗರ್ವಶಾಂತಿಗಾಗಿ ಅವತಾರಮಾಡಿ ಆಕ್ಷಣ (ಸದ್ಯಃ) ಅವನು ಮಾಡಿದ ಅಪಪ್ರಚಾರವನ್ನು ಅಡಗಿಸಿದನು.

ದ್ವೈಪಾಯನಸ್ಯ ಸೇವಾರ್ಥಂ ಬದರ್ಯಾಂತು ಕಲೌಯುಗೇ ।
ವಾಯುಶ್ಚ ಯತಿರೂಪೇಣ ಕೃತ್ವಾ ದುಶ್ಶಾಸ್ತ್ರಖಂಡನಮ್ ॥ ೫ ॥

(ಅರ್ಥ)—ಆ ವಾಯುವು ಕಲಿಯುಗದಲ್ಲಿ ಬದರಿಯಲ್ಲಿ ವಾಸಮಾಡುವ ವೇದವ್ಯಾಸರ ಸೇವೆಗಾಗಿ ಯತಿರೂಪ ಧರಿಸಿ ದುಶ್ಶಾಸ್ತ್ರಗಳನ್ನು ಖಂಡಿಸುತ್ತಾರೆ—ಈ ಪ್ರಕಾರ ವಾಯುಪುರಾಣದ ವಾಕ್ಯಗಳನ್ನು ಉದ್ಧರಿಸಿ ಶ್ರೀ ವಾದಿರಾಜರು ಈ ಪ್ರಸ್ತಾಪವನ್ನು ಮುಗಿಸುತ್ತಾರೆ—

ಇತ್ಯಾದ್ಯಾಃ ಸೂಕ್ತಯೋ ವಾಯು—ಪುರಾಣಸ್ಥಾಃ ಸಹಸ್ರಶಃ ।
ಅವತಾರತ್ರಯಂ ವಾಯೋಃ ಕಥಯಂತಿ ಮಹಾತ್ಮನಃ ॥

(ಶ್ಲೋ. ೭೧೯)

(ಅರ್ಥ)—ಇವೇ ಮೊದಲಾದ ವಾಯುಪುರಾಣದಲ್ಲಿರುವ ಸಹಸ್ರಾರು ಉಕ್ತಿ (ಹೇಳಿಕೆ) ಗಳು ಮಹಾತ್ಮರಾದ ವಾಯುದೇವರ ಅವತಾರತ್ರಯದ ಮಹಿಮೆಯನ್ನು ಹೇಳುತ್ತವೆ. ಆದ್ದರಿಂದ ಯಾರೂ ಈ ಮೂರು ಅವತಾರಗಳ ವಿಷಯವಾಗಿಯೂ ಕಿಂಚಿತ್ತೂ ಸಂದೇಹಪಡಬೇಕಾಗಿಲ್ಲವೆಂದು ಭಾವ.

319. ಬಳಿತ್ಥಾಸೂಕ್ತದ ಹೇಳಿಕೆ—ಬಳಿತ್ಥಾಸೂಕ್ತವು ಋಗ್ವೇದದ ಪ್ರಥಮ ಮಂಡಲದಲ್ಲಿ ೧೪೧ನೇ ಸೂಕ್ತದಲ್ಲಿ ಮೊದಲ ಐದು ಮಂತ್ರಗಳನ್ನು (ಒಂದು ವರ್ಗವನ್ನು) ಒಳಗೊಂಡಿದೆ. ಮತ್ತು ದ್ವಿತೀಯಾಷ್ಟಕದ ದ್ವಿತೀಯಾಧ್ಯಾಯದ ಎಂಟನೇ ವರ್ಗವೂ ಆಗಿದೆ. ಈ ಸೂಕ್ತದ ಅರ್ಥವನ್ನು ತೈತ್ತಿರೀಯ, ಐತರೇಯ, ಛಾಂದೋಗ್ಯ ಬೃಹದ್ಭಾಷ್ಯಗಳ ಟೀಕೆಗಳ ಕಡೆಯ ಭಾಗಗಳಲ್ಲೂ, ತಾತ್ಪರ್ಯನಿರ್ಣಯದ ಎರಡನೇ ಅಧ್ಯಾಯದ ವ್ಯಾಖ್ಯಾನಗಳಲ್ಲೂ ವಿವರಿಸಿದೆಯಲ್ಲದೆ ಯುಕ್ತಿಮಲ್ಲಿಕಾ ಫಲಸೌರಭದಲ್ಲೂ (ಶ್ಲೋ. ೬೮೨–೭೧೨) ಬಹಳ ವಿಸ್ತಾರವಾಗಿ ಹೇಳಿದ್ದಾರೆ. (ಹೆಚ್ಚು ವಿವರಣೆಗೆ ಅಲ್ಲೇ

ನೋಡಬೇಕು.) ಇಲ್ಲಿ ಪ್ರಸಂಗೋಚಿತವಾದ ಸರಳಾರ್ಥ ಮಾತ್ರ ತೋರಿಸಿದ್ದೇನೆ, ಇರಲಿ. ಹಿಂದೆ ಉದಹರಿಸಿದ (ಖಂ. 318) ವಾಯುಪುರಾಣ ವಾಕ್ಯಗಳಲ್ಲಿ ಹೇಳಿದಂತೆಯೇ ಬಳಿತ್ಥಾಸೂಕ್ತದಲ್ಲೂ ವಾಯುದೇವರ ಮೂರು ಅವತಾರಗಳ ವರ್ಣನೆ ಸ್ಪಷ್ಟವಾಗಿ ಬಂದಿದೆಯೆಂದು ಯುಕ್ತಿಮಲ್ಲಿಕಾದಲ್ಲಿ ತೋರಿಸುತ್ತಾರೆ—

ಬಳಿತ್ಥೇತಿ ಶ್ರುತಿರ್ವಾಯೋ—ರ್ದೇವಸ್ಯ ಪ್ರಥಮಂ ವಪುಃ ।
ದ್ವಿತೀಯಂ ಚ ತೃತೀಯಂ ಚ ವಕ್ತಿ ವಾಕ್ಯತ್ರಯೇ ಕ್ರಮಾತ್
॥ ೬೮೨ ॥

(ಶಬ್ದಾರ್ಥ)—ಶ್ರುತಿಃ-ಋಗ್ವೇದ ವಾಕ್ಯವು. ವಪುಃ-ದೇಹವನ್ನು, ರೂಪವನ್ನು ಅಥವಾ ಅವತಾರವನ್ನು. ವಕ್ತಿ-(ಸ್ಪಷ್ಟವಾಗಿ) ಹೇಳುತ್ತದೆ.

(ಅರ್ಥ) ಋಗ್ವೇದಾಂತರ್ಗತವಾದ ಬಳಿತ್ಥಾಶ್ರುತಿಯು ವಾಯುದೇವರ ಪ್ರಥಮ ದ್ವಿತೀಯ ಮತ್ತು ತೃತೀಯ ಅವತಾರಗಳನ್ನು ಕ್ರಮವಾಗಿ ಮೂರು ವಾಕ್ಯಗಳಲ್ಲಿ ಹೇಳುತ್ತದೆ. ಹೇಗೆಂದರೆ ಪ್ರಥಮ ಮಂತ್ರದ ಉತ್ತರಾರ್ಧವು 'ಯದೀಮುಪ ಹ್ವರತೇ ಮತಿರ್ ಋತಸ್ಯ ಧೇನಾಃ....' ಎಂದೂ, ಎರಡನೇ ಮಂತ್ರದ ಪೂರ್ವಾರ್ಧವು 'ಪೃಕ್ಷೋ ವಪುಃ ಪಿತುಮಾನ್....ದ್ವಿತೀಯಮಾ....' ಎಂದೂ, ಉತ್ತರಾರ್ಧವು 'ತೃತೀಯಮಸ್ಯ ವೃಷಭಸ್ಯ....ದಶಪ್ರಮತಿಂ ಜನಯಂತ....' ಎಂದೂ ಇದೆ. ಈ ಮೂರು ವಾಕ್ಯಗಳಿಗೆ ಸರಳಾರ್ಥ ಹೀಗಾಗುತ್ತದೆ—೧) ಆ ವಾಯುದೇವರ ಮೊದಲ ಅವತಾರವು ಹನುಮಂತ. ಅವನು ನಮ್ರವಾಗಿ ಸೇವೆಮಾಡುತ್ತಾ ಶ್ರೀರಾಮನ ಸಮೀಪದಲ್ಲೇ ಇರುತ್ತಾನೆ, ಶ್ರೀರಾಮನ ಕಾರ್ಯಸಾಧಕನು. ೨) ಆ ವಾಯುದೇವರ ಎರಡನೇ ಅವತಾರವು ಭೀಮಸೇನ. ಅವನು ದುರ್ಯೋಧನಾದಿ ಶತ್ರುಗಳ ಸೈನ್ಯವನ್ನು ಸಂಹಾರಮಾಡಿದನಲ್ಲದೆ ಬಹಳ ಅನ್ನವನ್ನು ಭಕ್ಷಿಸುವವನು (ವೃಕೋದರ). ೩) ದೇವಶ್ರೇಷ್ಠರಾದ ಈ ವಾಯುದೇವರ ಮೂರನೆಯ ಅವತಾರವು 'ಪೂರ್ಣ ಬೋಧ' ಎಂದು ಹೆಸರುಳ್ಳದ್ದು. ಅದನ್ನು ತಾಯಿಯು ಹಡೆದಳು. ಹೀಗೆ ಮೂರು ವಾಕ್ಯಗಳಲ್ಲಿ ಕ್ರಮವಾಗಿ ಮೂರು ಅವತಾರಗಳ ವರ್ಣನೆ ಬಂದಿದೆ.

ಶ್ರುತಿವಾಕ್ಯದಲ್ಲಿರುವ ಮತಿ ಶಬ್ದಕ್ಕೆ ಹನುಮಂತ ಎಂದೇ ಅರ್ಥ. ಪೃಕ್ಷಃ ಪಿತುಮಾನ್ ಶಬ್ದಗಳ ಅರ್ಥ ಹಿಂದೆ (ಖಂಡ 316 ಜ, ಝ) ಬಂದಿದೆ. ದಶಪ್ರಮತಿ ಎಂಬುದು 'ಪೂರ್ಣಪ್ರಜ್ಞ' ಎಂಬ ಮಧ್ವಾಚಾರ್ಯರ ಆಶ್ರಮನಾಮದ (ಸನ್ಯಾಸದೀಕ್ಷೆ ಕೊಟ್ಟಾಗ ಇಟ್ಟ ಹೆಸರಿನ) ಪರ್ಯಾಯ ಪದ.

ಈ ಶಬ್ದಗಳಿಗೆ ಈ ಅರ್ಥವನ್ನೇ ಏಕೆ ಹೇಳಬೇಕೆಂದರೆ ವಾದಿರಾಜರು ಯುಕ್ತಿಗಳನ್ನು ತೋರಿಸುತ್ತಾರೆ—

ತಚ್ಚ ಪ್ರಸಿದ್ಧಸಂತ್ಯಾಗಾ—ಯೋಗದನ್ಯಾಪ್ರಸಿದ್ಧಿತಃ ।
ತತ್ವವಾದ್ಯುದಿತಂ ರೂಪ—ತ್ರಯಮೇವೇತಿ ಮೇ ಮತಿಃ ॥ ೬೮೩ ॥

(ಶಬ್ದಾರ್ಥ) ತಚ್ಚ–ಈ ರೀತಿಯೇ ಅರ್ಥ ಹೇಳುವುದು. ಸಂತ್ಯಾಗ–ಬಿಡುವುದು, ಅಯೋಗಾತ್–ಸರಿಯಲ್ಲವಾದ್ದರಿಂದಲೂ, ಅನ್ಯ–ಬೇರೆ ಅರ್ಥವು, ತತ್ವವಾದಿ–ಮಧ್ವಮತಾನುಯಾಯಿಗಳು, ಉದಿತಂ–ಹೇಳುವ.

(ಶ್ಲೋಕಾರ್ಥ) ಹೀಗೆ ಅರ್ಥ ಹೇಳದಿದ್ದರೆ, ಯೋಗ್ಯವಾಗಿ ಹೊಂದಿಕೆಯಾಗುವ ಪ್ರಸಿದ್ಧಾರ್ಥವನ್ನು ಬಿಟ್ಟಂತೆಯೂ ಆಗುವುದಲ್ಲದೆ ಬೇರೆ ಯಾವ ಅರ್ಥವೂ ಹೊಂದಿಕೆಯಾಗಿ ಕೂಡುವುದೂ ಇಲ್ಲ; ಎರಡೂ ಅನುಚಿತ. ಆದಕಾರಣ ಮತಿ, ಪೃಕ್ಷ, ದಶಪ್ರಮತಿ ಮೊದಲಾದ ಪದಗಳಿಗೆ ತತ್ವವಾದಿಗಳು ಹೇಳುವ ಹನುಮ–ಭೀಮ–ಮಧ್ವ ಎಂಬ ಅರ್ಥವನ್ನೇ ಹೇಳಬೇಕು ಎಂಬುದು ನನ್ನ (ವಾದಿರಾಜರ) ವಾದ. ಅಂತೂ ಒಟ್ಟಿನಲ್ಲಿ ಋಗ್ವೇದದಲ್ಲೂ ವಾಯುದೇವರ ಮೂರು ಅವತಾರಗಳ ವರ್ಣನೆ ಸ್ಪಷ್ಟವಾಗಿ ಬಂದಿದೆಯೆಂದು ಸಿದ್ಧವಾಯಿತು.

320. ಋಗ್ವೇದದಲ್ಲಿ ಹನುಮಂತನ ಪ್ರಸಕ್ತಿ—ಬಳಿತ್ಥಾ ಸೂಕ್ತದಲ್ಲಿ ಮಾತ್ರವೇ ಅಲ್ಲ, ಇನ್ನೂ ಅನೇಕ ಋಗ್ವೇದ ಮಂತ್ರಗಳಲ್ಲೂ ಕೂಡ ವಾಯುದೇವರ ಅವತಾರತ್ರಯದ ವಿಚಾರಗಳು ಸ್ಪಷ್ಟವಾಗಿ ಉಕ್ತವಾಗಿವೆ. ಉದಾಹರಣೆಗೆ—"ಪ್ರ ಸೇನಾನೀ...." ರಿತಿ ಶ್ರುತ್ಯಾ ಯದ್ ಭೀಮಹನುಮತ್ಕಥಾ । ಸ್ಪಷ್ಟಂ ನಿರೂಪಿತಾತ್ರೈವ ತತ್ ಸೋಮಃ ಸೋಮವಂಶಜಃ ॥ (ಯುಕ್ತಿಮಲ್ಲಿಕಾ, ಫಲಸೌರಭ ೫೦೮ ಶ್ಲೋ.) 'ಪ್ರ ಸೇನಾನೀಃ....' ಎಂಬ ಶ್ರುತಿಯಲ್ಲಿ (ಋ. ೯।೯೬।೧). ಭೀಮನ ಕಥೆಯೂ

ಹನುಮಂತನ ಚರಿತ್ರೆಯೂ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ ; ಆದಕಾರಣ ಈ ಮಂತ್ರದಲ್ಲಿರುವ 'ಸೋಮ' ಶಬ್ದಕ್ಕೆ 'ಸೋಮ (ಚಂದ್ರ)' ವಂಶೋತ್ಪನ್ನನಾದ ಭೀಮನೆಂದೇ ಅರ್ಥ ಮಾಡಬೇಕು, ಚಂದ್ರನೆಂದು ಅರ್ಥವಲ್ಲ. ಆ ಶ್ರುತಿಯು ಪೂರ್ಣಪಾಠವು ಹೀಗಿದೆ—

ಪ್ರ ಸೇನಾನೀಃ ಶೂರೋ ಅಗ್ರೇ ರಥಾನಾಂ
ಗವ್ಯನ್ನೇತಿ ಹರ್ಷತೇ ಅಸ್ಯ ಸೇನಾ ।
ಭದ್ರಾನ್ ಕೃಣ್ವನ್ನಿಂದ್ರಹವಾನ್ತ್ಸಖಿಭ್ಯ
ಆ ಸೋಮೋ ವಸ್ತ್ರಾ ರಭಸಾನಿ ದತ್ತೇ ॥

ಈ ಶ್ರುತಿಗೆ ಭೀಮಪರವಾದ ಅರ್ಥವನ್ನು ಈ ಮೊದಲೇ 271–ಢ ಖಂಡದಲ್ಲಿ ಹೇಳಿದ್ದೇವೆ. ಹನುಮತ್ಪರವಾಗಿ ಈ ಶ್ರುತಿಯು ಅರ್ಥ ಏನೆಂದರೆ— ಶೂರತ್ವಾದಿ ಸಕಲ ಪರಾಕ್ರಮದಿಂದ ಸಂಪನ್ನವಾದ ಕಪಿಸೇನಾ ನಾಯಕನಾದ ಹನುಮಂತನು (ಶೂರಃ ಸೇನಾನೀಃ) ರಾಕ್ಷಸಸೈನ್ಯಗಳ ಮುಂದೆ-ಮುಂದೆ ಹೋಗಿ-ಹೋಗಿ (ರಥಾನಾಂ ಅಗ್ರೇ ಗವ್ಯನ್ ಏತಿ) ಆ ರಾಕ್ಷಸರನ್ನು ಧ್ವಂಸಮಾಡುತ್ತಿದ್ದುದನ್ನು ಕಂಡು ಇವನ ಸೈನ್ಯವಾದ (ಅಸ್ಯ ಸೇನಾ) ದೇವತೆಗಳೂ ಕಪಿಸೈನ್ಯದ ವೀರರೂ ಸಹ (ಹರ್ಷತೇ) ಹರ್ಷದಿಂದ ಉಬ್ಬಿಹೋಗುತ್ತಾರೆ. ಸೀತಾಕೃತಿಯಲ್ಲಿ ಆವಿಷ್ಟನಾಗಿದ್ದ ದೇವೇಂದ್ರನು (ಇಂದ್ರಹವಾನ್) ಈ ಹನುಮಂತ ಸಮುದ್ರಲಂಘನ ಮಾಡಿದ್ದು ಅಶೋಕವನ ಭಂಗಮಾಡಿದ್ದು ಲಂಕೆಯನ್ನು ಸುಟ್ಟುಹಾಕಿದ್ದೇ ಮೊದಲಾದ ಪರಾಕ್ರಮಗಳನ್ನು (ಭದ್ರಾನ್) ಶ್ಲಾಘಿಸುತ್ತಾ (ಕೃಣ್ವನ್), ಇವನು (ಹನುಮಂತ) ಪಾಪಿಗಳಾದ ರಾಕ್ಷಸರು ತನ್ನ ಬಾಲಕ್ಕೆ ವಸ್ತ್ರಗಳನ್ನು ಬಲವಾಗಿ ಸುತ್ತುತ್ತಾ ಹೋದರೂ (ವಸ್ತ್ರಾ ರಭಸಾನಿ) ಸ್ವಲ್ಪವೂ ಅಂಜದೆ ಮುಗುಳುನಗೆ ನಗುತ್ತಾ ಇದ್ದು ಆ ರಾಕ್ಷಸರು

ಬಟ್ಟೆಗೆ ಎಣ್ಣೆ ಹಾಕಿ ಬೆಂಕಿ ಹಚ್ಚಲು ಇಡೀ ಲಂಕಾಪಟ್ಟಣವನ್ನು ವಾಯು-ಸಖನಾದ ಅಗ್ನಿಗೆ (ಸಖಿಭ್ಯಃ) ಆಹುತಿಯಾಗಿ ಕೊಟ್ಟದ್ದನ್ನೂ (ದತ್ತೀ) ನೋಡಿ ಹಿಗ್ಗುತ್ತಾನೆ (ಹರ್ಷತೀ). (ಹೆಚ್ಚಿನ ವಿವರಣೆಗೆ ಯುಕ್ತಿಮಲ್ಲಿಕಾ ಪುಟ ೬೩೮ ನೋಡಿರಿ). ಈ ಅರ್ಥದಲ್ಲಿ 'ಸೋಮಃ' ಎಂದರೆ ವಾಯು-ಕುಮಾರನಾದ ಹನುಮಂತನೆಂದೇ ಅರ್ಥ.

ಇದೇ ಪ್ರಕಾರ ಅನೇಕ ಶ್ರುತಿವಾಕ್ಯಗಳು ವಾಯುಸ್ತುತಿಯಲ್ಲಿ ಹೇಳಿದ ಹನುಮನ್ಮಹಿಮೆಗಳಿಗೆ ಸಮಾಖ್ಯೆಯಾಗಿವೆಯೆಂದು ಶ್ರೀವಾದಿರಾಜರು ಯುಕ್ತಿಮಲ್ಲಿಕಾದಲ್ಲಿ ತೋರಿಸಿದ್ದಾರಲ್ಲದೆ 'ಮಧ್ವಮಂತ್ರಾರ್ಥಮಂಜರೀ' ಎಂಬ ಮತ್ತೊಂದು ಗ್ರಂಥದಲ್ಲೂ (ಅದು ಅದ್ಯಾಪಿ ಮುದ್ರಿತವಾಗಿಲ್ಲ) ಅನೇಕ ಶ್ರುತಿವಾಕ್ಯಗಳಿಗೆ ಹನುಮತ್ಪರವಾಗಿ ಅರ್ಥ ಹೇಳಿದ್ದಾರೆ.

321. ಋಗ್ವೇದದಲ್ಲಿ ಮಧ್ವಾಚಾರ್ಯ ಉಲ್ಲೇಖಗಳು— ಹಿಂದೆ (ಖಂಡ 317) ತಿಳಿಸಿದಂತೆ ಹನುಮಂತನೂ ಭೀಮನೂ ವಾಯು-ದೇವರ ಅವತಾರಗಳೆಂಬ ಬಗ್ಗೆ ಯಾವ ವಿರೋಧವೂ ಬರಲು ಶಕ್ಯವಿಲ್ಲವಾದ್ದರಿಂದ ಆ ವಿಚಾರವನ್ನು ಮುಂದುವರಿಸಬೇಕಾಗಿಲ್ಲ. ಆದರೆ ಶ್ರೀಮಧ್ವಾ-ಚಾರ್ಯರು ವಾಯುದೇವರ ತೃತೀಯಾವತಾರವೆಂಬ ವಿಚಾರ ಮಾತ್ರ ಜನ-ಸಾಮಾನ್ಯರಲ್ಲಿ ಅಷ್ಟು ಪ್ರಸಿದ್ಧಿಗೆ ಬಂದಿಲ್ಲವಾದ್ದರಂದ ಶ್ರೀವಾದಿರಾಜರು ಈ ವಿಷಯವನ್ನೇ ವಿಸ್ತಾರವಾಗಿ ಪ್ರತಿಪಾದಿಸುತ್ತಾ ಅನೇಕ ಶ್ರುತಿವಾಕ್ಯಗಳಲ್ಲಿ ಮಧ್ವಾಚಾರ್ಯರ ಹೆಸರೇ ಸಾಕ್ಷಾತ್ತಾಗಿ ಹೇಳಲ್ಪಟ್ಟಿದೆಯಲ್ಲದೆ ಇನ್ನೂ ಅನೇಕ ವಾಕ್ಯಗಳಲ್ಲಿ ನೇರವಾಗಿ ಹೆಸರು ಹೇಳದಿದ್ದರೂ ಅವರ ಚರಿತ್ರೆಯೂ ಮಹಿಮೆಯೂ ಪ್ರಸ್ತಾಪಿಸಲ್ಪಟಿದೆಯೆಂದು ಸ್ಥಾಪನೆ ಮಾಡಿದ್ದಾರೆ—

ಸ್ಪಷ್ಟಂ ಮಧ್ವಾಭಿದಾನಾಂಕಾಃ ಸಪ್ತರ್ಚೋಽತ್ರ ವಿಚಾರಿತಾಃ ।
ಅಷ್ಟರ್ಚಸ್ತಚ್ಚರಿತ್ರಾಂಕಾಃ... (ಶ್ಲೋ. ೬೫೩)

(ಶಬ್ದಾರ್ಥ) — ಮಧ್ವ–ಅಭಿಧಾನಾ–ಅಂಕಾಃ = 'ಮಧ್ವ' ಎಂಬ ಹೆಸರು ನೇರವಾಗಿ ಅಂಕಿತವಾಗಿರುವ, ಸಪ್ತ + ಋಚಃ = ಸಪ್ತರ್ಚಃ–ಏಳು ಋಙ್ಮಂತ್ರಗಳು, ಅತ್ರ = ಈ ಪ್ರಸಂಗದಲ್ಲಿ, ಈ ಗ್ರಂಥದಲ್ಲಿ, ಫಲಸೌರಭದ

ಶ್ಲೋ. ೪೯–೬೫ರಲ್ಲಿ, ಅಷ್ಟ+ಋಚಃ–ಎಂಟು ಋಙ್ಮಂತ್ರಗಳು, ತತ್–ಚರಿತ್ರ–ಅಂಕಾಃ–(ಮಧ್ವ ಎಂಬ ಹೆಸರು ಪ್ರತ್ಯಕ್ಷವಾಗಿ ಅಂಕಿತವಾಗಿಲ್ಲದಿದ್ದರೂ) ಅವರ ಚರಿತ್ರೆಯನ್ನು ಒಳಗೊಂಡ.

(ಶ್ಲೋಕಾರ್ಥ)—ಇದುವರೆಗೆ ಪ್ರಸ್ತಾಪಿಸಿದ ಗ್ರಂಥದಲ್ಲಿ (ಶ್ಲೋ ೪೯–೬೫ರಲ್ಲಿ) ಮಧ್ವಾಚಾರ್ಯರ ಹೆಸರನ್ನು ಸ್ಪಷ್ಟವಾಗಿ ಹೇಳಿರುವ ಏಳು ಋಙ್ಮಂತ್ರಗಳೂ (ಈ ಏಳರಲ್ಲಿ ಬಳಿತ್ಥಾಸೂಕ್ತ ಸೇರಿಲ್ಲ) ಅವರ ಹೆಸರು ನೇರವಾಗಿ ಹೇಳದಿದ್ದರೂ ಸ್ಪಷ್ಟವಾಗಿ ಅವರ ಚರಿತ್ರೆಯನ್ನು ಹೇಳುವ ಎಂಟು ಋಙ್ಮಂತ್ರಗಳೂ ವಿಚಾರ ಮಾಡಲ್ಪಟ್ಟವೆ—ಅವೆಲ್ಲವೂ ಮಧ್ವಾಚಾರ್ಯರ ಮಹಿಮೆಯನ್ನೇ ಘೋಷಿಸುತ್ತವೆ ಎಂದು ತೋರಿಸಲಾಗಿದೆ. ಅದೇ ಫಲಸೌರಭದಲ್ಲಿ ಇನ್ನೂ ಮುಂದೆ 'ಮಧ್ವ' ಎಂಬ ಹೆಸರೇ ಸ್ಪಷ್ಟವಾಗಿ ಬಂದಿರುವ ಬೇರೆ ಮೂರು ಮಂತ್ರಗಳ ಅರ್ಥವನ್ನೂ, ಹೆಸರಿಲ್ಲದಿದ್ದರೂ ಅವರ ಚರಿತ್ರೆಯನ್ನು ಹೇಳುವ ಮತ್ತೊಂದು ಋಙ್ಮಂತ್ರದ ಅರ್ಥವನ್ನೂ ಹೇಳಿದ್ದಾರೆ. ಅಂತೂ ಒಟ್ಟಿನಲ್ಲಿ—

೧) ಸ ಮಧ್ವ ಆ ಯುವತೇ, (ಋ ೯।೭೭।೨),೫೦೦–೦೬ ಶ್ಲೋ.

೨) ಉನ್ಮಧ್ವ ಊರ್ಮಿರ್ವನನಾ ಅತಿಷ್ಠಿಪತ್ (೯।೮೬।೪೦) ೫೩೮ ಶ್ಲೋ.

೩) ಸಪ್ತಸ್ವಸ್ರೂಃ....ವಿದ್ವಾನ್ ಮಧ್ವ ಉಜ್ಜಭಾರ (೧೦।೫।೫) ೫೪೫ ಶ್ಲೋ.

೪) ಮಧ್ವೋ ಅಂಶುಃ ಪವತೇ (೯।೮೯।೬) ೫೫೫–೫೯ ಶ್ಲೋ.

೫) ಸಿಂಹಂ ವಸಂತ ಮಧ್ವೋ ಅಯಾಸಂ (೯।೮೯।೩), ೫೬೦–೬೪ ಶ್ಲೋ.

೬) ಪ್ರಧಾರಾ ಮಧ್ವೋ ಅಗ್ರಿಯಃ (೯।೭।೨) ೫೬೫–೬೮ ಶ್ಲೋ.

೭) ಮಧ್ವಃ ಪವಸ್ವ ಧಾರಯಾ (೯।೨।೯) ೫೭೪–೭೬ ಶ್ಲೋ.

೮) ಇದಂತೇ ಪಾತ್ರಂ....ಮದಿರಸ್ಯ ಮಧ್ವಃ (೧೦।೧೧೨।೬) ೬೫೫–೬೪ ಶ್ಲೋ.

೯) ಮಧ್ವೋ ಮೇನಾವು (೭।೫೭।೧), ೬೬೬-೭೨ ಶ್ಲೋ.

೧೦) ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ (೧।೧೫೪।೫) ೬೭೩-೭೮ ಶ್ಲೋ.

ಈ ಹತ್ತು ಋಙ್ಮಂತ್ರಗಳಲ್ಲಿ 'ಮಧ್ವ' ಎಂಬ ಹೆಸರೂ ಹೇಳಿ ಅವರ ಚರಿತ್ರೆಯೂ ಉಕ್ತವಾಗಿದೆ. ಆದರೆ ಕೆಳಗೆ ಕಾಣಿಸಿದ ಒಂಬತ್ತು ಋಕ್ಕುಗಳಲ್ಲಿ 'ಮಧ್ವ' ಎಂಬ ಹೆಸರು ಇಲ್ಲದಿದ್ದರೂ ಸ್ಪಷ್ಟವಾಗಿ ಮಧ್ವಾಚಾರ್ಯರ ಚರಿತಾಂಶಗಳು ಉಕ್ತವಾಗಿವೆ—

೧) ಪ್ರ ಸೇನಾನಿಃ ಶೂರಃ (೯।೯೬।೧), ೫೦೮-೧೬ ಶ್ಲೋ.

೨) ಪ್ರಾವೀವಿಪದ್ ವಾಚ ಊರ್ಮಿಂ (೯।೯೬।೭), ೫೩೦-೩೬ ಶ್ಲೋ.

೩) ಸೋಮಃ ಪವತೇ ಜನಿತಾ (೯।೯೬।೫), ೫೧೭-೨೧ ಶ್ಲೋ.

೪) ಬ್ರಹ್ಮಾ ದೇವಾನಾಂ ಪದವೀಃ (೯।೯೬।೬), ಹಿಂದಿನಂತೆ.

೫) ಯೇನ ದೇವಾಃ ಪವಿತ್ರೇಣ (ಪವಮಾನ ಖಿಲ) ೫೭೮-೮೭ ಶ್ಲೋ.

೬) ಯತ್ತೇ ಪವಿತ್ರಮರ್ಚಿಷಿ (೯।೬೭।೨೩), ೫೯೫-೯೯ ಶ್ಲೋ.

೭) ಚಮೂಷಚ್ಛ್ಯೇನಃ (೯।೯೬।೧೯), ೬೨೮-೩೫ ಶ್ಲೋ.

೮) ಪವಿತ್ರಂ ತೇ ವಿತತಂ (೯।೮೩।೧), ೬೪೨-೫೦ ಶ್ಲೋ.

೯) ತೇನಃ ಪೂರ್ವಾಸಃ (೯।೭೭।೩), ೫೦೦-೫೦೬ ಶ್ಲೋ.

ಈ ಹತ್ತೊಂಬತ್ತು* ಪೂರ್ಣಋಕ್ಕುಗಳಲ್ಲದೆ ಅನೇಕ ಚಿಕ್ಕ ಚಿಕ್ಕ ವಾಕ್ಯಗಳೂ (ಯು. ಮ. ಟೀಕಾ. ಫುಟ ೬೫೯ ನೋಡಿ) ಸಹ ಮಧ್ವಾಚಾರ್ಯರ ಚರಿತ್ರೆಯನ್ನು ಹೇಳುವುದರಿಂದ ಶ್ರೀಮನ್ಮಧ್ವಾಚಾರ್ಯರು ವಾಯುದೇವರ ಮೂರನೇ ಅವತಾರವೇ ಹೌದೆಂಬುದು ಘಂಟಾಘೋಷವಾಗಿ

* ಋಕ್ಕುಗಳ ಅರ್ಥ ತಿಳಿಯಲಪೇಕ್ಷಿಸುವವರು ಅದರ ಮುಂದೆ ಕೊಟ್ಟಿರುವ ಶ್ಲೋಕಗಳನ್ನು ಫಲಸೌರಭದಲ್ಲಿ ಓದಿ ತಿಳಿದುಕೊಳ್ಳಬಹುದು. ಯುಕ್ತಿಮಲ್ಲಿಕಾ ಟೀಕೆಯಲ್ಲೂ ಈ ಋಕ್ಕುಗಳ ಅರ್ಥ ಚೆನ್ನಾಗಿ ವಿವರಿಸಿದ್ದಾರೆ.

ಸಿದ್ಧವಾಗುತ್ತದೆ. ಈ ಪ್ರಕಾರ ಆಗಮಪ್ರಮಾಣಗಳಿಂದ ಸ್ಥಾಪಿಸಿದ ಈ ಪ್ರಮೇಯವನ್ನೇ ಪ್ರಬಲ ಯುಕ್ತಿಗಳಿಂದಲೂ ಸಾಧಿಸುತ್ತಾರೆ.

(ಶ್ಲೋ. ೬೧೦-೬೧೨)

322. ಯುಕ್ತಿಗಳಿಂದಲೂ ಸಾಧನೆ—೧) ವಾಯುದೇವರ ಅವತಾರತ್ರಯವನ್ನು ಪ್ರತಿಪಾದಿಸುವ ಬಳಿತ್ಥಾಸೂಕ್ತವೇ ಅಗ್ನಿಸೂಕ್ತ-ವೆಂದು ಪ್ರಸಿದ್ಧವಾಗಿರುವುದರಿಂದ ಅದು ಹೇಗೆ ವಾಯುಪರವಾಗುತ್ತದೆ ? ಎಂಬ ಆಕ್ಷೇಪಕ್ಕೆ ಮೊದಲು ಸಮಾಧಾನ ಹೇಳುತ್ತಾರೆ. ಪ್ರಧಾನವಾಯುವೇ ಅಗ್ನಿಸೂರ್ಯಾದಿ ದೇವತೆಗಳಲ್ಲಿದ್ದು ಆಯಾ ದೇವತೆಗಳ ಹೆಸರಿನಿಂದಲೇ ಪ್ರಸಿದ್ಧನಾಗಿದ್ದಾನೆಂದು ಉಪನಿಷತ್ತುಗಳಲ್ಲಿ ಹೇಳಿದೆ. ಆ ವಾಯುವೇ ಸಕಲಾಂಗಗಳ ಚಲನೆಗೂ ಮುಖ್ಯ ಕಾರಣನಾದ್ದರಿಂದ ಅಂಗಾನಿನಯತೀತ್ಯಗ್ನಿಃ ಎಂಬ ವ್ಯುತ್ಪತ್ತಿಯಿಂದ ಅವನಿಗೇ ಅಗ್ನಿಯೆಂಬ ಹೆಸರಿದೆಯೆಂದು ಬೃಹದಾ-ರಣ್ಯಕೋಪನಿಷದ್ಭಾಷ್ಯದಲ್ಲಿ (೩।೨।೩) ಹೇಳಿದೆ. ಈ ಮುಖ್ಯವಾಯುವಿಗೆ ಅಗ್ನಿಯು ಅಧೀನನಾಗಿದ್ದಾನಲ್ಲದೆ ದೇಹಗಳಲ್ಲಿರುವ ಅಗ್ನಿಶಿಖೆಯೂ (ದೇಹದ ಶಾಖವೂ) ಮುಖ್ಯಪ್ರಾಣನ ಅಧೀನವಾಗಿದೆ; ಪ್ರಾಣ ಹೋದಕೂಡಲೇ ದೇಹವು ತಣ್ಣಗಾಗಿ ಹೋಗುತ್ತದೆ. ಹೀಗೆ ಪ್ರಾಣಾಗ್ನಿ ಎಂಬ ಹೆಸರು ವಾಯುದೇವರನ್ನೇ ಹೇಳುವುದರಿಂದ ಬಳಿತ್ಥಾಸೂಕ್ತವೂ ಪ್ರಾಣಾಗ್ನಿ ಸೂಕ್ತ-ವಾಗಿದ್ದು ವಾಯುದೇವರ ಮಹಿಮೆಯನ್ನು ಹೇಳುವುದು ಸೂಕ್ತವಾಗಿಯೇ ಇದೆ. ೨) ಹನುಮಂತನೆಂದರೂ ಮತಿ ಎಂದರೂ ಜ್ಞಾನಿ ಎಂದೇ ಅರ್ಥ. ಆದಕಾರಣ ಪ್ರಥಮ ಋಕ್ಕಿನಲ್ಲಿರುವ 'ಮತಿ' ಶಬ್ದಕ್ಕೆ ಹನುಮಂತನೆಂದೇ ಅರ್ಥ. ೩) ಪೃಕ್ಷಃ ಪಿತುಮಾನ್ ಶಬ್ದಗಳು ಭೀಮವಾಚಕವೆಂಬುದನ್ನು ಖಂಡ 316 ಙ-ಛಗಳಲ್ಲಿ ಪ್ರತಿಪಾದಿಸಿದ್ದೇವೆ. ೪) ಎರಡನೇ ಮಂತ್ರದಲ್ಲಿ ತೃತೀಯಾವತಾರದ ಹೆಸರು 'ದಶಪ್ರಮತಿ' ಎಂದು ಹೇಳಿದ್ದರೂ ಮುಂದೆ ಮೂರನೇ ಋಕ್ಕಿನಲ್ಲಿ 'ಮಧ್ವ ಅಥವೇ' ಎಂದು ಮಧ್ವರ ಹೆಸರನ್ನು ಸಾಕ್ಷಾತ್ತಾಗಿ ಗ್ರಹಣ ಮಾಡಿರುವುದರಿಂದ ಇಬ್ಬರೂ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ೫) ದಶಪ್ರಮತಿ-ಶಬ್ದವೂ ಪೂರ್ಣಪ್ರಜ್ಞರೆಂಬ ಶ್ರೀಮದಾಚಾರ್ಯರ ಇನ್ನೊಂದು ಹೆಸರೂ ಸಮಾನಾರ್ಥಕವಾದ್ದರಿಂದ

ಎರಡೂ ಒಬ್ಬರ ಹೆಸರೇ ಆಗಿವೆ. ಸರ್ವಸಾಮ್ಯವಿರುವಾಗ ಆ ಎರಡೂ ಏಕಾರ್ಥವಾಚಕವಲ್ಲವೆಂದು ಹೇಗೆ ಹೇಳಲು ಸಾಧ್ಯ ? ೬) ಅದಕ್ಕೂ ಹೆಚ್ಚಾಗಿ 'ದಶಪ್ರಮತಿ' ಎಂಬ ಹೆಸರಿನ ಬೇರೊಬ್ಬ ವ್ಯಕ್ತಿ ಜಗತ್ತ್ರಯದಲ್ಲೇ ಬೇರೆಲ್ಲೂ ಪ್ರಸಿದ್ಧವಾಗಿಲ್ಲವಾದ್ದರಿಂದಲೂ ಈ ಹೆಸರು ಮಧ್ವರನ್ನೇ ಹೇಳುತ್ತದೆ. ೭) ಅಷ್ಟೇ ಅಲ್ಲ ಮೂರನೇ ಋಕ್ಕು ಆ ದಶಪ್ರಮತಿಯನ್ನೇ 'ಮಧ್ವ ಅಥವೇ....ಮಾತರಿಶ್ವಾ' ಎಂದು ವರ್ಣಿಸುತ್ತದೆ. ಮಾತರಿಶ್ವಾ ಶಬ್ದವು ವಾಯುದೇವರ ಪ್ರಸಿದ್ಧವಾದ ಹೆಸರು. ಅವರೇ ಮಧ್ವರೆಂದು ಶ್ರುತಿ ಹೇಳುವುದರಿಂದ ದಶಪ್ರಮತಿ ಎಂದರೆ ಪೂರ್ಣಪ್ರಜ್ಞರೆಂದೂ, ಅದು ಮಧ್ವಾಚಾರ್ಯರ ಹೆಸರೆಂದೂ, ಅವರು ವಾಯುದೇವರ ತೃತೀಯಾವತಾರವೆಂದೂ ನಿಸ್ಸಂದಿಗ್ಧವಾಗಿ ಸಿದ್ಧವಾಗುತ್ತದೆ.

೮) ಹನುಮ—ಭೀಮ ಇಬ್ಬರೂ ವಿಷ್ಣುಭಕ್ತಾಗ್ರಣಿಗಳೆಂಬುದು ಜಗತ್ಪ್ರಸಿದ್ಧವಾಗಿರುವುದರಿಂದ ಮೂರನೆಯ ಅವತಾರದ ಶ್ರೀಮಧ್ವಾಚಾರ್ಯರೂ ವಿಷ್ಣು ಭಕ್ತಾಗ್ರೇಸರರೆಂಬುದು ಸ್ವಯಂ ಸಿದ್ಧವಾಗುತ್ತದೆ. ೯) 'ಪ್ರ ಸೇನಾನೀಃ ಶೂರಃ' ಎಂಬ ಮಂತ್ರವು (ಋ. ೯।೯೬।೧) ಕಪಿ ಸೇನಾನಾಯಕನಾದ ಹನುಮಂತನನ್ನೂ (ಖಂಡ 320 ನೋಡಿ) ಕೌರವ ಸೇನಾನಾಯಕನಾದ ಭೀಮನನ್ನೂ (ಖಂಡ 271ಥ ನೋಡಿ) ಹೇಳುವಂತೆ ಮಧ್ವಾಚಾರ್ಯರು ವೀರವೈಷ್ಣವರ ಗುಂಪಿನ ನಾಯಕರೆಂಬುದನ್ನು ಘೋಷಿಸುತ್ತದೆ. ೧೦) ಹನುಮಂತನು ರಾಮದೂತನಾಗಿ ಶ್ರೀರಾಮನಿಗೆ ಬಲ ಕಾರ್ಯದಲ್ಲಿ ಸೇವೆ ಸಲ್ಲಿಸಿದನು. ಭೀಮನು ಶ್ರೀಕೃಷ್ಣನ ಭಕ್ತನಾಗಿ ಅವನ ಪ್ರಧಾನಾಂಗವಾಗಿ ಬಲಕಾರ್ಯದಲ್ಲೇ ಸೇವೆ ಮಾಡಿದನು. ಅದರಂತೆ ತೃತೀಯಾವತಾರದಲ್ಲಿ ವಾಯುದೇವರು ಮಧ್ವಾಚಾರ್ಯರಾಗಿ ವೇದವ್ಯಾಸರಿಗೆ ಜ್ಞಾನಕಾರ್ಯದಲ್ಲಿ ಸಹಾಯಕರಾದರೆಂಬುದು ಹೊಂದಿಕೆಯಾಗುತ್ತದೆ. ೧೧) ಆ ವಾಯುದೇವರು ಹನುಮನಾಗಿ ಅವತರಿಸಿ ನಿಶ್ಚಲವಾದ ಬ್ರಹ್ಮಚರ್ಯಧರ್ಮವನ್ನೂ ವಾನಪ್ರಸ್ಥ ಧರ್ಮವನ್ನೂ ನಡೆಯಿಸಿ ಮಾರ್ಗದರ್ಶನ ಮಾಡಿದರು. ಅವರೇ ಭೀಮಾವತಾರದಲ್ಲಿ ಸದ್ಗೃಹಸ್ಥ ಧರ್ಮಾಚರಣೆ ಮಾಡಿ ಗೃಹಸ್ಥರಿಗೆ ಹೇಗೆ ನಡೆಯಬೇಕೆಂದು ಮೇಲ್ಪಂಕ್ತಿ ಹಾಕಿ ತೋರಿಸಿದರು.

ಅದರಂತೆ ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಅವತಾರಮಾಡಿ ಯತ್ಯಾಶ್ರಮ ಧುರಂಧರರಾಗಿ ಬಾಳಿಕೆ ನಡೆಸಿ ಸನ್ಯಾಸಧರ್ಮವನ್ನು ಆಚರಿಸಿ ಸಕಲ ಸಜ್ಜನರಿಗೂ ಸನ್ಯಾಸಾಶ್ರಮಧರ್ಮಕ್ಕೆ ಆದರ್ಶರೂಪ ಆಚಾರ್ಯರಾಗಿದ್ದೀರೆಂಬುದೂ ನ್ಯಾಯಸಂಗತವಾಗಿದೆ.

೧೨) ಭಾಷ್ಯಕಾರನು ದೇವತೆಯಾದರೂ ಆಗಿರಬೇಕು, ದಾನವನಾದರೂ ಆಗಿರಬೇಕು, ಸಾಮಾನ್ಯ ಮನುಷ್ಯನು ಭಾಷ್ಯಕಾರನಾಗಲಾರ ಎಂಬುದು ಸರ್ವಸಮ್ಮತವಾದ ವಿಷಯವಾಗಿದೆ—

ದೇವೋ ದಾನವೋ ವಾ ಸ್ಯಾದ್ ಭಾಷ್ಯಕಾರೋ ನ ಮಾನವಃ ॥

ಅಲ್ಲದೆ ದೇವತೆಗಳು ವಿಷ್ಣುಭಕ್ತರೆಂಬುದೂ ದಾನವ-ದೈತ್ಯರು ಶಿವ ಶಕ್ತ್ಯಾದಿ ಅನ್ಯದೇವತಾ ಭಕ್ತರೆಂಬುದೂ ಅದೇರೀತಿ ಪ್ರಸಿದ್ಧವಾಗಿದೆ. ಈ ದೃಷ್ಟಿಯಿಂದ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವ ಭಾಷ್ಯಗಳನ್ನು ರಚಿಸಿದ ಮಧ್ವಾಚಾರ್ಯರು ದೇವಾಂಶಸಂಭೂತರೆಂಬುದೂ ಶಿವಸರ್ವೋತ್ತಮತ್ವ ಜಗನ್ಮಿಥ್ಯಾತ್ವಾದಿ ಸಿದ್ಧಾಂತಗಳನ್ನು ಪ್ರತಿಪಾದಿಸುವ ಮತ್ತು ವಿಷ್ಣುಮಹಿಮೆಯನ್ನು ಎತ್ತಿಹಿಡಿಯದ ಭಾಷ್ಯಗಳನ್ನು ಬರೆದವರೆಲ್ಲರೂ ದಾನವ ಅಥವಾ ದೈತ್ಯಾಂಶರೆಂಬುದೂ ಸಿದ್ಧವಾಗುತ್ತದೆ. ೧೩) ಶಿವಸರ್ವೋತ್ತಮತ್ವ ಪ್ರತಿಪಾದನೆ ಮಾಡುತ್ತಾ ಆ ಶಿವನ ವರಗಳಿಂದ ಬಲೋದ್ಧತರಾಗಿದ್ದ ಜರಾಸಂಧ-ಮಣಿಮಂತಾದಿಗಳನ್ನು ಸದೆಬಡೆಯುವುದಕ್ಕೆ ಭೀಮಸೇನನಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅದರಂತೆ ಇಪ್ಪತ್ತೊಂದು ದುರ್ಭಾಷ್ಯಗಳನ್ನು ಖಂಡಿಸಿ ನಿರಾಕರಣೆ ಮಾಡಿ ವಿಷ್ಣುಸರ್ವೋತ್ತಮತ್ವ ಸಿದ್ಧಾಂತವನ್ನು ಸ್ಥಾಪಿಸುವುದಕ್ಕೂ ಭೀಮಾಂಶಸಂಭೂತನಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಆದಕಾರಣ ಹಿಂದೆ ಭೀಮಸೇನನಾಗಿದ್ದ ವಾಯುದೇವರೇ ಈಗ ಮಧ್ವರಾಗಿ ಅವತಾರ ಮಾಡಿದರೆಂದು ಸಿದ್ಧವಾಗುತ್ತದೆ. ೧೪) ಇದನ್ನು ಸೂಚಿಸುವುದಕ್ಕಾಗಿಯೇ ಇಡೀ ವಾಯುಸ್ತುತಿಯ ನಲವತ್ತೊಂದು ಶ್ಲೋಕಗಳಲ್ಲಿ 'ಮಧ್ವಾಖ್ಯಂ ಮಂತ್ರಸಿದ್ಧಂ' (೪ನೇ ಶ್ಲೋ.) ಎಂದು ಒಂದೇ ಒಂದು ಸಾರಿ 'ಮಧ್ವ' ಶಬ್ದಪ್ರಯೋಗ ಮಾಡಿದ್ದಾರೆ (ಫ.ಸೌ. ೬೫೪ ಶ್ಲೋ.) 'ವಾಯುಸ್ತುತೌ ಚ ಮಧ್ವಾಖ್ಯಾ ಸಕೃದೇವ ಪ್ರಕಾಶಿತಾ ॥'

೧೫) ಬಳಿತ್ಥಾಸೂಕ್ತದ ಐದು ಮಂತ್ರಗಳಲ್ಲಿ ಮೂಲರೂಪವನ್ನೂ ಹನುಮಂತನನ್ನೂ ಭೀಮನನ್ನೂ ಅರ್ಧರ್ಧ ಋಕ್ಕುಗಳಲ್ಲೇ ವರ್ಣನೆ ಮಾಡಿದ ವೇದಪುರುಷ ಮಧ್ವಾಚಾರ್ಯರೊಬ್ಬರ ಮಹಿಮೆಯನ್ನೇ ಮೂರೂವರೆ ಋಕ್ಕುಗಳಲ್ಲಿ ವರ್ಣಿಸಿದ್ದಾನೆ; ಇದರಿಂದಲೇ ಆ ವೇದಪುರುಷನಿಗೆ ಶ್ರೀಮದಾಚಾರ್ಯರಲ್ಲಿ ಎಷ್ಟು ಅಭಿಮಾನ, ಎಷ್ಟು ಆಸಕ್ತಿ ಎಂಬುದು ಹೊರಬೀಳುತ್ತದೆ. ಅಷ್ಟೇ ಅಲ್ಲದೆ ಆ ವೇದಪುರುಷ 'ಪೃಕ್ಷ್ಯೋ ವೀರುಧೋ ದಂಸು ರೋಹತಿ' ಎಂದರೆ ಗೂಳಿ ಬಳ್ಳಿಗಳನ್ನು ಹಲ್ಲುಗಳಿಂದ ಕತ್ತರಿಸಿ ಹಾಕುವಂತೆ ಮಧ್ವಾಚಾರ್ಯರು ಪ್ರತಿವಾದಿಗಳ ಆಕ್ಷೇಪಗಳನ್ನೆಲ್ಲಾ ಲೀಲಾಜಾಲವಾಗಿ ಖಂಡಿಸಿ ಹಾಕಿದರೆಂದು ಹೇಳಿದ್ದರು. ಸಕಲದುರ್ಭಾಷ್ಯಗಳನ್ನೂ ನಿರಾಕರಿಸಿ ವಿಷ್ಣು-ಸರ್ವೋತ್ತಮತ್ವವನ್ನು ಸ್ಥಾಪಿಸಿದ ಮಹಾಮಹಿಮರೇ ಇವರೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಈ ಪ್ರಕಾರ ಅನೇಕ ಪ್ರಮಾಣಗಳಿಂದಲೂ ಯುಕ್ತಿಗಳಿಂದಲೂ ವಿಮರ್ಶೆ ಮಾಡಿ ಪರ್ಯಾಲೋಚಿಸಿದಾಗ ಶ್ರೀಮನ್ಮಧ್ವಾಚಾರ್ಯರು, ಶ್ರೀವಾದಿರಾಜಸ್ವಾಮಿಗಳ ಹೇಳಿಕೆಯಂತೆ, ನಾನಾ 'ಶ್ರುತಿಸ್ಮೃತಿಸ್ತುತ್ಯ-ಚಿತ್ರಚಾರಿತ್ರ-ವಿಸ್ತೃತಿ'ಯುಳ್ಳ ಅಪಾರ ಮಹಿಮಾನ್ವಿತರೆಂದು ಸಿದ್ಧಿಸುವುದರಿಂದ ಅದರ ಹಿಂದೆಯೇ ಅವರು ವಾಯುದೇವರ ತೃತೀಯಾವತಾರವೆಂಬುದೂ ಸಿದ್ಧವಾಗುತ್ತದೆಯೆಂದು ಹೇಳಿ ಈ ಪ್ರಸ್ತಾಪವನ್ನು ಉಪಸಂಹರಿಸುವೆನು.

ಈಗ ವಾಯುಸ್ತುತಿಯಲ್ಲಿ ಪ್ರಸಕ್ತವಾದ ಮಧ್ವಾವತಾರದ ವರ್ಣನೆಗೆ ಹೋಗೋಣ.

ಮಧ್ವಾವತಾರದ ಮಹಿಮೆ

(ಅ) ಮೊದಲನೆಯ ಉಪವಿಭಾಗ (೨೯-೩೨ ಶ್ಲೋ.)— ಮಧ್ವಾವತಾರದ ಉಪಕ್ರಮ

ಶ್ಲೋಕ ೨೯. ಮಣಿಮಂತನ ಉದಯ

323. ಶ್ಲೋಕಕ್ಕೆ ಅವತಾರಿಕೆ—(ಲೇ.) ಭೀಮಾವತಾರವನ್ನು ರೂಪಣೆ ಮಾಡಿದ ಬಳಿಕ ಮಧ್ವಾವತಾರಕ್ಕೆ ಪ್ರಸಂಗರೂಪವಾಗಿ ಮಣಿ-

ಮಂತನು ಭೀಮನ ಮೇಲಿನ ಛಲವನ್ನು ಸಾಧಿಸುವುದಕ್ಕಾಗಿ ಭೂಮಿಯಲ್ಲಿ ಭಾಷ್ಯಕಾರನಾಗಿ ಅವತರಿಸಿ ದುಶ್ಶಾಸ್ತ್ರಗಳನ್ನು ರಚಿಸಿದ ವಿಚಾರವನ್ನು ವರ್ಣಿಸುತ್ತಾರೆ. ಮಧ್ವಾವತಾರದಂತೆ ವೇದವ್ಯಾಸರ ಅವತಾರದ ಮಹಿಮೆಯನ್ನೂ ಶ್ಲೇಷದಿಂದ ಹೇಳುತ್ತಿರುವುದರಿಂದ ವೇದವ್ಯಾಸರೂಪಕ್ಕೆ ಪೀಠಿಕಾರೂಪವಾಗಿ ಕಲಿಯು ರುದ್ರದೇವರಲ್ಲಿ ಆವಿಷ್ಟನಾಗಿ ದುಶ್ಶಾಸ್ತ್ರಗಳನ್ನು ರಚಿಸಿದನೆಂದೂ ಹೇಳುತ್ತಾರೆ. (ಪು.ರಾ.) ಶ್ರೀಹರಿಯು ವೇದವ್ಯಾಸರಾಗಿಯೂ ವಾಯುದೇವರು ಮಧ್ವಾಚಾರ್ಯರಾಗಿಯೂ ಅವತಾರಮಾಡಿದ್ದಕ್ಕೆ ಉಪೋದ್ಘಾತ-ರೂಪವಾಗಿ—ದೇವತೆಗಳಿಗೆ ಅಮೃತಪ್ರಾಶನ ಮಾಡಿಸಿದ್ದನ್ನು ಕಂಡು ಕುಪಿತರಾಗಿ ಯುದ್ಧಕ್ಕೆ ಬಂದ ದೈತ್ಯರನ್ನು ಶ್ರೀಹರಿ ಸಂಹರಿಸಿದನೆಂಬ ಕೋಪದಿಂದ ಕಲಿಯು ರುದ್ರಾದಿಗಳಲ್ಲಿ ನಿಂತು ದುಶ್ಶಾಸ್ತ್ರರಚನ ಮಾಡಿಸಿದನೆಂತಲೂ, ಸೌಗಂಧಿಕಾಹರಣಕಾಲದಲ್ಲಿ ಭೀಮಸೇನನಿಂದ ಹತನಾದ ಮಣಿಮಂತನು ಕೋಪಾತಿಶಯದಿಂದ ಭೂಲೋಕದಲ್ಲಿ ಹುಟ್ಟಿ ದುಶ್ಶಾಸ್ತ್ರರಚನಮಾಡಿದ-ನೆಂತಲೂ ಹೇಳುತ್ತಾರೆ (ಕಕ. ವಿ ಛ.). ಹಿಂದೆ ಭೀಮಾವತಾರದಲ್ಲಿ ಭೀಮನಿಂದ ಸಂಹೃತನಾದ ಮಣಿಮಂತನೆಂಬ ದೈತ್ಯನು ಪೂರ್ವಜನ್ಮದ ವೈರವನ್ನು ಸಾಧಿಸುವುದಕ್ಕಾಗಿ ಭೂಮಿಯಲ್ಲಿ ಸಂಕರನಾಗಿ ಹುಟ್ಟಿ ಶ್ರೀಹರಿಯು ನಿರ್ಗುಣನೆಂದೂ ಜೀವಸ್ವರೂಪವೇ ಆಗಿದ್ದಾನೆಂದು ಸಮರ್ಥಿಸುವ ದುಶ್ಶಾಸ್ತ್ರವನ್ನು ರಚಿಸಿದನೆಂದೂ ಈ ಶ್ಲೋಕದಲ್ಲಿ ಹೇಳುತ್ತಾರೆ—'ದೇಹಾದುತ್ಕ್ರಾಮಿತಾ-ನಾಂ....' ಎಂಬ ಶ್ಲೋಕದಲ್ಲಿ—

> ದೇಹಾದುತ್ಕ್ರಾಮಿತಾನಾ—ಮಧಿಪತಿರಸತಾ-
> ಮಕ್ರಮಾದ್ ವಕ್ರಬುದ್ಧಿಃ
>
> ಕ್ರುದ್ಧಃ ಕ್ರೋಧೈಕವಶ್ಯಃ ಕ್ರಿ(ಕೃ)ಮಿರಿವ ಮಣಿಮಾನ್
> ದುಷ್ಕೃತೀ ನಿಷ್ಕ್ರಿಯಾರ್ಥಮ್ ।

ಚಕ್ರೇ ಭೂಚಕ್ರಮೇತ್ಯ ಕ್ರಕಚಮಿವ ಸತಾಂ
　　ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ ಗುಣಗಣ ವಿರಹಂ
　　ಜೀವತಾಂ ಚಾಧಿಕೃತ್ಯ　　|| ೨೯ ||

ಪದವಿಭಾಗ—(ಉಭಯಪರ) ದೇಹಾತ್, ಉತ್ಕ್ರಾಮಿತಾನಾಂ, ಅಧಿಪತಿಃ, ಅಸತಾಂ, ಅಕ್ರಮಾತ್, ವಕ್ರಬುದ್ಧಿಃ, ಕ್ರುದ್ಧಃ, ಕ್ರೋಧೈಕವಶ್ಯಃ, ಕ್ರಿ(ಕೃ)ಮಿಃ, ಇವ, ಮಣಿಮಾನ್, ದುಷ್ಕೃತೀ, ನಿಷ್ಕ್ರಿಯಾರ್ಥಂ, ಚಕ್ರೇ, ಭೂಚಕ್ರಂ, ಏತ್ಯ, ಕ್ರಕಚಂ, ಇವ, ಸತಾಂ, ಚೇತಸಃ, ಕಷ್ಟಶಾಸ್ತ್ರಂ, ದುಸ್ತರ್ಕಂ, ಚಕ್ರಪಾಣೇಃ, ಗುಣಗಣವಿರಹಂ, ಜೀವತಾಂ, ಚ, ಅಧಿಕೃತ್ಯ ||

324. ಶ್ಲೋಕದ ವಿಶ್ಲೇಷಣೆ—ಹರಿ-ವಾಯು ಉಭಯಪಕ್ಷದಲ್ಲೂ ಇಡೀ ಶ್ಲೋಕ ಒಂದೇ ವಾಕ್ಯವಾಗುತ್ತದೆ. ಕರ್ಮ-ಕ್ರಿಯೆಗಳು ಒಂದೇ ಆದರೂ ಕರ್ತೃಪದ ಮಾತ್ರ ಎರಡು ಪಕ್ಷದಲ್ಲೂ ಬೇರೆ-ಬೇರೆ. ಕರ್ತೃ-ಕರ್ಮಗಳ ವಿಶೇಷಣಗಳೂ ಒಂದೇ ರೀತಿ. ವಾಯುಪಕ್ಷದಲ್ಲಿ ಮಣಿಮಾನ್-ಮಣಿಮಂತನು ಎಂಬುದು ಕರ್ತೃಪದವಾದರೆ ಹರಿಪಕ್ಷದಲ್ಲಿ ಇದು ಕರ್ತೃವಿಗೆ ವಿಶೇಷಣವಾಗಿ 'ತಲೆಯಲ್ಲಿ ರತ್ನ (ಮಣಿ) ವುಳ್ಳ' ಎಂದು ಅರ್ಥವಾಗುತ್ತದೆ. ಹರಿಪಕ್ಷದಲ್ಲಿ 'ಅಧಿಪತಿಃ'-ಮುಖ್ಯಸ್ಥನಾದ ಕಲಿಯು ಎಂಬುದು ಕರ್ತೃಪದ. ವಾಯುಪಕ್ಷದಲ್ಲಿ ಈ ಅಧಿಪತಿ ಮಣಿಮಾನ್-ಗೆ ವಿಶೇಷಣವಾಗುತ್ತದೆ. 'ಯಾರ ಅಧಿಪತಿ' ಎಂಬ ಆಕಾಂಕ್ಷೆ ಹುಟ್ಟುವುದರಿಂದ ಅದನ್ನು—ಅಕ್ರಮಾತ್ ದೇಹಾತ್ ಉತ್ಕ್ರಾಮಿತಾನಾಂ ಅಧಿಪತಿಃ ಎಂದು ಉಭಯಪಕ್ಷದಲ್ಲೂ ಜೋಡಿಸಬೇಕು. ಆಗ ಮಣಿಮಾನ್ ಅಕ್ರಮಾತ್....ಅಧಿಪತಿಃ (ಕಲಿಃ) ಅಥವಾ ಅಕ್ರಮಾತ್....ಅಧಿಪತಿಃ ಮಣಿಮಾನ್ (ಕರ್ತೃಪದ). ನಿಷ್ಕ್ರಿಯಾರ್ಥಂ ಭೂಚಕ್ರಂ ಏತ್ಯ, ಕಷ್ಟಶಾಸ್ತ್ರಂ (ಕರ್ಮಪದ). ಚಕ್ರೇ (ಕ್ರಿಯೆ)—ಕಲಿಯು ಅಥವಾ ಮಣಿಮಂತನು ಭೂಚಕ್ರಕ್ಕೆ ಬಂದು ಕಷ್ಟಶಾಸ್ತ್ರವನ್ನು ರಚಿಸಿದನು—ಎಂಬುದೇ ಪ್ರಧಾನವಾಕ್ಯ. 'ಭೂಚಕ್ರ'ದ ಅರ್ಥವೂ ಬೇರೆ ಬೇರೆ ಆಗುತ್ತದೆ. ಕರ್ತೃಪದಕ್ಕೆ ಮೇಲೆ ಹೇಳಿದ ಒಂದು ವಿಶೇಷಣವಲ್ಲದೆ

೨) ವಕ್ರಬುದ್ಧಿಃ, ೩) ಕ್ರುದ್ಧಃ, ೪) ಕ್ರೋಧೈಕವಶ್ಯಃ ; ೫) ಕ್ರಿ(ಕೃ)ಮಿರಿವ ೬) ದುಷ್ಕೃತೀ ಎಂದು ಐದು ವಿಶೇಷಣಗಳು. ಕರ್ಮಪದಕ್ಕೆ ೧) ಸತಾಂ ಚೇತಸಃ ಕ್ರಕಚಮಿವ, ೨) ದುಸ್ತರ್ಕಂ, ೩) ಚಕ್ರಪಾಣೇಃ....ಅಧಿಕೃತ್ಯ ಎಂದು ಮೂರು ವಿಶೇಷಣಗಳು. ಈಗ ಒಟ್ಟು ಅನ್ವಯಕ್ಕೆ ಹೋಗೋಣ. ಹರಿಪಕ್ಷ-ದಲ್ಲಿ—ಮಣಿಮಾನ್ ೨-೬ (ವಿಶೇಷಣಗಳು) ಅಕ್ರಮಾತ್-ಅಧಿಪತಿಃ (ಕಲಿಃ). ವಾಯುಪಕ್ಷದಲ್ಲಿ ಅಕ್ರಮಾತ್....ಅಧಿಪತಿಃ ೨-೬ ಮಣಿಮಾನ್ (ಕರ್ತೃಪದ) ನಿಷ್ಕ್ರಿಯಾರ್ಥಂ ಭೂಚಕ್ರಂ ಏತ್ಯ, ೧-೨-೩ ಕಷ್ಟಶಾಸ್ತ್ರಂ ಚಕ್ರೇ—ಇಂಥಾ ಕಲಿಯು ಅಥವಾ ಇಂಥಾ ಮಣಿಮಂತನು ಭೂಚಕ್ರಕ್ಕೆ ಬಂದು ಇಂಥಾ ಕಷ್ಟ-ಶಾಸ್ತ್ರವನ್ನು ಮಾಡಿದನು—ರಚಿಸಿದನು ಎಂಬುದೇ ಶ್ಲೋಕದ ಮುಖ್ಯ ಭಾವ.

ಕಠಿನ ಶಬ್ದಾರ್ಥ

325. (ಕ) ಅಕ್ರಮಾತ್—(ವಿ)ಕ್ರಮೋ ನ ಭವತೀತಿ ಅಕ್ರಮಃ (ಭ.) ಕ್ರಮಂ ವಿನಾ, (ವಿ) ತಸ್ಮಾತ್-ಅಕ್ರಮಾತ್, ಯುಗಪದಿತ್ಯರ್ಥ, ಕ್ರಮವನ್ನು ಬಿಟ್ಟು ಅಥವಾ ಕ್ರಮವಿಲ್ಲದೆ ಎಂದರೆ ಒಟ್ಟಿಗೆ ಅಂದರೆ ಒಂದೇಸಾರಿ ಎಂದರ್ಥ. ಉತ್ (ಉಪಸರ್ಗ) ಕ್ರಮ್ (ಭ್ವಾ.ಪ.), ಕ್ರಮಿಸು, ನಡೆ ಎಂಬುದರ ಪ್ರೇರಣಾರ್ಥಕ ಭೂತಕೃದಂತರೂಪ ಉತ್ಕ್ರಾಮಿತ, ಹೊರಕ್ಕೆ ಹೊರಡಿಸಿದ, ಹೊರಗೆ ಹೋಗುವಂತೆ ಮಾಡಲ್ಪಟ್ಟ ಎಂದರ್ಥ, ದೇಹಾತ್ ಉತ್ಕ್ರಾಮಿತ ಎಂದರೆ ಶರೀರದಿಂದ ಹೊರಡಿಸಲ್ಪಟ್ಟ, ಸಂಹೃತವಾದ, ಸಂಹರಿಸಲ್ಪಟ್ಟ ಎಂದು ತಾತ್ಪರ್ಯ. ಇದರಿಂದ—ಅಕ್ರಮಾತ್ ದೇಹಾತ್ ಉತ್ಕ್ರಾಮಿತಾನಾಂ ಎಂದರೆ ಒಟ್ಟಿಗೆ ಸಂಹರಿಸಲ್ಪಟ್ಟ ಎಂದು ಭಾವ. ಇದು 'ಅಸತಾಂ'— ದುರ್ಜನರ, ದುಷ್ಟರ ಎಂಬುದಕ್ಕೆ ವಿಶೇಷಣ.

ಖ) ಕ್ರೋಧೈಕವಶ್ಯಃ । (ವಿ) ಏಕಂ–ಕೇವಲಂ ವಶ್ಯಃ—ಏಕವಶ್ಯಃ ಕ್ರೋಧಸ್ಯ ಏಕವಶ್ಯಃ ಕ್ರೋಧೈಕವಶ್ಯಃ, ಕ್ರೋಧಪರತಂತ್ರ ಇತ್ಯರ್ಥಃ । (ಭ) ಕೇವಲಕೋಪಾಧೀನಃ (ಕಕ) ಕೋಪ ಪರತಂತ್ರಃ । ಕ್ರೋಧ-ಏಕ–ಕೋಪ ಒಂದಕ್ಕೆ ಮಾತ್ರವೇ, ವಶ್ಯಃ-ವಶನಾಗಿ, ಅಧೀನನಾಗಿ ; ಅರ್ಥಾತ್ ಕೋಪಿಸಿ ಕೊಳ್ಳುವುದನ್ನು ಬಿಟ್ಟು ಬೇರೆ ಉಪಾಯವಿಲ್ಲದವನಾಗಿ ಎಂದರ್ಥ. ಶ್ರೀವಿಷ್ಣು

ಕಲಿಯನ್ನೂ, ಭೀಮಸೇನನು ಮಣಿಮಂತನನ್ನೂ ಸೊಕ್ಕು ಅಡಗುವಂತೆ ಮರ್ದನಮಾಡಿ ಸಂಹರಿಸಿಯೂ ಬಿಟ್ಟರು ; ಇದರಿಂದ ಇವರಿಬ್ಬರಿಗೂ ತಡೆಯು ಲಾರದಷ್ಟು ಕೋಪ ಬಂತು. ಆದರೆ ಇವರಿಬ್ಬರೂ ತಮ್ಮನ್ನು ಸೋಲಿಸಿದ ವಿಷ್ಣು ಮತ್ತು ಭೀಮರಿಗಿಂತ ಬಲದಲ್ಲಿ ಬಹಳ ಅಶಕ್ತರು ; ಆದಕಾರಣ ಪ್ರತಿಕ್ರಿಯೆ ಮಾಡುವಂತಿರಲಿಲ್ಲ, ತಮ್ಮ ಕೋಪವನ್ನು ತಾವೇ ನುಂಗಿಕೊಂಡಿದ್ದ ರೆಂದು ಭಾವ.

ಗ) ಕೃ(ಕ್ರಿ)ಮಿರಿವ—ಕೃಮಿ ಅಥವಾ ಕ್ರಿಮಿ ಎರಡು ರೂಪಗಳೂ ಪ್ರಯೋಗದಲ್ಲಿವೆ. ಕೃ ಎಂದರೆ ತೆವಳಿಕೊಂಡು ಹೋಗು, ಹರಿದುಕೊಂಡು ಹೋಗು ಎಂದರ್ಥ ; ಮಿ ಪ್ರತ್ಯಯ ; ಆದ್ದರಿಂದ ತೆವಳಿಕೊಂಡು ಹೋಗುವ ಅಥವಾ ನೆಲದ ಮೇಲೆ ಹರಿಯುವ ಸಣ್ಣ ಜಂತುಗಳಿಗೆ ಕೃಮಿ ಅಥವಾ ಕ್ರಿಮಿ ಎಂದು ಹೆಸರು. ಇದಕ್ಕೆ ವಿರುದ್ಧವಾಗಿ ಹಾರಾಡುವ ಸಣ್ಣ ಜಂತುಗಳನ್ನು 'ಕೀಟ'ಗಳೆನ್ನುತ್ತಾರೆ. ಗೆದ್ದಲು ಮರಗಳನ್ನು ಮೇಲೆಯೇ ತಿನ್ನುವಂತೆ ಅನೇಕ ಕ್ರಿಮಿಗಳು ಗಿಡಗಳ ಒಳಗೇ ಸೇರಿಕೊಂಡು ದೊಡ್ಡ ದೊಡ್ಡ ಮರಗಳನ್ನೂ ಕೊರೆದು ನಾಶಮಾಡುತ್ತವೆ, ಹೊರಗೆ ಗೊತ್ತೇ ಆಗುವುದಿಲ್ಲ, ಈ ಕಲಿಯೂ ಮಣಿಮಂತನೂ ಆ ರೀತಿ ಮೇಲೆ ಕಾಣಿಸದೆಹೋದರೂ ಒಳಗೊಳಗೇ ಹೊಂಚುಹಾಕಿ ನಾಶಮಾಡುವ ಸ್ವಭಾವದವರು ಎಂದರ್ಥ.

ಘ) ನಿಷ್ಕ್ರಿಯಾರ್ಥಂ—(ಕಕ) ಸ್ವವೈರನಿರಾಸಾರ್ಥಂ, (ವಿ) ಸ್ವವಧಸ್ಯ ಪ್ರತಿಕ್ರಿಯಾರ್ಥಂ (ಛ) ಪ್ರತೀಕಾರಾರ್ಥಂ-ತನ್ನನ್ನು ಸಂಹರಿಸಿದ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ. (ಙ) ಭೂಚಕ್ರಂ ಏತ್ಯ. ವಾಯು-ಪರವಾಗಿ ಭೂಚಕ್ರಂ ಎಂದರೆ ಭೂಮಂಡಲವನ್ನು ಏತ್ಯ (ಆ+ಇಣ್-ಹೋಗು+ಲ್ಯಪ್) ಬಂದು, ಎಂದರೆ ಭೂಮಿಯಲ್ಲಿ ಅವತರಿಸಿ, ಭೂಮಿಯಲ್ಲಿ ಜನಿಸಿ ಎಂದರ್ಥ. ಹರಿಪರವಾಗಿ—(ಪುರಾ) ಭೂ-ಭೂಮಿಯೇ, ಚಕ್ರ-ರಥ ವಾಗಿ ಉಳ್ಳ ಎಂಬುದರಿಂದ ಭೂಚಕ್ರ ಎಂದರೆ ರುದ್ರ, ಶಿವ ಎಂದಾಗುತ್ತದೆ. ಚಕ್ರಂ ಅಸ್ಯಾಸ್ತೀತಿ ಚಕ್ರಃ ಎಂಬ ವ್ಯುತ್ಪತ್ತಿಯಿಂದ ಚಕ್ರವು ರಥವಾಚಕ ವಾಗಿದೆ. (ಲೇ) ತ್ರಿಪುರಸಂಹಾರಕಾಲದಲ್ಲಿ ರುದ್ರನಿಗೆ ಭೂಮಿಯೇ ರಥ ವಾಗಿತ್ತು, ಬ್ರಹ್ಮನೇ ಧನುಸ್ಸೂ, ವಿಷ್ಣು ಬಾಣವೂ ಆದರೆಂದು ಕಥೆಯಿದೆ.

ಅದರಂತೆ ಭೂಚಕ್ರ ಎಂದರೆ ರುದ್ರನೆಂದರ್ಥ, ಭೂಚಕ್ರಂ-ರುದ್ರನನ್ನು, ಏತ್ಯ-ಹೊಂದಿ ಎಂದರೆ ರುದ್ರನಲ್ಲಿ ಆವಿಷ್ಟನಾಗಿ ಎಂದರ್ಥ.

ಚ) ಕ್ರಕಚ—ಎಂದರೆ ಮರಗಳನ್ನು ಕೊಯ್ಯುವ ಗರಗಸ. ಕ್ರಕಚಂ ಇವ-ಗರಗಸದಂತೆ. ಭಾವವೇನೆಂದರೆ ಗರಗಸ ಮರಗಳನ್ನು ಹೇಗೆ ಎರಡು ಪಾಲಾಗಿ ಸೀಳಿಹಾಕುತ್ತದೋ ಹಾಗೆ ಈ ಕಷ್ಟಶಾಸ್ತ್ರವು ಬುದ್ಧಿಯನ್ನು ಭೇದಿಸಿಬಿಡುತ್ತದೆ, ವಿಚಾರಶಕ್ತಿಯನ್ನೆಲ್ಲಾ ನಾಶಮಾಡಿಬಿಡುತ್ತದೆ ಎಂದರ್ಥ.

ಛ) ದುಸ್ತರ್ಕಂ (ಕಕ.ವಿ.) ದುಷ್ಟಾಃ—ವೇದವಿರುದ್ಧಾಃ; (ಛ) ಶ್ರುತ್ಯಾ ಬಾಧಿತಾಃ, ತರ್ಕಾಃ (ವಿ.ಛ.) ಯುಕ್ತಯೋ ಯಸ್ಮಿಂಸ್ತತ್ । ದುಷ್ಟವಾದ ಎಂದರೆ ವೇದವಿರುದ್ಧವಾದ ಅಥವಾ ವೇದೋಕ್ತಿಗಳಿಂದ ಬಾಧಿತವಾದ ಯುಕ್ತಿಗಳನ್ನು (ವಾದಸರಣಿಯನ್ನು) ಒಳಗೊಂಡ.

ಜ) ಚಕ್ರಪಾಣೇಃ—ಚಕ್ರಂ ಪಾಣೌ ಯಸ್ಯ ಸಃ ಚಕ್ರಪಾಣಿಃ । ಚಕ್ರವನ್ನು ಕೈಯಲ್ಲಿ ಹಿಡಿದವನು, ವಿಷ್ಣು ಎಂದರ್ಥ. (ವ್ಯಾಕರಣಾಂಶ) (ಕಕ.ವಿ.) "ಪ್ರಹರಣಾರ್ಥೇಭ್ಯಃ ಪರೇ ನಿಷ್ಠಾಸಪ್ತಮ್ಯೌ ಭವತಃ" (ಎಂದರೆ ಆಯುಧವಾಚಕಶಬ್ದಗಳ ಮುಂದೆ ಸಪ್ತಮೀ ಬಂದರೆ ಅದು ಉತ್ತರಪದವೇ ಆಗುತ್ತದೆ) ಎಂಬ ಹೇಳಿಕೆಯಂತೆ ಪಾಣಿಶಬ್ದ ಸಪ್ತಮಿಯಲ್ಲಿರುವುದರಿಂದ ಉತ್ತರಪದವಾಗಿದೆ. ಕೈಯಲ್ಲಿ ಚಕ್ರಹಿಡಿದವನು ಎಂದು ಅರ್ಥವಾದರೂ ಸಮಾಸದಲ್ಲಿ ಚಕ್ರವು ಯಾರ ಕೈಯಲ್ಲಿ ಉಂಟೋ ಎಂದು ಉತ್ತರಪದವಾಗಿದೆ. (ಝ) ಗುಣಗಣವಿರಹಂ—ಅನೇಕ ಶ್ರುತಿಗಳಲ್ಲಿ ವಿಷ್ಣುವಿಗೆ ಸರ್ವಜ್ಞ, ಸರ್ವಶಕ್ತ, ನಿರಂಜನ (ನಿರ್ದೋಷ) ಸತ್ಯ, ಅನಂತ ಎಂದು ಅನಂತ ಗುಣಗಳು ಉಂಟೆಂದು ಹೇಳಿದ್ದಕ್ಕೆ ವಿರುದ್ಧವಾಗಿ ಅವನು "ನಿರ್ಗುಣ"ನೆಂದು ಪ್ರತಿಪಾದಿಸುವ ಶಾಸ್ತ್ರವನ್ನು. ಞ) ಜೀವತಾಂ ಚ ಅಧಿಕೃತ್ಯ—ಅಹಂ ಬ್ರಹ್ಮಾಸ್ಮಿ-ನಾನೇ ಬ್ರಹ್ಮನಾಗಿದ್ದೇನೆ (ಬೃಹದಾರಣ್ಯ) ತತ್ತ್ವಂ ಅಸಿ-ಅದು ಎಂದರೆ ಬ್ರಹ್ಮವು (ವಿಷ್ಣು) ನೀನೇ ಆಗಿದ್ದೀಯೋ (ಛಾಂದೋಗ್ಯ), ಸೋಽಹಮಸ್ಮಿ-ಸ ಏವಾಹಮಸ್ಮಿ-ನಾನು ಅವನಾಗಿದ್ದೇನೆ. ಅವನೇ ನಾನಾಗಿದ್ದೇನೆ ಇತ್ಯಾದಿ ಶ್ರುತಿಗಳ ಮೇಲಿನ ಅರ್ಥ ತೆಗೆದುಕೊಂಡು ಬ್ರಹ್ಮವು (ವಿಷ್ಣು) ಜೀವನೇ ಆಗಿದ್ದಾನೆ ಎಂಬ ವಿಷಯವನ್ನೇ ಪ್ರತಿಪಾದಿಸುವ ಶಾಸ್ತ್ರವನ್ನು

ಎಂದರ್ಥ. 'ಜೀವೋ ಬ್ರಹ್ಮೈವ ನಾಪರಃ' ಜೀವನು ಪರಬ್ರಹ್ಮಸ್ವರೂಪವೇ ಆಗಿದ್ದಾನೆ, ಬೇರೆ ಅಲ್ಲ' ಎಂಬುದು ಅದ್ವೈತ ಸಿದ್ಧಾಂತದ ಒಂದು ಮುಖ್ಯತತ್ತ್ವ.

326. ಹರಿಪರ ದಂಡಾನ್ವಯ—೧) ಮಣಿಮಾನ್, ೨) ವಕ್ರಬುದ್ಧಿಃ, ೩) ಕ್ರುದ್ಧಃ, ೪) ಕ್ರೋಧೈಕವಶ್ಯಃ, ೫) ಕ್ರಿಮಿರಿವ, ೬) ದುಷ್ಕೃತೀ, ೭) ಅಕ್ರಮಾತ್ ದೇಹಾತ್ ಉತ್ಕ್ರಮಿತಾನಾಂ ಅಸತಾಂ ಅಧಿಪತಿಃ (ಕಲಿಃ) ನಿಷ್ಕ್ರಯಾರ್ಥಂ ಭೂಚಕ್ರಂ ಏತ್ಯ, ಕ) ಚಕ್ರಪಾಣೇಃ ಗುಣಗಣವಿರಹಂ ಜೀವತಾಂ ಚ ಅಧಿಕೃತ್ಯ, (ಖ) ದುಸ್ತರ್ಕಂ, (ಗ) ಸತಾಂ ಚೇತಸಃ ಕ್ರಕಚಂ ಇವ ಕಷ್ಟಶಾಸ್ತ್ರಂ ಚಕ್ರೇ ॥

ಅನ್ವಯಾರ್ಥ—೧) ಮಣಿಮಾನ್–ತಲೆಯಲ್ಲಿ ರತ್ನವುಳ್ಳ; ೨) ವಕ್ರಬುದ್ಧಿಃ–ಕೇಡೆಣಿಸುವ ದುಷ್ಟಬುದ್ಧಿಯುಳ್ಳ ; ೩) ಕ್ರುದ್ಧಃ–(ಸ್ವಕೀಯ ಜನಗಳೂ ತಾನೂ ಪರಾಜಿತರಾದ ಕಾರಣ) ಕುಪಿತನಾದ ; ೪) ಕ್ರೋಧೈಕವಶ್ಯಃ–(ತನ್ನ ಬಲ ಕಡಿಮೆಯಾದಕಾರಣ ಏನುಮಾಡುವುದಕ್ಕೂ ಸಾಧ್ಯವಿಲ್ಲದೆ) ಕೋಪಿಸಿಕೊಳ್ಳುವುದು ಮಾತ್ರವೇ ಶಕ್ಯವಿದ್ದ (ಸಿಟ್ಟಾಗುವುದನ್ನು ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲದಿದ್ದ) ; ೫) ಕ್ರಿ (ಕೃ) ಮಿಃ ಇವ–ಒಳಗೊಳಗೇ ಮರಗಳನ್ನು ಕೊರೆದು ಹಾಕುವ ಹುಳದಂತೆ ಒಳಸಂಚು ನಡೆಸಿ ಘಾತಮಾಡುವ ಸ್ವಭಾವವುಳ್ಳ ; ೬) ದುಷ್ಕೃತೀ–ದುಷ್ಕಾರ್ಯದಲ್ಲೇ ಮನಃ ಪ್ರವೃತ್ತಿಯುಳ್ಳ (ದುರ್ವ್ಯಾಪಾರಾಸಕ್ತನೂ ಆದ) ; ೭) ಅಕ್ರಮಾತ್–ಒಟ್ಟಿಗೆ (ಏಕಕಾಲದಲ್ಲಿಯೇ) ; ದೇಹಾತ್ ಉತ್ಕ್ರಮಿತಾನಾಂ–ಸಂಹರಿಸಲ್ಪಟ್ಟ ; ಅಸತಾಂ–ದುರ್ಜನರಿಗೆ ; ಅಧಿಪತಿಃ–ಒಡೆಯನಾದ ಕಲಿಯು ; ನಿಷ್ಕ್ರಯಾರ್ಥಂ–ವಿಷ್ಣುವಿನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ; ಭೂಚಕ್ರಂ–ಭೂಮಿ ರಥವಾಗಿದ್ದ ರುದ್ರದೇವರನ್ನು ; ಏತ್ಯ–ಹೊಂದಿ (ಆವಿಷ್ಟನಾಗಿ) ; (ಕ) ಚಕ್ರಪಾಣೇಃ–ಶ್ರೀವಿಷ್ಣುವಿನ ; ಗುಣಗಣ ವಿರಹಂ–ಅನಂತಗುಣಗಳಲ್ಲಿ ಯಾವುದೂ ಇಲ್ಲದ ನಿರ್ಗುಣತ್ವವನ್ನೂ ; ಜೀವತಾಂ–ಜೀವೈಕ್ಯವನ್ನೂ (ಜೀವಾಭೇದವನ್ನೂ) ; ಅಧಿಕೃತ್ಯ–ಉದ್ದೇಶಿಸಿದ ; (ಖ) ದುಸ್ತರ್ಕಂ–ಆಗಮವಿರೋಧಿಯುಕ್ತಿಗಳುಳ್ಳ (ಆಗಮಗಳಿಂದ ಖಂಡನೀಯವಾದ) ಯುಕ್ತಿ ಪರಂಪರೆಯುಳ್ಳ ; ಸತಾಂ ಚೇತಸಃ–ಸಜ್ಜನರ ಮನಸ್ಸಿಗೆ ; ಕ್ರಕಚಮಿವ–

ಗರಗಸದಂತೆ ಇರುವ; ಕಷ್ಟಶಾಸ್ತ್ರಂ-ಕೆಟ್ಟ (ಅಬದ್ಧ) ಶಾಸ್ತ್ರವನ್ನು; ಚಕ್ರೇ-ರಚಿಸಿದನು.

ಭಾವಾರ್ಥ—ಹರಿಪರವಾದ ಭಾವಾರ್ಥವು ಪ್ರಾಯಶಃ ವಾಯುಪರ ಭಾವಾರ್ಥದಂತೆಯೇ ಇರುವುದರಿಂದ ಮುಂದಿನ ಖಂಡದಲ್ಲಿ ಎರಡನ್ನೂ ಒಟ್ಟಿಗೆ ಸೇರಿಸಿ ಬರೆಯುವೆನು.

327. (ಕ) ವಾಯುಪರವಾಗಿ ದಂಡಾನ್ವಯ—೧) ಅಕ್ರಮಾತ್ ದೇಹಾತ್ ಉತ್ಕ್ರಮಿತಾನಾಂ ಅಸತಾಂ ಅಧಿಪತಿಃ, ೨) ವಕ್ರಬುದ್ಧಿಃ, ೩) ಕ್ರುದ್ಧಃ, ೪) ಕ್ರೋಧೈಕವಶ್ಯಃ, ೫) ಕ್ರಿಮಿಃ ಇವ, ೬) ದುಷ್ಕೃತೀ ಮಣಿಮಾನ್ ನಿಷ್ಕ್ರಿಯಾರ್ಥಂ ಭೂಚಕ್ರಂ ಏತ್ಯ, ಕ) ಚಕ್ರಪಾಣೇಃ-ಗುಣಗಣವಿರಹಂ ಜೀವತಾಂ ಚ ಅಧಿಕೃತ್ಯ, ಖ) ದುಸ್ತರ್ಕಂ, ಗ) ಸತಾಂ ಚೇತಸಃ ಕ್ರಕಚಂ ಇವ ಕಷ್ಟಶಾಸ್ತ್ರಂ ಚಕ್ರೇ ||

(ಖ) ವಾಯುಪರವಾಗಿ ಅನ್ವಯಾರ್ಥ—೧) ಅಕ್ರಮಾತ್-ಒಂದೇ ಸರಿ (ಒಟ್ಟಿಗೆ ಸೇರಿಸಿ); ದೇಹಾತ್ ಉತ್ಕ್ರಮಿತಾನಾಂ=(ಭೀಮಸೇನನಿಂದ) ಸಂಹರಿಸಲ್ಪಟ್ಟಿದ್ದ; ಅಸತಾಂ-ಅಯೋಗ್ಯರಾದ ದೈತ್ಯರಿಗೆ; ಅಧಿಪತಿಃ-ಮುಖಂಡನಾದ; ೨) ವಕ್ರಬುದ್ಧಿಃ-ಕೇಡೆಣಿಸುವ ದುಷ್ಟಬುದ್ಧಿಯುಳ್ಳ; ೩) ಕ್ರುದ್ಧಃ-(ಯುದ್ಧದಲ್ಲಿ ಸೋತುಹೋದುದರಿಂದ) ರೋಷಾವಿಷ್ಟನಾದ; ೪) ಕ್ರೋಧೈಕವಶ್ಯಃ-(ಭೀಮನನ್ನು ಜಯಿಸುವ ಸಾಮರ್ಥ್ಯವಿಲ್ಲದ್ದರಿಂದ) ಕೇವಲ ಕ್ರೋಧಪರವಶನಾದ; ೫) ಕ್ರಿ(ಕೃ)ಮಿಃ ಇವ-(ಮರ-ಗಿಡಗಳನ್ನು ಒಳಗೇ ಸೇರಿಕೊಂಡು ನಾಶಮಾಡುವ) ಹುಳದಂತೆ ಒಳಗೊಳಗೇ ಸೇರಿಕೊಂಡು ಹಾಳುಮಾಡುವ ಸ್ವಭಾವವುಳ್ಳ; ೬) ದುಷ್ಕೃತೀ-ದುಷ್ಕೃತ್ಯದಲ್ಲೇ ಮನಃಪ್ರವೃತ್ತಿಯುಳ್ಳ; ಮಣಿಮಾನ್-ಮಣಿಮಂತನೆಂಬ ದೈತ್ಯನು; ಭೂಚಕ್ರಂ ಏತ್ಯ-ಭೂಮಂಡಲಕ್ಕೆ ಬಂದು (ಎಂದರೆ ಭೂಮಿಯಲ್ಲಿ ಜನಿಸಿ); ಕ) ಚಕ್ರಪಾಣೇಃ-ಶ್ರೀಹರಿಯ; ಗುಣಗಣವಿರಹಂ-ಅನಂತಗುಣ ಪರಿಪೂರ್ಣನೆಂಬ ವಿಚಾರರಹಿತವಾದ ನಿರ್ಗುಣತ್ವವನ್ನೂ; ಜೀವತಾಂ ಚ-ಜೀವಾಭಿನ್ನನೆಂಬುದನ್ನೂ; ಅಧಿಕೃತ್ಯ-ಪ್ರತಿಪಾದಿಸುವಂಥಾ; (ಖ) ದುಸ್ತರ್ಕಂ-ವೇದವಿರುದ್ಧವಾದ ಯುಕ್ತಿಗಳುಳ್ಳ; ಗ) ಸತಾಂ-ಸಜ್ಜನರ;

ಚೇತಸಃ-ಬುದ್ಧಿಗೆ; ಕ್ರಕಚಂ ಇವ-ಗರಗಸದಂತೆ (ಘಾತಕವಾದ); ಕಷ್ಟ-ಶಾಸ್ತ್ರಂ-ಮೋಹಕಶಾಸ್ತ್ರವನ್ನು; ಚಕ್ರೇ-ರಚಿಸಿದನು.

ಗ) ಹರಿ-ವಾಯು ಉಭಯಪರವಾಗಿ ಭಾವಾರ್ಥ—(ಹರಿಪರವಾಗಿ) ಅಮೃತಮಥನದ ಸಂದರ್ಭದಲ್ಲಿ ಲಭ್ಯಿಸಿದ ಅಮೃತಕಲಶವು ದೈತ್ಯರ ವಶವಾಗಿಹೋಗಲು ಶ್ರೀವಿಷ್ಣು ಮೋಹಿನೀ ವೇಷ ಧರಿಸಿ ದೈತ್ಯರೆಲ್ಲರನ್ನೂ ಮೋಹಿಸಿ ಆ ಕಲಶವನ್ನು ಸ್ವಾಧೀನಮಾಡಿಕೊಂಡು ತನ್ನ ಭಕ್ತರಾದ ದೇವತೆಗಳಿಗೇ ಆ ಅಮೃತವನ್ನು ಪ್ರಾಶನಮಾಡಿಸಿಬಿಟ್ಟನು. ಈ ವಂಚನೆಯಿಂದ ಕುಪಿತರಾದ ಕಾಲನೇಮಿ, ವಿಪ್ರಚಿತ್ತಿ, ಕಲಿಯೇ ಮೊದಲಾದ ದೈತ್ಯ-ದಾನವರೆಲ್ಲರೂ ಶ್ರೀಹರಿಯ ಮೇಲೆ ಯುದ್ಧಕ್ಕೆ ಹೋಗಲು ಅನಂತಶಕ್ತಿಯುಳ್ಳ ಅವನು ಅವರೆಲ್ಲರನ್ನೂ ಸಂಪೂರ್ಣವಾಗಿ ಸೋಲಿಸಿದನಲ್ಲದೆ ಅನೇಕರನ್ನು ಸಂಹರಿಸಿಯೂ ಬಿಟ್ಟನಷ್ಟೆ (ಖಂಡ 309 ಆ-ಈ). (ವಾಯುಪರವಾಗಿ) ಇದೇ ರೀತಿ ಪಂಚವರ್ಣದ ಸೌಗಂಧಿಕಾ ಪುಷ್ಪಹರಣಕ್ಕಾಗಿ ಭೀಮಸೇನ ಮೇರುಪರ್ವತದ ಮೇಲಿದ್ದ ಆ ವನಕ್ಕೆ ಹೋಗಿದ್ದಾಗ ಆ ವನವನ್ನು ರಕ್ಷಿಸಲು ಕುಬೇರನಿಂದ ನಿಯುಕ್ತರಾಗಿದ್ದ ಮುನ್ನೂರು ಕೋಟಿ ದೈತ್ಯರನ್ನೂ ಅವರ ಮುಖಂಡನಾಗಿದ್ದ ಮಣಿಮಂತನನ್ನೂ ಒಟ್ಟಿಗೆ ಸಂಹಾರಮಾಡಿಬಿಟ್ಟನಷ್ಟೇ (ಖಂಡ 313).

(ಉಭಯಪರ) ಈ ಪ್ರಕಾರ ತಾನೂ ತನ್ನ ಅನುಯಾಯಿಗಳೂ ಎಲ್ಲರೂ ಒಟ್ಟಿಗೆ (ಒಂದೇ ಸರಿ) ಶ್ರೀವಿಷ್ಣುವಿನಿಂದ (ಭೀಮನಿಂದ) ಪರಾಭವಗೊಳಿಸಲ್ಪಟ್ಟ (ಸಂಹಾರ ಮಾಡಲ್ಪಟ್ಟ) ಕಾರಣ ದೈತ್ಯಾಗ್ರಗಣ್ಯನಾದ ಕಲಿಗೆ (ಮಣಿಮಂತನಿಗೆ) ತಡೆಯಲಾರದಷ್ಟು ಸಿಟ್ಟು ಬಂತು, ಅವನು ಸಿಟ್ಟಿನಿಂದ ಕಿಡಿಕಿಡಿಯಾದನು*(ಕ್ರುದ್ಧಃ). ಆದರೇನು ಮಾಡುತ್ತಾನೆ. ಶ್ರೀಹರಿಯ ಅನಂತ (ಭೀಮನ ಅಪಾರ) ಬಲದ ಮುಂದೆ ಅವನ ಆಟ ಏನೂ ನಡೆಯುವಂತಿರಲಿಲ್ಲ. ತನ್ನ ಕೋಪ ಎಷ್ಟಿದ್ದರೂ ತಾನೇ ನುಂಗಿಕೊಳ್ಳಬೇಕಾಯಿತು, ಬೇರೆ ಮಾರ್ಗವಿರಲಿಲ್ಲ (ಕ್ರೋಧೈಕವಶ್ಯಃ). ಬೇರೆ ಯಾರಾದರೂ ಆಗಿದ್ದರೆ

---

* ತಾತ್ಪರ್ಯನಿರ್ಣಯದಲ್ಲಿ ಮಣಿಮಂತನ ಹೆಸರನ್ನು ಸಾಕ್ಷಾತ್ ಹೇಳದೆ 'ಕ್ರೋಧವಶಾದಿ ದೈತ್ಯಾಃ' (೩೨ ಅ. ೧೬೨ ಶ್ಲೋ.) ಎಂದು ಹೇಳಿದ್ದಾರೆ.

ತನ್ನ ಕೈಲಾಗದ ಕೆಲಸವೆಂದು ಈ ಪ್ರಸಂಗವನ್ನೇ ಮರೆತುಬಿಡುತ್ತಿದ್ದರು. ಆದರೆ ಇವನು ಮಾತ್ರ ಅಷ್ಟು ಸರಳಸ್ವಭಾವದವನಾಗಿರಲಿಲ್ಲ. ತನ್ನ ಶತ್ರುವಿಗೆ ಯಾವ ರೀತಿಯಿಂದಲಾದರೂ ಕೇಡೆಣಿಸುವುದಲ್ಲದೆ ಕೆಡಕನ್ನುಂಟುಮಾಡು-ವುದಕ್ಕೂ ಹೊಂಚುಹಾಕುವುದೂ ಅವನ ಹುಟ್ಟುಸ್ವಭಾವ ವಕ್ರಬುದ್ಧಿಃ). ಆದಕ್ಕೆ ಅನುಗುಣವಾಗಿ, ನೇರವಾದ ಮಾರ್ಗ ಬಿಟ್ಟು ಕೊಂಕು ಮಾರ್ಗವನ್ನೇ ಹಿಡಿದನು. ದೊಡ್ಡ ದೊಡ್ಡ ವೃಕ್ಷಗಳಲ್ಲೇ ಸೇರಿಕೊಂಡು ಅವನ್ನು ಒಳ-ಗೊಳಗೇ ಕೊರೆದು ಟೊಳ್ಳು (ಅಥವಾ ಹಿಟ್ಟುಹಿಟ್ಟು) ಮಾಡುವ ವಿಚಿತ್ರ ಶಕ್ತಿಯುಳ್ಳ ಕ್ರಿಮಿಜಾತಿಗೆ ಸೇರಿದ ಹುಳಗಳಿರುತ್ತವೆ. ಅವು ಆಕಾರದಲ್ಲಿ ಸಣ್ಣವಾಗಿದ್ದರೂ ಅವು ಮಾಡುವ ಹಾನಿ ಅಸದಳ. ಮೇಲೆ ನೋಡುವುದಕ್ಕೆ ವೃಕ್ಷಗಳು ಸೊಂಪಾಗಿಯೇ ಕಾಣಿಸುತ್ತವೆ, ಒಳಗೊಳಗೇ ಟೊಳ್ಳಾಗಿ ಹೋಗಿರು-ತ್ತವೆ. ಆ ಜಾತಿಯ ಕ್ರಿಮಿಯಂತೆ (ಕ್ರಿಮಿರಿವ) ಕಲಿಯೂ (ಮಣಿಮಂತನೂ) ಗುಟ್ಟಾಗಿ ಒಳಗೊಳಗೇ ಆಲೋಚನೆ ಮಾಡಿಕೊಂಡು ಮೂಲಭೂತ ಶಾಸ್ತ್ರ ಸಿದ್ಧಾಂತದ ಸಾರವನ್ನೇ ಕಲುಷಿತ ಮಾಡಿಬಿಟ್ಟ. ಅದರೆ ಶತ್ರುವಿನ ಕೈ ಮೇಲಾದಾಗ ತನ್ನ ಪ್ರಯತ್ನ ವ್ಯರ್ಥವಾಗುವುದೆಂದು ಅರಿತ ಇವನು ತನ್ನ ಸೇಡು ತೀರಿಸಿಕೊಳ್ಳುವುದಕ್ಕೆ ಸಮಯ ಯಾವಾಗ ಬಂದೀತೆಂದು, ನಾಗರ-ಹಾವು ಕಾದಂತೆ (ಕ್ರಿಮಿರಿವ=ಸರ್ಪಾದಿರಿವ) ಸಮಯ ಕಾಯುತ್ತಿದ್ದನು. ಏಕೆಂದರೆ ತನಗಾದ ಪರಾಜಯಕ್ಕೆ ಪ್ರತಿಯಾಗಿ ಶತ್ರುವಿಗೆ ಹಾಯ್ ಹಾಯ್ ಎನ್ನಿಸುವ ವರೆಗೆ ಇವನ ಮನಸ್ಸಿಗೆ ನೆಮ್ಮದಿಯಾಗಲಿ ತೃಪ್ತಿಯಾಗಲಿ ಇರುತ್ತಿರಲಿಲ್ಲ (ದುಷ್ಕೃತೀ).

(ಹರಿಪರವಾಗಿ) ಹೀಗಿರಲು ದ್ವಾಪರದಲ್ಲಿ ಕಾಲಬಲದಿಂದ ಧರ್ಮವು ಖಿಲವಾಗಹತ್ತಿತು. ಜೊತೆಗೆ ಬ್ರಾಹ್ಮಣರಿಗೆ ಗೌತಮರ ಶಾಪವೂ ಪ್ರಾಪ್ತ-ವಾದ್ದರಿಂದ (ಈ ವಿಚಾರ ಮುಂದೆ ೩೬ನೇ ಶ್ಲೋಕದಲ್ಲಿ ವೇದವ್ಯಾಸಾವತಾರ ವರ್ಣನಾವಸರದಲ್ಲಿ ಬರುವುದು) ಅಜ್ಞಾನ-ವಿಪರೀತ ಜ್ಞಾನಗಳು ಪ್ರಬಲಿಸಿ ಧರ್ಮವು ಮತ್ತಷ್ಟು ಬೇಗ ಉತ್ಸನ್ನವಾಯಿತು (ಹಾಳಾಯಿತು). ಈ ಸಮಯವನ್ನೇ ಕಾಯುತ್ತಿದ್ದ ಕಲಿಯು (ನಿಷ್ಕ್ರಿಯಾರ್ಥಂ) ಬ್ರಹ್ಮದೇವರ ವರಬಲದಿಂದ ಪ್ರಬಲಿಸಿ ರುದ್ರದೇವರಲ್ಲಿ ಪ್ರವಿಷ್ಟನಾಗಿ (ಭೂಚಕ್ರಮೇತ್ಯ)

ವಿಷ್ಣುವಿನ ಮೇಲಿನ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಪಾಶುಪತಾದಿ ಶಾಸ್ತ್ರಗಳನ್ನು ರಚಿಸಿದನು (ಕಷ್ಟಶಾಸ್ತ್ರಂ ಚಕ್ರೇ) (ತಾ. ನಿ. ೧೦ ಅ., ೩೬-೭ ಶ್ಲೋ).

(ವಾಯುಪರವಾಗಿ) ಅತ್ತ ದ್ವಾಪರವು ಕಳೆದು ಕಲಿಯುಗವು ಆರಂಭವಾಯಿತು. ಬೌದ್ಧ-ಜೈನಾದಿ ಅನೇಕ ಚಾರ್ವಾಕಮತಗಳ ಪ್ರಾಬಲ್ಯದಿಂದ ವೈದಿಕಧರ್ಮವು ಅಸ್ತಪ್ರಾಯವಾಯಿತು. ಭೀಮನ ಮೇಲಿನ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಇದೇ ಸುಸಮಯವೆಂದು ಆಲೋಚಿಸಿದ (ನಿಶ್ಚಿತ್ಯ-ಯಾರ್ಥಂ) ಮಣಿಮಂತನು ಶಿವನನ್ನು ಕುರಿತು ತಪಸ್ಸು ಮಾಡಿ ಅವನ ವರಪ್ರಸಾದದಿಂದ ಮೋಹಕಶಕ್ತಿಯನ್ನು ಸಂಪಾದಿಸಿ ಭೂಮಿಯಲ್ಲಿ ಸಂಕರನೆಂಬ ಹೆಸರಿನಿಂದ ಜನ್ಮತಾಳಿ ಬಂದು (ಭೂಚಕ್ರಂ ಏತ್ಯ) ಅದ್ವೈತ ಸಿದ್ಧಾಂತವೆಂಬ ಮಾಯಾವಾದ ಶಾಸ್ತ್ರವನ್ನು ರಚಿಸಿದನು (ಕಷ್ಟಶಾಸ್ತ್ರಂ-ಚಕ್ರೇ) (ತಾ.ನಿ. ೨೨ ಅ. ೩೫ ಶ್ಲೋ, ೩೨ ಅ, ೧೬೩ ಶ್ಲೋ).

(ಉಭಯಪರ) ಅವರಿಬ್ಬರೂ ರಚಿಸಿದ 'ಕಷ್ಟಶಾಸ್ತ್ರ' ಎಂಥಾದ್ದೆಂಬುದನ್ನು ಉತ್ತರಾರ್ಧಲ್ಲಿ ವರ್ಣಿಸಿದ್ದಾರೆ—'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ' (ಗೀತೆ ೭/೬) 'ನಾನು ಸಕಲ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನು ;' 'ಪಿತಾಸಿ ಲೋಕಸ್ಯ....ಪೂಜ್ಯಶ್ಚ ಗುರುರ್ಗರೀಯಾನ್' (ಅಲ್ಲೇ, ೧೧/೪೩) 'ನೀನು ಈ ಸಕಲ ಚರಾಚರ ಜಗತ್ತಿಗೂ ತಂದೆಯಾಗಿದ್ದೀಯೆ. ಪೂಜ್ಯನೂ ಗುರುವೂ ಅತ್ಯಂತ ಹಿರಿಯನೂ (ಶ್ರೇಷ್ಠನೂ) ಆಗಿದ್ದೀ ;' 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ತೈ. ಉಪ ೨/೨) ಸಾಧು-ಸ್ವರೂಪನೂ, ಸದ್ಗುಣಪೂರ್ಣನೂ, ಜ್ಞಾನಮಯನೂ, ದೇಶ-ಕಾಲಗಳ ಅಳತೆಗೆ ಒಳಪಡದವನೂ, ಸಕಲಗುಣಪರಿಪೂರ್ಣನಾದ್ದರಿಂದ ನಾರಾಯಣಶಬ್ದ-ವಾಚ್ಯನೂ ಆಗಿದ್ದಾನೆ, 'ಯಃ ಸರ್ವಜ್ಞಃ ಸರ್ವವಿತ್' (ಅಥ. ಉಪ) ಪ್ರಕಾಶ-ಸ್ವರೂಪನೂ ಸರ್ವಜ್ಞನೂ ಸರ್ವಕಾಮಪರಿಪೂರ್ಣನೂ ಸರ್ವವ್ಯಾಪಿಯೂ ಆಗಿದ್ದಾನೆ, 'ಸರ್ವೇವೇದಾ ಯತ್ಪದಮಾಮನಂತಿ' (ಕಠ. ಉಪ. ೧/೨/೧೫) ಇತ್ಯಾದಿ ರೀತಿಯಾಗಿ ವೇದಾದಿ ಸಕಲಶಾಸ್ತ್ರಗಳೂ ವಿಷ್ಣು ಅನಂತಗುಣ ಪರಿಪೂರ್ಣನೆಂದೂ ಚರಾಚರ ಸಕಲ ಜಗತ್ತಿಗಿಂತಲೂ ಅತ್ಯಂತ ಭಿನ್ನನೆಂದೂ

ಸಾರುತ್ತಿರಲು ಅದಕ್ಕೆ ಪ್ರತಿಯಾಗಿ ಇವರ ಅದ್ವೈತಶಾಸ್ತ್ರವು ಪರಬ್ರಹ್ಮ-ಸ್ವರೂಪನಾದ ಆ ವಿಷ್ಣು ಶಬ್ದಸ್ಪರ್ಶರೂಪರಸಗಂಧಾದಿ ಯಾವ ಯಾವ ಗುಣವೂ ಇಲ್ಲದ ಕೇವಲ ನಿರ್ಗುಣನೆಂದೂ ಆದ್ದರಿಂದಲೇ ಅನಿರ್ವಾಚ್ಯನೆಂದೂ ಪ್ರತಿಪಾದಿಸುತ್ತದೆ (ಚಕ್ರಪಾಣೇಃ ಗುಣಗಣವಿರಹಂ). ಅಲ್ಲದೆ, ಜೀವ, ಜಡ, ಈಶ್ವರ (ಭಗವಂತ), ನಾನು ನೀನು ಇತ್ಯಾದಿ ರೀತಿಯಾಗಿ ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣಿಸುವ ಸಮಸ್ತ ಭೇದವೂ ಅಜ್ಞಾನದಿಂದ ಹುಟ್ಟಿದ್ದು—ಕೇವಲ ಭ್ರಾಂತಿ; ವಸ್ತುತಃ ಯಾವ ಭೇದವೂ ಇಲ್ಲ, ಎಲ್ಲವೂ ಬ್ರಹ್ಮವೇ—'ಬ್ರಹ್ಮೈವೇದಗ್‌ಂ ಸರ್ವಮ್' ಎಂದು ಬೋಧಿಸುತ್ತಾ ಬ್ರಹ್ಮವೇ (ವಿಷ್ಣುವೇ) ಅಜ್ಞಾನದಿಂದ ಜೀವನೆಂದು ಕಾಣಿಸುತ್ತಾನೆಂದು ವಿಷ್ಣುವಿಗೂ ಜೀವನಿಗೂ ಐಕ್ಯವನ್ನು ಬೋಧಿಸುತ್ತದೆ (ಜೀವತಾಂ ಚಾಧಿಕೃತ್ಯ). ಇದಕ್ಕೆ ಸಾದೃಶ್ಯವಾಗಿ ಹಗ್ಗವನ್ನು ಹಾವೆಂದೂ, ಕಪ್ಪೆಚಿಪ್ಪ (ಶುಕ್ತಿಯು)ನ್ನು ಬೆಳ್ಳಿಯೆಂದೂ, ಮರುಮರೀಚಿಕೆ (ಬಿಸಿಲ್ಗುದುರೆ)ಯನ್ನು ನೀರಿನ ಕೊಳವೆಂದೂ ಭ್ರಮಿಸುವಂತೆ ಈ ಭ್ರಾಂತಿ ಬಂದಿದೆ ಎನ್ನುತ್ತಾರೆ. ಇನ್ನೂ ಮುಂದೆ ಹೋಗಿ ಸತ್ಯದಲ್ಲೇ ವ್ಯಾವಹಾರಿಕ ಸತ್ಯ-ಪಾರಮಾರ್ಥಿಕಸತ್ಯವೆಂದು ಎರಡು ಭೇದವಿದೆಯೆಂದೂ ವೇದದಲ್ಲೇ ಕರ್ಮಕಾಂಡ-ಜ್ಞಾನಕಾಂಡ ಎಂದು ಎರಡು ಭಾಗವೆಂದೂ, ಜ್ಞಾನಕಾಂಡವೆಂಬ ಉಪನಿಷತ್ತುಗಳಲ್ಲೇ ತತ್ತ್ವಮಸಿ (ಛಾಂದೋಗ್ಯ) ಅಹಂ ಬ್ರಹ್ಮಾಸ್ಮಿ (ಬೃಹದಾರಣ್ಯ) 'ಸೋಽಹಮಸ್ಮಿ ಸ ಏವಾಹಮಸ್ಮಿ' (ಐತರೇಯ) ಇತ್ಯಾದಿ ಕೆಲವು ಮಾತ್ರ ಮಹಾವಾಕ್ಯಗಳೆಂದೂ ಅವುಗಳೇ ಉಪನಿಷತ್ತಿನ ತಿರುಳೆಂದೂ ಮಿಕ್ಕ ವಾಕ್ಯಗಳಿಗೆ ಇವಕ್ಕೆ ವಿರೋಧ ಬರದಂತೆ ಅರ್ಥ ಹೇಳಬೇಕೆಂದೂ ಏನೇನೋ ಅಸಂಗತವಾದ ವೇದವಿರುದ್ಧವಾದ ಯುಕ್ತಿಗಳನ್ನು (ದುಸ್ತರ್ಕಂ) ಹೇಳಿ ಕೊನೆಗೆ ತಮ್ಮ ಸಿದ್ಧಾಂತವನ್ನು ಸ್ಥಾಪಿಸುತ್ತಾರೆ. ಈ ಪ್ರಕಾರ ನೇರವಾದ (ಋಜು) ಮಾರ್ಗವನ್ನು ಬಿಟ್ಟು ಏನೇನೋ ಅಲ್ಲದ ಸಲ್ಲದ ತೊಡಕಾದ ತರ್ಕಗಳನ್ನು ಒಂದಕ್ಕೊಂದು ಹೆಣೆದುಕೊಂಡು ಹೋಗಿರುವುದರಿಂದ ಅವುಗಳು ಸಜ್ಜನರ ಮನಸ್ಸಿಗೆ ಸುಲಭವಾಗಿ ಹತ್ತುವುದಿಲ್ಲ. ಈ ಮಾತಿನಲ್ಲಿ ಎಳ್ಳಷ್ಟು ಉತ್ಪ್ರೇಕ್ಷೆಯಿಲ್ಲವೆಂಬುದಕ್ಕೆ ಆ ಭಾಷ್ಯಕಾರರ ಮಾತೇ ಸಾಕ್ಷಿ. 'ಸಾಮಾನ್ಯ ಮಟ್ಟದ ಜನಗಳಿಗೆ ಈ ನಿರ್ಗುಣೋಪಾಸನೆ ಸುಲಭವಾಗಿ ಬುದ್ಧಿಗೆ ಹತ್ತುವು

ದಿಲ್ಲ'ವೆಂದು ಅವರ ಸೂತ್ರಭಾಷ್ಯದಲ್ಲೇ ಹೇಳಿದೆ. ಆದಕಾರಣ ಅವರ ವಾದ-ಸರಣಿಯನ್ನು ಅರ್ಥಮಾಡಿಕೊಳ್ಳುವಷ್ಟರಲ್ಲಿ ಸಜ್ಜನರ ಬುದ್ಧಿಯೆಲ್ಲಾ ಗರಗಸ ದಿಂದ ಕೊಯ್ದಂತೆ ಶಿಥಿಲವಾಗಿ ಹೋಗುತ್ತದೆ (ಕ್ರಕಚಮಿವ ಸತಾಂ ಚೇತಸಾಂ) ಒಟ್ಟು ಸಾರಾಂಶವೇನೆಂದರೆ ಸರಳವಾಗಿ ಒಂದಕ್ಕೊಂದು ಹೊಂದಿಕೊಂಡು ಸುಲಭವಾಗಿ ಅರ್ಥವಾಗುವಂಥಾ ಯುಕ್ತಿಗಳನ್ನು ಹೇಳಿದ್ದರೆ ಮನಸ್ಸಿಗೆ ಹರ್ಷ-ವಾಗುತ್ತಿತ್ತು. ಅದಕ್ಕೆ ಪ್ರತಿಯಾಗಿ ಒಂದಕ್ಕೊಂದು ಹೊಂದದ ಜಟಿಲತರ್ಕ-ಗಳಿಂದ ತುಂಬಿರುವುದರಿಂದ ಅರ್ಥಮಾಡಿಕೊಳ್ಳಲು ಮನಸ್ಸಿಗೆ ಕ್ಲೇಶವನ್ನುಂಟು ಮಾಡುವ ಕಷ್ಟಶಾಸ್ತ್ರವನ್ನು ದ್ವಾಪರಾಂತ್ಯದಲ್ಲಿ ಕಲಿಯೂ ಕಲಿಯುಗಾರಂಭ-ದಲ್ಲಿ ಮಣಿಮಂತನೂ ರಚಿಸಿದರೆಂಬುದೇ ಶ್ಲೋಕಾಭಿಪ್ರಾಯ.

328. ವಿಶೇಷವಿಚಾರಗಳು—(ಅ) ಕಲಿಯು ಹರಿಯ ಮೇಲಿನ ಛಲದಿಂದಲೂ ಮಣಿಮಂತನು ಭೀಮನ ಮೇಲೆ ಸೇಡು ತೀರಿಸಿಕೊಳ್ಳುವುದ ಕ್ಕಾಗಿಯೂ ಈ ರೀತಿ ಕಷ್ಟಶಾಸ್ತ್ರವನ್ನು ರಚಿಸಿದರೆಂಬುದಕ್ಕೆ ನಮಗೆ ಶ್ರೀ ಭಗವತ್ಪಾದರ ತಾತ್ಪರ್ಯನಿರ್ಣಯವೇ ಮುಖ್ಯ ಆಧಾರ. ಅವರು ತಮ್ಮ ಗ್ರಂಥ ಬರೆಯುವ ಉದ್ದೇಶವನ್ನು ಅನೇಕ ಕಡೆ ಆ ಗ್ರಂಥದಲ್ಲೇ ಪ್ರಸ್ತಾಪಿಸಿ (ಉದಾಹರಣೆಗೆ ೧೮, ೧೨೪ ಶ್ಲೋ; ೨/೬೭, ೩/೪೩, ೯/೧೨೫–೨೭; ೩೨/೧೭೧–೨) ತಾವು ಅನೇಕ ದೇಶಗಳನ್ನು ಸುತ್ತಾಡಿ ಅಲ್ಲಿ ದೊರೆತ ವೇದೇತಿಹಾಸ ಪುರಾಣ ಪಂಚರಾತ್ರಾದಿ ಅನೇಕ ಗ್ರಂಥಗಳನ್ನು ಪರಿಶೀಲಿಸಿರು ವುದಾಗಿಯೂ ಭಗವಂತನ ಸಾಕ್ಷಾತ್ ಅನುಗ್ರಹದಿಂದ ಅವುಗಳನ್ನೆಲ್ಲಾ ಅರ್ಥ ಮಾಡಿಕೊಂಡು ಅವುಗಳಲ್ಲಿ ಕಾಣಬರುವ ವಿರೋಧಗಳನ್ನು ಪರಿಹರಿಸುವುದ ಕ್ಕಾಗಿಯೇ ಈ ಗ್ರಂಥವನ್ನು ಬರೆದಿರುವುದಾಗಿಯೂ ತಾವೇ ಹೇಳಿಕೊಂಡಿರು ವುದರಿಂದ ಅವರ ನಿರ್ಣಯ ಅನೇಕ ಮೂಲಗ್ರಂಥಗಳನ್ನು ಅವಲಂಬಿಸಿದೆ ಯೆಂದು ನಾವು ಹೊಸದಾಗಿ ಹೇಳಬೇಕಾಗಿಲ್ಲ. ಅದರ ಜೊತೆಗೆ ಶ್ರೀಮದಾ ಚಾರ್ಯರು ಸರ್ವಜ್ಞಶಿಖಾಮಣಿಗಳಾದ್ದರಿಂದ ಭಾರತ-ಭಾಗವತ-ರಾಮಾಯಣ ಕಥಾ ಪ್ರಸಂಗಗಳಲ್ಲಿ ಪ್ರಸಕ್ತರಾದ ಸಕಲ ದೇವತೆಗಳ ಮತ್ತು ದೈತ್ಯಾದಿಗಳ ಸ್ವರೂಪವನ್ನೂ ಕ್ಷಕಿರಣ ತೀಸುವಂತೆ ಹಿಂದಿನ-ಮುಂದಿನ ವೃತ್ತಾಂತ ಸಹಿತ ತಿಳಿಸಿಕೊಡುತ್ತಲೇ ಹೋಗಿದ್ದಾರೆ; ಇದು ಅವರದೊಂದು ವೈಶಿಷ್ಟ್ಯವೇ

ಆಗಿದೆ. ಅದನ್ನು ಅನುಸರಿಸಿಯೇ ನಾವು ೨೧ನೇ ಶ್ಲೋಕದಲ್ಲಿ (ಖಂಡ 245-46ರಲ್ಲಿ) ರಾಮನೂ ಹನುಮಂತನೂ ಸಂಹಾರಮಾಡಿದ ಅವಧ್ಯರಾದ ದೈತ್ಯರಿಗೆ ಯಾರ ಯಾರ ವರದಿಂದ ಆ ಅವಧ್ಯತ್ವ ಬಂದಿತ್ತೆಂಬುದನ್ನೂ, ಭೀಮಾವತಾರದಲ್ಲಿ ಸಂಹೃತರಾದ ಬಕ, ಕಿರ್ಮೀರ, ಜರಾಸಂಧಾದಿಗಳ ಸ್ವರೂಪ ವನ್ನೂ ಅಲ್ಲಲ್ಲೇ ತೋರಿಸಿದ್ದೇವೆ. ಅದರಂತೆ ಇಲ್ಲಿಯೂ ಕೂಡ ಕಲಿಯೂ ಮಣಿಮಂತನೂ ಈ ರೀತಿ ದುಶ್ಶಾಸ್ತ್ರಗಳನ್ನು ರಚಿಸಲು ಹಿನ್ನೆಲೆಯೇನಿತ್ತೆಂಬು ದನ್ನು ತಿಳಿಸುವುದು ಯುಕ್ತವಾಗಿಯೇ ಇದೆ.

ಅ) **ಕಲಿ ದುಶ್ಶಾಸ್ತ್ರಗಳನ್ನು ರಚಿಸಿದ್ದು**—ಕಲಿಯು ತಾನೇ ನೇರ ವಾಗಿ ದುಶ್ಶಾಸ್ತ್ರಗಳನ್ನು ರಚಿಸಲಿಲ್ಲವೆಂದೂ ಬ್ರಹ್ಮನ ವರದಿಂದ ರುದ್ರನಲ್ಲಿ (ಮನಸ್ಸಿನಲ್ಲಿ) ಆವಿಷ್ಟನಾಗಿ ಅವನಿಂದ ಶೈವಾದ್ಯಾಗಮಗಳನ್ನು ರಚಿಸಿದ ನೆಂಬುದು ವೇದವ್ಯಾಸರ ಕಥಾನಿರೂಪಣಾವಸರದಲ್ಲಿ ಹೀಗೆ ಬಂದಿದೆ—'ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ ...ಅಜ್ಞಾನ ಮಿಥ್ಯಾಮತಿರೂಪತೋಽಸೌ ಪ್ರವಿಶ್ಯ ಸದ್‌ಜ್ಞಾನವಿರುದ್ಧರೂಪಃ॥....ಸ ಆವಿಶ್ಯ ಶಿವಂ ಚಕಾರ। ಕದಾಗ ಮಾನ್....' (ತಾ. ನಿ. ೧೦/೩೬-೭) (ಭಾವಾರ್ಥ) ಈ ಕಲಿಯು ಬ್ರಹ್ಮನ ವರದಿಂದ ಬಲಿಷ್ಠನಾಗಿ ಸಮೀಚೀನಜ್ಞಾನಕ್ಕೆ ವಿರುದ್ಧವಾಗಿ ಅಜ್ಞಾನ-ಮಿಥ್ಯಾ ಜ್ಞಾನರೂಪವಾಗಿ ಒಳಹೊಕ್ಕು ಕೆಡಿಸಿದನು. ಮತ್ತು ಶಿವನಲ್ಲಿ ಆವಿಷ್ಟನಾಗಿ ಅವನಿಂದಲೇ ಶೈವಾದಿ ದುರಾಗಮಗಳನ್ನು ರಚಿಸಿದನು.

ಇ) **ಮಣಿಮಂತ ಮೋಹಕಶಾಸ್ತ್ರ ರಚಿಸಿದ್ದು**—ತಾತ್ಪರ್ಯ ನಿರ್ಣಯದಲ್ಲಿ ಮಣಿಮಂತನ ವಿಚಾರ ಎರಡು ಕಡೆ ಪ್ರಸಕ್ತವಾಗಿ ಬಂದಿದೆ. ಎರಡು ಕಡೆಯೂ ಭಗವತ್ಪಾದರು ಹೆಚ್ಚು ವಿಸ್ತರಿಸದೆ ಸಂಕ್ಷೇಪವಾಗಿಯೇ ಹೇಳಿದ್ದಾರೆ. 1) ಸೌಗಂಧಿಕಾಹರಣದ ಪ್ರಸಂಗದಲ್ಲಿ—'ಪದ್ಮತ್ರಯಂ ನ್ಯರುಣದುದ್ಧತರಾಕ್ಷಸಾನಾಮ್ ॥ ೩೧೮ ॥ ಅಗ್ರೇ ನಿಧಾಯ ಮಣಿಮಂತಮು- ಜೇಯಮುಗ್ರಂ ಶಂಭೋರ್ವರಾರ್ ವಿವಿಧ ಶಸ್ತ್ರಮಹಾಸ್ತ್ರವೃಷ್ಟ್ಯಾ। ತಾನ್ ಸರ್ವರಾಕ್ಷಸಗಣಾನ್ ಮಣಿಮತ್ಸಮೇತಾನ್ ಭೀಮೋ ಜಘಾನ ಸಪದಿ ಪ್ರಮುಖೈಃ ಶರೌಘೈಃ ॥೩೧೯॥....ತೇ ಹತಾ ಭೀಮಸೇನೇನ ಪ್ರಾಪುರಂಧಂ- ತಮೋಽಖಿಲಾಃ। ಹತಃ ಸೌಗಂಧಿಕವನೇ ಮಣಿಮಾಂಶ್ಚ ಪುನಃ ಕಲೌ। ಜಾತೋ

ಮಿಥ್ಯಾಮತಿಂ ಸಮ್ಯಗಾಸ್ತೀರ್ಯಾಪ ತಮೋಽಧಿಕಮ್' ॥ ೩೨೧ ॥ (ಅಧ್ಯಾ-೨೨) (ಇದರ ಅರ್ಥ) 'ಈಶ್ವರನ ವರದಿಂದ ಅಜೇಯನಾದ ಕಾರಣ ಉಗ್ರ-ನಾಗಿದ್ದ ಮಣಿಮಂತನನ್ನು ಮುಂದೆ ಮಾಡಿಕೊಂಡು ಮುನ್ನೂರು ಕೋಟಿ ಉದ್ಧತರಾದ ರಾಕ್ಷಸರು ವಿವಿಧ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತಾ ಭೀಮ-ನನ್ನು ಮುತ್ತಿಕೊಂಡರು. ಭೀಮನು ಪ್ರಬಲಾಸ್ತ್ರಗಳಿಂದ ಅಷ್ಟು ರಾಕ್ಷಸ-ರನ್ನು ಮಣಿಮಂತ ಸಹಿತವಾಗಿ ಕ್ಷಿಪ್ರದಲ್ಲೇ ಸಂಹರಿಸಿಬಿಟ್ಟನು. ....ಹಾಗೆ ಹತರಾದ ಅವರೆಲ್ಲರೂ ಅಂಧಂತಮಸ್ಸಿಗೆ ಬೀಳುವರು. ಸೌಗಂಧಿಕವನದಲ್ಲಿ ಭೀಮನಿಂದ ಹತನಾದ ಮಣಿಮಂತನು ಮಾತ್ರ ಕಲಿಯುಗದಲ್ಲಿ ಪುನಃ ಹುಟ್ಟಿ ಮಿಥ್ಯಾಜ್ಞಾನವನ್ನು ಪ್ರಚಾರಮಾಡಿ ಹೆಚ್ಚು ಸಾಧನಮಾಡಿಕೊಂಡು ತಮಸ್ಸಿಗೆ ಹೋಗುವನು.'

ಈ) ಕಲಿಯುಗದಲ್ಲಿ ಅವತರಿಸಿದ್ದು—ಮೂವತ್ತೆರಡನೇ ಅಧ್ಯಾಯ ದಲ್ಲಿ ಕಲಿಯುಗದಲ್ಲುಂಟಾದ ಧರ್ಮಗ್ಲಾನಿಯನ್ನು ನಿರೂಪಿಸುತ್ತಾ ಬೌದ್ಧ-ಜೈನಧರ್ಮಗಳ ಪ್ರಚಾರದಿಂದ ವೈದಿಕಧರ್ಮವು ಹಾಳಾಯಿತೆಂದೂ ಅದೇ ಸಂದರ್ಭದಲ್ಲಿ ಮಣಿಮಂತನೂ ಹುಟ್ಟಿ ಅದ್ವೈತಸಿದ್ಧಾಂತವನ್ನು ಪ್ರಚಾರ ಮಾಡಿದನೆಂದೂ ಹೇಳಿದ್ದಾರೆ—'ಕ್ರೋಧವಶಾದಿದೈತ್ಯಾಃ ॥ ಶೈವಂ ತಪಸ್ತೇ ವಿಪುಲಂ ವಿಧಾಯ ಜಗದ್ವಿಮೋಹೋರ್ಜಿತಶಕ್ತಿಮಸ್ಮಾತ್ । ಪ್ರಾಪ್ಯ ಪ್ರಜಾತಾಭುವಿ ಮೋಹನಂ ಚ ಚಕ್ರುಃ ಕುತರ್ಕೈರಭಿದಾಂ ವದಂತಃ ॥ (೩೨ ಅ. ೧೬೩ ಶ್ಲೋ) (ಕ್ರೋಧವಶಾದಿ-ಮಣಿಮಂತನೇ ಮೊದಲಾದ, ವಿಪುಲಂ-ಹೆಚ್ಚಾಗಿ, ವಿಧಾಯ-ಮಾಡಿ, ಅಭಿದಾಂ-ಅದ್ವೈತವನ್ನು). (ಅರ್ಥ) 'ಮಣಿ-ಮಂತನೇ ಮೊದಲಾದ ದೈತ್ಯರು ಈಶ್ವರನನ್ನು ಕುರಿತು ಉಗ್ರತಪಸ್ಸುಮಾಡಿ ಅವನಿಂದ ಜಗತ್ತನ್ನು ಮೋಹಿಸುವ ಶಕ್ತಿಯನ್ನು ಸಂಪಾದಿಸಿ ಭೂಮಿಯಲ್ಲಿ ಹುಟ್ಟಿ ಕುತರ್ಕಗಳಿಂದ ಅದ್ವೈತವನ್ನು ಪ್ರಚಾರಮಾಡುತ್ತಾ ಎಲ್ಲರನ್ನೂ ಮೋಹಗೊಳಿಸಿದರು'—ಇದು ತಾತ್ಪರ್ಯನಿರ್ಣಯದ ಹೇಳಿಕೆ. ಇದಲ್ಲದೆ ಸ್ಕಾಂದಪುರಾಣದಲ್ಲಿಯೂ ಮಣಿಮಂತನೇ ಭೂಮಿಯಲ್ಲಿ ಹುಟ್ಟಿ ಮಿಥ್ಯಾ-ಶಾಸ್ತ್ರವನ್ನು ರಚಿಸಿದನೆಂದು ಹೇಳಿದೆಯೆಂದು ಆ ವಾಕ್ಯಗಳನ್ನು ಪುಂಗನೂರು

ರಾಘವೇಂದ್ರಾಚಾರ್ಯರು ತಮ್ಮ ಮಣಿಮಂಜರೀ ಟೀಕೆಯ ಪೀಠಿಕೆಯಲ್ಲಿ (ಪುಟ ೫-೬-೧೯೧೯ರ ದ್ವಿತೀಯ ಸಂಸ್ಕರಣ)ಉದಹರಿಸಿದ್ದಾರೆ—

"ಮಣಿಮತ್ಪೂರ್ವಕಾ ದುಷ್ಟಾ ದೈತ್ಯಾ ಆಸನ್ ಕಲೌ ಯುಗೇ ।
ತೇ ಕುಶಾಸ್ತ್ರಂ ಪ್ರಕುರ್ವಂತೋ ಹರಿ-ವಾಯುವಿರೋಧಿನಃ ॥೧॥
ತೇಷಾಂ ಮಧ್ಯೇ ಸಂಕರಸ್ತು ಪೂರ್ವಂ ಯೋ ಮಣಿಮಾನ್ ಖಲಃ ।
ಸೌಗಂಧಿಕವನೇ ದಿವ್ಯೇ ಭೀಮಸೇನಹತೋಽಸುರಃ ॥ ೨ ॥
ಸ ಕ್ರೋಧತಂತ್ರಕೋ ದುಷ್ಟೋ ಮಿಥ್ಯಾಶಾಸ್ತ್ರಂ ವದನ್ ಪುನಃ ।
ಕೃಷ್ಣೇ ಭೀಮೇ ಚ ವಿದ್ವೇಷಂ ಕುರ್ವನ್ ಭೂಮಾವಜಾಯತ ॥ ೩ ॥
ಕಾಲಡೀಗ್ರಾಮಕೇ ರುದ್ರ-ವರಾಲ್ಲೋಕಾನ್ ವಿಮೋಹಯನ್ ॥ ೪ ॥

(ಅರ್ಥ) 'ಹರಿವಾಯುಗಳಿಗೆ ವಿರೋಧಿಗಳಾದ ಮಣಿಮಂತನೇ ಮೊದಲಾದ ದುಷ್ಟದೈತ್ಯರು ಕಲಿಯುಗದಲ್ಲಿ (ಭಾಷ್ಯಕಾರರಾಗಿ) ಹುಟ್ಟಿ ಕುಶಾಸ್ತ್ರ (ದುರ್ಭಾಷ್ಯ)ಗಳನ್ನು ರಚಿಸಿದರು. ಅವರ ಮಧ್ಯೆ ಒಬ್ಬನಾದ ಸಂಕರನು ಯಾರೆಂದರೆ—ಹಿಂದೆ ಸೌಗಂಧಿಕವನದಲ್ಲಿ ಮಣಿಮಂತನೆಂಬ ಯಾವ ದುಷ್ಟ ದೈತ್ಯನು ಭೀಮನಿಂದ ಹತನಾಗಿದ್ದನೋ ಅವನೇ, ಕೃಷ್ಣನ ಮೇಲೂ ಭೀಮನ ಮೇಲೂ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ ಇವನು ರುದ್ರನಿಂದ ವರವನ್ನು ಪಡೆದು ಕಾಲಡಿ ಎಂಬ (ಕೇರಳದ) ಗ್ರಾಮದಲ್ಲಿ ಹುಟ್ಟಿ ಮಿಥ್ಯಾಶಾಸ್ತ್ರರಚನೆ ಮಾಡಿ ಜನಗಳನ್ನು ಮೋಹಿಸಿದನು.' ಈ ಸ್ಕಾಂದಪುರಾಣವಚನದಿಂದ ಮಣಿಮಂತನೇ ಸಂಕರ (ಶಂಕರಾಚಾರ್ಯ)ನಾಗಿ ಹುಟ್ಟಿ ಅದ್ವೈತಸಿದ್ಧಾಂತ-ವನ್ನು ಸ್ಥಾಪಿಸಿದನೆಂದು ಸಿದ್ಧವಾಗುತ್ತದೆ. (ಮಣಿಮಂತನ ಹೆಚ್ಚಿನ ಚರಿತ್ರೆಯನ್ನು ಮಣಿಮಂಜರಿಯ ಕಡೆಯ ನಾಲ್ಕು ಅಧ್ಯಾಯಗಳಲ್ಲಿ ಓದಬಹುದು. ಮಾಧ್ವರ ಪ್ರಾಚೀನ ಗ್ರಂಥಗಳಲ್ಲೆಲ್ಲಾ ಶಂಕರಾಚಾರ್ಯರ ಹೆಸರನ್ನು ಸಂಕರ ಎಂದೇ ವ್ಯವಹರಿಸಲಾಗಿದೆ.)

ಇಲ್ಲಿಗೆ ೨೯ನೆಯ ಶ್ಲೋಕ ಮುಗಿಯಿತು

ಶ್ಲೋಕ ೩೦—ಕಷ್ಟಶಾಸ್ತ್ರದ ನಿರಸನ

329. ಅವತಾರಿಕೆ—(ಕ) (ಕಕ. ವಿ. ಛ.) 'ಕಷ್ಟಶಾಸ್ತ್ರವನ್ನು ರಚಿಸಿದನೆಂ'ದು ಹೇಳಲಾಯಿತಷ್ಟೆ. ಆ ಶಾಸ್ತ್ರದಲ್ಲಿ ಏನು ವಿಷಯ ಹೇಳಿದೆ ? ಅದನ್ನು ಯಾರು ಅನುಸರಿಸಿದರು ? ಯಾರು ಒಪ್ಪಲಿಲ್ಲ ? ಎಂಬ ವಿಚಾರಗಳನ್ನು ಸ್ಪಷ್ಟಪಡಿಸುತ್ತಾ ವಾಯುದೇವರ ತೃತೀಯಾವತಾರವು ವಿಜಯಶಾಲಿಯಾದ ವಿಚಾರವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. (ಪು. ರಾ.) ದುಶ್ಶಾಸ್ತ್ರ ಪ್ರಚಾರವನ್ನು ನಿರೂಪಿಸಿ ಅದರ ಖಂಡನೆಗಾಗಿ ಶ್ರೀಹರಿಯು ವೇದವ್ಯಾಸರಾಗಿಯೂ ವಾಯುದೇವರು ಶ್ರೀಮದಾಚಾರ್ಯರಾಗಿಯೂ ಅವತರಿಸಿದರೆಂದು ಹೇಳುತ್ತಾರೆ. (ಲೇ.) ಹಿಂದಿನ ಶ್ಲೋಕವು ಅಪ್ರಸಕ್ತವೆಂದು ಕಾಣುವುದರಿಂದ ಅದಕ್ಕೆ ಪ್ರಸಂಗ ಕಲ್ಪಿಸುವ ಸಲುವಾಗಿ ಆ ಶಾಸ್ತ್ರವನ್ನು ನಿರಾಸಮಾಡುವುದಕ್ಕಾಗಿಯೇ ಶ್ರೀಹರಿ ವ್ಯಾಸರಾಗಿಯೂ ವಾಯುವು ಮಧ್ವರಾಗಿಯೂ ಅವತರಿಸಿ ಆ ಕಷ್ಟಶಾಸ್ತ್ರವನ್ನು ಖಂಡಿಸಿ ಮೆರೆದರೆಂದು ಈ ಶ್ಲೋಕದಲ್ಲಿ ವರ್ಣಿಸುತ್ತಾರೆ-

ತದ್ದುಷ್ಪ್ರೇಕ್ಷಾನುಸಾರಾತ್ ಕತಿಪಯ—ಕುನರೈ
ರಾದೃತೋಽನ್ಯೈ—ರ್ವಿಸೃಷ್ಟೋ
ಬ್ರಹ್ಮಾಹಂ ನಿರ್ಗುಣೋಽಹಂ ವಿತಥಮಿದಮಿತಿ
ಹ್ಯೇಷ ಪಾಷಂಡವಾದಃ ।
ತದ್ಯುಕ್ತ್ಯಾಭಾಸಜಾಲ—ಪ್ರಸರವಿಷತರೂದ್-
ದಾಹದಕ್ಷಪ್ರಮಾಣ-
ಜ್ವಾಲಾಮಾಲಾಧರೋಽಗ್ನಿಃ* ಪವನ ವಿಜಯತೇ
ತೇಽವತಾರಸ್ತೃತೀಯಃ ॥ ೩೦ ॥

*ಪಾಠಾಂತರ—ಧರಾಗ್ನಿಃ ಎಂದು ಕಕ. ವಿ. ಪಾಠ.

(ಖ) ಪದವಿಭಾಗ—ತದ್ದು....ಸಾರಾತ್, (ಹರಿಪಕ್ಷದಲ್ಲಿ-ಕತಿಪಯ ! ಕುನರೈಃ ; ವಾಯುಪಕ್ಷದಲ್ಲಿ—ಕತಿಪಯಕುನರೈಃ) ಆದೃತಃ, ಅನ್ಯೈಃ, ವಿಸೃಷ್ಟಃ, ಬ್ರಹ್ಮ, ಅಹಂ, ನಿರ್ಗುಣಃ, ಅಹಂ, ವಿತಥಂ, ಇದಂ, ಇತಿ, ಹಿ, ಏಷಃ, ಪಾಷಂಡವಾದಃ, ತದ್ಯುಕ್ತ್ಯ....ಮಾಲಾಧರಃ, ಅಗ್ನಿಃ, ಪವನ, ವಿಜಯತೇ, ತೇ, ಅವತಾರಃ, ತೃತೀಯಃ ॥

ಗ) ಶ್ಲೋಕದ ವಿಶ್ಲೇಷಣೆ—ಈ ಶ್ಲೋಕದಲ್ಲಿ ಮುಖ್ಯವಾಗಿ ಮೂರು ಸಣ್ಣ ವಾಕ್ಯಗಳಿವೆ. ೧) ಎರಡನೇ ಪಾದ ಪೂರ್ತಿ ಒಂದು ವಾಕ್ಯ; 'ಅಹಂ ಬ್ರಹ್ಮ....' ಎಂಬುದೇ (ಆ ಕಷ್ಟಶಾಸ್ತ್ರದ) ಪಾಷಂಡವಾದ. ೨) (೧ನೇ ಚರಣ) ತದ್ದು....ಕುನರೈಃ ಆದೃತಃ—ಕೆಲವರು ಅದನ್ನು ಆದರಿಸಿದರು; ೩) ಅನ್ಯೈಃ ವಿಸೃಷ್ಟಃ—ಇತರರು ಬಿಟ್ಟುಬಿಟ್ಟರು (ಆದರಿಸಲಿಲ್ಲ). ೪) (೪ನೇ ಚರಣ) ತೇ ತೃತೀಯಃ ಅವತಾರಃ ವಿಜಯತೇ—ನಿನ್ನ ಮೂರನೇ ಅವತಾರವು ಜಯಿಸಿ ವಿಜೃಂಭಿಸುತ್ತದೆ. ೪ನೇ ವಾಕ್ಯದಲ್ಲಿರುವ 'ಅವತಾರ'ಕ್ಕೆ 'ತದ್ಯುಕ್ತ್ಯ....ಧರಃ ಅಗ್ನಿಃ' ಎಂಬುದು ವಿಶೇಷಣ. ೪ನೇ ಚರಣದಲ್ಲಿ 'ಪವನ!' ಉಭಯ ಪಕ್ಷದಲ್ಲೂ ಸಂಬೋಧನೆ, ೧ನೇ ಚರಣದಲ್ಲಿ 'ಕತಿಪಯ' ಹರಿಪಕ್ಷದಲ್ಲಿ ಮಾತ್ರ ಸಂಬೋಧನೆ; ವಾಯುಪಕ್ಷದಲ್ಲಿ 'ಕುನರೈಃ'ಗೆ ವಿಶೇಷಣ.

330. ಕಠಿಣ ಶಬ್ದಾರ್ಥ—ಕ) ತದ್ದು....ಸಾರಾತ್ ಎಂಬಲ್ಲಿ ತತ್, ದುಸ್, ಪ್ರ+ಈಕ್ಷಾ, ಅನುಸಾರಾತ್ ಎಂದು ಪದಚ್ಛೇದ ಆಗುತ್ತದೆ. ಈಕ್ಷ್ (ಭ್ವಾ. ಆ) ಧಾತುವಿಗೆ ನೋಡು ಎಂದರ್ಥ; ಪ್ರ-ಉಪಸರ್ಗ, ಪ್ರಕರ್ಷೇಣ, ಚೆನ್ನಾಗಿ ಎಂದರ್ಥ. ಇದರಿಂದ ಪ್ರೇಕ್ಷಾ-ನೋಡುವಿಕೆ, ಜ್ಞಾನ ಅಥವಾ ಬುದ್ಧಿ ಎಂದರ್ಥ. ದುಸ್ ಎಂದರೆ ದುಷ್ಟ, ಕೆಟ್ಟ. ಆದಕಾರಣ ದುಷ್ಪ್ರಜ್ಞಾ ಎಂದರೆ ದುರ್ಬುದ್ಧಿ (ಭ.) ಅಥವಾ ದುಷ್ಪ್ರಜ್ಞಾ (ಕಕ. ವಿ) ಮಿಥ್ಯಾಜ್ಞಾನ. ತತ್-ಅವನ (ಕಲಿಯ ಅಥವಾ ಮಣಿಮಂತನ), ದುಷ್ಪ್ರೇಕ್ಷಾ-ದುರ್ಬುದ್ಧಿಗೆ, ಅನುಸಾರಾತ್-ಅನುಸರಿಸುವುದರಿಂದ, ಎಂದರೆ ಅವನ ದುರ್ಬುದ್ಧಿಗೆ ಒಪ್ಪಿ ಅನುಸರಿಸಿದ್ದರಿಂದ-ಎಂದರ್ಥ.

ಖ) ಕತಿಪಯ ಎಂಬುದು ವಾಯುಪರವಾದರೆ 'ಕೆಲವು' ಎಂಬ ಅರ್ಥದಲ್ಲಿ 'ಕುನರೈಃ'ಗೆ ವಿಶೇಷಣವಾಗುತ್ತದೆ. ಹರಿಪರವಾಗಿ ಸಂಬೋಧನೆ-ಯಾಗುತ್ತದೆ; ಅದರಲ್ಲಿ ಕ-ತಿ, ಪ, ಯ ಎಂದು ಮೂರು ಭಾಗ; ಮೂರಕ್ಕೂ ಬೇರೆ ಬೇರೆ ಅರ್ಥ. (ಪು. ರಾ.) 'ತನು' ಧಾತು (ತನಾದಿ. ಉ) ವಿನ ಮೇಲೆ ಜಾಣಾದಿಕ ಇ-ಪ್ರತ್ಯಯ ಬರಲು ನಿಷ್ಪನ್ನವಾದ ತಿ ಶಬ್ದಕ್ಕೆ ವ್ಯಾಪ್ತನೆಂತ ಅರ್ಥ. ತನ್+ಇ=ತಿ=ವ್ಯಾಪ್ತ. ಕೇನ-ಸುಖೇನ, ತಿಃ-ವ್ಯಾಪ್ತಃ-ಕತಿಃ=ಸುಖಪೂರ್ಣ ಎಂದರ್ಥ. ಪಾತೀತಿ ಪಃ, ಪಾಲಕ, ರಕ್ಷಕ.

ಯಃ–ಪ್ರಕಾಶರೂಪ (ಹಿಂದೆ ಖಂಡ 270ಇ ನೋಡಿ). ಆದ್ದರಿಂದ ಕಶಿ-ಪ-ಯು—ಎಂದರೆ ಸುಖಪೂರ್ಣನೂ ಪರಿಪಾಲಕನೂ ಆದ ಹೇ ಭಗವಂತ ಎಂದರ್ಥ.

ಗ) ವಿತಥಂ—(ವಿ.) ಅಸತ್ಯವಾದುದು (ಕಕ. ಛ.) ಮಿಥ್ಯಾ, ಮಿಥ್ಯಾಭೂತವಾದುದು; ಇದ್ದಂತೆ ಕಂಡರೂ ವಸ್ತುತಃ ಇಲ್ಲದ್ದು. ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯೂ, ಬಿಸಿಲ್ಗುದುರೆಯಲ್ಲಿ ನೀರೂ ಇದ್ದಂತೆ ಕಂಡರೂ ಹೇಗೆ ನಿಜವಾಗಿ ಇಲ್ಲವೋ ಹಾಗೆ 'ಇದ್ದಂತೆ ಕಾಣಿಸುವಂಥಾದ್ದು' ಎಂದರ್ಥ. ಇದಂ ವಿತಥಂ–ಇದು ಎಂದರೆ ಎದುರಿಗೆ ಕಾಣಿಸುವ ಜಗತ್ತು, ಮಿಥ್ಯಾ, ಅಥವಾ ಅಸತ್ಯ. ಅದ್ವೈತಸಿದ್ಧಾಂತರೀತ್ಯಾ 'ಬ್ರಹ್ಮ ಒಂದೇ ಸತ್ಯ, ತದ್ಭಿನ್ನವಾದ ಸಮಸ್ತವೂ ಅಸತ್ಯ; ಅಜ್ಞಾನದಿಂದ ಬ್ರಹ್ಮವೇ ಜಗತ್ತಿನಂತೆ ಕಾಣುತ್ತದೆ' ಎಂದು ಅವರು ವಾದಿಸುತ್ತಾರೆ.

ಘ) ಪಾಷಂಡವಾದಃ— ಪಾಷಂಡ-ಶಬ್ದಾರ್ಥವನ್ನು ಕಕ. ಟಿಪ್ಪಣಿಯಲ್ಲಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ವಿಸ್ತಾರವಾಗಿ ಹೇಳಿದ್ದಾರೆ.

ಪಾಲನಾಚ್ಚ ತ್ರಯೀಧರ್ಮಃ ಪಾ-ಶಬ್ದೇನ ನಿಗದ್ಯತೇ ।
ಷಂಡಯಂತಿ ತು ತಂ ಯಸ್ಮಾತ್ ಪಾಷಂಡಾಸ್ತೇನ ಕೀರ್ತಿತಾಃ ॥

ವೇದೋಕ್ತ ಧರ್ಮವು ಅದನ್ನು ಪರಿಪಾಲಿಸುವವರನ್ನು ಪಾಲಿಸುವುದರಿಂದ ಪಾ ಎಂದರೆ ವೈದಿಕಧರ್ಮ. ಅದನ್ನು—ಷಂಡ–ನಿರ್ವೀರ್ಯವನ್ನಾಗಿ (ವ್ಯರ್ಥವಾಗಿ) ಮಾಡುವವರನ್ನು ಪಾಷಂಡಿಗಳೆನ್ನುತ್ತಾರೆ, ಅರ್ಥಾತ್ ವೇದೋಕ್ತ-ಧರ್ಮವನ್ನು ಅನುಸರಿಸದವರಿಗೆ ಪಾಷಂಡಿಗಳೆಂದು ಹೆಸರು. ಯಾವ ಯಾವ ಆಚರಣೆ ಪಾಷಂಡ ಎಂಬುದನ್ನು ಪಾರ್ವತಿಗೆ ರುದ್ರದೇವರೇ ಈ ರೀತಿ ವರ್ಣಿಸಿದ್ದಾರೆಂದು ಪದ್ಮಪುರಾಣದಲ್ಲಿ (ಉತ್ತರಖಂಡ, ೪೨ ಅಧ್ಯಾಯ) ಹೇಳಿದೆ. ಸಂಸ್ಕೃತ ಮೂಲವನ್ನು ಕಕ. ಟಿಪ್ಪಣಿಯಲ್ಲಿ (ಪುಟ ೩೭-೮, 1972ರ ಪ್ರಥಮ ಸಂಸ್ಕರಣ) ನೋಡಬಹುದು. ಇಲ್ಲಿ ಆದರ ಸಾರಾಂಶ ಮಾತ್ರ ಕೊಟ್ಟಿದ್ದೇನೆ. ೧) ವಿಷ್ಣುವಲ್ಲದೆ ಬೇರೆ ದೇವತೆಯನ್ನು ಸರ್ವೋತ್ತಮನೆಂದು ಹೇಳುವವರೂ, ವಿಷ್ಣುವನ್ನು ಬ್ರಹ್ಮರುದ್ರಾದಿಗಳಿಗೆ ಸಮಾನನೆಂದು ಹೇಳುವವರೂ, ವಿಷ್ಣು-

ವನ್ನು ತಿರಸ್ಕಾರ ಮಾಡುವವರೂ, ಕಪಾಲ-ಭಸ್ಮಾಸ್ಥಿಗಳನ್ನು ಧರಿಸಿ ಶಂಖ-ಚಕ್ರಾದಿ ವಿಷ್ಣುವಿನ ಆಯುಧಚಿಹ್ನೆಗಳನ್ನು ಧರಿಸದವರೂ, ವಿಷ್ಣುವಲ್ಲದೆ ಬೇರೆ ದೇವತೆಗಳಿಗೆ ಹೋಮಮಾಡುವವರೂ, ವಿಷ್ಣುದೀಕ್ಷೆಯಿಲ್ಲದವರೂ, ರುದ್ರಾಕ್ಷಿ ಇಂದ್ರಾಕ್ಷಿಮಾಲೆಗಳನ್ನು ಧರಿಸಿದವರೂ, ವಿಭೂತಿ ಹಚ್ಚಿಕೊಂಡವರು ಇತ್ಯಾದಿ ವೇದವಿರುದ್ಧ ಆಚರಣೆಯುಳ್ಳವರೆಲ್ಲರೂ ಪಾಷಂಡಿಗಳು.

ಪ್ರಕೃತ ಕಲಿಯೂ ಮಣಿಮಂತನೂ ಬೋಧಿಸಿದ ತತ್ವಗಳು ವೇದ-ವಿರುದ್ಧವಾದ್ದರಿಂದ ಅದನ್ನು ಪಾಷಂಡವಾದ ಎಂದು ಪಂಡಿತಾಚಾರ್ಯರು ಹೇಳಿದ್ದಾರೆ. (೧೧. ವಿ.) 'ಸತ್ಯ ಆತ್ಮಾ ಸತ್ಯೋ ಜೀವಃ ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದಾ' (೨) 'ಆತ್ಮಾ ಹಿ ಪರಮಸ್ವತಂತ್ರೋಽಧಿಗುಣೋ ಜೀವೋಽಲ್ಪಶಕ್ತಿರಸ್ವತಂತ್ರೋಽವರಃ' (೩) 'ಸತ್ಯಂ ಚ ಜಗದೀದೃಶಮ್' ಎಂಬ ಶ್ರುತಿಗಳು ೧) 'ಪರಮಾತ್ಮನೂ ಸತ್ಯ, ಜೀವಾತ್ಮನೂ ಸತ್ಯ, ಇವರಿಬ್ಬ-ರಿಗೂ ಇರುವ ಭೇದವೂ ಸತ್ಯ' ೨) 'ಭಗವಂತ ಒಬ್ಬನೇ ಸ್ವತಂತ್ರ, ಅನಂತ-ಗುಣಪೂರ್ಣ. ಅದಕ್ಕೆ ಪ್ರತಿಯಾಗಿ ಜೀವನು ಅಸ್ವತಂತ್ರ, ಅಲ್ಪಶಕ್ತಿ-ಯುಳ್ಳವನು ಮತ್ತು ಅಧಮನು, ೩) 'ಈ ಜಗತ್ತೂ ಕೂಡ ಸತ್ಯವಾದುದು' ಎಂದು ಹೇಳುತ್ತಿರುವಾಗ ಈ ಕಲಿ ಮತ್ತು ಮಣಿಮಂತ ಬೋಧಿಸಿದ ತತ್ವಗಳು ಆ ವೇದೋಕ್ತಿಗಳಿಗೆ ವಿರುದ್ಧವಾದ್ದರಿಂದ ಅವರ ಮತವನ್ನು ಪಾಷಂಡವಾದ ಎಂದಿದ್ದಾರೆ.

೫) ತದ್ಯುಕ್ತ್ಯಾಭಾಸ ಧರಃ—ಎಂಬುದು ದೊಡ್ಡ ಸಮಾಸಪದ, ಇದು ಮುಂದಿರುವ 'ಅಗ್ನಿ'ಗೆ ವಿಶೇಷಣ. ಈ ಸಮಾಸದಲ್ಲಿ ತತ್, ಯುಕ್ತಿ, ಆಭಾಸ, ಜಾಲ, ಪ್ರಸರ. ವಿಷತರು, ಉದ್ದಾಹ, ದಕ್ಷ, ಪ್ರಮಾಣ, ಜ್ವಾಲಾ, ಮಾಲಾ, ಧರಃ—ಎಂದು ೧೨ ಪದಗಳಿವೆ. ಕ.ಕ. ಮತ್ತು ವಿ. ಪಾಠರೀತ್ಯಾ ಜ್ವಾಲಾಮಾಲಾಧರಾಗ್ನಿಃ ಎಂದು ಅಗ್ನಿಯನ್ನೂ ಸೇರಿಸಿ ಸಮಾಸ ಮಾಡಿ-ದ್ದಾರೆ. ಯುಕ್ತಿ+ಆಭಾಸ=ಯುಕ್ತ್ಯಾಭಾಸ-ಯುಕ್ತಿ ಇದ್ದಂತೆ ತೋರುವ ಎಂದರೆ ಖೋಟಾಯುಕ್ತಿ ಎಂದರ್ಥ. ಜಾಲ ಎಂದರೆ ಬಲೆ; ಮೀನುಗಾರ ಮೀನುಗಳನ್ನು ಹಿಡಿಯುವುದಕ್ಕೆ ಬಲೆ ಎಸೆದಂತೆ ಇವರೂ ಯುಕ್ತಿಗಳಂತೆ ಕಾಣುವ ಹೇಳಿಕೆಗಳ ಒಂದು ದೊಡ್ಡ ತಂಡವನ್ನೇ ಪ್ರಯೋಗಿಸುತ್ತಾರೆ;

ಅವು ಒಂದಕ್ಕೊಂದು ಹೆಣೆದುಕೊಂಡು ಸರಿಯಾಗಿ ಅರ್ಥವಾಗದೆ ಕೇಳುವವರನ್ನು 'ಬಲೆಗೆ ಸಿಗಿಸಿಬಿಡುತ್ತವೆ' ಎಂಬ ಗೂಢಾರ್ಥ ಈ 'ಜಾಲ' ಪದದಲ್ಲಿ ಗರ್ಭಿತವಾಗಿದೆ. ಆದ್ದರಿಂದಲೇ ಅದು 'ವಿಷತರ'—ವಿಷವೃಕ್ಷಕ್ಕೆ ಸಮಾನ. ದಕ್ಷ ಎಂದರೆ ಸಮರ್ಥ (ಕಕ. ವಿ. ಛ. ಪುರಾ.). ಪ್ರಮಾಣ ಎಂದರೆ ಇಲ್ಲಿ ಹೇಳಿದ ವಿಚಾರವನ್ನು ಸಮರ್ಥಿಸುವ ಅಧಿಕೃತವಾಕ್ಯ ಎಂದರ್ಥ. ಶ್ರೀಮದಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಯಾವದೊಂದು ವಿಚಾರ ಹೇಳಿದರೂ —ಚ, ತುಗಳಿಗೆ ಸಹ—ಅವಕ್ಕೆಲ್ಲಾ 'ಪ್ರಮಾಣ'ಗಳನ್ನು ಹೇಳಿ ಸಮರ್ಥಿಸುತ್ತಾರೆ; ಈ ವಿಚಾರ ಶ್ರೀಮದಾಚಾರ್ಯರ ಯಾವ ಭಾಷ್ಯ ನೋಡಿದರೂ ಅರ್ಥವಾಗುತ್ತದೆ.

ಈ ಸಮಾಸಕ್ಕೆ ಪದಶಃ ಅರ್ಥವನ್ನು ಅನ್ವಯಾರ್ಥದಲ್ಲಿ ಕೊಟ್ಟಿದೆ; ಇಲ್ಲಿ ಆ ಪದಗಳ ಭಾವಾರ್ಥವನ್ನು ಸರಳಭಾಷೆಯಲ್ಲಿ ವರ್ಣಿಸುವೆನು. ತತ್—ಅವನು (ಎಂದರೆ ಕಲಿ ಅಥವಾ ಮಣಿಮಂತ) ತನ್ನ ಸಿದ್ಧಾಂತವನ್ನು ಮಂಡಿಸುವುದಕ್ಕೆ ಅನೇಕ ಯುಕ್ತಿಗಳನ್ನೇನೋ ಸಾಲುಸಾಲಾಗಿ ಹೇಳುತ್ತಾನೆ. ಆದರೆ ಅವನ ಯುಕ್ತಿಗಳೆಲ್ಲ 'ದುಸ್ತರ್ಕ'ವಾದ್ದರಿಂದ ಯುಕ್ತಿಗಳಂತೆ ತೋರಿದರೂ ದೋಷಯುಕ್ತವಾಗಿರುತ್ತವೆ (ಯುಕ್ತಿ-ಆಭಾಸ). ಅಂತಹ ಯುಕ್ತಿಗಳನ್ನು ಸಾಲುಸಾಲಾಗಿ ಹೇಳುವುದರಿಂದ ಸುಳ್ಳಿಗೆ ಸುಳ್ಳು ಜೋಡಿಸಿದಂತೆ ಆಗಿ ವಾದದ ಸರಣಿಯೇ ಅರ್ಥವಾಗುವುದಿಲ್ಲ, ಅದಕ್ಕೆ ಪ್ರತಿಯಾಗಿ ಬಲೆ (ಜಾಲಪ್ರಸರ) ಎಸೆದಂತೆ ಬುದ್ಧಿಭ್ರಮಣೆಯಾಗುತ್ತದೆ. ಅದರ ಪರಿಣಾಮ ಏನಾಗುತ್ತದೆ? ವಿಷವೃಕ್ಷವನ್ನು ತಬ್ಬಿಕೊಂಡರೆ ಹೇಗೆ ಮೈಕೈಯೆಲ್ಲಾ ಉರಿಯೇಳುತ್ತದೋ ಹಾಗೆ ದಿಕ್ಕೇ ತೋರದೆ ಕಣ್ಣುಕಣ್ಣು ಬಿಡುವಂತೆ ಆಗುತ್ತದೆ. ಅವನ ಇಡೀ ಶಾಸ್ತ್ರವೆಲ್ಲಾ ಇಂಥಾ ಯುಕ್ತಿಗಳಿಂದಲೇ ತುಂಬಿರುವುದರಿಂದ ಅದು ವಿಷವೃಕ್ಷಗಳ ದೊಡ್ಡತೋಪಿನಂತೆ ಮಹಾಭಯಂಕರವಾಗಿದೆ.

ಇದಕ್ಕೆ ಪ್ರತಿಯಾಗಿ ಶ್ರೀಮದಾನಂದತೀರ್ಥಭಗವತ್ಪಾದರು ಪ್ರತಿಪಕ್ಷಿಯ ಸಿದ್ಧಾಂತವನ್ನು ವೇದೋಕ್ತಯುಕ್ತಿಗಳಿಂದ ಖಂಡಿಸುವರಲ್ಲದೆ ತಮ್ಮ ಹೇಳಿಕೆಗಳನ್ನು ಸಮರ್ಥಿಸಲು ನಾನಾ ಆಧಾರಗಳಿಂದ ಸಮಯೋಚಿತವಾದ

ಪ್ರಮಾಣವಾಕ್ಯಗಳನ್ನು ಉದಹರಿಸುತ್ತಾ ಹೋಗುತ್ತಾರೆ. ಈ ಪ್ರಮಾಣಗಳ ಸಾಮರ್ಥ್ಯವನ್ನು ಪ್ರಕಟಿಸಲು ಅವನ್ನು ಕಾಡುಗಿಚ್ಚಿನ (ಅಗ್ನಿಃ) ಜ್ವಾಲೆಯ ಗುಂಪಿಗೆ (ಜ್ವಾಲಮಾಲಾ) ಹೋಲಿಸಿದ್ದಾರೆ. ಎಂಥಾ ಘೋರವಿಷವೃಕ್ಷವಾಗಿದ್ದರೂ ವಿಷವೃಕ್ಷಗಳು ಎಷ್ಟೇ ಸಂಖ್ಯೆಯಲ್ಲಿದ್ದರೂ ಲೆಕ್ಕಿಸದೆ ಕಾಡುಗಿಚ್ಚಿನ ಉರಿಗಳು ಆ ತೋಪಿಗೆ ತೋಪನ್ನೇ ಇಡಿಯಾಗಿ ಹೇಗೆ ಸುಟ್ಟುಹಾಕುವುದೋ ಹಾಗೆ ಶ್ರೀಮದಾಚಾರ್ಯರ ಯುಕ್ತಿಗರ್ಭಿತ ಪ್ರಮಾಣಗಳು ಪ್ರತಿವಾದಿಗಳ ವಿಷಮಯ ಯುಕ್ತಿಗಳನ್ನೆಲ್ಲಾ ಧ್ವಂಸಮಾಡಿಬಿಡುತ್ತವೆ ಎಂದು ಭಾವ. ಮಧ್ವಾಚಾರ್ಯರ ಮಾತುಗಳೇ ಹೀಗಿರುವಾಗ ಇನ್ನು ಸರ್ವಜ್ಞಮೂರ್ತಿಗಳಾದ ವೇದವ್ಯಾಸರ ಮಾತುಗಳ ಸಾಮರ್ಥ್ಯ ಹೇಳುವುದೇನಿದೆ.

331. ಹರಿಪರವಾಗಿ ದಂಡಾನ್ವಯ—ಕತಿಪಯ ಪವನ ! ೧) ಅಹಂ ಬ್ರಹ್ಮ, ಅಹಂ ನಿರ್ಗುಣಃ, ಇದಂ ವಿತಥಂ ಇತಿ ಏಷಃ ಪಾಷಂಡವಾದಃ ಹಿ. ೨) ತದ್ದು....ಸಾರಾತ್ ಕುನರೈಃ ಆದೃತಃ । ೩) ಅನ್ಯೈಃ ವಿಸೃಷ್ಟಃ। ೪) ತದ್ವ್ಯಾಕ್ರ್ಯಾಭಾಸ—(ಧರಾಗ್ನಿಃ) ಧರಃ ಅಗ್ನಿಃ ತೇ ತೃತೀಯಾವತಾರಃ ವಿಜಯತೇ.

ಅನ್ವಯಾರ್ಥ—ಕತಿಪಯ—ಕತಿ-ಸುಖಪೂರ್ಣನೂ, ಪ-ಜಗತ್-ಪಾಲಕನೂ, ಯ-ಪ್ರಕಾಶಸ್ವರೂಪನೂ ಆದ; ಪವನ-ಪರಿಶುದ್ಧಿಕಾರಿಯೂ ಸ್ವಯಂ ಪರಿಶುದ್ಧನೂ ಆದ ಹೇ ಶ್ರೀಹರಿಯೇ ! ೧) ಅಹಂ-ಜೀವಾತ್ಮನಾದ ನಾನು (ಜೀವನು); ಬ್ರಹ್ಮ-ಪರಬ್ರಹ್ಮನೇ (ಬ್ರಹ್ಮನಿಂದ ಅಭಿನ್ನನು, ಅವನ ಸ್ವರೂಪಭೂತನು). ಅಹಂ-ಬ್ರಹ್ಮಾಭಿನ್ನನಾದ ನಾನು; ನಿರ್ಗುಣಃ-ಯಾವ ಗುಣವೂ ಇಲ್ಲದವನು (ಕರ್ತೃತ್ವ-ಭೋಕ್ತೃತ್ವಾದಿ ಯಾವ ಲಕ್ಷಣವೂ ಇಲ್ಲದವನು). ಇದಂ-ಇದು (ಬ್ರಹ್ಮಾತಿರಿಕ್ತ ಸಕಲ ಜಗತ್ತೂ); ವಿತಥಂ-ಮಿಥ್ಯಾ ಅಥವಾ ಅಸತ್ಯ. ಇತಿ ಏಷಃ-ಹೀಗೆಂಬ ಈ ಸಿದ್ಧಾಂತವು, ಪಾಷಂಡ ವಾದಃ ಹಿ-ವೇದವಿರುದ್ಧವಾದ ಸಿದ್ಧಾಂತ, ಪ್ರಸಿದ್ಧ. ೨) ತದ್ದುಷ್ಪ್ರೇಕ್ಷಾನುಸಾರಾತ್-ಆ ಕಲಿಯ ದುರ್ಬುದ್ಧಿಯನ್ನು ಅನುಸರಿಸುವುದರಿಂದ; ಕುನರೈಃ-ದುಷ್ಟಸ್ವಭಾವದ ಜನರಿಂದ; ಆದೃತಃ-ಆದರಿಸಲ್ಪಟ್ಟಿತು. ೩) ಅನ್ಯೈಃ-ಬೇರೆಯವರಿಂದ, ವಿಸೃಷ್ಟಃ-ಬಿಡಲ್ಪಟ್ಟಿತು. ೪) ತದ್ವ್ಯಾಕ್ರ್ಯಾ....(ಧರಾಗ್ನಿಃ)

ಧರಃ ಅಗ್ನಿಃ—ತತ್-ಆ ದುಶ್ಶಾಸ್ತ್ರದ, ಯುಕ್ತ್ಯಾಭಾಸ-ಯುಕ್ತಿಯತೆ ತೋರುವ ಹೇಳಿಕೆಗಳ, ಜಾಲ-ಸಮೂಹದ, ಪ್ರಸರ-ವ್ಯಾಪಿಸೋಣವೆಂಬ (ಅಥವಾ ಬಲಿ ಬೀಸುವುದೆಂಬ), ವಿಷತರು-ವಿಷವೃಕ್ಷಗಳನ್ನು, ಉದ್ದಾಹ-ಸುಟ್ಟು ಬೂದಿಮಾಡುವುದರಲ್ಲಿ, ದಕ್ಷ-ಸಮರ್ಥವಾದ, ಪ್ರಮಾಣ-ಪ್ರಮಾಣ-ಗಳೆಂಬ, ಜ್ವಾಲಾಮಾಲಾ (ಧರಾಗ್ನಿಃ) ಧರೋಽಗ್ನಿಃ-ಜ್ವಾಲೆಯ ಸಮೂಹವುಳ್ಳ ಕಾಡುಗಿಚ್ಚಿನಂತಿರುವ, ತೇ-ನಿನ್ನ, ತೃತೀಯಃ ಅವತಾರಃ-ಮೂರನೆಯ ವ್ಯಾಸಾವತಾರವು ; ವಿಜಯತೇ-ಸರ್ವೋತ್ಕೃಷ್ಟವಾಗಿದೆ.

ಹರಿಪರವಾದ ಭಾವಾರ್ಥವೂ ವಾಯುಪರ ಭಾವಾರ್ಥಕ್ಕೆ ಪ್ರಾಯಶಃ ಸಮವೇ ಆಗಿರುವುದರಿಂದ ಎರಡನ್ನೂ ಒಟ್ಟಿಗೆ ಹೇಳುವೆನು.

332. (ಕ) **ವಾಯುಪರವಾಗಿ ದಂಡಾನ್ವಯ**—ಹೇ ಪವನ ! ೧) ಅಹಂ ಬ್ರಹ್ಮ, ಅಹಂ ನಿರ್ಗುಣಃ, ಇದಂ ವಿತಥಂ-ಇತಿ ಏಷಃ ಪಾಷಂಡ-ವಾದಃ । ೨) ತದ್ದುಷ್ಪ್ರೇಕ್ಷಾನುಸಾರಾತ್ ಕತಿಪಯ ಕುನರೈಃ ಆದೃತಃ । ೩) ಅನ್ಯೈಃ ವಿಸೃಷ್ಟಃ । ೪) ತದ್ಯುಕ್ತ್ಯಾ....(ಧರಾಗ್ನಿಃ) ಧರಃ ಅಗ್ನಿಃ ತೇ ತೃತೀಯಃ ಅವತಾರಃ ವಿಜಯತೇ.

(ಖ) **ವಾಯುಪರ ಅನ್ವಯಾರ್ಥ**—ಪವನ-ಸರ್ವವನ್ನೂ ಪವಿತ್ರ ಮಾಡುವುದರಿಂದ (ಪುನಾತೀತಿ ಪವನಃ—ಛ.) ಪವನನಾಮಕರಾದ ಹೇ ವಾಯುದೇವರೇ ! ೧) ಅಹಂ-ನಾನು (ಪ್ರತಿಯೊಬ್ಬ ಜೀವಿಯೂ) ; ಬ್ರಹ್ಮ-ಪರಬ್ರಹ್ಮಸ್ವರೂಪವೇ ಆಗಿದ್ದೇನೆ. ಅಹಂ-(ಬ್ರಹ್ಮಾಭಿನ್ನನಾದ ನಾನು), ನಿರ್ಗುಣಃ-ಸ್ವಾಭಾವಿಕವಾದ ಕರ್ತೃತ್ವ-ಭೋಕ್ತೃತ್ವಾದಿ ಗುಣರಹಿತನು. ಇದಂ-ಪರಿದೃಶ್ಯಮಾನವಾದ ಈ ಜಗತ್ತೆಲ್ಲವೂ ; ವಿತಥಂ-ಅಸತ್ಯವಾದುದು (ಮಿಥ್ಯಾ, ಸುಳ್ಳು ಅಥವಾ ಭ್ರಮಾತ್ಮಕವಾದುದು)—ಇತಿ-ಎಂಬ ; ಏಷಃ-ಇವನ (ಮಣಿಮಂತನ) ಸಿದ್ಧಾಂತವು ; ಪಾಷಂಡವಾದಃ-ವೇದಬಾಹಿರವಾದ ಪ್ರಲಾಪವು. ೨) ತದ್ದು....ಸಾರಾತ್—ತತ್-ಅವನ, ದುಷ್ಪ್ರೇಕ್ಷಾ-ದುರ್ಬುದ್ಧಿಯ, ಅನುಸಾರಾತ್-ಅನುಸರಣೆಯಿಂದ ; ಕತಿಪಯ ಕುನರೈಃ-ಕೆಲವು ಜನರಿಂದ ; ಆದೃತಃ-ಆದರಿಸಲ್ಪಟ್ಟಿತು. ೩) ಅನ್ಯೈಃ-ಇತರರಿಂದ, ವಿಸೃಷ್ಟಃ-ಬಿಡಲ್ಪಟ್ಟಿತು. ೪) ತದ್ಯುಕ್ತ್ಯಾ....(ಧರಾಗ್ನಿಃ) ಧರಃ ಅಗ್ನಿಃ—

ತತ್-ಅವನ (ಮಣಿಮಂತನ), ಯುಕ್ತ್ಯಾಭಾಸ-ಯುಕ್ತಿಗಳಂತೆ ತೋರುವ ತರ್ಕಗಳ, ಜಾಲ-ಸಮೂಹದ, ಪ್ರಸರ-ವಿಸ್ತಾರ (ಹರಡುವಿಕೆ)ವೆಂಬ (ಅಥವಾ ಜಾಲ-ಪ್ರಸರ-ಬಲೆ ಬೀಸುವಿಕೆಯೆಂಬ), ವಿಷತರು-ವಿಷವೃಕ್ಷಗಳನ್ನು, ಉದ್ದಾಹ-ಸುಟ್ಟು ಭಸ್ಮಮಾಡುವುದರಲ್ಲಿ, ದಕ್ಷ-ಸಮರ್ಥವಾದ, ಪ್ರಮಾಣ-ಶ್ರುತಿ ಸ್ಮೃತಿ ವಾಕ್ಯಗಳ, ಜ್ವಾಲಾಮಾಲಾ-ದಳ್ಳುರಿಯ ಸಮೂಹವನ್ನು, ಧರ (ಧರಃ)-ಧರಿಸಿದ ; ಅಗ್ನಿಃ-ಕಾಡುಗಿಚ್ಚಿನಂತಿರುವ ; ತೇ-ನಿನ್ನ ; ತೃತೀಯಃ ಅವತಾರಃ-ಮೂರನೆಯ ಮಧ್ವಾವತಾರವು ; ವಿಜಯತೇ-ಉತ್ಕೃಷ್ಟವಾಗಿದೆ.

(ಗ) **ಶ್ಲೋಕದ ಭಾವಾರ್ಥ (ಉಭಯಪರ)**—(ಹರಿಪರ) ಹೇ ಭಗವನ್ ವೇದವ್ಯಾಸ! ನೀವು ಸುಖಪೂರ್ಣರೂ (ಕ-ತಿ) ಸಕಲ ಜಗತ್ಪಾಲಕರೂ (ಪ) ಜ್ಞಾನವೆಂಬ ಪ್ರಕಾಶಿಸುವವರೂ (ಯ) ಕಟಾಕ್ಷಮಾತ್ರದಿಂದಲೇ ಸಕಲವನ್ನೂ ಪರಿಶುದ್ಧಿಗೊಳಿಸಬಲ್ಲ ಪಾವನತಮರೂ (ಪವನ) ಆಗಿದ್ದೀರಿ. ಭಾರತಪುರಾಣಾದಿ ಅನೇಕ ಸಚ್ಛಾಸ್ತ್ರಗಳನ್ನು ರಚಿಸಿ ಅಜ್ಞಾನ ಮತಗಳನ್ನು ನಿರಾಕರಿಸಿ ಸಜ್ಜನರಿಗೆ ಸನ್ಮಾರ್ಗ ತೋರಿಸಿದ ನಿಮ್ಮ ಈ ಮೂರನೆಯ ಅವತಾರವು ಸದಾ ಉತ್ಕೃಷ್ಟವಾಗಿದೆ (ವಿಜಯತೇ ತೇಽವತಾರಸ್ತೃತೀಯಃ). (ವಾಯುಪರ) ಭಕ್ತರ ಅಜ್ಞಾನ-ಮಿಥ್ಯಾಜ್ಞಾನಗಳನ್ನು ಪರಿಹರಿಸಿ ಜ್ಞಾನ ಕೊಡುವುದರ ಜೊತೆಗೆ ಅವರ ಸಕಲ ಪಾಪಗಳನ್ನೂ ದೂರಮಾಡಿ ಅವರನ್ನು ಪಾವನಮಾಡುವ ಸ್ವಭಾವವುಳ್ಳ, ಪರಿಶುದ್ಧ-ಬಲ-ಜ್ಞಾನ (ವ-ಅಯ-ಉ) ಸ್ವರೂಪರಾದ ವಾಯುದೇವರೇ (ಪವನ)! ನಿಮ್ಮ ತೃತೀಯಾವತಾರದ ಮಹಿಮೆಯನ್ನು ಎಷ್ಟೆಂದು ವರ್ಣಿಸಲಿ.

(ಉಭಯಪರ) ಈ ಕಲಿಯೂ ಮಣಿಮಂತನೂ ಬೋಧಿಸಿದ ಪ್ರಮೇಯಗಳು ಒಂದೇ ರೀತಿ ಇದ್ದು ವೇದವಿರುದ್ಧವಾದ ಸಿದ್ಧಾಂತಗಳೇ ಆಗಿವೆ. ಏಕೆಂದರೆ ವೇದಾದಿ ಸಕಲಶಾಸ್ತ್ರಗಳೂ ಜೀವೇಶ್ವರ ಭೇದವನ್ನು ಒತ್ತಿ ಒತ್ತಿ 'ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದಾ' ಎಂದು ಸಾರುತ್ತಿರಲು ಇವರ ಸಿದ್ಧಾಂತವು ಅಭೇದವನ್ನೇ ಪ್ರತಿಪಾದಿಸುತ್ತದೆ. 'ಅಹಂ ಬ್ರಹ್ಮಾಸ್ಮಿ' (ಬೃಹದಾರಣ್ಯ) 'ತತ್ತ್ವಮಸಿ' (ಛಾಂದೋಗ್ಯ) ಇತ್ಯಾದಿ ಮಹಾವಾಕ್ಯಗಳನ್ನು

ಅವಲಂಬಿಸಿ ಅವರ ಸಿದ್ಧಾಂತವು ಜೀವಸ್ವರೂಪನಾಗಿ ಕಂಡರೂ ನಾನು ಪರ-ಬ್ರಹ್ಮನೇ ಆಗಿದ್ದೇನೆ. ಆ ಪರಬ್ರಹ್ಮನು ನಿರ್ಗುಣನೂ ನಿರಾಕಾರನೂ ಅನಿರ್-ವಾಚ್ಯನೂ ಆಗಿರುವಂತೆ ನಾನೂ ಪರಮಾರ್ಥತಃ ನಿರ್ಗುಣನೂ ನಿರಾಕಾರನೂ ಆಗಿದ್ದೇನೆ. ಆದರೆ ಅಜ್ಞಾನದಿಂದ (ಅವಿದ್ಯಾಮೂಲಕವಾಗಿ) ನಾನು ನೀನು ಎಂಬ ಭೇದಗಳೂ ಕರ್ತೃತ್ವ-ಭೋಕ್ತೃತ್ವಾದಿ ಧರ್ಮಗಳೂ (ಎಂದರೆ ನಾನು ಮಾಡುತ್ತೇನೆ, ದುಃಖಪಡುತ್ತೇನೆ ಇತ್ಯಾದಿ ಅನುಭವಗಳು) ಕಾಣಿಸುವುವೇ ಹೊರತು ಯಥಾರ್ಥವಾಗಿ ಎಲ್ಲವೂ ಸುಳ್ಳು, ಭ್ರಮೆ ಅಥವಾ ಮಿಥ್ಯಾ—ಹೀಗೆ ಬ್ರಹ್ಮಾತಿರಿಕ್ತವಾದ (ಬ್ರಹ್ಮವೊಂದನ್ನು ಬಿಟ್ಟು ಉಳಿದ) ಸಕಲ ಜಗತ್ತೂ ಮಿಥ್ಯಾ–ಸುಳ್ಳು ಎಂದು ಸಾಧಿಸುತ್ತಾರೆ. ಈ ರೀತಿ ಪ್ರತ್ಯಕ್ಷಸಿದ್ಧವಾದ ಕಣ್ಣಿಗೆ ಕಾಣುವ ವಿಚಾರಗಳೇ ಸುಳ್ಳೆಂದು ಸಾಧಿಸಬೇಕಾದ್ದರಿಂದ ಅವರು ಸುಳ್ಳಿಗೆ ಸುಳ್ಳು ಸೇರಿಸುತ್ತಾ ತಮ್ಮ ವಾದವನ್ನು ಉದ್ದಕ್ಕೆ ಬೆಳೆಸಬೇಕಾಯಿತು. ಅದರಿಂದ ಅದು ಜಟಿಲವಾಯಿತು, ಸುಲಭವಾಗಿ ಅರ್ಥವಾಗದಂತಾಯಿತು. ಮೀನುಗಾರ ಬಲೆಯನ್ನು ಹಾಕಿದರೆ ಅನೇಕ ಮೀನುಗಳು ಸಿಕ್ಕಿ-ಕೊಳ್ಳುವಂತೆ ಇವರ ಯುಕ್ತಿಗಳ ತೊಡಕಿಗೆ ಸಿಕ್ಕಿಕೊಂಡರೆ ಪಾರಾಗುವುದೇ ಕಷ್ಟ. ವಿಷದ ವೃಕ್ಷಗಳ ಸ್ಪರ್ಶದಿಂದಲೇ ಹೇಗೆ ಅನರ್ಥವಾಗುವುದೋ ಹಾಗೆ ಇವರ ಸಿದ್ಧಾಂತಗಳ ಸೇವನೆಯಿಂದ ತಮಸ್ಸೆಂಬ ಅನರ್ಥವೇ ಆಗುತ್ತದೆ. ಅವರ ಆ ಮತವು ಇಂಥಾ ಅನರ್ಥಕಾರಿ ಸಿದ್ಧಾಂತಗಳಿಂದಲೇ ತುಂಬಿರುವುದರಿಂದ ಅದು ವಿಷವೃಕ್ಷಗಳ ಘೋರಾರಣ್ಯದಂತೆ ಪಾಷಂಡವಾದದಿಂದ ತುಂಬಿದ ಅಸಂಬದ್ಧ ಪ್ರಲಾಪದಂತಿದೆ. (ಯುಕ್ತ್ಯಾಭಾಸಜಾಲಪ್ರಸರವಿಷತರು, ಹ್ಯೇಷ ಪಾಷಂಡವಾದಃ). ಇಷ್ಟಾದರೂ ಅವರಂತೆಯೇ ಮಿಥ್ಯಾಜ್ಞಾನಸ್ವರೂಪವುಳ್ಳ ಅನೇಕರಿಗೆ ಅವರ ಯುಕ್ತಿಗಳೇ ಸೊಗಸಿದ್ದರಿಂದ ಅವರೆಲ್ಲ ಅವರ ಮತವನ್ನೇ ಅನುಸರಿಸಿ (ಕತಿಪಯ ಕುನರೈರಾದೃತಃ) ಅವರ ಅನುಯಾಯಿಗಳಾದರು. ಮಿಕ್ಕವರಿಗೆ ಅವರ ಯುಕ್ತಿಗಳು ಹಿಡಿಸಲಿಲ್ಲವಾದ್ದರಿಂದ ಅವರು ಆ ಮತವನ್ನು ತ್ಯಜಿಸಿ ನಿರಾಕರಿಸಿದರು. (ಅನ್ಯೈರ್ವಿಸೃಷ್ಟಃ).

ಹೀಗಿರಲು (ಹರಿಪರ) ಓ ವೇದವ್ಯಾಸರೇ, ನೀವು ಅವತಾರಮಾಡಿ ಬಂದು ಭಾರತ-ಭಾಗವತ-ಬ್ರಹ್ಮಸೂತ್ರಾದಿ ಸಚ್ಛಾಸ್ತ್ರಗಳನ್ನು ರಚಿಸಿ ಈ

ಅಪಸಿದ್ಧಾಂತಗಳನ್ನೆಲ್ಲಾ ಖಂಡಿಸಿದಿರಿ. (ವಾಯುಪರ) ಹೇ ಸ್ವಾಮಿ ವಾಯುದೇವರೇ, ನೀವು ಮಧ್ವಾಚಾರ್ಯರೆಂಬ ಹೆಸರಿನಿಂದ ಮೂರನೇ ಅವ-ತಾರವಮಾಡಿ ಬಂದು ಈ ಅಪಸಿದ್ಧಾಂತಗಳನ್ನೆಲ್ಲ ನಿಮ್ಮ ಭಾಷ್ಯಗಳಲ್ಲಿ ಖಂಡಿಸಿ ಹಾಕಿದಿರಿ. ಆ ಭಾಷ್ಯಗಳಲ್ಲಿ ನೀವು ನಿಮ್ಮ ಒಂದೊಂದು ಮಾತಿಗೂ ಸಾಧಕ-ಪ್ರಮಾಣಗಳಾದ ಅನೇಕ ಶ್ರುತಿ-ಸ್ಮೃತ್ಯಾದಿ ಗ್ರಂಥಗಳ ವಾಕ್ಯಗಳನ್ನು ಪುಂಖಾನುಪುಂಖವಾಗಿ ಹೇಳುತ್ತಾ ಹೋಗಿರುವುದರಿಂದ ಅವುಗಳ ಮುಂದೆ ಪರಪಕ್ಷೀಯರ ವಾದಗಳೆಲ್ಲವೂ ನಿಲ್ಲದೆ ಕುಸಿದುಹೋಗುತ್ತವೆ. ಕಾಡುಗಿಚ್ಚಿನ ಜ್ವಾಲೆಗಳು ಎಷ್ಟೇ ಘೋರ ವಿಷವೃಕ್ಷವಾಗಿದ್ದರೂ ಎಷ್ಟೇ ದಟ್ಟವಾಗಿ ಬೆಳೆದಿ-ದ್ದರೂ ಲೆಕ್ಕಿಸದೆ ಅವೆಲ್ಲವನ್ನೂ ನಿಶ್ಶೇಷವಾಗಿ ದಹಿಸಿ ಭಸ್ಮಮಾಡಿಬಿಡುವುವೋ ಅದರಂತೆ ನಿಮ್ಮ ಪ್ರಮಾಣಗಳ ಮುಂದೆ ಅವರ ಸಿದ್ಧಾಂತದ ಪ್ರಮೇಯಗಳೆಲ್ಲ ತಲೆಕೆಳಗಾಗಿ ನಿರಸ್ತವಾಗಿ ಹೋದುವು, ನೀವು ದ್ವೈತಸಿದ್ಧಾಂತವನ್ನು ಸ್ಥಾಪಿಸಿ ಜಯಭೇರಿ ಹೊಡಿದಿರಿ (ಪವನ ವಿಜಯತೇ ತೇಽವತಾರಸ್ತೃತೀಯಃ) ಎಂದು ಭಾವ.

ಅಷ್ಟೇ ಅಲ್ಲ. ವಿಷಸೇವನೆಯಿಂದ ಮೂರ್ಛಿತನಾದವನನ್ನು ವೈದ್ಯರು ಔಷಧೋಪಚಾರಗಳಿಂದ ವಿಷವನ್ನು ಹೋಗಲಾಡಿಸಿ ಗುಣಪಡಿಸುವಂತೆ ದುಸ್ತರ್ಕಗಳ ಜಾಲಕ್ಕೆ ಸಿಕ್ಕಿ ದುರ್ಭಾಷ್ಯಗಳ ಹೊಡೆತಕ್ಕೆ ಸಿಕ್ಕಿ ಕಳೆಗುಂದಿ ಹೋಗಿದ್ದ ಗೀತೋಪನಿಷದ್ಬ್ರಹ್ಮಸೂತ್ರಾದಿ ಗ್ರಂಥಗಳಿಗೆ ಸದ್ಭಾಷ್ಯ ರಚನೆ ಮಾಡಿ ಶೈತ್ಯೋಪಚಾರ ಮಾಡಿದ್ದರಿಂದ ಅವು ಯಥಾರ್ಥಬೋಧಕವಾಗಿ ನಿರ್ಮಲವಾದುವು. ಹೀಗೆ ದುರ್ಭಾಷ್ಯಗಳ ಮಾಲಿನ್ಯವನ್ನು ಕಳೆದು ಗೀತೋಪದಾದಿಗ್ರಂಥಜಾತವನ್ನು ಸಹ ನಿರ್ಮಲಮಾಡಿದ್ದರಿಂದ, ಹೇ ಮಧ್ವಾಚಾರ್ಯರೇ, ನಿಮಗೆ 'ಪವನ' (ಪವಿತ್ರಮಾಡುವವರು) ಎಂಬ ಬಿರುದು ಸಾರ್ಥಕವೇ ಆಗಿದೆಯೆಂದು ಅಭಿಪ್ರಾಯ.

333. ವಿಶೇಷ ವಿಚಾರ—(ಕ) ಈ ಶ್ಲೋಕದಲ್ಲಿರುವ 'ಜ್ವಾಲಾ-ಮಾಲಾಧರೋ(ರಾ)ಗ್ನಿಃ' ಎಂಬುದಕ್ಕೆ 'ಸ ಪೂರ್ವ್ಯಃ ಪವತೇ'—ಎಂಬ ಋಙ್ಮಂತ್ರದಲ್ಲಿರುವ 'ಇತ್ ಕೃಶಾನೋರಸ್ತುರ್ಮನಸಾ ಹ ಬಿಭ್ಯುಷಾ' (ಋ. ೯/೭೭/೨) ಎಂಬ ಭಾಗ ಸಮಾಖ್ಯೆಯಾಗಿದೆಯೆಂದು ಯುಕ್ತಿ-

ಮಲ್ಲಿಕಾದಲ್ಲಿ ತೋರಿಸಿದ್ದಾರೆ. ಆ ಮಂತ್ರವನ್ನೂ ಅದರ ಅರ್ಥ-ತಾತ್ಪರ್ಯ ಗಳನ್ನೂ ಕೆಳಗೆ ಕೊಟ್ಟಿದೆ.

ಸ ಪೂರ್ವ್ಯಃ ಪವತೇ ಯಂ ದಿವಸ್ಪರಿ

ಶ್ಯೇನೋ ಮಥಾಯದಿಷಿತಸ್ತಿರೋ ರಜಃ ।

ಸ ಮಧ್ವ ಆ ಯುವತೇ ವೇವಿಜಾನ

ಇತ್ ಕೃಶಾನೋರಸ್ತುರ್ಮನಸಾ ಹ ಬಿಭ್ಯುಷಾ ॥

(ಋ. ೯/೭೭/೨)

(ಅನ್ವಯಾರ್ಥ)—ಪೂರ್ವ್ಯಃ-ಸರ್ವರಿಗೂ ಮೊದಲು ಇದ್ದವನಾದ, ಎಂದರೆ ಸರ್ವಜೀವರಿಗೂ ಜ್ಯೇಷ್ಠನಾದ(ಇದರಿಂದ 'ವಂದ್ಯಂ ಚಂದ್ರೇಂದ್ರರುದ್ರ-ದ್ಯುಮಣಿಫಣಿವಯೋನಾಯಕಾದ್ಯೈರಿಹಾದ್ಯ' ಎಂಬ ನಾಲ್ಕನೇ ಶ್ಲೋಕದ ಭಾಗ ವ್ಯಾಖ್ಯಾತವಾಯಿತು) ; ಸಃ-ಆ ವಾಯುವು (ಮುಖ್ಯಪ್ರಾಣನು) ; ಪವತೇ-ಶ್ವಾಸೋಚ್ಛ್ವಾಸರೂಪದಿಂದ ಸಕಲಪ್ರಾಣಿಗಳಲ್ಲೂಚಲಿಸು(ಅಡ್ಡಾಡು) ತ್ತಿರುತ್ತಾನೆ. ಯಂ-ಆ ರೀತಿ ಅಡ್ಡಾಡುವುದನ್ನು, ದಿವಃ-ವೈಕುಂಠಲೋಕಕ್ಕೆ ಹೋಗುವ, ಪರಿ-ಪರ್ಯಂತ ಮಾಡುತ್ತಿರುತ್ತಾನೆ. (ಇದರಿಂದ ವಾಸ್ತು 'ಆನಂದಾನ್ ಮಂದಮಂದಾ ದದತಿ ಹಿ ಮರುತಃ' ಎಂಬ ೧೦ನೇ ಶ್ಲೋಕದ ವಚನ ವ್ಯಾಖ್ಯಾತವಾಯಿತು.) ಶ್ಯೇನಃ (ಶೀ+ಆ+ಇನಃ) ಶಂ-ಸುಖ, ಅದುಳ ವನು ಶ್ರೀ (ಗುಣೀ, ಜ್ಞಾನೀ ಎಂಬಂತೆ)-ನಿರವಧಿಕ ಸುಖಸ್ವರೂಪ-ನಾದ ನಾರಾಯಣನು, ಆ-ಸಮಂತಾತ್-ಸರ್ವವಿಧದಲ್ಲೂ, ಇನಃ-ಸ್ವಾಮಿ-ಯಾಗಿರುವ ಇವನು (ಇದರಿಂದ 'ತ್ರಾತಾ ಯಸ್ಯ ತ್ರಿಧಾಮಾ' ಎಂಬ ೩೩ನೇ ಶ್ಲೋಕ ಭಾಗ ವ್ಯಾಖ್ಯಾತವಾಯಿತು), ಇಷಿತಃ-ಸಜ್ಜನರಿಗೆ ಪ್ರಿಯನೂ ಇಷ್ಟನೂ ಆಗಿದ್ದಾನೆ. (ಇದರಿಂದ 'ಭ್ರಾತರಿಷ್ಟಾಪ್ತ ಬಂಧೋ' ಎಂಬ ೧೪ನೇ ಶ್ಲೋಕಕ್ಕೆ ಸಮಾಖ್ಯೆ ಹೇಳಿದಂತಾಯಿತು.) ಇವನು, ರಜಃ-ರಾಜಸ-

ತಾಮಸ ಗುಣಗಳಿಂದ ನಿರ್ಮಿತವಾದ ದುಶ್ಶಾಸ್ತ್ರಗಳನ್ನು; ತಿರಃ-ತಿರಸ್ಕರಿಸಿ (ಇದು 'ದುರ್ಭಾಷ್ಯಂ ವ್ಯಸ್ಯ ದಸ್ಯೋಃ' ಎಂಬ ೩೮ನೇ ಶ್ಲೋಕದ ಭಾಗಕ್ಕೆ ಸಮಾಖ್ಯೆಯಾಗಿದೆ); ಮಥಾಯತ್-ಮಥನಮಾಡಿದನು, ಕಡೆದನು ಎಂದರೆ ವೇದಶಾಸ್ತ್ರಗಳೆಂಬ ಸಮುದ್ರವನ್ನು ಮಥನಮಾಡಿ ಅದರಲ್ಲಿರುವ ವಿಚಾರಗಳೆಂಬ ರತ್ನಗಳನ್ನು ಹೊರಗೆಡಹಿದನು. (ಇದು 'ಅಸುಕರಮಕರೋರ್-ಬ್ರಹ್ಮಸೂತ್ರಸ್ಯ ಭಾಷ್ಯಂ' ಎಂಬ ೩೮ನೇ ಶ್ಲೋಕ ಭಾಗದ ಸಮಾಖ್ಯೆ). (ಋಕ್ಕಿನ ಉತ್ತರಾರ್ಧ) ಸಃ-ಅಂಥಾ ಎಂದರೆ ದುಶ್ಶಾಸ್ತ್ರಗಳನ್ನು ತುಳಿದು ಸಚ್ಛಾಸ್ತ್ರಗಳನ್ನು ಎತ್ತಿಹಿಡಿದಂಥಾ, ಮಧ್ವಃ-ಮಧ್ವಾಚಾರ್ಯರೆಂಬ ವಾಯುದೇವರ ತೃತೀಯಾವತಾರವು, ವೇವಿಜಾನಃ (ವಿಜೃ ಪೃಥಗ್ಭಾವೇ ಎಂಬ ಧಾತುವಿನ ರೂಪ). ಈಶ, ಜೀವ, ಜಡಾತ್ಮಕವಾದ ಪ್ರಪಂಚದಲ್ಲಿ ಎಲ್ಲವೂ ಬೇರೆ ಬೇರೆ ಎಂದು ತೋರಿಸುತ್ತಾ ಪಂಚಭೇದವನ್ನು ಸ್ಥಾಪಿಸಿದವನಾಗಿ; ಆ ಯುವತೇ (ಯು ಮಿಶ್ರಣಾಮಿಶ್ರಣಯೋಃ ಎಂದು ಧಾತುಪಾಠ. ಬೆರಸು, ಬೇರ್ಪಡಿಸು ಎಂದು ಎರಡರ್ಥ). (a) ಸಜ್ಜನರಲ್ಲಿ ಸದಾ ಆ-ಚೆನ್ನಾಗಿ ಬೆರೆತಿರುತ್ತಾನೆ ಎಂದರೆ ಅವರಿಗೆ ಭೇದಶಾಸ್ತ್ರವನ್ನು ಬೋಧಿಸುತ್ತಿರುತ್ತಾನೆಂದು ಭಾವ. (ಇದು 'ಸಜ್ಜನಾನ್ ಮೋದಯಂತಂ' ಶ್ಲೋಕ ೪೦ ಎಂಬುದಕ್ಕೆ ಸಮಾಖ್ಯೆ). (b) ಮತ್ತು ದುರ್ಜನರಿಂದ ದೂರವಾಗಿಯೂ ಇರುತ್ತಾನೆ; ಅವರಿಗೆ ಪ್ರಿಯವಾದ ಅಭೇದವನ್ನು-ಅದ್ವೈತವನ್ನು ಖಂಡಿಸಿ ದ್ವೈತವನ್ನು ಸ್ಥಾಪಿಸುವನಾದ್ದರಿಂದ ದೈತ್ಯರಿಗೆ ಬೇಡದವನೂ ಆಗಿರುತ್ತಾನೆ. (ಇದರಿಂದ 'ದೈತ್ಯಾನಾಮಾರ್ತಿಮಂಧೇ ತಮಸಿ ವಿದಧತಾಂ' ಶ್ಲೋಕ ೩, 'ಪ್ರಮದದ ಸುಧಿಯಾಂ ಮೋಹಕ ದ್ವೇಷಭಾಜಾಂ' ಶ್ಲೋಕ ೨೭, 'ಸ್ವಾಮಿನ್ ಸರ್ವಾಂತರಾತ್ಮನ್' ಶ್ಲೋಕ ೧೪ ಇತ್ಯಾದಿಗಳಿಗೆ ಸಮಾಖ್ಯೆ ಹೇಳಿದಂತಾಯಿತು). ಇತ್-ಹೀಗೆಯೇ (ಮಧ್ವಾವತಾರದಂತೆಯೇ), ಕೃಶಾನೋಃ-ಪ್ರಳಯಾಗ್ನಿಯನ್ನು, ಅಸ್ತುಃ-ನುಂಗುವ (ಭೂಮಿಯು ಜಲದಲ್ಲಿ ಲಯವಾಗುವುದೆಂಬುದು, ಜಲವು ಅಗ್ನಿಯಲ್ಲೂ ಅಗ್ನಿಯು ವಾಯುವಿನಲ್ಲೂ ಲಯವಾಗುವುದೆಂಬುದು ಶಾಸ್ತ್ರಸಿದ್ಧ ಲಯದ ಕ್ರಮ), ಬಿಭ್ಯುಷಾ-ಭಯಂಕರವಾದ (ಉಗ್ರವಾದ), ಮನಸಾ-ಮನಸ್ಸುಳ್ಳ ರೂಪಗಳನ್ನು ಧರಿಸಿ,

ಆಯುವತೇ-ಎಲ್ಲೆಲ್ಲಿ ಪ್ರಳಯಾಗ್ನಿ ವ್ಯಾಪಿಸಿರುತ್ತದೋ ಅಲ್ಲೆಲ್ಲಾ ಹೋಗಿ ಅಗ್ನಿಯನ್ನು ಸೇರುತ್ತಾನೆ ಎಂದರೆ ನುಂಗಿಬಿಡುತ್ತಾನೆ. ಹ-ಅವನ ಶಕ್ತಿಯು ಅದ್ಭುತವಾದುದು. (ಈ ಭಾಗವು ೮ನೇ ಶ್ಲೋಕದ ವಿಭೋ ಽಭೇದಿ ಬಭ್ರೇ ಬಭೂವೇ ಎಂಬುದಕ್ಕೂ ಪ್ರಸ್ತುತ ೩ನೇ ಶ್ಲೋಕದ 'ಜ್ವಾಲಾಮಾಲಾ-ಧರೋ (ರಾ)ಗ್ನಿಃ' ಎಂಬ ಭಾಗಕ್ಕೂ ಸಮಾಖ್ಯೆಯಾಗಿದೆ ಎಂದು ತೋರಿಸಿ-ದಂತಾಯಿತು).

ಶ್ರುತಿಯ ತಾತ್ಪರ್ಯ—ಜಗತ್ ಸೃಷ್ಟಿ ಮಾಡುವಾಗ ಭಗವಂತನು ಎಲ್ಲರಿಗಿಂತಲೂ ಮೊದಲು, ಬ್ರಹ್ಮದೇವರಿಗೆ ಎರಡನೆಯವನನ್ನಾಗಿ, ವಾಯು-ದೇವರನ್ನು ಸೃಷ್ಟಿಸಿದನು. ಇದರಿಂದ ಮುಖ್ಯಪ್ರಾಣನು, ಬ್ರಹ್ಮದೇವರನ್ನು ಬಿಟ್ಟರೆ, ಮಿಕ್ಕ ಎಲ್ಲರಿಗೂ ಜ್ಯೇಷ್ಠ (ಪೂರ್ವ್ಯಃ, ವಾಸ್ತು ೪ ಶ್ಲೋಕ 'ವಂದ್ಯಂ ಚಂದ್ರೇಂದ್ರ....ರಿಹಾದ್ಯ') ಈ ವಾಯು ಸ್ಥಾವರಜಂಗಮಾತ್ಮಕ ಸಕಲಪ್ರಾಣಿ-ಗಳಲ್ಲಿಯೂ ನೆಲೆಸಿದ್ದು, ವೈಕುಂಠಕ್ಕೆ ಹೋಗುವ ಪರ್ಯಂತ ಇಡೀ ಬ್ರಹ್ಮ-ಕಲ್ಪದಲ್ಲಿ, ಶ್ವಾಸರೂಪ ಹಂಸಮಂತ್ರ ಜಪಮಾಡಿ ಆ ಭಗವಂತನಿಗೆ ಸಮರ್ಪಿ-ಸುತ್ತಾರೆ. ಇದರಿಂದ ಅವನು ಆ ಭಗವಂತನಿಗೆ ಅತ್ಯಂತ ಆಪ್ತಸೇವಕನೂ ಅಚ್ಛಿನ್ನಭಕ್ತನೂ ಆಗಿದ್ದಾನೆ ('ತ್ರಾತಾ ಯಸ್ಯ ತ್ರಿಧಾಮಾ' ಶ್ಲೋಕ ೩೨) ಸಕಲಪ್ರಾಣಿಗಳು ಮಾಡುವ ಸತ್ಕರ್ಮಗಳಿಗೂ ಪ್ರೇರಕರಾಗಿ ಆ ಕರ್ಮಫಲ-ವನ್ನು ಭಗವಂತನಿಗೆ ಅರ್ಪಿಸಿ ಅನುಗ್ರಹ ಕೊಡಿಸಿ ಅವರಿಗೆ ಅಣ್ಣನೂ ಆಪ್ತನೂ ಬಂಧುವೂ ಆಗಿದ್ದಾನೆ ('ಭ್ರಾತರಿಷ್ಟಾಪ್ತಬಂಧೋ'-ಶ್ಲೋಕ ೧೪). ಆ ವಾಯುವೇ ಮಧ್ವಾಚಾರ್ಯರಾಗಿ ಅವತಾರಮಾಡಿ ರಾಜಸ-ತಾಮಸ ಗುಣ-ಗಳಿಂದ ನಿರ್ಮಿತವಾದ ಇಪ್ಪತ್ತೊಂದು ಕುಭಾಷ್ಯಗಳನ್ನು ಖಂಡಿಸಿ ('ಧುರ್ಭಾಷ್ಯಂ ವ್ಯಸ್ಯ ದಸ್ಯೋಃ'-೩೮ನೇ ಶ್ಲೋಕ) ವೇದಾದಿ ಸಕಲಶಾಸ್ತ್ರಾ-ರ್ಥಗಳನ್ನೂ ಮಥಿಸಿ ವಿಷ್ಣುವಿನ ಅನಂತಗುಣಗಳನ್ನು ಪ್ರತಿಪಾದಿಸುವ ಭಾಷ್ಯ-ಗಳನ್ನು ರಚಿಸಿದರು. (ಅಸುಕರಮಕರೋಬ್ರಹ್ಮಸೂತ್ರಸ್ಯ ಭಾಷ್ಯಂ-೩೮ನೇ ಶ್ಲೋಕ). ಈ ಪ್ರಕಾರ ದುರ್ಭಾಷ್ಯಗಳನ್ನು ತುಳಿದು (ದೈತ್ಯಾನಾಮಾರ್ತಿ-ಮಂಧೇ ತಮಸಿ ವಿದಧತಾಂ-ಶ್ಲೋಕ ೩). ಈಶ-ಜೀವ-ಜಡಾತ್ಮಕ ಪ್ರಪಂಚ-ದಲ್ಲಿ ಅನಾದಿನಿತ್ಯವಾಗಿರುವ ಪಂಚಭೇದವನ್ನೂ ತಾರತಮ್ಯವನ್ನೂ ಸ್ಥಾಪನೆ

ಮಾಡಿ ಸಕಲ ಸಜ್ಜನರಿಗೆ ಅದನ್ನು ಉಪದೇಶಿಸಿದರು. ('ಪ್ರಮುದದಸುಧಿಯಾಂ'-ಶ್ಲೋಕ ೨೭, 'ಸ್ವಾಮಿನ್ ಸರ್ವಾಂತರಾತ್ಮನ್'-ಶ್ಲೋಕ ೧೪, 'ಸಜ್ಜನಾನ್ ಮೋದಯಂತಂ'-ಶ್ಲೋಕ ೪೦).

ಮಹಾಪ್ರಳಯದಲ್ಲಿ ಭೂಮಿಯು ಜಲದಲ್ಲಿ ಲಯಹೊಂದುತ್ತದೆ, ಆ ಜಲವು ಅಗ್ನಿಯಲ್ಲಿ ಲಯವಾಗುತ್ತದೆ. ಈ ಪ್ರಕಾರ ವ್ಯಾಪ್ತವಾದ ಪ್ರಳಯಾಗ್ನಿಯನ್ನು ಈ ವಾಯು ಭಯಂಕರವಾದ ಅನೇಕ ರೂಪಗಳಿಂದ ವ್ಯಾಪಿಸಿ ನುಂಗಿಬಿಡುತ್ತಾನೆ. ('ಅಭೇದಿ ಬಭ್ರೇ ಬಭೂವೇ'-ಲನೇ ಶ್ಲೋಕ) ಅವನ ಆ ಸಾಮರ್ಥ್ಯ ಅದ್ಭುತವಾದುದು.

(ಖ) ಬ್ರಹ್ಮಾಹಂ ...ಪಾಷಂಡವಾದಃ, ತದ್ಯುಕ್ತ್ಯಾಭಾಸ.... ಧರೋಗ್ನಿಃ—ಎಂಬ ವಾಕ್ಯಗಳಿಗೆ 'ಅಜೀತಯೇ' ಎಂಬ ಶ್ರುತಿಯ (ಋ. ೯/೯೬/೪) 'ಸರ್ವತಾತಯೇ ಬೃಹತೇ । ತದುಶಂತಿ' ಎಂಬ ಭಾಗ ಸಮಾಖ್ಯೆ, ಶ್ರುತಿಯ ಅರ್ಥಕ್ಕೆ ಖಂಡ 270-ಡ ವನ್ನೂ, ಸಮಾಖ್ಯೆಗೆ 253-ಥ ನೋಡಿ). ಇದೇ ರೀತಿ ಬಳಿತ್ಥಾಸೂಕ್ತದ 'ಬಟ್‌ದರ್ಶತಂ ಭರ್ಗಃ' (೧ನೇ ಋಕ್) ಎಂಬ ಭಾಗವೂ ಸಮಾಖ್ಯೆ. ದರ್ಶ ಎಂದರೆ ದರ್ಶನ, ಶಾಸ್ತ್ರ, ಅದರಿಂದ, ತ–ವ್ಯಾಪ್ತವಾದ ವೈಷ್ಣವ ಶಾಸ್ತ್ರಕಾರರು ಎಂದು ಒಂದರ್ಥ. ದರ್ಶ–ನಿತ್ಯಾಪರೋಕ್ಷಜ್ಞಾನದಿಂದ, ತ–ವ್ಯಾಪ್ತರಾದ ಎಂಬುದು ಎರಡನೇ ಅರ್ಥ. ಭಜ್ಯಂತೇ ನಾನಾದುರ್ದರ್ಶ ನಾನ್ಯನೇತಿ ಭರ್ಗಃ । ನಾನಾ ದುರ್ಮತಗಳನ್ನು ಖಂಡಿಸಿದವರಾದ ಕಾರಣ ಭರ್ಗಃ । ಈ ಎರಡಕ್ಕೂ ಬೇಕಾದ ಯುಕ್ತಿಯ ಬಲವುಳ್ಳವರು ಎಂಬುದನ್ನು ಬಟ್ ತೋರಿಸುತ್ತದೆ. ಇಂಥಾ ಸಾಮರ್ಥ್ಯೋಪೇತವಾದ 'ವಪುಷೇ'–ಮೂರನೇ ಅವತಾರಕ್ಕೆ, ಧಾಯಿ–ಧರಿಸಲ್ಪಟ್ಟಿತು. ವಾಯುದೇವರ ಈ ಅವತಾರದಲ್ಲಿ ಶಾಸ್ತ್ರನಿರ್ಮಾಣಶಕ್ತಿಯೂ (ದರ್ಶತ), ಪರಮತನಿರಾಕರಣಶಕ್ತಿಯೂ (ಭರ್ಗಃ), ಅದಕ್ಕೆ ಬೇಕಾದ ಯುಕ್ತಿಯ ಬಲವೂ (ಬಟ್) ಇದ್ದುವು ಎಂಬ ಅರ್ಥವು 'ತದ್ಯುಕ್ತ್ಯಾಭಾಸ....ಧರೋಗ್ನಿಃ' ಎಂಬ ಉಕ್ತಿಗೆ ಸಾಧಕವಾಗಿದೆ.

ಇಲ್ಲಿಗೆ ಮೂವತ್ತನೇ ಶ್ಲೋಕ ಮುಗಿಯಿತು.

ಶ್ಲೋಕ ೩೧—ನಿರಾಸದ ಪರಿಣಾಮ

334. (ಕ) ಅವತಾರಿಕೆ—(ಪು.ರಾ.) ಕಲಿಯಿಂದ ಪ್ರವರ್ತಿತವಾದ ದುಶ್ಶಾಸ್ತ್ರಕ್ಕೆ ಶ್ರೀವೇದವ್ಯಾಸದೇವರಿಂದಲೂ ಮಣಿಮಂತನಿಂದ ಪ್ರಚಾರ-ಮಾಡಲ್ಪಟ್ಟ ಅದ್ವೈತಶಾಸ್ತ್ರಕ್ಕೆ ಶ್ರೀಮದಾಚಾರ್ಯರಿಂದಲೂ ನಿರಾಕರಣ-ವಾಗುತ್ತಿರಲಾಗಿ ಪರಪಕ್ಷದವರ ಸ್ಥಿತಿಯನ್ನು ವಿಜ್ಞಾಪಿಸುತ್ತಾರೆ (ಕಕ.ವಿ.ಛ.). ಮಧ್ವಾಚಾರ್ಯರು ತತ್ತ್ವವಿದ್ಯೆಗೆ ವ್ಯಾಖ್ಯಾನಮಾಡಲು ತೊಡಗಿದಾಗ, ಸಿಂಹವು ಗರ್ಜಿಸುತ್ತಿದ್ದಾಗ ನರಿಗಳಿಗೆ ಆದಂತೆ ಮಾಯಾವಾದಿಗಳಿಗೆ ದಿಕ್ಕು ತೋರ-ದಂತಾಯಿತು ಎಂದು ವರ್ಣಿಸುತ್ತಾರೆ. (ಲೇ.) ವೇದವ್ಯಾಸರೂ, ಮಧ್ವಾ-ಚಾರ್ಯರೂ ಗ್ರಂಥರಚನೆ ಮಾಡಿ ಪ್ರತಿಪಕ್ಷಿಗಳ ಸಿದ್ಧಾಂತಗಳನ್ನು ಖಂಡಿ-ಸುತ್ತಾ ಹೋದಾಗ ಉಂಟಾದ ಪರಿಣಾಮವನ್ನು ವರ್ಣಿಸುತ್ತಾರೆ—

> **ಆಕ್ರೋಶಂತೋ ನಿರಾಶಾ ಭಯಭರವಿವಶ-**
> **ಸ್ವಾಶಯಾಶ್ಛಿನ್ನದರ್ಪಾ**
> **ವಾಶಂತೋ ದೇಶನಾಶ—ಸ್ತ್ವಿತಿ ಬತ ಕುಧಿಯಾಂ**
> **ನಾಶಮಾಶಾ ದಶಾऽऽಶು ।**
> **ಧಾವಂತೋ ऽಶ್ಲೀಲಶೀಲಾ ವಿತಥಶಪಥಶಾಪಾ-**
> **ಶಿವಾಃ ಶಾಂತಶೌರ್ಯಾಸ್-**
> **ತ್ವದ್ವ್ಯಾಖ್ಯಾಸಿಂಹನಾದೇ ಸಪದಿ ದದೃಶಿರೇ**
> **ಮಾಯಿಗೋಮಾಯವಸ್ತೇ ॥ ೩೧ ॥**

ಖ) ಪದವಿಭಾಗ—(ಉಭಯ ಪಕ್ಷದಲ್ಲೂ ಒಂದೇ) ಆಕ್ರೋಶಂತಃ, ನಿರಾಶಾಃ, ಭಯ....ಸ್ವಾಶಯಾಃ, ಛಿನ್ನದರ್ಪಾಃ, ವಾಶಂತಃ, ದೇಶನಾಶಃ, ತು, ಇತಿ, ಬತ, ಕುಧಿಯಾಂ, ನಾಶಂ, ಆಶಾಃ, ದಶ, ಆಶು, ಧಾವಂತಃ, ಅಶ್ಲೀಲಶೀಲಾಃ (ವಿಶೇಷಾರ್ಥದಲ್ಲಿ—ಅ, ಶ್ಲೀಲಶೀಲಾಃ), ವಿತಥ....ಶಿವಾಃ, ಶಾಂತಶೌರ್ಯಾಃ, ತ್ವದ್ವ್ಯಾಖ್ಯಾಸಿಂಹನಾದೇ, ಸಪದಿ, ದದೃಶಿರೇ, ಮಾಯಿ-ಗೋಮಾಯವಃ, ತೇ ॥

(ಗ) ವಿಶ್ಲೇಷಣೆ—ಈ ಶ್ಲೋಕಕ್ಕೆ ಉಭಯಪರವಾಗಿ ಒಂದೇ ಅರ್ಥ. ನಾಲ್ಕನೇ ಚರಣವೇ ಪ್ರಧಾನವಾಕ್ಯ—ತ್ವದ್ವ್ಯಾಖ್ಯಾಸಿಂಹನಾದೇ ತೇ

ಮಾಯಿಗೋಮಾಯವಃ ಸಪದಿ ದದೃಶಿರೇ—ನಿಮ್ಮ ವ್ಯಾಖ್ಯಾನವೆಂಬ ಸಿಂಹನಾದವು ಮೊಳಗುತ್ತಿರಲು ಕಪಟಿಗಳಾದ ಎದುರುಪಕ್ಷದ ನರಿಗಳು (ಜನಗಳಿಂದ) ನೋಡಲ್ಪಟ್ಟರು ಎಂದು ಕರ್ಮಣಿಪ್ರಯೋಗ. ಇಲ್ಲಿರುವ ಮಾಯಿಗೋಮಾಯವಃ-ಕ್ಕೆ ಮೊದಲ ಮೂರು ಚರಣಗಳೂ ವಿಶೇಷಣಗಳು—೧) ಆಕ್ರೋಶಂತಃ, ೨) ನಿರಾಶಾಃ, ೩) ಭಯ....ಸ್ವಾಶಯಾಃ, ೪) ಛಿನ್ನದರ್ಪಾಃ, ೫) ಕುದಿಯಾಂ ದೇಶನಾಶಃ ತು ಇತಿ ಬತ ನಾಶಂ ವಾಶಂತಃ ಅಥವಾ ಕುಧಿಯಾಂ ನಾಶಂ ದೇಶನಾಶಃ ತು ಇತಿ ಬತ ವಾಶಂತಃ, ೬) ದಶ ಆಶಾಃ ಆಶು ಧಾವಂತಃ, ೭) ಅಶ್ಲೀಲಶೀಲಾಃ, ೮) ವಿತಥ....ಶಿವಾಃ, ೯) ಶಾಂತಶೌರ್ಯಾಃ.

335. ಕಠಿನಶಬ್ದಾರ್ಥ—ಕ) ಆಕ್ರೋಶಂತಃ ಎಂಬುದು ಆ (ಉಪಸರ್ಗ)—ಸಮಂತಾತ್-ಚೆನ್ನಾಗಿ, ಬಹಳವಾಗಿ, ಕ್ರುಶ್-ಕೂಗು, ಕಿರುಚು, ಅಳು, ಗೋಳಾಡು ಅಥವಾ ಕರಿ, ಆಹ್ವಾನಿಸು 'ಕ್ರುಶ ಆಹ್ವಾನೇ ರೋದನೇ ಚ' (ಭ್ವಾ.ಪ.) ಎಂಬ ಧಾತುವಿನ ಶತೃಂತ (ವರ್ತಮಾನಕೃದಂತ) ರೂಪದ ಪ್ರಥಮಾ ಬಹುವಚನರೂಪ. ಆದಕಾರಣ ಇದಕ್ಕೆ ಜೋರಾಗಿ ಕೂಗುತ್ತಾ, ಗೋಳಾಡುತ್ತಾ ಅಥವಾ ಸಂಗಡಿಗರನ್ನು ಕರೆಯುತ್ತಾ ಎಂದು ಶಬ್ದಾರ್ಥ. (ಪುರಾ.) ನಮಗೇನು ಗತಿಯೆಂದು ಗೋಳಾಡುತ್ತಾ ಅಥವಾ ಪ್ರಲಾಪಮಾಡುತ್ತಾ ಎಂದೂ (ಕಕ.ವಿ.ಛ.) ಏನು ಉಪಾಯ ಮಾಡಬೇಕು? ನಮಗೇನು ಗತಿ ? ಯಾರನ್ನು ಶರಣು ಹೋಗಬೇಕು ? ಎಂದು ಪರಸ್ಪರ ಆಹ್ವಾನಿಸಿಕೊಳ್ಳುತ್ತಾ ಎಂದೂ ಅರ್ಥವಾಗುತ್ತದೆ. ಖ) ವಾಶಂತಃ ಎಂಬುದೂ ಧಾವಂತಃ ಎಂಬುದೂ ಶತೃಂತ (ವರ್ತಮಾನಕೃದಂತ) ರೂಪಗಳೇ. 'ವಾಶೃ ಶಬ್ದೇ (ದಿವಾದಿ. ಆ.)-(ಪ್ರಾಣಿಗಳು ಅಥವಾ ಹಕ್ಕಿ ಪಕ್ಷಿಗಳು) ಧ್ವನಿಮಾಡು, ಕಲಕಲಮಾಡು ಎಂಬ ಧಾತು ಧಾತು ಆತ್ಮನೇ ಪದವಾದ್ದರಿಂದ ವ್ಯಾಕರಣರೀತ್ಯಾ ಶತೃಪ್ರತ್ಯಯ ಬರುವುದಿಲ್ಲ. ಆದರೆ ಸಕಲ ಧಾತುಗಳೂ ಉಭಯಪದಿಗಳು ಎಂದು ಪಕ್ಷಾಂತರವಿರುವುದರಿಂದ ಶತೃಪ್ರತ್ಯಯ ಬಂದಿದೆ. ಇಲ್ಲಿ 'ಮಾಯಿಗೋ ಮಾಯವಃ' ಎಂದು ಪ್ರಸಕ್ತಿ ಇರುವುದರಿಂದ (ನರಿಗಳು ಕೂಗುವಂತೆ) ಅರಚುತ್ತಾ, ಕೂಗುತ್ತಾ ಎಂದರ್ಥ. 'ತಿರಶ್ಚಾಂ

ವಾಶಿತಂ ರುತವಮ್' ಎಂದು ಅಮರ (ಕಕ•ಛ.) 'ತಿರಶ್ಚಾಂ ಭಾಷಿತಂ ರುತಂ' ಎಂದು- ವಿ.ಪಾಠ. (ಗ) ಬತ ಎಂಬ ಅವ್ಯಯಕ್ಕೆ 'ಖೇದಾನುಕಂಪಾ-ಸಂತೋಷ-ವಿಸ್ಮಯಾಮಂತ್ರಣೇ ಬತ' ಎಂಬ ಅಮರದಂತೆ ಇಲ್ಲಿ ಖೇದ ಅಥವಾ ದುಃಖದಲ್ಲಿ ಬಂದಿದೆ; ಇದಕ್ಕೆ ಹಾಹಾ, ಅಯ್ಯೋ ಎಂದು ಅರ್ಥ ಹೇಳಬಹುದು.

ಘ) ಕುಧಿಯಾಂ—(ವಿ.) ಕುತ್ಸಿತಾ ಧೀರ್ಯೇಷಾಂ ತೇ ಕುಧಿಯ-ಸ್ತೇಷಾಂ (ಕಕ.ಛ.) ಕುತ್ಸಿತಬುದ್ಧೀನಾಂ। (ಛ.) ಅಸ್ಮಾಕಮಿತಿ ಶೇಷಃ। ಹಾಳುಬುದ್ಧಿಯುಳ್ಳ ನಮಗೆ ಅಥವಾ 'ಹಾಳು ನಮಗೆ' ಎಂದೇ ಅರ್ಥ. (ಛ.) ನಮಗಿಂತ ಬಲಿಷ್ಠರಾದವರೊಡನೆ ವಿರೋಧ ಕಟ್ಟಿಕೊಂಡು ದಡ್ಡತನಮಾಡಿದ ನಮಗೆ ಎಂದರ್ಥ. ವಾಶಂತೋ....ಕುಧಿಯಾಂ ನಾಶಂ ಎಂಬಲ್ಲಿ ಎರಡು ರೀತಿ ಅನ್ವಯ ಹೇಳಬಹುದು. ೧) (ಕಕ.ವಿ.ಛ.) ಕುಧಿಯಾಂ ದೇಶನಾಶಃ ತು ಬತ ಇತಿ ನಾಶಂ ವಾಶಂತಃ। ಕುಧಿಯಾಂ (ಅಸ್ಮಾಕಂ)-ಬಲಿಷ್ಠರೊಡನೆ ವಿರೋಧಕಟ್ಟಿಕೊಂಡು ಹಾಳಾದ ನಮಗೆ, ದೇಶನಾಶಃ ತು (ಪ್ರಾಪ್ತಃ)-ಸ್ಥಾನಭ್ರಂಶವು ಬಂದೊದಗಿತು, ಬತ-ಹಾಹಾ, ಅಯ್ಯೋ, ಇತಿ-ಎಂದು, ನಾಶಂ-ತಮ್ಮ ನಾಶವನ್ನು (ಕುರಿತು), ವಾಶಂತಃ-ಕೂಗಿಕೊಳ್ಳುತ್ತಾ ಎಂದರೆ ನಾವು ಬಲವದ್ವಿರೋಧ ಕಟ್ಟಿಕೊಂಡೆವು, ಅದರಿಂದ ಹಾಳಾದೆವು, ಈಗ ಇಲ್ಲಿ ನಿಲ್ಲುವ ಹಾಗಿಲ್ಲ, ಈ ಸ್ಥಳ ಬಿಟ್ಟು ಓಡಬೇಕಾಯಿತಲ್ಲಾ, ಅಯ್ಯೋ ಎಂದು ಗೋಳಾಡುತ್ತಿದ್ದ ಎಂದು ಭಾವ. ೨) ಇದಕ್ಕಿಂತಲೂ ಈ ರೀತಿ ಅನ್ವಯ ಮಾಡಿದರೆ ಇನ್ನೂ ಹೆಚ್ಚು ಸ್ವಾರಸ್ಯವಿರುತ್ತದೆ ಎನ್ನುತ್ತಾರೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರು. (ಕಕ. ಪಾದಟಿಪ್ಪಣಿ ೧, ಪುಟ ೪೦)—ಕುಧಿಯಾಂ (ಸ್ವೇಷಾಂ) ನಾಶಂ ದೇಶನಾಶಃ ತು ಬತ ಇತಿ ವಾಶಂತಃ-ದುರ್ಬುದ್ಧಿಯುಳ್ಳ ತಮ್ಮ ನಾಶವನ್ನೇ 'ದೇಶವೇ ಹಾಳಾಗಿ ಹೋಯಿತು' ಅಯ್ಯೋ ಎಂದು ಸಾರುತ್ತಾ. ಇದಕ್ಕೆ ಮಧ್ವವಿಜಯದ (೧೨ ಸರ್ಗ, ೧ ಶ್ಲೋಕ) ಹೇಳಿಕೆಯೂ ಪುಷ್ಟಿಕೊಡುತ್ತದೆ ಎನ್ನುತ್ತಾರೆ—ತತ್ರಾನಂತಸ್ವಾಂತವೇದಾಂತಿಸಿಂಹೇ ಮುಖ್ಯವ್ಯಾಖ್ಯಾನಿಸ್ವನೇ ಜೃಂಭಮಾಣೇ। ಸದ್ಯೋ ಮಾಧ್ವದ್ವಾದಿದಂತೀಂದ್ರಭೀಮೋ ಭೇಜೇ ಕ್ಷೋಭೋ ಮಾಯಿಗೋಮಾಯುಯೂಥೈಃ॥

(ತಾತ್ಪರ್ಯ) ದುರ್ವಾದಿಗಳೆಂಬ ಮದಿಸಿದ ಆನೆಗಳಿಗೆ ಮೃತ್ಯುಸ್ವರೂಪರಾದ, ವೇದಾಂತಪ್ರವಚನಾಚಾರ್ಯರಾದ ಶ್ರೀಮದಾಚಾರ್ಯರೆಂಬ ಸಿಂಹವು ಆ ಪ್ರದೇಶದಲ್ಲಿ ತಮ್ಮ ಭಾಷ್ಯಗಳನ್ನು ವಿವರಿಸಿ ಜನಗಳಿಗೆ ಬೋಧನೆ ಮಾಡುತ್ತಿ-ದ್ದುದು ಮಾಯಾವಾದಿಗಳೆಂಬ ನರಿಗಳ ಗುಂಪುಗಳಿಗೆ ತೀವ್ರವಾಗಿ ಕ್ಷೋಭೆ-ಯನ್ನುಂಟುಮಾಡಿತು (ಅಥವಾ ಪ್ಲೇಗು ಅಂಟಿಕೊಂಡಂತಾಯಿತು).

ಙ) ಆಶಾದಶ ಎಂಬಲ್ಲಿ ಆಶಾಃ ದಶ ಎಂದು ಪದಚ್ಛೇದ; ವಿಸರ್ಗದ ಹಿಂದೆ ಆಕಾರ ಇದ್ದು ಮುಂದೆ ಸ್ವರವಾಗಲಿ ಮೃದುವರ್ಣವಾಗಲಿ ಬಂದರೆ ವಿಸರ್ಗ ಲೋಪವಾಗುತ್ತದೆ; ಅದರಂತೆ ಇಲ್ಲಿಯೂ ವಿಸರ್ಗದ ಹಿಂದೆ ಆಕಾರವಿದ್ದು ಮುಂದೆ ದ ಎಂಬ ಮೃದುವರ್ಣ ಬಂದಿರುವುದರಿಂದ ವಿಸರ್ಗ ಲೋಪವಾಗುತ್ತದೆ. ಅಥವಾ ವಿ. ಪಾಠದಂತೆ ಆಶಾದಶ ಎಂದು ಒಂದೇ ಸಮಾಸವೆಂದೂ ಗ್ರಹಣಮಾಡಬಹುದು. 'ದಿಶಸ್ತು ಕಕುಭಃ ಕಾಷ್ಠಾ ಆಶಾಶ್ಚ ಹರಿತಶ್ಚ ತಾಃ' ಎಂಬ ಅಮರದಂತೆ ಆಶಾ ಎಂದರೆ ದಿಕ್ಕು ಎಂದು ಇಲ್ಲಿ ಅರ್ಥ. (ಪುರಾ.) ಪೂರ್ವಾದಿ ನಾಲ್ಕು ದಿಕ್ಕುಗಳು, ಆಗ್ನೇಯಾದಿ ನಾಲ್ಕು ದಿಕ್ಕು, ಊರ್ಧ್ವ (ಮೇಲೆ) ಅಧಃ (ಕೆಳಗೆ) ಹೀಗೆ ಹತ್ತು ದಿಕ್ಕುಗಳಾಗುತ್ತವೆ.

ಚ) ಭಯ....ಸ್ವಾಶಯಾಃ—ಭಯ-ಹೆದರಿಕೆಯ, ಭರ-ಭಾರದಿಂದ (ಸಮೃದ್ಧಿಯಿಂದ), ವಿವಶ-ಪರವಶವಾದ ಅಥವಾ ದಿಕ್ಕು ತೋರದಂತಾದ, ಸ್ವ-ತಮ್ಮ, ಆಶಯಾಃ-ಅಭಿಪ್ರಾಯವುಳ್ಳವರಾಗಿ; ಮಿತಿಮೀರಿದ ಭಯ-ವುಂಟಾದರೆ ಏನು ಮಾಡುವುದಕ್ಕೂ ತೋಚುವುದಿಲ್ಲ, ದಿಙ್ಮೂಢರಾಗಿ ಹೋಗುತ್ತಾರೆ; ಅದರಂತೆ 'ಅತಿಶಯವಾದ ಭೀತಿಯಿಂದ ವ್ಯಾಕುಲಬುದ್ಧಿ-ಯುಳ್ಳವರಾಗಿ' ಎಂದರ್ಥ. 'ಛಂದೋಽಭಿಪ್ರಾಯ ಆಶಯಃ' ಎಂದು ಅಮರ (ಛ.) ಛ) ವಿತಥ....ಶಿವಾಃ ಎಂಬುದಕ್ಕೆ ಮೂರು ರೀತಿಯಾಗಿ ಅರ್ಥಮಾಡಿ-ದ್ದಾರೆ. ೧) ಶಪಥ ಎಂದರೆ ಪ್ರತಿಜ್ಞೆ, ಶಾಪ-ಶಪಿಸುವುದು. ವಿತಥ-ವ್ಯರ್ಥ. ಶಿವ-ಮಂಗಳ, ಶುಭ; ಅಶಿವ-ಅಮಂಗಳ. (ಕಕ.ವಿ.) ವಿತಥೌ-ವ್ಯರ್ಥೌ, ಶಪಥಶಾಪೌ-ಪ್ರತಿಜ್ಞೋಪಾಲಂಭೌ ಯೇಷಾಮ್ । ತೇ ಚ ತೇ ಅಶಿವಾಶ್ಚ-ಅಮಂಗಲಾಃ । ಪ್ರತಿಜ್ಞೆಯೂ ಶಾಪವೂ ವ್ಯರ್ಥವಾದ್ದರಿಂದ ಅಮಂಗಳ-ಸ್ವರೂಪರಾದ—ಎಂದರ್ಥ. ಅಭಿಪ್ರಾಯವೇನೆಂದರೆ ಮೊದಲು 'ಈ

ಮಧ್ವನನ್ನು ಜಯಿಸಿಬಿಡುವೆವು' ಎಂದು ಶಪಥ ಮಾಡುತ್ತಾರೆ. ಯಾವಾಗ ಜಯಿಸಲು ಆಗುವುದಿಲ್ಲವೋ ಆಗ ಅವರನ್ನು (ಶ್ರೀಮದಾಚಾರ್ಯರನ್ನು) ಬಾಯಿಗೆ ಬಂದಂತೆ ಶಪಿಸುತ್ತಾರೆ; ಆಚಾರ್ಯರಿಗೆ ಅವರ ಶಾಪವೂ ತಟ್ಟುವುದಿಲ್ಲ; ಶಪಿಸಿ ಶಪಿಸಿ ತಮ್ಮ ದುರ್ಬುದ್ಧಿಯನ್ನು ತೋರಿಸಿಕೊಳ್ಳುತ್ತಾರೆ ಎಂದು ಭಾವ. (೨) (ವಿ.) ವಿತಥೌ ಶಪಥಶಾಪೌ, ತಾಭ್ಯಾಮಶಿವಾಃ ! ಅವರ ಪ್ರತಿಜ್ಞೆಯೂ ವ್ಯರ್ಥವಾಗಿಹೋಯಿತು, ಅವರ ಶಾಪವೂ ವ್ಯರ್ಥ— ಹೀಗೆ ಭ್ರಷ್ಟಾಶಯರಾದ್ದರಿಂದ ಅಮಂಗಳರಾದ ಎಂಬುದು ಎರಡನೇ ಅರ್ಥ. (೩) (ಛ. ಪುರಾ.) 'ಇವನನ್ನು ವಾದದಲ್ಲಿ ಸೋಲಿಸಿ ನಮ್ಮ ಸಿದ್ಧಾಂತವನ್ನು ಸಾಧಿಸುತ್ತೇವೆ' ಎಂಬ ಶಪಥವೂ ವ್ಯರ್ಥವಾಗಿ ಹೋಯಿತು. ವಿತಥಃ–ವ್ಯರ್ಥಃ, ಶಪಥಃ– ಸ್ವಪಕ್ಷಸ್ಥಾಪನ-ಪರಪಕ್ಷನಿರಾಕರಣರೂಪಪ್ರತಿಜ್ಞಾ ಯೇಷಾಂ ತೇ ವಿತಥಶಪಥಾಃ । ಮಹತಾಂ ಶಾಪಪ್ರದಾನೇನ ಅಶಿವಾಃ–ಅಮಂಗಳಾಃ । ಮಹನೀಯರನ್ನು ಶಪಿಸಿದ್ದರಿಂದ ಅವರಿಗೆ ಏನು ಹಾನಿಯಿಲ್ಲದಿದ್ದರೂ ಶಾಪ-ಹಾಕಿದವನಿಗೇ ಅಮಂಗಳ. ಹೀಗೆ ಭ್ರಷ್ಟಪ್ರತಿಜ್ಞೆಯುಳ್ಳವರೂ ಮಹನೀಯ-ರನ್ನು ಶಪಿಸಿ ಅಮಂಗಳಸ್ವರೂಪರೂ ಆದ ಎಂದರ್ಥ.

ಜ) ಸಪದಿ ಎಂಬ ಅವ್ಯಯಕ್ಕೆ ಶೀಘ್ರವಾಗಿ (ದ್ರಾಗ್‌ಮಂಕ್ಷು ಸಪದಿದ್ರುತೇ— ಅಮರ) ಎಂದೂ, ಆಕ್ಷಣ, ತತ್‌ಕ್ಷಣ (ಸದ್ಯಃ ಸಪದಿ ತತ್-ಕ್ಷಣೇ—ಅಮರ) ಎಂದೂ ಎರಡರ್ಥವಿದೆ. ಪ್ರಕೃತ ಸಂದರ್ಭಕ್ಕೆ ಮೊದಲನೇ ಅರ್ಥವೇ ಹೆಚ್ಚು ಹೊಂದುತ್ತದೆ. ಕಕ. ವಿ. ಇಬ್ಬರೂ 'ತದಾನೀಂ'–ಆ ಸಮಯದಲ್ಲಿ, ಆಗ ಎಂದು ಅರ್ಥಮಾಡಿದ್ದಾರೆ. ಝ) ದದೃಶಿರೇ ಕರ್ಮಣಿ ಲಿಟ್, ಪ್ರಥಮಪುರುಷ ಬಹುವಚನರೂಪ, ದೃಶಿರ್ ಪ್ರೇಕ್ಷಣೇ (ಭ್ವಾ. ಪ.)– ನೋಡು 'ನೋಡಲ್ಪಟ್ಟರು' (ಜನೈಃ) ಜನಗಳಿಂದ ಎಂಬ ಉಚಿತ ಕರ್ತೃಪದ-ವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ದದೃಶೇ । ದದೃಶಾತೇ । ದದೃಶಿರೇ ॥ (ಞ) ಮಾಯಿಗೋಮಾಯುವಃ । ಗೋಮಾಯು ಎಂದರೆ ನರಿ ಅಥವಾ ಗುಳ್ಳೇನರಿ. ನರಿಯು ಮೋಸಕ್ಕೂ, ಕ್ಷುಲ್ಲಕತನಕ್ಕೂ ಪುಕ್ಕಲುತನಕ್ಕೂ (ಅಧೈರ್ಯಕ್ಕೂ) ಪ್ರಸಿದ್ಧಿಯಾಗಿದೆ. ಮಾಯಿ ಎಂದರೆ ಮಾಯಾವಾದಿ-

ಗಳೆಂದರ್ಥ ; ಅವರನ್ನು ನರಿಗಳಿಗೆ ಹೋಲಿಸಿದ್ದರಿಂದ ಕ್ಷುಲ್ಲಕರೂ ವಂಚಕರೂ ಪುಕ್ಕಲರೂ ಆದವರೆಂಬುದನ್ನು ಧ್ವನಿಯಿಂದಲೇ ಸೂಚಿಸಿದ್ದಾರೆ.

336. (ಕ) ಉಭಯಪರ ದಂಡಾನ್ವಯ—ಹೇ ವೇದವ್ಯಾಸ ಅಥವಾ ಹೇ ಮಧ್ವ) ತ್ವದ್ವ್ಯಾಖ್ಯಾಸಿಂಹನಾದೇ ತೇ ಮಾಯಿಗೋಮಾಯವಃ ಸಪದಿ i) ಆಕ್ರೋಶಂತಃ, ii) ನಿರಾಶಾಃ iii) ಭಯ....ಸ್ವಾಶಯಾಃ, iv) ಛಿನ್ನದರ್ಪಾಃ v) ಕುಧಿಯಾಂ (ಅಸ್ಮಾಕಂ) ದೇಶನಾಶಃ ತು ಬತ ಇತಿ ನಾಶಂ ವಾಶಂತಃ ಅಥವಾ ಕುಧಿಯಾಂ (ಸ್ವೇಷಾಂ) ನಾಶಂ ದೇಶನಾಶಃ ತು ಬತ ಇತಿ ವಾಶಂತಃ vi) ಆಶಾದಶ (ಅಥವಾ ದಶ ಆಶಾಃ ಪ್ರತಿ) ಆಶು ಧಾವಂತಃ, vii) ಅಶ್ಲೀಲಶೀಲಾಃ, viii) ವಿತಥ....ಶಿವಾಃ, ix) ಶಾಂತ-ಶೌರ್ಯಾಃ (ಜನ್ಯೈಃ) ದದೃಶಿರೇ ||

ಖ) ಅನ್ವಯಾರ್ಥ—(ಉಭಯಪರ) ಹೇ ವೇದವ್ಯಾಸ-ಎಲೈ ವೇದವ್ಯಾಸರೇ ಅಥವಾ ಹೇ ಮಧ್ವ !-ಎಲೈ ಮಧ್ವಾಚಾರ್ಯರೇ) ತ್ವದ್-ವ್ಯಾಖ್ಯಾಸಿಂಹನಾದೇ—ತ್ವತ್-ನಿಮ್ಮ, ವ್ಯಾಖ್ಯಾ-ಗ್ರಂಥರಚನೆಯೆಂಬ, ಸಿಂಹ-ನಾದೇ-ಸಿಂಹಗರ್ಜನೆಯು ವಿಜೃಂಭಿಸುತ್ತಿರಲು, ತೇ-ಆ (ಎಂದರೆ ನಿಮ್ಮಿಂದ ದಗ್ಧಪ್ರಾಯರಾದ) ; ಮಾಯಿಗೋಮಾಯವಃ-ನರಿಗಳಂತೆ ವಂಚಕರೂ ಕ್ಷುಲ್ಲಕರೂ ಭೀರುಗಳೂ (ಪುಕ್ಕಲರೂ) ಆದ ಮಾಯಾವಾದಿಗಳು ; ಸಪದಿ-ಶೀಘ್ರವಾಗಿ (ಅಥವಾ ಕಕ. ವಿ) ಆ ಸಮಯದಲ್ಲಿ i) ಆಕ್ರೋಶಂತಃ-'ನಮಗೆ ಇನ್ನೇನು ಗತಿ ? ಎಲ್ಲಿಗೆ ಹೋಗೋಣ ? ಯಾರನ್ನು ಮೊರೆಹೋಗೋಣ' ಎಂದು ಕಿರಿಚಿಕೊಳ್ಳುತ್ತಾ ಅಥವಾ ಪರಸ್ಪರ ಕರೆಯುತ್ತಾ ; ii) ನಿರಾಶಾಃ-ನೈರಾಶ್ಯ ಹೊಂದಿದವರೂ ; iii) ಭಯ-ಭರ-ವಿವಶ-ಸ್ವಾಶಯಾಃ-ಅತಿಶಯವಾದ ಭೀತಿಯಿಂದ ಹೆದರಿ ದಿಕ್ಕೇತೋರದಂತಾದ ಅಭಿಪ್ರಾಯ ವುಳ್ಳವರೂ, iv) ಛಿನ್ನದರ್ಪಾಃ-ಸೊಕ್ಕು ಮುರಿದು ಹೋದವರೂ (ಗರ್ವಭಂಗವಾದವರೂ), v) ಕುಧಿಯಾಂ (ಅಸ್ಮಾಕಂ) ಹಾಳು ಬುದ್ಧಿಯುಳ್ಳ ನಮಗೆ ; ದೇಶನಾಶಃ ತು-ಸ್ಥಾನಭ್ರಂಶವು ; ಬತ-ಅಯ್ಯೋ ಆಯಿತಲ್ಲಾ ; ಇತಿ-ಎಂದು, ನಾಶಂ ವಾಶಂತಃ-ತಮ್ಮ ನಾಶವನ್ನು ಹೇಳಿಕೊಳ್ಳುತ್ತಾ ; (ಅಥವಾ) ಕುಧಿಯಾಂ-ದುರ್ಬುದ್ಧಿಯುಳ್ಳ (ತಿಳಿಗೇಡಿಗಳಾದ) ತಮ್ಮ ;

ನಾಶಂ-ನಾಶವನ್ನೇ; ದೇಶನಾಶಃ ತು ಬತ-ಅಯ್ಯೋ ದೇಶವೇ ನಾಶವಾಗಿ (ಹಾಳಾಗಿ) ಹೋಯಿತು; ಇತಿ-ಎಂದು; ವಾಶಂತಃ-ಹೇಳಿಕೊಳ್ಳುತ್ತಾ; vi) ಆಶಾದಶ ಅಥವಾ ದಶ ಆಶಾಃ-ಹತ್ತು ದಿಕ್ಕುಗಳಿಗೂ, ಆಶು-ಬೇಗನೆ; ಧಾವಂತಃ-ಓಡುತ್ತಾ (ಪಲಾಯನ ಮಾಡುತ್ತಾ); vii) ಅಶ್ಲೀಲಶೀಲಾಃ-ನಿಂದ್ಯವಾದ ಸ್ವಭಾವವುಳ್ಳ(ಹೀನಸ್ವಭಾವವುಳ್ಳ)ವರೂ; viii) ವಿತಥ-ಶಪಥ-ಶಾಪ-ಅಶಿವಾಃ-೧) ತಮ್ಮ ಪ್ರತಿಜ್ಞೆಯು ಭಂಗವಾದ್ದರಿಂದ ಮಹಾತ್ಮರನ್ನು ಶಪಿಸಿದ್ದೂ ವ್ಯರ್ಥವಾದ್ದರಿಂದ, ಅಮಂಗಳರಾದ, ೨) ಪ್ರತಿಜ್ಞಾ-ಭಂಗವೂ ಆಗುವುದರ ಜೊತೆ ಮಹಾತ್ಮರನ್ನು ನಿಂದಿಸಿದ (ಶಪಿಸಿದ) ಅಮಂಗಳ-ಸ್ವರೂಪವುಳ್ಳವರೂ; ix) ಶಾಂತಿಶೌರ್ಯಾಃ-ಶೌರ್ಯವು (ಪ್ರತಾಪವು) ಅಡಗಿಹೋದವರೂ ಆಗಿ; (ಜನೈಃ) ದದೃಶಿರೇ-ಜನಗಳಿಂದ ನೋಡಲ್ಪಟ್ಟರು (ಜನಗಳ ಕಣ್ಣಿಗೆ ಹೀಗೆ ಕಾಣಿಸಿದರು).

ಗ) ಸಜ್ಜನರಿಗೆ ಉಂಟಾದ ಪ್ರವೃತ್ತಿ (ಉಭಯಪರ)—ಮೇಲೆ ಹೇಳಿದ ಅರ್ಥವು ದುರ್ಜನರಿಗೆ ಉಂಟಾದ ಕಷ್ಟಸ್ಥಿತಿಯನ್ನು ವಿವರಿಸಿತು. ಈ ಶ್ಲೋಕವನ್ನೇ ಸಜ್ಜನರಿಗೆ ಉಂಟಾದ ಪ್ರವೃತ್ತಿಯ ವಿವರಣ ಪರವಾಗಿಯೂ ಅರ್ಥ ಹೇಳಬಹುದೆಂದು ಪುರಾ. ತೋರಿಸಿಕೊಡುತ್ತಾರೆ. ಈ ಅರ್ಥ ಹೇಳುವಾಗ ಅಶ್ಲೀಲಶೀಲಾಃ ಎಂಬುದನ್ನು ಬಿಡಿಸಿ ಅ, ಶ್ಲೀಲಶೀಲಾಃ ಎರಡು ಪದಗಳೆಂದು ಗ್ರಹಣ ಮಾಡಬೇಕು. ಆಗ ಅ ಎಂಬುದು ವೇದವ್ಯಾಸರ ಸಂಬೋಧನೆಯಾಗುತ್ತದೆ. (ಪುರಾ.) 'ಅ ಆ ಅಂ ಅಃ ಪುರಾಣರ್ಷಿರ್ವ್ಯಾಸಃ ಶಾಖಾಸಹಸ್ರದೃಕ್ ॥ (ಇವುಗಳೆಲ್ಲ ವೇದವ್ಯಾಸರ ನಾಮಗಳು) ಎಂಬ ವಚನಾನುಸಾರ ಅಕಾರವು ವ್ಯಾಸರಿಗೆ ಸಂಬೋಧನೆಯಾಗುತ್ತದೆ. (ಮಧ್ವ ಪರವಾಗಿ ಅರ್ಥಹೇಳುವಾಗ ವೇದವ್ಯಾಸರ ಶಿಷ್ಯರೇ ಎಂದು ಲಕ್ಷಣಯಾ ಅರ್ಥ-ಮಾಡಬೇಕು.)

ಅ)—ಹೇ ವೇದವ್ಯಾಸರೇ ಮತ್ತು ತಚ್ಛಿಷ್ಯೋತ್ತಮರಾದ ಹೇ ಮಧ್ವಾಚಾರ್ಯರೇ! ತ್ವದ್....ನಾದೇ—ತ್ವತ್-ನಿಮ್ಮ, ವ್ಯಾಖ್ಯಾ-ಗ್ರಂಥ-ರಚನೆ (ವಿ+ಆ+ಖ್ಯಾ-ಹೇಳು) ಮತ್ತು ಪ್ರವಚನವೆಂಬ, ಸಿಂಹನಾದೇ-ಸಿಂಹಧ್ವನಿಯು ಕೇಳಿಸುತ್ತಿರಲು, ತೇ-ಅ ಎಂದರೆ ನಿಮ್ಮಿಂದ ಉಪದಿಷ್ಟರಾದ;

(ಈ ಅರ್ಥದಲ್ಲಿ ಮಾಯಿಗೋಮಾಯವಃ ಎಂಬುದನ್ನು ಗ್ರಹಣ ಮಾಡಲೇ ಬಾರದು, ಬಿಟ್ಟುಬಿಡಬೇಕು.) ಶೀಲಶೀಲಾಃ-ಯೋಗ್ಯವಾದ ಸ್ವಭಾವವುಳ್ಳ ಸಜ್ಜನರು ; 1) ಕುಧಿಯಾಂ (ಅಸ್ಮಾಕಂ)-ಕುತ್ಸಿತಶಾಸ್ತ್ರದಲ್ಲಿ ಬುದ್ಧಿಯುಳ್ಳ ನಮಗೆ, ದೇಶನಾಶಃ ತು-ಲಭಿಸಬೇಕಾದ ವೈಕುಂಠಾದಿಸ್ಥಾನಗಳ ನಾಶವು* (ಭ್ರಂಶವು) (ಪ್ರಾಪ್ತಃ) ಬತ-ಪ್ರಾಪ್ತವಾಯಿತಲ್ಲಾ ಅಯ್ಯೋ ; ಇತಿ-ಹೀಗೆಂದು ; ವಾಶಂತಃ-ಪ್ರಲಪಿಸುವವರಾಗಿಯೂ, 2) ಆ-ಕ್ರೋಶಂತಃ-'ಶ್ರೀಹರಿಯೇ ಸರ್ವೋತ್ತಮ, ವಾಯುದೇವರು ಜೀವೋತ್ತಮರು, ನಾನು ಅವರ ದಾಸಾನುದಾಸ' ಎಂದು ಗಟ್ಟಿಯಾಗಿ ಕೂಗತಕ್ಕವರಾಗಿಯೂ, 3) ನಿರಾಶಾಃ-ವಿಷಯಾಭಿಲಾಷೆ ಇಲ್ಲದವರಾಗಿಯೂ (ವಿಷಯವಿರಕ್ತರಾಗಿಯೂ), 4) ಭಯ....ಸ್ವಾಶಯಾಃ—ಭಯಭರ-ಸಾಂಸಾರಿಕ ಭಯಾತಿಶಯಕ್ಕೆ, ವಿವಶ-ವಶವಾಗದ (ಒಳಪಡದ), ಸ್ವಾಶಯಾಃ-ಮನೋಧರ್ಮವುಳ್ಳವರಾಗಿಯೂ ; 5) ಛಿನ್ನದರ್ಪಾಃ-ಅಹಂಕಾರ-ಮಮಕಾರಗಳನ್ನು ತ್ಯಜಿಸಿದವರಾಗಿಯೂ ; 6) ವಿತಥ....ಶಿವಾಃ—ವಿತಥ-ವಿಶೇಷವಾಗಿ ಯಥಾರ್ಥಗಳಾದ, ಶಪಥ-ಶಾಪ-ಅನುಗ್ರಹ-ಶಾಪಗಳುಳ್ಳವರೂ (ಅಂದರೆ ಶಾಪಾನುಗ್ರಹಶಕ್ತರೂ) ಆದ, ಆದ್ದರಿಂದಲೇ ಆ, ಶಿವಾಃ-ಅತ್ಯಂತ ಮಂಗಳಸ್ವಭಾವವುಳ್ಳವರೂ; (ಇಲ್ಲಿ ನಾಶ-ಶಬ್ದಕ್ಕೆ ವಿಶೇಷಾರ್ಥ ಹೇಳಬೇಕು. ಶಂ ಎಂದರೆ ಸುಖ. ನ ವಿದ್ಯತೇ ಶಂ-ಸುಖಂ ಯಸ್ಮಿನ್ ಸಃ ಅಶಃ-ಸಂಸಾರಃ। ಸುಖವು ಇಲ್ಲದ್ದು ಅಶಃ, ಸಂಸಾರ ಎಂದರ್ಥ. ನ ಅಶಃ-ಸಂಸಾರಭಿನ್ನಃ ಪ್ರದೇಶಃ ನಾಶಃ ಮೋಕ್ಷಃ. ಸಂಸಾರಕ್ಕೆ ವ್ಯತಿರಿಕ್ತವಾದ ಪ್ರದೇಶ, ಎಂದರೆ ಪರಮಸುಖರೂಪವಾದ ಮತ್ತು ದುಃಖದ ಸ್ಪರ್ಶವೂ ಇಲ್ಲದ ಮತ್ತು ಚ್ಯುತಿರಹಿತವಾದ ಮೋಕ್ಷಕ್ಕೇ ನಾಶ ಎಂದು ಹೆಸರು) ನಾಶಂ (ಪ್ರತಿ)-ಸ್ವರೂಪಾನಂದಾವಿರ್ಭಾವವಾಗುವ ಮೋಕ್ಷವನ್ನು ಕುರಿತು, ಧಾವಂತಃ-ಓಡುವವರಾಗಿ ಎಂದರೆ ತ್ವರೆಪಡುವವರಾಗಿ; (ದದೃಶಿರೇ) (ಇದಕ್ಕೆ ವ್ಯತಿರಿಕ್ತವಾಗಿ,) ತೇ-ನಿಮ್ಮಿಂದ ಪರಾಜಿತರಾದ ಆ, ಮಾಯಿಗೋ-ಮಾಯವಃ-ಅಜ್ಞಾನಿಗಳಾದ ದುರ್ಜನರೆಂಬ ನರಿಗಳು, ಶಾಂತಶೌರ್ಯಾಃ-

---

* 'ನಶು ಅದರ್ಶನೇ' ಎಂದು ಧಾತು ಪಾಠವಿರುವುದರಿಂದ 'ನಾಶಃ' ಎಂದರೆ ಭ್ರಂಶ ಎಂಬರ್ಥ ಕೊಡುತ್ತದೆ. (ಪುರಾ.)

ಕ್ಷೀಣವಾದ ಪರಾಕ್ರಮವುಳ್ಳವರಾಗಿ, ದಶ ಆಶಾಃ (ಪ್ರತಿ)-ಹತ್ತು ದಿಕ್ಕು-ಗಳಲ್ಲೂ, ಧಾವಂತಃ-ಓಡುವವರಾಗಿಯೂ, (ಜನ್ಯೈಃ-ಜನಗಳಿಂದ) ದದೃಶಿರೇ-ನೋಡಲ್ಪಟ್ಟರು.

ಘ) ಭಾವಾರ್ಥ—(ಉಭಯಪರ) ಅನಾದಿನಿತ್ಯವಾದ ನಿರ್ಮಲ-ಜ್ಞಾನ-ವಿಜ್ಞಾನಗಳ ಅಪಾರನಿಧಿಗಳಾದ (ಅ) ವೇದವ್ಯಾಸರು ಭಾರತ-ಭಾಗವತಾದಿ ಸಚ್ಛಾಸ್ತ್ರಗಳನ್ನು ರಚಿಸಿ ಕಲಿಯ ಪ್ರೇರಣೆಯಿಂದ ರಚಿತವಾಗಿದ್ದ ಶೈವಾದಿ ದುರಾಗಮಗಳನ್ನು ನಿರಸನ ಮಾಡಿ ಆ ಶಾಸ್ತ್ರಗಳನ್ನು ಶಿಷ್ಯಪ್ರಶಿಷ್ಯ ರಾದ ಮಹರ್ಷಿಗಳ ದ್ವಾರಾ ಪ್ರಚಾರಮಾಡಿ ಕಲಿಯ ಅಪಪ್ರಚಾರವನ್ನು ತಡೆಗಟ್ಟಿದರು. ಇತ್ತ ಕಲಿಯುಗ ಪ್ರಾಪ್ತವಾಗಲು ಸರ್ವಜ್ಞಶಿಖಾಮಣಿಗಳಾದ ಶ್ರೀಮನ್ಮಧ್ವಾಚಾರ್ಯರು ಸದ್ಭಾಷ್ಯಗಳನ್ನು ರಚಿಸಿ ಅನಾದಿಪರಂಪರಾ-ಪ್ರಾಪ್ತವಾದ ಶ್ರೀಮದ್ವೈಷ್ಣವ ಸಿದ್ಧಾಂತವನ್ನು ಸಕಲ ಸಜ್ಜನರಿಗೂ ಬೋಧಿಸುತ್ತಾ, ಎಲ್ಲಕಡೆಯೂ ಸಂಚಾರಮಾಡಿ ಪ್ರವಚನ ಮಾಡುತ್ತಾ ಸಿಂಹನಾದದಂತೆ ನಿರರ್ಗಳವಾದ ತಮ್ಮ ಗಂಭೀರವಾಣಿಯಿಂದ ಸಕಲ ದುರ್ಮತಗಳನ್ನೂ ಖಂಡಿಸಿ ಆ ದುರ್ವಾದಿಗಳನ್ನು ನಿರುತ್ತರರನ್ನಾಗಿ ಮಾಡುತ್ತಿದ್ದರು. ಇದರಿಂದ ಆ ದುರ್ವಾದಿಗಳಿಗೆ ಶ್ರೀಮದಾಚಾರ್ಯರನ್ನು ಎದುರಿಸುವ ಸಾಮರ್ಥ್ಯವಂತೂ ದೂರತೋಪಾಸ್ತು, ಉಳಿಬಾಳೇ ಇಲ್ಲದಂತಾ-ಯಿತು. ಹೇಗೆ, ಕಾಡಿನಲ್ಲೇ ಇದ್ದರೂ ಸ್ವಭಾವಭೀರುಗಳೂ ಹೇಯ ಪದಾರ್ಥಗಳಲ್ಲೇ ಆಸಕ್ತಿಯುಳ್ಳವುಗಳೂ ಕ್ಷುಲ್ಲಕ ಸ್ವಭಾವದವೂ ಅಮಂಗಳ ಸ್ವರೂಪದವೂ ಆದ ನರಿಗಳು ಸಿಂಹದ ಗರ್ಜನೆಯನ್ನು ಕೇಳಿಯೇ ಭೀತಿಗೊಂಡು ವೈಯೆಲ್ಲಾ ತಳಮಳಿಸಿ ಹೋಗಿ ದುರ್ದಶಾಗ್ರಸ್ತರಾಗಿ ಎಲ್ಲೂ ಸ್ಥಿರವಾಗಿ ನಿಲ್ಲ ಲಾರದೆ ಏನು ಮಾಡುವುದಕ್ಕೂ ತೋಚದೆ ಕೂಗುತ್ತಾ ಕಿರುಚುತ್ತಾ ದಿಕ್ಕು ದಿಕ್ಕಿಗೆ ಪಲಾಯನ ಮಾಡುವುವೋ ಈ ದುರ್ವಾದಿಗಳ ಅವಸ್ಥೆಯೂ ಅಂತೆಯೇ ಆಯಿತು.

ವಾದದಲ್ಲಿ ಸೋತುಹೋದದ್ದರಿಂದ 'ಇವರನ್ನು ಗೆಲ್ಲಬೇಕು, ಗೆದ್ದು ಜಯಭೇರಿ ಹೊಡೆಯಬೇಕೆ'ಂಬ ಅವರ ದೃಢಪ್ರತಿಜ್ಞೆ-ಆಶೆ ಆಕಾಂಕ್ಷೆಗಳೆಲ್ಲವೂ ಮಣ್ಣುಮುಕ್ಕಿಹೋದುವು. 'ವಾದಮಾಡುವುದರಲ್ಲಿ ತಾವೇ ನಿಸ್ಸೀಮರು,

ತಮ್ಮನ್ನು ಯಾರೇನು ಮಾಡಲಾಪರು' ಎಂಬ ಅಹಂಕಾರ-ದರ್ಪಗಳೆಲ್ಲವೂ ಹುಟ್ಟಿಲ್ಲದಂತೆ ಅಡಗಿಹೋದುವು. ಅವರ ಮನಸ್ಸಿನ ಮಂಡಿಗೆಗಳೆಲ್ಲ ಗಾಳಿಗೋಪುರವಾಗಿ ತೂರಿಹೋದುವು. ವಾದಮಾಡುವುದಿರಲಿ, ಆಚಾರ್ಯರ ಹೆಸರು ಹೇಳಿದರೇ ಅವರಿಗೆ ನ್ಯೈನಡುಕ ಬರುತ್ತಿತ್ತು. ದಿಕ್ಕೇ ತೋರದಂತಾಗಿ 'ಅಯ್ಯೋ, ಮುಂದೇನು ಗತಿಯಪ್ಪಾ, ಏನು ಮಾಡೋಣ, ಯಾರನ್ನು ಮೊರೆ ಹೋಗೋಣ' ಎಂದು ಕಳವಳಿಸುತ್ತಾ ತಮ್ಮ ತಮ್ಮಲ್ಲೇ ಸಂಧಾನ ಮಾಡಿಕೊಳ್ಳುತ್ತಾ, ಆಚಾರ್ಯರನ್ನು ಬಾಯಿತುಂಬ ಶಪಿಸಿದರು—ಮನದಣಿಯ ದೂಷಿಸಿದರು. ಆದರೂ ತೃಪ್ತಿಯಾಗಲಿಲ್ಲ, ಏನು ಮಾಡುತ್ತಾರೆ? ತಾವು ನಾಶವಾದದ್ದನ್ನೇ ಜಗತ್ತೇ ಹಾಳಾಯಿತೆಂದು ಕಲ್ಪಿಸಿಕೊಂಡು 'ಈ ಹಾಳು ಮಧ್ವನಿಂದ ಇಡೀ ದೇಶವೇ ಹಾಳಾಯಿತೆ'ಂದು ಸಾರುತ್ತಾ (ಟಾಂ ಟಾಂ ಹಾಕುತ್ತಾ) ಒಂದು ಕಡೆ ನಿಲ್ಲಲಾರದೆ ದಿಕ್ಕಾಪಾಲಾಗಿ ಚೆದರಿಹೋದರು. ಇದು ದುರ್ವಾದಿಗಳ ದುರ್ದೆಶೆಯ ವರ್ಣನೆಯಾಯಿತು.

ಇನ್ನು ಭಗವತ್ಪಾದರ ಪ್ರವಚನಗಳನ್ನು ಶ್ರದ್ಧಾಭಕ್ತ್ಯಾದರಗಳಿಂದ ಕೇಳಿದ ಸಾಧುಸ್ವಭಾವದ ಸಜ್ಜನರ ಪರಿಸ್ಥಿತಿಯೇ ಇನ್ನೊಂದು ತೆರನಾಯಿತು. ಶ್ರೀಮದಾಚಾರ್ಯರು ಅನ್ಯಥಾಜ್ಞಾನ-ಮಿಥ್ಯೋಪಾಸನೆಗಳ ಅನರ್ಥಪರಂಪರೆಯನ್ನು ವರ್ಣಿಸಿದ್ದು ಕೇಳಿ ಇವರಿಗೆ 'ಅಯ್ಯೋ, ಎಂಥಾ ಅನರ್ಥವಾಯಿತು. ಈ ಅದ್ವೈತಶಾಸ್ತ್ರವನ್ನು ನಂಬಿ ಹಾಳಾದೆವಲ್ಲಾ, ಮೋಕ್ಷಕ್ಕೆ ಕಲ್ಲು ಹಾಕಿಕೊಂಡೆವಲ್ಲಾ, ಛೇ, ಅನ್ಯಾಯ' ಎಂದು ಪೇಚಾಡುವಂತಾಯಿತು. 'ಆದದ್ದಾಯಿತು, ಇನ್ನಾದರೂ ಒಳ್ಳೇ ಹಾದಿ ಹಿಡಿಯೋ ಪ್ರಾಣಿ' ಎಂದು-ಕೊಂಡು ದೃಢಮನಸ್ಸಿನಿಂದ 'ಹರಿ ಸರ್ವೋತ್ತಮ, ವಾಯು ಜೀವೋತ್ತಮ' ಎಂದು ಡಂಗೂರ ಸಾರತೊಡಗಿದರು. ವಿಷಯೇಚ್ಛೆಗಳಲ್ಲಿ ವಿರಕ್ತರಾಗಿ ಅಹಂಕಾರ-ಮಮಕಾರಗಳನ್ನು ತೊರೆದು ಹರಿವಾಯುಗುರುಗಳ ಪರಮಾನು-ಗ್ರಹಕ್ಕೆ ಬೇಕಾದ ಸಾಧನಸಂಪತ್ತನ್ನು ಬೆಳಸಿಕೊಳ್ಳುತ್ತಾ 'ಈ ಸಾಂಸಾರಿಕ ಕ್ಲೇಶ ಎಂದಿಗೆ ಬಗೆಹರಿದೀತು, ಮೋಕ್ಷ ಎಂದು ದೊರಕೀತು' ಎಂದು ಧಾವಂತ ಪಡಹತ್ತಿದರೆಂಬುದೇ ಹರಿ-ವಾಯು ಉಭಯಪರ ಶ್ಲೋಕಾಭಿಪ್ರಾಯ.

ಇಲ್ಲಿಗೆ ಮೂವತ್ತೊಂದನೇ ಶ್ಲೋಕ ಮುಗಿಯಿತು.

ಶ್ಲೋಕ ೩೨—ಅವತಾರತ್ರಯದಲ್ಲೂ ನಿರ್ವಿಕಾರ

337. ಅವತಾರಿಕೆ—(ಕಠ. ವಿ. ಛ.) ವಿಕಾರಹೇತುಗಳು ಇದ್ದರೂ ಕೂಡ ಮೂರು ಅವತಾರಗಳಲ್ಲೂ ನೀವು ನಿರ್ವಿಕಾರರಾಗಿದ್ದಿರಿ ಎಂದು ಸ್ತುತಿಸುತ್ತಾ 'ಆದ್ದರಿಂದಲೇ ನೀವು ರುದ್ರಾದಿ ಸಕಲ ದೇವತಾರಾಧ್ಯರಾಗಿದ್ದೀರಿ' ಎಂದು ಪ್ರಾಣದೇವರಲ್ಲಿ ವಿಜ್ಞಾಪಿಸಿಕೊಳ್ಳುತ್ತಾರೆ. (ಪು.ರಾ.) ಮಹಾಮಹಿಮೋಪೇತರಾದಕಾರಣ ನೀವಿಬ್ಬರಿಗೂ (ವ್ಯಾಸರು ಮತ್ತು ಆಚಾರ್ಯರು) ಶತ್ರುಗಳು ಮಾಡಿದ ಹಿಂಸೆಯಿಂದ ವಿಕಾರವಿಲ್ಲವೆಂತ ಸ್ತುತಿಸುತ್ತಾರೆ. (ಲೀ.) ಶ್ರೀಹರಿಯು ಪಕ್ಷದಲ್ಲಿ ಕೇವಲ ವೇದವ್ಯಾಸ ಎಂಬ ಅವತಾರದಲ್ಲೂ, ವಾಯುಪಕ್ಷದಲ್ಲಿ ಹನುಮ-ಭೀಮ-ಮಧ್ವ ಎಂಬ ಮೂರು ಅವತಾರಗಳಲ್ಲೂ ನೀವು (ಹರಿವಾಯುಗಳು) ನಾನಾವಿಧವಾದ ಶತ್ರುಗಳ ಬಾಧೆಗೆ ಒಳಗಾದರೂ ಕಿಂಚಿತ್ತೂ ವಿಕಾರ ಹೊಂದಲಿಲ್ಲ, ಇದೇ ನಿಮ್ಮ ಮಹತ್ವ. ಮಹಾಕವಿ ಕಾಳಿದಾಸ ಕುಮಾರಸಂಭವದಲ್ಲಿ 'ವಿಕಾರಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ' ಎಂದು ಹೇಳಿದಂತೆ ಮನಸ್ಸನ್ನು ಆಕರ್ಷಿಸಿ ಅಪಹರಿಸುವಂಥಾ ಸಂದರ್ಭಗಳು ಬಂದರೂ ಯಾರ ಮನಸ್ಸು ವಿಕಾರಗೊಳ್ಳುವುದಿಲ್ಲವೋ ಅವರೇ ಧೀರರು—ಮಹಾತ್ಮರು. ಆದಕಾರಣವೇ ಹೇ ಸ್ವಾಮಿ ಹರಿವಾಯುಗಳೇ, ನಿಮ್ಮನ್ನು ರುದ್ರೇಂದ್ರಾದಿ ಸಕಲ ದೇವತೆಗಳೂ ಆರಾಧಿಸುತ್ತಾರೆ ಎಂದು ಬಿನ್ನಪ ಮಾಡಿಕೊಳ್ಳುತ್ತಾರೆ—'ತ್ರಿಷ್ವಪಿ'.... ಎಂದು.

ತ್ರಿಷ್ವಪ್ಯೇವಾವತಾರೇ—ಷ್ವರಿಭಿ-ರಪಘೃಣಂ
ಹಿಂಸಿತೋ ನಿರ್ವಿಕಾರಃ
ಸರ್ವಜ್ಞಃ ಸರ್ವಶಕ್ತಿಃ ಸಕಲಗುಣಗಣಾ-
ಪೂರ್ಣರೂಪ-ಪ್ರಗಲ್ಭಃ ।
ಸ್ವಚ್ಛಃ ಸ್ವಚ್ಛಂದಮೃತ್ಯುಃ ಸುಖಯಸಿ ಸುಜನಂ
ದೇವ ಕಿಂ ಚಿತ್ರಮತ್ರ
ತ್ರಾತಾ ಯಸ್ಯ ತ್ರಿಧಾಮಾ ಜಗದುತ ವಶಗಂ
ಕಿಂಕರಾಃ ಶಂಕರಾದ್ಯಾಃ　　॥ ೩೨ ॥

ಪದವಿಭಾಗ—(ಉಭಯಪಕ್ಷದಲ್ಲೂ ಪ್ರಾಯಶಃ ಒಂದೇ ರೀತಿ) ತ್ರಿಷು, ಅಪಿ, ಏವ, ಅವತಾರೇಷು, ಅರಿಭಿಃ, ಅಪಘೃಣಂ, ಹಿಂಸಿತಃ, ನಿರ್ವಿಕಾರಃ, ಸರ್ವಜ್ಞಃ, ಸರ್ವಶಕ್ತಿಃ, ಸಕಲ....ಪ್ರಗಲ್ಭಃ, ಸ್ವಚ್ಛಃ, ಸ್ವಚ್ಛಂದವೃತ್ತ್ಯಃ, ಸುಖಯಸಿ, ಸುಜನಂ, ದೇವ, ಕಿಂ, ಚಿತ್ರಂ, ಅತ್ರ, ತ್ರಾತಾ ಯಸ್ಯ, (ಹರಿಪಕ್ಷದಲ್ಲಿ ತ್ರಿಧಾ, ಮಾ ; ವಾಯುಪಕ್ಷದಲ್ಲಿ ತ್ರಿಧಾಮಾ ಎಂದು ಒಂದೇ ಪದ, ಅಲ್ಲದೇ ತ್ರಿ-ಧಾಮಾ ಎಂದು ಪದಚ್ಛೇದ). ಜಗತ್, ಉತ, ವಶಗಂ, ಕಿಂಕರಾಃ, ಶಂಕರಾದ್ಯಾಃ ||

338. ಕಠಿನ ಶಬ್ದಾರ್ಥ—ಈ ಶ್ಲೋಕದಲ್ಲಿರುವ ಪ್ರಾಯಶಃ ಎಲ್ಲ ಪದಗಳ ಅರ್ಥವೂ ಸುಲಭವಾಗಿಯೇ ಇವೆ. ಆದಕಾರಣ ಹೆಚ್ಚಿನ ವಿವರಣೆಗೆ ಹೋಗದೆ ಎಲ್ಲಿ ಅರ್ಥಭೇದ ಬರುತ್ತದೋ ಅಷ್ಟು ಮಾತ್ರ ವಿವರಿಸುವೆನು. (ಕ) ಅವತಾರೇಷು ಎಂಬುದಕ್ಕೆ ವಾಯುಪಕ್ಷದಲ್ಲಿ ಅವತಾರಗಳಲ್ಲಿ ಎಂದೇ ಸಾಮಾನ್ಯಾರ್ಥ. ಹರಿಪಕ್ಷದಲ್ಲಿ ವಿಶೇಷ. ಇದರಲ್ಲಿ ಅವ-ಉಪಸರ್ಗ, ತಾರ ಎಂಬುದು 'ತೄ ಪ್ಲವನ-ತರಣಯೋಃ'-ಈಜು, ತೇಲು, ದಾಟು ಎಂಬ ಧಾತುವಿನ (ಭ್ವಾ. ಪ.) ಘಞಂತರೂಪ. ಇದಕ್ಕೆ 'ಅವತರಂತಿ-ನಿಸ್ತರಂತಿ ಸಂಸಾರಬಂಧಂ ಏಭಿರಿತಿ ಅವತಾರಾಃ' ಎಂಬ ವ್ಯುತ್ಪತ್ತಿಯಿಂದ ಯಾವುವು-ಗಳಿಂದ ಸಂಸಾರಬಂಧನವನ್ನು ದಾಟುತ್ತಾರೋ ಅಂಥಾ ವೇದಗಳಿಗೆ ಅವತಾರ ಎಂದು ಹೆಸರು. ಆದಕಾರಣ ಹರಿಪಕ್ಷದಲ್ಲಿ—ತ್ರಿಷು ಅಪಿ ಅವತಾರೇಷು ಏವ ಎಂದರೆ ಋಗ್ಯಜುಃಸಾಮವೆಂಬ 'ಮೂರು ವೇದಗಳಲ್ಲೂ' ಎಂದರ್ಥ ಮಾಡ-ಬೇಕು. (ಖ) ಅಪಘೃಣಂ ಎಂಬುದು (ಕ್ರ. ವಿ. ಭ.) ಹಿಂಸಿತಃ ಎಂಬ ಕ್ರಿಯೆಗೆ ವಿಶೇಷಣ. 'ಕಾರುಣ್ಯಂ ಕರುಣಾ ಘೃಣಾ । ಕೃಪಾ ದಯಾ ಽನುಕಂಪಾಸ್ಯಾತ್' ಎಂಬ ಅಮರದಂತೆ ಘೃಣಾ ಎಂದರೆ ದಯೆ, ಕಾರುಣ್ಯ. ಅಪಗತಾ ಘೃಣಾ ಯಥಾ ಭವತಿ ತಥಾ ಅಪಘೃಣಂ (ವಿ.) ನಿರ್ದಯವಾಗಿ, ನಿಷ್ಕರುಣೆಯಿಂದ ಎಂದರ್ಥ. (ಗ) ಪ್ರಗಲ್ಭಃ-(ಕ್ರ. ವಿ.) ಪ್ರೌಢಃ (ಭ) ಮಹಾಸಮರ್ಥಃ (ಪು.ರಾ) ಪ್ರತಿಭಾವಂತ. 'ಪ್ರಗಲ್ಭಃ ಪ್ರತಿಭಾನ್ವಿತೇ'—ಅಮರ.

ಘ) ಸ್ವಚ್ಛಂದ ಮೃತ್ಯುಃ—ಸ್ವ-ತನ್ನ, ಛಂದ-ಅಧೀನದಲ್ಲಿರುವ, ಮೃತ್ಯುಃ-ಮರಣ ಅಥವಾ ಮೃತ್ಯುದೇವತೆ.'ಅಭಿಪ್ರಾಯ-ವಶೌ ಛಂದೌ'—ಅಮರ. ವಾಯುಪಕ್ಷದಲ್ಲಿ ಸ್ವೇಚ್ಛಾಮರಣವುಳ್ಳವರೆಂತ ಅರ್ಥ. ಹರಿಪಕ್ಷದಲ್ಲಿ ಮೃತ್ಯುದೇವತೆಯನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ, ಅರ್ಥಾತ್ ಮೃತ್ಯದೇವತೆಗೂ ನಿಯಾಮಕನಾದ ಎಂದರ್ಥ. (ಙ) ತ್ರಾತಾ ಯಸ್ಯ ತ್ರಿಧಾಮಾ—ವಾಯುಪಕ್ಷದಲ್ಲಿ (ಕಕ. ವಿ.ಛ) ತ್ರೀಣಿ ಅನಂತಾಸನ ವೈಕುಂಠ (ಶ್ವೇತದ್ವೀಪ) ಕ್ಷೀರಾರ್ಣವರೂಪಾಣಿ ಧಾಮಾನಿ-ಸ್ಥಾನಾನಿ ಯಸ್ಯ ಸಃ ತ್ರಿಧಾಮಾ ವಿಷ್ಣುಃ। ವೈಕುಂಠ ಅನಂತಾಸನ ಶ್ವೇತದ್ವೀಪ ಎಂಬ ಮೂರು ಸ್ಥಾನಗಳುಳ್ಳವನು—ವಿಷ್ಣು ಎಂದರ್ಥ. ಯಸ್ಯ-ಯಾವ ನಿನಗೆ (ವಾಯುವಿಗೆ), ತ್ರಿಧಾಮಾ-ವಿಷ್ಣುವೇ ತ್ರಾತಾ-ರಕ್ಷಕನೋ ಎಂದು ವಾಯುಪರವಾಗಿ ಅನ್ವಯ. ವಿಷ್ಣುಪರವಾದರೆ ಯಸ್ಯ-ಯಾವ ನಿನಗೆ (ವೇದವ್ಯಾಸರಿಗೆ), ತ್ರಾತಾ-ಬೇರೆ ರಕ್ಷಕರು, ಮಾ-ಇಲ್ಲವೋ—ಎಂದು ಅರ್ಥಮಾಡಿ, ತ್ರಿಧಾ ಎಂಬುದನ್ನು ಮುಂದಿರುವ 'ಜಗತ್'ನೊಡನೆ ಹೊಂದಿಸಬೇಕು. ಆಗ (ಚ) ತ್ರಿಧಾ ಜಗತ್ ಎಂದಾಗುತ್ತದೆ. ಶ್ರೀಕೃಷ್ಣ ಭಗವದ್ಗೀತೆಯ ೧೫ನೇ ಅಧ್ಯಾಯದಲ್ಲಿ (ಶ್ಲೋ. ೧೫-೧೬) ಜಗತ್ತಿನಲ್ಲಿ ಕ್ಷರ-ಅಕ್ಷರ ಎಂದು ಎರಡು ವಿಧ ಚೇತನರಿದ್ದಾರೆಂದೂ ಅದರಲ್ಲಿ ಬ್ರಹ್ಮಾದಿ ತೃಣಪರ್ಯಂತ ಸಕಲರೂ ನಾಶವುಳ್ಳವರಾದ್ದರಿಂದ ಕ್ಷರರೆಂದೂ, ರಮಾದೇವಿಯೊಬ್ಬಳಿಗೆ ನಾಶವಿಲ್ಲದ್ದರಿಂದ ಅವಳು ಅಕ್ಷರಳೆಂದೂ ಹೇಳಿ ಈ ಕ್ಷರ-ಅಕ್ಷರ ಇಬ್ಬರಿಗಿಂತಲೂ ಉತ್ತಮನಾದ್ದರಿಂದ ನಾನು ಪುರುಷೋತ್ತಮನೆಂದೂ ಹೇಳಿಕೊಂಡಿದ್ದಾನೆ. ಅದರಂತೆ ಜನತ್ತಿನಲ್ಲಿ ಕ್ಷರರು (ಜೀವರು), ಅಕ್ಷರಳು (ರಮಾದೇವಿ), ಪುರುಷೋತ್ತಮ ಭಗವಂತ ಎಂದು ಮೂರು ವಿಧ ಚೇತನರಿದ್ದಾರೆ. ಇದೇ 'ತ್ರಿಧಾ ಜಗತ್' ಎಂಬುದರ ಅರ್ಥ.

339. ಕ) ಹರಿಪರವಾಗಿ ವಿಶ್ಲೇಷಣೆ—ತೃತೀಯ ಚರಣದ ಕಡೆಯಲ್ಲಿರುವ 'ದೇವ' ಎಂಬುದು ಸಂಬೋಧನೆ. ಅದನ್ನು ಬಿಟ್ಟರೆ ಈ ಶ್ಲೋಕದಲ್ಲಿ ಏಳು ಸಣ್ಣ ಸಣ್ಣ ವಾಕ್ಯಗಳಿವೆ—1) ಅರಿಭಿಃ ಹಿಂಸಿತಃ ಅಪಿ ನಿರ್ವಿಕಾರಃ, 2) ತ್ರಿಷು ಅವತಾರೇಷು (ಮೂರು ವೇದಗಳಲ್ಲೂ) ಸರ್ವಜ್ಞಃ....

ಸ್ವಚ್ಛಂದ ಮೃತ್ಯುಃ (ಇತಿ ಪ್ರತಿಪಾದ್ಯಸೇ ।) 3) ಸುಜನಂ ಸುಖಯಸಿ, 4) ಯಸ್ಯ (ತವ) ತ್ರಾತಾ ಮಾ (ಬೇರೆ ರಕ್ಷಕರಿಲ್ಲವೋ), 5) ಉತ ತ್ರಿಧಾ ಜಗತ್ ವಶಗಂ, 6) ಶಂಕರಾದ್ಯಾಃ ಕಿಂಕರಾಃ, 7) ಅತ್ರ ಕಿಂ ಚಿತ್ರಮ್ ? ಅರ್ಥವೂ ಸುಲಭವಾಗಿಯೇ ಇದೆ. ದಂಡಾನ್ವಯವೂ ಇದೇ; ಆದ್ದರಿಂದ ಬೇರೆ ಕೊಡಲಿಲ್ಲ.

ಖ) ಹರಿಪರವಾಗಿ ಅನ್ವಯಾರ್ಥ—ದೇವ-ಕ್ರೀಡಾದಿಗುಣವಿಶಿಷ್ಟ-ನಾದ ಹೇ ವೇದವ್ಯಾಸರೇ ! 1) ಅರಿಭಿಃ-(ಅನ್ಯಥಾಜ್ಞಾನಾದಿ ದೋಷವುಳ್ಳ ಕಲ್ಯಾದಿ) ಶತ್ರುಗಳಿಂದ; ಅಪಘೃಣಂ-ನಿರ್ದಯವಾಗಿ, ಹಿಂಸಿತಃ ಅಪಿ-(ನಿಮ್ಮ ಅನಂತಕಲ್ಯಾಣಗುಣಗಳಿಗೆ ಮಿಥ್ಯಾತ್ವಪ್ರತಿಪಾದನಾದಿಗಳಿಂದ) ಹಿಂಸಿಸಲ್ಪಟ್ಟರೂ; ನಿರ್ವಿಕಾರಃ ಏವ-ನೀವು ವಿಕಾರರಹಿತರೇ ಆಗಿದ್ದೀರಿ. 2) ತ್ರಿಷು ಅವತಾರೇಷು-ಋಗ್ಯಜುಃಸಾಮಾಖ್ಯ ಮೂರು ವೇದಗಳಲ್ಲೂ; ಸರ್ವಜ್ಞಃ-ಸಮಸ್ತವನ್ನೂ ತಿಳಿದವರೆಂದೂ; ಸರ್ವಶಕ್ತಿಃ-ಸರ್ವವಿಷಯಕವಾದ (ಸೃಷ್ಟ್ಯಾದಿ ಎಂಟು ಕಾರ್ಯಗಳನ್ನೂ ವಹಿಸಬಲ್ಲ) ಶಕ್ತಿಯುಳ್ಳವನೆಂದೂ; ಸಕಲ....ಪ್ರಗಲ್ಭಃ—ಸಕಲ-ಸಮಸ್ತವಾದ ಗುಣಗಣ-ಜ್ಞಾನಾನಂದ ಪ್ರಕಾಶಾದಿ ಅನಂತಗುಣಸಮೂಹದಿಂದ, ಆ-(ಸಮಂತಾತ್) ನಿರವಧಿಕವಾಗಿಯೂ ಅನಂತವಾಗಿಯೂ, ಪೂರ್ಣರೂಪ-ಪರಿಪೂರ್ಣವಾದ ಸ್ವರೂಪವುಳ್ಳವರೂ, ಪ್ರಗಲ್ಭಃ-ಪ್ರತಿಭಾನ್ವಿತರೂ, ಪ್ರೌಢರೂ ಮಹಾಸಮರ್ಥರೂ; ಸ್ವಚ್ಛಃ-ನಿರ್ದೋಷರೂ; ಸ್ವಚ್ಛಂದ ಮೃತ್ಯುಃ—ಸ್ವ-ತಮ್ಮ, ಛಂದ-ಅಧೀನದಲ್ಲಿರುವ, ಮೃತ್ಯುಃ-ಮೃತ್ಯುದೇವತೆಯುಳ್ಳವರೂ (ಎಂದರೆ ಮೃತ್ಯುದೇವತೆಗೆ ನಿಯಾಮಕರೂ) ಆಗಿದ್ದೀರಿ. (ಇತಿ-ಎಂದು, ಪ್ರತಿಪಾದ್ಯಸೇ-ನಿರೂಪಿತರಾಗಿದ್ದೀರಿ) 3) ಸುಜನಂ-ಸಜ್ಜನರನ್ನು, ಸುಖಯಸಿ-(ಮೋಕ್ಷಪ್ರದಾನದಿಂದ)ಸುಖಪಡಿಸುವಿರಿ 4) ಯಸ್ಯ (ತವ)-ಯಾವ ನಿಮಗೆ; ತ್ರಾತಾ-ಬೇರೆ ರಕ್ಷಕನು, ಮಾ-ಇಲ್ಲವೋ (ಎಂದರೆ ಸ್ವತಂತ್ರಪ್ರಭುವೋ), 5) ಉತ-ಮತ್ತು; ತ್ರಿಧಾ ಜಗತ್-ಕ್ಷರ-ಅಕ್ಷರ-ಪರಮಾತ್ಮ ಎಂದು ಮೂರು ವಿಧವಾದ ಇಡೀ ಜಗತ್ತು, ವಶಗಂ-ಸ್ವಾಧೀನದಲ್ಲಿದೆಯೋ, 6) ಶಂಕರಾದ್ಯಾಃ-ರುದ್ರೇಂದ್ರಾದಿ ಸಕಲ ದೇವತೆಗಳೂ,

ಕಿಂಕರಾಃ-ಸೇವಕರಾಗಿದ್ದಾರೋ ; 7) ಅತ್ರ-ಅಂಥಾ ನಿನ್ನಲ್ಲಿ; ಕಿಂ ಚಿತ್ರಂ-ಏನು ಆಶ್ಚರ್ಯವು ?

ಗ) ಹರಿಪರವಾಗಿ ಭಾವಾರ್ಥ—ಹೇ ಭಗವನ್ ವೇದವ್ಯಾಸರೇ ! 'ವಿಜ್ಞಾನಮಾನಂದಂಬ್ರಹ್ಮ' (ಬೃಹ. ಉ. ೫/೯/೨೮) ಎಂಬ ಶ್ರುತಿಯಂತೆ ನೀವು ಜ್ಞಾನಾನಂದಪರಿಪೂರ್ಣರಾಗಿದ್ದೀರಿ. ಆದರೆ ಇದಕ್ಕೆ ಪ್ರತಿಯಾಗಿ ಕಲ್ಯಾವೇಶದಿಂದ ರಚಿತವಾದ ಶೈವಾದಿದುರಾಗಮಗಳು ನೀವು ನಿರ್ಗುಣರೆಂದೂ ಪರಾಧೀನರೆಂದೂ ಸಾಮಾನ್ಯ ಋಷಿಯೆಂದೂ ನಾನಾಬಗೆಯಾಗಿ ಅನುಚಿತವಾಗಿ ನಿಮ್ಮನ್ನು ದೂಷಿಸುತ್ತವೆ. ಆದರೂ ನೀವು ಕಿಂಚಿತ್ತೂ ಹಚ್ಚಿಕೊಳ್ಳದೆ ನಿರ್ವಿಕಾರರಾಗಿರುತ್ತೀರಿ. ಋಗಾದಿ ಸಕಲ ವೇದಗಳು ನಿಮ್ಮ ಗುಣಗಳನ್ನು ಕೊಂಡಾಡುತ್ತವೆ. 'ಯಃ ಸರ್ವಜ್ಞಃ ಸರ್ವವಿತ್' (ಅಥ. ಉಪ. ೧/೧/೯), 'ಜ್ಞಾನಜ್ಞಾನಃ ಸುಖಸುಖಃ ಸ ವಿಷ್ಣುಃ ಪರಮೋಽಕ್ಷರಃ' (ಗೀತಾಭಾಷ್ಯೋದಾಹೃತ ಪೈಂಗಿಖಿಲ), 'ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ' (ಗೀತೆ ೧೧/೩೦) ಇತ್ಯಾದಿ ಶ್ರುತಿಗಳು ನೀವು ಸರ್ವಜ್ಞರೆಂದು ಹೇಳುತ್ತವೆ. 'ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ' (ಗೀತಾಭಾಷ್ಯ-ಸೂತ್ರಭಾಷ್ಯಗಳಲ್ಲಿ ಉದಹರಿಸಿದ ಶ್ರುತಿ), 'ಸರ್ವೈರ್ಯುಕ್ತಾ ಶಕ್ತಿಭಿರ್ದೇವತಾ ಸಾ' (ಸೂ. ಭಾ-ಚತುರ್ವೇದ ಶಿಖಾ) ಮೊದಲಾದ ಶ್ರುತಿಗಳು ನಿಮ್ಮ ಅನಂತಶಕ್ತಿಯನ್ನು ಪ್ರತಿಪಾದಿಸುತ್ತವೆ. 'ಅನಾದ್ಯನಂತಂ ಪರಿಪೂರ್ಣರೂಪಮೀಶಂ' (ಬಾಭ್ರವ್ಯಶಾಖಾ-ಗೀ. ಭಾ.), 'ಮಯ್ಯನಂತಗುಣೇಽನಂತೇ ಗುಣತೋಽನಂತ ವಿಗ್ರಹೇ' (ಭಾಗವತ ಭಾ.) 'ಬ್ರಹ್ಮತತಮಂ' (ಐ-ಅರ. ೩/೨/೩) ಇತ್ಯಾದಿ ಶ್ರುತಿ ಸ್ಮೃತಿಗಳು ನೀವು ಅನಂತಗುಣಪರಿಪೂರ್ಣರೆಂದೂ 'ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನುವಂತಿ' (ಋ. ೭/೯೯/೧) 'ಹೇ ವಿಷ್ಣೋ, ನೀನು ಅಳತೆಗೆ ಮೀರಿದವನು. ದೇಹದಿಂದಲೇ ಸಕಲ ಜಗತ್ತನ್ನೂ ವ್ಯಾಪಿಸಿದ್ದೀಯೆ. ಮಿಕ್ಕ ಯಾವ ದೇವತೆಯೂ ನಿನ್ನ ಮಹಿಮೆಯ ಲೇಶಾಂಶವನ್ನೂ ಹೊಂದಲು ಸಮರ್ಥರಲ್ಲ' ಎಂಬ ಶ್ರುತಿ ನಿಮ್ಮ ಪ್ರಾಗಲ್ಭ್ಯವನ್ನೂ ಸಾರುತ್ತವೆ. 'ನ ದೋಷಃ ಪರಮೇ ಕಶ್ಚಿತ್ ಗುಣಾ ಏವ ನಿರಂತರಂ' (ಸೂ. ಭಾ. ಶ್ರುತಿ), 'ಯಃ ಸ ನಿರ್ದೋಷೋ ನಿಷ್ಕಲಃ ಸಗುಣಃ

ಪರಃ ಪರಮಾತ್ಮಾ (ಕಾಷಾಯಣ ಶ್ರುತಿ. ಸೂ. ಭಾ.) 'ಅನಂತಗುಣ ಮಾಹಾತ್ಮ್ಯೇ ನಿರ್ದೋಷೋ ಭಗವಾನ್ ಹರಿಃ' (ಗೀತಾತಾತ್ಪರ್ಯ–ಶ್ರುತಿ) ಇತ್ಯಾದಿ ಪ್ರಮಾಣಗಳಿಂದ ನೀವು ದೋಷದೂರರು—ಸ್ವಚ್ಛರೆಂದು ಸಿದ್ಧ-ವಾಯಿತು. 'ಮೃತ್ಯುಮೃತ್ಯುಂ ನಮಾಮ್ಯಹಂ' (ನೃಸಿಂಹ ತಾಪನೀಯ ಉಪನಿಷತ್) 'ಕಾಲೋಽಸ್ಮಿ ಲೋಕಕ್ಷಯಕೃತ್' (ಗೀ. ೧೧/೩೨) 'ನಾನು ಸಕಲ ಲೋಕಗಳನ್ನೂ ನಾಶಮಾಡುವ ಮೃತ್ಯುದೇವತೆ,' 'ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ' 'ಸಕಲರೂ ನಿನ್ನ ಮುಖದಲ್ಲಿ ಆಹುತಿಯಾಗಿ ಬಂದು ಬೀಳುತ್ತಿದ್ದಾರೆ' (ಗೀ. ೧೧/೨೭) ಇತ್ಯಾದಿ ಪ್ರಮಾಣಗಳಿಂದ ನೀವು ಮೃತ್ಯು-ವಿಗೂ ನಿಯಾಮಕರೆಂದು ಸ್ಪಷ್ಟವಾಗುತ್ತದೆ. 'ಕರ್ತಾಽಸ್ಯ ನ ಕ್ವಚಿತ್' ಇತ್ಯಾದಿ ಗೀತಾತಾತ್ಪರ್ಯೋದಾಹೃತ ಶ್ರುತಿಗಳಿಂದ ನಿಮಗೆ ಬೇರೆ ಕರ್ತೃ (ನಿಯಾಮಕ) ಇಲ್ಲವೆಂದು ಸಿದ್ಧವಾಗುತ್ತದೆ. 'ಯ ಉ ತ್ರಿಧಾತು ಪೃಥಿವೀಮುತ ದ್ಯಾಮೇಕೋ ದಾಧಾರ ಭುವನಾನಿ ವಿಶ್ವಾ' (ಋ. ೧/೧೫೪/೪) 'ವಿಷ್ಣು ಒಬ್ಬನೇ ಪ್ರಕೃತಿ ಪುರುಷ–ಕಾಲಾತ್ಮಕ ಜಗತ್ತನ್ನು ಧರಿಸಿದ್ದಾನೆ. ಭೂಮಿ ಸ್ವರ್ಗಾದಿ ಸಕಲ ಲೋಕಗಳನ್ನೂ ರಮಾದೇವಿಯನ್ನೂ ಅವನೇ ಧರಿಸಿದ್ದಾನೆ' ಎಂಬ ಶ್ರುತಿಯಿಂದ ನೀವು ಸಕಲ ಜಗತ್ತೂ ನಿಮ್ಮ ಅಧೀನವಾಗಿದೆಯೆಂದೂ, 'ಬ್ರಹ್ಮರುದ್ರ-ರಮಾದಿಭ್ಯೋಽಪ್ಯುತ್ತಮತ್ವಂ ಸ್ವತಂತ್ರತಾಮ್' (ಗೀತಾತಾತ್ಪ. ಪ್ರಮಾಣ) 'ಯಂ ಯಂ ಕಾಮಯತೇ ವಿಷ್ಣು–ಸ್ತಂ ಬ್ರಹ್ಮಾಣಂ ಚ ಶಂಕರಮ್ । ಶಕ್ರಂ ಸೂರ್ಯಂ ಯಮಂ ಸ್ಕಂದಂ ಕುರ್ಯಾತ್ ಕರ್ತಾಽಸ್ಯ ನ ಕ್ವಚಿತ್' (ಗೀತಾ ತಾತ್ಪ. ಪ್ರಮಾಣ) 'ಚತುರ್ಭಿಃ ಸಾಕಂ ನವತಿಂ ಚ ನಾಮಭಿಃ—ಚಕ್ರಂ ನ ವೃತ್ತಂ ವ್ಯತೀँ ರವೀವಿಪತ್' (ಋ. ೧/೧೫೫/೬) 'ಅಷ್ಟವಸುಗಳು, ಏಕಾದಶ ರುದ್ರರು, ದ್ವಾದಶಾದಿತ್ಯರು (ವಿಷ್ಣುವನ್ನು ಬಿಟ್ಟು), ಬ್ರಹ್ಮ ಸೇರಿ ದಶಪ್ರಜಾ-ಪತಿಗಳು, ಪ್ರಧಾನವಾಯು ಸೇರಿ ಐವತ್ತು ಮರುತ್ತುಗಳು ಈ ತೊಂಬತ್ತ ನಾಲ್ಕು ಮುಖ್ಯದೇವತೆಗಳನ್ನೇ ನೀನು ವಾಸುದೇವಾದಿ ನಾಲ್ಕು ರೂಪಗಳಿಂದ ಚಕ್ರ ತಿರುಗಿಸಿದಂತೆ ತಿರುಗಿಸುತ್ತೀ, ಮಿಕ್ಕವರ ಪಾಡೇನು ?' ಇತ್ಯಾದಿ ಪ್ರಮಾಣಗಳಿಂದ ರುದ್ರೇಂದ್ರಾದಿ ಸಕಲ ದೇವತೆಗಳೂ ನಿಮ್ಮ ಕಿಂಕರರೆಂಬುದೂ ಸ್ಪಷ್ಟವಾಗಿ ತಿಳಿದುಬರುತ್ತದೆ. ಇಂಥಾ ನೀವು ಯೋಗ್ಯರಾದ ಸಜ್ಜನರಿಗೆ

ಸಾಧನಸಂಪೂರ್ತಿಯಾದ ನಂತರ ಸ್ವರೂಪಾನಂದಾನುಭವರೂಪ ಮೋಕ್ಷವನ್ನು ಅನುಗ್ರಹಿಸುವಿರೆಂಬುದರಲ್ಲಿ ಆಶ್ಚರ್ಯವೇನಿದೆಯೆಂದು ಭಾವ.

340. (ಕ) **ಹರಿವಾಯುಪರವಾಗಿ ವಿಶ್ಲೇಷಣೆ**—ಈ ಪಕ್ಷದಲ್ಲೂ ಹಿಂದಿನಂತೆ ದೇವ ಎಂಬುದು ಸಂಬೋಧನೆ. ಸುಖಯಸಿ ಎಂಬ ಮಧ್ಯಮ ಪುರುಷೈಕವಚನ ಕ್ರಿಯಾಬಲದಿಂದ 'ತ್ವಂ' ಎಂಬ ಕರ್ತೃಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಆಗ—ದೇವ, ತ್ವಂ ಸುಜನಂ ಸುಖಯಸಿ–ನೀವು ಸಜ್ಜನರನ್ನು ಸುಖಪಡಿಸುತ್ತೀರಿ ಎಂಬುದು ಮೊದಲನೇ ವಾಕ್ಯ. ಅತ್ರ ಎಂಬುದು ಅವ್ಯಯ ; ಅದನ್ನು ಆವೃತ್ತಿ ಮಾಡಿಕೊಂಡು, ಅತ್ರ–ಇಂಥಾ ನಿನ್ನಲ್ಲಿ ಎಂದೂ, ಅತ್ರ–ಇಲ್ಲಿ ಈ ವಿಷಯದಲ್ಲಿ ಎಂದರೆ ಸಜ್ಜನರನ್ನು ಸುಖಪಡಿಸುವ ವಿಷಯದಲ್ಲಿ ಎಂದು ಎರಡರ್ಥ ಹೇಳಿದರೆ ಅರ್ಥ ಚೆನ್ನಾಗಿ ಹೊಂದುತ್ತದೆ. ಅದರಂತೆ—ಅತ್ರ ಅತ್ರ ಕಿಂ ಚಿತ್ರಮ್—ಇಂಥಾ ನಿನ್ನಲ್ಲಿ ಈ ವಿಷಯದಲ್ಲಿ ಏನು ಆಶ್ಚರ್ಯವಿದೆ? ಎಂದು ಎರಡನೇ ವಾಕ್ಯ. ಪ್ರಥಮ ವಾಕ್ಯದ 'ತ್ವಂ'ಗೆ 1) ತ್ರಿಷ್ವಪಿ....ನಿರ್ವಿಕಾರಃ–ಎಂದೂ 2) ಸರ್ವಜ್ಞಃ ಎಂದಾರಂಭಿಸಿ 6) ಸ್ವಚ್ಛಂದವೃತ್ತ್ಯಃವರೆಗಿನ ಐದೂ ಸೇರಿ ಆರು ವಿಶೇಷಣ-ಗಳು. ಎರಡನೇ ವಾಕ್ಯದಲ್ಲಿರುವ ಮೊದಲನೆಯ 'ಅತ್ರ'ಶಬ್ದಕ್ಕೆ ೧) ಯಸ್ಯ (ತವ)ತ್ರಿಧಾಮಾ ತ್ರಾತಾ, ೨) ಉತ ಜಗತ್ ವಶಗಂ ೩) ಶಂಕರಾದ್ಯಾಃ ಕಿಂಕರಾಃ ಎಂದು ಮೂರು ವಿಶೇಷಣಗಳು. ಈಗ ದಂಡಾನ್ವಯ ನೋಡಿದರೆ ಎಲ್ಲಾ ಅರ್ಥವಾಗುತ್ತದೆ.

(ಖ) **ವಾಯುಪರವಾಗಿ ದಂಡಾನ್ವಯ**—ದೇವ! 1) ತ್ರಿಷು ಅಪಿ ಅವತಾರೇಷು ಅರಿಭಿಃ ಅಪಘೃಣಂ ಹಿಂಸಿತಃ ನಿರ್ವಿಕಾರಃ ಏವ, 2) ಸರ್ವಜ್ಞಃ 3) ಸರ್ವಶಕ್ತಿಃ 4) ಸಕಲ....ಪ್ರಗಲ್ಭಃ, 5) ಸ್ವಚ್ಛಃ 6) ಸ್ವಚ್ಛಂದವೃತ್ತ್ಯಃ (ತ್ವಂ) ಸುಜನಂ ಸುಖಯಸಿ। ೧) ಯಸ್ಯ (ತವ) ತ್ರಿಧಾಮಾ ತ್ರಾತಾ, ೨) ಉತ ಜಗತ್ ವಶಗಂ, ೩) ಶಂಕರಾದ್ಯಾಃ ಕಿಂಕರಾಃ ಅತ್ರ(ತ್ವಯಿ) ಅತ್ರ (ವಿಷಯೇ) ಕಿಂ ಚಿತ್ರಮ್ ?

ಗ) **ಅನ್ವಯಾರ್ಥ** — ದೇವ–ಹೇ ಮುಖ್ಯಪ್ರಾಣದೇವರೇ ! 1) ತ್ರಿಷ್ವಪಿ ಅವತಾರೇಷು–ಹನುಮ-ಭೀಮ-ಮಧ್ವ ಎಂಬ ಮೂರು

ಅವತಾರಗಳಲ್ಲೂ ; ಅರಿಭಿಃ-ಶತ್ರುಗಳಿಂದ ; ಅಪಘೃಣಂ-ನಿರ್ದಯವಾಗಿ ; ಹಿಂಸಿತಃ-ಹಿಂಸಿಸಲ್ಪಟ್ಟರೂ (ಬಾಧಿತರಾದಾಗ್ಯೂ) ; ನಿರ್ವಿಕಾರಃ ಏವ-ಕೋಪತಾಪಾದಿ ಯಾವ ವಿಕಾರವೂ ಇಲ್ಲದವರೂ ; 2) ಸರ್ವಜ್ಞಃ-ಭಗವಂತನ ವಿಷಯ ಬಿಟ್ಟು ಮಿಕ್ಕ ಸಮಸ್ತವನ್ನೂ ಆಲೋಚಿಸಿ ತಿಳಿಯಬಲ್ಲ ; 3) ಸರ್ವಶಕ್ತಿಃ-ಎಲ್ಲ ಕಾರ್ಯಗಳಲ್ಲೂ ಪೂರ್ಣಶಕ್ತಿಯುಳ್ಳ ; 4) ಸಕಲ.... ಪ್ರಗಲ್ಭಃ—ಸಕಲಗುಣ-ಗಣ-ಮೂಲರೂಪದ ಬಲಜ್ಞಾನಾದಿ ಸಕಲಗುಣಗಣ-ದಿಂದ, ಆಪೂರ್ಣ-ತುಂಬಿದ ರೂಪವುಳ್ಳವರೂ, ಪ್ರಗಲ್ಭಃ-ಪ್ರತಿಭಾಶಾಲಿಗಳೂ ಆದ ; 5) ಸ್ವಚ್ಛಃ-ಪಾಪಲೇಶದ ಲೇಪವೂ ಇಲ್ಲದ ; 6) ಸ್ವಚ್ಛಂದ-ಮೃತ್ಯುಃ-ಸ್ವಾಧೀನಳಾದ ಮೃತ್ಯುದೇವತೆಯುಳ್ಳವರಾದ್ದರಿಂದ ಸ್ವೇಚ್ಛಾ-ಮರಣವುಳ್ಳ ; (ತ್ವಂ) ನೀವು ; ಸುಜನಂ-ಯೋಗ್ಯರಾದ ಸಜ್ಜನರನ್ನು ; ಸುಖಯಸಿ-(ಜ್ಞಾನಕೊಡುವುದರಿಂದ) ಸುಖಪಡಿಸುತ್ತೀರಿ. (ಎರಡನೇ ವಾಕ್ಯ) ೧) ಯಸ್ಯ (ತವ)-ಯಾವ ತಮಗೆ ; ತ್ರಿಧಾಮಾ-ಶ್ವೇತದ್ವೀಪಾ-ನಂತಾಸನ ವೈಕುಂಠಗಳೆಂಬ ಸ್ಥಾನತ್ರಯವುಳ್ಳ ಶ್ರೀಹರಿಯೋ, ತ್ರಾತಾ-ರಕ್ಷಕನಾಗಿದ್ದಾನೋ, ೨) ಉತ-ಮತ್ತು ; ಜಗತ್-ಚರಾಚರಾತ್ಮಕವಾದ ಸಕಲ ಜಗತ್ತೂ ; ವಶಗಂ-ಸ್ವಾಧೀನವಾಗಿದೆಯೋ, ೩) ಶಂಕರಾದ್ಯಾಃ-ರುದ್ರಾದಿ ಸಕಲ ದೇವತೆಗಳೂ ; ಕಿಂಕರಾಃ-ಸೇವಕರಾಗಿದ್ದಾರೋ ; ಅತ್ರ-ಅಂಥಾ ತಮ್ಮಲ್ಲಿ, ಅತ್ರ-ಈ ವಿಷಯದಲ್ಲಿ (ಸಜ್ಜನರನ್ನು ಸುಖಬಡಿಸುವಿರೆಂಬ ವಿಷಯದಲ್ಲಿ) ; ಕಿಂ ಚಿತ್ರಂ-ಏನಾಶ್ಚರ್ಯವಿದೆ ?

ಘ) ವಾಯುಪರ ಭಾವಾರ್ಥ—ಮಧ್ವಾವತಾರದಲ್ಲಿ ದುರ್ವಾದಿಗಳು ಇವರನ್ನು ಎದುರಿಸಿ ಪರಾಸ್ತರಾದರು ಎಂಬ ಪ್ರಸಕ್ತಿ ಬಂದದ್ದರಿಂದ ಈ ಅವತಾರದಲ್ಲಿ ಮಾತ್ರವಲ್ಲ, ಮೂರು ಅವತಾರಗಳಲ್ಲೂ ಹೀಗೆಯೇ ಶತ್ರುಗಳ ಹಿಂಸೆಗೆ ಒಳಗಾಗಿದ್ದೀರೆಂದೂ ಆದರೂ ನೀವು ನಿರ್ವಿಕಾರರಾಗಿದ್ದು ಉದ್ಧಕ್ಕೂ ಸಜ್ಜನರನ್ನು ಸಲಹಿ ಸಂತೋಷಪಡಿಸಿದ್ದೀರೆಂದೂ ನಿವೇದಿಸಿಕೊಂಡಿದ್ದಾರೆ.

ಹೇ ವಾಯುದೇವರೆ ! ನೀವು ಶತ್ರುಗಳ ಬಾಧೆಗೆ ಒಳಗಾದದ್ದು ಈ ಅವತಾರದಲ್ಲಿ ಮಾತ್ರವಲ್ಲ, ಮೂರೂ ಅವತಾರಗಳಲ್ಲಿ ಶತ್ರುಗಳು ನಾನಾ ವಿಧವಾಗಿ ನಿರ್ದಯವಾಗಿ ತೊಂದರೆ ಕೊಟ್ಟಿದ್ದಾರೆ. ೧) ಹನುಮಾವತಾರದಲ್ಲಿ

ಲಂಕೆಗೆ ಹೋಗಿದ್ದಾಗ ನೀವು ಒಬ್ಬರೇ ಇದ್ದರೂ ಅಸಂಖ್ಯ ರಾಕ್ಷಸಸೈನ್ಯ ನಿಮ್ಮನ್ನು ತರುಬಿತು ; ಬ್ರಹ್ಮದೇವರಿಗೆ ಗೌರವ ಕೊಡುವುದಕ್ಕಾಗಿ ನೀವು ಸ್ವಲ್ಪಹೊತ್ತು ಬ್ರಹ್ಮಾಸ್ತ್ರಕ್ಕೆ ಒಳಗಾದರೆ ಆ ದುಷ್ಟರು ನಿಮ್ಮ ಬಾಲಕ್ಕೆ ಬಟ್ಟೆ ಸುತ್ತಿ, ಎಣ್ಣೆ ಹೊಯ್ದು ಬೆಂಕಿ ಹಚ್ಚಿದರು. ರಾವಣ ನಿಮ್ಮ ಎದೆಗೆ ಮುಷ್ಟಿ-ಯಿಂದ ಅಪ್ಪಳಿಸಿದ ಇತ್ಯಾದಿ. ಭೀಮಾವತಾರದಲ್ಲಿ ಭಂಡಕೌರವರು ನಿಮಗೆ ವಿಷಮಿಶ್ರ ಭಕ್ಷ್ಯ ತಿನ್ನಿಸಿದರು, ಪ್ರಮಾಣಕೋಟಿ ಎಂಬ ಮಡುವಿನಲ್ಲಿ ಎತ್ತಿ-ಹಾಕಿದರು, ಅರಗಿನ ಮನೆಯಲ್ಲಿ ಹೊಗಿಸಿ ನಾಶಮಾಡಲು ಆಲೋಚಿಸಿದರು—ಇತ್ಯಾದಿ. ಮಧ್ವಾವತಾರದಲ್ಲಿ (ಈ ಕಥೆಗಳೆಲ್ಲಾ ಮಧ್ವವಿಜಯದಲ್ಲಿ ಬಂದಿವೆ—ಭ.) ಮಣಿಮಂತ ಘಟಸರ್ಪವಾಗಿ ಕಚ್ಚಿದನು, ಯತಿರೂಪದಿಂದ ವಾದ ಮಾಡಿದನು (ಉಡುಪಿ ವಾಯುಸ್ತುತಿ ಪ್ರತಿಪದಾರ್ಥ ಪುಸ್ತಕದಿಂದ), ಗಂಡವಾಟಾದಿ ವಾದಿಗಳು ಆಚಾರ್ಯರ ಕುತ್ತಿಗೆ ಹಿಚುಕಲು ಪ್ರಯತ್ನಿಸಿದರು—ಇತ್ಯಾದಿ*. ಇಷ್ಟಾದರೂ ನೀವು ಯಾವ ಸಂದರ್ಭದಲ್ಲೂ ಕೋಪ

---

* ಈ ವಿಚಾರವನ್ನು ಗುರುಸಾರ್ವಭೌಮ ಟೀಕೆಯಲ್ಲಿ ಹೀಗೆ ವಿಸ್ತರಿಸಿ ಹೇಳಿದ್ದಾರೆ— ಓ ಮುಖ್ಯಪ್ರಾಣದೇವ, ನೀವು ಮಧ್ವಾವತಾರವನ್ನು ಸ್ವೀಕರಿಸಿದಾಗಲೂ ನಿಮ್ಮ ಶತ್ರುಗಳು ನಿಮ್ಮನ್ನು ನಾನಾವಿಧದಿಂದ ಹಿಂಸಿಸಿದರು. (1) ಮಣಿಮಂತನು ಹಾವಿನ ರೂಪದಿಂದ ಬಂದನು, ಪಾಜಕಕ್ಷೇತ್ರದಲ್ಲಿ ಬಾಲರೂಪದಿಂದ ವಿಹರಿಸುತ್ತಿದ್ದ ನಿಮ್ಮ ಕಾಲನ್ನು ಕಡಿದನು, ನಿಮ್ಮ ಬೆರಳಿನ ನಡುವಿನಲ್ಲಿ ಸಿಕ್ಕಿ ಸತ್ತನು. (2) ಕಾಡಿನಲ್ಲಿ ಸಂಚರಿಸುತ್ತಿರುವ ನಿಮ್ಮನ್ನು ಸಂಹರಿಸುವುದಕ್ಕಾಗಿ ರಾಕ್ಷಸರು ಹುಲಿ ಮುಂತಾದ ಕ್ರೂರಪ್ರಾಣಿಗಳ ರೂಪದಿಂದ ಬಂದರು. ಅವರಲ್ಲಿ ಕೆಲವರಿಗೆ ನಿಮ್ಮ ರೂಪವು ಭಯಂಕರವಾಗಿ ಕಂಡಿತು. ಆದರಿಂದಲೇ ಹೆದರಿ ಸತ್ತರು. (3) ಗಂಡವಾಟನು (ಕೊಡಿಪಾಡಿತ್ತಾಯ) ತನ್ನ ಸಹೋದರನೊಡನೆ ನಿಮ್ಮನ್ನು ಸೇವಿಸುವವನಂತೆ ನಟಿಸುತ್ತಾ ನಿಮ್ಮನ್ನು ಕೊಲ್ಲುವುದಕ್ಕಾಗಿ ಬಂದನು. ಮಹಾಬಲಿಷ್ಠರಾದ ಅವರಿಬ್ಬರೂ ನಿಮ್ಮ ಮೈಯನ್ನು ಒತ್ತುವಂತೆ ನಟಿಸುತ್ತಾ ಸಂಪೂರ್ಣ ಬಲವನ್ನು ಉಪಯೋಗಿಸಿ ನಿಮ್ಮ ಕುತ್ತಿಗೆಯನ್ನು ಕಿವುಚಿದರು. ನಿಮ್ಮ ಕುತ್ತಿಗೆಯು ಅವರು ಕಿವುಚಿದ ಹಾಗೆ ಹೆಚ್ಚು ಹೆಚ್ಚಾಗಿ ಗಟ್ಟಿಯಾಗುತ್ತಾ ಬಂತು. ಕೊನೆಗೆ ಸೋತುಹೋದರು. ಕೆಳಗೆ ಬಿದ್ದರು. (4) ಪೂರ್ವವಾಟ (ಮೂಡಂಪಾಡಿತ್ತಾಯ) ಎಂಬುವನೂ ಇದೇ ಕೆಲಸಮಾಡಿ ಕೆಳಗೆ ಬಿದ್ದನು. (5) ನಿಮ್ಮ ಶತ್ರುಗಳಿಂದ ಪ್ರೇರಿತನಾದ ಕ್ಷೌರಿಕನು ಕ್ಷೌರಕಾಲದಲ್ಲಿ ಕತ್ತಿಯಿಂದ ಕುತ್ತಿ ನಿಮ್ಮನ್ನು ಕೊಲ್ಲಲು ಯತ್ನಿಸಿದನು. ಅವನ ಕತ್ತಿಯಿಂದ ನಿಮ್ಮ

ತಾಪವೂ ತಂದುಕೊಳ್ಳಲಿಲ್ಲ. ಛೇದ-ಭೇದಾದಿ ವಿಕಾರವನ್ನೂ ಹೊಂದಲಿಲ್ಲ. ನಿರ್ವಿಕಾರರಾಗಿ ಒಂದೇ ರೀತಿ ಗಂಭೀರವಾಗಿದ್ದಿರಿ.

ಅಥವಾ ನಿಮ್ಮ ಈ ನಿರ್ವಿಕಾರತ್ವವು ಔದಾಸೀನ್ಯದ, ಅಶಕ್ತತೆಯ ಅಥವಾ ಅಜಾಗರೂಕತೆಯ ದ್ಯೋತಕವೆನ್ನುವುದೂ ಅಪರಾಧವಾಗುತ್ತದೆ. ಏಕೆಂದರೆ ನೀವು ಸರ್ವಜ್ಞಶಿಖಾಮಣಿಗಳು—ಆಲೋಚನೆ ಮಾಡಿದರೆ, ಭಗವದಿತರತ್ರ, ಭೂತಭವಿಷ್ಯದ್ವರ್ತಮಾನಾದಿ ಸಮಸ್ತವನ್ನೂ ಅರಿಯಬಲ್ಲ ಸಮರ್ಥರು. ಯಾವ ಕೆಲಸ ಮಾಡುವುದಕ್ಕೂ ಬೇಕಾದ ಸಕಲ ಶಕ್ತಿಯೂ ಉಳ್ಳವರು. ಅವತಾರಗಳಲ್ಲೂ ಮೂಲರೂಪದ ಬಲ ಜ್ಞಾನಾದಿ ಸಕಲಗುಣಗಳನ್ನು ಹೊಂದಿದ್ದರೂ ಯಥೋಚಿತವಾಗಿ (ಯುಗಧರ್ಮಾನುಗುಣವಾಗಿ) ಪ್ರಕಟಿಸಿದ ಮಹಾಸಾಮರ್ಥ್ಯೋಪೇತರು, ಅಜ್ಞಾನ ದೈತ್ಯಾವೇಶ ಪಾಪ-ಲೇಪಾದಿ ಯಾವ ದೋಷವೂ ಇಲ್ಲದ ಪರಿಶುದ್ಧರು. ಭಗವದನುಗ್ರಹದಿಂದ ಮೃತ್ಯುರೂಪ ಅನಿಷ್ಟವನ್ನು ಗೆದ್ದವರು—ಸ್ವೇಚ್ಛಾಮರಣಿಗಳು. (ಆದ್ದರಿಂದ ಭೀಮಾವತಾರದಲ್ಲಿ ದೇಹವನ್ನು ತ್ಯಜಿಸಿ ಸ್ವರ್ಗಾರೋಹಣ ಮಾಡಿದರೂ ಹನುಮದವತಾರದಲ್ಲೂ ಮಧ್ವಾವತಾರದಲ್ಲೂ ಚಿರಂಜೀವಿಗಳಾಗಿದ್ದೀರಿ) ಇಷ್ಟಕ್ಕೆಲ್ಲಾ ಮೂಲಕಾರಣವೇನೆಂದರೆ ವೈಕುಂಠಾದಿಸ್ಥಾನತ್ರಯನಿವಾಸಿಯಾದ ಶ್ರೀಮನ್ನಾರಾಯಣನ ಪರಮಾನುಗ್ರಹ ನಿಮ್ಮ ಮೇಲೆ ಪೂರ್ಣವಾಗಿದೆ.

ದೇಹದಲ್ಲಿರುವ ಒಂದು ರೋಮವೂ ತುಂಡಾಗಲಿಲ್ಲ. ಹೀಗಿರುವಾಗ ನಿಮ್ಮನ್ನು ಕೊಲ್ಲುವುದು ಹೇಗೆ ? (6) ಮತ್ತೆ ಕೆಲವರು ಅತಿ ಮೃದುವಾದ ನಿಮ್ಮ ಮೂಗಿನ ಅಗ್ರಭಾಗ ಮುಂತಾದ ಮರ್ಮಭಾಗಗಳಲ್ಲಿ ಗುದ್ದಿ ನಿಮ್ಮನ್ನು ಕೊಲ್ಲಲು ಯತ್ನಿಸಿದರು-ಅವರ ಕೈ ಮುರಿಯಿತೇ ಹೊರತು ನಿಮಗೆ ಯಾವ ವಿಕಾರವೂ ಏರ್ಪಡಲಿಲ್ಲ. (7) ಒಂದೊಂದು ಗ್ರಾಮಗಳಲ್ಲಿಯೂ ನಿಮ್ಮ ವಿಷಯದಲ್ಲಿ ನಾನಾ ವಿಧವಾದ ಅಪಪ್ರಚಾರಗಳನ್ನು ಮಾಡಿದರು. ನಿಮ್ಮ ಪುಸ್ತಕಗಳನ್ನು ಕದ್ದರು. ಒಂದೊಂದು ಗ್ರಾಮಗಳಿಗೂ ಹೋಗಿ ಅಲ್ಲಿ ನಿಮಗೆ ಏರ್ಪಡಿಸಿರುವ ಸತ್ಕಾರ ಕೂಟಗಳನ್ನು ಸಾಮ ದಾನ ಭೇದ ದಂಡ ಎಂಬ ನಾಲ್ಕು ಉಪಾಯಗಳಿಂದಲೂ ತಡೆದರು. ಇಂತಹ ಅಸಂಖ್ಯ ಹಿಂಸೆಗಳನ್ನು ಮಾಡಿದರು. ಆದರೆ ಇವುಗಳಿಂದ.... ನಿಮಗೆ ಮನಸ್ಸಿನಲ್ಲಿ ಭಯ ಮುಂತಾದ ವಿಕಾರಗಳಾಗಲಿ ಮಾತಿನಲ್ಲಿ ಶರಣಾಗತಿ ಸೂಚಕವಾದ....ವಿಕಾರಗಳಾಗಲಿ ದೇಹದಲ್ಲಿ ನಡುಕ ಮುಂತಾದ ವಿಕಾರಗಳಾಗಲಿ [ಏರ್ಪಡಲಿಲ್ಲ].

ಆದ್ದರಿಂದಲೇ ಸ್ಥಾವರ-ಜಂಗಮಾತ್ಮಕವಾದ ಸಕಲ ಜಗತ್ತೂ ನಿಮ್ಮ ಅಧೀನವಾಗಿದೆ—ಹೇಗೆಂದರೆ, ನೀವಿದ್ದರೆ ಮಾತ್ರ ಅವರ ಚೈತನ್ಯ, ನೀವು ಹೊರಟುಹೋದರೆ ಎಲ್ಲವೂ ನಿರ್ಜೀವ ಶವ. ಬರೀ ಪ್ರಾಣಿಜಾತ ಮಾತ್ರವಲ್ಲ, ದೇವೋತ್ತಮರೆನಿಸಿಕೊಂಡ ರುದ್ರೇಂದ್ರಾದಿಗಳೂ ಜೀವೋತ್ತಮರಾದ ನಿಮ್ಮ ಕಿಂಕರರು-ಅನುಗ್ರಹಾಕಾಂಕ್ಷಿಗಳು. ಹೀಗಿರುವುದರಿಂದ ನೀವು ಮೂಲ-ರೂಪದಿಂದಲೂ ಅವತಾರತ್ರಯದಿಂದಲೂ ಸಜ್ಜನರನ್ನು ಉದ್ಧಾರಮಾಡಿದ್ದೀರಿ, ಅವರಿಗೆ ಇಹ-ಪರಗಳೆರಡರಲ್ಲೂ ಸುಖಪಡಿಸಿದ್ದೀರೆಂಬ ವಿಷಯದಲ್ಲಿ ಆಶ್ಚರ್ಯ-ವೇನಿದೆ? ನಿಮ್ಮ ಅಪಾರ ಮಹಿಮೆಯ ಮುಂದೆ ಅದೇನು ಅತಿಶಯವಲ್ಲವೆಂದು ಭಾವ.

341. ವಿಶೇಷ ವಿಚಾರ—ಕ) ಈ ಶ್ಲೋಕದಲ್ಲಿ ವಾಯುದೇವರಿಗೆ 'ಕಿಂಕರಾಃ ಶಂಕರಾದ್ಯಾಃ' ಎಂದು ಹೇಳಿದ್ದಕ್ಕೆ ಆಧಾರವಾಗಿ ಕಕ, ಛ, ಪುರಾ, ಈ ಪ್ರಮಾಣವನ್ನು ತೋರಿಸುತ್ತಾರೆ—"ಬಲಮಿಂದ್ರಸ್ಯ ಗಿರಿಶೋ ಗಿರಿಶಸ್ಯ ಬಲಂ ಮರುತ್ । ಬಲಂ ತಸ್ಯ ಹರಿಃ ಸಾಕ್ಷಾ-ನ್ನ ಹರೇರ್ಬಲಮನ್ಯತಃ" ದೇವೇಂದ್ರನಿಗಿಂತ ರುದ್ರ ಬಲಿಷ್ಠ, ರುದ್ರನಿಗಿಂತಲೂ ವಾಯು ಬಲಿಷ್ಠ, ಅವನಿಗಿಂತ ಶ್ರೀಹರಿ ಅನಂತಗುಣ ಬಲಿಷ್ಠ. ಅವನಿಗಿಂತ ಬಲಿಷ್ಠ ಬೇರೆ ಯಾರೂ ಇಲ್ಲ. (ಇದನ್ನು ತಾ. ನಿ. ೨/೧೬೨ ದಲ್ಲಿ ಉದಹರಿಸಿದ್ದಾರೆ). 'ಪ್ರಾಣಸ್ಯೈತದ್ವಶೇ ಸರ್ವಂ ಪ್ರಾಣೋ ಯಸ್ಯ ವಶೇ ಸ್ಥಿತಃ । ನ ಪರಃ ಕಿಂಚಿದಾಶ್ರಿತ್ಯ ವರ್ತತೇ ಪರಮೋ ಯತಃ ॥' ಈ ಸಕಲ ಜಗತ್ತೂ ಪ್ರಾಣದೇವರ ಅಧೀನದಲ್ಲಿದೆ. ಆ ಪ್ರಾಣನು ಶ್ರೀಹರಿಯ ವಶ. ಶ್ರೀಹರಿ ಯಾರ ವಶದಲ್ಲೂ ಇಲ್ಲ. 'ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃಶ್ರೇಷ್ಠೋ ದಿವಾಕರಃ । ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥' ಯಜ್ಞಗಳಲ್ಲೆಲ್ಲಾ ಅಶ್ವಮೇಧ ಶ್ರೇಷ್ಠ, ಜ್ಯೋತಿಗಳಲ್ಲಿ ಸೂರ್ಯನೂ, ಮನುಷ್ಯರಲ್ಲಿ ಬ್ರಾಹ್ಮಣನೂ ಶ್ರೇಷ್ಠನಾಗಿರುವಂತೆ ದೇವತೆಗಳಲ್ಲೆಲ್ಲಾ ವಾಯು ಸರ್ವೋತ್ತಮ—ಎಂಬ ವಾಕ್ಯಗಳನ್ನೂ ಹೇಳಬಹುದು. ಅಣುಭಾಷ್ಯದಲ್ಲಿ 'ಮುಖ್ಯಪ್ರಾಣವಶೇ ಸರ್ವಂ ಸ ವಿಷ್ಣೋರ್ವಶಗಃ ಸದಾ ॥' 'ಸಕಲ ಜಗತ್ತೂ ಮುಖ್ಯಪ್ರಾಣನ ಅಧೀನ,

ಅವನು ಸದಾ ವಿಷ್ಣುವಿನ ಅಧೀನ' ಎಂದು ಹೇಳಿದೆ. ಇದಲ್ಲದೆ ಬ್ರಹ್ಮಸೂತ್ರ-ಗಳಲ್ಲೂ ಭಾಗವತದಲ್ಲೂ ಉಪನಿಷತ್ತುಗಳಲ್ಲೂ ಪ್ರಾಣದೇವರ ಸರ್ವಶಕ್ತಿತ್ವ ರುದ್ರಾದ್ಯುತ್ತಮತ್ವಾದಿ ಗುಣಗಳ ವರ್ಣನೆ ಯಥೇಷ್ಟವಾಗಿ ಬಂದಿದೆ. ದಿಗ್ದರ್ಶನಾರ್ಥ ಒಂದೆರಡು ವಿಚಾರಗಳನ್ನು ಹೇಳಬಹುದು.

(ಖ) ವಾಯುದೇವರು ಪ್ರಾಣಕ್ಕೆ ನಿಯಾಮಕರು—ಸಕಲ ಪ್ರಾಣಿಗಳ ದೇಹದಲ್ಲೂ ಕಣ್ಣು, ಕಿವಿ, ಮೂಗು ಇತ್ಯಾದಿ ಇಂದ್ರಿಯಗಳ ಅಭಿಮಾನಿಗಳಾಗಿ ಅಗ್ನಿ ಸೂರ್ಯೇಂದ್ರಾದಿ ದೇವತೆಗಳು ಇದ್ದಾರೆ. ಈ ವಿದ್ಯೆಗೆ ಅಧ್ಯಾತ್ಮವಿದ್ಯೆಯೆಂದು ಹೆಸರು. ಅವರ ಶ್ರೇಷ್ಠತ್ವದ ವಿಚಾರಕ್ಕೆ ಅಧಿದೈವ ಎಂದು ಹೆಸರು. ಈ ಸಕಲೇಂದ್ರಿಯಾಭಿಮಾನಿಗಳಿಗೂ ಮುಖ್ಯನಾಯಕ ಪ್ರಾಣದೇವರೇ. ಇಂದ್ರಿಯಾಭಿಮಾನಿಗಳೆಲ್ಲಾ ಅಧ್ಯಾತ್ಮದಲ್ಲೂ ಅಧಿದೈವ-ದಲ್ಲೂ ವಾಯುದೇವರೊಡನೆ ಸ್ಪರ್ಧಿಸಿ ಸೋತ ಆಖ್ಯಾಯಿಕೆಗಳು ಐತರೇಯ, ಬೃಹದಾರಣ್ಯ, ಛಾಂದೋಗ್ಯ, ಷಟ್ಪ್ರಶ್ನ ಉಪನಿಷತ್ತುಗಳಲ್ಲೆಲ್ಲಾ ಬಂದಿದೆ. ಅವನ್ನೆಲ್ಲಾ ಸಂಗ್ರಹಿಸಿ ಶ್ರೀ ಶ್ರೀಪಾದರಾಯರು 'ಮಧ್ವನಾಮ'ದಲ್ಲಿ ಸಂಕ್ಷೇಪ ವಾಗಿ ಹೀಗೆ ಹೇಳಿದ್ದಾರೆ—

ಕರಣಾಭಿಮಾನಿಗಳು ದೇಹವ ಬಿಡಲು
ಕುರುಡ ಕಿವುಡಾ ಮೂಕನೆಂದೆನಿಪರು ।
ಪರಮ ಮುಖ್ಯಪ್ರಾಣ ತೊಲಗಲಾ ದೇಹವನು
ಅರಿತು ಪೆಣನೆಂದು ಪೇಳ್ವರು ಬುಧಜನ ॥

(ತಾತ್ಪರ್ಯ) ಕಣ್ಣು, ಕಿವಿ, ಬಾಯಿ, ಮೊದಲಾದ ಇಂದ್ರಿಯಾಭಿ-ಮಾನಿಗಳು ದೇಹವನ್ನು ಬಿಟ್ಟುಹೋದರೆ ಅವನನ್ನು ಕುರುಡ ಕಿವುಡ ಮೂಕ ಎಂದು ಹೇಳುತ್ತಾರೆ. ಆದರೆ ಮುಖ್ಯಪ್ರಾಣನೇ ಬಿಟ್ಟುಹೋದರೆ ಆ ದೇಹವನ್ನು 'ಹೆಣ' (ಶವ) ಎಂದು ಕರೆಯುತ್ತಾರೆ.

ಈ ಪ್ರಕಾರ ಪ್ರಾಣದೇವರೇ ಎಲ್ಲರಿಗಿಂತ ಶ್ರೇಷ್ಠರೆಂಬುದು ನಿರ್ಣಯ-ವಾದ್ದರಿಂದ ವಾಯುದೇವರಿಗೆ 'ಉಕ್ಥ' ಎಂದು ಹೆಸರೆಂದೂ, ಮಿಕ್ಕ ದೇವತೆ-ಗಳೆಲ್ಲ ಅದನ್ನು ಒಪ್ಪಿಗೊಂಡು ಪ್ರಾಣದೇವರ ಶರಣಾಗತರಾದರೆಂದೂ

ಐತರೇಯೋಪನಿಷತ್ತಿನಲ್ಲಿ (೨ಪ್ರ. ೧ಅ. ೪ಖಂ) ಹೇಳಿದೆ. ಆ ಭಾಗ ತಿಳಿಸುವ ಭಾಷ್ಯೋದಾಹೃತ ಪ್ರಮಾಣವಾಕ್ಯಗಳು ಹೀಗಿವೆ—

ಉಚ್ಚೈಃ ಸ್ಥಿತತ್ವಾದುಕ್ಥೋಽಭೂತ್ ವಾಯುರೇವ ತತಃ ಪ್ರಭುಃ ।
....ತ್ವಮುಚ್ಚೋಽಸೀತಿ ತೇಽಬ್ರುವನ್ ।
ಭೃತ್ಯಾವಯಂತವೈವ ಸ್ಮ ತ್ವಮಸ್ಮಾಕಂ ಪತಿಃ ಸದಾ ।
....ಇತ್ಯೂಚುರ್ವೀಂದ್ರ ಶೇಷೇಶ-ಶಕ್ರ-ಚಂದ್ರಾದಿಕಾಃ ಪೃಥಕ್ ॥

(ಅರ್ಥ) ಆ ವಾಯುದೇವರು ಎಲ್ಲರಿಗಿಂತಲೂ ಶ್ರೇಷ್ಠರೆಂದು ಸಿದ್ಧವಾದ್ದರಿಂದ ಅವರು 'ಉಕ್ಥ'–ಶ್ರೇಷ್ಠ ಎನಿಸಿಕೊಂಡರು. ಮಿಕ್ಕ ಇಂದ್ರಿಯಾಭಿಮಾನಿಗಳಾದ ಗರುಡ ಶೇಷ ರುದ್ರ ಇಂದ್ರ ಚಂದ್ರಾದಿ ದೇವತೆಗಳು ಆ ಮುಖ್ಯಪ್ರಾಣನಿಗೆ "ನೀವೇ ನಮ್ಮೆಲ್ಲರಿಗಿಂತ ಶ್ರೇಷ್ಠರು. ನಾವೆಲ್ಲ ನಿಮ್ಮ ಭೃತ್ಯರು. ನೀವು ನಮ್ಮ ಒಡೆಯರು" ಎಂದು ಬಿನ್ನವಿಸಿಕೊಂಡರು. (ಇದು ಐತರೇಯದ ಆಖ್ಯಾಯಿಕೆ).

ಗ) ಬೃಹದಾರಣ್ಯಕದ ಆಖ್ಯಾಯಿಕೆ—ಬೃಹದಾರಣ್ಯಕೋಪನಿಷತ್ತಿನಲ್ಲಿ (೩ಅ, ೭ಬ್ರಾ) ಅಗ್ನ್ಯಾದಿತ್ಯ ಇಂದ್ರ ಚಂದ್ರ ರುದ್ರಾದಿ ಎಲ್ಲ ದೇವತೆಗಳು ಪ್ರಾಣದೇವರೊಡನೆ ಅಧ್ಯಾತ್ಮದಲ್ಲೂ ಅಧಿದೈವದಲ್ಲೂ ಸ್ಪರ್ಧಿಸಿ ವಾಯುದೇವರೇ ಶ್ರೇಷ್ಠರೆಂಬ ನಿರ್ಣಯಕ್ಕೆ ಬಂದುದನ್ನು 'ಉತ್ತಮಃ ಸರ್ವಜೀವೇಷು ಪ್ರಾಣ ಏವ ಹರೇರನು' 'ಶ್ರೀಹರಿಯನ್ನು ಬಿಟ್ಟರೆ ಮುಖ್ಯಪ್ರಾಣನೇ ಸಕಲ ಜೀವರಲ್ಲೂ ಉತ್ತಮ' ಎಂಬ ಭಾಷ್ಯವಾಕ್ಯ ತಿಳಿಸುತ್ತದೆ. ಏಕೆಂದರೆ ರುದ್ರಾದಿಗಳೆಲ್ಲ ಒಂದೊಂದು ಕ್ರಿಯೆಗೆ(ಇಂದ್ರಿಯಕ್ಕೆ) ಅಭಿಮಾನಿಗಳಾದರೆ ಪ್ರಾಣನು ಇಡೀ ಪ್ರಾಣಕ್ಕೇ ನಿಯಾಮಕ—'ವಾಯುಃ ಪ್ರಾಣ ಇತಿ ಪ್ರೋಕ್ತೋ ಯೇನ ಸರ್ವಂ ನಿಯಮ್ಯತೇ ।' ವಾಯು ಇಡೀ ದೇಹದ ಸಕಲ ಕ್ರಿಯೆಗಳಿಗೂ ಮುಖ್ಯನಿಯಾಮಕರಾದ್ದರಿಂದ ಅವರಿಗೆ 'ಪ್ರಾಣ' (ಪ್ರ + (ಅನ್–ಪ್ರೇರಿಸು, ಚೈತನ್ಯಕೊಡು)–ಚೇತನವುಂಟುಮಾಡುವವರು ಎಂದು ಹೆಸರು. ಪ್ರಾಣದೇವರು ದೇಹದ ಇಂದ್ರಿಯಗಳಿಗೆ ಮಾತ್ರ ಪ್ರವರ್ತಕರಲ್ಲ, ಪ್ರತ್ಯುತ ಧರ್ಮಕಾರ್ಯದಲ್ಲೂ ಜ್ಞಾನದಲ್ಲೂ ಪ್ರವರ್ತಕರಾಗಿ ಮೋಕ್ಷವನ್ನು ಕೊಡಿಸುವವರೂ ಅವರೇ—'ಸರ್ವಪ್ರವರ್ತಕೋ

ವಾಯು—ಜ್ಞಾನಮೋಕ್ಷಪ್ರದಃ ಸದಾ ॥' (ಸರ್ವ ಎಂದರೆ ರುದ್ರಾದಿ ಸರ್ವರಿಗೂ ಸರ್ವ ಕಾರ್ಯಗಳಿಗೂ ಪ್ರವರ್ತಕರು ಎಂದರ್ಥ)—ಎಂದು ನಾರಾಯಣ ಶ್ರುತಿಯಲ್ಲಿ ಹೇಳಿದೆ.

ಘ) ಸ್ವಚ್ಛಂದ ಮೃತ್ಯುಃ—ಎಂಬುದಕ್ಕೂ ಮೇಲೆ ಹೇಳಿದ ನಾರಾಯಣಶ್ರುತಿಯೇ ವಿವರಣೆ ಕೊಡುತ್ತದೆ (ಬೃಹದ್ಭಾಷ್ಯ ೩/೬/೨೩). ಆ ಶ್ರುತಿಯೇ ಮೃತ್ಯುಶಬ್ದಾರ್ಥವನ್ನು ಹೀಗೆ ವಿವರಿಸುತ್ತದೆ—

ಶ್ರಮಾತ್ ಪಾಪಾತ್ಮಕೋ ಮೃತ್ಯುಃ ಭಗವತ್ಕರ್ಮವರ್ಜನಾತ್ ।

ಹೆಚ್ಚು ಶ್ರಮವಾದರೆ ಆಯಾಸವಾಗಿ ಭಗವತ್ಕರ್ಮವನ್ನು ಬಿಟ್ಟುಬಿಡುವ ಪಾಪಕ್ಕೇ ಮೃತ್ಯು ಎಂದು ಹೆಸರು ಈ ಮೃತ್ಯುವು (ಆಯಾಸವು)

'ಅನ್ಯಾನ್ ದೇವಾನವಾಪಾಶು ನೈವಂ ವಾಯುಂ ಕದಾಚನ ॥'

ಮಿಕ್ಕ ರುದ್ರಾದಿದೇವತೆಗಳೆಲ್ಲರನ್ನೂ ಪೀಡಿಸಿತು, ವಾಯುದೇವರನ್ನು ಮಾತ್ರ ಎಂದಿಗೂ ಸಮೀಪಿಸುವುದಿಲ್ಲ. ಎಂದರೆ ಪ್ರಾಣದೇವರಿಗೆ ಶ್ರಮವೂ ಇಲ್ಲ, ಭಗವತ್ಕರ್ಮ ಬಿಡುವ ಪ್ರಸಂಗವೂ ಇಲ್ಲ. ಆದಕಾರಣ

ತೇ ಜ್ಞಾನಂ ವಾಯುಮೇವೈಚ್ಛಂತ ಶ್ರೇಷ್ಠೋಽಯಮಿತಿ ನಿಶ್ಚಿತಾಃ ।
ತಂ ಜ್ಞಾತ್ವಾ ತೇನ ಚಾವಿಷ್ಟಾಸ್ತದ್ಭೃತ್ಯತ್ವಮುಪಾಗತಾಃ ॥

ಅವರೆಲ್ಲ 'ಈ ವಾಯುವೇ ಎಲ್ಲರಿಗಿಂತ ಶ್ರೇಷ್ಠನೆ'ಂದು ನಿಶ್ಚಯಿಸಿ-ಕೊಂಡು ಆ ಜ್ಞಾನಿಯಾದ ವಾಯುದೇವರನ್ನು ಅಪೇಕ್ಷಿಸಿದರು. ಆಮೇಲೆ ಅವರನ್ನು ಅರಿತುಕೊಂಡು ಅವರಿಂದ ಆವಿಷ್ಟರಾಗಿ ಅವರ ಭೃತ್ಯರಾದರು.

ಙ) ವಾಯುದೇವರಿಗೆ ಮೃತ್ಯುವಿಲ್ಲ—ಅದೇ ಬೃಹದಾರಣ್ಯ-ಕೋಪನಿಷತ್ತಿನಲ್ಲಿ (೩ಅ. ೩ಬ್ರಾ) ಆ ವಾಯುದೇವರಿಂದ ಮೃತ್ಯುವೆಂಬ ಪಾಪಪುಂಜವು ದೂರವಾಗಿರುವುದರಿಂದ ಅವರಿಗೆ ದೂಃ ಎಂದು ಹೆಸರೆಂದೂ (ಸಾ ವಾ ಏಷಾ ದೇವತಾ ದೂರ್ನಾಮ, ದೂರಗ್ಂ ಹ್ಯಸ್ಯಾ ಮೃತ್ಯುಃ) ದಿಗ್ದೇವತೆಗಳಾದ ಇಂದ್ರಾಗ್ನ್ಯಾದಿ ದೇವತೆಗಳನ್ನು ಪಾಪರೂಪ ಮೃತ್ಯುವಿನಿಂದ ಪಾರುಮಾಡಿಸಿ ಅವರವರ ಸ್ಥಾನದಲ್ಲಿಟ್ಟರೆಂದೂ (೩/೩/೯–೧೬ಖಂ.) ಈ ವಿಚಾರವನ್ನು ತಿಳಿದವನು ಪಾಪಗಳಿಂದಲೂ ಶತ್ರುಗಳಿಂದಲೂ ಮುಕ್ತ-ನಾಗುತ್ತಾನೆಂದೂ ಹೇಳಿದೆ. ಅವೇ ಉಪನಿಷತ್ತಿನಲ್ಲೇ ಸ್ವಲ್ಪ ಹಿಂದೆ

(೨ನೇ ಬ್ರಾ, ೮ ಖಂ.) 'ಪುನರ್ಮೃತ್ಯುರ್ಮೃತಿಃ ಸ್ಮೃತಾ' (ಭಾಷ್ಯ) ಮರಣಕ್ಕೆ ಪುನರ್ಮೃತ್ಯು ಎಂದು ಹೆಸರು ಎಂದು ಹೇಳಿ ಬ್ರಹ್ಮ-ವಾಯುಗಳು 'ಅಪಪುನರ್ಮೃತ್ಯುಂಜಯತಿ, ನೈನಂ ಮೃತ್ಯುರಾಪ್ನೋತಿ, ಮೃತ್ಯುರಸ್ಯಾತ್ಮಾ ಭವತಿ' ಎಂದು ಉಪಸಂಹಾರಮಾಡಲಾಗಿದೆ. ಇದರ ಅರ್ಥ (ಭಾಷ್ಯರೀತ್ಯಾ)— ಬ್ರಹ್ಮನೂ ವಾಯುವೂ ಅವಿಚ್ಛಿನ್ನವಾಗಿ ಶ್ರೀಹರಿಯನ್ನು ಸೇವಿಸುವುದರಿಂದ ಇವರ ಬಳಿಗೆ ಮೃತ್ಯುವು ಬರುವುದೇ ಇಲ್ಲ. ಮೃತ್ಯುವಿಗೇ ಮೃತ್ಯುಸ್ವರೂಪನಾದ ನರಸಿಂಹದೇವರೇ ಇವರಿಗೆ ಸ್ವಾಮಿಯಾದ್ದರಿಂದಲೂ ಇವರು ಸದಾ ಆ ನರಸಿಂಹನ ಧ್ಯಾನ ಮಾಡುತ್ತಿರುವುದರಿಂದಲೂ ಆ ನರಸಿಂಹನ ಅನುಗ್ರಹದಿಂದ ಬ್ರಹ್ಮನೂ (ವಾಯುವೂ) ಮೃತ್ಯುವನ್ನು ಜಯಿಸಿದ್ದಾರೆಂದು ಹೇಳಿದೆ.

ಚ) ಅಸುರಾವೇಶವಿಲ್ಲ—ರುದ್ರಾದಿ ಸಕಲ ದೇವತೆಗಳಿಗೂ ಅಸುರಾವೇಶವಿರುವುದರಿಂದ ಕಿಂಚಿತ್ ಅಜ್ಞಾನ ದುಃಖಾದಿಗಳೂ ಬರುತ್ತವೆಯೆಂದು ಏಕಾದಶಸ್ಕಂಧ ತಾತ್ಪರ್ಯದಲ್ಲಿದೆ (೨ ಅ. ೪೯ ಶ್ಲೋ.)—

ತೇಷಾಂ ದುಃಖಾದಿಕಂ ಕಿಂಚಿ—ದಸುರಾವೇಶತೋ ಭವೇತ್ ॥

ಆದರೆ ವಾಯುದೇವರಿಗೆ ಈ ಅಸುರಾವೇಶವೇ ಇಲ್ಲ, ಆದ್ದರಿಂದ ಅವರಿಗೆ ಅಜ್ಞಾನ, ದುಃಖ ಶ್ರಮ ತಾಪಾದಿಗಳು ಯಾವುವೂ ಇಲ್ಲ—

"ಪ್ರಾಣಸ್ಯ ನಾಸುರಾವೇಶಃ ಆಖಣಾಶ್ಮಸಮೋ ಹಿ ಸಃ ।
ಸಂಪೂರ್ಣಾನುಗ್ರಹಾದ್ ವಿಷ್ಣೋಃ ಪ್ರಾಣಃ ಪೂರ್ಣಗುಣೋ ಮತಃ ॥"
ಇತಿ ಬ್ರಹ್ಮತರ್ಕೇ　　(ಭಾಗ. ತಾ. ೧೧/೨/೪೯).

ಪ್ರಾಣದೇವರಿಗೆ ವಿಷ್ಣುವಿನ ಪೂರ್ಣಾನುಗ್ರಹವಿರುವುದರಿಂದ ಅಸುರಾವೇಶವಿಲ್ಲ, ಅವರು ಬಂಡೆಗಲ್ಲಿದ್ದಂತೆ ಅಭೇದ್ಯರು. ಅವರು ಪೂರ್ಣಗುಣರು. ಬೃಹದಾರಣ್ಯಕ ಮತ್ತು ಛಾಂದೋಗ್ಯ ಉಪನಿಷತ್ತುಗಳಲ್ಲಿ ಪ್ರಾಣದೇವರನ್ನು ಹಿಂಸಿಸಲು ಬಂದ ದೈತ್ಯರು, ಕಲ್ಲಿಗೆ ತಗಲಿದ ಮಣ್ಣುಹೆಂಟೆಗಳಂತೆ, ತಾವೇ ನಾಶವಾದರೆಂದು ವರ್ಣಿಸಿದೆ—'ಯಥಾಶ್ಮಾನಮೃತ್ವಾ ಲೋಷ್ಟೋ ವಿಧ್ವಗ್ಂಸತೈವಗ್ಂ ಹೈವ ವಿಧ್ವಗ್ಂಸಮಾನಾ ವಿಶ್ವಂಚೋ ವಿನೇಶುಃ' (ಬೃ.ಉ. ೩/೨/೭) ಅಶ್ಮಾನಂ-ಕಲ್ಲನ್ನು, ಋತ್ವಾ-ತಗಲಿ, ಹೊಡೆದು, ಲೋಷ್ಟ-ಮಣ್ಣು ಹೆಂಟೆ, ವಿಧ್ವಂಸತ-ಚೂರುಚೂರಾಗುತ್ತದೆ, ವಿಶ್ವಂಚ-ಸರ್ವರೂ)

ಕಲ್ಲಿಗೆ ತಗಲಿದ ಮಣ್ಣುಹೆಂಟೆ ಹೇಗೆ ಚೂರುಚೂರಾಗುವುದೋ ಹಾಗೆ ಈ ದೈತ್ಯರೂ ಪ್ರಾಣನ ಮೇಲೆ ಬಿದ್ದು ತಾವೇ ಎಲ್ಲರೂ ನಾಶವಾಗಿಹೋದರು. ಅಸುರಾವೇಶವೇ ಇಲ್ಲದ ಕಾರಣ ಅವರಿಗೆ ಅಜ್ಞಾನಾದಿ ದೋಷಗಳೂ ಇಲ್ಲ. ಈ ವಿಷಯವನ್ನು ಶ್ರೀಮನ್ಮಂತ್ರಾಲಯದ ರಾಯರು ಪ್ರಾತಃಸಂಕಲ್ಪಗದ್ಯದಲ್ಲಿ ಶ್ರೀಮದಾಚಾರ್ಯರನ್ನು ಸ್ತುತಿಸುತ್ತಾ i) ಸದಾ ಭಗವತ್ಪರಾಣಾಂ, ii) ಭಗವತೋನ್ಯತ್ರ ಸರ್ವವಸ್ತುಷು ಮನಃ ಸಂಗರಹಿತಾನಾಂ–ಭಗವಂತ-ನಲ್ಲಲ್ಲದೆ ಬೇರೆ ಕಡೆ ಮನಃ ಪ್ರವೃತ್ತಿಯೇ ಇಲ್ಲದ; iii) ಅಭಿಮಾನಾದಿ ಸರ್ವದೋಷದೂರರೂಣಾಂ, iv) ಅತ ಏವ ವಿಲೀನಾಶೇಷಪ್ರಕೃತಿಬಂಧಾನಾಂ–ಆದ್ದರಿಂದಲೇ ನಿದ್ದೆ ಆಯಾಸ ದುಃಖಾದಿ ಸಮಸ್ತ ಪ್ರಕೃತಿಬಂಧನಗಳು ಯಾವುವೂ ಇಲ್ಲದ, v) ಅತ ಏವ ದೂರೋತ್ಸಾರಿತ-ಅಶೇಷಾನಿಷ್ಟಾನಾಂ–ಆದ್ದರಿಂದಲೇ ಸಕಲ ಅನಿಷ್ಟಗಳನ್ನೂ ಹತ್ತಿರಕ್ಕೆ ಬರದಂತೆ ಓಡಿಸಿದಂಥಾ— ಎಂದೂ, ಪ್ರಾಣದೇವರನ್ನು ಸ್ತುತಿಸುತ್ತಾ i) ಸರ್ವಸ್ವಾಮಿನಾ, ii) ಸರ್ವಪ್ರೇರಕೇಣ, iii) ಸರ್ವತಾತ್ವಿಕದೇವತಾಪ್ರೇರಕೇಣ iv) ಸರ್ವ ತಾತ್ವಿಕ ಅಸುರಭಂಜಕೇನ, v) ತಥಾ ತತ್ಪ್ರೇರಣಾಪ್ರಯುಕ್ತ–ಅಶೇಷ ದುರ್ಮತಭಂಜಕೇನ (ಇದನ್ನೇ 'ತದ್ವ್ಯಾಖ್ಯಾಭಾಸ....ಧರೋಗ್ನಿಃ' ಎಂದು ಹೇಳಿದರು)....vi) ಪ್ರತಿದಿನಂ ಪ್ರತಿಕ್ಷಣಂ ಬುದ್ಧಿಶೋಧಕೇನ (ಶ್ಲೋ ೧೭–ಅಹರಹರಹಿತಂ ನಿರ್ದಹನ್ ದೇಹಭಾಜಾಂ); vii) ಸರ್ವಕರ್ಮಕರ್ತ್ರಾ, viii) ಸರ್ವಕರ್ಮಕಾರಯಿತ್ರಾ (ಸರ್ವಕರ್ಮವನ್ನೂ ಮಾಡಿಸುವ, ಮಾಡುವಂತೆ ಪ್ರೇರಿಸುವ) ix) ಸರ್ವಕರ್ಮಸ್ವಾಮಿನಾ,.... x) ಸರ್ವಕರ್ಮ ಶುದ್ಧಿಪ್ರದೇನ, ix) ಸರ್ವಕರ್ಮಸಿದ್ಧಿಪ್ರದೇನ,....xii) ಸರ್ವಕರ್ಮ ಸಾಕ್ಷಿಣಾ,....xiii) ಸರ್ವದೋಷದೂರೇಣ, xiv) ತ್ವಚ್ಚಿತ್ತಾಭಿಜ್ಞೇನ (ನಿನ್ನ ಎಂದರೆ ಭಗವಂತನ ಚಿತ್ತವನ್ನು ಚೆನ್ನಾಗಿ ಅರಿತ), xv) ತ್ವಚ್ಚಿತ್ತಾನು-ಸಾರ ಚಿತ್ತೇನ–ನಿನ್ನ ಎಂದರೆ ಶ್ರೀಹರಿಯ ಚಿತ್ತದಂತೆಯೇ ಚಿತ್ತವಿರುವ (ಅವನ ಚಿತ್ತಕ್ಕೆ ಕಿಂಚಿತ್ತೂ ವಿರೋಧವಿಲ್ಲದ ಚಿತ್ತವುಳ್ಳ), xvi) ತ್ವತ್ಪರ-ಮಾನುಗ್ರಹಪಾತ್ರಭೂತೇನ, ... ಎಂದೂ ಸ್ತುತಿಸಿದ್ದಾರೆ. ಇವೆಲ್ಲವೂ ರುದ್ರಾದಿಗಳಿಗಿಂತ ಪ್ರಾಣದೇವರು ಶ್ರೇಷ್ಠರೆಂಬುದಕ್ಕೆ ಸಾಧಕವಾಗಿವೆ.

ಛ) ಯುಕ್ತಿಮಲ್ಲಿಕಾ ಶ್ರುತಿ ಸಮಾಖ್ಯೆಗಳು-1) ತ್ರಾತಾ ಯಸ್ಯ ತ್ರಿಧಾಮಾ ಎಂಬುದಕ್ಕೆ 'ಸಪೂರ್ವ್ಯಃ ಪವತೇ—' (ಋ ೯/೭೭/೨) ಎಂಬ ಋಙ್ಮಂತ್ರದ 'ಶ್ಯೇನೋ ಮಥಾಯತ್' ಎಂಬುದು ಸಮಾಖ್ಯೆ. ಇದನ್ನು ಹಿಂದೆ ಖಂಡ 333-ಕ ದಲ್ಲಿ ವಿವರಿಸಿದೆ. 2) ಸ್ವಚ್ಛಃ ಸ್ವಚ್ಛಂದವೃತ್ಯಃ ಎಂಬುದು ಅಜೀತಯೋಽಹತಯೋ-' (ಋ ೯/೯೬/೪) ಎಂಬ ಮಂತ್ರದ ವಿವರಣೆ (ಖಂಡ 253 ಥ ನೋಡಿ ; ಋಕ್ಕಿನ ಅರ್ಥ-70 ಡ-ಖಂಡದಲ್ಲಿ ಕೊಟ್ಟಿದೆ. 3) ಜಗದುತ ವಶಗಂ ಎಂಬುದು 'ವಿಷ್ಟಂಭೋ ದಿವ—' ಎಂಬ (ಋ. ೯/೮೯/೬) ಮಂತ್ರದ 'ವಿಶ್ವಾ ಉತ ಕ್ಷಿತಯೋ ಹಸ್ತೇ' ಎಂಬ ಅಂಶದ ವಿವರಣೆ. ಆ ಮಂತ್ರವನ್ನೂ ಆದರ ಅರ್ಥವನ್ನೂ ಕೆಳಗೆ ಕೊಟ್ಟಿದೆ.

ವಿಷ್ಟಂಭೋ ದಿವೋ ಧರುಣಃ ಪೃಥಿವ್ಯಾ

ವಿಶ್ವಾ ಉತ ಕ್ಷಿತಯೋ ಹಸ್ತೇ ಅಸ್ಯ ।

ಅಸತ್ತ ಉತ್ಸೋ ಗೃಣತೇ ನಿಯುತ್ವಾನ್

ಮಧ್ವೋ ಅಂಶುಃ ಪವತ ಇಂದ್ರಿಯಾಯ ॥　　(ಋ ೯/೮೯/೬)

(ಅನ್ವಯಾರ್ಥ) ಹೇ ಪವಮಾನ ! ದಿವಃ-ಸ್ವರ್ಗಲೋಕಕ್ಕೆ ; ವಿಷ್ಟಂಭಃ-ಆಧಾರಭೂತರಾದ ; ಪೃಥಿವ್ಯಾಃ-ಭೂಲೋಕಕ್ಕೆ; ಧರುಣಃ-ಧಾರಣಶೀಲರಾದ ಅಥವಾ ಸ್ವರ್ಗ-ಭೂಮಿ ಎಂಬ ಸಕಲ ಜಗತ್ತು ಮಿಥ್ಯಾ ಎಂದು ಹೇಳಿ ಎರಡೂ ಸುಳ್ಳೆಂದು ನಾಶಮಾಡಿದ್ದನ್ನು ಸತ್ಯವೆಂದು ಹೇಳಿ ಉದ್ಧಾರಮಾಡಿದ, ಅಥವಾ ಈ ಎರಡು ಲೋಕದಲ್ಲಿರುವ ಸಾಧುಗಳಿಗೆ ಗುರುಗಳಾಗಿ ಅವರನ್ನು ಸಂರಕ್ಷಣೆ ಮಾಡಿದ (ಇದರಿಂದ ಶ್ರೀಮದಾನಂದತೀರ್ಥ ತ್ರೈಲೋಕ್ಯಾಚಾರ್ಯ ಎಂಬ ೧ನೇ ಶ್ಲೋಕ ಭಾಗ ವ್ಯಾಖ್ಯಾತವಾಯಿತು) ; ಉತ್ಸಃ-(ಹರಿಸ್ತೋತ್ರ-ವನ್ನು ಮಾಡುವುದರಲ್ಲೂ ಕೇಳುವುದರಲ್ಲೂ) ಆಸಕ್ತರಾದ-ಉತ್ಸುಕರಾದ ; ನಿಯುತ್ವಾನ್ (ನಿ-ನಿತರಾಂ, ಯುತ್-ಯೋಗಃ, ತದ್ವಾನ್)-ಅತ್ಯಧಿಕವಾಗಿ

ಹರಿಯ ಯೋಗವುಳ್ಳ (ಇದನ್ನೇ ಮಂತ್ರಾಲಯದ ರಾಯರು ಸದಾ ಭಗವತ್ಪರಾಣಾಂ ಭಗವತೋऽನ್ಯತ್ರ ಮನಸ್ಸಂಗರಹಿತಾನಾಂ ಎಂದು ಪ್ರಾತಃ-ಸಂಕಲ್ಪಗದ್ಯದಲ್ಲಿ ವಿವರಿಸಿದ್ದಾರೆ.) ಹೇ ವಾಯುದೇವರೇ, (ಅಸತ್ತ ಉತ್ಸಃ ಎಂಬಲ್ಲಿ ಅಸತ್, ತೇ, ಉತ್ಸಃ ಎಂದು ಪದಚ್ಛೇದ) ತೇ-ನಿಮ್ಮ; ಅಂಶುಃ-ಅಂಶವಾದ (ಅಂಶ ಎಂದೇ ಹೇಳದೆ ಉಕಾರ ಸೇರಿಸಿ 'ಅಂಶು' ಎಂದು ಹೇಳಿದ್ದ-ರಿಂದ ಅಂಶಗಳಾದರೂ ಮೂಲರೂಪದ ಎಲ್ಲ ಗುಣಗಳೂ ಉಳ್ಳ ಅಂಶ ಎಂಬ ವಿಶೇಷಾರ್ಥ ಸೂಚಿತವಾಗಿದೆ); ಮಧ್ವಃ-ಮಧ್ವಾಚಾರ್ಯರು; ಅಸತ್-(ಸತ್-ಎಂದರೆ ಇರುವಂಥಾದ್ದು, ಅಸತ್-ಇಲ್ಲದಂಥಾದ್ದು) ದುರ್ಜನರಿಗೆ ತಿಳಿಯಲು ಅಶಕ್ಯವಾದ್ದರಿಂದ ಅಸಚ್ಛಬ್ದವಾಚ್ಯನಾದ ಪರಬ್ರಹ್ಮನನ್ನು; ಗೃಣತೇ-ತಾವೇ ಸ್ತೋತ್ರಮಾಡುತ್ತಾರೆ ಮತ್ತು, ಇಂದ್ರಿಯಾಯ-ಸಜ್ಜನರ ವಾಗಿಂದ್ರಿಯಕ್ಕೆ 'ಹರಿಸ್ತುತಿಯನ್ನು ಮಾಡೆ'ಂದು ಪ್ರೇರಿಸುವುದಕ್ಕೆ; ಪವತೇ-ದೇಶ-ದೇಶಾಂತರಗಳಲ್ಲಿ ಅಡ್ಡಾಡುತ್ತಾರೆ. ಅರ್ಥಾತ್ ಹರಿಸ್ತುತಿರೂಪಶ್ರುತಿ-ಪುರಾಣಪಂಚರಾತ್ರಾದಿಗಳನ್ನು ಉಪದೇಶಮಾಡಿ ಸಜ್ಜನರ ವಾಗಿಂದ್ರಿಯದಿಂದ ಶ್ರೀಹರಿಯನ್ನು ಸ್ತೋತ್ರಮಾಡಿಸುವುದಕ್ಕೆ ಎಲ್ಲಾ ಕಡೆಯೂ ಸಂಚರಿಸುತ್ತಾ-ರೆಂದು ಅರ್ಥ. (ಇದನ್ನೇ 'ರಚನಪಟುಮಥಾಪಾದ್ಯವಿದ್ಯಾಸಮುದ್ರ। ವಾಗ್ದೇವೀ ಸಾ ಸುವಿದ್ಯಾದ್ರವಿಣದ' (ಶ್ಲೋ. ೨೫) 'ಕೇಶವಾನಂದತೀರ್ಥ.... ಸ್ತುತಿಮಕೃತಹರೇಃ' (ಶ್ಲೋ. ೪೧) ಎಂದು ವಿವರಿಸಿದ್ದಾರೆ). ಆದ್ದರಿಂದಲೇ ಅಸ್ಯ-ಇವರಿಗೆ (ಮಧ್ವಾಚಾರ್ಯರಿಗೆ); ವಿಶ್ವಾಃ-ಸಮಸ್ತವಾದ; ಕ್ಷಿತಯಃ ಉತ-ಭೂಮಿಗಳೂ; ಹಸ್ತೇ-ಕರಗತವಾಗಿವೆ (ಸ್ವಾಧೀನವಾಗಿವೆ). ಸಕಲ ದೇಶಗಳಲ್ಲಿರುವ ಸಕಲ ಸಜ್ಜನರಿಗೂ ಇವರು ಗುರುಗಳಾದ್ದರಿಂದ ಎಲ್ಲರೂ ಇವರ ಅಧೀನರಾಗಿದ್ದಾರೆಂದು ಭಾವ. ಇದನ್ನೇ 'ಜಗದುತ ವಶಗಂ' ಎಂದು ವಾಯುಸ್ತುತಿಯಲ್ಲಿ (ಶ್ಲೋ. ೩೨) ಹೇಳಿದರು.

ಋಙ್ಮಂತ್ರದ ತಾತ್ಪರ್ಯ—ಹೇ ವಾಯುದೇವರೇ, ನೀವು ಮೂಲ ರೂಪದಿಂದ (ಕೂರ್ಮರೂಪದಿಂದ) ಸ್ವರ್ಗಲೋಕವನ್ನೂ ಭೂಲೋಕವನ್ನೂ ಧಾರಣಮಾಡಿದ್ದೀರಿ. (ವಾಯುಕೂರ್ಮರೂಪದ ವರ್ಣನೆ ಬೃಹದಾರಣ್ಯ-ಕೋಪನಿಷತ್ತಿನಲ್ಲಿ ೩ನೇ ಅಧ್ಯಾಯದ ಎರಡನೇ ಬ್ರಾಹ್ಮಣದ ಮೂರನೇ

ಖಂಡದಲ್ಲಿ ಬಂದಿದೆ.) ಅಲ್ಲಿರುವ ಸಕಲ ವೈಷ್ಣವರಿಗೂ ನೀವು ಗುರುಗಳಾಗಿ ತ್ರೈಲೋಕ್ಯಾಚಾರ್ಯರೆನಿಸಿಕೊಂಡಿದ್ದೀರಿ. ಕಲಿಯ ಪ್ರೇರಣೆಯಿಂದ ಅನೇಕ ದುರ್ವಾದಿಗಳು 'ಭೂಮಿ ಸ್ವರ್ಗ ಎಂಬ ಭೇದವೇ ಇಲ್ಲ, ಇಡೀ ಜಗತ್ತೇ ಮಿಥ್ಯಾ' ಎಂದು ವಾದಿಸಿ ಜಗತ್ತಿನ ಅಸ್ತಿತ್ವಕ್ಕೆ ಕುಠಾರಪ್ರಹಾರ ಮಾಡಿದ್ದ ಮಿಥ್ಯಾಸಿದ್ಧಾಂತವನ್ನು ಖಂಡಿಸಿ ಜಗತ್ತು ಸತ್ಯವೆಂದೂ ಭೂಮಿ ಸ್ವರ್ಗ ಎಲ್ಲವೂ ಪ್ರಾಮಾಣಿಕವೆಂದೂ ಮಧ್ವಾವತಾರಮಾಡಿ ಸ್ಥಾಪಿಸಿದಿರಿ. ನಿಮಗೆ ಸದಾ ಶ್ರೀಹರಿಯ ಸ್ತುತಿಯಲ್ಲೇ-ಸಂಕೀರ್ತನೆಯಲ್ಲೇ-ಆಸಕ್ತಿ-ಉತ್ಸಾಹ. ನಿಮ್ಮ ಮನಸ್ಸು ಸದಾ ಭಗವಂತನಲ್ಲೇ ಲೀನವಾಗಿದ್ದು ಬೇರೆ ಕಡೆ ಹೋಗುವುದೇ ಇಲ್ಲ. ಇಂಥಾ ನಿಮ್ಮ ತೃತೀಯಾವತಾರವೇ ಮಧ್ವಾಚಾರ್ಯರು. ಅವರು ನಿಮ್ಮ ಅಂಶವೇ ಆದರೂ ಮೂಲರೂಪದ ಬಲಜ್ಞಾನಾದಿ ಸಕಲ ಗುಣಗಳಿಂದಲೂ ವಿಶಿಷ್ಟರೇ (ಕೂಡಿದವರೇ) ಆಗಿದ್ದಾರೆ. ಈ ಮಧ್ವಾಚಾರ್ಯರು ಸಕಲಶಾಸ್ತ್ರಗಳನ್ನೂ ಮಥಿಸಿ ಶ್ರೀ ವಿಷ್ಣುವಿನ ಸರ್ವೋತ್ತಮತ್ವಾದಿ ಅನಂತಗುಣಗಳನ್ನು ಎತ್ತಿ ತೋರಿಸಿ ಸಜ್ಜನರಿಗೆ ಬೋಧಿಸಿ ಅವರೆಲ್ಲರೂ ಶ್ರೀಹರಿಯನ್ನು ಸ್ತುತಿಸುವಂತೆ ಪ್ರೇರಿಸುತ್ತಾ ದೇಶದೇಶದಲ್ಲೆಲ್ಲಾ ಸುತ್ತಿ ಪ್ರಚಾರಮಾಡಿದರು. ಆದಕಾರಣ ಸಮಸ್ತ ಜಗತ್ತೂ ಅವರಿಗೆ ಕರಗತವಾಗಿ ಅಧೀನವಾಗಿದೆ. ಹೀಗೆ ಈ ಶ್ರುತಿ 'ಜಗದುತವಶಗಂ' ಎಂಬುದಕ್ಕೆ ಸಮಾಖ್ಯೆಯಾಗಿದೆ.

4. ಕಿಂಕರಾಃ ಶಂಕರಾದ್ಯಾಃ ಎಂಬುದಕ್ಕೆ 'ದೇವಸ್ಯ ಭರ್ಗಃ ಸಹಸೋಯತೋಽಜನಿ' ಎಂಬ ಬಳಿತ್ಥಾಸೂಕ್ತದ (ಋ ೧/೧೪೧/೧) ಭಾಗವೂ ಪ್ರಮಾಣರೂಪವಾಗಿದೆ. ಇಲ್ಲಿ ಭರ್ಗಶಬ್ದ ಅಕಾರಾಂತವಾಗಿ ಶಿವವಾಚಕವಾಗಿದೆ. 'ಹರಃ ಸ್ಮರಹರೋ ಭರ್ಗಃ' ಎಂದು ಅಮರಾದಿ ಕೋಶಗಳು. ಯತಃ ಸಹಸಃ-ಯಾವ ಬಲರೂಪರಾದ ವಾಯುದೇವರಿಂದ, ಭರ್ಗಃ-ರುದ್ರದೇವರು, ಅಜನಿ-ಹುಟ್ಟಿದರೋ—ಎಂದರೆ ಶಿವನಿಗೆ ತಂದೆಯಾದ್ದರಿಂದ ಕಿಂಕರರೆಂಬುದು ಸಿದ್ಧವಾಗುತ್ತದೆ. ಅಲ್ಲದೆ ಬೃಹದ್ಭಾಷ್ಯದಲ್ಲಿ ಹೇಳಿರುವ (೩/೬/೨೪) ನಾರಾಯಣ ಶ್ರುತಿಯು 'ವಾಯೋರ್ದೇವಾ ಹಿ ಜಾಯಂತೇ ಲಯಮೇಷ್ಯಂತಿ ತತ್ರ ಚ'—ರುದ್ರಾದಿ ಸಕಲ ದೇವತೆಗಳೂ ವಾಯುದೇವರಿಂದಲೇ ಹುಟ್ಟುತ್ತಾರೆ ಮತ್ತು

ಕೊನೆಯಲ್ಲಿ ಅವನಲ್ಲೇ ಲಯವನ್ನೂ ಹೊಂದುತ್ತಾರೆ ಎಂದು ಹೇಳುತ್ತದೆ. ಬಳಿತ್ಥಾಸೂಕ್ತದ ೩ನೇ ಮಂತ್ರದಲ್ಲಿ 'ಈಶಾನಾಸಃ ಶವಸಾ ಕ್ರಂತ ಸೂರಯಃ' ಎಂದು ಹೇಳಿದೆ. ಇದಕ್ಕೆ ಈಶಾನಾಸಃ-ರುದ್ರಾದಿ ದೇವತೆಗಳು (ಬಹುವಚನ ವಾದ್ಯರ್ಥೇ-'ಆದಿ' ಎಂಬ ಅರ್ಥದಲ್ಲಿ ಬಹುವಚನ ಬಂದಿದೆ), ಬುಧ್ನಾತ್-ಜ್ಞಾನಿಶ್ರೇಷ್ಠರಾದ ಮಧ್ವಾಚಾರ್ಯರಿಂದ (ವಾಯುದೇವರಿಂದ), ಶವಸಾ-ಸುಖವಾಗಿ, ಅನಾಯಾಸವಾಗಿ, ಸೂರಯಃ-ಪಂಡಿತರಾಗಿ, ಕ್ರಂತ-ಮಾಡಲ್ಪಟ್ಟರು ಎಂದು ವಾಯುದೇವರು ರುದ್ರಾದಿಗಳಿಗೆ ಜ್ಞಾನೋಪದೇಶ ಮಾಡಿರುವುದರಿಂದಲೂ 'ಕಿಂಕರಾಃ ಶಂಕರಾದ್ಯಾಃ' ಎಂಬುದು ಸೂಕ್ತವಾಗಿದೆ.

5. ಸರ್ವಜ್ಞಃ ಸರ್ವಶಕ್ತಿಃ ಎಂಬುದಕ್ಕೆ ಬಳಿತ್ಥಾಸೂಕ್ತದ ಪ್ರಾರಂಭದಲ್ಲೇ ಬರುವ ಬಟ್ ದರ್ಶತಂ ಭರ್ಗಃ ಎಂಬ ವಿಶೇಷಣಗಳೇ ಸಾಧಕ ಎಂದು ತೋರಿಸುತ್ತಾರೆ. ವಾಯು ಶಬ್ದದ ವಕಾರವು ಬಲವಾಚಕ, ಅಯುಶಬ್ದ ಜ್ಞಾನವಾಚಕ ; ಬಟ್ ಬಲವನ್ನೂ, ದರ್ಶತ ಶಬ್ದ ಜ್ಞಾನವನ್ನೂ ತೋರಿಸುತ್ತವೆ. ದರ್ಶೇನ-ಜ್ಞಾನೇನ, ತಃ-ವ್ಯಾಪ್ತಃ ; ದೃಶ್ (ಪಶ್ಯ)-ನೋಡು ಎಂಬ ಧಾತುವಿನಿಂದ ದರ್ಶ ಎಂದರೆ ಜ್ಞಾನ, ಅದರಿಂದ ತ-ವ್ಯಾಪ್ತನಾದವನು, ದರ್ಶತ-ಜ್ಞಾನಪೂರ್ಣ. ಪ್ರಾಣ-(ಉಸಿರಾಡು, ಚಲಿಸು) ಶಬ್ದಾರ್ಥವೇ ಭರ್ಗಃ-ಭರಣ-ಗಮನರೂಪ. ಹನುಮ-ಭೀಮಾವತಾರಗಳಲ್ಲಿ ಬಲಕಾರ್ಯವನ್ನೂ ಮಧ್ವಾವತಾರದಲ್ಲಿ ಜ್ಞಾನಕಾರ್ಯವನ್ನೂ ಮಾಡುವ ಸಾಮರ್ಥ್ಯ ತೋರಿಸುವುದಕ್ಕಾಗಿ ಕ್ರಮವಾಗಿ ಬಟ್, ದರ್ಶತ ಪದಗಳನ್ನು ಹೇಳಿದೆ. ಭರ್ಗಶಬ್ದವು ಜಗದ್ಧಾರಣ ಸಾಮರ್ಥ್ಯಸೂಚಕ. ದರ್ಶತ ಶಬ್ದವು ವೇದ-ಪುರಾಣಾದಿ ಸಕಲಶಾಸ್ತ್ರಗಳಲ್ಲೂ ವ್ಯಾಪ್ತವಾದ ಜ್ಞಾನವನ್ನು ಸೂಚಿಸುತ್ತದೆ. ಭರ್ಗಃ ಪದವು ಧ್ಯಾನರೂಪ ಉಪಾಸನಾದಿ ಕೌಶಲವನ್ನೂ ತೋರಿಸುತ್ತದೆ. ಅಥವಾ ದರ್ಶತ ಶಬ್ದವು ಅಪರೋಕ್ಷಜ್ಞಾನವನ್ನು ಹೇಳುತ್ತದೆ. ಭರ್ಗಃ ಶಬ್ದ ಧ್ಯಾನ ಬೋಧಕ ; ಹೀಗೆ ಧ್ಯಾನದಿಂದ ನಿತ್ಯಾಪರೋಕ್ಷಜ್ಞಾನವುಳ್ಳವರೆಂದು ಹೇಳಿದಂತಾಯಿತು. ಅಪರೋಕ್ಷಜ್ಞಾನವು ಮೋಕ್ಷಕ್ಕೆ ಸಾಧನವೆಂಬುದನ್ನು ತಿಳಿಸುವುದಕ್ಕಾಗಿ ಜ್ಞಾನಕ್ಕೆ ದರ್ಶತ-ಭರ್ಗಃ ಎಂದು ಎರಡು ವಿಶೇಷಣ ಕೊಟ್ಟರು. ಬಲಕಾರ್ಯವೂ ಭಗವತ್ಸೇವಾರೂಪವೇ ಆದರೂ ಜ್ಞಾನ-

ಕಾರ್ಯಕ್ಕೆ ಹೋಲಿಸಿದರೆ ಕಡಿಮೆಯಾದ್ದರಿಂದ ಬಲಕ್ಕೆ ಬಟ್ ಎಂದು ಒಂದೇ ವಿಶೇಷಣ ಕೊಟ್ಟಿದ್ದಾರೆ ಇತ್ಯಾದಿ ಅನೇಕ ವಿಚಾರಗಳನ್ನು ಯುಕ್ತಿಮಲ್ಲಿಕಾ-ದಲ್ಲಿ ತೋರಿಸಿದ್ದಾರೆ. ಹೆಚ್ಚು ವಿಚಾರ ತಿಳಿಯಲಪೇಕ್ಷಿಸುವವರು ಆ ಪುಸ್ತಕದ ೬೬೭-೬೯ ಪತ್ರಗಳನ್ನು ನೋಡಬಹುದು.

ಇಲ್ಲಿಗೆ ೩೨ನೇ ಶ್ಲೋಕ ಮುಗಿಯಿತು

ಎರಡನೆಯ ಉಪವಿಭಾಗ, ೩೩-೩೫ ಶ್ಲೋ

ಆಚಾರ್ಯರ ನಿರ್ವಿಕಾರದ ವರ್ಣನೆ

ಶ್ಲೋಕ ೩೩. ಆಚಾರ್ಯರ ಮುಖಚಂದ್ರದ ವರ್ಣನೆ

342. ಅವತಾರಿಕೆ—(ಕ) (ಕಕ. ವಿ.ಭ.) ಮುಖ್ಯಪ್ರಾಣದೇವರ ಮುಖಾವಲೋಕನವು ಸಕಲ ಪುರುಷಾರ್ಥಗಳಿಗೂ ಕಾರಣವಾದುದರಿಂದ ಅವರ ಮುಖದರ್ಶನವು ಯಾವಾಗ ಲಭಿಸುವುದೋ ಎಂದು ಲಭಿಸೀತೆಂದು ತವಕಪಡುತ್ತಾ ಕೇಳಿಕೊಳ್ಳುತ್ತಾರೆ. (ಪುರಾ.) ವೇದವ್ಯಾಸದೇವರ ಮತ್ತು ಶ್ರೀಮಧ್ವಾಚಾರ್ಯರ ಅಪರೋಕ್ಷಜ್ಞಾನವನ್ನು ಪ್ರಾರ್ಥಿಸುತ್ತಾರೆ. (ಲೇ.) ಶ್ರವಣಮನನಾದಿ ಸಕಲ ಸಾಧನಗಳೂ ಭಕ್ತಿಯೂ ಸಹ ಅಪರೋಕ್ಷದರ್ಶನಕ್ಕೆ ಸಾಧನವೆಂದು ಬ್ರಹ್ಮಸೂತ್ರಗಳ ತೃತೀಯಾಧ್ಯಾಯ ತೃತೀಯಪಾದದಲ್ಲಿ ಅನುಬಂಧಾಧಿಕರಣದಲ್ಲಿ (೩/೩/೩೧) ನಿರೂಪಣೆ ಮಾಡಿದ್ದಾರೆ. ಅದರಂತೆ ಕೇವಲ ಭಕ್ತಿಯೇ ಚರಮ ಧ್ಯೇಯವಲ್ಲ, ಅದು ಅಪರೋಕ್ಷಜ್ಞಾನಕ್ಕೆ ಹಾದಿ ಮಾತ್ರ. ಆದಕಾರಣ ಶ್ರೀಮದಾಚಾರ್ಯರ ಮತ್ತು ವೇದವ್ಯಾಸದೇವರ ಮುಖಸಂದರ್ಶನ (ಅಪರೋಕ್ಷದರ್ಶನ) ಎಂದಿಗಾದೀತೆಂದು ಹಾತೊರೆದು ಕೇಳಿಕೊಳ್ಳುತ್ತಾರೆ.

ಉದ್ಯನ್ಮಂದಸ್ಮಿತಶ್ರೀ—ಮೃದು-ಮಧು-ಮಧುರಾ-
    ಲಾಪ-ಪೀಯೂಷಧಾರಾ—

ಪ್ರೂರಾಸೇಕೋಪಶಾಂತಾ—ಸುಖಸುಜನಮನೋ—
ಲೋಚನಾಪೀಯಮಾನಮ್ ।
ಸಂದ್ರಕ್ಷ್ಯೇ ಸುಂದರಂ ಸಂ—ದುಹದಿಹ ಮಹದಾ-
ನಂದಮಾನಂದತೀರ್ಥ-
ಶ್ರೀಮದ್ವಕ್ತ್ರೇಂದುಬಿಂಬಂ ದುರಿತನುದುಧಿತಂ
ನಿತ್ಯದಾಹಂ ಕದಾ ನು ? ।। ೩೩ ।।

ಖ) ಪದಚ್ಛೇದ—ಉದ್ಯನ್....ಪೀಯಮಾನಂ (ಇದೀ ಪೂರ್ವಾರ್ಧ ಭ. ಪುರಾ. ಪ್ರಕಾರ ಒಂದೇ ಪದ. ಕಕ. ವಿ. ಪ್ರಕಾರ ಉದ್ಯನ್ಮಂದಸ್ಮಿತ ಶ್ರೀಮೃದು ಒಂದು ಪದ, ಮಧು-ಮಧುರಾ....ಪೀಯಮಾನಂ ಇನ್ನೊಂದು ಪದ); ಸಂದ್ರಕ್ಷ್ಯೇ, ಸುಂದರಂ, ಸಂದುಹತ್, ಇಹ, ಮಹದಾನಂದಂ, (ಭ. ಮಹತ್, ಆನಂದಂ). ಆನಂದತೀರ್ಥ, ಶ್ರೀಮದ್ವಕ್ತ್ರೇಂದುಬಿಂಬಂ (ಪು.ರಾ. ಶ್ರೀಮತ್, ವಕ್ತ್ರೇಂದು ಬಿಂಬಂ), ದುರಿತನುತ್, ಉದಿತಂ, ನಿತ್ಯದ, ಅಹಂ (ಅಥವಾ ನಿತ್ಯದಾ, ಅಹಂ), ಕದಾ ನು ।।

ಗ) ವಿಶ್ಲೇಷಣೆ—ಈ ಶ್ಲೋಕಕ್ಕೆ ಹರಿ-ವಾಯು ಉಭಯಪರವಾಗಿ ಒಂದೇ ಅನ್ವಯ—ಒಂದೇ ಅರ್ಥ. ಆನಂದತೀರ್ಥ, ನಿತ್ಯದ ಎರಡೂ ಸಂಬೋಧನೆಗಳು. ಪುರಾ. ಶ್ರೀಮತ್ ಎಂಬುದನ್ನು ಆನಂದತೀರ್ಥಕ್ಕೆ ವಿಶೇಷಣವಾಗಿ ಹೇಳುತ್ತಾರೆ. ಅಹಂ (೪ನೇ ಚರಣದಲ್ಲಿ) ಕರ್ತೃಪದ, ವಕ್ತ್ರೇಂದುಬಿಂಬಂ-ಕರ್ಮಪದ; ಕದಾ ನು ಸಂದ್ರಕ್ಷ್ಯೇ-ಕ್ರಿಯಾಪದ ಆದಕಾರಣ ವಕ್ತ್ರೇಂದು-ಬಿಂಬಂ ಅಹಂ ಕದಾ ನು ಸಂದ್ರಕ್ಷ್ಯೇ-(ನಿಮ್ಮ) ಮುಖವೆಂಬ ಚಂದ್ರಬಿಂಬ-ವನ್ನು (ಮುಖವನ್ನು) ಎಂದಿಗೆ ನೋಡೇನು ? ಎಂಬುದೇ ಪ್ರಧಾನವಾಕ್ಯ. ಈ ವಕ್ತ್ರೇಂದುಬಿಂಬಕ್ಕೆ ಮಿಕ್ಕಭಾಗವೆಲ್ಲಾ ವಿಶೇಷಣಗಳು—1) ಉದ್ಯನ್.... -ಪೀಯಮಾನಂ (ಅಥವಾ ಕಕ. ವಿ. ಪ್ರಕಾರ ಉದ್ಯನ್....ಮೃದು ; ಮಧು ಮಧುರಾ....ಪೀಯಮಾನಂ), 2) ಸುಂದರಂ, 3) ಇಹ ಮಹದಾನಂದಂ ಸಂದುಹತ್ (ಭ. ಪ್ರಕಾರ, ಮಹತ್, ಇಹ ಆನಂದಂ ಸಂದುಹತ್) 4) ಶ್ರೀಮತ್, 5) ದುರಿತನುತ್, 6) ಉದಿತಂ, (ವಿ. ಪ್ರಕಾರ ನಿತ್ಯದಾ ಉದಿತಮ್).

343. ಕಠಿನ ಶಬ್ದಾರ್ಥ—(ಕ) ನಿತ್ಯದ (ಕಕ.ವಿ.) ನಿತ್ಯಂ–ವೃದ್ಧಿ-ಕ್ಷಯರಹಿತಂ ಶ್ರೀವಿಷ್ಣುಂ, ಭಕ್ತಜನೇಭ್ಯೋ ದದಾತಿ-ದರ್ಶಯತಿ ಯಸ್ತಸ್ಯ-ಸಂಬುದ್ಧಿಃ ಹೇ ನಿತ್ಯದ! ನಿತ್ಯ ಎಂದರೆ ವೃದ್ಧಿಕ್ಷಯಗಳಿಲ್ಲದೆ ನಿತ್ಯ ಒಂದೇ ರೀತಿ ಇರುವ ವಿಷ್ಣು; ಅವನನ್ನು ಭಕ್ತಜನರಿಗೆ, ದ–ಕೊಡಿಸುವವರು ಎಂದರೆ ಆವನ ಆಪರೋಕ್ಷ ಮಾಡಿಸುವವರು ನಿತ್ಯದಃ, ಅವರ ಸಂಬೋಧನೆ ಹೇ ನಿತ್ಯದ–ಎಲೈ ವಿಷ್ಣುವಿನ ಅನುಗ್ರಹವನ್ನು (ಅಪರೋಕ್ಷದರ್ಶನವನ್ನು) ಕೊಡಿಸುವವರೇ! ಎಂದರ್ಥ. (ಪುರಾ. ಭ.) ನಿತ್ಯ–ನಿತ್ಯವಾದ ಮೋಕ್ಷ-ವನ್ನು, ದ–ಕೊಡುವ ಎಂದು ಹರಿ-ವಾಯು ಉಭಯಪರಾರ್ಥ. ವಿಷ್ಣು (ವೇದವ್ಯಾಸರು) ನೇರವಾಗಿ ಕೊಡುವವನು; ಶ್ರೀಮದಾಚಾರ್ಯರು ವಿಷ್ಣುವಿನ ಅನುಗ್ರಹದ್ವಾರಾ ಕೊಡುವವರು. ಇದಕ್ಕೆ 'ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ' ಎಂಬ ತಾತ್ಪರ್ಯನಿರ್ಣಯೋ-ದಾಹೃತ (೧/೭೮) ಎಂಬ ವಾಕ್ಯವೇ ಪ್ರಮಾಣ. ವಿ. ಪ್ರಕಾರ ನಿತ್ಯದಾ ಎಂದೂ ಪದಚ್ಛೇದ ಮಾಡಬಹುದು. ನಿತ್ಯದಾ–ಸದಾ, ಯಾವಾಗಲೂ ಎಂಬುದು ಉದಿತಂ–ಗೆ ವಿಶೇಷಣ; ನಿತ್ಯದಾ ಉದಿತಂ–ಸರ್ವಕಾಲದಲ್ಲೂ ಉದಯಿಸಿರು-ವಂಥಾ, ಯಾವಾಗಲೂ ಪ್ರಸನ್ನವಾದ ಎಂದರ್ಥ.

ಖ) ಉದ್ಯನ್........ಪೀಯುಮಾನಂ—ಕಕ. ವಿ. ಇಬ್ಬರೂ ಉದ್ಯನ್ಮಂದಸ್ಮಿತಶ್ರೀಮೃದು ಎಂಬುದೇ ಬೇರೆ ಪದವೆಂದು ಗ್ರಹಣಮಾಡಿ 'ವಕ್ತ್ರೇಂದುಬಿಂಬ'ಕ್ಕೆ ವಿಶೇಷಣವೆನ್ನುತ್ತಾರೆ. ಉದ್ಯನ್–ಉದಯಿಸುತ್ತಿರುವ, ಮಂದಸ್ಮಿತ–ಮಂದಹಾಸದ, ಶ್ರೀ–ಶೋಭೆಯಿಂದ, ಮೃದು–ಕೋಮಲವಾದ (ಮುಖಚಂದ್ರಬಿಂಬ) ಎಂದರ್ಥ. ಅವರಿಬ್ಬರ ಮುಖದಲ್ಲೂ ಸದಾ ಮಂದಹಾಸ ಇದ್ದೇ ಇರುತ್ತದೆ. ಅವರು ಸದಾ ಹಸನ್ಮುಖಿಗಳಾದ್ದರಿಂದ ಯಾವಾಗಲೂ ಕೋಮಲವಾಗಿಯೇ ಇರುತ್ತಾರೆಂದು ಭಾವ. ಭ. ಪುರಾ. ಪಕ್ಷದಲ್ಲಿ ಇಡೀ ಪೂರ್ವಾರ್ಧ ಒಂದೇ ಪದ. ಮಧು–ಜೇನುತುಪ್ಪ, ಆಲಾಪ-ಸಂಭಾಷಣೆ, ಮಾತುಕತೆ ಮೃದುನುಡಿ 'ಸ್ಯಾದಾಭಾಷಣಮಾಲಾಪಃ' ಅಮರ (ವಿ) ಪೀಯೂಷ–ಅಮೃತ, 'ಪೀಯೂಷಮಮೃತಂ ಸುಧಾ' ಅಮರ. ಪೂರ–(ಕಕ.ವಿ.)–ನಿಕರ, ಸಮೂಹ; (ಭ.ಪುರಾ.) ಏರುವ ಪ್ರವಾಹ–ಎಂದರೆ

ನದ್ಧಿಯಲ್ಲಿ ನೀರು ಉಬ್ಬುವಿಕೆ, ನೀರು ಏರುವಿಕೆ 'ಪೂರಸ್ತು ಜಲಬೃಂಹಣಮ್' ವೈಜಯಂತೀಕೋಶ ; 'ಪೂರಃ ಸ್ಯಾದಂಭಸೋ ವೃದ್ಧಿಃ' ಹಲಾಯುಧ. ಆಸೇಕ-ಅಭಿಷೇಕ, ನೆನೆಸುವಿಕೆ. ಅಸುಖ-ಸುಖಭಿನ್ನವಾದದ್ದು ಎಂದರೆ ದುಃಖ, ಲೋಚನ-ಕಣ್ಣು, ಲೋಚನ-ಆಪೀಯಮಾನಂ-ಕಣ್ಣುಗಳಿಂದ ಕುಡಿಯಲ್ಪಡುವ ಎಂದು ಶಬ್ದಾರ್ಥ, ಇಲ್ಲಿ ರೂಪಕಾಲಂಕಾರವಿದೆ. ಮುಖದ ಮೇಲಿರುವ ಮಂದಹಾಸವನ್ನು ಎರಡು ಕಣ್ಣುಗಳಿಂದಲೂ ಎವೆಯಿಕ್ಕದೆ ನೋಡುತ್ತಿರುವ ಎಂದರ್ಥ.

ಉದ್ಯನ್-ಎಂಬುದು ದೀರ್ಘವಾದ ಸಮಾಸಪದ. ಇದರ ಅರ್ಥವನ್ನು ಸುಲಭವಾಗಿ ಗ್ರಹಿಸಲು ಇದನ್ನು a) ಉದ್ಯನ್ಮಂದಸ್ಮಿತಶ್ರೀರ್ಮೃದು-ಮಂದಹಾಸದಿಂದ ಸದಾ ಕೋಮಲವಾಗಿರುವ, b) ಮಧು-ಮಧುರಾಲಾಪ-ಜೇನುತುಪ್ಪದಂತೆ ಆಕರ್ಷಣೀಯವಾದ ಸವಿನುಡಿ (ಬಿರುನುಡಿಗೆ ವಿರುದ್ಧ), c) ಪೀಯೂಷಧಾರಾಪೂರ-ಅಮೃತದ ಪೂರ್ಣಪ್ರವಾಹ, d) ಆಸೇಕ-ಉಪಶಾಂತ-ಅಸುಖ-ಸ್ನಾನದಿಂದ ಪರಿಹೃತವಾದ ದುಃಖವುಳ್ಳ, e) ಸುಜನ ಮನೋಲೋಚನಾಪೀಯಮಾನಂ-ಸಜ್ಜನರ ಮನಸ್ಸೆಂಬ ಕಣ್ಣುಗಳಿಂದ ಕುಡಿಯಲ್ಪಡುವ—ಎಂದು ಐದು ಭಾಗವಾಗಿ ವಿಂಗಡಿಸಿಕೊಳ್ಳಬೇಕು. (ಪದಶಃ ಅರ್ಥ ಅನ್ವಯಾರ್ಥದಲ್ಲಿ ಕೊಟ್ಟಿದೆ) ಈ ಇಡೀ ಸಮಾಸ 'ವಕ್ತ್ರೇಂದು ಬಿಂಬ'ಕ್ಕೆ ವಿಶೇಷಣವಷ್ಟೆ. ಆದಕಾರಣ e) ಭಾಗವು ನೇರವಾಗಿ ಆ ವಿಶೇಷ್ಯ ದೊಡನೆ ಅನ್ವಯವಾಗಿ, e) ಸಜ್ಜನರು ತಮ್ಮ ಮನಸ್ಸೆಂಬ ಕಣ್ಣುಗಳಿಂದ (ಆ) ಎವೆಯಿಕ್ಕದೆ ಕುಡಿಯುತ್ತಿರುವ ಎಂದರೆ ರೆಪ್ಪೆಹಾಕದೆ ಒಂದೇ ಸಮನಾಗಿ ನೋಡುತ್ತಿರುವ-ಮುಖಚಂದ್ರಬಿಂಬ ಎಂದು ಅರ್ಥಕೊಡುತ್ತದೆ. e) ಭಾಗದಲ್ಲಿರುವ ಸುಜನ-ಶಬ್ದಕ್ಕೆ d) ಭಾಗದ 'ಉಪಶಾಂತ-ಅಸುಖ' ಎಂಬುದು ವಿಶೇಷಣ; ದುಃಖ ಪರಿಹಾರವಾದ ಸುಜನರು ಎಂದರ್ಥ. ಪರಿಹಾರ ಹೇಗಾಯಿತು ? ಆಸೇಕ-ಸ್ನಾನ ಮಾಡಿದ್ದರಿಂದ ಪರಿಹಾರವಾಯಿತು. ಎಲ್ಲಿ ಸ್ನಾನ ಮಾಡಿದರು ? c) ಪೀಯೂಷ-ಧಾರಾ-ಪೂರ-ಅಮೃತಧಾರೆಯು ಉಕ್ಕಿಬರುವ ಪ್ರವಾಹದಲ್ಲಿ ಸ್ನಾನಮಾಡಿದರು. ಮುಖ-ಚಂದ್ರಬಿಂಬದ ಎರಡು ವಿಶೇಷಗಳನ್ನು a) (b) ಹೇಳುತ್ತವೆ. a) ಅದರಲ್ಲಿ ಯಾವಾಗ

ನೋಡಿದರೂ ಮಂದಹಾಸದ ಕಾಂತಿಯಿರುವುದರಿಂದ ಕೋಮಲವಾಗಿರುತ್ತದೆ. b) ಜೇನುತುಪ್ಪದಂತೆ ಬಹುರುಚಿಯಾದ ಮೃದುನುಡಿ. ಒಂದುಕಡೆ ಮಂದಹಾಸದ ಕೋಮಲಗುಣ, ಇನ್ನೊಂದುಕಡೆ ಮನಸ್ಸನ್ನೇ ಅಪಹರಿಸುವ ಮೃದುನುಡಿ ಈ ಎರಡೂ ಅಮೃತಧಾರೆಯಂತೆ ಉಕ್ಕಿ ಉಕ್ಕಿ (ಆ ಮುಖಚಂದ್ರಬಿಂಬದಲ್ಲಿ) ಹರಿಯುತ್ತಿರುತ್ತವೆ. ಅದರಲ್ಲಿ ಸ್ನಾನ ಮಾಡುವುದರಿಂದ ಸಜ್ಜನರ ದುಃಖ-ಮನಸ್ತಾಪಗಳೆಲ್ಲವೂ ಮರೆತುಹೋಗುತ್ತವೆ. ಅದರಿಂದ ಆ ಸಜ್ಜನರು ಕಣ್ಣುಗಳಿಂದ ಎವೆಯಿಕ್ಕದೆ ನೋಡುತ್ತಲೂ ಮನಸ್ಸಿನಿಂದ ಧ್ಯಾನಮಾಡುತ್ತಲೂ ಇರುವ ಮುಖಚಂದ್ರಬಿಂಬವೆಂದು ಭಾವ. ಮುಖಚಂದ್ರನ ದರ್ಶನದಿಂದಲೇ ತಾಪತ್ರಯವೆಲ್ಲ ಮರೆತುಹೋಗುತ್ತದೆ. ಅವರು ಮಧುರವಾದ ಎರಡು ಮಾತಾಡಿದರಂತೂ ಸಜ್ಜನರು ತಮ್ಮನ್ನು ತಾವೇ ಮರೆತುಬಿಡುತ್ತಾರೆಂದು ಇಡೀ ಪದದ ಭಾವ.

ಗ) ಮಹದಾನಂದಂ ಸಂದುಹತ್—'ದುಹ ಪ್ರಪೂರಣೇ (ಅದಾ.ಪ.) ಹಾಲು ಕರಿ, ಸುರಿಸು ಎಂಬ ಧಾತುವಿನ ಶತ್ರಂತರೂಪ. ಅತಿಶಯವಾದ ಆನಂದವನ್ನು ಸುರಿಸುವ–ಮುಖಚಂದ್ರ. 'ಸಂದುಹತ್' ಎಂಬ ಬಗ್ಗೆ ಗು.ಸಾ. ಹೀಗೆ ಹೇಳುತ್ತಾರೆ. 'ಸಂದುಹತ್' ಎಂದರೆ 'ಹಾಲನ್ನು ಕರೆದಂತೆ ಕೊಡುತ್ತಿರುವುದು ನಿಮ್ಮ ಮುಖ' ಎಂದು ಹೇಳುವುದರಿಂದ ಕಾಮಧೇನುವಿನ ದೃಷ್ಟಾಂತವು ಸೂಚಿತವಾಯಿತು. ಅದೇ ಪದದಲ್ಲಿರುವ ಸಂ ಎಂಬ ಉಪಸರ್ಗದಿಂದ ಕಾಮಧೇನುವಿನಿಂದ ಕೊಡಲು ಸಾಧ್ಯವಿಲ್ಲದಿರುವ ಪಾರಲೌಕಿಕ ಸ್ವರ್ಗಾದಿ ನಶ್ವರಸುಖ ಮತ್ತು ಶಾಶ್ವತವಾದ ಮುಕ್ತಿಸುಖ ಇವೆರಡನ್ನೂ ನಿಮ್ಮ ಮುಖವು 'ಚೆನ್ನಾಗಿ' ಕೊಡುತ್ತದೆ ಎಂಬ ಅಂಶವು ಸೂಚಿತವಾಯಿತು. (ಈ ಅಂಶವನ್ನು 'ಮಹದಾನಂದಂ' ಎಂಬ ಪದವು ಸ್ಪಷ್ಟೀಕರಿಸುತ್ತದೆ. ಮುಂದೆ ನೋಡಿ). (ಛ) ಮಹತ್–ಪೂಜ್ಯವಾದ ಎಂದು ವಕ್ತ್ರೇಂದುಬಿಂಬಕ್ಕೇ ವಿಶೇಷಣ.

ಗು. ಸಾ. ಟೀಕಾಕಾರರು 'ಮಹತ್' ಎಂಬುದನ್ನು 'ಆನಂದಂ' ಎಂಬುದಕ್ಕೇ ವಿಶೇಷವಾಗಿ ಗ್ರಹಣಮಾಡುತ್ತಾರೆ. ಆದರೆ ಆನಂದ ಶಬ್ದ ಸಂಸ್ಕೃತದಲ್ಲಿ ನಿತ್ಯಪುಲ್ಲಿಂಗ; ಮಹತ್ ಎಂಬುದು ನಪುಂಸಕಲಿಂಗರೂಪ.

ಎರಡೂ ಹೇಗೆ ಹೊಂದುತ್ತದೆ ? ಎಂದರೆ ಹೀಗೆ ವಿವರಿಸಿದ್ದಾರೆ—ಆನಂದ ಎಂಬ ಪದವು ಲೋಕದಲ್ಲಿ ಪುಲ್ಲಿಂಗವೆಂದು ಪ್ರಸಿದ್ಧವಾಗಿದ್ದರೂ [ಸ್ಯಾದಾನಂಥು-ರಾನಂದಃ–ಅಮರ ; ಆನಂದೋ ನಂದಥುಹ್ಲಾದಃ–ವೈಜಯಂತೀ, ಸಂಮದೋ ಮುತ್ ತಥಾನಂದಃ—ಹಲಾಯುಧ] ವೇದದಲ್ಲಿ 'ವಿಜ್ಞಾನ-ಮಾನಂದಂ ಬ್ರಹ್ಮ' ಮುಂತಾದ ವಾಕ್ಯಗಳಲ್ಲಿ ನಪುಂಸಕಲಿಂಗವಾಗಿಯೂ ಪ್ರಯುಕ್ತವಾಗಿದೆ. ಆದ್ದರಿಂದ 'ಆನಂದಂ' ಎಂಬ ನಪುಂಸಕ ಲಿಂಗ ಪದಕ್ಕೆ 'ಮಹತ್' ಎಂಬ ನಪುಂಸಕಲಿಂಗವಾದ ಪದವು ವಿಶೇಷಣವಾಗುವುದಕ್ಕೆ ಯಾವ ಅಡ್ಡಿಯೂ ಇಲ್ಲ ಕಾಮಧೇನುವು ಐಹಿಕಫಲವನ್ನು ಮಾತ್ರ ಕೊಡ-ಬಲ್ಲದು. ಸ್ವರ್ಗ ಮುಂತಾದ ಪಾರಲೌಕಿಕ ನಶ್ವರಫಲಗಳನ್ನೂ ಶಾಶ್ವತವಾದ ಮುಕ್ತಿಸುಖವನ್ನೂ ಕೊಡುವ ಶಕ್ತಿಯು ಅದಕ್ಕಿಲ್ಲ. ಆದರೆ [ಮಧ್ವಾ-ಚಾರ್ಯರು ಅವರನ್ನು] ಆಶ್ರಯಿಸಿದವರಿಗೆ ಐಹಿಕ ಫಲಗಳನ್ನೂ ಸ್ವರ್ಗ ಮುಂತಾದ ಪಾರತ್ರಿಕ ಫಲಗಳನ್ನೂ ಮುಕ್ತಿಸುಖವನ್ನೂ ಕೊಡುವುದರಿಂದ 'ಮಹತ್ ಆನಂದಂ ಸಂದುಹತ್' ಎಂದು ಹೇಳಿದ್ದು ಉಚಿತವಾಗಿದೆ. ಮಹತ್ ಆನಂದಂ ಸಂದುಹತ್ ಎಂದರೆ ಐಹಿಕ ನಶ್ವರಸುಖಗಳನ್ನು ಮಾತ್ರವೇ ಅಲ್ಲದೆ ಸ್ವರ್ಗಾದಿಪಾರತ್ರಿಕ ಸುಖಗಳನ್ನೂ ಶಾಶ್ವತ ಮೋಕ್ಷಾಖ್ಯ ಸ್ವರೂಪಾನಂದ-ವನ್ನೂ ಕೊಡುವಂಥಾ ಎಂದರ್ಥ.

(ಘ) **ದುರಿತನುತ್** (ಛ.) ದುರಿತಂದುಷ್ಕೃತಂ, ನುದತಿ–ದೂರೀ-ಕರೋತೀತಿ ದುರಿತನುತ್ । ದುಷ್ಕೃತಗಳನ್ನೆ ದೂರಮಾಡುವಂಥಾ. ಣುದ ಪ್ರೇರಣೆ (ತುದಾದಿ ಉಭ) ಕಳುಹಿಸು, ಓಡಿಸು ಎಂಬ ಧಾತುವಿನ ಮೇಲೆ ಕ್ವಿಪ್ ಪ್ರತ್ಯಯು ಬಂದಿದೆ.

ಙ) **ಉದಿತಂ** ಎಂಬುದು 'ವಕ್ತ್ರೇಂದುಬಿಂಬ'ಕ್ಕೆ ವಿಶೇಷಣ. ವಿ. ಟೀಕಾಪ್ರಕಾರ 'ನಿತ್ಯದಾ ಉದಿತಂ' ಎಂದು ಅನ್ವಯು ; ಯಾವಾಗಲೂ ಉದಯಿಸಿರುವ ಎಂದರ್ಥ. ಚಂದ್ರಮಂಡಲವು ಅನಿಶ್ಚಿತವಾಗಿ ಉದಯಿಸುವು-ದಲ್ಲದೆ ವೃದ್ಧಿ–ಕ್ಷಯಾದಿ ದೋಷಯುಕ್ತವಾಗಿದೆ. ನಿಮ್ಮ ಮುಖವು ನಿತ್ಯ ಉದಯಿಸಿರುವುದರಿಂದ ದೋಷರಹಿತವೆಂಬ ಭಾವಸೂಚಿತವಾಗುತ್ತದೆ. ಉದಿತ ಎಂಬಲ್ಲಿ ಉತ್+ಇತ ಎಂದು ಎರಡು ಭಾಗವಿದೆ. ಉತ್ ಎಂದರೆ ಮೇಲೆ

ಎಂದರ್ಥ. ಇತ (ಇಣ್‌ಗತೌ ಧಾತುವಿನ ಕ್ತಾಂತ ರೂಪ) ಎಂದರೆ ಇರುವ ಎಂದರ್ಥ. ಈ ಪದದ ವಿಶೇಷ ಸ್ವಾರಸ್ಯವನ್ನು ಗು.ಸಾ. ಟೀಕೆಯಲ್ಲಿ ಹೀಗೆ ತೋರಿಸಿದ್ದಾರೆ—ಚಂದ್ರಮಂಡಲವು ಉದಯಿಸುವುದಕ್ಕೆ ಮೊದಲು ಆನಂದ ವನ್ನು ಕೊಡಲಾರದು. ಉದಯಿಸಿದ್ದರೂ ಮೇಘಾದಿಗಳಿಂದ ಮುಚ್ಚಲ್ಪಟ್ಟಿದ್ದರೆ ಆನಂದದಾಯಕವಾಗುವುದಿಲ್ಲ. ಉದಯಿಸಿದ್ದರೂ ಸ್ವಲ್ಪಭಾಗ ಮಾತ್ರ ಕಾಣಿಸುತ್ತಿದ್ದರೆ ಅಷ್ಟು ಆನಂದ ಕೊಡಲಾರದು. ಆದಕಾರಣ ಉದಯಿಸಿದ್ದು, ಪೂರ್ಣವಾಗಿದ್ದು, ಮೇಘಾದಿಗಳಿಂದ ಮುಚ್ಚಲ್ಪಡದಿದ್ದರೆ ಮಾತ್ರ ಆನಂದಪ್ರದವಾಗುತ್ತದೆ. ಅದರಲ್ಲೂ ನೆತ್ತಿಯ ಮೇಲೆ ಆಕಾಶ-ಮಧ್ಯದಲ್ಲಿದ್ದರೆ ತನ್ನ ಕಿರಣಗಳನ್ನು ಎಲ್ಲಾ ಕಡೆಗಳಲ್ಲೂ ಹರಡಿ ಸಂಪೂರ್ಣ ಆನಂದವನ್ನು ಕೊಡುತ್ತದೆ. ಉದಿತ ಎಂಬ ಪದದಲ್ಲಿ ಇಷ್ಟು ವಿಶೇಷಣಗಳೂ ಹೊಂದಿಕೊಂಡಿವೆ. ಹೇಗೆಂದರೆ ಉತ್ ಎಂಬ ಉಪಸರ್ಗಕ್ಕೆ 'ಮೇಲೆ' ಎಂಬ ಅರ್ಥವಿರುವುದರಿಂದ, ನಡುನೆತ್ತಿಯ ಮೇಲಿರುವ ಮತ್ತು ಪೂರ್ಣವಾದ ಎಂಬ ಅರ್ಥಗಳೂ ಮೇಘಗಳಿಂದ ಆಚ್ಛಾದಿತವಲ್ಲದ ಎಂಬ ಭಾವವೂ ಸಂಗ್ರಹಿಸಲ್ಪಡುತ್ತದೆ. ಇತ ಎಂಬ ಪದದಿಂದ ಉದಯಿಸಿರುವ ಎಂಬ ಭಾವ ಸೂಚಿತವಾಗುತ್ತದೆ. ಆಚಾರ್ಯರ ಮುಖವು ಇಂತಹ ಚಂದ್ರಬಿಂಬ ದಂತೆಯೇ ಆನಂದಪ್ರದವಾಗಿರುತ್ತದೆ ಎಂದು ಭಾವ.

ಚ) ಶ್ರೀಮತ್— (ಕಕ. ವಿ. ಛ) ಕಾಂತಿಮತ್-ಕಾಂತಿಯಿಂದ ಶೋಭಿಸುವ ಎಂಬುದನ್ನು ವಕ್ತ್ರೇಂದುಬಿಂಬಕ್ಕೆ ವಿಶೇಷಣವೆನ್ನುತ್ತಾರೆ. ಪುರಾ. ಇದನ್ನು ಸಂಬೋಧನೆಯಾಗಿ ಭಾವಿಸಿ ಆನಂದತೀರ್ಥ-ಪದಕ್ಕೆ ವಿಶೇಷಣವಾಗಿ ಹೇಳುತ್ತಾರೆ. ಛ) ವಕ್ತ್ರೇಂದುಬಿಂಬಂ—ವಕ್ತ್ರಂ-ಮುಖಂ, ತದೇವ ಇಂದು ಬಿಂಬಮಿವ-ಚಂದ್ರಮಂಡಲಮಿವ-ಮುಖವೆಂಬ ಚಂದ್ರಮಂಡಲವನ್ನು (ಉಪಮಾನೋತ್ತರಪದ ಕರ್ಮಧಾರಯ).

344. ಕ) ಉಭಯಪರ ದಂಡಾನ್ವಯ—ನಿತ್ಯದ ಶ್ರೀಮತ್ ಆನಂದತೀರ್ಥ, ೧) ಉದ್ಯನ್....ಹೀಯಮಾನಂ, ೨) ಸುಂದರಂ, ೩) (ಛ) ಮಹತ್, ೪) ಇಹ ಮಹದಾನಂದಂ ಸಂದುಹತ್ ೫) (ವಿ) ನಿತ್ಯದಾ,

ದುರಿತನುತ್, ೬) ಉದಿತಂ ಶ್ರೀಮದ್-ವಕ್ತ್ರೇಂದುಬಿಂಬಂ ಅಹಂ ಕದಾ ನು ಸಂದ್ರಕ್ಷ್ಯೇ.

ಖ) ಅನ್ವಯಾರ್ಥ—(ಹರಿಪರ) ನಿತ್ಯದ-ನಾಶವಿಲ್ಲದ, ನಿತ್ಯವಾದ ಮೋಕ್ಷವನ್ನು ಕೊಡುವ, ಶ್ರೀಮತ್-ಸಂಪತ್ತುಳ್ಳ, ಆನಂದತೀರ್ಥ—ಆನಂದ-ಆನಂದವನ್ನು ಕೊಡುವಂಥಾ, ತೀರ್ಥ-ಶಾಸ್ತ್ರವುಳ್ಳಂಥಾ (ಎಂದರೆ ಆನಂದ-ಪ್ರದವಾದ ಭಾರತ-ಭಾಗವತ-ಬ್ರಹ್ಮಸೂತ್ರಾದಿ ಶಾಸ್ತ್ರಗ್ರಂಥಗಳನ್ನು ರಚಿಸಿದ) ಹೇ ವೇದವ್ಯಾಸರೇ ! (ವಾಯುಪರವಾಗಿ) ನಿತ್ಯ-ದ-ನಿತ್ಯವಾದ ಶ್ರೀ ವಿಷ್ಣು (ವಿನ ಸಾಕ್ಷಾತ್ಕಾರ)ವನ್ನು ಅಥವಾ ನಿತ್ಯವಾದ ಮೋಕ್ಷವನ್ನು ಕೊಡುವ, ಶ್ರೀಮತ್-ಕಾಂತಿಯುಳ್ಳ ; ಆನಂದತೀರ್ಥ-ಶ್ರೀಮನ್ಮಧ್ವಾಚಾರ್ಯರೇ ! (ಉಭಯಪರ) ೧ ಅ) (ಕಕ.ವಿ.ಪ್ರಕಾರ) ಉದ್ಯನ್....ಮೃದು—ಉದ್ಯತ್-ಉದಯಿಸುತ್ತಿರುವ (ಹೊರಹೊಮ್ಮುತ್ತಿರುವ), ಮಂದಸ್ಮಿತ-ಮುಗುಳು ನಗೆಯು, ಶ್ರೀಕಾಂತಿಯಿಂದ, ಮೃದು-ಕೋಮಲವಾದ (ಮುಖಚಂದ್ರವು) ; ೧ ಆ) ಮಧು-ಮಧುರಾ....ಪೀಯಮಾನಂ (ಮುಂದೆ ತೋರಿಸುವ ಅರ್ಥವೇ), ೧) ಉದ್ಯನ್....ಪೀಯಮಾನಂ—ಉದ್ಯನ್-ಹೊರಹೊಮ್ಮುವ, ಮಂದ-ಸ್ಮಿತ-ಕಿರುನಗೆಯು, ಶ್ರೀ-ಕಾಂತಿಯಿಂದ, ಮೃದು-ಕೋಮಲವಾದ, ಮಧು-ಜೇನುತುಪ್ಪದಂತೆ, ಮಧುರ-ಇಂಪಾದ (ರುಚಿಯಾದ), ಆಲಾಪ-ಸವಿನುಡಿ-ಯೆಂಬ, ಪೀಯೂಷ-ಅಮೃತದ, ಧಾರಾ-ಧಾರೆಯು, ಪೂರ-ಪೂರ್ಣ ಪ್ರವಾಹದಲ್ಲಿ, ಆಸೇಕ-ಸ್ನಾನಮಾಡಿದ್ದರಿಂದ, ಉಪಶಾಂತ-ತಣ್ಣಗಾದ (ಅಥವಾ ಪರಿಹರಿಸಲ್ಪಟ್ಟ), ಅಸುಖ-ದುಃಖವುಳ್ಳ, ಸುಜನ-ಸಜ್ಜನರ, ಮನೋಲೋಚನ-ಮನಸ್ಸೆಂಬ ಕಣ್ಣುಗಳಿಂದ, ಆ-ಪೀಯಮಾನಂ-ಅತ್ಯಾ-ದರದಿಂದ ಕುಡಿಯಲ್ಪಡುತ್ತಿರುವ (ಎಂದರೆ ಎವೆಯಿಕ್ಕದೆ ನೋಡಲ್ಪಡು-ತ್ತಿರುವ), ; ೨) ಸುಂದರವಾದ, ೩) (ಛ. ಪ್ರಕಾರ) ಮಹತ್-ಪೂಜ್ಯವಾದ; ೪) ಇಹ-(ಕಕ.ವಿ.) ಸೇವಕಜನರಾದ ನಾವೇ ಮೊದಲಾದ ಜನಗಳಲ್ಲಿ (ಛ) ಸಜ್ಜನರಲ್ಲಿ (ಪುರಾ.) ಈ ಅಧಿಕಾರಿವರ್ಗದಲ್ಲಿ ; ಮಹದಾನಂದಂ (ಕಕ.ವಿ.)ಅಧಿಕ ಆನಂದವನ್ನು (ಪುರಾ.) ಮಹತ್-ದೊಡ್ಡವರಿಗೆ, ಆನಂದಂ-ಸೌಖ್ಯವನ್ನು ; ಸಂದಧತ್-ಕೊಡುತ್ತಿರುವ; ೫) ದುರಿತನುತ್-ಪಾಪವನ್ನು

(ಛ) ದುಷ್ಕೃತಗಳನ್ನು-ಪರಿಹಾರ ಮಾಡುವ ; ೬) ಉದಿತಂ-(ಕಕ.ವಿ.) ಪ್ರಸನ್ನವಾದ, (ಛ) ಸರ್ವದಾ ಪ್ರಸನ್ನವಾದ, (ಪುರಾ.) ಸರ್ವಕಾಲದಲ್ಲೂ ಉದಯಿಸಿರುವಂಥಾ ; (ಶ್ರೀಮದ್) ವಕ್ತ್ರೇಂದುಬಿಂಬಂ—ಶ್ರೀಮತ್-ಕಾಂತಿಯುಕ್ತವಾದ, ವಕ್ತ್ರ-ಮುಖವೆಂಬ, ಇಂದು-ಬಿಂಬಂ-ಚಂದ್ರಮಂಡಲ-ವನ್ನು ; ಅಹಂ-ನಾನು ; ಕದಾ ನು-ಯಾವಾಗ, ಸಂದ್ರಕ್ಷ್ಯೇ-ನೋಡೇನು (ಪ್ರತ್ಯಕ್ಷವಾಗಿ ದರ್ಶನವಾದೀತು ?)

(ಗ) ಭಾವಾರ್ಥ (ಉಭಯಪರ)—ಹೇ ವ್ಯಾಸಮಹರ್ಷಿಗಳೇ, ನೀವು ಸಜ್ಜನೋದ್ಧಾರಕ್ಕಾಗಿ ವೇದಗಳನ್ನು ವಿಭಾಗ ಮಾಡಿ ಭಾರತ-ಭಾಗವತಾದಿ ಸಚ್ಛಾಸ್ತ್ರಗಳನ್ನು ರಚಿಸಿದಿರಿ (ಆನಂದ-ತೀರ್ಥ). ಅದರಲ್ಲಿ ನಿರೂಪಣೆ ಮಾಡಿದಂತೆ ಉಪಾಸನೆ ಮಾಡುವವರಿಗೆ ಮೋಕ್ಷವನ್ನೂ ಅನು-ಗ್ರಹಿಸುತ್ತೀರಿ (ನಿತ್ಯದ). ಹೇ ಮಧ್ವಾಚಾರ್ಯರೇ ನೀವು ಅವರಿಗೆ ಸಾಧನ ಸಂಪೂರ್ತಿ ಮಾಡಿಸಿ ವಿಷ್ಣುಪ್ರಸಾದದ್ವಾರಾ ಮೋಕ್ಷಕೊಡಿಸುವಿರಿ (ನಿತ್ಯದ). (ಉಭಯಪರ) ನಿಮ್ಮ ಮುಖಕಮಲವು, ಆಹಾ, ಎಷ್ಟು ಆಹ್ಲಾದಕರವಾಗಿದೆ! ಹುಣ್ಣಿಮೆಯ ಚಂದ್ರಮಂಡಲದಂತೆ ಸ್ವಚ್ಛವಾದ ಕಾಂತಿಯಿಂದ ಮನಸ್ಸಿಗೆ ಉಲ್ಲಾಸ ಕೊಡುತ್ತಾ ಹೇಗೆ ಬೆಳಗುತ್ತಿದೆ ! ಆದರೆ ಆ ಚಂದ್ರಮಂಡಲಕ್ಕೆ ವೃದ್ಧಿಕ್ಷಯಗಳೂ ಉಂಟು. ನಿಮ್ಮ ಮುಖಚಂದ್ರ ಅದಕ್ಕೆ ಸುತರಾಂ ವಿರುದ್ಧ. ಇದಕ್ಕೆ ಕಳಂಕವೂ ಇಲ್ಲ, ಹಾನಿಯೂ ಇಲ್ಲ, ವೃದ್ಧಿಯೂ ಇಲ್ಲ—ಸದಾ ಪೂರ್ಣಕಾಂತಿಯಿಂದ ಶೋಭಿಸುತ್ತಿರುತ್ತದೆ. ಆ ಚಂದ್ರಮಂಡಲ-ದಿಂದ ಬೆಳದಿಂಗಳೆಂಬ ಅಮೃತಪ್ರವಾಹ ಹರಿದು ಬರುತ್ತಿರುವಂತೆ ಈ ಮುಖ-ಮಂಡಲದಿಂದ ಒಂದು ಕಡೆ ಮಂದಹಾಸವೂ ಇನ್ನೊಂದು ಕಡೆ ಜೇನಿನಂತೆ ಮಧುರವಾದ ಸರಸಸಲ್ಲಾಪವೂ ಸದಾ ಅಮೃತಧಾರೆಯಂತೆ ಗಂಭೀರವಾಗಿ ಉದ್ಗಮಿಸುತ್ತಿರುತ್ತವೆ. ಅಮೃತಪ್ರವಾಹದಲ್ಲಿ ಮಿಂದ ಜನಗಳಿಗೆ ಸಕಲ ಸಂತಾಪವೂ ನಿವಾರಣೆಯಾಗಿ ಹೇಗೆ ಮನಸ್ಸಿಗೆ ಹರ್ಷವಾಗುವುದೋ ಹಾಗೆ ನಿಮ್ಮ ಮುಖದ ಮಂದಹಾಸವನ್ನು ನೋಡಿದರೂ ಮಧುರಾಲಾಪವನ್ನು ಕೇಳಿದರೂ ಅಥವಾ ಧ್ಯಾನಮಾಡಿದರೂ ಸಜ್ಜನರ ಸಕಲ ಅನಿಷ್ಟಗಳೂ ಪರಿಹಾರವಾಗಿ ಮನಸ್ಸಿಗೆ ಶಾಂತಿಯುಂಟಾಗುತ್ತದೆ. ಈ ಮುಖಚಂದ್ರನನ್ನು

ಎಷ್ಟು ನೋಡಿದರೂ ಕಣ್ಣು ದಣಿಯುವುದಿಲ್ಲ. ಎಷ್ಟು ಧ್ಯಾನಿಸಿದರೂ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ನಿಮ್ಮ ಆ ಮುಖಕಮಲದ ಪ್ರತ್ಯಕ್ಷ ದರ್ಶನಕ್ಕೇ ಅಪರೋಕ್ಷಜ್ಞಾನವೆಂದು ಹೆಸರು. ಅದು ಲಭಿಸಬೇಕಾದರೆ ಎಷ್ಟು ಪುಣ್ಯವಿರಬೇಕು! ಅದರ ಸಾಕ್ಷಾತ್ ದರ್ಶನವೇ ಸಕಲ ಸಾಧನೆಗಳ ಪರಾಕಾಷ್ಠೆ, ಅದೇ ಮುಕ್ತಿಗೆ ನೇರವಾದ ಸಾಧನ. ಆ ನಿಮ್ಮ ಮುಖಚಂದ್ರನನ್ನು ಪ್ರತ್ಯಕ್ಷವಾಗಿ ಕಾಣುವ ಭಾಗ್ಯ ನನಗೆ ಎಂದಿಗೆ ಲಭಿಸೀತೋ ಎಂದು ನಾನು ಹಾತೊರೆಯುತ್ತಿದ್ದೇನೆ ಎಂಬುದೇ ಶ್ಲೋಕಾಭಿಪ್ರಾಯ.

(ಘ) ಸಂದ್ರಕ್ಷ್ಯೇ ಸುಂದರಂ ಎಂಬ ಈ ಶ್ಲೋಕದ ಭಾಗಕ್ಕೆ "ತೇ ನಃ ಪೂರ್ವಾಸಃ...." ಎಂಬ ಋಙ್ಮಂತ್ರದ 'ಚಾರವಃ' ಎಂಬುದು ಸಮಾಖ್ಯೆ ಎಂದು ಯುಕ್ತಿಮಲ್ಲಿಕಾದಲ್ಲಿ ತೋರಿಸಿದ್ದಾರೆ. ಇದು ಮಂತ್ರಪಾಠ—

ತೇ ನಃ ಪೂರ್ವಾಸ ಉಪರಾಸ ಇಂದವೋ
ಮಹೇ ವಾಜಾಯ ಧನ್ವಂತು ಗೋಮತೇ ।
ಈಕ್ಷೇಣ್ಯಾಸೋ ಅಹ್ಯೋಽನ ಚಾರವೋ
ಬ್ರಹ್ಮಬ್ರಹ್ಮ ಯೇ ಜುಜುಷುರ್ಹವಿರ್ಹವಿಃ ॥

(ಋ. ೯।೭೭।೩)

(ಋಕ್ಕಿನ ಪದಶಃ ಅರ್ಥ) ನಃ–ನಮ್ಮ; ಪೂರ್ವಾಸಃ–ಪೂರ್ವೀಕರಾದ ಎಂದರೆ ಉಪದೇಶಕರೂ ಪ್ರೇರಕರೂ ಆದಕಾರಣ ಜ್ಞಾನೋದಯಾತ್ಪೂರ್ವದಲ್ಲಿ ಇದ್ದ; ಇಂದವಃ–ಇಷ್ಟಾರ್ಥವನ್ನು ಕೊಡುವರಾದ್ದರಿಂದ ಇಂದು (ಚಂದ್ರ) ಶಬ್ದವಾಚ್ಯರಾದ; ತೇ–ಅವರು (ವಾಯುದೇವರ ಅವತಾರಗಳು); ಉಪರಾಸಃ–ಜ್ಞಾನೋದಯಾನಂತರ ಮೋಕ್ಷಕೊಡಿಸುವುದಕ್ಕಾಗಿಯೂ, ಅದಕ್ಕೆ ಪೂರ್ವಭಾವಿಯಾಗಿ ಸಂಹಾರ(ಲಯ) ಮಾಡುವುದಕ್ಕೂ ಇರುವ ವಾಯುದೇವರ ಮುಂದಿನ ರೂಪಗಳೂ (ಇದರಿಂದ 'ಆವಿಷ್ಕೃತೋರ್ಜಕಾಮಂ,' ಶ್ಲೋ. ೪,

ಪಿತರತುಲಗುರೋ ಶ್ಲೋ. ೧೪, ತತ್ತ್ವಜ್ಞಾನ್....ಸುಖಯಸಿ ಹಿ ಗುರೋ, ಶ್ಲೋ. ೧೬ ವ್ಯಾಖ್ಯಾತವಾದುವು) ; ಗೋಮತೀ–ಜ್ಞಾನಿಯಾದ, ಮಹೇ–ಮಹತ್ತರನಾದ ಅಥವಾ ಪಂಚಪರ್ವಾದ್ಯುತ್ಸವದಲ್ಲಿ ; ವಾಜಾಯ–ಅನ್ನಕ್ಕಾಗಿ ಎಂದರೆ ಯಜ್ಞಸಾಧನೆಗೂ ಯಜ್ಞಕ್ಕೆ ಬೇಕಾಗುವ ಅನ್ನಕ್ಕಾಗಿ ಎಂದರ್ಥ, ಧನ್ವಂತು–ಧನಧಾನ್ಯಸಮೃದ್ಧಿಯನ್ನು ಕೊಡಲಿ (ಭೂರಿ ಮೇ ಭೂತಿಹೇತುಃ, ಶ್ಲೋ. ೬). ಯೇ–ಯಾವ ಹಿಂದೆ ಹೇಳಿದ ಉಭಯವಿಧ ವಾಯುದೇವರ ಅವತಾರಗಳು ; ಅಹ್ಯಃ ನ–ಸರ್ಪಗಳಿಗೆ ಸಂಬಂಧಿಸಿದಂತೆ ರತ್ನಪ್ರಭೆಗಳಂತೆ, ಈಕ್ಷೇಣ್ಯಾಸಃ–ನೋಡಲು ಮನೋಹರವಾಗಿ (ಎಂದರೆ ರತ್ನಪ್ರಭೆಯಂತೆ ಹೊಳೆಯುವ ದಿವ್ಯದೇಹವುಳ್ಳವರಾಗಿ), (ನಿಜರುಚಿನಿಕರ ವ್ಯಾಪ್ತಲೋಕಾವಕಾಶಃ ಶ್ಲೋ. ೫, ಭೂಮಿ ಭೂಷಾಮಣಿಃ ಶ್ಲೋ. ೫, ಪ್ರೋದ್ಯದ್ವಿದ್ಯಾನವದ್ಯ....ಸಂಪೂರಿತಾಶಃ ಶ್ಲೋ. ೬) ; ಚಾರವಃ–ಅಗಣ್ಯ ಲಾವಣ್ಯದಿಂದ ಕೂಡಿದವಾದ್ದರಿಂದ ಮನೋಹರವೂ ಆದ ರೂಪಗಳಾಗಿ (ಸಂದ್ರಕ್ಷ್ಯೇ ಸುಂದರಂ–ಶ್ಲೋ. ೩೩) ; ಬ್ರಹ್ಮಬ್ರಹ್ಮಾ–ಪ್ರತಿಯೊಂದು ಪ್ರಾಣಿಯ ದೇಹದಲ್ಲೂ ಭಿನ್ನಭಿನ್ನವಾಗಿರುವ ಪರಮಾತ್ಮನನ್ನು ಅಥವಾ ಬೇರೆ ಬೇರೆ ಅವತಾರಗಳಲ್ಲಿ ಅವತಾರಮಾಡಿದ ರಾಮಕೃಷ್ಣವೇದವ್ಯಾಸಾದಿನಾನಾವತಾರ ಮಾಡಿದ ಪರಮಾತ್ಮನನ್ನೂ, ಜುಜುಷುಃ–ಸೇವಿಸಿದರು (ಜುಷ್ಟಿಂ ಮಾತರಿಶ್ವಾ ಜಗಾಮ (ಶ್ರುತಿ), ಆಸೇವ್ಯೋದ್ಯದ್ದಯಾದ್ರ್ಯಃ ೨೧ ಶ್ಲೋ. ಯಾಭ್ಯಾಂ ಶುಶ್ರೂಷುರಾಸೀಃ ೨೬ ಶ್ಲೋ. ಭಕ್ತಿಮುದ್ಯಾಪಿ ರಾಮೋ ಶ್ಲೋ. ೧೭). ಹವಿಃ ಹವಿಃ–ಬೇರೆ ಬೇರೆ ಯಜ್ಞಗಳಲ್ಲಿ 'ವಾಯವೇ ಸ್ವಾಹಾ' ಎಂದು ಆಹ್ವಾನಿಸಿಕೊಡುವ ಸಕಲ ಹವಿಸ್ಸನ್ನೂ, ಭೋಜನ ಮಾಡಿದ ಸಕಲರೂ ಹಾಗೆಯೇ ಸಕಲ ವೈದೀಕರು ಕೊಡುವ ಹವಿಸ್ಸನ್ನೂ, ಏಕಚಕ್ರಾನಗರದಲ್ಲಿ ಪ್ರತಿಯೊಬ್ಬ ಬ್ರಾಹ್ಮಣರ ಮನೆಯಲ್ಲಿ ಕೊಟ್ಟ ಹವಿಸ್ಸನ್ನೂ ಮಧ್ವರೂಪದಿಂದ ಭಿಕ್ಷಾರೂಪದಿಂದ ಸ್ವೀಕರಿಸಿದ ಸಕಲ ಹವೀರೂಪ ಅನ್ನವನ್ನೂ, ಜುಜುಷುಃ–ಪ್ರೀತಿಯಿಂದ ಸೇವಿಸಿದರು.

(ಋಙ್ಮಂತ್ರದ ತಾತ್ಪರ್ಯ) ಆ ವಾಯುದೇವರು, 'ಭಗವತಿ ಭಕ್ತ್ಯತಿಶಯೇನ ಭಗವದುಪಾಸನಾರ್ಥಂ ಸ್ವೇಚ್ಛಯಾ ಗೃಹೀತರೂಪಾಣಾಂ–

ಭಗವಂತನಲ್ಲಿ ಅತಿಶಯವಾದ ಭಕ್ತಿಯಿರುವ ಕಾರಣ ಆ ಭಗವಂತನನ್ನು ಉಪಾಸನೆ ಮಾಡುವುದಕ್ಕಾಗಿ ಅನೇಕ ರೂಪಗಳನ್ನು ಸ್ವೀಕರಿಸುವ' ಎಂದು ಶ್ರೀ ಮಂತ್ರಾಲಯಪ್ರಭುಗಳು ಪ್ರಾತಃಸಂಕಲ್ಪ ಗದ್ಯದಲ್ಲಿ ನಿರೂಪಿಸಿರುವಂತೆ, ಭಗವಂತನ ಸೇವೆಗಾಗಿ ಅನೇಕ ರೂಪಗಳನ್ನು ಧರಿಸಿದ್ದಾರೆ. ಕೆಲವು ರೂಪಗಳು ಎಲ್ಲ ಜೀವರಿಗೂ ಮೊದಲೇ ಸೃಷ್ಟಿಯಾದುವು; ಆ ರೂಪಗಳಿಂದ ರುದ್ರಾದಿದೇವತೆಗಳಿಗೆ ಮಾತ್ರವಲ್ಲದೆ ಸಕಲ ಸಜ್ಜನರಿಗೂ (ಸ್ಮರಣ ಮಾತ್ರ-ದಿಂದ) ಜ್ಞಾನೋಪದೇಶ ಮಾಡಿ ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುತ್ತವೆ. ಕೆಲವು ರೂಪಗಳು ಮಹಾಪ್ರಳಯಕಾಲದವರೆಗೂ ಇದ್ದು ಎಲ್ಲರನ್ನೂ ಲಯ ಮಾಡಿ, ಸಂಹಾರಮಾಡಿ, ಕೊನೆಗೆ ತ್ರಿವಿಧ ಜೀವರಿಗೆ ತಕ್ಕಂತೆ 'ಸ ಏನಾನ್ ಬ್ರಹ್ಮ ಗಮಯತಿ' 'ಈ ವಾಯುದೇವರು ಈ ಮುಕ್ತಿಯೋಗ್ಯರನ್ನು ಪರ-ಬ್ರಹ್ಮನೆಂಬ ವಿಷ್ಣುವನ್ನು ಸೇರಿಸುತ್ತಾರೆ—ವೈಕುಂಠಕ್ಕೆ ಕಳುಹಿಸುತ್ತಾರೆ' ಎಂಬ ಶ್ರುತಿಯಂತೆ ಅವರವರಿಗೆ ಯೋಗ್ಯವಾದ ಸ್ಥಾನಗಳನ್ನು ಕೊಡಿಸುತ್ತಾರೆ. ವಾಯುದೇವರ ಈ ಸಕಲ ರೂಪಗಳೂ ಜ್ಞಾನಸ್ವರೂಪಗಳೂ ಬಲಾತ್ಮಕವೂ ಆಗಿರುವುವಲ್ಲದೆ ಅಗಣ್ಯಲಾವಣ್ಯೋಪೇತವಾಗಿ ಹಾವುಗಳ ಹೆಡೆಗಳಲ್ಲಿರುವ ನಾಗರತ್ನಗಳಂತೆ ಥಳಥಳಿಸುತ್ತಾ ದಿವ್ಯಸೌಂದರ್ಯವುಳ್ಳ ದೇಹದೊಡನೆ ಪರಿಶೋಭಿಸುತ್ತಿರುತ್ತವೆ. (ಈ ವಾಕ್ಯವೇ ಪ್ರಕೃತ ಶ್ಲೋಕದಲ್ಲಿರುವ 'ಸಂದ್ರಕ್ಷ್ಯೇ ಸುಂದರಂ'—ಎಂಬ ಭಾಗಕ್ಕೆ ಸಮಾಖ್ಯೆ). ಈ ವಾಯುರೂಪಗಳು ನಮಗೆ ವಿಷ್ಣುಪೂಜಾರೂಪವಾದ ಯಜ್ಞಯಾಗಾದಿ ಸತ್ಕಾರ್ಯಗಳನ್ನು ನಡೆಸಲು ಬೇಕಾದ ಧನಧಾನ್ಯಾದಿ ಸಮೃದ್ಧಿಯನ್ನು ಅನುಗ್ರಹಿಸಲಿ ಮತ್ತು ನಮ್ಮ ಸೇವೆಯನ್ನೂ ಸ್ವೀಕರಿಸಲಿ. ಆ ಸಕಲ ರೂಪಗಳೂ ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಬಿಂಬರೂಪನಾಗಿರುವ ಸಕಲ ಭಗವನ್ಮೂರ್ತಿಗಳನ್ನೂ ಆಯಾಯಾ ಯುಗಗಳಲ್ಲಿ ಅವತಾರವೆತ್ತುವ ರಾಮಕೃಷ್ಣವೇದವ್ಯಾಸಾದಿ ಅನಂತರೂಪಗಳನ್ನೂ ಪ್ರತ್ಯಕ್ಷವಾಗಿ ನೋಡುತ್ತಾ ಐಕ್ಯಚಿಂತನ ಮಾಡಿ (ಗುಣೋಪಸಂಹಾರ ಮಾಡಿ) ಸೇವಿಸುತ್ತಾರೆ. ಯಜ್ಞಾದಿ ಸತ್ಕಾರ್ಯಗಳಲ್ಲಿ ಕರ್ತೃಗಳೂ ಋತ್ವಿಜರೂ ಕೊಡುವ ಅನ್ನಾದಿ ಹವಿಸ್ಸುಗಳನ್ನೂ ಸಕಲ ಪ್ರಾಣಿಗಳೂ ತಿನ್ನುವ ಅನ್ನದ ಸಾರವನ್ನೂ ಸ್ವೀಕರಿಸಿ ಭಗವಂತನಲ್ಲಿ

ಅರ್ಪಿಸುತ್ತಾರೆ. ಭೀಮರೂಪದಿಂದ ಏಕಚಕ್ರಾನಗರಿಯ ಜನಗಳು ಅರ್ಪಿಸಿದ 'ಬಂಡಿ ಅನ್ನ'ವನ್ನು ಉಂಡರೆ ಮಧ್ವರೂಪದಿಂ ಭಿಕ್ಷಾನ್ನವನ್ನೂ ಸ್ವೀಕರಿಸಿ ಆಯಾ ಜೀವಿಗಳನ್ನು ಉದ್ಧಾರ ಮಾಡಿದರು.

ಇಲ್ಲಿಗೆ ೩೩ನೇ ಶ್ಲೋಕ ಮುಗಿಯಿತು

———

ಶ್ಲೋಕ ೩೪. ಆಚಾರ್ಯರ ವ್ಯಾಖ್ಯಾನದ ವೈಭವ

345. ಕ) ಅವತಾರಿಕೆ—(ಕಕ. ವಿ.ಭ.) ಸಕಲ ಸಚ್ಛಾಸ್ತ್ರಗಳನ್ನೂ ತಮ್ಮ ಶಿಷ್ಯರಿಗೆ ವಿವರಿಸುತ್ತಿರುವ ಶ್ರೀಮದಾಚಾರ್ಯರನ್ನು ಅವರ ವಿವರಣೆಯ ಶ್ರವಣ ಮಾಡಲು ಅಪೇಕ್ಷಿಸಿ ಪ್ರಾರ್ಥಿಸುತ್ತಾರೆ. (ಪುರಾ.) ಏತಾದೃಶಮಹಿಮೋಪೇತರಾದ ಶ್ರೀವೇದವ್ಯಾಸರಿಂದಲೂ ಶ್ರೀಮದಾಚಾರ್ಯರ ಕಡೆಯಿಂದಲೂ ಸಾಕ್ಷಾತ್ ತತ್ತ್ವೋಪದೇಶವಾಗಲೆಂದು ಪ್ರಾರ್ಥಿಸುತ್ತಾರೆ—

ಪ್ರಾಚೀನಾಚೀರ್ಣಪುಣ್ಯೋ—ಚ್ಚಯ-ಚತುರತರಾ—
　ಚಾರತ-ಶ್ಚಾರುಚಿತ್ತಾ(ನ್)—
(ಅ) ನ (ಅ)ತ್ಯುಚ್ಚಾಂ ರೋಚಯಂತೀಂ ಶ್ರುತಿಚಿತವಚನಾಂ
　(-ನಾನ್) ಶ್ರಾವಕಾಂಶ್ಚೋದ್ಯ ಚುಂಚೂನ್ ।
ವ್ಯಾಖ್ಯಾಮುತ್ಖಾತದುಃಖಾಂ ಚಿರಮುಚಿತಮಹಾ-
　ಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರಕರ್ತ—ಶ್ಚರಣ ಪರಿಚರಾನ್-
　ಛ್ರಾವಯಾಸ್ಮಾಂಶ್ಚ ಕಿಂಚಿತ್　　॥ ೩೪ ॥

ಖ) ಪದವಿಭಾಗ—ಪ್ರಾಚೀನಾ....ಚಾರತಃ, ಚಾರುಚಿತ್ತಾನ್, ಅತ್ಯುಚ್ಚಾಂ, ರೋಚಯಂತೀಂ, ಶ್ರುತಿಚಿತವಚನಾಂ, ಶ್ರಾವಕಾನ್, ಚೋದ್ಯಚುಂಚೂನ್, ವ್ಯಾಖ್ಯಾಂ, ಉತ್ಖಾತದುಃಖಾಂ, ಚಿರಂ, ಉಚಿತ, ಮಹಾಚಾರ್ಯ (ಕಕ.. ವಿ. ಉಚಿತ ಮಹಾಚಾರ್ಯ), ಚಿಂತಾರತಾನ್, ತೇ, ಚಿತ್ರಾಂ, ಸಚ್ಛಾಸ್ತ್ರಕರ್ತಃ, ಚರಣಪರಿಚರಾನ್, ಶ್ರಾವಯ, ಅಸ್ಮಾನ್ ಚ, ಕಿಂಚಿತ್.

ಗ) ವಿಶ್ಲೇಷಣ—ಈ ಶ್ಲೋಕಕ್ಕೂ ಉಭಯಪರವಾಗಿ ಒಂದೇ ಅರ್ಥ. ಉಚಿತ, ಮಹಾಚಾರ್ಯ (ಅಥವಾ ಕಕ. ವಿ. ರೀತ್ಯಾ ಉಚಿತ-ಮಹಾಚಾರ್ಯ), ಸಚ್ಛಾಸ್ತ್ರಕರ್ತಃ ಎಂಬ ಮೂರೂ ವ್ಯಾಸ-ಮಧ್ವ ಉಭಯಪರ ಸಂಬೋಧನೆಗಳು. ಶ್ರಾವಯ-ಕೇಳಿಸು ಎಂದರೆ ಶ್ರವಣ ಮಾಡಿಸು, ಹೇಳು ಎಂಬುದೇ ಕ್ರಿಯಾಪದ. ಇದು ದ್ವಿಕರ್ಮಕ; ಆದ-ಕಾರಣ, ವ್ಯಾಖ್ಯಾಂ, ಅಸ್ಮಾನ್ ಚ ಎಂದು ಎರಡು ಕರ್ಮಗಳು. ಕಿಂಚಿತ್ ಎಂಬುದು ಕ್ರಿಯಾವಿಶೇಷಣ. ಹೇ ಸಚ್ಛಾಸ್ತ್ರಕರ್ತಃ, ವ್ಯಾಖ್ಯಾಂ ಅಸ್ಮಾನ್ ಚ ಶ್ರಾವಯ-ಹೇ ಸಚ್ಛಾಸ್ತ್ರಕರ್ತರೇ! ತಮ್ಮ ಪ್ರವಚನವನ್ನು ನಮಗೂ ಸ್ವಲ್ಪ ಶ್ರವಣ ಮಾಡಿಸಿರಿ ಎಂಬುದೇ ಪ್ರಧಾನವಾಕ್ಯ. ವ್ಯಾಖ್ಯಾಂ-ಗೆ ೧) ಅತ್ಯುಚ್ಚಾಂ, ೨) ರೋಚಯಂತೀಂ, ೩) ಶ್ರುತಿಚಿತವಚನಾಂ, ೪) ಉತ್ಖಾತದುಃಖಾಂ ೫) ಚಿತ್ರಾಂ—ಎಂದು ಐದು ವಿಶೇಷಣ. ೨ನೇ ರೋಚಯಂತೀಂ ಎಂಬುದಕ್ಕೆ ಶ್ರಾವಕಾನ್ ಎಂಬುದು ಕರ್ಮ. ಈ ಶ್ರಾವಕಾನ್-ಗೆ i) ಪ್ರಾಚೀನಾ....ಚಾರುಚಿತ್ತಾನ್, ii) ಚೋದ್ಯ-ಚುಂಚೂನ್ ಎಂದು ಎರಡು ವಿಶೇಷಣಗಳು. ಅಸ್ಮಾನ್-ಗೆ ಕ) ತೇ ಚಿಂತಾರತಾನ್, ಖ) ಚರಣಪರಿಚರಾನ್ ಎಂದು ಎರಡು ವಿಶೇಷಣಗಳು. ಒಟ್ಟಿನಲ್ಲಿ ಹೇ ಮಹಾಚಾರ್ಯರೇ, i) ii) ಇಂಥಾ ಶ್ರೋತೃಗಳಿಗೆ ರುಚಿ-ಕಟ್ಟಾದಂಥಾ ೧, ೩, ೪, ೫ ಇಂಥಾ ನಿಮ್ಮ ಪ್ರವಚನವನ್ನು ಕ-ಖ ಇಂಥಾ ನಮಗೂ ಸಹ ಸ್ವಲ್ಪ ಶ್ರವಣ ಮಾಡಿಸಿರಿ ಎಂದು ಅನ್ವಯಾರ್ಥ.

ಘ) ಕಠಿಣ ಶಬ್ದಾರ್ಥ—೧) ಪ್ರಾಚೀನಾಚೀರ್ಣ—ಆಚೀರ್ಣ-ಆಚರಿತ (ಕಕ.ವಿ.) ಆಚರಿಸಲ್ಪಟ್ಟ (ಭೂತಕೃದಂತ). ಉಚ್ಚಯ-ಉತ್+ಚಯ ದೊಡ್ಡ ಸಮೂಹ 'ಸಮ ವಾಯುಶ್ಚಯೋ ಗಣಃ' ಅಮರ. ಚಾರು-ಚಿತ್ತಾನ್-ಚಾರು ಎಂದರೆ ಸುಂದರ; 'ಸುಂದರಂ ರುಚಿರಂ ಚಾರು' (ಅಮರ); ಇದು ಚಿತ್ತಕ್ಕೆ ವಿಶೇಷಣವಾದ್ದರಿಂದ (ಕಕ.ವಿ) ನಿರ್ದೋಷ ಅಥವಾ (ಭ.) ನಿರ್ಮಲ-(ಪುರಾ)ಶುದ್ಧ ಎಂದು ಅರ್ಥ ಹೇಳಬೇಕು. ೨) ಶ್ರುತಿಚಿತ ವಚನಾಂ—ಇದು ಕಕ.ವಿ. ಪ್ರಕಾರ ವ್ಯಾಖ್ಯಾಂ-ಗೆ ವಿಶೇಷಣ. ಚಿತ ಶಬ್ದವು ಚಿಞ್ ಚಯನೇ-ಸಂಗ್ರಹಿಸು, ಕೂಡಿಹಾಕು ಎಂಬ (ಸ್ವಾದಿ ಉ) ಧಾತುವಿನ

ಭೂತಕೃದಂತರೂಪ; ಸಂಗ್ರಹಿಸಲ್ಪಟ್ಟ, ಅರಿಸಲ್ಪಟ್ಟ ಅಥವಾ ಇರುವ(ಕಕ.ವಿ) ವಿದ್ಯಮಾನ ಎಂದರ್ಥ. ವೇದವ್ಯಾಸರ ಪಕ್ಷದಲ್ಲಿ ಒಂದೊಂದು ಸೂತ್ರವೂ ಅನೇಕ ಶ್ರುತಿ-ಸ್ಮೃತಿ ವಾಕ್ಯಗಳಿಗೆ ನಿರ್ಣಾಯಕವಾಗಿರುವಂತೆ ರಚಿಸಿದ್ದಾರೆ ಎಂದರ್ಥ. ಆಚಾರ್ಯರ ಪಕ್ಷದಲ್ಲಿ—ಪ್ರತಿಯೊಂದು ಮಾತಿಗೂ ಅನೇಕ ಶೃತಿ-ಸ್ಮೃತಿಗಳ ಪ್ರಮಾಣವನ್ನು ಆಧಾರವಾಗಿ ಹೇಳುವ ಎಂದರ್ಥ. ಗು.ಸಾ. ಟೀಕಾಕಾರರು—ಶ್ರುತೌ ಚಿತಾನಿ ಅಥವಾ ಶ್ರುತಿಭಿಃ ಚಿತಾನಿ ಎಂದು ಎರಡು ರೀತಿ ವಿಗ್ರಹ ತೋರಿಸಿ 'ವೇದಗಳಲ್ಲಿರುವ ಮಾತುಗಳನ್ನೇ ಉದಹರಿಸಿ ಹೇಳುವ ಮಾತುಗಳುಳ್ಳ' ಎಂದೂ, 'ವೇದಗಳಿಂದ ಯುಕ್ತವಾಗಿರುವ ಮಾತುಗಳುಳ್ಳ' ಎಂದೂ ಎರಡು ರೀತಿ ಅರ್ಥ ಹೇಳುತ್ತಾರೆ. ಆದರೆ ಪುರಾ. ಭ. ಇಬ್ಬರೂ 'ಶ್ರುತಿಚಿತವಚನಾನ್' (ಪುಲ್ಲಿಂಗ) ಎಂದು ಪಠಿಸಿ 'ಶ್ರಾವಕಾನ್'–ಗೆ ವಿಶೇಷಣ ಮಾಡುತ್ತಾರೆ. ಇದಕ್ಕೆ ಭ.–ಹೇಳುತ್ತಿರುವ ಪ್ರತಿಯೊಂದು ಅರ್ಥದ ವಿಷಯುದಲ್ಲೂ ವೇದವಾಕ್ಯಗಳನ್ನು ಪ್ರಮಾಣವಾಗಿ ಉದಹರಿಸಿ ತೋರಿಸುತ್ತಿರುವ ಶ್ರೋತೃಗಳನ್ನು ಎಂದು ವಿವರಣೆ ಕೊಡುತ್ತಾರಾದರೂ 'ವ್ಯಾಖ್ಯಾಂ'ಗೆ ವಿಶೇಷಣವೆಂಬುದೇ ಹೆಚ್ಚು ಸಮಂಜಸವಾಗಿ ಕಾಣುತ್ತದೆ; 'ವಿಷತರೂದ್ಧಾಹ-ದಕ್ಷ-ಪ್ರಮಾಣ ಜ್ವಾಲಾಮಾಲಾಧರೋಗ್ನಿಃ' ಎಂದು ೩ನೇ ಶ್ಲೋಕದಲ್ಲಿ ಹೇಳಿದ್ದನ್ನು ನೆನಪು ಮಾಡಬಹುದು.

೩) ಚಿತ್ರಾಂ ವ್ಯಾಖ್ಯಾಂ—ಎಂಬುದಕ್ಕೆ ಗು.ಸಾ.ದಲ್ಲಿ ವಿಶೇಷ ವಿವರಣೆ ಕೊಟ್ಟಿದ್ದಾರೆ. ಅದನ್ನು ಸಂಗ್ರಹಿಸಿ ಹೀಗೆ ಹೇಳಬಹುದು. ವ್ಯಾಖ್ಯಾನವು ರುಚಿಸುವುದಕ್ಕೆ ಅನೇಕ ಸಹಕಾರಿಗಳು ಇರಬೇಕಾಗುತ್ತದೆ. ಎಲ್ಲರಿಗೂ ಅರ್ಥವಾಗುವಂತೆ ಸುಲಭ ಶೈಲಿಯುಲ್ಲಿರಬೇಕು. ಆದರೂ ಅರ್ಥ-ಗಾಂಭೀರ್ಯವುಳ್ಳದ್ದಾಗಿಯೂ ಯುಕ್ತಿಯುಕ್ತವಾಗಿಯೂ ಇರಬೇಕು. ಅಪಶಬ್ದಗಳಾಗಲಿ ಸವ್ಯಾಹತ್ಯಾದಿ ದೋಷಗಳಾಗಲಿ ಇರಬಾರದು. ಇದಕ್ಕೆ ಅನುಗುಣವಾಗಿಯೇ ಶ್ರೀಮದಾಚಾರ್ಯರ ಭಾಷ್ಯಗಳು ನೋಡುವುದಕ್ಕೆ ಸುಲಭವಾಗಿದ್ದರೂ ಅರ್ಥಗಾಂಭೀರ್ಯವುಳ್ಳವಾಗಿವೆ. ಇದನ್ನೇ ಶ್ರೀಮಜ್ಜಯ-ತೀರ್ಥರು 'ಗಾಂಭೀರ್ಯೇ ಜಿತಸಿಂಧುರಾಜಂ, ಅಮಿತಂ' ಎಂದು ವರ್ಣಿಸು-ತ್ತಾರೆ; ಎಂದರೆ ಗಾಂಭೀರ್ಯದಲ್ಲಿ ಸಮುದ್ರರಾಜನನ್ನೇ ಮೀರಿಸುವಂತಿದೆಯಲ್ಲದೆ

ಅಪಾರವಾಗಿ (ಮಿತಿಯಿಲ್ಲದ್ದಾಗಿ) ಇದೆಯೆಂದು ಹೇಳಿದ್ದಾರೆ. ಅವರು ಹೇಳುವ ವಿಚಾರಗಳು ರುದ್ರಾದಿ ಮಹಾಜ್ಞಾನಿಗಳೂ ತಲೆದೂಗುವಂತಿವೆ. ಅವನ್ನು ಎಷ್ಟೆಷ್ಟು ಸಾರಿ ಓದಿದರೂ ಮನಸ್ಸಿಗೆ ತೃಪ್ತಿಯೇ ಆಗುವುದಿಲ್ಲ. ಇದನ್ನೇ ಶ್ರೀಟೀಕಾರಾಯರು 'ಚಂಚರೀಕತಿ ಮೇ ಮನಃ' ; ಆಚಾರ್ಯರ ಗ್ರಂಥದಲ್ಲಿ ನನ್ನ ಮನಸ್ಸು ದುಂಬಿಹುಳ ಹೂವಿನ ಸುತ್ತ ಮತ್ತೆಮತ್ತೆ ಸುತ್ತಾಡುವಂತೆ ಸುತ್ತಾಡುತ್ತಲೇ ಇರುತ್ತದೆ, ಮತ್ತೆ ಮತ್ತೆ ಸ್ವಾದುರಸ ಅನುಭವ ಸಿದ್ಧ-ವಾಗುವುದೇ ಹೊರತು ಮನಸ್ಸಿಗೆ ತೃಪ್ತಿಯೇ ಆಗುವುದಿಲ್ಲ—ಎನ್ನುತ್ತಾರೆ. ಅವರ ಭಾಷ್ಯಗಳು ಪರಮತಗಳನ್ನು ನಿರಾಕರಣೆ ಮಾಡಿ ಸ್ವಮತವನ್ನು ಸ್ಫುಟವಾಗಿ ಸಾಧಿಸುವಂಥವು. ಇದನ್ನೆಲ್ಲಾ ಗಮನಿಸಿ ಚಿತ್ರಾಂ ಎಂದು ಹೇಳಿದ್ದಾರೆ.

೪) ಚೋದ್ಯಚುಂಚೂನ್—ಚುದ ಪ್ರೇರಣೇ (ಚುರಾ. ಉ.)-ಪ್ರೇರಿಸು ಎಂಬ ಧಾತುವಿನಿಂದ ಚೋದಯಿತುಂ ಯೋಗ್ಯಂ ಚೋದ್ಯಂ (ಣ್ಯತ ಪ್ರತ್ಯಯ) ಪ್ರೇರಿಸುವುದಕ್ಕೆ ಯೋಗ್ಯವಾದುದು ಎಂದರೆ ಪ್ರಶ್ನೆ ಎಂದರ್ಥ. 'ಚೋದ್ಯಂ ಚಿತ್ರೇ ಚೋದನಾರ್ಹೇ' (ಪ್ರಶ್ನೆ) ಎಂದು ವೈಜಯಂತೀ ಕೋಶ. 'ಚೋದ್ಯಂ ಸ್ಯಾದದ್ಭುತೇ ಪ್ರಶ್ನೇ ಚೋದನಾರ್ಹೇ ತು ವಾಚ್ಯವತ್' ಎಂದು ಮೇದಿನೀಕೋಶ. (ಚೇಷ್ಟೆಗಾಗಿ ಮಾಡುವ ಪ್ರಶ್ನೆ ಕುಚೋದ್ಯ ಆಗುತ್ತದೆ.) (ಕಕ. ವಿ.ಭ.) ಚೋದ್ಯೈಃ-ಪ್ರಶ್ನೈಃ, ಚುಂಚವಃ-ಪ್ರಸಿದ್ಧಾಸ್ತಾನ್, ಪ್ರಶ್ನೆಗಳಲ್ಲಿ ಜಾಣರಾದ, ಎಂದರೆ ಕೇಳಿದ ವಿಷಯದ ಬಗ್ಗೆ ಉಂಟಾದ ಸಂಶಯಗಳ ಬಗ್ಗೆ ಪ್ರಬಲ ಪೂರ್ವಪಕ್ಷಗಳನ್ನು ಮಂಡಿಸಬಲ್ಲ ಎಂದರ್ಥ (ವ್ಯಾಕರಣಾಂಶ) 'ತೇನ ವಿತ್ತಶ್ಚುಂಚುಪ್-ಚಣಪೌ' (ಪಾ ೫/೨/೨೬) ಎಂಬ ಸೂತ್ರದಂತೆ ಚೋದ್ಯಶಬ್ದಕ್ಕೆ ತೃತೀಯಾರ್ಥದಲ್ಲಿ ಚುಂಚುಪ್ ಪ್ರತ್ಯಯ ಬಂದಿದೆ (ಕಕ.ವಿ.)

೫) ಉಚಿತ ಶಬ್ದಕ್ಕೆ 'ಯೋಗ್ಯ, ಅರ್ಹ, ದಕ್ಷ, ಸಮರ್ಥ' ಎಂದರ್ಥ ಹೇಳಬೇಕು. ಇದನ್ನು ಪುರಾ. ಭ. ಇಬ್ಬರೂ ಬೇರೆ ಪದವೆಂದು ಗ್ರಹಣ ಮಾಡಿದರೆ ಕಕ.ವಿ. ಮಹಾಚಾರ್ಯಕ್ಕೆ ವಿಶೇಷವಾಗಿ ಗ್ರಹಿಸಿ ಉಚಿತ ಮಹಾಚಾರ್ಯ ಎಂದು ಒಂದೇ ಸಮಾಸ ಮಾಡಿದ್ದಾರೆ. (ಭ) ಉಚಿತ-

ವೇದವ್ಯಾಖ್ಯಾನಕರಣ ಯೋಗ್ಯ, ವೇಧಾದಿಗ್ರಂಥಗಳಿಗೆ ವ್ಯಾಖ್ಯಾನಮಾಡುವ ಯೋಗ್ಯತೆಯುಳ್ಳವರೇ.

೬) **ಮಹಾಚಾರ್ಯ** (ಕಕ.) ಯೋಗ್ಯರಾದ ಪೂಜ್ಯಗುರುಗಳೇ, (ವಿ.ಘ.) ಪೂಜ್ಯರಾದ ಆಚಾರ್ಯರೇ. (ಪುರಾ) ಮಹಚ್ಛಬ್ಧವನ್ನು ವಿಶೇಷ್ಯ-ವಾಗಿಯೂ ತೆಗೆದುಕೊಳ್ಳಬಹುದು. ಆಗ (ವೇದವ್ಯಾಸರ ಪಕ್ಷದಲ್ಲಿ) ಮಹತಾಂ–ಮಹಾತ್ಮರಾದ ಬ್ರಹ್ಮ-ರುದ್ರಾದಿಗಳಿಗೂ, ಆಚಾರ್ಯ–ಉಪದೇಶ ಮಾಡುವವರೇ ಎಂದರ್ಥ. ಭಾಗವತದ ಮಂಗಳಶ್ಲೋಕದಲ್ಲಿ 'ತೇನೇ ಬ್ರಹ್ಮ ಹೃದಾಯ ಆದಿಕವಯೇ' ಆದಿ ವಿದ್ವಾಂಸರಾದ ಚತುರ್ಮುಖ ಬ್ರಹ್ಮ-ದೇವರಿಗೇ ಯಾರು ವೇದವನ್ನು ಹೃತ್ಪೂರ್ವಕವಾಗಿ ಉಪದೇಶಿಸಿದರೋ ಎಂದು ಹೇಳಿದ್ದನ್ನು ನೆನಪು ಮಾಡಬಹುದು. ಆಚಾರ್ಯಪಕ್ಷದಲ್ಲಿ ಮಹತಾಂ–ರುದ್ರಾದಿ ದೇವತೆಗಳಿಗೇ, ಆಚಾರ್ಯ–ವಿದ್ಯೋಪದೇಶ ಮಾಡುವ ಗುರುಗಳೇ, ಆದಿಗುರುಗಳೇ ಎಂದೂ ಅರ್ಥಮಾಡಬಹುದು. **ಅತ್ಯುಚ್ಚಾಂ**–(ಗು. ಸಾ.) ಅತಿಶ್ರೇಷ್ಠವಾಗಿಯೂ ಮತ್ತು ಗಂಭೀರ ಧ್ವನಿಯುಳ್ಳದ್ದಾಗಿಯೂ ಇರುವ 'ವ್ಯಾಖ್ಯಾಂ' ಎಂದು ಸಂಬಂಧ.

೭) **ಸಚ್ಛಾಸ್ತ್ರಕರ್ತಃ—ಕರ್ತಃ** ಎಂಬುದು ಪುಲ್ಲಿಂಗ ಕರ್ತೃ (ಕರ್ತಾ) ಶಬ್ದದ ಸಂಬೋಧನಾರೂಪ—ಹೇ ಸಚ್ಛಾಸ್ತ್ರಗಳನ್ನು ರಚಿಸಿದವರೇ ಎಂದರ್ಥ. ಶ್ರೀ. ಸಚ್ಛಾಸ್ತ್ರಶಬ್ದವನ್ನು ವಿವರಿಸುತ್ತಾ ಸೂತ್ರಭಾಷ್ಯದಲ್ಲಿ (೧–೧–೩) ಶಾಸ್ತ್ರಯೋನಿತ್ವಾಧಿಕರಣದಲ್ಲಿ ಉದಹರಿಸಿರುವ "ಋಗ್ಯಜುಃ ಸಾಮ—" ಎಂಬ ಸ್ಕಾಂದಪುರಾಣ ಪ್ರಮಾಣವನ್ನು ಹೇಳಿದ್ದಾರೆ. ಅದರ ಮುಖ್ಯಾರ್ಥವೇನೆಂದರೆ—ಋಗಾದಿ ನಾಲ್ಕು ವೇದಗಳು, ಭಾರತ, ಪಂಚರಾತ್ರ ಮತ್ತು ಮೂಲರಾಮಾಯಣಗಳಿಗೂ ಅವುಗಳಿಗೆ ಅನುಕೂಲವಾದ ಗ್ರಂಥಗಳಿಗೇ ಸಚ್ಛಾಸ್ತ್ರವೆಂದು ಹೆಸರು. ವೇದವ್ಯಾಸರು ಭಾರತವನ್ನೂ ಬ್ರಹ್ಮಸೂತ್ರಗಳನ್ನೂ ರಚಿಸಿದವರಾದ್ದರಿಂದ ಅವರು ಸಚ್ಛಾಸ್ತ್ರಕರ್ತರು; ಶ್ರೀಮಧ್ವಾಚಾರ್ಯರು ವೇದಾದಿಶಾಸ್ತ್ರಗಳಿಗೆ ವ್ಯಾಖ್ಯಾನಕರ್ತರಾದ್ದರಿಂದ 'ಸಚ್ಛಾಸ್ತ್ರಕರ್ತ'ರೆಂದು ಹೇಳಿದರು ಅಥವಾ ಸಚ್ಛಾಸ್ತ್ರಗಳಿಗೆ ಅನುಕೂಲವಾಗಿ

ಸೂತ್ರ ಭಾಷ್ಯಾದಿ ಮೂವತ್ತೇಳು ‘ಮೂಲಗ್ರಂಥ’ಗಳನ್ನು ರಚಿಸಿದ್ದರಿಂದಲೂ ಅವರು ಸಚ್ಛಾಸ್ತ್ರಕರ್ತರು.

೮) ಶ್ರಾವಯಾಸ್ಮಾಂಶ್ಚ ಕಿಂಚಿತ್—ನಮಗೂ ಸ್ವಲ್ಪ ಶ್ರವಣ ಮಾಡಿಸಿರಿ ಎಂಬುದಕ್ಕೆ ‘ಸಪ್ತ ಸ್ವಸೃ—’ ಎಂಬ ಋಙ್ಮಂತ್ರದ (೧೦/೫/೫) ‘ಅಂತರ್ಯೇಮೇ’ ಎಂಬ ಭಾಗ ಸಮಾಖ್ಯೆ. ಆ ಋಙ್ಮಂತ್ರವನ್ನೂ ಅದರ ಅರ್ಥವನ್ನೂ ಯುಕ್ತಿಮಲ್ಲಿಕಾದಲ್ಲಿ ಹೇಳಿದ ಪ್ರಕಾರ ಕೊಟ್ಟಿದೆ.

ಸಪ್ತ ಸ್ವಸೄರರುಷೀರ್ವಾವಶಾನೋ

ವಿದ್ವಾನ್ ಮಧ್ವ ಉಜ್ಜಭಾರಾ ದೃಶೇ ಕಮ್ ।

ಅಂತರ್ಯೇಮೇ ಅಂತರಿಕ್ಷೇ ಪುರಾಜಾ

ಇಚ್ಛನ್ ವವ್ರಿಮವಿದತ್ ಪೂಷಣಸ್ಯ ॥

(ಋ. ೧೦/೫/೫)

(ಮಂತ್ರಾರ್ಥ) ವಾವಶಾನಃ=ಅತಿಶಯವಾಗಿ ಹೊಳೆಯುತ್ತಿರುವ (ವಶಕಾಂತೌ ಎಂಬ ಧಾತುವಿನ ಯಙ್‌ಲುಗಂತರೂಪ); ಕಂ-ಆನಂದರೂಪಿ ಪರಮಾತ್ಮನನ್ನು; ವಿದ್ವಾನ್-ಸಾಕ್ಷಾತ್ತಾಗಿಯೇ ನೋಡಿ ತಿಳಿದ ಹಾಗೂ ಸಕಲ ವೇದಾರ್ಥಗಳಿಂದಲೂ ತಿಳಿದ; ಮಧ್ವಃ-ಮಧ್ವಾಚಾರ್ಯರು; ಅರುಷೀಃ—೧) ರೋಷವಿರೋಧವಾದ ಶಾಂತಾದಿಗುಣವನ್ನು ಕೊಡುವ, ೨) ಭಗವಂತನಲ್ಲದೆ ಬೇರೆ ಋಷಿಗಳು ಇಲ್ಲದ, ೩) ಅ-ಅಕಾರವಾಚ್ಯರಾದ ಹಯಗ್ರೀವರೆಂಬ ಋಷಿಃ-ಋಷಿಸಹಿತವಾದ; ಸ್ವ-ಸೃಃ—ಸ್ವ-ತನಗೆ ತಾನೇ, ಕರ್ತೃಗಳಿಲ್ಲದೆ, ಸೃಃ-ಹೊರಟಂಥಾ ಅಥವಾ ಸ್ವ-ಸ್ವತಂತ್ರನಾದ ಭಗವಂತನ ಮುಖದಿಂದ, ಸೃಃ-ಹೊರಟಂಥಾ; ಸಪ್ತ-ಏಳು ವಿದ್ಯೆಗಳನ್ನು (ನಾಲ್ಕು ವೇದಗಳು, ಪಂಚರಾತ್ರ, ಪುರಾಣಗಳು ಮತ್ತು ಭಾರತ ಈ ಏಳನ್ನು); ದೃಶೇ – ಜ್ಞಾನಕ್ಕೋಸ್ಕರವಾಗಿ; ಉಜ್ಜಭಾರ – ಮೇಲಕ್ಕೆ ಎತ್ತಿದರು.

ಅಪ್ರಾಮಾಣಗಳು ಪೌರುಷೇಯಗಳು, ಮಿಥ್ಯಾತ್ವವನ್ನು ಹೇಳತಕ್ಕವು ಇತ್ಯಾದಿ ಹೇಳಿಕೆಗಳಿಂದ ಅಧಃಪತನವಾಗಿದ್ದುದನ್ನು ಅವುಗಳ ಪ್ರಾಮಾಣ್ಯವನ್ನು ಸಾಧಿಸಿ ಮೇಲಕ್ಕೆ ಎತ್ತಿದರೆಂದು ಭಾವ. (ಇಲ್ಲಿ ಸಪ್ತಸ್ವಸ್ರೂಃ ಎಂದರೆ ಏಳು ಅಕ್ಕ-ತಂಗಿಯರನ್ನು ಸ್ವಸೃ-ಭಗಿನೀ, ಸಹೋದರೀ ಎಂದು ಅರ್ಥವಲ್ಲ, ವಿವರಿಸಿದಂತೆ ಸಪ್ತ ವಿದ್ಯೆಗಳೆಂದೇ ಅರ್ಥವೆಂಬುದನ್ನು ಸಮರ್ಥಿಸುವುದಕ್ಕೆ 'ಸಪ್ತಸ್ವಸಾರೋ ಅಭಿ ಸಂನವಂತೆ' ಎಂಬ ಶ್ರುತ್ಯಂತರದ (ಋ ೧|೧೬೪|೩) ಸಮಾಖ್ಯೆಯನ್ನೂ ತೋರಿಸಿ ಅದರ ಅರ್ಥವನ್ನೂ ವಿವರಿಸಿದ್ದಾರೆ.

ಉದ್ಧರಿಸಲು ಅವರಿಗೇನು ಸಾಮರ್ಥ್ಯ ? ಏಕೆ ಉದ್ಧರಿಸಿದರು ? ಉದ್ಧಾರಮಾಡಿದ್ದರಿಂದ ಏನಾಯಿತು ? ಎಂಬ ಸಂದೇಹಗಳನ್ನು ಉತ್ತರಾರ್ಧ ದಲ್ಲಿ ನಿವಾರಿಸಿದೆ—ಪೂಷಣಸ್ಯ ವವ್ರಿಂ ಇಚ್ಛನ್ ಎಂಬುದರ ಅರ್ಥವನ್ನು ಹಿಂದೆ ಖಂಡ 263-xiiiರಲ್ಲಿ ವಿವರಿಸಿದೆ. ಪೂಷಣಸ್ಯ-೧) ಪೂರ್ಣವಾದ ಬಲವೂ ನಿಯಮನ ಶಕ್ತಿಯೂ ಉಳ್ಳ ೨) ಅಥವಾ ಪೂರ್ಣಬಲವೂ ಪೂರ್ಣಾ-ನಂದವೂ ಉಳ್ಳ ಪರಮಾತ್ಮನ ; ವವ್ರಿಂ-ವರಣವನ್ನು ಎಂದರೆ ಅಂಗೀಕಾರ-ವನ್ನು ಅಥವಾ ಪ್ರಸಾದವನ್ನು ; ಇಚ್ಛನ್-ಇಚ್ಛಿಸಿದವರಾಗಿ, ಮಧ್ವಃ-ಮಧ್ವಾಚಾರ್ಯರು (ಇದರಿಂದ 'ನಿಖಿಲಮುಖಭುಜಂ ತರ್ಪಯಾಮಾಸಿಥ' ಶ್ಲೋ. ೨೩ ಎಂಬುದಕ್ಕೆ ಸಮಾಖ್ಯೆ ಹೇಳಿದಂತಾಯಿತು. ಖಂಡ 263-xiii); ಅಂತರಿಕ್ಷೇ ಪುರಾ-ಜಾಃ-ಜಗತ್‌ಸೃಷ್ಟಿಗೆ ಪೂರ್ವದಲ್ಲಿ (ಪುರಾ-ಪೂರ್ವದಲ್ಲಿ, ಮೊದಲು, ಜಾಃ-ಹುಟ್ಟಿದ) ಹುಟ್ಟಿದ, ಅಥವಾ ಅಂತರಿಕ್ಷೇ-ಅಂತರಿಕ್ಷಾಭಿಮಾನಿಯಾದ ದುರ್ಗಾದೇವಿಯಲ್ಲಿ, ಪುರಾ-ಮೊದಲು, ಜಾಃ-ಹುಟ್ಟಿದ ; ಅಥವಾ ಅಂತಃ ಈಕ್ಷತೇ ಸರ್ವಂ-ಅಂತರಿಕ್ಷಃ ಎಂಬ ವ್ಯುತ್ಪತ್ತಿ-ಯಿಂದ (ಅಂತಃ-ಒಳಗೇ, ಈಕ್ಷತೇ-ಸರ್ವವನ್ನೂ ನೋಡುವವನು, ಬಲ್ಲವನು ಎಂಬ ಅರ್ಥದಂತೆ) ಅಂತರಿಕ್ಷೇ-ಪರಮಾತ್ಮನಲ್ಲಿ, (ಪುರಾ) ಸೃಷ್ಟಿಯ ಪ್ರಾರಂಭದಲ್ಲಿ, ಜಾಃ-ಹುಟ್ಟಿದ; ಸಪ್ತಸ್ವಸ್ರೂಃ-ವೇದಾದಿ ಸಪ್ತವಿದ್ಯೆಗಳನ್ನು, ಅವಿದತ್-ತಾವೇ ತಿಳಿದರು ; ಉಪಕ್ರಮಾದಿ ಲಿಂಗಗಳ ಬಲದಿಂದ ಆ ಸಕಲ ವಿದ್ಯೆಗಳ ತತ್ವಾರ್ಥವನ್ನು ತಿಳಿದರೆಂದು ಅರ್ಥ. ಅಷ್ಟೇ ಅಲ್ಲದೆ—ಅಂತಃ-ಸಾಧು-ಸಜ್ಜನರ ಹೃದಯದ ಒಳಗಡೆ ಇದ್ದು, ಆ ವಿದ್ಯೆಗಳನ್ನೇ, ಯೋಮೋ-

ಪ್ರೇರಿಸಿದರು. (ಇದು 'ಸ್ವಾಮಿನ್ ಸರ್ವಾಂತರಾತ್ಮನ್' ೧೪ ಶ್ಲೋ. 'ಶ್ರಾವಯಾಸ್ಮಾಂಶ್ಚ ಕಿಂಚಿತ್' ಶ್ಲೋ. ೩೪ ಎಂಬುದಕ್ಕೆ ಸಮಾಖ್ಯೆ) ವೇದ ಪುರಾಣಾದಿ ಸಕಲ ವಿದ್ಯೆಗಳೂ ತತ್ವಜ್ಞಾನವೇ (ಸಚ್ಛಾಸ್ತ್ರವೇ), ಆದಕಾರಣ ವಿಷ್ಣುಪ್ರೀತ್ಯರ್ಥವಾಗಿ ವೇದಾದಿ ಸಕಲ ವಿದ್ಯೆಗಳನ್ನೂ, ತಮ್ಮ ಭಾಷ್ಯದಲ್ಲಿ ಅಳವಡಿಸಿ ಸಕಲ ಸಜ್ಜನರಿಗೂ ಉಪದೇಶಿಸಿದರೆಂದು ಭಾವ.

(ಮಂತ್ರದ ಭಾವಾರ್ಥ) 'ಉದ್ಯದ್ರವಿಪ್ರಕರಸನ್ನಿಭಂ' ಎಂದರೆ 'ಉದಯಿಸುತ್ತಿರುವ ಸೂರ್ಯರ ಗುಂಪಿಗೆ (ಪ್ರಕರ) ಸಮಾನವಾಗಿ ಪ್ರಕಾಶಿಸುತ್ತಿರುವ' ಎಂದು ತಂತ್ರಸಾರೋಕ್ತ ವಾಯುಮೂಲರೂಪಧ್ಯಾನಶ್ಲೋಕದಲ್ಲೂ, 'ನವಾರ್ಕಕಾಂತಿಸ್ಮಿತ ಸುಂದರಾಸ್ಯಂ' ಆಗತಾನೇ ಉದಯಿಸಿದ ಸೂರ್ಯ (ಅರ್ಕ)ನಂತೆ ಕಾಂತಿಯುಳ್ಳವರೂ ಮಂದಹಾಸದಿಂದ ಸುಂದರವಾದ ಮುಖ (ಆಸ್ಯ)ವುಳ್ಳವರೂ ಆದ, ಎಂದು ಪಂಚರಾತ್ರೋಕ್ತ ಮಧ್ವಾಚಾರ್ಯರ ಧ್ಯಾನಶ್ಲೋಕದಲ್ಲೂ ಹೇಳಿದಂತೆ ಅತಿಶಯ ಪ್ರಕಾಶದಿಂದ ಬೆಳಗುತ್ತಿರುವ (ವೇವಿಜಾನಃ) ಶ್ರೀಮನ್ಮಧ್ವಾಚಾರ್ಯರು, ನಿತ್ಯಾಪರೋಕ್ಷವುಳ್ಳ ಸರ್ವೋತ್ತಮಾಧಿಕಾರಿಗಳಾದ್ದರಿಂದ, ಅಮಿತಾನಂದಸ್ವರೂಪನಾದ ಭಗವಂತನನ್ನೂ (ಕಂ), ನಾವೆಲ್ಲ ಸೂರ್ಯನನ್ನು ಪ್ರತ್ಯಕ್ಷವಾಗಿಯೇ ನೋಡುವಂತೆ, ಪ್ರತ್ಯಕ್ಷವಾಗಿಯೇ ಪೂರ್ಣಪ್ರಕಾಶದೊಡನೆ ನೋಡಿ ತಿಳಿದಿದ್ದಾರಲ್ಲದೆ (ವಿದ್ವಾನ್) ಸಕಲ ಶಾಸ್ತ್ರಗಳ ಅಭ್ಯಾಸಬಲದಿಂದಲೂ (ಆಗಮ) ಅರಿತುಕೊಂಡಿದ್ದಾರೆ (ವಿದ್ವಾನ್). ಇಂಥಾ ಮಧ್ವಾಚಾರ್ಯರು ಅಪೌರುಷೇಯಗಳಾದ ಕಾರಣ ಪ್ರಳಯಕಾಲದಲ್ಲಿ ಮರೆಯಾಗಿದ್ದು ಸೃಷ್ಟಿಕಾಲದಲ್ಲಿ ಮೊದಲು ಹುಟ್ಟಿದ (ಎಂದರೆ ಪ್ರಕಟವಾದ), ಮತ್ತು ದುರ್ಗಾದೇವಿಯಿಂದ ಪ್ರಳಯಕಾಲದಲ್ಲೇ ಭಗವಂತನನ್ನು ಸ್ತುತಿಸುವುದಕ್ಕಾಗಿ ಪ್ರಕಾಶಗೊಂಡ, ಮತ್ತು ಅಕಾರವಾಚ್ಯರಾದ ಹಯಗ್ರೀವದೇವರಿಂದ ಶ್ವಾಸರೂಪವಾಗಿ ಹೊರಗೆ ಬಂದಂಥಾ ನಾಲ್ಕು ವೇದಗಳನ್ನೂ ಪುರಾಣ ಪಂಚರಾತ್ರ ಭಾರತಗಳು ಸೇರಿ ಏಳು ವಿದ್ಯೆಗಳನ್ನೂ ಸಜ್ಜನರಿಗೆ ನಿರ್ಮಲ ಜ್ಞಾನೋದಯವಾಗುವ ನಿಮಿತ್ತ (ದೃಶೇ), ಅಪ್ರಾಮಾಣ್ಯ-ಪೌರುಷೇಯತ್ವ-ಮಿಥ್ಯಾತ್ವಾವೇದಕತ್ವಾದಿ ಅಧಃಪತನ ದೆಶೆಯಿಂದ ಉದ್ಧಾರಮಾಡಿ ಪ್ರಮಾಣಗಳೆಂದು ಸ್ಥಾಪಿಸಿದರು. ಮತ್ತು ಆ

ಏಳು ವಿದ್ಯೆಗಳ ತತ್ತ್ವಾರ್ಥವನ್ನು ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ತಾವು ಮೊದಲು ತಿಳಿದುಕೊಂಡರು. ಬಳಿಕ ಬಲಜ್ಞಾನಾನಂದಾದಿಗುಣಪೂರ್ಣವಾದ (ಪೂಷಣಸ್ಯ) ಶ್ರೀಹರಿಯ ಪ್ರೀತ್ಯರ್ಥವಾಗಿ (ವವ್ರಿಂ ಇಚ್ಛನ್) ಆ ವಿದ್ಯೆಗಳನ್ನೆಲ್ಲಾ ಅಳವಡಿಸಿಕೊಂಡು ಗೀತೆ ಬ್ರಹ್ಮಸೂತ್ರ ಉಪನಿಷದಾದಿ ಗ್ರಂಥಗಳಿಗೆ ಭಾಷ್ಯವನ್ನು ರಚಿಸಿ ಸಕಲ ಸಜ್ಜನರಿಗೂ ಉಪದೇಶಿಸಿದರು. (ಎಲ್ಲರಿಗೂ ಉಪದೇಶಿಸಿದ್ದರಿಂದ 'ಶ್ರಾವಯಾಸ್ಮಾಂಶ್ಚ ಕಿಂಚಿತ್' ಎಂಬುದು-ಶ್ಲೋ. ೩೪ ವ್ಯಾಖ್ಯಾತವಾಯಿತು.)

346. ಕ) ಉಭಯಪರ ದಂಡಾನ್ವಯ—ಉಚಿತ ಸಚ್ಛಾಸ್ತ್ರಕರ್ತಃ, ಮಹಾಚಾರ್ಯ (ಪುರಾ. ಭ.), ಸಚ್ಛಾಸ್ತ್ರಕರ್ತಃ ಉಚಿತಮಹಾಚಾರ್ಯ (ಕಕ. ವಿ.) 1) a) ಪ್ರಾಚೀನಾ....ಚಿತ್ತಾನ್, b) ಶ್ರುತಿಚಿತವಚನಾನ್ (ಪುರಾ. ಭ.), c) ಚೋದ್ಯಚುಂಚೂನ್, d) ಶ್ರಾವಕಾನ್ ಚಿರಂ (ವಿ. ಕಕ.) ರೋಚಯಂತೀಂ, 2) ಅತ್ಯುಚ್ಚಾಂ 2a) ಶ್ರುತಿಚಿತವಚನಾಂ (ಕಕ. ವಿ.), 3) ಉತ್ಪಾತದುಃಖಾಂ, 4) ಚಿತ್ರಾಂ ತೇ ವ್ಯಾಖ್ಯಾಂ, ಚಿರಂ (ಪುರಾ) (ತೇ) ಚಿಂತಾರತಾನ್, ಚರಣಪರಿಚರಾನ್ ಅಸ್ಮಾಂಶ್ಚ ಕಿಂಚಿತ್ ಶ್ರಾವಯ.

ಖ) ಉಭಯಪರ ಅನ್ವಯಾರ್ಥ—(ಕೇವಲ ವ್ಯಾಸಪರ) ಉಚಿತ-(ಸರ್ವಸಮರ್ಥರೂ ಸರ್ವಜ್ಞರೂ ಆದಕಾರಣ ಶಾಸ್ತ್ರರಚನೆಯಲ್ಲಿ) ಸಮರ್ಥರಾದ, ಸಚ್ಛಾಸ್ತ್ರಕರ್ತಃ-ಪುರಾಣ ಭಾರತ ಬ್ರಹ್ಮಸೂತ್ರಾದಿ ಸಚ್ಛಾಸ್ತ್ರಗಳನ್ನು ರಚಿಸಿದಂಥಾ; ಮಹಾಚಾರ್ಯ-ಬ್ರಹ್ಮಾದಿದೇವತೆಗಳಿಗೂ ವಿದ್ಯೋಪದೇಶಕರಾದ ಹೇ ವೇದವ್ಯಾಸರೇ! (ಕೇವಲ ಮಧ್ವಪರ) ಉಚಿತ-ಸಚ್ಛಾಸ್ತ್ರರಚನೆ ಮಾಡುವ ಅರ್ಹತೆಯುಳ್ಳ, ಸಚ್ಛಾಸ್ತ್ರಕರ್ತಃ-ವೇದಾದಿ ಸಚ್ಛಾಸ್ತ್ರಗಳಿಗೆ ವ್ಯಾಖ್ಯಾನ ಮಾಡಿದವರೇ ಅಥವಾ ವೇದಾದಿ ಸಚ್ಛಾಸ್ತ್ರಗಳಿಗೆ ಅನುಸಾರವಾಗಿ ಗೀತಾ ಬ್ರಹ್ಮಸೂತ್ರಾದಿ ಸಚ್ಛಾಸ್ತ್ರಗಳಿಗೆ ಭಾಷ್ಯರಚನೆ ಮಾಡಿದ; (ಉಚಿತ) ಮಹಾಚಾರ್ಯ (ಕಕ) ಯೋಗ್ಯ ಪೂಜ್ಯಗುರುಗಳೇ, (ವಿ) ಯೋಗ್ಯರಾದ ಪೂಜ್ಯಾಚಾರ್ಯರೇ, (ಪುರಾ) ರುದ್ರಾದಿದೇವತೆಗಳಿಗೂ ವಿದ್ಯೋಪದೇಶ ಮಾಡಿದ ಆದಿಗುರುಗಳಾದ ಶ್ರೀಮಧ್ವಾಚಾರ್ಯರೇ!

ಪ್ರಾಚೀನಾ....ಚಾರತಃ— ಪ್ರಾಚೀನ–ಹಿಂದಿನ ಜನ್ಮಗಳಲ್ಲಿ, ಆಚೀರ್ಣ–ಮಾಡಿದ, ಪುಣ್ಯ–ಪುಣ್ಯಗಳ, ಉಚ್ಚಯ–ಸಮೂಹದಿಂದ (ರಾಶಿಯಿಂದ), ಚತುರತರ–ಅತ್ಯಂತ ದಕ್ಷವಾದ, ಆಚಾರತಃ–ಸಂಪ್ರದಾಯಾಚರಣೆಯಿಂದ (ಸದನುಷ್ಠಾನದಿಂದ); ಚಾರು–ಚಿತ್ತಾನ್–ನಿರ್ದೋಷವಾದ (ಪರಿಶುದ್ಧವಾದ) ಮನಸ್ಸುಳ್ಳ ; b) (ಪುರಾ. ಛ) ಶ್ರುತಿ....ವಚನಾನ್–ಶ್ರುತಿ–ವೇದವಾಕ್ಯ–ಗಳಿಂದ, ಚಿತ–ಸಂಬದ್ಧವಾದ, ವಚನಾನ್–ವಾಕ್ಯವುಳ್ಳಂಥಾ (ಎಂದರೆ ತಾವು ಹೇಳುವ ಪ್ರತಿವಿಷಯದಲ್ಲಿಯೂ ವೇದೋದಾಹರಣ ಮಾಡುವಂಥಾ–ಪುರಾ); (c) ಚೋದ್ಯ ಚುಂಚೂನ್–ಪ್ರಶ್ನೆಗಳಲ್ಲಿ ಜಾಣರಾದ (ಪ್ರಬಲವಾಗಿ ಪೂರ್ವ ಪಕ್ಷಗಳನ್ನು ಮಂಡಿಸಬಲ್ಲ) ; d) ಶ್ರಾವಕಾನ್–ಶಿಷ್ಯಜನರನ್ನು ಕುರಿತು ; ಚಿರಂ–ಬಹಳವಾಗಿ (ಚೆನ್ನಾಗಿ); ರೋಚಯಂತೀಂ–(ಅವರ ಶಂಕಾಪರಿಹಾರ ಮಾಡುವುದರಿಂದ) ರುಚಿಪಡಿಸುತ್ತಿರುವಂಥಾ ; 2) ಅತ್ಯುಚ್ಚಾಂ–ಅತ್ಯು–ತ್ಕೃಷ್ಟವಾದ ; 2a) ಶ್ರುತಿ–ಚಿತ–ವಚನಾಂ–ತಮ್ಮ ವಿವರಣೆಗೆ ಆಧಾರವಾಗಿ ವೇದಗಳಿಂದ ಸಂಗ್ರಹಿಸಿದ ಪ್ರಮಾಣೋಕ್ತಿಗಳುಳ್ಳ ; . 3) ಉತ್–ಖಾತ–ದುಃಖಾಂ–ದುಃಖಗಳನ್ನು ಕಿತ್ತೊಗೆಯುವ ; 4) ಚಿತ್ರಾಂ–ಅದ್ಭುತವಾದಂಥಾ (ಆಶ್ಚರ್ಯಕರವಾದಂಥಾ); (ತೇ)–ನಿಮ್ಮ ; ವ್ಯಾಖ್ಯಾಂ–ಪ್ರವಚನವನ್ನು; (ಚಿರಂ–ಬಹುಕಾಲದಿಂದ); ತೇ–ನಿಮ್ಮ, ಚಿಂತಾರತಾನ್–ಧ್ಯಾನಾಸಕ್ತರಾದ; ಚರಣಪರಿಚರಾನ್–ಪಾದಸೇವಕರಾದ; ಅಸ್ಮಾನ್ ಚ–ನಮಗೂ ಸಹ; ಕಿಂಚಿತ್ ಶ್ರಾವಯ–ಸ್ವಲ್ಪ (ಗ್ರಹಣ ಯೋಗ್ಯತೆ ಇದ್ದಷ್ಟು, ತಲೆಗೆ ಹತ್ತು–ವಷ್ಟು) ಶ್ರವಣಮಾಡಿಸಿರಿ.

ಗ) ಭಾವಾರ್ಥ—(ವೇದವ್ಯಾಸರ ಪರವಾಗಿ) ಹೇ ವೇದವ್ಯಾಸರೇ, ನೀವು ಸರ್ವವನ್ನೂ ತಿಳಿದ ನಿರ್ದುಷ್ಟವಾದ ಜ್ಞಾನದ ಅಪಾರ ಸಮುದ್ರ–ರಾಗಿದ್ದೀರಿ. ಸಮೀಚೀನ ಜ್ಞಾನವನ್ನು ಬೋಧಿಸುವ ಭಾರತಾದಿ ಗ್ರಂಥ–ಗಳನ್ನು ರಚಿಸಿ ಅವನ್ನು ಬ್ರಹ್ಮರುದ್ರಾದಿಗಳಿಗೆ ಬೋಧಿಸಿದ ಮಹಾಚಾರ್ಯರು. (ಮಧ್ವಪರವಾಗಿ) ಹೇ ಮಧ್ವಾಚಾರ್ಯರೇ, ತಾವು ಪರಿಶುದ್ಧಜ್ಞಾನ ಸ್ವರೂಪರಾದ್ದರಿಂದಲೂ ತಮಗೆ ಅಜ್ಞಾನವಾಗಲಿ ದ್ವೈತ್ಯಾವೇಶವಾಗಲಿ ಇಲ್ಲವಾದ್ದರಿಂದಲೂ ಗೀತೋಪನಿಷದಾದಿ ಸಚ್ಛಾಸ್ತ್ರ ಗ್ರಂಥಗಳಿಗೆ ಯಥಾರ್ಥ–

ಬೋಧಕವಾದ ಭಾಷ್ಯಗಳನ್ನು ರಚಿಸಿದ ಮಹಾನುಭಾವರು. ತಮ್ಮ ಮೂವತ್ತೇಳು ಗ್ರಂಥಗಳಲ್ಲೇ ವೇದಾದಿ ಸಕಲಸಚ್ಛಾಸ್ತ್ರಗಳ ಸಮಸ್ತ ಮುಖ್ಯ ಪ್ರಮೇಯಗಳೂ ಅಡಗಿವೆ. ಹೀಗೆ ಗ್ರಂಥರಚನೆ ಮಾಡಿದ್ದು ಮಾತ್ರವಲ್ಲದೆ ಆ ಶಾಸ್ತ್ರಗಳಲ್ಲಿ ಹೇಳಿದ ವಿಶಿಷ್ಟ ಕರ್ಮಗಳನ್ನೂ ಅನುಷ್ಠಾನಮಾಡಿ ಆಚರಣೆಗೆ ತಂದವರೂ ಆಗಿದ್ದೀರಿ. (ಇದನ್ನೇ ಪ್ರಾತಸ್ಸಂಕಲ್ಪಗದ್ಯದಲ್ಲಿ 'ತಥಾ ವೇದೋಕ್ತ ಸರ್ವಕ್ರಿಯೋಪಸಂಹರ್ತೄಣಾಂ' ಎಂದು ಹೇಳಿದ್ದಾರೆ. ಇದನ್ನು ಅರಿತೇ ತೈತ್ತಿರೀಯೋಪನಿಷತ್ತಿನಲ್ಲಿ ಶಾಂತಿಪಾಠದಲ್ಲಿ 'ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ' ಎಂದು ಭೃಗುಋಷಿಗಳು ಎರಡು ವಿವಕ್ಷೆಯಿಂದ ನಿಮಗೆ ನಮಸ್ಕರಿಸಿದ್ದಾರೆ. ಋತಂ ಎಂದರೆ ಯಥಾರ್ಥಜ್ಞಾನವುಳ್ಳವರೆಂದೂ ಸತ್ಯಂ ಎಂದರೆ ವೇದೋಕ್ತ ಆಚಾರಗಳಿಗೆ ವಿರೋಧ ಬರದಂತೆ ಸದಾಚಾರವುಳ್ಳವರೆಂದೂ ಅರ್ಥ). ಹೀಗೆ ಸದಾಚಾರವನ್ನು ತಿಳಿದವರೂ ಅನುಷ್ಠಾನಮಾಡುವವರೂ ಆದ್ದರಿಂದ ನೀವು ಪವಿತ್ರವಾದ ಆಚಾರ್ಯ ಎಂಬ ಬಿರುದಿಗೆ ಯೋಗ್ಯ ಪಾತ್ರರಾಗಿದ್ದೀರಿ. ನೀವು ಮನುಷ್ಯರಿಗೆ ಮಾತ್ರವಲ್ಲ, ರುದ್ರಾದಿ ದೇವತೆಗಳಿಗೂ ಗುರುಗಳೂ ಜ್ಞಾನೋಪದೇಶಕರೂ ಆದ್ದರಿಂದ ಮಹಾಚಾರ್ಯರು.

(ಉಭಯಪರವಾಗಿ) ಹೇ ಮಹಾಚಾರ್ಯರೇ! ಬ್ರಾಹ್ಮಣರಾಗಿ ಹುಟ್ಟಿದ ಮಾತ್ರಕ್ಕೇ ಆಗಲಿ, ಸದ್ವೈಷ್ಣವಕುಲದಲ್ಲಿ ಜನ್ಮವೆತ್ತಿದ ಮಾತ್ರದಿಂದಲೇ ಆಗಲಿ, ನಿಮ್ಮ ಗ್ರಂಥಗಳನ್ನು ಅವಲೋಕನ ಮಾಡಬೇಕೆಂಬ ಆಸಕ್ತಿ ಬರುವುದಿಲ್ಲ. ಹಿಂದಿನ ಎಷ್ಟೋ ಜನ್ಮಗಳಲ್ಲಿ ಸಂಚಯಮಾಡಿದ ಪುಣ್ಯರಾಶಿಗಳು ಪರಿಪಕ್ವವಾಗಿ ಸದಾಚಾರಸಂಪನ್ನನಾಗಿರುವಂತೆ ಪ್ರೇರಣೆಯಾಗಿ ಸತ್ಕರ್ಮಾನುಷ್ಠಾನ ಮಾಡಿ ಪರಿಶುದ್ಧರಾದ ಪುಣ್ಯಾತ್ಮರಿಗೆ ಮಾತ್ರ ಆ ಇಚ್ಛೆ ಹುಟ್ಟುತ್ತದೆ. ಹಾಗೆ ಆಸಕ್ತಿ ಹುಟ್ಟುವುದೇ ಒಂದು ದೊಡ್ಡ ಸೌಭಾಗ್ಯ. ಅಂಥಾ ಭಾಗ್ಯಶಾಲಿಗಳು ನಿಮ್ಮ ಗ್ರಂಥಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದಾಗ ಅವರಿಗೆ ಮೊದಮೊದಲು ಏನೇನೋ ನಾನಾತೆರವಾದ (ರೀತಿಯ) ಶಂಕೆಗಳು–ಸಂಶಯಗಳು ಸಹಜವಾಗಿ ಉದ್ಭವಿಸುವುವು. ನಿಮ್ಮ ಗ್ರಂಥಗಳಲ್ಲಿ ಉದ್ಧೃತವಾಗಿರುವ ಶ್ರುತಿ-ಸ್ಮೃತಿ ವಾಕ್ಯಗಳಿಂದ ಅವೆಲ್ಲ ಪರಿಹಾರವಾಗುತ್ತವೆ—ಮನಸ್ಸಿಗೆ ಸಮಾಧಾನವಾಗುತ್ತದೆ. ಜೊತೆಗೆ ನಿಮ್ಮ ವಿಷಯಾನುವಾದದ

ಸರಣಿಯೇ ಅದ್ಭುತವಾಗಿದೆ, ವಿಷಯನಿರೂಪಣೆ ಅತ್ಯಂತ ಸಮರ್ಪಕವಾಗಿರು-ವುದರಿಂದ ಅರ್ಥವಾಗುತ್ತ ಆಗುತ್ತ ಮನಸ್ಸು ಪ್ರಫುಲ್ಲವಾಗಿ ಹರ್ಷೋದ್ರೇಕ ಉಕ್ಕಿಬರುತ್ತದೆ. ನಿಮ್ಮ ಗ್ರಂಥಗಳ ಅಧ್ಯಯನದಿಂದ ಜನ್ಮ ಜನ್ಮಾಂತರ ತಾಪತ್ರಯಗಳೆಲ್ಲ ನಿವೃತ್ತಿಯಾಗಿಹೋಗುತ್ತವೆ. ಇದೀಗ ನಿಮ್ಮ ವ್ಯಾಖ್ಯಾನದ ವೈಭವ !

ಹೇ ಗುರುವರ್ಯರೇ, ನಮಗೂ ಈಗ ನಿಮ್ಮ ಗ್ರಂಥಗಳ ಅಧ್ಯಯನ ಮಾಡಬೇಕೆಂಬ ಹಂಬಲ ಹುಟ್ಟಿದೆ, ಸದಾ ನಿಮ್ಮ ಚಿಂತೆಯೇ ಆಗಿದೆ. ನಾವು ನಿಮ್ಮ ಪಾದಸೇವಾಭಿಲಾಷಿಗಳಾಗಿದ್ದೇವೆ. ನಿಮ್ಮ ಗ್ರಂಥಗಳನ್ನು ಪಠಿಸಿ ನಮ್ಮ ಯೋಗ್ಯತಾನುಸಾರ ಅದರಲ್ಲಿ ಪ್ರತಿಪಾದಿತವಾದ ವೇದಾಂತರಹಸ್ಯಗಳು ನಮಗೂ ಅರ್ಥವಾಗುವಂತೆ ಅನುಗ್ರಹಮಾಡಿರಿ—ಕೃಪೆಮಾಡಿ ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆಂದು ಭಾವ.

ಇಲ್ಲಿಗೆ ೩೪ನೇ ಶ್ಲೋಕ ಮುಗಿಯಿತು

ಶ್ಲೋಕ ೩೫. ಸರ್ವದೇವತಾಸ್ತುತ್ಯವಾದ ಮಹಿಮೆ

347. ಕ) ಅವತಾರಿಕೆ—(ಕಕ. ವಿ. ಛ.) ಸಕಲ ವಿದ್ಯಾಭಿಮಾನಿ ದೇವತೆಗಳೂ ನಿಮ್ಮನ್ನು ಸೇವಿಸುತ್ತಾರಲ್ಲದೆ ನಿಮ್ಮ ಚರಿತವನ್ನು ಗಂಧರ್ವಾ-ಪ್ಸರೆಯರೂ ಹಾಡಿ ಹೊಗಳುತ್ತಾರೆಂದು ನಿವೇದಿಸಿಕೊಳ್ಳುತ್ತಾರೆ. (ಪುರಾ) ಸಕಲ ವೇದವಿದ್ಯಾಭಿಮಾನಿಗಳೂ ವೇದವ್ಯಾಸರನ್ನೂ ಶ್ರೀಮದಾಚಾರ್ಯರನ್ನೂ ಸೇವಿಸುತ್ತಾರೆಂದು ಸ್ತುತಿಸುತ್ತಾರೆ.

ಪೀಠೇ ರತ್ನೋಪಕ್ಲೃಪ್ತೇ ರುಚಿರರುಚಿಮಣಿ-
ಜ್ಯೋತಿಷಾ ಸನ್ನಿಷಣ್ಣಂ
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ
ವೈದಿಕಾದ್ಯಾ ಹಿ ವಿದ್ಯಾಃ ।

ಸೇವಂತೇ ಮೂರ್ತಿಮತ್ಯಃ ಸುಚರಿತ ಚರಿತಂ
ಭಾತಿ ಗಂಧರ್ವಗೀತಂ
ಪ್ರತ್ಯೇಕಂ ದೇವಸಂಸತ್—ಸ್ವಪಿ ತವ ಭಗವನ್
ನರ್ತಿತದ್ಯೋವಧೂಷು || ೩೫ ||

ಖ) ಪದವಿಭಾಗ— ಪೀಠೇ, ರತ್ನೋಪಕ್ಲೃಪ್ತೇ, ರುಚಿರ.... ಜ್ಯೋತಿಷಾ, ಸನ್ನಿಷಣ್ಣಂ, ಬ್ರಹ್ಮಾಣಂ, ಭಾವಿನಂ, ತ್ವಾಂ, ಜ್ವಲತಿ, ನಿಜಪದೇ, ವೈದಿಕಾದ್ಯಾಃ, ಹಿ, ವಿದ್ಯಾಃ । ಸೇವಂತೇ, ಮೂರ್ತಿಮತ್ಯಃ, ಸುಚರಿತ, ಚರಿತಂ, ಭಾತಿ, ಗಂಧರ್ವಗೀತಂ, ಪ್ರತ್ಯೇಕಂ, ದೇವಸಂಸತ್ಸು, ಅಪಿ, ತವ, ಭಗವನ್, ನರ್ತಿತದ್ಯೋವಧೂಷು ||

ಗ) ವಿಶ್ಲೇಷಣೆ—ಈ ಶ್ಲೋಕಕ್ಕೂ ಉಭಯಪರವಾಗಿ ಪ್ರಾಯಶಃ ಒಂದೇ ಅರ್ಥ, ಒಂದೆರಡು ಪದಗಳಿಗೆ ಮಾತ್ರ ಅರ್ಥವ್ಯತ್ಯಾಸ ಬರುತ್ತದೆ. ಸುಚರಿತ (೩ನೇ ಪಾದದಲ್ಲಿ), ಭಗವನ್ (೪ನೇ ಪಾದದಲ್ಲಿ) ಎಂಬ ಎರಡೂ ಸಂಬೋಧನೆಗಳು. ಈ ಶ್ಲೋಕದಲ್ಲಿ ಎರಡು ಸಾಮಾನ್ಯ ವಾಕ್ಯಗಳಿವೆ. 1) ವೈದಿಕಾದ್ಯಾಃ ವಿದ್ಯಾಃ ತ್ವಾಂ ಸೇವಂತೇ ಹಿ—ವೇದವಿದ್ಯಾಭಿಮಾನಿಗಳೇ ಮೊದಲಾದ ದೇವತೆಗಳು ನಿಮ್ಮನ್ನು ಸೇವಿಸುತ್ತಾರೆ—ಎಂಬುದು ಮೊದಲನೆಯ ವಾಕ್ಯ. ತ್ವಾಂ-ಗೆ a) ನಿಜಪದೇ ಪೀಠೇ ಸನ್ನಿಷಣ್ಣಂ, b) ಭಾವಿನಂ ಬ್ರಹ್ಮಾಣಂ ಎಂದು ಎರಡು ವಿಶೇಷಣ. a) ಯಲ್ಲಿರುವ ಪೀಠೇ-ಗೆ i) ರತ್ನೋಪಕ್ಲೃಪ್ತೇ, ii) ರುಚಿರ....ಜ್ಯೋತಿಷಾ ಜ್ವಲತಿ ಎಂದು ಎರಡು ವಿಶೇಷಣಗಳು. 'ವಿದ್ಯಾಃ'ಗೆ ಮೂರ್ತಿಮತ್ಯಃ ಎಂದು ವಿಶೇಷಣ. ಇದು ಪ್ರಥಮವಾಕ್ಯ.

ii) ತವ ಚರಿತಂ ದೇವಸಂಸತ್ಸು ಅಪಿ ಭಾತಿ-ನಿಮ್ಮ ಚರಿತ್ರವು ದೇವ ಸಭೆಗಳಲ್ಲೂ ಸಹ ಮೆರೆಯುತ್ತದೆ ಎಂಬುದು ಎರಡನೇ ವಾಕ್ಯ. ಚರಿತಂ-ಗೆ ಪ್ರತ್ಯೇಕಂ ಗಂಧರ್ವಗೀತಂ, ಎಂಬುದು ವಿಶೇಷಣ. ದೇವಸಂಸತ್ಸು ಎಂಬುದಕ್ಕೆ 'ನರ್ತಿತದ್ಯೋವಧೂಷು' ಎಂಬುದು ವಿಶೇಷಣ.

ಘ) ಕಠಿನ ಶಬ್ದಾರ್ಥ—1) ರುಚಿರ-ರುಚಿ-ಮಣಿ-ಜ್ಯೋತಿಷಾ ಜ್ವಲತಿ ಎಂದು ಪೀಠೇ-ಗೆ ವಿಶೇಷಣ. ಜ್ವಲತಿ ಎಂಬುದು ಶತ್ರಂತ (ವರ್ತ-

ಮಾನ ಕೃದಂತ) ರೂಪ, ನಲಿಂ, ಸಪ್ತಮ್ಯೇಕವಚನರೂಪ. ಜ್ವಲತ್ ।
ಜ್ವಲತೀ । ಜ್ವಲಂತಿ ಇತ್ಯಾದಿ ರೂಪಗಳು ; ಹೀಗೇ ಸಪ್ತಮೀ ವಿಭಕ್ತಿಯಾದ್ದ-
ರಿಂದ ಇದೂ ಸಪ್ತಮೀ ವಿಭಕ್ತಿಯಲ್ಲಿದೆ; ಇದಕ್ಕೇ ಜ್ವಲಿಸುತ್ತಿರುವ, ಪ್ರಕಾಶಿ-
ಸುತ್ತಿರುವ ಎಂದರ್ಥ. 'ಸುಂದರಂ ರುಚಿರಂ ಚಾರು' ಎಂಬ ಅಮರದಂತೆ
ರುಚಿರಃ ಎಂದರೆ ಸುಂದರವಾದ, ಮನೋಹರವಾದ. 'ಸ್ಯುಃ ಪ್ರಭಾರುಗ್
ರುಚಿಸ್ ತ್ವಿಚ್ ಭಾ-' ಎಂಬ ಅಮರದಂತೆ ರುಚಿ ಎಂದರೆ ಪ್ರಭೆ, ಹೊಳಪು,
ಕಾಂತಿ ; ಇದು ಇಕಾರಾಂತ ಸ್ತ್ರೀಲಿಂಗಶಬ್ದ. ರುಚಿರ-ರುಚಿ ಎಂಬಲ್ಲಿ ರುಚಿ
ಎಂಬ ಎರಡಕ್ಷರಗಳು ಎರಡು ಸರಿ ಬಂದಿರುವುದರಿಂದ ವೃತ್ತ್ಯನುಪ್ರಾಸವೆಂಬ
ಶಬ್ದಾಲಂಕಾರ.

2) ಸನ್ನಿಷಣ್ಣಂ— ಕುಳಿತಿರುವ ಎಂದರ್ಥ. (ವ್ಯಾಕರಣಾಂಶ)
(ಕಕ. ವಿ.) ಸಂ+ನಿ-ಉಪಸರ್ಗ ; ಷದ್ಲೃ (ಸದ-ಸೀದ) ವಿಶರಣ-ಗತ್ಯವ-
ಸಾದನೇಷು' (ಭ್ವಾ. ಪ.) ಎಂಬ ಧಾತು. ನಿ+ಸದ=ನಿಷೀದ-ಕುಳಿತುಕೋ
ಎಂದರ್ಥ. ಇದಕ್ಕೆ 'ಗತ್ಯರ್ಥಾಕರ್ಮಕ-' (ಪಾ ೩।೪।೭೨) ಎಂಬ
ಸೂತ್ರದಂತೆ ಅಕರ್ಮಕ ಧಾತುವಾದ್ದರಿಂದ ಕರ್ತರಿ ಕ್ತ ಪ್ರತ್ಯಯ ಬರುತ್ತದೆ ;
ಅದರಂತೆ ಸಂ-ನಿ+ಸದ್+ಕ್ತ ಎಂದಿರಲು 'ರದಾಭ್ಯಾಂ ನಿಷ್ಠಾತೋ ನಃ-'
(ಪಾ. ೮।೪।೪೨) ಎಂಬ ಸೂತ್ರದಂತೆ ದಕಾರಕ್ಕೆ ನಕಾರಾದೇಶ ಬರಲು ಸಂ-
ನಿಷದ್+ನ ಎಂದಿರಲು, ಷಕಾರಯೋಗವಿರುವುದರಿಂದ 'ರಷಾಭ್ಯಾಂ
ನೋಣಃ-' (ಪಾ. ೮।೪।೧) ಎಂಬ ಸೂತ್ರದಂತೆ ನಕಾರಕ್ಕೆ-ಣಾದೇಶ ಬರಲು
ಸಂನಿಷಣ್ಣ ಅಥವಾ ಸನ್ನಿಷಣ್ಣ ಎಂದಾಗುತ್ತದೆ. (ಗು. ಸಾ.) ನಿಷಣ್ಣಂ
ಜೊತೆಗೆ 'ಸಂ' ಉಪಸರ್ಗ ಸೇರಿಸಿದ್ದಕ್ಕೆ ಪ್ರಯೋಜನ ತೋರಿಸುತ್ತಾರೆ.
ವಾಯುದೇವರು ಸಿಂಹಾಸನದಲ್ಲಿ ಕುಳಿತರೂ ಅವರಿಗೆ ಹೆಮ್ಮೆಯಾಗಲಿ ದರ್ಪ
ವಾಗಲಿ ಅಭಿಮಾನವಾಗಲಿ ಎಳ್ಳಷ್ಟೂ ಇಲ್ಲ. 'ಇದೆಲ್ಲ ಶ್ರೀಹರಿಯ ಅನುಗ್ರಹ.
ಇದನ್ನು ನಿರ್ವಹಿಸುವುದೂ ಅವನ ಸೇವೆ' ಎಂದು ಭಾವಿಸುತ್ತಾ ಶ್ರೀಹರಿಯನ್ನು
ಸ್ಮರಿಸುತ್ತಾ ಭಕ್ತ್ಯುದ್ರೇಕದಿಂದ ಕಣ್ಣೀರು ಸುರಿಸುತ್ತಾ ಕುಳಿತಿದ್ದರೂ
ಮನಸ್ಸಿನಲ್ಲೇ ಶ್ರೀಹರಿಭಕ್ತರ ಕಲ್ಯಾಣವನ್ನು ಚಿಂತಿಸುತ್ತಿರುವರಿ ಎಂಬ
ವಿಷಯವನ್ನು ಸಂ ಉಪಸರ್ಗ ಸೂಚಿಸುತ್ತದೆ.

3) ಬ್ರಹ್ಮಾಣಂ—ಚತುರ್ಮುಖ ಬ್ರಹ್ಮನನ್ನು ಎಂದು ವಾಯುಪರವಾದ ಅರ್ಥ. ಹರಿಪರವಾದರೆ ಎರಡು ವಿಧ ಅರ್ಥ ಹೇಳಬಹುದೆಂದು ಪುರಾ. ತೋರಿಸುತ್ತಾರೆ. a) 'ಬೃಹ ಬೃಹಿ ವೃದ್ಧೌ' ಎಂಬ ಧಾತುವಿನ ಮೇಲೆ ಮನಿನ್ ಪ್ರತ್ಯಯ (ಉ ೧।೧೪೫) ಬಂದು (ನಖಸ್ತುತಿ ಪುಟ ೯೪-೫ ನೋಡಿ) ಬ್ರಹ್ಮನ್ ಎಂದಾಗಿ ಪುಲ್ಲಿಂಗ ದ್ವಿ-ವಿಭಕ್ತಿ ಏ.ವ. ದಲ್ಲಿ ಬ್ರಹ್ಮಾಣಂ ಎಂದಾಗಿದೆ. ಇದು ವಿಷ್ಣುಪರವಾದ್ದರಿಂದ 'ಗುಣ ಪರಿಪೂರ್ಣ'ನೆಂದೇ ಅರ್ಥವಾಗುತ್ತದೆ. ಸಾಮಾನ್ಯವಾಗಿ ವಿಷ್ಣುಪರವಾದರೆ ಬ್ರಹ್ಮ ಎಂದು ನಪುಂಸಕಲಿಂಗದಲ್ಲಿಯೇ ಇರಬೇಕು; 'ತದೇವ ಬ್ರಹ್ಮ ಪರಮಂ ಕವೀನಾಂ' (ನಾರಾ. ಉಪ. ೧।೩।೬), ಪುಲ್ಲಿಂಗ ಹೇಗೆ ಬಂತು? ಎಂದರೆ ಪುರಾ. ಸಮಾಧಾನ ಹೇಳುತ್ತಾರೆ— 'ಪ್ರಕೃತದಲ್ಲಿ ಕೇವಲ ಯೌಗಿಕ ಶಬ್ದವಾಗಿ ವಿವಕ್ಷಿತವಾಗಿರೋಣದರಿಂದ ಪುಲ್ಲಿಂಗತ್ವವು ಯುಕ್ತವು.' b) ಎರಡನೇ ಅರ್ಥದಲ್ಲಿ ಬ್ರಹ್ಮ+ಅಣ ಎಂದು ಪದಚ್ಛೇದ; ಅಕಾರಾಂತ ಶಬ್ದ. ಬ್ರಹ್ಮಭಿಃ-ವೇದೈಃ ಅಣ್ಯತೇ-ವೇದ್ಯತೇ ಇತಿ ಬ್ರಹ್ಮಾಣಃ. ಬ್ರಹ್ಮ ಎಂದರೆ ಸಕಲ ವೇದಗಳಿಂದಲೂ ಅಣ-ಪ್ರತಿಪಾದಿಸಲ್ಪಡುವವನು ಅಥವಾ ತಿಳಿಯಲ್ಪಡುವವನು ವೇದವೇದ್ಯ ಎಂದರ್ಥವಾಗುತ್ತದೆ.

4) ಭಾವಿನಂ—(ವಾಯುಪಕ್ಷದಲ್ಲಿ) ಭವಿಷ್ಯಂತಂ (ಕಕ. ಛ) ಮುಂದೆ ಆಗಲಿರುವ. ಭಾವಿನ್ ಎಂಬ ನಕಾರಾಂತ ಶಬ್ದದ ಪು. ದ್ವಿ.ವಿ. ಏ.ವ. ರೂಪ. ಹರಿಪಕ್ಷದಲ್ಲಿ ಇದಕ್ಕೂ ಎರಡರ್ಥ (ಪುರಾ.) a) 'ಭೂ ಪ್ರಾಪ್ತೌ–' ಹೊಂದು, ವ್ಯಾಪಿಸು ಎಂಬ ಧಾತುವಿನ ರೂಪವಾದರೆ ಸರ್ವವ್ಯಾಪಿಯಾದ ಎಂದರ್ಥವಾಗುವುದು. b) ಸತ್ತಾರ್ಥಕ ಭೂ ಧಾತುವಿನ ಣಿಜಂತ (ಪ್ರೇರಣಾರ್ಥಕ) ರೂಪ ನಿಷ್ಪನ್ನವಾದರೆ (ಆಗಿಸು, ಸೃಷ್ಟಿಮಾಡು) ಜಗದುತ್ಪಾದಕ ಎಂದರ್ಥವಾಗುತ್ತದೆ. 5) ನಿಜಪದೇ—ನಿಜ-ತಮ್ಮ, ಪದೇ-ಸ್ಥಾನದಲ್ಲಿ ಎಂದು ಪದಶಃ ಅರ್ಥ. ಹರಿಪಕ್ಷದಲ್ಲಿ ಸ್ವಸ್ಥಾನಭೂತವಾದ ಬದರಿಕಾಶ್ರಮದಲ್ಲಿ ಎಂದೂ ವಾಯುಪರವಾಗಿ (ವಿ.) ನಿಜಂ-ಆತ್ಮೀಯಂ, ಯತ್ಪದಂ-ಸತ್ಯಲೋಕಾಖ್ಯಂ ಸ್ಥಾನಂ ತಸ್ಮಿನ್-ತಮ್ಮ ಸ್ಥಾನವಾದ ಸತ್ಯಲೋಕದಲ್ಲಿ ಎಂದೂ ಅರ್ಥವಾಗುತ್ತದೆ. 6) ವೈದಿಕಾದ್ಯಾಃ ವಿದ್ಯಾಃ—ವೈದಿಕ ವಿದ್ಯೆಗಳಿಗೆ ಅಭಿಮಾನಿಗಳಾದ

ಸರಸ್ವತೀ-ಭಾರತೀ-ಪಾರ್ವತೀ-ಶಚೀ ಶ್ಯಾಮಲಾದಿಗಳು ಎಂದರ್ಥ. 'ಆದ್ಯ-ಶಬ್ದೇನ ತಾಂತ್ರಿಕಾ ಗೃಹ್ಯಂತೇ' (ವಿ.) ಆದ್ಯ ಎಂದು ಹೇಳಿದ್ದರಿಂದ ತಾಂತ್ರಿಕ ದೇವತೆಗಳನ್ನೂ ಗ್ರಹಣ ಮಾಡಬೇಕು. ಹರಿಪಕ್ಷದಲ್ಲಿ ರಮಾದೇವಿಯನ್ನೂ ಸಹ ಗ್ರಹಣ ಮಾಡಬಹುದು, ವಾಯುಪಕ್ಷದಲ್ಲಿ ಪಾರ್ವತ್ಯಾದಿಗಳು ಎಂದು ಸಂಕೋಚ ಮಾಡಬೇಕು.* 7) ನರ್ತಿತದ್ಯೋವಧೂಷು—ಎಂಬುದು 'ದೇವಸಂಸತ್ಸು'ಗೆ ವಿಶೇಷಣ. 'ಸಭಾ-ಸಮಿತಿ-ಸಂಸದಃ' ಎಂಬ ಅಮರದಂತೆ ಸಂಸತ್ ಎಂದರೆ ಸಭೆ, ಇದು ಸ್ತ್ರೀಲಿಂಗ ಶಬ್ದ. 'ದ್ಯೋ-ದಿವೌ ದ್ವೇ ಸ್ತ್ರಿಯಾಂ' ಎಂಬ ಅಮರದಂತೆ ದ್ಯೋಶಬ್ದ ಸ್ವರ್ಗದ ಹೆಸರು, ಆದರೆ ಸ್ತ್ರೀಲಿಂಗ ಶಬ್ದ. ದ್ಯೋವಧೂ-ಸ್ವರ್ಗಸ್ತ್ರೀಯರು ಎಂದು ಸಾಮಾನ್ಯಾರ್ಥ-ವಾದರೂ 'ನರ್ತಿತ' ಶಬ್ದವಿರುವುದರಿಂದ ಅಪ್ಸರೆಯರನ್ನೂ ಕಿನ್ನರ ಸ್ತ್ರೀಯರನ್ನೂ ಗ್ರಹಣ ಮಾಡಬೇಕು. ನರ್ತಿತ ಎಂಬುದಕ್ಕೆ ಕ್ತಾಂತ (ಕರ್ಮಣಿ ಭೂತಕೃದಂತ) ರೂಪವಾದ್ದರಿಂದ 'ನರ್ತನ ಮಾಡಲ್ಪಟ್ಟ' ಎಂದು ಸಾಮಾನ್ಯ-ವಾಗಿ ಅರ್ಥವಾದರೂ ಇಲ್ಲಿ 'ನೃತ್ಯಂ ಆರಭಮಾಣಾಃ' (ಕಕ. ವಿ.) ಎಂದು ಅರ್ಥ ಹೇಳಬೇಕು. ಏಕೆಂದರೆ 'ಆದಿಕರ್ಮಣಿ ಕ್ತಃ ಕರ್ತರಿ ಚ' (ಪಾ. ೩।೪।೭೧) ಎಂಬ ಸೂತ್ರದಂತೆ ಕಾರ್ಯಾರಂಭವನ್ನು ಸೂಚಿಸಲು ಕ್ತ-ಬಂದಿದೆ. 'ನರ್ತನಾರಂಭ ಮಾಡುತ್ತಿರುವ ಅಥವಾ ನರ್ತನ ಮಾಡುತ್ತಿರುವ' ಅಪ್ಸರೆಯರು ಕಿನ್ನರಿಯರು ಮೊದಲಾದ ದೇವತಾ ಸ್ತ್ರೀಯರುಳ್ಳ ದೇವಸಭೆಗಳಲ್ಲಿ, ನಿಮ್ಮ ಚರಿತವು ಶೋಭಿಸುತ್ತದೆ ಎಂದು ಅರ್ಥವಾಗುತ್ತದೆ.

8) ಗಂಧರ್ವಗೀತಂ—ಗಂಧರ್ವರಿಂದ ಗಾನಮಾಡಲ್ಪಟ್ಟ. ಗಂಧರ್ವ-ರಲ್ಲಿ ಅನೇಕ ಪಂಗಡಗಳಿವೆಯೆಂದೂ ಒಂದೊಂದು ಪಂಗಡಕ್ಕೂ ನಿಯತವಾದ ಭಿನ್ನ ಭಿನ್ನ ಕರ್ತವ್ಯಗಳಿವೆಯೆಂದೂ ಬೃಹದ್ಭಾಷ್ಯದಲ್ಲಿ (೩ ಅ. ೧ ಬ್ರಾ. ೨ ಖಂ.) ಉದಹರಿಸಿದ ಸ್ಕಾಂದಪುರಾಣ ವಾಕ್ಯದಿಂದ ಗೊತ್ತಾಗುತ್ತದೆ :—

ಗಂಧರ್ವಾಸ್ತು ಸದಾ ಯುದ್ಧ—ರತಾ ದೇವಾನುಗಾಯತಃ ।....
ಕೇಚಿದ್ ಗಾನರತಾನಿತ್ಯಂ ಗಂಧರ್ವಾ ನರ್ತಕಾಃ ಪರೇ ।
ಕೇಚಿದ್ ವಾದ್ಯರತಾ ನಿತ್ಯಂ ಚಾರಣಾದೇವ ಚಾರಕಾಃ ॥ ೨ ॥

* ಖಂಡ 360-ಜ ಪಾದಟಿಪ್ಪಣಿ ನೋಡಿ.

(ಅರ್ಥ) ಹೆಚ್ಚು ಬಾಹುಬಲವುಳ್ಳ ಹೆಚ್ಚು ಮಂದಿ ಗಂಧರ್ವರು ದೇವತೆಗಳಿಗೆ ಸಹಾಯಕರಾಗಿ ಸದಾ ಯುದ್ಧಮಾಡುತ್ತಿರುತ್ತಾರೆ. ಆ ಶಕ್ತಿಯಿಲ್ಲದ ಕೆಲವು ಗಂಧರ್ವರು ಸದಾ ಗಾನದಲ್ಲಿಯೇ ನಿರತರಾಗಿರುತ್ತಾರೆ. ಮತ್ತೆ ಕೆಲವು ಗಂಧರ್ವರು ನರ್ತಕರಾಗಿದ್ದಾರೆ. ಇನ್ನೂ ಕೆಲವರು ನಾನಾ ವಾದ್ಯಗಳನ್ನು ನುಡಿಸುವುದರಲ್ಲಿ ತೊಡಗಿರುತ್ತಾರೆ. ಅದಕ್ಕೂ ಅರ್ಹತೆಯಿಲ್ಲದ ಉಳಿದ ಕೆಲವು ದೇವತೆಗಳಿಗೆ ಪರಿಚಾರಕರಾಗಿದ್ದು ಚಾರಣರೆನಿಸಿಕೊಳ್ಳುತ್ತಾರೆ. ಹೀಗೆ ಗಂಧರ್ವರಲ್ಲೇ ಅನೇಕ ಪಂಗಡಗಳಿವೆಯೆಂದು ತಿಳಿಯಬೇಕು. (ಲೇ.)

348. **ಕ) ದಂಡಾನ್ವಯ**—(ಉಭಯಪರ) ಸುಚರಿತ, ಭಗವನ್! (೧ನೇ ವಾಕ್ಯ) ನಿಜಪದೇ i) ರತ್ನೋಪಕ್ಲೃಪ್ತೇ ii) ರುಚಿರ....ಜ್ಯೋತಿಷಾ ಜ್ವಲತಿ ಪೀಠೇ ಸನ್ನಿಷಣ್ಣಂ ಭಾವಿನಂ ಬ್ರಹ್ಮಾಣಂ ತ್ವಾಂ ವೈದಿಕಾದ್ಯಾಃ ವಿದ್ಯಾಃ ಮೂರ್ತಿಮತ್ಯಃ ಸೇವಂತೇ ಹಿ । (೨ನೇ ವಾಕ್ಯ) ಪ್ರತ್ಯೇಕಂ ಗಂಧರ್ವ ಗೀತಂ ತವ ಚರಿತಂ ನರ್ತಿತದ್ಯೋವಧೂಷು ದೇವಸಂಸತ್ಸು ಅಪಿ ಭಾತಿ ।

ಖ) ಉಭಯಪರ ಅನ್ವಯಾರ್ಥ—(ವ್ಯಾಸಪರವಾಗಿ) ಸುಚರಿತ–ಶೋಭನ ಚರಿತ್ರೆಯುಳ್ಳ, ಭಗವನ್–ಐಶ್ವರ್ಯಾದಿ ಷಡ್ಗುಣಪರಿಪೂರ್ಣರಾದ ಹೇ ವೇದವ್ಯಾಸರೇ, (ವಾಯುಪರವಾಗಿ) ಸುಚರಿತ–ಸಚ್ಚರಿತ್ರೆಯುಳ್ಳ, ಭಗವನ್–(ಕಕ.) ಸಮಗ್ರ ವೈರಾಗ್ಯಾದಿ ಗುಣಸಂಪನ್ನರಾದ ಹೇ ವಾಯುದೇವರೇ! (೧ನೇ ವಾಕ್ಯ) ನಿಜಪದೇ–(ವ್ಯಾಸಪರ) ಸ್ವಸ್ಥಾನವಾದ ಬದರಿಕಾಶ್ರಮದಲ್ಲಿ, (ವಾಯುಪರ) ನಿಮ್ಮ ಸ್ಥಾನವಾದ ಸತ್ಯಲೋಕದಲ್ಲಿ; i) ರತ್ನೋಪಕ್ಲೃಪ್ತೇ–ರತ್ನಖಚಿತವಾದ, ii) ರುಚಿರ....ಜ್ಯೋತಿಷಾ–ರುಚಿರ–ಮನೋಹರವಾದ, ರುಚಿ–ಕಾಂತಿಯುಳ್ಳ ಮಣಿ–ನವರತ್ನಗಳ, ಜ್ಯೋತಿಷಾ–ಪ್ರಕಾಶದಿಂದ; ಜ್ವಲತಿ–ಪ್ರಜ್ವಲಿಸುತ್ತಿರುವ; ಪೀಠೇ–ಸಿಂಹಾಸನದಲ್ಲಿ; ಸನ್ನಿಷಣ್ಣಂ–ಕುಳಿತ (ಕುಳಿತಿರುವ); ಭಾವಿನಂ (ವ್ಯಾಸಪರವಾಗಿ) ೧) ಸರ್ವವ್ಯಾಪ್ತರಾದ ಅಥವಾ ೨) ಜಗದುತ್ಪಾದಕರಾದ, ಬ್ರಹ್ಮಾಣಂ–(ವ್ಯಾಸಪರ) ೧) ಸಕಲಗುಣಪರಿಪೂರ್ಣರಾದ ಅಥವಾ ೨) ಬ್ರಹ್ಮ–ವೇದಗಳಿಂದ, ಅಣಂ–ವೇದ್ಯರಾದ; (ವಾಯುಪರವಾಗಿ) ಭಾವಿನಂ ಬ್ರಹ್ಮಾಣಂ–ಭಾವಿಬ್ರಹ್ಮರಾದ (ಮುಂದೆ ಬ್ರಹ್ಮಪಟ್ಟಕ್ಕೆ ಬರುವ); (ಉಭಯಪರ) ತ್ವಾಂ–ನಿಮ್ಮನ್ನು; ವೈದಿ-

ಕಾದ್ಯಾಃ ವಿದ್ಯಾಃ–ವೇದವಿದ್ಯಾಭಿಮಾನಿಗಳೂ ತಂತ್ರವಿದ್ಯಾಭಿಮಾನಿಗಳೂ ; ಮೂರ್ತಿಮತ್ಯಃ–ಮೂರ್ತೀಭೂತರಾಗಿ (ಎಂದರೆ ತಾವೇ ಸಾಕ್ಷಾತ್ ಎದುರಿಗೆ ಬಂದು–ಎಂದರ್ಥ); ಸೇವಂತೇ–ಸೇವಿಸುತ್ತಾರೆ. ಹಿ–ಪ್ರಸಿದ್ಧವು. (ಶ್ರಿ ನೇವಾಕ್ಯ) ಪ್ರತ್ಯೇಕಂ–ಬೇರೆ ಬೇರೆಯಾಗಿ (ಬೇರೆ ಬೇರೆ ಸ್ಥಳಗಳಲ್ಲಿ ; ಗಂಧರ್ವಗೀತಂ–ಗಂಧರ್ವರಿಂದ ಗಾನಮಾಡಲ್ಪಡುವಂಥಾ ; ತವ–ತಮ್ಮ, ಚರಿತಂ–ಚರಿತ್ರೆಯು (ಮಾಹಾತ್ಮ್ಯವು) ; ನರ್ತಿತದ್ಯೋವಧೂಷು–ಅಪ್ಸರ ಸ್ತ್ರೀಯರು ಕಿನ್ನರಿಯರೇ ಮೊದಲಾದ ದೇವತಾ ಸ್ತ್ರೀಯರು ನರ್ತನಮಾಡುತ್ತಿರುವ ; ದೇವಸಂಸತ್ಸು ಅಪಿ–ದೇವತೆಗಳ ಸಭೆಗಳಲ್ಲೂ ಸಹ ; ಭಾತಿ–ಶೋಭಿಸುತ್ತದೆ.

ಗ) ಭಾವಾರ್ಥ—ಅಗಾಧ ಮಹಿಮರಾದ ಐಶ್ವರ್ಯಾದಿ ಷಡ್ಗುಣ ಪರಿಪೂರ್ಣರಾದ ಹೇ ವೇದವ್ಯಾಸರೇ, ನೀವು ಸ್ವಸ್ಥಾನವಾದ ಬದರಿಕಾಶ್ರಮದಲ್ಲಿ ದಿವ್ಯ ಸಿಂಹಾಸನಾರೂಢರಾಗಿರುತ್ತೀರಿ. (ವಾಯುದೇವರೇ) ಮಹಾಮಹಿಮರಾದ ಜ್ಞಾನ ಭಕ್ತಿ ವೈರಾಗ್ಯಾದಿ ಪರಮೈಶ್ವರ್ಯಶಾಲಿಗಳಾದ ನೀವು ನಿಮ್ಮ ಸ್ಥಾನವಾದ ಸತ್ಯಲೋಕದಲ್ಲಿ ಯುವರಾಜಪದವಿಭೂಷಿತರಾಗಿದ್ದು ದಿವ್ಯವಾದ ರತ್ನಸಿಂಹಾಸನದಲ್ಲಿ ಮಂಡಿಸಿರುವಿರಿ. (ಉಭಯಪರ) ಆ ಸಿಂಹಾಸನವು ನವರತ್ನಖಚಿತವಾಗಿದ್ದು ನವರತ್ನಗಳ ನಾನಾ ಬಣ್ಣದ ಕಾಂತಿಗಳಿಂದ ಥಳಥಳಿಸುತ್ತಿರುತ್ತದೆ. ಚಕ್ರವರ್ತಿಗೆ ಅಧೀನರಾಜರು ಎದುರಿಗೆ ಬಂದು ಓಲಗಿಸುವಂತೆ ನೀವು ಆ ಸಿಂಹಾಸನಾರೂಢರಾಗಿ ಕುಳಿತಾಗ ಸಕಲ ವೇದವಿದ್ಯಾಭಿಮಾನಿಗಳೂ ಸ್ಮೃತಿವಿದ್ಯೆ–ತಂತ್ರವಿದ್ಯೆ ಮೊದಲಾದ ವಿದ್ಯಾಭಿಮಾನಿಗಳೂ ಸಹ ತಾವೇ ಸಾಕ್ಷಾತ್ತಾಗಿ ಬಂದು ನಿಮ್ಮನ್ನು ಓಲಗಿಸಿ ನಿಮ್ಮ ಮಹಿಮೆಯನ್ನು ಕೊಂಡಾಡುತ್ತಾರೆ. (ವೇದವ್ಯಾಸಪರವಾಗಿ) 'ಹೇ ಸ್ವಾಮಿ, ತಾವು ಅನಂತ ಗುಣಪರಿಪೂರ್ಣರು, ಅನಂತ ವೇದಪ್ರತಿಪಾದ್ಯರು, ವೇದೈಕಸಮಧಿಗಮ್ಯರು. ಸರ್ವವ್ಯಾಪಿಗಳು, ಜಗತ್ಸೃಷ್ಟ್ಯಾದಿಕರ್ತರು' ಎಂದು ವಿಜ್ಞಾಪಿಸಿಕೊಳ್ಳುತ್ತಾರೆ. (ವಾಯುಪಕ್ಷದಲ್ಲಿ) 'ಹೇ ವಾಯುದೇವರೇ, ಮುಂದಿನ ಕಲ್ಪದಲ್ಲಿ ನೀವೇ ಈ ಬ್ರಹ್ಮಪಟ್ಟಕ್ಕೆ ಬರುವಿರಿದ್ದೀರಿ' ಎಂದು ನಿವೇದಿಸಿಕೊಳ್ಳುತ್ತಾರೆ.

(ಉಭಯಪರ) ಅಷ್ಟೇ ಅಲ್ಲ ನಿಮ್ಮ ದಿವ್ಯಚರಿತ್ರೆಯನ್ನು ಒಂದು ಕಡೆ ಗಂಧರ್ವರು ಗಾನಮಾಡುತ್ತಾ ಸುಶ್ರಾವ್ಯವಾಗಿ ಹಾಡುತ್ತಾ ಆನಂದಮಗ್ನ-

ರಾದರೆ ಅಲ್ಲಲ್ಲೇ ದೇವಸಭೆಗಳಲ್ಲಿ ಅಪ್ಸರೆಯರು ಕಿನ್ನರಿಯರು ವಿಧ್ಯಾಧರಿಯರೇ ಮೊದಲಾದ ಬೇರೆ ಬೇರೆ ಗುಂಪಿನ ಸ್ತ್ರೀಯರು ನಾನಾಕಡೆಗಳಲ್ಲಿ ನರ್ತನ ಮಾಡುತ್ತಾ ನಿಮ್ಮ ಮಹಿಮೆಯನ್ನು ಕೊಂಡಾಡುತ್ತಿರುತ್ತಾರೆ. ಈ ಪ್ರಕಾರ ನಿಮ್ಮ ಕೀರ್ತಿಯು ಭೂಲೋಕದಲ್ಲಿ ಮಾತ್ರವಲ್ಲ, ಸ್ವರ್ಗಲೋಕದಿಂದ ಆರಂಭಿಸಿ ಸತ್ಯಲೋಕದವರೆಗೆ ಎಲ್ಲ ಕಡೆಯೂ ಹರಡಿ ಪರಿಶೋಭಿಸುತ್ತಿದೆ ಎಂದು ಶ್ಲೋಕಾಭಿಪ್ರಾಯ.

349. ವಿಶೇಷ ವಿಚಾರಗಳು (ಯುಕ್ತಿಮಲ್ಲಿಕಾದ ಶ್ರುತಿಸಮಾಖ್ಯೆಗಳು) ಕ)—'ಬ್ರಹ್ಮಾಣಂ ಭಾವಿನಂ ತ್ವಾಂ' ಎಂಬುದಕ್ಕೆ 'ಸೋಮಃ ಪವತೇ–' 'ಬ್ರಹ್ಮಾ ದೇವಾನಾಂ–' ಎಂಬ ಎರಡು ಋಕ್ಕುಗಳು (೯/೯೬/೫–೬) ಸಮಾಖ್ಯೆಯಾಗಿವೆ. ಏಕೆಂದರೆ ದೇವಾದಿಗಳ ಸೃಷ್ಟಿಯು ಬ್ರಹ್ಮದೇವರಿಂದಲೇ ಆದರೂ ಮುಂದಿನ ಕಲ್ಪದಲ್ಲಿ ವಾಯುವೇ ಬ್ರಹ್ಮನಾಗುವನೆಂದು ಸೂಚಿಸುವುದಕ್ಕಾಗಿಯೇ ವಾಯುದೇವರಿಂದ ಆದ ಸೃಷ್ಟಿಯನ್ನು ಹೇಳಿ ಮುಂದಿನ ಋಕ್ಕಿನಲ್ಲೇ 'ಬ್ರಹ್ಮಾದೇವಾನಾಂ–' ಎಂದು ಹೇಳಿದ್ದಾರೆ. ಇದನ್ನೇ ವಾಯುಸ್ತುತಿಯ 'ಬ್ರಹ್ಮಾಣಂ ಭಾವಿನಂ' ಎಂಬ ವಾಕ್ಯ ವಿವರಿಸಿತು. ಆ ಎರಡು ಮಂತ್ರಗಳನ್ನೂ ಅವುಗಳ ಅರ್ಥತಾತ್ಪರ್ಯವನ್ನೂ ಕೆಳಗೆ ಕೊಟ್ಟಿದೆ.

ಸೋಮಃ ಪವತೇ ಜನಿತಾ ಮತೀನಾಂ
ಜನಿತಾ ದಿವೋ ಜನಿತಾ ಪೃಥಿವ್ಯಾಃ ।
ಜನಿತಾಗ್ನೇರ್ಜನಿತಾ ಸೂರ್ಯಸ್ಯ
ಜನಿತೇಂದ್ರಸ್ಯ ಜನಿತೋತ ವಿಷ್ಣೋಃ ॥ (೯।೯೬/೫)

(ಅರ್ಥ) (ಯಃ–ಯಾವ ವಾಯುವು) ಮತೀನಾಂ ಜನಿತಾ–ಉಪದೇಶವೇ ಮೊದಲಾದ ರೀತಿಯಿಂದ ಬುದ್ಧಿಯನ್ನು ಹುಟ್ಟಿಸುವವನೋ ('ಅಯಮಿಹ ಸುಮತಿಂ ವಾಯುದೇವೋ ವಿದಧ್ಯಾತ್' ಶ್ಲೋ. ೫). ದಿವಃ

ಜನಿತಾ–ಸ್ವರ್ಗಲೋಕವನ್ನು ಸೃಷ್ಟಿಸಿದನೋ ; ಪೃಥಿವ್ಯಾಜನಿತಾ–ಭೂಲೋಕವನ್ನು ಸೃಷ್ಟಿಸಿದನೋ ; ಅಗ್ನೇಃ ಜನಿತಾ–ಅಗ್ನಿಯನ್ನು ಸೃಷ್ಟಿಸಿದನೋ ; ಸೂರ್ಯಸ್ಯ ಜನಿತಾ–ಸೂರ್ಯನನ್ನು ಸೃಷ್ಟಿಸಿದನೋ ; ಇಂದ್ರಸ್ಯ ಜನಿತಾ–ಇಂದ್ರನನ್ನು ಸೃಷ್ಟಿಸಿದನೋ ; ಉತ–ಮತ್ತು ವಿಷ್ಣೋಃ–ವಿಷ್ಣುವನ್ನು ಸೃಷ್ಟಿಸಿದನೋ ಎಂದರೆ ಸರ್ವೋತ್ತಮತ್ವಾದಿ ಗುಣಗಳನ್ನು ಪ್ರತಿಪಾದಿಸಿ, ನಿರ್ಗುಣ, ನಿರಾಕಾರ ಎಂಬ ವಾದದಿಂದ ಉದ್ಧರಿಸಿ ತೋರಿಸಿದನೋ ಎಂದರ್ಥ; ಅಂಥಾ, ಸೋಮಃ–ಸೋಮನೆಂಬ ವಾಯುವು ಮತ್ತು ಚಂದ್ರನಂತೆ ಶಾಂತ ಮೂರ್ತಿಗಳಾದ್ದರಿಂದ ಸೋಮ ಶಬ್ದವಾಚ್ಯರಾದ ಮಧ್ವಾಚಾರ್ಯರು ; ಪವತೇ–ಹಂಸಮಂತ್ರದ ಮಹಿಮೆಯನ್ನು ತೋರಿಸಿಕೊಟ್ಟು ಹರಿಸೇವಾರ್ಥವಾಗಿ ಶ್ವಾಸೋಚ್ಛ್ವಾಸಕರ್ಮವನ್ನು ಮಾಡುತ್ತಾರೆ. (ಅಜಸ್ರ ಸೇವಾನು... ಧೂತ, ಶ್ಲೋ. ೨) ಜಗತ್ತೇ ಮಿಥ್ಯಾ, ನಾನು–ನೀನು, ದೇವತೆ–ಮನುಷ್ಯ ಇತ್ಯಾದಿ ಯಾವ ಭೇದವೂ ಇಲ್ಲ, ಎಲ್ಲವೂ ಮಿಥ್ಯಾ ಎಂದು ಪ್ರತಿಪಾದಿಸಿದ್ದಕ್ಕೆ ವಿರುದ್ಧವಾಗಿ ಎಲ್ಲವೂ ಸತ್ಯ ಎಂದು ಸ್ಥಾಪನೆ ಮಾಡಿದ್ದರಿಂದ ಮಧ್ವಾಚಾರ್ಯರಿಗೂ 'ದಿವೋ ಜನಿತಾ–' ಇತ್ಯಾದಿ ಉಕ್ತಿಗಳು ಹೊಂದುತ್ತದೆ. ದ್ಯುಲೋಕಾದಿ ಸೃಷ್ಟಿಯು ಮುಖ್ಯವಾಗಿ ಬ್ರಹ್ಮನ ಕಾರ್ಯವೇ ಆದರೂ ಮೇಲೆ ಹೇಳಿದಂತೆ ವಾಯುವೇ ಬ್ರಹ್ಮನಾಗುವನೆಂದು ಸೂಚಿಸುತ್ತಾ ವೇದವೂ ಮುಂದಿನ ಮಂತ್ರದಲ್ಲೇ 'ಬ್ರಹ್ಮಾ ದೇವಾನಾಂ' ಎಂದು ಹೇಳಿತು. ಆ ಮಂತ್ರಪಾಠವು ಹೀಗಿದೆ—

ಋ) ಬ್ರಹ್ಮಾ ದೇವಾನಾಂ ಪದವೀಃ ಕವೀನಾ-
ಮೃಷಿರ್ವಿಪ್ರಾಣಾಂ ಮಹಿಷೋ ಮೃಗಾಣಾಮ್ ।
ಶ್ಯೇನೋ ಗೃಧ್ರಾಣಾಂ ಸ್ವಧಿತಿರ್ವನಾನಾಂ
ಸೋಮಃ ಪವಿತ್ರಮತ್ಯೇತಿ ರೇಭನ್ ॥ (ಋ. ೯।೯೬।೬)

(ಅರ್ಥ) ದೇವಾನಾಂ–ದೇವತೆಗಳ ಮಧ್ಯದಲ್ಲಿ, ಬ್ರಹ್ಮಾ–ಬ್ರಹ್ಮನೂ ; ವಿಪ್ರಾಣಾಂ–ಬ್ರಾಹ್ಮಣರ ಮಧ್ಯದಲ್ಲಿ ; ಋಷಿ–ಜ್ಞಾನೋಪದೇಶ ಮಾಡುವ ಗುರುವೂ ; ಮೃಗಾಣಾಂ–ಮೃಗಗಳ ಮಧ್ಯದಲ್ಲಿ ; ಮಹಿಷಃ–ಬಲದೇವನಾದ್ದರಿಂದ ಶ್ರೇಷ್ಠನೂ ; ಗೃಧ್ರಾಣಾಂ–ಹದ್ದುಗಳ (ಹಕ್ಕಿಗಳ) ಮಧ್ಯೆ ; ಶ್ಯೇನಃ–ಬಲಪ್ರದನಾಗಿ ಗಿಡಗವೆಂಬ ಪಕ್ಷಿಯಲ್ಲಿರುವವನೂ ; ವನಾನಾಂ–ಕಾಡುಗಳ ನಾಶದಲ್ಲಿ ; ಸ್ವಧಿತಿಃ–ಕೊಡಲಿಯೂ ಆಗಿ ; ರೇಭನ್–ಗರ್ಜನೆ ಮಾಡುತ್ತಾ (ಭ ಶಬ್ದೇ ಎಂದು ಧಾತು ಪಾಠ) ; ಸೋಮಃ–ಶೈತ್ಯವನ್ನುಂಟುಮಾಡುತ್ತಾ ಚಂದ್ರನಲ್ಲಿರುವುದರಿಂದ ಸೋಮನಾಮಕರಾದ ವಾಯುದೇವರು; ಕವೀನಾಂ–ಜ್ಞಾನಿಗಳ ; (ಮೋಕ್ಷಕ್ಕೆ ಹೋಗುವವರ) ; ಪದವೀಃ–ಮಾರ್ಗಗಳನ್ನು ಎಂದರೆ ಮೋಕ್ಷಮಾರ್ಗವಾದ ಅರ್ಚಿರಾದಿ-ವಿದ್ಯುದಂತ ಲೋಕಗಳನ್ನೂ, ಪವಿತ್ರಂ–ಜ್ಯೋತಿಶ್ಚಕ್ರವನ್ನೂ, ಅತ್ಯೇತಿ–ಮೀರಿದ್ದಾನೆ ಎಂದರೆ ಎಲ್ಲಕ್ಕೂ ಮೀರಿದ ಉತ್ತಮ ಲೋಕಾಧಿಪತಿಯಾಗಿದ್ದಾನೆಂದರ್ಥ. (ತಾತ್ಪರ್ಯವು ಸುಲಭ ಗ್ರಾಹ್ಯವಾದ್ದರಿಂದ ಬೇರೆಯಾಗಿ ಕೊಟ್ಟಿಲ್ಲ.) 'ಸೋಮಃ ಪವಿತ್ರಮತ್ಯೇತಿ ರೇಭನ್' ಎಂಬುದೇ 'ಜ್ವಲತಿ ನಿಜಪದೇ ವೈದಿಕಾದ್ಯಾ ಹಿ ವಿದ್ಯಾಃ' ಎಂಬುದಕ್ಕೆ ಸಮಾಖ್ಯೆ.

ಗ) ಇದೇರೀತಿ 'ವೈದಿಕಾದ್ಯಾ ಹಿ ವಿದ್ಯಾಃ ಸೇವಂತೇ' ಎಂಬ ವಾಕ್ಯಕ್ಕೆ 'ಪ್ರಾವೀ-ವಿಪತ್–' ಎಂಬ ಮಂತ್ರದ (೯।೯೬।೭) 'ಸೋಮಃ ಪವಮಾನೋ ಮನೀಷಾಃ' ಎಂಬುದು ಸಮಾಖ್ಯೆ. ಆ ಮಂತ್ರವೂ ಅದರ ಅರ್ಥವೂ ಹೀಗಿದೆ—

ಪ್ರಾವೀವಿಪದ್ ವಾಚ ಊರ್ಮಿಂ ನ ಸಿಂಧುರ್
ಗಿರಃ ಸೋಮಃ ಪವಮಾನೋ ಮನೀಷಾಃ ।
ಅಂತಃ ಪಶ್ಯನ್ ವೃಜನೇಮಾ ಽವರಾಣ್ಯಾ-
ತಿಷ್ಠತಿ ವೃಷಭೋ ಗೋಷು ಜಾನನ್ ॥　　　(ಋ. ೯।೯೬।೭)

(ಅರ್ಥ) ಗಿರಃ (ಗೀರ್ ಶಬ್ದದ ಷಷ್ಠೀ ಏಕವಚನರೂಪ; ಗಿರಃ। ಗಿರೋಃ। ಗಿರಾಮ್)-ಮಾತಿನ (ಜಾತ್ಯೇಕವಚನ) ಕ್ಷಣ ಕ್ಷಣದಲ್ಲೂ ತಮ್ಮ ಮುಖದಿಂದ ತರಂಗ ತರಂಗವಾಗಿ ಹೊರಡುತ್ತಿರುವ ವಾಕ್ಯಸಮುದಾಯದ ಎಂದರ್ಥ; ಸಿಂಧುಃ-ಸಮುದ್ರದಂತೆ ಇರುವ; (ಸದ್ಯೋ ರಚನಪಟುಮಥಾಪಾದ್ಯ ವಿದ್ಯಾಸಮುದ್ರ' ಶ್ಲೋ. ೨೫ (ಎಂದರೆ ಸುತ್ತಮುತ್ತ ಇರುವ ಎಲ್ಲ ತರಂಗ (ಅಲೆ)ಗಳಿಗೂ ಸಮುದ್ರವು ಹೇಗೆ ಆಧಾರವಾಗಿರುವುದೋ ಹಾಗೆ ಅನಂತ ವೇದವಾಕ್ಯಗಳಿಗೂ ಹಾಗೂ ಸಕಲ ವಿದ್ಯೆಗಳಿಗೂ ಉಪದೇಶಕರಾದ್ದರಿಂದ ಈ ಮಧ್ವಾಚಾರ್ಯರೂ ಹಾಗೆ ಆಧಾರವಾಗಿದ್ದಾರೆಂದು ಭಾವ), ಸೋಮಃ ಪವಮಾನಃ-ಚಂದ್ರನಂತೆ ಶಾಂತಸ್ವಭಾವದವರಾದ್ದರಿಂದ ಸೋಮನಾಮಕರೂ ಪಾವನ (ಪರಿಶುದ್ಧ) ಮಾಡುವರಾದ್ದರಿಂದ ಪವಮಾನಶಬ್ದವಾಚ್ಯರೂ ಆದ ಈ ಮಧ್ವಾಚಾರ್ಯರೂಪಿ ವಾಯುದೇವರು; ಮನೀಷಾಃ-ಮನಸ್ಸಿಗೆ (ಪಂಡಿತರಿಗೆ) ಇಷ್ಟವಾದ (ಉತ್ತಮವಾದ); ವಾಚಃ-ಮಾತುಗಳನ್ನು ಎಂದರೆ ವೇದ-ಬ್ರಹ್ಮಸೂತ್ರಾದಿ ವಾಕ್ಯಗಳನ್ನು; ಊರ್ಮಿಂ ನ-ಅಲೆಯಂತೆ; ಪ್ರಾವೀ ವಿಪತ್ (ವಿಪ ಪ್ರವರ್ತನೇ ಎಂದು ಧಾತುಪಾಠ, ವಿಪ-ಹರಡು, ಪ್ರಸಾರಮಾಡು) ಸಕಲ ಸಜ್ಜನರಲ್ಲೂ ಚೆನ್ನಾಗಿ ಹರಡಿದರು. (ದುಶ್ಶಾಸ್ತ್ರಗಳಿಂದ ಭೇದವನ್ನು ಸೂಚಿಸುವುದಕ್ಕಾಗಿ ಮನೀಷಾ ಶಬ್ದ ಪ್ರಯೋಗಿಸಿದೆ. ಇದರಿಂದ 'ತ್ವದ್ವ್ಯಾಖ್ಯಾ ಸಿಂಹನಾದೇ ಸಪದಿ ದದೃಶಿರೇ ಮಾಯಿಗೋಮಾಯವಃ, ಶ್ಲೋ. ೩೧, ಎಂಬುದೂ, 'ವೈದಿಕಾದ್ಯಾ ಹಿ ವಿದ್ಯಾಃ। ಸೇವಂತೇ' ಶ್ಲೋ. ೩೫ ಎಂಬುದೂ ವ್ಯಾಖ್ಯಾತವಾಯಿತು.) (ಉತ್ತರಾರ್ಧದ ಅರ್ಥ) ಗೋಷು-ಆ ವಿದ್ಯೆಗಳಲ್ಲಿ; ವೃಜನಾ (ಜನ-ಸಾಮಾನ್ಯರಾದ ಅಂಥಿಂಥಾ ಜನಗಳಿಂದ, ವೃ-ವರಿಸಲ್ಪಟ್ಟ, ಆದರಿಸಲ್ಪಟ್ಟ) ಸಜ್ಜನರಿಂದಲ್ಲದೆ ಸಾಧಾರಣ ವರ್ಗದ ಜನಗಳು ಆಶ್ರಯಿಸುವ; ಇಮಾ-ಈ, ಅವರಾಣಿ-ಮಧ್ಯಮವೂ ಅಧಮವೂ ಆದ ಪುರಾಣ-ಶಾಸ್ತ್ರಾದಿ ಗ್ರಂಥಗಳನ್ನು (ಅವರಾಣಿ ಎಂದದ್ದರಿಂದ ದುಷ್ಟವಿದ್ಯೆ-ಮೋಹಕ ವಿದ್ಯೆಯೆಂದೂ ಹೇಳಿದಂತಾಯಿತು), ಜಾನನ್-ತಿಳಿದು (ಇವನ್ನು ಮಧ್ಯಮ ಅಥವಾ ಅಧಮ ವರ್ಗಕ್ಕೆ ಸೇರಿದವುಗಳೆಂದು ನಿರ್ಧರಿಸಿ ಎಂದರ್ಥ); ಅಂತಃ ಪಶ್ಯನ್-ಒಳಗೆ ನೋಡಿ ಎಂದರೆ ಅವುಗಳಲ್ಲಿರುವ

ಪೂರ್ವೋತ್ತರವಿರೋಧವನ್ನು ಕಂಡ, ಅಥವಾ ತಮ್ಮ ಹೃದಯದಲ್ಲಿರುವ ಪರಮಾತ್ಮನನ್ನು ಕಂಡಂಥಾ; ವೃಷಭಃ-ಸಕಲಾಧಿಕಾರಿವರ್ಗದಲ್ಲೂ ಸರ್ವ ಶ್ರೇಷ್ಠರಾಗಿ, ಆಶಿಷ್ಮತಿ-ಸಕಲರ ಹೃದಯದಲ್ಲೂ ಇದ್ದು ಅವರವರ ಶುಭ ಬುದ್ಧಿಗೆ ಪ್ರೇರಕರಾಗಿದ್ದಾರೆ.

(ಮಂತ್ರದ ತಾತ್ಪರ್ಯ) ಸಮುದ್ರವು ಹೇಗೆ ಅಸಂಖ್ಯ ಅಲೆಗಳಿಗೆ ಆಶ್ರಯವಾಗಿರುತ್ತದೋ ಹಾಗೆ ವಾಯುದೇವರ ಅವತಾರರಾದ ಈ ಮಧ್ವಾ-ಚಾರ್ಯರು ಅಸಂಖ್ಯ ವೇದಾದಿ ಗ್ರಂಥಗಳ ಪ್ರಮಾಣವಾಕ್ಯಗಳಿಗೆ ಆಧಾರ-ವಾಗಿದ್ದಾರೆ, ಮತ್ತು ಸಮುದ್ರದಲ್ಲಿ ಹೇಗೆ ತರಂಗಗಳು ಕೊನೆ ಮೊದಲಿಲ್ಲದೆ ಏಳುತ್ತಿರುವುವೋ ಹಾಗೆ ಇವರ ಬಾಯಲ್ಲೂ ಶಾಸ್ತ್ರವಿಚಾರಗಳೂ ಅದನ್ನು ಪುಷ್ಟೀಕರಿಸುವ ಪ್ರಮಾಣವಾಕ್ಯಗಳೂ ಸುರಿಮಳೆಯಂತೆ ಹೊರಡುತ್ತಿರುತ್ತವೆ (ಆದ್ದರಿಂದಲೇ ೨೫ನೇ ಶ್ಲೋಕದಲ್ಲಿ 'ವಿದ್ಯಾಸಮುದ್ರ' ಎಂದು ಸಂಬೋಧಿ-ಸಿದರು). ಈ ರೀತಿ ಶ್ರುತಿಸ್ಮೃತೀತಿಹಾಸಪುರಾಣಾದಿಗಳ ಸುರಿಮಳೆಯೇ ಆವರ ವಿಷಯನಿರೂಪಣೆ. ಅದರಿಂದ-ಸಮುದ್ರದ ಅಲೆಗಳು ಹರಡಿಕೊಂಡು ಹೋಗುವಂತೆ-ಸಕಲ ಸಜ್ಜನರ ಹೃದಯದಲ್ಲಿ ಗೀತಾ-ಬ್ರಹ್ಮಸೂತ್ರಗಳು ಉಪನಿಷದಾದಿ ಸಕಲ ವಾಕ್ಯಗಳ ತತ್ತ್ವಾರ್ಥವನ್ನೂ ನೆಲೆಸುವಂತೆ ಮಾಡಿ ಸದ್ವಿದ್ಯಾಪ್ರಚಾರ ಮಾಡುತ್ತಾರೆ. ಹಾಗೆಯೇ ಧರ್ಮಶಾಸ್ತ್ರಾದಿಗಳೂ ಪುರಾ-ಣಾದಿಗ್ರಂಥಗಳೂ ಸಾಮಾನ್ಯಜನರಿಂದ ಪ್ರಮಾಣವೆಂದು ಸಾಮಾನ್ಯಾಕಾರೇಣ ಅಂಗೀಕೃತವಾಗಿದ್ದರೂ ಅವುಗಳೆಲ್ಲ ಉತ್ತಮಶಾಸ್ತ್ರಗಳಲ್ಲ, ಪೂರ್ವಾಪರ ವಿರೋಧಗಳೂ ಇವೆ, ರಾಜಸ-ತಾಮಸ ವಿಚಾರಗಳೂ ತುಂಬಿವೆ ಎಂದೆಲ್ಲಾ ಒಳಹೊಕ್ಕು ನೋಡಿ (ಇದಕ್ಕೆ ತಾತ್ಪರ್ಯನಿರ್ಣಯದ ಪ್ರಥಮಾಧ್ಯಾಯವನ್ನು ನಿದರ್ಶನವಾಗಿ ಕೊಡಬಹುದು) ಅವುಗಳ ಪ್ರಾಮಾಣ್ಯ ನಿರ್ಣಯ ಮಾಡಿ ಸಕಲ ಸಜ್ಜನರ ಹೃದಯದಲ್ಲಿ ಆ ಭಾವನೆಗಳನ್ನು ಬಿತ್ತಿ ಜೀವೋತ್ತಮರೆನಿಸಿ ಕೊಂಡಿದ್ದಾರೆಂದು ಭಾವ.

ಘ) ಇದೇ ರೀತಿ 'ವೈದಿಕಾದ್ಯಾ ಹಿ ವಿದ್ಯಾಃ । ಸೇವಂತೇ ಮೂರ್ತಿ-ಮತ್ಯಃ' ಎಂಬುದಕ್ಕೆ ಋಗ್ವೇದದ 'ಇದಂ ತೇ ಪಾತ್ರಂ-' ಎಂಬ ಮಂತ್ರವು

(೧೦।೧೧೨।೬) ಸಮಾಖ್ಯೆ. ಆ ಮಂತ್ರವನ್ನೂ ಅದರ ಅರ್ಥ-ತಾತ್ಪರ್ಯ ಗಳನ್ನೂ ಕೆಳಗೆ ಕೊಟ್ಟಿದೆ. ಮಂತ್ರಪಾಠ—

ಇದಂ ತೇ ಪಾತ್ರಂ ಸನವಿತ್ತಮಿಂದ್ರ

ಪಿಬಾ ಸೋಮಮೇನಾ ಶತಕ್ರತೋ ।

ಪೂರ್ಣ ಆಹಾವೋ ಮದಿರಸ್ಯ ಮಧ್ವೋ

ಯಂ ವಿಶ್ವ ಇದಭಿ ಹರ್ಯಂತಿ ದೇವಾಃ ॥ (೧೦।೧೧೨।೬)

(ಮಂತ್ರಾರ್ಥ) ಈ ಮಂತ್ರವು ಇಂದ್ರನಾಮಕ ಪರಮಾತ್ಮನಿಗೆ ವೇದ ಪುರುಷನು ಹೇಳಿದ ಮಾತಿನ ರೂಪವಾಗಿದೆ. ಪ್ರಾರಂಭದಲ್ಲಿರುವ 'ಇದಂ' ಶಬ್ದದ ವಿವರಣೆ ಉತ್ತರಾರ್ಧದಲ್ಲಿರುವುದರಿಂದ ಮೊದಲು ಉತ್ತರಾರ್ಧಕ್ಕೇ ಅರ್ಥ ಹೇಳುವೆನು. ಇಂದ್ರ, ಶತಕ್ರತೋ ಎರಡೂ ಭಗವಂತನಿಗೆ ಸಂಬೋಧನೆಗಳು. ಇವನ್ನು ಪ್ರಾರಂಭದಲ್ಲಾದರೂ ಗ್ರಹಣ ಮಾಡಬಹುದು, ಪೂರ್ವಾರ್ಧದ ಜೊತೆಯೂ ಗ್ರಹಣ ಮಾಡಬಹುದು. ಕ್ರತು ಶಬ್ದ ಜ್ಞಾನವಾಚೀ, ಶತಶಬ್ದ । ಪೂರ್ಣವಾಚಕ ಹಾಗೂ ಅನಂತವಾಚಕ. ಆದಕಾರಣ 'ಶತ-ಕ್ರತೋ'-ಅಪರಿಮಿತವಾದ ಪರಿಪೂರ್ಣಜ್ಞಾನವುಳ್ಳ ; ಇಂದ್ರ—ಪರಮೈಶ್ವರ್ಯಶಾಲಿಯಾದ ಹೇ ಭಗವಂತನೇ! (ಉತ್ತರಾರ್ಧ) ಮದಿರಸ್ಯ— ಮತ್—ಮತ್ತವಾದ-ಪರಿಪೂರ್ಣವಾದ, ಇರ—ಈರಣಂ—ಜ್ಞಾನವುಳ್ಳ, ಅಥವಾ ಮತ್—ಮಥಿಸಲ್ಪಟ್ಟ, ಇರ—ಜ್ಞಾನವು-ಶಾಸ್ತ್ರಜನ್ಯ ಪರಿಪೂರ್ಣಜ್ಞಾನವು ಯಾರಿಂದಲೋ ಎಂಬ ವ್ಯುತ್ಪತ್ತಿಯಿಂದ ವೇದಶಾಸ್ತ್ರಗಳ ಅರ್ಥ ಪರ್ಯಾಲೋಚನೆಯಿಂದ ಉತ್ಪನ್ನವಾದ ಸಮೀಚೀನ ಜ್ಞಾನದಿಂದ ; ಪೂರ್ಣಃ— ಸಂಪೂರ್ಣರಾದ (ಅತ ಏವ ಪೂರ್ಣಪ್ರಜ್ಞರೆಂದು ಅಭಿಧಾನವುಳ್ಳ) ; (ಮದಿರೇಣ ಪೂರ್ಣಃ ಎಂದು ತೃತೀಯಾ ವಿಭಕ್ತಿಯನ್ನು ಬಿಟ್ಟು ಮದಿರಸ್ಯ ಎಂದು ಷಷ್ಠೀ ವಿಭಕ್ತಿ ಪ್ರಯೋಗ ಮಾಡಿರುವುದು ಮೂಲ ವಾಯುರೂಪದಂತೆ ಮಧ್ವಾವತಾರಕ್ಕೂ ಜ್ಞಾನದ ಸಂಬಂಧವನ್ನು ತೋರಿಸುವುದಕ್ಕಾಗಿ—ಎಂದು

ತಿಳಿಯಬೇಕು.) ಎಂದರೆ ಅನಂತವೇದಾದಿಶಾಸ್ತ್ರಜನ್ಯಜ್ಞಾನದಿಂದ ಪರಿಪೂರ್ಣರಾದ; (ಯಃ-ಯಾವ,) ಮಧ್ವಃ-ಮಧ್ವಾಚಾರ್ಯರು; ಆಹಾವಃ (ಆ-ಸಮಂತಾತ್, ಹಾವೋ-ಹವನಂ) ಆವರವರ ಯೋಗ್ಯತಾನುಸಾರ ಜ್ಞಾನವನ್ನು ದಾನ (ಉಪದೇಶ) ಮಾಡಿದರೋ, ಎಂದರೆ ಭೂಮಿಯಲ್ಲಿ ಅವತರಿಸಿ ಜ್ಞಾನಯಜ್ಞ ಮಾಡುವರಾಗಿ ಭೂಮಿಯಲ್ಲಿರುವ ಋಷಿಗಳು ಮನುಷ್ಯೋತ್ತಮರೇ ಮೊದಲಾದ ಶಿಷ್ಯಪ್ರಶಿಷ್ಯರಲ್ಲಿ ಜ್ಞಾನೋಪದೇಶವನ್ನು ಅವರವರ ಯೋಗ್ಯತಾನುಸಾರ ಮಾಡಿದರೋ ಎಂದರ್ಥ; (ಭೂಮಿಯಲ್ಲಿರುವವರಿಗೆ ಮಾತ್ರವಲ್ಲ, ದೇವಲೋಕಸ್ಥ ರುದ್ರಾದಿಗಳಿಗೂ ಜ್ಞಾನದಾತೃಗಳೆಂದು ಹೇಳುತ್ತಾರೆ-) ಯಂ-ಯಾವ ಮಧ್ವಾಚಾರ್ಯರನ್ನು; ವಿಶ್ವೇ ದೇವಾಃ-ಗರುಡಶೇಷರುದ್ರೇಂದ್ರಾದಿ ಸಕಲ ದೇವತೆಗಳೂ, ಇತ್-ಹೀಗೆಯೇ (ಋಷ್ಯಾದಿಗಳಂತೆಯೇ; i) ಅಭಿ-ಸುತ್ತಮುತ್ತಲೂ ಹರ್ಯಂತಿ (ಇದೊಂದು ಛಾಂದಸಪ್ರಯೋಗ) ಜ್ಞಾನರಸಸಂಗ್ರಹಕ್ಕಾಗಿ ಸೇರುತ್ತಾರೋ, ii) ಅಥವಾ ಅಭಿ ಹರ್ಯಂತಿ-ತಮ್ಮ ಸಭೆಗಳಲ್ಲಿ ವಿಚಾರ ಮಾಡುತ್ತಾರೋ; iii) ಅಥವಾ ಅಭಿ-ವೇದಶಾಸ್ತ್ರಾದಿ ಗ್ರಂಥಗಳಲ್ಲಿ ಹರಡಿರುವ ಅವರ ಮಹಿಮೆಗಳನ್ನು, ಹರ್ಯಂತಿ-ಸಂಗ್ರಹಿಸಿ ಹೊಗಳುತ್ತಾರೋ (ಈ ವಿಷಯವು 'ಶಿವಮುಖ್ಯೈರೇಕತೋ ದೇವವೃಂದೈಃ ಶುಕಮುಖ್ಯೈರನ್ಯತಃ ಸನ್ಮುನೀಂದ್ರೈಃ' ಒಂದುಕಡೆ ರುದ್ರಾದಿ ದೇವತೆಗಳಿಂದಲೂ ಇನ್ನೊಂದು ಕಡೆ ಶುಕಾಚಾರ್ಯರೇ ಮೊದಲಾದ ಮುನೀಂದ್ರರಿಂದಲೂ ಸ್ತುತಿಸಲ್ಪಡುತ್ತಿರುವ ಎಂಬ (ಸ್ಮೃತಿ ?) ವಚನದಿಂದ ಸ್ಪಷ್ಟವಾಗಿದೆ. ಈ ವಾಕ್ಯವು ವಾಯುಸ್ತುತಿಯ 'ಸುರಮುಖಸುಜನಾರಾಧಿತಂ ತೇ ತೃತೀಯಂ ಭಾವಂ' ಶ್ಲೋ. ೯, 'ಅಧ್ಯಾತ್ಮಜ್ಞಾನನೇತಾ ಯತಿವರಮಹಿತೋ ಭೂಮಿಭೂಷಾಮಣಿಃ' ಶ್ಲೋ. ೫, 'ಪ್ರೋದ್ಯದ್ವಿದ್ಯಾನವದ್ಯ ದ್ಯುತಿಮಣಿಕಿರಣಶ್ರೇಣಿಸಂಪೂರಿತಾಶಃ' ಶ್ಲೋ. ೬, 'ಕಿಂಕರಾಃ ಶಂಕರಾದ್ಯಾಃ' ಶ್ಲೋ. ೩೨, 'ವೈದಿಕಾದ್ಯಾ ಹಿ ವಿದ್ಯಾಃ। ಸೇವಂತೇ ಮೂರ್ತಿಮತ್ಯಃ' ಶ್ಲೋ. ೩೫, 'ಸುಪೂರ್ಣಪ್ರಮತಿಮನುದಿವಾಸೇವಿತಂ ದೇವವೃಂದೈಃ' ಶ್ಲೋ. ೪೦ ಮೊದಲಾದ ವಾಕ್ಯಗಳಿಗೆ ವಿವರಣೆಯಾಗಿದೆ. (ಪೂರ್ವಾರ್ಧ) ಇದಂ-ಇಂಥಾ, ಸನವಿತ್ತಂ (ಸನೇ-ದಾನಾಯ, ವಿತ್ತ) ಸನ-ರುದ್ರಾದಿದೇವತೆಗಳಿಗೆ ಕೊಡಲು

ಯೋಗ್ಯವಾದ, ವಿತ್ತಂ–ಜ್ಞಾನಭಕ್ತಿವೈರಾಗ್ಯಾದಿ ಧನಸಂಪನ್ನರಾದ ಈ ಮಧ್ವಾಚಾರ್ಯರು ; ತೇ–ನಿನ್ನ ; ಪಾತ್ರಂ–ಸನ್ನಿಧಾನಯೋಗ್ಯವಾದ ಸ್ಥಾನವಾಗಿದ್ದಾರೆ. (ಅರ್ಥಾತ್ ನೀನು ಮುಖ್ಯಪ್ರಾಣನಲ್ಲಿ ಹೇಗೆ ಸದಾ ಸನ್ನಿಹಿತನಾಗಿರುವೆಯೋ ಹಾಗೆ ಈ ಮಧ್ವಾಚಾರ್ಯರಲ್ಲೂ ಸದಾ ಸನ್ನಿಹಿತನಾಗಿರುವಿ ಎಂದರ್ಥ. (ಇದರಿಂದ 'ತ್ರಾತಾ ಯಸ್ಯ ತ್ರಿಧಾಮಾ ಜಗದುತ ವಶಗಂ' ಶ್ಲೋ. ೩೨ ಎಂಬುದು ವ್ಯಾಖ್ಯಾತವಾಯಿತು.) ಏನ–ಇವರಿಂದ ಕೊಡಲ್ಪಡುವ ; ಸೋಮಂ–ಸೋಮರಸವನ್ನು) ಯಜ್ಞಯಾಗಾದಿ ಸಕಲ ಪೂಜಾರೂಪ ಫಲವನ್ನು) : ಪಿಬ–ಕುಡಿ ; ಅಗ್ನ್ಯಂತರ್ಯಾಮಿಯಾದ ಇವರ ದ್ವಾರಾ ಸ್ವೀಕರಿಸು ಎಂದರ್ಥ.

ಮಂತ್ರದ ತಾತ್ಪರ್ಯ—ವಾಯುದೇವರ ತೃತೀಯಾವತಾರರಾದ ಶ್ರೀಮಧ್ವಾಚಾರ್ಯರು ಪೂರ್ಣಪ್ರಜ್ಞ ಎಂಬ ಹೆಸರಿಗೆ ತಕ್ಕಂತೆ ಅನಂತ ವೇದಾದಿಶಾಸ್ತ್ರಗಳನ್ನು ಉಪಕ್ರಮಾದಿ ಲಿಂಗಗಳಿಂದ ಮಥನಮಾಡಿ ನಿರ್ಣಯ ಮಾಡಿ ತಿಳಿದುಕೊಂಡ ಪರಿಪೂರ್ಣವಾದ ಪರಿಶುದ್ಧವಾದ ಜ್ಞಾನವುಳ್ಳವರು. ಆ ಜ್ಞಾನರಸವನ್ನು ಭೂಮಿಯಲ್ಲಿರುವ ತಮ್ಮ ಶಿಷ್ಯರಾದ ಮನುಷ್ಯೋತ್ತಮರು ಋಷಿಗಳೇ ಮೊದಲಾದ ಶಿಷ್ಯ ಪ್ರಶಿಷ್ಯರಿಗೆ ಅವರವರ ಯೋಗ್ಯತಾನುಸಾರ ಉಪದೇಶಮಾಡಿ ತಿಳಿಸಿಕೊಟ್ಟರು. ಅದರಂತೆಯೇ ರುದ್ರಾದಿದೇವತೆಗಳೂ ಇವರ ಸಮೀಪಕ್ಕೆ ಬಂದು ಇವರಿಂದ ಜ್ಞಾನೋಪದೇಶ ಪಡೆದು ತಮ್ಮ ತಮ್ಮಲ್ಲೇ ವೇದೋಕ್ತ ಇವರ ಮಹಿಮೆಗಳನ್ನು ಕೊಂಡಾಡುತ್ತಿರುತ್ತಾರೆ. ಇಂಥಾ ಮಹಾಮಹಿಮರಾದ ಈ ಮಧ್ವಾಚಾರ್ಯರಲ್ಲಿ, ಅಪರಿಮಿತ ಪರಿಪೂರ್ಣ ಜ್ಞಾನವುಳ್ಳ ಇಂದ್ರನಾಮಕ ಹೇ ಪರಮಾತ್ಮನೇ, ನೀನು ಸನ್ನಿಹಿತನಾಗಿರುವಿ. ಇವರು ರುದ್ರೇಂದ್ರಾದಿ ದೇವತೆಗಳಿಗೆ ಕೊಡಲು ಯೋಗ್ಯವಾದ ಜ್ಞಾನ ಭಕ್ತಿ ವೈರಾಗ್ಯಾದಿ ಪರಮೈಶ್ವರ್ಯಶಾಲಿಗಳು. ಇವರು ಸಕಲ ಪ್ರಾಣಿಗಳಲ್ಲೂ ನಿಂತು ಸತ್ಕರ್ಮಮಾಡಲು ಪ್ರೇರಿಸಿ ಯಾವ ಪೂಜಾದಿ ರೂಪವಾದ ಹವಿಸ್ಸನ್ನು ನಿನಗೆ ಸಮರ್ಪಿಸುವರೋ ಅದನ್ನೇ ನೀನು ಸ್ವೀಕರಿಸುವಿಯಲ್ಲದೆ ಬೇರೆ ಯಾವುದನ್ನೂ ಸ್ವೀಕರಿಸುವುದಿಲ್ಲ ಎಂದು ಭಾವ.

ಇಲ್ಲಿಗೆ ಮೂವತ್ತೈದನೇ ಶ್ಲೋಕ ಮುಗಿಯಿತು

———

(೩) ಮೂರನೆಯ ಉಪವಿಭಾಗ—೩೬–೪೦ ಶ್ಲೋಕಗಳು
ಸೂತ್ರಭಾಷ್ಯಾದಿ ಗ್ರಂಥರಚನೆ

i) ಬ್ರಹ್ಮಸೂತ್ರಗಳ ರಚನೆ—ಶ್ಲೋಕ ೩೬–೩೭

ಕ) ಶ್ಲೋಕ ೩೬. ವ್ಯಾಸಾವತಾರ ವರ್ಣನೆ

350. ಕ) ಅವತಾರಿಕೆ—(ಲೇ) ಭೀಮಾವತಾರದಿಂದ ಮಧ್ವಾವತಾರಕ್ಕೆ ಉಪಕ್ರಮವಾಗಿ ಮಣಿಮಂತ 'ನಿಷ್ಕ್ರಿಯಾರ್ಥ'ವಾಗಿ 'ಕಷ್ಟಶಾಸ್ತ್ರ'ವನ್ನು ರಚಿಸಿದ ವಿಚಾರವನ್ನು ೨೯ನೇ ಶ್ಲೋಕದಲ್ಲಿ ವರ್ಣಿಸಿ ಮುಂದಿನ ಶ್ಲೋಕದಲ್ಲಿ ಅದನ್ನು ದಹಿಸಿಹಾಕಿದ 'ಪ್ರಮಾಣಜ್ವಾಲಮಾಲಾಧರಾಗ್ನಿ'ಯ ಪ್ರಸ್ತಾಪ ಮಾಡಿದರು. ಅದರ ಪರಿಣಾಮವೇನಾಯಿತೆಂದು (ಶ್ಲೋ. ೩೧) ವಿವರಿಸುತ್ತಾ ಹೋದಾಗ, ಏನೇನೋ ಸಂಬದ್ಧವಾದರೂ ಬೇರೆ ವಿಷಯಗಳು ಬಂದುವು—ಒಂದು ಅವತಾರದಲ್ಲಲ್ಲ, ಮೂರೂ ಅವತಾರಗಳಲ್ಲೂ ಹೀಗೆಯೇ ಎಂದು ಹೇಳಿದರು (ಶ್ಲೋ. ೩೨). ಆದರಿಂದ ಅವರ ಮಂದಸ್ಮಿತದ ನೆನಪಾಗಿ ೩೩ನೇ ಶ್ಲೋಕದಲ್ಲಿ ಅದನ್ನು ವಿವರಿಸಿದರು; ಮಂದಸ್ಮಿತವು ವ್ಯಾಖ್ಯಾನ-ಕೌಶಲದಲ್ಲಿ (ಶ್ಲೋ. ೩೪) ಪರ್ಯವಸಾನವಾಯಿತು. ವ್ಯಾಖ್ಯಾನಕೌಶಲ-ದಿಂದ ಸಕಲ ವಿದ್ಯಾಭಿಮಾನಿಗಳೂ ಅವರನ್ನು ಸೇವಿಸುತ್ತಾರೆಂಬ ವಿಚಾರ (ಶ್ಲೋ. ೩೫) ಪ್ರಸಕ್ತವಾಯಿತು. ಹೀಗೆ ಮಧ್ಯೆ ಪ್ರಸಕ್ತವಾದ ವಿಚಾರಗಳು ಮುಗಿದ ಕಾರಣ ಅರ್ಧಕ್ಕೇ ನಿಂತುಹೋಗಿದ್ದ 'ಪ್ರಮಾಣಜ್ವಾಲಮಾಲೆ'ಯನ್ನು ಧರಿಸಿದ ಶ್ರೀಮದಾಚಾರ್ಯರ ಭಾಷ್ಯಗಳ ರಚನೆಯ ವಿಚಾರವನ್ನು ಈಗ ಮುಂದುವರಿಸುತ್ತಾರೆ. ಶ್ರೀಮದಾಚಾರ್ಯರು ಅನೇಕ ಭಾಷ್ಯಗಳನ್ನು ರಚಿಸಿದ್ದರೂ ಅವುಗಳಲ್ಲೆಲ್ಲಾ ಕಿರೀಟಪ್ರಾಯವಾದುದು ಬ್ರಹ್ಮಸೂತ್ರ ಭಾಷ್ಯ. ಆ ಭಾಷ್ಯಕ್ಕೆ ಅಂಥಾ ಮಹತ್ವ ಬರುವುದಕ್ಕೆ ಸೂತ್ರಗಳ ಮಹತ್ವವೇ ಕಾರಣವೆಂದೂ, ಆ ಸೂತ್ರಗಳ ಮಹತ್ವಕ್ಕೆ ಅದರ ವಕ್ತೃ–ಶ್ರೋತೃ–ಪ್ರಸಕ್ತಿ ಮೂರೂ ಮಹತ್ವಗಳು ಸೇರಿವೆಯೆಂಬ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು-ಕೊಂಡು ಕ್ರಮವಾಗಿ ಒಂದೊಂದು ಮಹತ್ವವನ್ನೇ ವಿವರಿಸಲು ಆರಂಭಿಸಿ ಮೊಟ್ಟಮೊದಲು ಬ್ರಹ್ಮಸೂತ್ರಗಳನ್ನು ರಚಿಸಿದ ವೇದವ್ಯಾಸರ (ವಕ್ತೃಗಳ)

ಮಹತ್ವವನ್ನೇ (ಅನುಕೂಲ್ಯವನ್ನೇ) ವರ್ಣಿಸುತ್ತಾರೆ. ಅರ್ಥಾತ್ ಬ್ರಹ್ಮ-ಸೂತ್ರಗಳನ್ನು ರಚಿಸಿದ ವೇದವ್ಯಾಸರು ಅವತಾರ ಮಾಡಿದ ಪ್ರಸಂಗವನ್ನೇ ವರ್ಣಿಸುತ್ತಾರೆಂದು ಭಾವ. (ಕಕ. ವಿ.) ಜ್ಞಾನೋಪದೇಶಮಾಡುವ ಯೋಗ್ಯಾಧಿಕಾರಿಗಳು ದೊರಕದೆ ಸಂಸಾರಸಾಗರದಲ್ಲಿ ಮುಳುಗಿಹೋಗುತ್ತಿದ್ದ ಸಜ್ಜನರನ್ನು ನೋಡಿ ನೀವು (ವಾಯುದೇವರು) ಪ್ರಾರ್ಥಿಸಿದ್ದರಿಂದ ಆ ಭಗವಂತನು ವ್ಯಾಸರೂಪದಿಂದ ಅವತರಿಸಿದನೆಂದು ವಿಜ್ಞಾಪಿಸಿಕೊಳ್ಳುತ್ತಾರೆ. (ಛ.) ಸಂಸಾರವೆಂಬ ಅಗಾಧ ಸಮುದ್ರವನ್ನು ದಾಟಿಸಲು ಅವಶ್ಯಕವಾಗಿ ಬೇಕಾದ ಜ್ಞಾನವೆಂಬ ನೌಕೆಯು ಇಲ್ಲದ ಕಾರಣ ಮುಳುಗಿಹೋಗುತ್ತಿದ್ದ ಭಕ್ತಜನರನ್ನು ನೋಡಿ ಕನಿಕರಗೊಂಡ ನೀವು (ವಾಯುದೇವರು) ಭಗವಂತ-ನನ್ನು ಪ್ರಾರ್ಥಿಸಿದ್ದರಿಂದ ಅವನೇ ವೇದವ್ಯಾಸರಾಗಿ ಅವತರಿಸಿದನೆಂದು ಹೇಳುತ್ತಾರೆ. (ಪುರಾ.) ಇನ್ನು ಬಾದರಾಯಣಾವತಾರದ ಕಥೆಯನ್ನು ನಿರೂಪಿಸುತ್ತಾರೆ.

ಸಾನುಕ್ರೋಶೈರಜಸ್ರಂ ಜನಿ-ಮೃತಿ-ನಿರಯಾ-
ದ್ಯೂರ್ಮಿಮಾಲಾऽऽವಿಲೇऽಸ್ಮಿನ್
ಸಂಸಾರಾಬ್ಧೌ ನಿಮಗ್ನಾಂ—ಚ್ಛರಣಮಶರಣಾ-
ನಿಚ್ಛತೋ ವೀಕ್ಷ್ಯ ಜಂತೂನ್ ।
ಯುಷ್ಮಾಭಿಃ ಪ್ರಾರ್ಥಿತಃ ಸನ್ ಜಲನಿಧಿಶಯನಃ
ಸತ್ಯವತ್ಯಾಂ ಮಹರ್ಷೇರ್-
ವ್ಯಕ್ತಶ್ಚಿನ್ಮಾತ್ರಮೂರ್ತಿರ್ ನ ಖಲು ಭಗವತಃ
ಪ್ರಾಕೃತೋ ಜಾತು ದೇಹಃ ॥ ೩೬ ॥

ಖ) ಪದವಿಭಾಗ—ಸಾನುಕ್ರೋಶೈಃ, ಅಜಸ್ರಂ, ಜನಿ....ಮಾಲಾ-ವಿಲೇ, ಅಸ್ಮಿನ್, ಸಂಸಾರಾಬ್ಧೌ, ನಿಮಗ್ನಾನ್, ಶರಣಂ, ಅಶರಣಾನ್, ಇಚ್ಛತಃ, ವೀಕ್ಷ್ಯ, ಜಂತೂನ್, ಯುಷ್ಮಾಭಿಃ, ಪ್ರಾರ್ಥಿತಃ, ಸನ್, ಜಲನಿಧಿ-ಶಯನಃ, ಸತ್ಯವತ್ಯಾಂ, ಮಹರ್ಷೇಃ, ವ್ಯಕ್ತಃ, ಚಿನ್ಮಾತ್ರಮೂರ್ತಿಃ, ನ, ಖಲು, ಭಗವತಃ, ಪ್ರಾಕೃತಃ, ಜಾತು, ದೇಹಃ ॥

ಗ) ವಿಶ್ಲೇಷಣೆ—ಈ ಶ್ಲೋಕಕ್ಕೆ 'ವ್ಯಾಸಾವತಾರ ಮಾಡಿದರೆಂ'ದು ಒಂದೇ ಅರ್ಥ. ಜಲನಿಧಿಶಯನಃ ಮಹರ್ಷೇಃ ಸತ್ಯವತ್ಯಾಂ ವ್ಯಕ್ತಃ-ನಾರಾಯಣನು ಮಹರ್ಷಿ ಪರಾಶರರ ದೆಸೆಯಿಂದ ಸತ್ಯವತಿಯಲ್ಲಿ ಅಭಿವ್ಯಕ್ತರಾದರು (ಪ್ರಕಟವಾದರು) ಎಂಬುದೇ ಪ್ರಧಾನವಾಕ್ಯ. ಹಾಗೇಕೆ ಅವತಾರ ಮಾಡಿದರು? ಎಂದು ಕೇಳಿದರೆ—ಯುಷ್ಮಾಭಿಃ ಪ್ರಾರ್ಥಿತಃ ಸನ್....ವ್ಯಕ್ತಃ-ನಿಮ್ಮಿಂದ ಪ್ರಾರ್ಥಿಸಲ್ಪಟ್ಟವನಾಗಿ ಪ್ರಕಟನಾದ ಎಂದು ವಿವರಣೆ; ಪ್ರಾರ್ಥಿತಃ ಸನ್ ಎಂಬುದು ಜಲನಿಧಿಶಯನಕ್ಕೆ ಹೇತುಗರ್ಭವಿಶೇಷಣ. ನೀವು ಪ್ರಾರ್ಥಿಸಿಕೊಳ್ಳಲು ಕಾರಣವೇನು? ಎಂದರೆ ಸಾನುಕ್ರೋಶೈಃ ಎಂದರು. ಇದು ಯುಷ್ಮಾಭಿಃ-ಗೆ ವಿಶೇಷಣ; ದಯೆಯಿಂದ ಕೂಡಿದ ನಿಮ್ಮಿಂದ ಪ್ರಾರ್ಥಿತನಾದ ಕಾರಣ ಪ್ರಕಟವಾದನು ಎಂದು ಅನ್ವಯ. ದಯೆ ಬರಲು ಕಾರಣವೇನು? ಎಂದರೆ, ಸಂಸಾರಾಬ್ಧೌ ನಿಮಗ್ನಾನ್ ಅಶರಣಾನ್ ಜಂತೂನ್ ವೀಕ್ಷ್ಯ—ಎನ್ನುತ್ತಾರೆ. ಸಾನುಕ್ರೋಶೈಃ-ಸಂಸಾರ ಸಾಗರದಲ್ಲಿ ಮುಳುಗಿದ ಮತ್ತು ರಕ್ಷಕರಿಲ್ಲದ ಪ್ರಾಣಿಗಳನ್ನು ನೋಡಿ ದಯೆ ಬಂತು, ಅದರಿಂದ ಪ್ರಾರ್ಥಿಸಿದರು ಎಂದು ವಿವರಣೆ. ಸಂಸಾರಾಬ್ಧೌ-ಗೆ ಜನಿ.... ಮಾಲಾವಿಲೇ, ಅಸ್ಮಿನ್ ಎಂದು ಎರಡು ವಿಶೇಷಣಗಳು. ಅಜಸ್ರಂ—ನಿರಂತರವಾಗಿ ಎಂಬುದು 'ನಿಮಗ್ನಾನ್' ಎಂಬುದಕ್ಕೆ ಕ್ರಿಯಾವಿಶೇಷಣ. ಅಶರಣಾನ್ ಆದ್ದರಿಂದಲೇ 'ಶರಣಂ ಇಚ್ಛತಃ'-ರಕ್ಷಕರನ್ನು ಬಯಸುತ್ತಿದ್ದ ಎಂಬುದೂ ಜಂತೂನ್-ಗೆ ವಿಶೇಷಣ. 'ವ್ಯಕ್ತಃ'-ಪ್ರಕಟವಾದನು ಎಂದೇ ಏಕೆ ಹೇಳಬೇಕು? 'ಜಾತಃ' ಎಂದೇಕೆ ಹೇಳಬಾರದೆಂದರೆ—ಚಿನ್ಮಾತ್ರಮೂರ್ತಿಃ ಎಂದು ಉತ್ತರ; ಇದೂ ಜಲನಿಧಿಶಯನಕ್ಕೆ ವಿಶೇಷಣ. ಇಲ್ಲಿಗೆ ಮೊದಲನೆಯ ವಾಕ್ಯ ಮುಗಿಯಿತು. ಭಗವತಃ ಜಾತು (ಎಂದಿಗೂ, ಯಾವ ಕಾಲದಲ್ಲೂ) ಪ್ರಾಕೃತಃ ದೇಹಃ ನ ಖಲು—ಆ ಭಗವಂತನಿಗೆ ಪ್ರಾಕೃತ ದೇಹವು ಎಂದೆಂದಿಗೂ ಬರುವ ಹಾಗಿಲ್ಲ, ಆದಕಾರಣ ಹುಟ್ಟಿದನೆಂದು ಹೇಳುವಹಾಗಿಲ್ಲ, ವ್ಯಕ್ತನಾದನೆಂದೇ ಹೇಳಬೇಕೆಂದು ವಿವರಣೆ. ಪ್ರಾಕೃತ ದೇಹ ಏಕಿಲ್ಲ? ಎಂದರೆ ಚಿನ್ಮಾತ್ರ ಮೂರ್ತಿಃ ಎಂದು ವಿವರಣೆ; ಹೀಗೆ ಚಿನ್ಮಾತ್ರಮೂರ್ತಿಃ—ಪ್ರಾಕೃತೋ ದೇಹಃ ನ ಜಾತು ಎಂಬ ಎರಡೂ ಪರಸ್ಪರ ಪರಿಪೋಷಕಗಳು. ಈಗ ದಂಡಾನ್ವಯ ನೋಡಿದರೆ ಎಲ್ಲಾ ವಿಷಯಗಳೂ ಸ್ಪಷ್ಟವಾಗುತ್ತವೆ.

ಘ) ಕಠಿನ ಶಬ್ದಾರ್ಥಗಳು 1) ಸಾನುಕ್ರೋಶೈಃ—(ಕಕ. ವಿ.) ಅನುಕ್ರೋಶೇನ-ಕೃಪಯಾ ಸಹ ವರ್ತಂತ ಇತಿ ಸಾನುಕ್ರೋಶಾಸ್ತೈಃ। ದಯೆಯಿಂದ ಕೂಡಿದ ಎಂದರ್ಥ. ಅನು-ಮತ್ತೊಬ್ಬನ ಕಷ್ಟವನ್ನು ಅಥವಾ ದುಃಖವನ್ನು ಅನುಸರಿಸಿ, ಉಂಟಾಗುವ-ಕ್ರೋಶ (ಕ್ರುಶ್-ಕೂಗು, ಕಿರುಚು) ಸಂಕಟಕ್ಕೇ ಅನುಕ್ರೋಶ ಎಂದು ಹೆಸರು; ಇದನ್ನೇ (ಛ) 'ನಿರುಪಾಧಿಕ ಪರದುಃಖಪ್ರಹರಣೇಚ್ಛಾ'-ಸ್ವಾಭಾವಿಕವಾಗಿ ಪರರ ದುಃಖವನ್ನು ಪರಿಹರಿಸ-ಬೇಕೆಂಬ ಇಚ್ಛೆಗೇ ಅನುಕ್ರೋಶ ಅಥವಾ ಅನುಕಂಪಾ ಎಂದು ಹೆಸರು ('ವಿಪ್ರಾನುಕ್ರೋಶಪಾಶೈಃ' ಶ್ಲೋ. ೨೨ ನೋಡಿ) 'ಕೃಪಾ ದಯಾನುಕಂಪಾ ಸ್ಯಾ-ದನುಕ್ರೋಶೋಽಪ್ಯಥೋ ಹಸಃ' ಎಂದು ಅಮರ. ಬಹುವ್ರೀಹಿ ಸಮಾಸ ದಲ್ಲಿ 'ಸಹ' ಶಬ್ದವು ವಿಕಲ್ಪದಿಂದ ಸ ಎಂದಾಗುತ್ತದೆ; 'ತೇನ ಸಹೇತಿ ತುಲ್ಯ-ಯೋಗೇ' (ಪಾ. ೨।೨।೨೮) 'ವೋಪಸರ್ಜನಸ್ಯ' (ಪಾ. ೬।೩।೮೨); ಆದರಂತೆ ಸಾನುಕ್ರೋಶೈಃ ಎಂದಾಗಿದೆ. 2) ಅಜಸ್ರಂ-(ಕಕ. ವಿ. ಛ.) ಅನವರತಂ, ನಿರಂತರವಾಗಿ, ಸತತವಾಗಿ. 'ನಿತ್ಯಾನವರತಾಜಸ್ರಂ' ಅಮರ. 3) ಜನಿ.... ಮಾಲಾವಿಲೇ—'ಜನಿರುತ್ಪತ್ತಿಸಂಭವಃ' ಅಮರದಂತೆ ಜನಿ ಎಂದರೆ ಜನನ. 'ಜನೀ ಪ್ರಾದುರ್ಭಾವೇ'-ಹುಟ್ಟು ಎಂಬ ಧಾತು (ದಿವಾದಿ. ಆ.)ವಿನ ಮೇಲೆ 'ಜಸಿಘಸಿಭ್ಯಾಮಿಣ್' ಎಂಬ ಉಣಾದಿ (೪।೧೩೦) ಸೂತ್ರದಂತೆ ಇ(ಣ್) ಪ್ರತ್ಯಯ ಬಂದಿದೆ. ಊರ್ಮಿ ಶಬ್ದ ಪುಲ್ಲಿಂಗ-ಸ್ತ್ರೀಲಿಂಗ ಎರಡರಲ್ಲೂ ನಡೆಯುತ್ತದೆ, ತರಂಗ, ಅಲೆ ಎಂದರ್ಥ. 'ಭಂಗಸ್ತರಂಗ ಊರ್ಮಿರ್ವಾ ಸ್ತ್ರಿಯಾಂ ವೀಚಿಃ' ಅಮರ. 'ಊರ್ಮಿಃ ಸ್ತ್ರೀಪುಂಸಯೋರ್ವೀಚ್ಯಾಂ' ಮೇದಿನಿ. ಆವಿಲ ಎಂದರೆ ಕಲುಷಿತವಾದ, ಹೇಸಿಗೆಯಾದ ಅಥವಾ ದೂಷಿತ ವಾದ 'ಕಲುಷೋಽನಚ್ಛ ಆವಿಲಃ' ಎಂದು ಅಮರ.

3) ನಿಮಗ್ನಾನ್—ಮಗ್ನ ಎಂದರೇ ಮುಳುಗಿದ ಎಂದರ್ಥ. ಇದಕ್ಕೆ ನಿ-ನಿತರಾಂ-ಸಂಪೂರ್ಣವಾಗಿ ಎಂಬ ಉಪಸರ್ಗ ಸೇರಿಸಿದ್ದರಿಂದ— ಶ್ರೀಹರಿಯ ಅಥವಾ ವಾಯುದೇವರ ಅನುಗ್ರಹವಿಲ್ಲದೆ, ಏನೋ ಕಾರಣಾಂತರ ದಿಂದಲೂ ಕ್ವಚಿತ್ ಆದರೂ, ಏಳಲು ಅಥವಾ ದಾಟಲು ಸುತರಾಂ ಸಾಧ್ಯವೇ ಇಲ್ಲ ಎಂಬುದನ್ನು ಸೂಚಿಸಿದ್ದಾರೆಂದು-ಗು.ಸಾ. ಟೀಕಾಕಾರರು ತೋರಿಸಿ-

ಕೊಡುತ್ತಾರೆ. ಏಕೆಂದರೆ ಹದಿನಾಲ್ಕನೇ ವರ್ಷದಿಂದ ಆರಂಭಿಸಿ ಜೀವನವಿರುವ ಪರ್ಯಂತ ಒಂದೊಂದು ದಿನದಲ್ಲೇ ಕನಿಷ್ಠ ಹತ್ತು ಜನ್ಮ ಎತ್ತುವಷ್ಟು ಪಾಪ ಮಾಡುವನೆಂದು ಹೇಳಿದೆ. ಆದಕಾರಣ ನಿಮಗ್ನಾನ್ ಎಂದರೆ ಮತ್ತೆ ಪುನಃ ಮೇಲಕ್ಕೆ ಏಳಲು ಸಾಧ್ಯವೇ ಇಲ್ಲದಂತೆ—ಮೇಲೇಳುವುದೇ ಸಾಧ್ಯವಿಲ್ಲದಾಗ ದಾಟುವುದಂತೂ ದೂರತೋಪಾಸ್ತ—ಸಂಪೂರ್ಣವಾಗಿ ಮುಳುಗಿ ಹೋಗಿರುವ ಎಂದರ್ಥ. ಅನಿಲ (ಊರ್ಮಿಮಾಲಾವಿಲೇ) ಶಬ್ದದಿಂದ ದಿಕ್ಕುತೋರದೆ ಕಣ್ಣು ಕಣ್ಣು ಬಿಡುತ್ತಿರುವ ಅಥವಾ ಕಂಗೆಟ್ಟುಹೋದ ಎಂಬ ಭಾವನೆ ಸೂಚಿತವಾಗುತ್ತದೆ. ಆ ಭಾವವನ್ನೇ 'ನಿಮಗ್ನಾನ್' ಸಮರ್ಥಿಸುತ್ತದೆ. ಏಕೆ ಕಂಗೆಟ್ಟಿದ್ದಾರೆ ಎಂದರೆ ಅಶರಣಾನ್-ರಕ್ಷಕರಿಲ್ಲದೆ ಕಂಗೆಟ್ಟಿದ್ದಾರೆ ಎಂದು ಉತ್ತರ. ಆದಕಾರಣವೇ ಶರಣಂ ಇಚ್ಛತಃ-ರಕ್ಷಕರಿಗಾಗಿ ತೊಳಲುತ್ತಿರುವ ಎಂದು ಹೇಳಿದರು. ಈ ಶಬ್ದಪ್ರಯೋಗದಲ್ಲೇ ಒಂದು ವಿಶೇಷವಿದೆ ಎಂದು ಗು.ಸಾ. ತೋರಿಸುತ್ತಾರೆ. ತ್ರಿವಿಧಜೀವರಲ್ಲಿ ಸಾತ್ವಿಕಜೀವರು ಮಾತ್ರ ನಿಮ್ಮ ಮೊರೆ ಹೋಗುತ್ತಾರೆ. ತಾಮಸಜೀವಿಗಳು ಅಹಂಕಾರದಿಂದಲೂ ಸ್ವಾಭಿಮಾನದಿಂದಲೂ ನಿಮ್ಮ ಮೊರೆ ಹೋಗುವುದಿಲ್ಲ. ರಾಜಸಜೀವರು ಉದಾಸೀನತೆಯಿಂದ ಶರಣಾಗುವುದಿಲ್ಲ. ಆದಕಾರಣ ಅವರನ್ನು ನೀವು ರಕ್ಷಿಸುವುದೂ ಇಲ್ಲ ಎಂಬ ಭಾವನೆಯೂ ಗರ್ಭಿತವಾಗಿದೆ.

4) **ಶರಣಂ ಇಚ್ಛತಃ**—ಇಷ ಇಚ್ಛಾಯಾಂ-ಇಚ್ಛಿಸು, ಬಯಸು. ಧಾತು (ತು. ಪ.) ವಿನ ಶತೃಂತ (ವರ್ತಮಾನಕೃದಂತ) ರೂಪದ ಪುಲ್ಲಿಂಗ ರೂಪ ಇಚ್ಛನ್ ; ಇದರ ದ್ವಿತೀಯಾ ಬಹುವಚನರೂಪವೇ ಇಚ್ಛತಃ ; ಇದು ಜಂತೂನ್‌ಗೆ ವಿಶೇಷಣ ; ರಕ್ಷಕರನ್ನು ಅಪೇಕ್ಷಿಸುವ ಜಂತುಗಳನ್ನು-ಪ್ರಾಣಿಗಳನ್ನು 'ಪ್ರಾಣೀ ತು ಚೇತನೋ ಜನ್ಮೀ ಜಂತು-ಜನ್ಯು-ಶರೀರಿಣಃ' ಅಮರ.

5) **ಯುಷ್ಮಾಭಿಃ**—ನಿಮ್ಮಗಳಿಂದ ; ಇಲ್ಲಿ 'ಬಹುವಚನಮಾದ್ಯರ್ಥೇ' ನೀವೇ ಮೊದಲಾದ ದೇವತೆಗಳಿಂದ ಎಂದರ್ಥ. ಸೂತ್ರಭಾಷ್ಯದಲ್ಲಿ (೧।೧।೧) 'ಸಂಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ'—ಬ್ರಹ್ಮರುದ್ರಾದಿ ದೇವತೆಗಳು ನಾರಾಯಣನನ್ನು ಮೊರೆಹೊಗಲು ಅವನು ವ್ಯಾಸನಾಗಿ ಅವತರಿಸಿದನೆಂದು ಸ್ಪಷ್ಟವಾಗಿ ಹೇಳಿದೆ. ಈ ಶಬ್ದಕ್ಕೆ ಹರಿಪರವಾಗಿ ಅರ್ಥ ಹೇಳಲು

ಪ್ರಯತ್ನಿಸಿ ಪುರಾ. 'ನಿಮಗೆ ಪ್ರತಿಬಿಂಬಭೂತರಾದ ಬ್ರಹ್ಮಾದಿ ದೇವತೆಗಳಿಂದ' ಎಂದು ಅರ್ಥಮಾಡುತ್ತಾರೆ. ಈ ಅರ್ಥವನ್ನು ಸಮರ್ಥಿಸುವುದಕ್ಕೆ 'ಅತದ್ಭಾವೇ ಸಾಮಾನಾಧಿಕರಣ್ಯಂ ಸಾರೂಪ್ಯಂ ಗಮಯತಿ' ಎಂಬ ನ್ಯಾಯವನ್ನನುಸರಿಸಿ ಯುಷ್ಮಚ್ಛಬ್ದಕ್ಕೆ ಗೌಣೀವೃತ್ತಿಯಿಂದ'ಯುಷ್ಮದತ್ಸದೃಶ'ರೆಂದು ಅರ್ಥ ಹೇಳಬೇಕು; ಪ್ರತಿಬಿಂಬರಾದ ಕಾರಣ ಸಾದೃಶ್ಯವು ಸಂಭವಿಸುತ್ತದೆ' ಎಂದು ವಿವರಿಸುತ್ತಾರೆ. (ಏನೇ ಆದರೂ ಈ ಅರ್ಥ ದ್ರಾವಿಡ ಪ್ರಾಣಾಯಾಮದಂತೆ ಸ್ವಾರಸ್ಯವಿಲ್ಲದ್ದು ಎಂದು ನನ್ನ ಅಭಿಪ್ರಾಯ).

6) ಪ್ರಾರ್ಥಿತಃ ಸನ್ (ವಾಯುಪಕ್ಷದಲ್ಲಿ) ಪ್ರಾರ್ಥಿಸಲ್ಪಟ್ಟವನಾಗಿ ಎಂದರ್ಥ. ಪುರಾ. ಪ್ರಕಾರ ಸನ್ ವಿಷ್ಣುಪರವಾಗಿ ಸಂಬೋಧನೆ; ಸನ್ । ಸಂತೌ । ಸಂತಃ (ಪ್ರ.ವಿ.) । ಹೇ ಸನ್ । ಹೇ ಸಂತೌ । ಹೇ ಸಂತಃ ಎಂದು ರೂಪಗಳು. 'ಸಚ್ಛಬ್ದ ಉತ್ತಮಂ ಬ್ರೂಯಾತ್' ಎಂಬ ಉಕ್ತಿಯಂತೆ ಸತ್ ಶಬ್ದವು ಉತ್ತಮತ್ವವನ್ನು, ನಿರ್ದೋಷತ್ವವನ್ನು ಹೇಳುತ್ತದೆ. ಆದರಿಂದ ಸನ್ ಎಂಬ ಸಂಬೋಧನೆಗೆ 'ಹೇ ದೋಷರಹಿತರಾದ ನಾರಾಯಣದೇವರೇ' ಎಂದರ್ಥವಾಗುತ್ತದೆ. 7) ಚಿನ್ಮಾತ್ರಮೂರ್ತಿಃ ಎಂಬಲ್ಲಿ ಚಿತ್, ಮಾತ್ರ, ಮೂರ್ತಿಃ ಎಂದು ಮೂರು ಪದಗಳಿವೆ. ಚಿತ್ ಎಂದರೆ ಜ್ಞಾನ. 'ಪ್ರೇಕ್ಷೋಪಲಬ್ಧಿಶ್ಚಿತ್-ಸಂವಿತ್,'(ಅಮರ).'ಚಿತ್ ಜ್ಞಪ್ತಿರ್ ಜ್ಞಾನಂ ಚ ಬೋಧನಂ'— ವೈಜಯಂತೀಕೋಶ. ಚಿತ್ ಶಬ್ದವು ನಿತ್ಯಸ್ತ್ರೀಲಿಂಗ. 'ಸ್ತ್ರಿಯಾಂ ಮೂರ್ತಿಸ್ತನುತನೂಃ' ಎಂಬ ಅಮರದಂತೆ ಮೂರ್ತಿ ಎಂದರೆ ದೇಹ. ಆದಕಾರಣ ಚಿನ್ಮಾತ್ರಮೂರ್ತಿಃ ಎಂದರೆ ಕೇವಲ ಜ್ಞಾನವೇ ದೇಹವಾಗಿರುವ ಎಂದರ್ಥ. ಈ ವಿಚಾರ ನಖಸ್ತುತಿಯಲ್ಲಿ ಸಾಕಷ್ಟು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. (ಪುಟ ೧೫೮–೬೩ ನೋಡಿ.) ಪ್ರಾಕೃತದೇಹದ ವಿವರಣೆಯೂ ಅಲ್ಲೇ ಬಂದಿದೆ. ವೇದವ್ಯಾಸರು ಪ್ರಾದುರ್ಭವಿಸಿದಾಗ ಹೇಗಿದ್ದರು ಎಂಬ ವಿವರಣೆ ಮುಂದೆ ಖಂಡ 352ರ ಕಡೆಯಲ್ಲಿ ಬರುತ್ತದೆ. ಆದರಿಂದಲೇ ಅವರಿಗೆ 'ಪ್ರಾಕೃತ ದೇಹ'ವಿಲ್ಲ ಎಂಬುದು ವ್ಯಕ್ತವಾಗುತ್ತದೆ.

351. ಕ) ದಂಡಾನ್ವಯ—(ಸೂಚನೆ–ಈ ಶ್ಲೋಕದಲ್ಲಿ ವ್ಯಾಸಾವತಾರದ ವರ್ಣನೆಯೇ ಇರುವುದರಿಂದ ಇದಕ್ಕೆ ವಾಯುಪರ ವಿಶೇಷಾರ್ಥ

ಯಾವುದೂ ಇಲ್ಲ.) 'ಯುಷ್ಮಾಭಿಃ' ಎಂದು ವಾಯುದೇವರನ್ನು ಕುರಿತು ನೇರವಾಗಿ ಹೇಳಿರುವುದರಿಂದ 'ಹೇ ಮುಖ್ಯಪ್ರಾಣ ಅಥವಾ ವಾಯೋ ಅಥವಾ ಪವಮಾನ' ಎಂಬ ಸಂಬೋಧನಾರೂಪವನ್ನು ಅಧ್ಯಾಹಾರ ಮಾಡಿಕೊಳ್ಳ-ಬಹುದು. ಹೇ ಪವಮಾನ (ವಾಯೋ ಅಥವಾ ಮುಖ್ಯಪ್ರಾಣ)! (೧ನೇ ವಾಕ್ಯ) i) ಜನಿಮೃತಿ....ಮಾಲಾವಿಲೇ ii) ಅಸ್ಮಿನ್ ಸಂಸಾರಾಬ್ಧೌ ಅಜಸ್ರಂ ನಿಮಗ್ನಾನ್ (a), ಅಶರಣಾನ್ (b), ಶರಣಂ ಇಚ್ಛತಃ (c) ಜಂತೂನ್ ವೀಕ್ಷ್ಯ ಸಾನುಕ್ರೋಶೈಃ ಯುಷ್ಮಾಭಿಃ ಪ್ರಾರ್ಥಿತಃ ಸನ್ ಜಲನಿಧಿ-ಶಯನಃ ಸತ್ಯ-ವತ್ಯಾಂ ಮಹರ್ಷೇಃ ವ್ಯಕ್ತಃ। (ಎರಡನೇ ವಾಕ್ಯ) (ಸಃ) ಚಿನ್ಮಾತ್ರಮೂರ್ತಿಃ ಖಲು। ಭಗವತಃ ದೇಹಃ ನ ಜಾತು ಪ್ರಾಕೃತಃ (ಖಲು)!

ಖ) ಅನ್ವಯಾರ್ಥ—(ಹೇ ವಾಯುದೇವರೇ!) (೧ನೇ ವಾಕ್ಯ) (a) i) ಜನಿಮೃತಿ....ಮಾಲಾವಿಲೇ-ಜನಿ-ಜನನ, ಮೃತಿ-ಮರಣ, ನಿರಯ-ನರಕ, ಆದಿ-ಇವುಗಳೇ ಮೊದಲಾದ, ಊರ್ಮಿ-ಅಲೆಗಳ, ಮಾಲಾ-ಪರಂಪರೆಯಿಂದ (ಪಂಕ್ತಿಗಳಿಂದ), ಆವಿಲೇ-ಕೆಸರಾದ (ಕಶ್ಮಲವಾದ); ii) ಅಸ್ಮಿನ್-ಈ (ಅನುಭವಿಸುತ್ತಿರುವ), ಸಂಸಾರಾಬ್ಧೌ-ಸಂಸಾರಸಾಗರದಲ್ಲಿ; ಅಜಸ್ರಂ-ನಿರಂತರವಾಗಿ (ಸತತವಾಗಿ); ನಿಮಗ್ನಾನ್-ಮುಳುಗಿದಂಥಾ; (b) ಅಶರ-ಣಾನ್-ಕಾಪಾಡುವವರಿಲ್ಲದ; (c) ಶರಣಂ-ಮೊರೆಯನ್ನು (ರಕ್ಷಕರನ್ನು); ಇಚ್ಛತಃ-ಬಯಸುತ್ತಿರುವ; ಜಂತೂನ್-ಪ್ರಾಣಿಗಳನ್ನು; ವೀಕ್ಷ್ಯ-ನೋಡಿ; ಸಾನುಕ್ರೋಶೈಃ-ಕನಿಕರಗೊಂಡಂಥಾ (ದಯಾರ್ದ್ರ ಹೃದಯರಾದ); ಯುಷ್ಮಾಭಿಃ-ನೀವೇ ಮೊದಲಾದ ದೇವತೆಗಳಿಂದ; ಪ್ರಾರ್ಥಿತಃ ಸನ್-ಪ್ರಾರ್ಥಿ-ಸಲ್ಪಟ್ಟವನಾಗಿ; ಜನನಿಧಿಶಯನಃ-ಕ್ಷೀರಸಮುದ್ರಶಾಯಿಯಾದ ಶ್ರೀವಿಷ್ಣುವು; ಸತ್ಯವತ್ಯಾಂ-ಸತ್ಯವತೀದೇವಿಯಲ್ಲಿ; ಮಹರ್ಷೇಃ-ಪರಾಶರಮಹರ್ಷಿಗಳಿಂದ; ವ್ಯಕ್ತಃ-ಪ್ರಕಟವಾದನು (ಎಲ್ಲ ಮಕ್ಕಳಂತೆ ಗರ್ಭವಾಸ ಮಾಡಿ ಹುಟ್ಟಲಿಲ್ಲ). (ಸಃ-ಆ ವಿಷ್ಣು.) ಚಿನ್ಮಾತ್ರಮೂರ್ತಿಃ ಖಲು-ಕೇವಲ ಜ್ಞಾನಮಯವಾದ ದೇಹವುಳ್ಳವನಲ್ಲವೇ! ಭಗವತಃ-ಐಶ್ವರ್ಯಾದಿ ಷಡ್ಗುಣೋಪೇತನಾದ ಆ ಪರಮಾತ್ಮನ; ದೇಹಃ-ದೇಹವು; ಪ್ರಾಕೃತಃ ನ ಖಲು-ರಕ್ತಮಾಂಸಾದಿ

ಜಡವಸ್ತುಗಳಿಂದ ನಿರ್ಮಿತವಾದುದಲ್ಲ, ಈ ವಿಚಾರ 'ಸದ್ದೇಹಃ' ಇತ್ಯಾದಿ ಪ್ರಮಾಣಗಳಿಂದ ಸಿದ್ಧವಾಗಿದೆ.

ಗ) ಹರಿಪರವಾಗಿ ಅನ್ವಯಾರ್ಥ—(ಪುರಾ. ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ಹರಿಪರವಾಗಿಯೇ ಅರ್ಥ ಹೇಳಲು ಬಹಳ ಶ್ರಮಪಟ್ಟಿದ್ದಾರೆ. ಈ ಅರ್ಥ ಅಷ್ಟು ಸಮಂಜಸವಾಗಿ ಹೊಂದಿಕೆಯಾಗುವುದಿಲ್ಲವಾದರೂ ಅದನ್ನು ಕೊಟ್ಟಿದ್ದೇನೆ.) ಹೇ ಸನ್-ದೋಷರಹಿತನಾದ ; ಚಿನ್ಮಾತ್ರಮೂರ್ತಿಃ-ಕೇವಲಜ್ಞಾನಮಯವಾದ ದೇಹವುಳ್ಳವರೂ ; ಜಲನಿಧಿಶಯನಃ-ಕ್ಷೀರ-ಸಮುದ್ರಶಾಯಿಯೂ ಆದ (ತ್ವಂ-ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು) ನೀನು ; ಅಜಸ್ರಂ ಜನಿಮೃತಿ....ಆವಿಲೇ ಅಸ್ಮಿನ್ ಸಂಸಾರಾಬ್ಧೌ ನಿಮಗ್ನಾನ್, ಅಶರಣಾನ್, ಶರಣಂ ಇಚ್ಛತಃ ಜಂತೂನ್ ವೀಕ್ಷ್ಯ ಸಾನುಕ್ರೋಶೈಃ (ಇಷ್ಟಕ್ಕೂ ಹಿಂದಿನಂತೆಯೇ ಅರ್ಥ) ; ಯುಷ್ಮಾಭಿಃ-ನಿಮಗೆ ಪ್ರತಿಬಿಂಬ-ಭೂತರಾದ ಬ್ರಹ್ಮಾದಿದೇವತೆಗಳಿಂದ ; ಪ್ರಾರ್ಥಿತಃ ಸನ್, ಸತ್ಯವತ್ಯಾಂ ಮಹರ್ಷೇಃ ವ್ಯಕ್ತಃ (ಅಭೂಃ)-ಪ್ರಕಟವಾದಿರಿ. ಭಗವತಃ (ತವ) ಪ್ರಾಕೃತಃ ದೇಹಃ ಜಾತು ನ ಖಲು.

ಘ) ಭಾವಾರ್ಥ—ಪರಮ ದಯಾಳುಗಳೂ ಕ್ಷಮಾಸಮುದ್ರರೂ ಭಕ್ತವತ್ಸಲರೂ ಆದ ಹೇ ವಾಯುದೇವರೇ ! ಅಜ್ಞರಾದರೂ ಜ್ಞಾನಾರ್ಥಿ-ಗಳಾದ ಭಕ್ತರ ಮೇಲೆ ನಿಮಗೆಷ್ಟು ವಾತ್ಸಲ್ಯ ! ಅಗಾಧವಾದ ಈ ಸಂಸಾರ-ಸಾಗರದಲ್ಲಿ ಬಿದ್ದು ರಕ್ಷಕರನ್ನು ಕಾಣದೆ 'ಅಯ್ಯೋ, ನಮ್ಮನ್ನು ಉದ್ಧರಿಸು-ವವರು ಯಾರಪ್ಪಾ, ನಾವು ಎಂದಿಗೆ ಪಾರಾದೇವು ?' ಎಂದು ಹಲುಬುತ್ತಾ ದಾಟಲು ಶಕ್ಯವಿಲ್ಲದೆ ಅದರಲ್ಲೇ ಸಿಕ್ಕಿಕೊಂಡು ತೊಳಲಾಡುತ್ತಿರುವ ಸಜ್ಜನರ ಬಗ್ಗೆ ನಿಮಗೆ ಅದೆಂಥಾ ನಿರ್ವ್ಯಾಜ ಕಾರುಣ್ಯ ! ಏಕೆಂದರೆ ಸಮುದ್ರವು ಕೊನೆ ಮೊದಲಿಲ್ಲದೆ ಮೇಲಿಂದಮೇಲೆ ಏಳುತ್ತಿರುವ ಅಸಂಖ್ಯ ತರಂಗಗಳಿಂದ ತುಂಬಿ ಹೇಗೆ ನೌಕೆಯಿಲ್ಲದೆ ದಾಟಲು ಅಸಾಧ್ಯವಾಗಿರುವುದೋ ಅದರಂತೆ ಈ ಸಂಸಾರ-ಸಮುದ್ರವೂ ಸಹ ಜನನ-ಮರಣಗಳು ರೋಗ-ರುಜಿನಗಳು ಸ್ವರ್ಗ-ನರಕ ಭೂಮಿಗಳೆಂಬ ಇತಿಮಿತಿಯಿಲ್ಲದ ಅಲೆಗಳ ಪರಂಪರೆಯಿಂದ ತುಂಬಿರುವುದರಿಂದ ಜ್ಞಾನವೆಂಬ ದೋಣಿಯಿಲ್ಲದೆ ಇದನ್ನು ದಾಟಲು ಶಕ್ಯವಿಲ್ಲವೆಂದು ತಿಳಿದ ನೀವು

ಕಣ್ಣು ಕಣ್ಣು ಬಿಡುತ್ತಿರುವ ಆ ಮಂದಮತಿ ಜನಗಳನ್ನು ಕಂಡು ಮರುಕಗೊಂಡವರಾಗಿ, ಬ್ರಹ್ಮರುದ್ರೇಂದ್ರಾದಿ ದೇವತೆಗಳೊಡನೆ ಕಲೆತು ಕ್ಷೀರಸಮುದ್ರಕ್ಕೆ ಹೋಗಿ ಶೇಷಶಾಯಿಯಾಗಿ ಪವಡಿಸಿದ್ದ ವಿಷ್ಣುವನ್ನು ಜ್ಞಾನೋದ್ಧಾರ ಕಾರ್ಯಕ್ಕಾಗಿ ಅವತಾರ ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಅದರಂತೆ, ಚಿನ್ಮಾತ್ರಮಯವಾದ ಅಪ್ರಾಕೃತ ಶರೀರವುಳ್ಳ ಆ ಭಗವಂತನು ದ್ವಾಪರದಲ್ಲಿ ಸತ್ಯವತೀ ದೇವಿಯ ಮಗನಾಗಿ ಪರಾಶರರ ದೆಸೆಯಿಂದ ಅಭಿವ್ಯಕ್ತನಾದನು; ಎಲ್ಲ ಮಕ್ಕಳಂತೆ ಗರ್ಭವಾಸ ಮಾಡಿ ಹುಟ್ಟಲಿಲ್ಲ. ಅಖಂಡ ಷಡ್ಗುಣೈಶ್ವರ್ಯಸಂಪನ್ನನಾದ ಆ ಪರಮಾತ್ಮನಿಗೆ ಹೇಯವಾದ ರಕ್ತಮಜ್ಜಾಮಾಂಸಾಸ್ಥಿಮಯವಾದ ಪ್ರಾಕೃತದೇಹವು ಎಂದಿಗಾದರೂ ಬರಲು ಶಕ್ಯವೇ? ಸರ್ವಥಾ ಅಶಕ್ಯ. ಈ ಪ್ರಕಾರ ಚಿನ್ಮಾತ್ರಮೂರ್ತಿಯಾದ ಭಗವಂತನಲ್ಲಿ ಸಜ್ಜನರ ಪರವಾಗಿ ಮೊರೆಯಿಟ್ಟುಕೊಂಡು ಅವನು ವೇದವ್ಯಾಸಮಹರ್ಷಿಗಳಾಗಿ ಅವತಾರ ಮಾಡಿ ಜ್ಞಾನಪ್ರಚಾರ ಕಾರ್ಯವನ್ನು ಕೈಗೊಳ್ಳುವಂತೆ ಮಾಡಿದ್ದರಿಂದಲೇ, ಹೇ ವಾಯುದೇವ! ಸಕಲ ಸಜ್ಜನರೂ ಉದ್ಧೃತರಾದರೆಂದು ಭಾವ.

352. ವ್ಯಾಸಾವತಾರದ ಕಥೆ—ಬ್ರಹ್ಮಸೂತ್ರಭಾಷ್ಯದ ಪೀಠಿಕೆಯ ಪ್ರಾರಂಭದಲ್ಲೇ ವ್ಯಾಸಾವತಾರದ ಪ್ರಸಕ್ತಿ ಬಂದಿದೆ. ಇದಕ್ಕೆ ಶ್ರೀಮದಾಚಾರ್ಯರು ಸ್ಕಾಂದಪುರಾಣದ ವಾಕ್ಯಗಳನ್ನು ಪ್ರಮಾಣವಾಗಿ ಹೇಳಿದ್ದಾರೆ. ಅದಲ್ಲದೆ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ಹತ್ತನೇ ಅಧ್ಯಾಯದಲ್ಲಂತೂ ಈ ಕಥೆಯನ್ನು ವಿಸ್ತಾರವಾಗಿ ನಿರೂಪಣ ಮಾಡಿದ್ದಾರೆ. ಅವೆರಡನ್ನೂ ಅನುಸರಿಸಿ ಈ ಕಥೆ ಬರೆದಿದ್ದೇನೆ.

ಜ್ಞಾನವು ಖಿಲವಾದುದು. ಶ್ರೀಮನ್ನಾರಾಯಣನಿಂದ ನಿಷ್ಪನ್ನವಾದ ಜ್ಞಾನವು ಕೃತಯುಗದಲ್ಲಿ ಯಥಾಸ್ಥಿತವಾಗಿತ್ತು. ತ್ರೇತಾಯುಗದಲ್ಲಿ ಕಾಲು ಭಾಗದಷ್ಟು ಖಿಲವಾಯಿತು. ದ್ವಾಪರದಲ್ಲಿ ಕಾಲಧರ್ಮಕ್ಕೆ ಅನುಗುಣವಾಗಿ ಅರ್ಧದಷ್ಟು ನಾಶವಾಗಿರಲು ಗೌತಮರ ಶಾಪದ ನಿಮಿತ್ತವಾಗಿ ಸಂಪೂರ್ಣವಾಗಿ ನಾಶವಾಯಿತು. ಗೌತಮರು ಶಾಪ ಏಕೆ ಕೊಟ್ಟರು?

ಗೌತಮರ ಶಾಪ—ಒಂದು ಸಾರಿ ದೇಶದಲ್ಲೆಲ್ಲಾ ದೊಡ್ಡ ಕ್ಷಾಮ ಬಂತು. ಹನ್ನೆರಡು ವರ್ಷ ಮಳೆ ಬರದೆ ಕುಡಿಯುವುದಕ್ಕೆ ನೀರೂ ಸಿಗದಂತಾಯಿತು. ಗೌತಮರ ಆಶ್ರಮದಲ್ಲಿ ಮಾತ್ರ ಅವರ ತಪೋಬಲದಿಂದ ಸಮೃದ್ಧಿಯಿತ್ತು. ಇದನ್ನು ಕಂಡು ಬ್ರಾಹ್ಮಣರೆಲ್ಲ ಅವರ ಆಶ್ರಮಕ್ಕೇ ಹೋಗಿ ಸುಖವಾಗಿ ಇದ್ದುಬಿಟ್ಟರು. ದೇಶವು ಸುಭಿಕ್ಷವಾಗಲು ಬ್ರಾಹ್ಮಣರು ತಮ್ಮ ಸ್ಥಳಗಳಿಗೆ ಹೋಗಲು ಕಾತುರರಾದರು. ಗೌತಮರು ಅವರನ್ನು ತಡೆಯುತ್ತಿದ್ದರು. ಇದರಿಂದ ಬೇಸರಗೊಂಡ ಬ್ರಾಹ್ಮಣರು ಕುಯುಕ್ತಿ ಮಾಡಿದರು. ಮಂತ್ರಪೂತವಾದ ಗೋವೊಂದನ್ನು ಸೃಷ್ಟಿಸಿ ಬಿಟ್ಟರು. ಗೌತಮರು ಉಶ್ ಎನ್ನುವುದೇ ತಡ ಆ ಆಕಳು ಸತ್ತೇಹೋಯಿತು. ಆ ಕ್ಷಣ ಬ್ರಾಹ್ಮಣರೆಲ್ಲ ಗೌತಮರಿಗೆ ಗೋಹತ್ಯದೋಷ ಹೊರಿಸಿ ಸ್ಥಳ ಬಿಟ್ಟು ಹೊರಟುಬಿಟ್ಟರು. ಗೌತಮರಿಗೆ ಅವರ ಕುತಂತ್ರ ಗೊತ್ತಾಗಲು ಕ್ರುದ್ಧರಾದ ಅವರು ಬ್ರಾಹ್ಮಣರಿಗೆ ಅಜ್ಞಾನವುಂಟಾಗುವಂತೆಯೂ ಸಿದ್ಧಿ ನಾಶವಾಗುವಂತೆಯೂ ಶಾಪ ಕೊಟ್ಟು-ಬಿಟ್ಟರು. ಸಿಡಿಲಿನ ಮೇಲೆ ಪಿಡುಗು ಎಂಬಂತೆ ಬ್ರಹ್ಮನ ವರದಿಂದ ಉನ್ಮತ್ತನಾದ ಕಲಿ ಸಕಲರಲ್ಲೂ ಪ್ರವೇಶಿಸಿ ಅಜ್ಞಾನ-ಮಿಥ್ಯಾಜ್ಞಾನ ಹುಟ್ಟಿಸಿ ಪೀಡಿಸ-ಲಾರಂಭಿಸಿದನು. ರುದ್ರದೇವರಲ್ಲೇ ಆವಿಷ್ಟನಾಗಿ ಪಾಶುಪತಾದಿ ಮೋಹಕ ಶಾಸ್ತ್ರಗಳನ್ನು ರಚಿಸಿದನು. ಹೀಗೆ ಜ್ಞಾನವೆಲ್ಲವೂ ಕುಲಗೆಟ್ಟುಹೋಯಿತು. ಸಜ್ಜನರು ಧರ್ಮಭ್ರಷ್ಟರಾಗಿಹೋದರು.

ವಿಷ್ಣುವಿನಲ್ಲಿ ದೇವತೆಗಳ ಮೊರೆ—ಸಜ್ಜನರೂ ದುರ್ಮಾರ್ಗಾವಲಂಬಿ-ಗಳಾದುದನ್ನು ಕಂಡು ಮರುಕಗೊಂಡ ಬ್ರಹ್ಮಾದಿ ದೇವತೆಗಳು ಕ್ಷೀರ-ಸಮುದ್ರಕ್ಕೆ ಹೋಗಿ ಶ್ರೀವಿಷ್ಣುವನ್ನು ಸ್ತುತಿಸಿ "ಹೇ ಭಗವಂತ, ಕಲಿಯ ಬಾಧೆ ಅಸದಳವಾಗಿದೆ. ಅವನು ಗೊತ್ತೇ ಆಗದಂತೆ ಪೀಡಿಸುತ್ತಿದ್ದಾನೆ. ಭೂಮಿಯಲ್ಲಿ ಅವತಾರಮಾಡಿ ಅವನನ್ನು ನಿಗ್ರಹಿಸಿ ಸಚ್ಛಾಸ್ತ್ರಗಳನ್ನು ರಚಿಸಿ ಸಜ್ಜನರನ್ನು ಉದ್ಧಾರಮಾಡು" ಎಂದು ಪ್ರಾರ್ಥಿಸಿಕೊಂಡರು. ಶ್ರೀಹರಿ ಅನುಮೋದಿಸಿದನು.

ಪರಾಶರರ ತಪಸ್ಸು—ಇತ್ತ ವಸಿಷ್ಠರ ಮೊಮ್ಮಗನಾದ ಪರಾಶರ ಮಹರ್ಷಿಗಳು ವಿಷ್ಣುವನ್ನು ಕುರಿತು ತಪಸ್ಸುಮಾಡಿ 'ನೀನೇ ನನ್ನ ಮಗ-

ನಾಗಬೇಕು' ಎಂದು ವರ ಕೇಳಿಕೊಂಡರು. ಭಗವಂತ ಹಾಗೇ ಆಗಲೆಂದು ಒಪ್ಪಿ, ಸತ್ಯವತಿಯ ಚರಿತ್ರೆಯನ್ನು ಹೇಳಿ ಅವಳು ನದೀತೀರದಲ್ಲಿ ದೋಣಿ ನಡೆಸುತ್ತಾ ಇರುವಳೆಂದೂ ಅವಳ ಬಳಿಗೆ ಹೋಗುವಂತೆಯೂ ಪರಾಶರರಿಗೆ ಆಜ್ಞೆಮಾಡಿದನು. ಅದರಂತೆ ಪರಾಶರರು ಯಮುನಾನದೀತೀರದಲ್ಲಿದ್ದ ನಡುದ್ವೀಪಕ್ಕೆ ಬಂದರು.

ಸತ್ಯವತಿಯ ವೃತ್ತಾಂತ—ವಸುರಾಯ ದೊಡ್ಡ ಚಕ್ರವರ್ತಿ, ಆತ ಪಿತೃಕಾರ್ಯದಲ್ಲಿ ತೊಡಗಿದ್ದಾಗ ರೇತಸ್ಸು ಸ್ಖಲನವಾಯಿತು. ಅದನ್ನು ಶ್ಯೇನ ಪಕ್ಷಿ ಒಯ್ಯುತ್ತಿತ್ತು. ಇನ್ನೊಂದು ಪಕ್ಷಿ ಬಂದು ಕಿತ್ತಾಡಿದ್ದರಿಂದ ಆ ರೇತಸ್ಸು ನದಿಯಲ್ಲಿ ಬಿತ್ತು. ಅದನ್ನು ಒಂದು ಮೀನು ನುಂಗಿತು. ಮೀನಿನ ಹೊಟ್ಟೆಯಲ್ಲೇ ಅವಳಿ ಮಕ್ಕಳು ಬೆಳೆದರು. ಆ ಮೀನನ್ನು ಬೆಸ್ತರವನು ಹಿಡಿದು ತನ್ನ ಯಜಮಾನನಾದ ದಾಶರಾಜನಿಗೆ ಕೊಟ್ಟನು. ಅವನು ಆ ಮಕ್ಕಳನ್ನು ವಸುರಾಜನಿಗೆ ಒಪ್ಪಿಸಿದ. ವಸುರಾಜ ಗಂಡುಮಗುವನ್ನು ತಾನಿಟ್ಟುಕೊಂಡು ಹೆಣ್ಣುಕೂಸನ್ನು ದಾಶರಾಜನಿಗೇ ಕೊಟ್ಟು ಸಾಕಿಕೊಳ್ಳಲು ಹೇಳಿದನು. ಆ ಗಂಡುಕೂಸೇ ವಿರಾಟರಾಜನಾದನು. ಹೆಣ್ಣುಕೂಸೇ ಸತ್ಯವತೀ. ಅವಳು ವಸುರಾಜನ ಮಗಳಾದ್ದರಿಂದ ಅವಳಿಗೆ 'ವಾಸವೀ' ಎಂದು ಹೆಸರು. ಸತ್ಯವತಿ ದೊಡ್ಡವಳಾಗಿ ಯಮುನಾನದೀತೀರದಲ್ಲಿ ದೋಣಿ ನಡೆಸುತ್ತಿದ್ದಳು. ವಿಷ್ಣುವಿನ ಆಜ್ಞೆಯಂತೆ ಪರಾಶರರು ಅವಳ ಬಳಿಗೆ ಬಂದು ಭಗವಂತನ ಆಜ್ಞೆಯನ್ನು ತಿಳಿಸಿ ಅವಳ ಅಂಗಸ್ಪರ್ಶಮಾಡಿದರು.

ವೇದವ್ಯಾಸರ ಪ್ರಾದುರ್ಭಾವ—ಆಕ್ಷಣ ಆ ಯಮುನಾನದಿಯ ದ್ವೀಪದಲ್ಲೇ ಸಾಕ್ಷಾತ್ ಶ್ರೀಮನ್ನಾರಾಯಣನೇ ದಿವ್ಯರೂಪವನ್ನು ಧರಿಸಿ ಸತ್ಯವತಿಯಲ್ಲಿ ಪ್ರಕಟವಾದನು. ಪ್ರಕಟವಾದಾಗ ವೇದವ್ಯಾಸರು ಹೇಗಿದ್ದ-ರೆಂದರೆ ಆಚಾರ್ಯರು ವರ್ಣಿಸುತ್ತಾರೆ (ತಾ.ನಿ.೧೦/೫೨-೫೫)—ಪಚ್ಚೆಮಣಿ-ಯಂತೆ ಶುದ್ಧ ಹಚ್ಚಗಿದ್ದಾರೆ. ಮಿಂಚಿನಂತೆ ಹೊಳೆಯುತ್ತಿದ್ದಾರೆ. ಯಜ್ಞೋಪವೀತವನ್ನೂ ಕೃಷ್ಣಾಜಿನವನ್ನೂ ಧರಿಸಿದ್ದಾರೆ. ಬಾಯಲ್ಲಿ ವೇದೋಚ್ಚಾರ ಮಾಡುತ್ತಿದ್ದಾರೆ. ಬಲಗೈಯಲ್ಲಿ ಜ್ಞಾನಮುದ್ರೆಯನ್ನೂ ಎಡಗೈಯಲ್ಲಿ ಅಭಯಮುದ್ರೆಯನ್ನೂ ಧರಿಸಿದ್ದಾರೆ. ಶುಭ್ರವಾದ ಜಟೆಯನ್ನು

ಧರಿಸಿದ್ದಾರೆ. ಅನಂತ ಚಂದ್ರರಿಗೂ ಮಿಗಿಲಾದ ಕಾಂತಿಯುಳ್ಳವರಾಗಿದ್ದಾರೆ. ಅವರು ಯಮುನಾನದೀ ದ್ವೀಪದಲ್ಲಿ ಪ್ರಾದುರ್ಭವಿಸಿದ್ದರಿಂದ ಅವರಿಗೆ ಕೃಷ್ಣ-ದ್ವೈಪಾಯನರೆಂದೂ ಹೆಸರಾಯಿತು. ಮುಂದಿನ ಕಥೆ ವಾಯುಸ್ತುತಿಯ ಈ ಶ್ಲೋಕಕ್ಕೆ ಅಪ್ರಸಕ್ತವಾದ್ದರಿಂದ ಇಲ್ಲಿಗೇ ನಿಲ್ಲಿಸುವೆನು.

ಇಲ್ಲಿಗೆ ೩೬ನೇ ಶ್ಲೋಕ ಮುಗಿಯಿತು

ಖ) ಶ್ಲೋಕ ೩೭. ಬ್ರಹ್ಮಸೂತ್ರಗಳ ರಚನೆ

353. (ಕ) ಅವತಾರಿಕೆ—(ಕಕ. ವಿ. ಥ.) ವ್ಯಾಸಾವತಾರ ಮಾಡಿ ಏನು ಮಾಡಿದರೆಂದು ವಿವರಿಸುತ್ತಾ ವ್ಯಾಸಾವತಾರದ ಮುಖ್ಯ ಪ್ರಯೋಜನವನ್ನು ತಿಳಿಸಿ ಅವರಿಗೆ ವಂದನೆಯನ್ನೂ ಅರ್ಪಿಸುತ್ತಾರೆ. (ಪುರಾ.) ಈಗ ಬ್ರಹ್ಮಸೂತ್ರನಿರ್ಮಾಣರೂಪವಾದ ವ್ಯಾಸಾವತಾರ ಪ್ರಯೋಜನವನ್ನು ನಿರೂಪಿಸುತ್ತಾರೆ.

ಅಸ್ತವ್ಯಸ್ತಂ ಸಮಸ್ತ—ಶ್ರುತಿಗತಮಧಮೈ
ರತ್ನಪೂಗಂ ಯಥಾಂಧೈ-
ರರ್ಥಂ ಲೋಕೋಪ (ಕಕ.ವಿ. ಕೃತ್ಯೈ)-ಕ್ಲೃಪ್ತ್ಯೈ
ಗುಣಗಣನಿಲಯಃ ಸೂತ್ರಯಾಮಾಸ ಕೃತ್ಸ್ನಮ್ ।
ಯೋಽಸೌ ವ್ಯಾಸಾಭಿಧಾನ—ಸ್ತಮಹಮಹರಹರ್-
ಭಕ್ತಿತಸ್ತ್ವ (ಪಾಠಾಂ ಸ್ತ) ತ್ಪ್ರಸಾದಾತ್
ಸದ್ಯೋ ವಿದ್ಯೋಪಲಬ್ಧ್ಯೈ ಗುರುತಮಮಗುರುಂ
ದೇವದೇವಂ ನಮಾಮಿ ॥ ೩೭ ॥

ಖ) ಪದವಿಭಾಗ—ಅಸ್ತವ್ಯಸ್ತಂ, ಸಮಸ್ತಶ್ರುತಿಗತಂ, ಅಧಮೈಃ, ರತ್ನಪೂಗಂ, ಯಥಾ, ಅಂಧೈಃ, ಅರ್ಥಂ, ಲೋಕೋಪ (ಕೃತ್ಯೈ) ಕ್ಲೃಪ್ತ್ಯೈ,

ಗುಣಗಣನಿಲಯಃ, ಸೂತ್ರಯಾಮಾಸ, ಕೃತ್ಸ್ನಂ, ಯಃ, ಅಸೌ, ವ್ಯಾಸಾಭಿಧಾನಃ, ತಂ, ಅಹಂ, ಅಹರಹಃ, ಭಕ್ತಿತಃ, ತ್ವತ್ (ತತ್) ಪ್ರಸಾದಾತ್, ಸದ್ಯಃ, ವಿದ್ಯೋಪಲಬ್ಧ್ಯೈ, ಗುರುತಮಂ, ಅಗುರುಂ, ದೇವದೇವಂ, ನಮಾಮಿ.

ಗ) ವಿಶ್ಲೇಷಣೆ—ಇನ್ನುಮುಂದೆ ಎಲ್ಲ ಶ್ಲೋಕಗಳಿಗೂ ಪ್ರಾಯಃ ವಾಯುಪರವಾದ ಒಂದೇ ಅರ್ಥ, ಹರಿಪರ ಅರ್ಥ ವ್ಯತ್ಯಾಸವಿಲ್ಲ. ಈ ಶ್ಲೋಕ ಒಂದು ಸಂಯುಕ್ತ ವಾಕ್ಯರೂಪವಾಗಿದೆ; ಮೊದಲನೆಯ ಅಪೂರ್ಣ ವಾಕ್ಯದಲ್ಲಿ ಬ್ರಹ್ಮಸೂತ್ರರಚನೆಯ ವಿಷಯ ಬಂದಿದೆ, ಎರಡನೆಯ ಪ್ರಧಾನವಾಕ್ಯ ವಂದನಾರ್ಪಣ ರೂಪವಾಗಿದೆ. ಹೀಗೆ ಅಪೂರ್ಣ ವಾಕ್ಯವು ವಿಶೇಷಣರೂಪವಾಗಿದೆ. (ಪ್ರಧಾನವಾಕ್ಯ) ತಂ ಅಹಂ ನಮಾಮಿ-ಅವರನ್ನು ನಾನು ವಂದಿಸುತ್ತೇನೆ. ನಮಾಮಿ ಎಂಬ ಕ್ರಿಯೆಗೆ—೧) ಅಹರಹಃ-ಪ್ರತಿನಿತ್ಯ ಅಥವಾ ನಿರಂತರವಾಗಿ, ೨) ಭಕ್ತಿತಃ-ಭಕ್ತಿಯಿಂದ ಎಂದು ಎರಡು ಕ್ರಿಯಾವಿಶೇಷಣಗಳು. ಏಕೆ ನಮಸ್ಕಾರ ಮಾಡುತ್ತೇನೆ ಎಂದರೆ, ೩) ತ್ವತ್ (ತತ್) ಪ್ರಸಾದಾತ್ ಸದ್ಯಃ ವಿದ್ಯೋಪಲಬ್ಧ್ಯೈ-ನಿಮ್ಮ (ಅವರ) ಅನುಗ್ರಹದಿಂದ ಶೀಘ್ರವಾಗಿ ವಿದ್ಯಾಲಾಭಕ್ಕಾಗಿ ಎಂದು ಉದ್ದೇಶವನ್ನು ತೋರಿಸುತ್ತದೆ. i) ಗುರುತಮಂ, ii) ಅಗುರುಂ, iii) ದೇವದೇವಂ ಎಂದು 'ತಂ'ಗೆ ವಿಶೇಷಣಗಳು. (ಅಪೂರ್ಣವಾಕ್ಯ) ಯಃ ವ್ಯಾಸಾಭಿಧಾನಃ ಅಸೌ ಸಮಸ್ತಶ್ರುತಿಗತಂ ಅರ್ಥಂ ಸೂತ್ರಯಾಮಾಸ—ಯಾವ ವ್ಯಾಸರೆಂಬ ಇವರು ಸಕಲ ವೇದಗಳಲ್ಲೂ ಹೇಳಿರುವ ಸಮಗ್ರ ಅರ್ಥವನ್ನು ಸೂತ್ರರೂಪವಾಗಿ ರಚಿಸಿದರೋ (ಅಂಥಾ ಇವರನ್ನು ನಮಸ್ಕರಿಸುತ್ತೇನೆ ಎಂದು ಪ್ರಧಾನ ವಾಕ್ಯದೊಡನೆ ಅನ್ವಯ ಮಾಡಬೇಕು). ಗುಣಗಣನಿಲಯಃ ಎಂಬುದು ವ್ಯಾಸಾಭಿಧಾನಃ-ಕ್ಕೆ ವಿಶೇಷಣ. 'ಅರ್ಥಂ'ಗೆ a) ಅಧನ್ಯೈಃ ಅಸ್ತವ್ಯಸ್ತಂ b) ಕೃತ್ಸ್ನಂ ಎಂದು ಎರಡು ವಿಶೇಷಣಗಳು. ಇದಕ್ಕೆ ಒಂದು ಹೋಲಿಕೆ (ಉಪಮಾನ) ಕೊಡುತ್ತಾರೆ—ಅಂಧೈಃ ರತ್ನಪೂಗಂ ಯಥಾ ಅಸ್ತವ್ಯಸ್ತಂ-ಕುರುಡರ ಕೈಗೆ ನವರತ್ನಗಳು ಸಿಕ್ಕರೂ ಹೇಗೆ ಸಿಕ್ಕಾಬಟ್ಟೆ ಜೋಡಿಸುವರೋ ಹಾಗೆ ಅಧಮರು ವೇದಾರ್ಥಗಳನ್ನು ಮನಸ್ಸಿಗೆ ಬಂದಂತೆ ಅರ್ಥ ಹೇಳಿ ಕೆಡಿಸಿದ್ದರು. ಅದನ್ನು ವ್ಯಾಸರು

ಸರಿಯಾಗಿ ಜೋಡಿಸಿ ಬ್ರಹ್ಮಸೂತ್ರಗಳನ್ನು ರಚಿಸಿದರೆಂದು ಹೊಂದಿಸಬೇಕು. ಹೀಗೆ ಸೂತ್ರಮಾಡಲು ಉದ್ದೇಶವೇನು ? ಎಂದರೆ ಲೋಕೋಪ (ಕೃತ್ಯೈ) ಕ್ಲ್ಪ್ತ್ಯೈ–ಲೋಕೋಪಕಾರಕ್ಕಾಗಿ ರಚಿಸಿದರು. ಒಟ್ಟು ಅಭಿಪ್ರಾಯವೇನೆಂದರೆ ಕುರುಡರ ಕೈಗೆ ನವರತ್ನಗಳು ಸಿಕ್ಕರೆ ಹೇಗೆ ಮನಸ್ಸಿಗೆ ಬಂದಂತೆ ಜೋಡಿಸಿ ಹಾಳು ಮಾಡುವರೋ ಹಾಗೆ ಅಯೋಗ್ಯರ ಕೈಗೆ ವೇದಗಳು ಸಿಕ್ಕಿಕೊಂಡು ಮನಸ್ಸಿಗೆ ಬಂದಂತೆ ಅವಕ್ಕೆ ಅರ್ಥ ಹೇಳಿದರು. ವೇದವ್ಯಾಸರು ಅನಂತ ವೇದಗಳ ಅರ್ಥವನ್ನೂ ಒಟ್ಟುಗೂಡಿಸಿ ಲೋಕೋಪಕಾರಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರು. ಅಂಥಾ ವೇದವ್ಯಾಸರಿಗೆ ನಮಸ್ಕಾರ ಮಾಡುತ್ತೇನೆ ಎಂದು ತಾತ್ಪರ್ಯ.

ಘ) ಕಠಿನ ಶಬ್ದಾರ್ಥ—1) ಅಸ್ತವ್ಯಸ್ತಂ—'ಅಸು ಕ್ಷೇಪಣೇ'–ಎಸೆ, ವಗೆ, ಬಿಸಾಡು ಎಂಬ ಧಾತುವಿನ (ದಿವಾದಿ. ಪ.) ಭೂತಕೃದಂತ (ಕ್ತಾಂತ) ರೂಪವೇ ಅಸ್ತ—ಅಸ್+ತ ; ಆದ್ದರಿಂದ ಇದಕ್ಕೆ ಎಸೆಯಲ್ಪಟ್ಟ, ವಗಿಯಲ್ಪಟ್ಟ, ಬಿಸಾಡಲ್ಪಟ್ಟ ಎಂದರ್ಥ. ವಿ–ವಿವಿಧವಾಗಿ–ಅಸ್ತ–ವ್ಯಸ್ತ ; ವಗಿಯುವಾಗಲೇ ಅಜಾಗರೂಕತೆ ಎದ್ದು ಕಾಣುತ್ತದೆ, ಅದು ಅತಿಶಯವಾದರೆ 'ವ್ಯಸ್ತ' ಆಗುತ್ತದೆ. ಒಟ್ಟಿನಲ್ಲಿ ಮನಸ್ಸಿಗೆ ಬಂದಂತೆ ಸಿಕ್ಕಿದ ಕಡೆ ಎಸೆ (ವಗೆ)ಯುವುದಕ್ಕೇ ಅಸ್ತವ್ಯಸ್ತ ಎಂದರ್ಥ. ಅಯೋಗ್ಯರು ವೇದಾರ್ಥಗಳನ್ನು ಹೀಗೆಯೇ ಮನಸ್ಸಿಗೆ ಬಂದಂತೆ ಜೋಡಿಸಿ ಹಾಳುಮಾಡಿಬಿಟ್ಟಿದ್ದರೆಂದು ಭಾವ. 2) ಸಮಸ್ತಶ್ರುತಿಗತಂ—ವೇದಗಳು ಅನಂತವಾಗಿವೆ—'ಅನಂತಾ ವೈ ವೇದಾಃ' ; ಆ ಅನಂತ ವೇದಗಳಲ್ಲಿಯೂ ಅಡಗಿರುವ ಸಕಲಾರ್ಥಗಳನ್ನೂ ಸೇರಿಸಿ ಬ್ರಹ್ಮಸೂತ್ರಗಳನ್ನು ರಚಿಸಿದ್ದಾರೆಂದು ತಿಳಿಯಬೇಕು. ಶ್ರೀಮತ್-ಟೀಕಾಕೃತ್ಪಾದರು ನ್ಯಾಯಸುಧಾದಲ್ಲಿ ಜಿಜ್ಞಾಸಾಧಿಕರಣದಲ್ಲಿ 'ಒಂದೊಂದು ಸೂತ್ರವೂ ಅನಂತ ಶಾಖೆಗಳಲ್ಲಿ ಹೇಳಿದ ಶ್ರುತಿಗಳಿಗೆ ನಿರ್ಣಾಯಕವಾಗಿರುವುದರಿಂದ ಒಂದೊಂದು ಸೂತ್ರವೇ ಪ್ರತ್ಯೇಕ ಪ್ರತ್ಯೇಕ ಶಾಸ್ತ್ರವಿದ್ದಂತೆ' ಎಂದು ಹೇಳಿದ್ದಾರೆ. ಸೂತ್ರಭಾಷ್ಯದ ಪೀಠಿಕೆಯಲ್ಲಿಯೇ ಉದಹರಿಸಿರುವ ಸ್ಕಾಂದ ಪುರಾಣದ ವಾಕ್ಯವು 'ಸೂತ್ರೇಷು ಯೇಷು ಸರ್ವೇಽಪಿ ನಿರ್ಣಯಾಃ ಸಮುದೀರಿತಾಃ । ಶಬ್ದಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ ॥' ಎಂದರೆ

'ಈ ಸೂತ್ರಗಳಲ್ಲಿ ಸಕಲ ವೇದಗಳ ನಿರ್ಣಯಗಳೂ ಸ್ಪಷ್ಟವಾಗಿ (ಸಂ) ಹೇಳಲ್ಪಟ್ಟಿವೆ. ಕೇವಲ ವೇದಾರ್ಥಗಳಲ್ಲ; ಪುರಾಣ, ಭಾರತ ಪಂಚರಾತ್ರಾದಿ ಸಕಲ ಶಾಸ್ತ್ರಗಳಿಗೂ ಜೈಮಿನ್ಯಾದಿ ಇತರ ಸೂತ್ರಸಾಹಿತ್ಯವೂ ಸೇರಿದ ಇಡೀ ಶಾಸ್ತ್ರವಾಙ್ಮಯಕ್ಕೇ ಇದು ಪ್ರಮಾಣ' ಎಂದು ಹೇಳುತ್ತದೆ. (ಬ್ರಹ್ಮ-ಸೂತ್ರಗಳ ಬಗ್ಗೆ ತಿಳಿದುಕೊಳ್ಳಬೇಕಾದ ಕೆಲವು ಮುಖ್ಯ ವಿಚಾರಗಳನ್ನು ಮುಂದಿನ ಶ್ಲೋಕದಲ್ಲಿ 'ಬ್ರಹ್ಮಸೂತ್ರಸ್ಯ ಭಾಷ್ಯಂ' ಎಂಬುದರ ಕೆಳಗೆ ಹೇಳುವೆನು. ಖಂಡ 357 ನೋಡಿ).

3) ಲೋಕೋಪ (ಕೃತ್ಯೈ) ಕ್ಲೃಪ್ತ್ಯೈ—ಲೋಕೋಪಕಾರಕ್ಕಾಗಿ ಎಂದು ಸಾಮಾನ್ಯಾರ್ಥ. ಯಾರ ಉಪಕಾರಕ್ಕಾಗಿ ರಚಿಸಿದರೆಂಬುದನ್ನೂ ಆ ಸ್ಕಾಂದವಾಕ್ಯವೇ (ಭಾಷ್ಯೋದಾಹೃತ) ಹೇಳುತ್ತದೆ–'ಬ್ರಹ್ಮರುದ್ರಾದಿ ದೇವೇಷು ಮನುಷ್ಯಪಿತೃಪಕ್ಷಿಷು । ಜ್ಞಾನಂ ಸಂಸ್ಥಾಪ್ಯ ಭಗವಾನ್–' ಬ್ರಹ್ಮ ರುದ್ರಾದಿ ದೇವತೆಗಳು ಉತ್ತಮಾಧಿಕಾರಿಗಳು, ಮನುಷ್ಯರು ಎಂದರೆ ಋಷಿಗಳು (ಮನು ಅವಬೋಧನೇ ಎಂಬ ಧಾತುವಿನ ರೂಪ), ಪಿತೃಗಳು, ಪಾಂತೀತಿ ಪಾಃ–ಚಕ್ರವರ್ತಿಗಳು ಇವರೆಲ್ಲ ಮಧ್ಯಮಾಧಿಕಾರಿಗಳು ; ಕ್ಷೀಯತೇ ಇತಿ ಕ್ಷಿಃ–ಸಾಯುವವರು, ನಾಶವುಳ್ಳವರು–ಮನುಷ್ಯೋತ್ತಮರು ಅಧಮಾಧಿಕಾರಿ-ಗಳು —ಈ ಮೂರೂ ವಿಧ ಅಧಿಕಾರಿಗಳಲ್ಲೂ ಜ್ಞಾನವನ್ನು ಸಂಸ್ಥಾಪನೆ ಮಾಡಿ ಭಗವಂತನು ಕ್ರೀಡಿಸುತ್ತಾನೆ. ಆದಕಾರಣ ಬ್ರಹ್ಮಸೂತ್ರಗಳಿಗೆ ಇವರೇ (ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋ-ತ್ತಮರೇ) ಅಧಿಕಾರಿಗಳು ; ಇವರ ಉಪಯೋಗಕ್ಕಾಗಿಯೇ ರಚಿಸಿದರು.

4) ಗುಣಗಣನಿಲಯಃ ಎಂಬುದು ಹೇತುಗರ್ಭವಿಶೇಷಣ. ಇದು ವ್ಯಾಸರಿಗೆ ಅನಂತವೇದಗಳ ಅರ್ಥವನ್ನು ತಿಳಿಯುವುದಕ್ಕೂ ಅವುಗಳನ್ನು ಸಂಗ್ರಹಿಸು-ವುದಕ್ಕೂ ಶಕ್ತಿ ಉಂಟೆಂದು ತೋರಿಸುತ್ತದೆ. ಗುಣ-ಗಣ ಎಂದದ್ದರಿಂದ ಸರ್ವಜ್ಞತ್ವ-ಸರ್ವಶಕ್ತಿತ್ವಾದಿ ಗುಣಗಳೂ ಅಡಕವಾಗುತ್ತವೆ.

ಗು.ಸಾ. ಟೀಕೆಯಲ್ಲಿ ಇದಕ್ಕೆ ಪ್ರಯೋಜನಾಂತರವನ್ನು ತೋರಿಸುತ್ತಾರೆ. 'ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ' ಎಂಬಂತೆ ಪ್ರಯೋ-ಜನವಿಲ್ಲದೆ ದಡ್ಡನೂ ಸಹ ಕೆಲಸಕ್ಕೆ ಕೈಹಾಕುವುದಿಲ್ಲ. ಹೀಗಿರುವುದರಿಂದ

ವೇದವ್ಯಾಸರೂ ಯಾವುದೋ ಪ್ರಯೋಜನಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿರಬಹುದು ಎಂದು ಆಕ್ಷೇಪ ಬಂದರೆ ಅದರ ಪರಿಹಾರಕ್ಕಾಗಿ 'ಗುಣಗಣನಿಲಯಃ' ಎಂದು ಹೇಳುತ್ತಾರೆ ಎಂದು ಈ ಟೀಕಾಕಾರರು ತೋರಿಸುತ್ತಾರೆ. ಗುಣಗಣನಿಲಯಃ ಎಂದಿದ್ದರಿಂದ ಅವರು ಪರಿಪೂರ್ಣಕಾಮರು, ಅವರಿಗೆ ಬ್ರಹ್ಮಸೂತ್ರರಚನೆಯಿಂದ ಹೊಸದಾಗಿ ಲಭಿಸಬೇಕಾದ ಯಾವ ಪ್ರಯೋಜನವಿಲ್ಲ—ಎಂಬ ಅರ್ಥ ಸೂಚಿತವಾಗುತ್ತದೆ. ಪ್ರಯೋಜನವಿಲ್ಲದಿದ್ದರೂ ಏಕೆ ರಚಿಸಿದರೆಂದರೆ **ಲೋಕೋಪಕ್ಲ (ಕೃ) ತ್ಯೈ** ಎಂದು ಉತ್ತರ. ಅದಾದರೂ ಏಕೆ ಎಂದರೆ ಅದು ಅವರ ಲೀಲಾವೈಭವ ಎಂಬ ವಿಚಾರವೂ ಗುಣಗಣನಿಲಯಃ ಎಂಬುದರಿಂದ ಸೂಚಿತವಾಗುತ್ತದೆ.

ಹೀಗೆಯೇ **ದೇವದೇವಂ** ಎಂಬ ವಿಶೇಷಣದಲ್ಲೂ ಮಹತ್ವವನ್ನು ತೋರಿಸುತ್ತಾರೆ. ಮರದ ಬೇರಿಗೆ ನೀರು ಹಾಕಿದರೆ ಅದು ಮರದ ಎಲ್ಲಾ ಭಾಗಗಳಿಗೂ ಸೇರುತ್ತದೆ, ಎಲ್ಲಾ ಭಾಗವೂ ಪುಷ್ಟಿಯಾಗುತ್ತದೆ. ಅದರಂತೆ ಶ್ರೀಹರಿಗೆ ಮಾಡಿದ ವಂದನೆಯು ಎಲ್ಲಾ ದೇವತೆಗಳಿಗೂ ಮುಟ್ಟುತ್ತದೆ. ಶ್ರೀಹರಿ ಪ್ರಸನ್ನನಾದರೆ ಎಲ್ಲಾ ದೇವತೆಗಳೂ ಪ್ರಸನ್ನರಾಗುತ್ತಾರೆ—ಎಂಬುದನ್ನು ತೋರಿಸುವುದಕ್ಕಾಗಿ ದೇವದೇವಂ ಎಂಬ ಪದಪ್ರಯೋಗ ಮಾಡಿದ್ದಾರೆ. ಶ್ರೀಹರಿಯನ್ನು ಸಂತೋಷಪಡಿಸಿದರೆ ಎಲ್ಲಾ ದೇವತೆಗಳೂ ಸಂತುಷ್ಟರಾಗುತ್ತಾರೆ; ಹರಿಯನ್ನೇ ಸಂತೋಷಪಡಿಸದಿದ್ದರೆ ಯಾವ ದೇವತೆಯೂ ಸಂತುಷ್ಟನಾಗಲಾರ. ಆದ್ದರಿಂದ ಸಕಲ ದೇವತೆಗಳ ಪ್ರೀತಿಯು ಹುಟ್ಟುವುದಕ್ಕಾಗಿಯೇ ಸಕಲ ದೇವತಾಸಾರ್ವಭೌಮರಾದ ವೇದವ್ಯಾಸರನ್ನು ವಂದಿಸುತ್ತೇನೆ ಎಂಬ ಭಾವ ಅಭಿವ್ಯಕ್ತವಾಗುತ್ತದೆ. 5) **ಸೂತ್ರಯಾಮಾಸ**—ಸೂತ್ರವೇಷ್ಟನೇ–ಪೋಣಿಸು, ಜೋಡಿಸು ಎಂಬ ಧಾತುವಿನ (ಚುರಾದಿ. ಉ.) ಲಿಟ್ ರೂಪ, ರತ್ನಗಳನ್ನು ಮಾಲಾಕಾರವಾಗಿ ಪೋಣಿಸುವಂತೆ ಸೂತ್ರರೂಪವಾಗಿ ರಚಿಸಿದರೆಂದು ಭಾವ. 6) **ಕೃತ್ಸ್ನಂ** 'ವಿಶ್ವಮಶೇಷಂ ಕೃತ್ಸ್ನಂ ಸಮಸ್ತ–' ಎಂದು ಅಮರ; 'ಕೃತ್ಸ್ನಂ ಸಮಗ್ರಂ ಸಕಲಂ' ಹಲಾಯುಧ; ಒಂದೂ ಬಿಡದಂತೆ ಎಲ್ಲವನ್ನೂ, ನಿಶ್ಶೇಷವಾದ ಎಂದು ವಿಶೇಷಾರ್ಥಸೂಚನೆಗಾಗಿ ಈ ಪದ ಜೋಡಿಸಿದ್ದಾರೆ.

7) ತ್ವತ್ ಪ್ರಸಾದಾತ್—ನಿಮ್ಮ (ಎಂದರೆ ವಾಯುದೇವರ ಅಥವಾ ಮಧ್ವಾಚಾರ್ಯರ) ಅನುಗ್ರಹದಿಂದ 'ಭಾರತೀರಮಣಮುಖ್ಯ-ಪ್ರಾಣಾಂತರ್ಗತ' ಎಂದೂ 'ಮಧ್ವಾಂತರ್ಗತ ವೇದವ್ಯಾಸ' ಎಂದೂ ಹೇಳುವು-ದನ್ನೂ ನೆನೆಸಿಕೊಳ್ಳಿ. ತತ್ ಪ್ರಸಾದಾತ್ ಎಂಬುದು ಕಕ.ವಿ.ಪಾಠ; ಅವರ (ವೇದವ್ಯಾಸರ) ಅನುಗ್ರಹದಿಂದ. ಅವರ ಅನುಗ್ರಹವಿಲ್ಲದಿದ್ದರೆ ಸಮೀಚೀನ ಜ್ಞಾನ ಹುಟ್ಟಲು ಸಾಧ್ಯವೇ ಇಲ್ಲ. 8) ಗುರುತಮಂ—ಅತಿಶಯೇನ ಗುರುಃ ಗುರುತಮಃ, ತಂ; ಸರ್ವೋತ್ತಮ ಗುರುವಾದ ಎಂದರ್ಥ. 'ಅತಿಶಾ-ಯನೇ ತಮಬಿಷ್ಠನೌ' (ಪಾ. ೫/೩/೫೫) ಎಂಬ ಸೂತ್ರದಂತೆ ಅತಿಶಯಾರ್ಥ (ಸರ್ವೋತ್ತಮತ್ವ)ದಲ್ಲಿ ತಮಪ್-ಪ್ರತ್ಯಯ ಬಂದಿದೆ. ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ (ಪ್ರಾರಂಭದಿಂದ ೪ನೇ ಶ್ಲೋಕ) 'ಗುರುರ್ಗುರೂಣಾಂ, ಪ್ರಭವಃ ಶಾಸ್ತ್ರಾಣಾಂ ಬಾದರಾಯಣಃ' ಎಂದು ಹೇಳಿದ್ದಾರೆ; ಜಗದ್ಗುರು-ಗಳೆಂದು ಪ್ರಸಿದ್ಧರಾದ ಬ್ರಹ್ಮರುದ್ರಾದಿಗಳಿಗೂ ವೇದವ್ಯಾಸರು ಗುರುಗಳು. ಆದ್ದರಿಂದ ಗುರುತಮರು. ಅಷ್ಟೇ ಅಲ್ಲದೆ ಸಕಲ ಶಾಸ್ತ್ರಗಳನ್ನೂ ರಚಿಸಿ-ದವರೂ ಶಾಸ್ತ್ರಪ್ರವರ್ತಕರೂ ಆಗಿದ್ದಾರೆ; ಆದ್ದರಿಂದಲೂ ಗುರುತಮರು. 9) ಅಗುರುಂ (ಕ.ಕ.) ಅವಿದ್ಯಮಾನಗುರುಂ (ವಿ.) ಸರ್ವೋತ್ತಮತ್ವೇನ ಗುರುರಹಿತಮಿತ್ಯರ್ಥಃ (ಛ) ತಸ್ಯೈವ ಸರ್ವೋಪದೇಷ್ಟೃತ್ವಾತ್. ಇವರೇ ಎಲ್ಲರಿಗಿಂತ ಸರ್ವೋತ್ತಮರಾದ್ದರಿಂದಲೂ ಎಲ್ಲರಿಗೂ ಉಪದೇಶ ಮಾಡುವವ-ರಾದ್ದರಿಂದಲೂ ಬೇರೆ ಗುರು (ವಿದ್ಯೋಪದೇಶಕರು) ಇಲ್ಲದ ಎಂದರ್ಥ.

354. (ಕ) ದಂಡಾನ್ವಯ—(ಅಂಘ್ರೈಃ ಎಂಬುದನ್ನು ರತ್ನಪೂಗ-ದೊಡನೆ ಜೋಡಿಸಿದಂತೆ 'ಅರ್ಥ'ದ ಜೊತೆಯಲ್ಲೂ ಜೋಡಿಸಿದರೆ ಅರ್ಥ ಚೆನ್ನಾಗಿ ಕೂಡುತ್ತದೆ. ಅದರಂತೆ ಶ್ರುತಿಗತಂ ಶಬ್ದವನ್ನು ರತ್ನಪೂಗದ ಜೊತೆಯೂ ಜೋಡಿಸಬಹುದು). (ಅಪೂರ್ಣವಾಕ್ಯದ ಯೋಜನೆ) ಯಃ ಗುಣಗಣನಿಲಯಃ ವ್ಯಾಸಾಭಿಧಾನಃ ಅಸೌ, ಅಂಘ್ರೈಃ ಸಮಸ್ತ ಶ್ರುತಿಗತಂ ರತ್ನಪೂಗಂ ಯಥಾ ಅಸ್ತವ್ಯಸ್ತಂ, (ತಥಾ) ಅಂಘ್ರೈಃ ಅಥವ್ಯೈಃ ಅಸ್ತವ್ಯಸ್ತಂ ಸಮಸ್ತಶ್ರುತಿಗತಂ ಕೃತ್ಸ್ನಂ ಅರ್ಥಂ ಲೋಕೋಪ (ಕೃತ್ಯೈ) ಕ್ಲಪ್ತ್ಯೈ

ಸೂತ್ರಯಾಮಾಸ, (ಪ್ರಧಾನವಾಕ್ಯ) ಗುರುತಮಂ ಅಗುರುಂ ದೇವದೇವಂ ತಂ, ತ್ವ(ತ)ತ್ಪ್ರಸಾದಾತ್ ಸದ್ಯೋವಿದ್ಯೋಪಲಬ್ಧ್ಯೈ ಅಹಂ ಅಹರಹಃ ಭಕ್ತಿತಃ ನಮಾಮಿ ॥

ಖ) ಅನ್ವಯಾರ್ಥ (ವ್ಯಾಸರ ವಿಶೇಷಣರೂಪವಾದ ಅಪೂರ್ಣ ವಾಕ್ಯ) ಯಃ–ಯಾವ; ಗುಣಗಣನಿಲಯಃ–ಜ್ಞಾನಾನಂದಾದಿ ಗುಣಗಳ ಸಮೂಹಕ್ಕೆ ಆಶ್ರಯನಾದ; ವ್ಯಾಸಾಭಿಧಾನಃ–ವೇದವ್ಯಾಸನಾಮಕರಾದ (ಅಭಿಧಾನ–ಹೆಸರು, ನಾಮ); ಅಸೌ–ಈ (ಹಿಂದಿನ ಶ್ಲೋಕದಲ್ಲಿ ಪ್ರಸಕ್ತ-ರಾಗಿದ್ದ) ನಾರಾಯಣಾವತಾರವು; (ಉಪಮಾನದ ಯೋಜನೆ) ಅಂಧೈಃ–ಕುರುಡರಿಂದ; ಸಮಸ್ತ....ಗತಂ—ಸಮಸ್ತ–ಎಲ್ಲರ, ಶ್ರುತಿ–ಕಿವಿಯಲ್ಲೂ, ಗತಂ–ಇರುವ (ಸರ್ವತ್ರಪ್ರಸಿದ್ಧವಾದ ಎಂದರ್ಥ); ರತ್ನಪೂಗಂ–ಮಣಿಗಳ ಸಮೂಹವು, ಯಥಾ ಅಸ್ತವ್ಯಸ್ತಂ–ಸಿಕ್ಕಾಬಟ್ಟೆ, ಮನಸ್ಸಿಗೆ ಬಂದಂತೆ ಜೋಡಿಸಲ್ಪಟ್ಟಂತೆ; (ಉಪಮೇಯ) ಅಂಧೈಃ–ಅಜ್ಞಾನದಿಂದ ಕುರುಡರಾದ, ಅಥವೈಃ–ಅಯೋಗ್ಯ ಜನಗಳಿಂದ; ಅಸ್ತವ್ಯಸ್ತಂ–ಮನಸ್ಸಿಗೆ ಬಂದಂತೆ ವ್ಯಾಖ್ಯಾನ ಮಾಡಲ್ಪಟ್ಟಿದ್ದ; ಸಮಸ್ತ....ಗತಂ—ಸಮಸ್ತ–ಅನಂತವಾದ-ಸಕಲ, ಶ್ರುತಿ–ವೇದಗಳಲ್ಲೂ, ಗತಂ–ಇರುವಂಥಾ; ಕೃತ್ಸ್ನಂ ಅರ್ಥಂ–(ಒಂದನ್ನೂ ಬಿಡದೆ) ವಿಶಿಷ್ಟ ಅರ್ಥವನ್ನೂ; ಲೋಕೋಪ(ಕೃತ್ಯೈ) ಕ್ಲಪ್ತ್ಯೈ–ಯೋಗ್ಯರಾದ ಸಜ್ಜನರ ಉಪಕಾರಕ್ಕಾಗಿ; ಸೂತ್ರಯಾಮಾಸ–ಸೂತ್ರರೂಪವಾಗಿ ಹೆಣೆದರೋ (ಪೋಣಿಸಿದರೋ); (ಪ್ರಧಾನವಾಕ್ಯ) ಗುರು-ತಮಂ–ಸರ್ವೋತ್ತಮ ಗುರುಗಳಾದ; (ಆದ್ದರಿಂದಲೇ) ಅಗುರುಂ–ಬೇರೆ ಗುರುಗಳು ಇಲ್ಲದ; ದೇವದೇವಂ–ಬ್ರಹ್ಮರುದ್ರಾದಿ ದೇವತೆಗಳಿಗೂ ಸ್ವಾಮಿ-ಯಾದ; ತಂ–ಆ ವೇದವ್ಯಾಸರನ್ನು; ತತ್-ಪ್ರಸಾದಾತ್–ಅವರ (ವ್ಯಾಸರ) ಅನುಗ್ರಹದಿಂದ (ತ್ವತ್-ಪ್ರಸಾದಾತ್–ನಿಮ್ಮ ದ್ವಾರಾ ಲಭಿಸುವ ಅವರ ಅನುಗ್ರಹದಿಂದ); ಸದ್ಯಃ–ಶೀಘ್ರವಾಗಿ (ತಡವಿಲ್ಲದೆ, ಕಕ.ವಿ.); ವಿದ್ಯೋಪ-ಲಬ್ಧ್ಯೈ–ಜ್ಞಾನಪ್ರಾಪ್ತಿಗಾಗಿ; ಅಹಂ–ನಾನು; ಅಹರಹಃ–ಪ್ರತಿನಿತ್ಯವೂ (ನಿರಂತರವಾಗಿ); ಭಕ್ತಿತಃ–ಭಕ್ತಿಯಿಂದ; ನಮಾಮಿ–ನಮಸ್ಕರಿಸುತ್ತೇನೆ.

ಗ) ಭಾವಾರ್ಥ—ಹಿಂದಿನ ಶ್ಲೋಕದಲ್ಲಿ ಬ್ರಹ್ಮಾದಿಗಳ ಪ್ರಾರ್ಥನೆಯನ್ನು ಮನ್ನಿಸಿ ಶ್ರೀಮನ್ನಾರಾಯಣನೇ ಸತ್ಯವತೀದೇವಿಯಲ್ಲಿ ವೇದವ್ಯಾಸರಾಗಿ ಆವಿರ್ಭವಿಸಿದನೆಂದು ಹೇಳಿದ್ದರು; ಆದರೆ ಅವರ ಹೆಸರನ್ನೇ ಹೇಳಿರಲಿಲ್ಲ. ಆದಕಾರಣ ಈ ಶ್ಲೋಕದಲ್ಲಿ ಪೂರ್ವಪ್ರಸಕ್ತರಾದ ಎಂದು ತೋರಿಸಲು ಅಸೌ ಶಬ್ದವನ್ನು ಹೇಳಿದರು. ಆ ಸತ್ಯವತಿಯು ಮಗನಾಗಿ ಅವತಾರ ಮಾಡಿದ ಭಗವಂತನ ಹೆಸರೇ ವೇದವ್ಯಾಸರು. ಈ ಮಹರ್ಷಿಗಳು ಬ್ರಹ್ಮರುದ್ರೇಂದ್ರಾದಿಗಳಿಗೂ ಜೈಮಿನ್ಯಾದಿ ಪ್ರಖ್ಯಾತ ಮಹರ್ಷಿಗಳಿಗೂ ಸಹ ವಿದ್ಯೋಪದೇಶ ಮಾಡಿದ ಸರ್ವೋತ್ತಮ ಗುರುಗಳು. ಇವರೇ ಗುರುತಮರಾದ್ದರಿಂದ ಇವರಿಗೆ ವಿದ್ಯೆ ಕಲಿಸಿದ ಬೇರೊಬ್ಬ ಗುರುಗಳು ಬೇರೆ ಯಾರೂ ಇಲ್ಲ. ಅವರು ಸ್ವಯಂ ಗುರುಗಳು. ಅದು ಹೇಗೆ ಸಾಧ್ಯ ಎಂದರೆ ಇವರು ಅನಾದಿ ನಿತ್ಯವಾಗಿ ಜ್ಞಾನಾನಂದಾದಿ ಅನಂತಗುಣಪರಿಪೂರ್ಣರು—ಸರ್ವಜ್ಞಶಿಖಾಮಣಿಗಳು, ಸರ್ವಸಮರ್ಥರು. ಅನಂತ ವೇದರಾಶಿಗಳನ್ನೂ ಸುಸ್ಪಷ್ಟವಾಗಿ ಅನಾದಿ ಕಾಲದಿಂದ ಅರಿತವರು. ಇಷ್ಟೇ ಅಲ್ಲ, ಆ ಅನಂತ ವೇದರಾಶಿಗಳು ಹೊಗಳಿದರೂ ಈ ಮಹಾನುಭಾವರ ಅನಂತಗುಣಗಳನ್ನು ಹೇಳಲಾರದೆ ಸೋತುಹೋದುವು (ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ—ತೈತ್ತಿರೀಯೋಪನಿಷತ್). ಹೀಗಿರಲು ಈ ವೇದವ್ಯಾಸರು ಅನಂತವೇದರಾಶಿಗಳ ಅರ್ಥವನ್ನು ಚೆನ್ನಾಗಿ ಬಲ್ಲರೆಂದು ಹೇಳಬೇಕಾದ್ದೇನಿದೆ ?

ಇರಲಿ. ಕುರುಡರ ಕೈಗೆ ಅಮೂಲ್ಯವಾದ ಮಾಣಿಕ್ಯದ ರಾಶಿಗಳನ್ನು ಕೊಟ್ಟು ಒಳ್ಳೆಯ ಮಾಣಿಕ್ಯಹಾರ ಮಾಡಲು ಹೇಳಿದರೆ ಆ ರತ್ನಗಳ ಅಂದಚೆಂದವನ್ನೇ ಅರಿಯದ ಅವರು ಕೈಗೆ ಸಿಕ್ಕಿದಹಾಗೆ ಮನಸ್ಸು ಬಂದಂತೆ ಪೋಣಿಸಿ ಕೆಲಸಕ್ಕೆ ಬಾರದ ಹಾರವನ್ನಾಗಿ ಹೇಗೆ ಮಾಡುವರೋ ಹಾಗೆ ಅಮೋಘವಾದ ವೇದಗಳು ಕುರುಡರಂತೆ ಜ್ಞಾನಹೀನರಾದ ಅಯೋಗ್ಯ ಜನಗಳ ಕೈಗೆ ಸಿಕ್ಕಿದುವು. ಅವರು ಅವಕ್ಕೆ ಕೆಲಸಕ್ಕೆ ಬಾರದ ತಪ್ಪುತಪ್ಪು ಅರ್ಥಗಳನ್ನು ಕಲ್ಪಿಸಿದ್ದರಿಂದ ಅವುಗಳ ಯಥಾರ್ಥವೇ ತಿಳಿಯದಂತೆ ಆಗಿಹೋಗಿತ್ತು; ಯೋಗ್ಯರಾದ ಜನರು ಈ ಅರ್ಥ ತಿಳಿದು ದುರ್ಮಾರ್ಗಕ್ಕೆ ಹೋಗುತ್ತಿದ್ದರು. ಅದನ್ನು ತಪ್ಪಿಸುವುದಕ್ಕಾಗಿ ಈ ವ್ಯಾಸಮಹರ್ಷಿಗಳು ಅನಂತ ವೇದಶಾಖೆಗಳ

ವಿಶಿಷ್ಟ ಅರ್ಥಗಳನ್ನೂ ಕೇವಲ ಐದುನೂರ ಅರವತ್ತನಾಲ್ಕು ಸೂತ್ರಗಳಲ್ಲೇ ಹೊಂದಿಸಿ ಹೇಳಿಬಿಟ್ಟರು; ಅದೇ ಬ್ರಹ್ಮಸೂತ್ರವಾಯಿತು. ವೇದಾರ್ಥಗಳನ್ನು ಯಥಾರ್ಥವಾಗಿ ತಿಳಿದುಕೊಂಡು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು, ಸಂಸಾರ-ಸಾಗರವನ್ನು ದಾಟಿ, ಮೋಕ್ಷವನ್ನು ಪಡೆಯಬೇಕೆಂಬ ಅಧಿಕಾರಿಜನಗಳಿಗೆ ಈ ಬ್ರಹ್ಮಸೂತ್ರವೆಂಬ ನಿರ್ಣಾಯಕಶಾಸ್ತ್ರಕ್ಕೆ ಸರಿದೂಗುವ ಬೇರೊಂದು ಶಾಸ್ತ್ರ ಯಾವುದೂ ಇಲ್ಲ.

ಆದರೆ ಈ ಶಾಸ್ತ್ರವು ಸರಿಯಾಗಿ ಅರ್ಥವಾಗಬೇಕಾದರೆ ಆ ವೇದವ್ಯಾಸರ ಅನುಗ್ರಹವೇ ಬೇಕು. ಅವರ ಅನುಗ್ರಹ ಬೇಕಾದರೆ ಮಧ್ವಾಚಾರ್ಯರ ಅನುಗ್ರಹವೂ ಬೇಕು. ಆದಕಾರಣ ಹೇ ಮಧ್ವಾಚಾರ್ಯರೇ, ನಿಮ್ಮ ಅಂತರ್ಗತರಾದ ವೇದವ್ಯಾಸದೇವರನ್ನು ಅಪರೋಕ್ಷಜ್ಞಾನಲಾಭಕ್ಕಾಗಿ ನಿರಂತರವಾಗಿ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡುತ್ತಿದ್ದೇನೆ. ಅವರ ಪೂರ್ಣಾನುಗ್ರಹವನ್ನು ಆದಷ್ಟು ಶೀಘ್ರವಾಗಿ (ಸದ್ಯಃ) ಕೊಡಿಸಿ ನನ್ನನ್ನು ಉದ್ಧಾರ ಮಾಡಿರಿ ಎಂಬುದೇ ಶ್ಲೋಕದ ಮುಖ್ಯಾಭಿಪ್ರಾಯ.

ಇಲ್ಲಿಗೆ ೩೭ನೇ ಶ್ಲೋಕ ಮುಗಿಯಿತು

ಗ) ಶ್ಲೋಕ ೩೮. ಸೂತ್ರಭಾಷ್ಯ ರಚನೆ

355. ಅವತಾರಿಕೆ—(ಲೇ.) ಯಾವ ಬ್ರಹ್ಮಸೂತ್ರಭಾಷ್ಯದ ರಚನೆಗಾಗಿ, ಅದರ ಮಹತ್ವವನ್ನು ನಿರೂಪಿಸಲು ಪೂರ್ವಕಥಾಪ್ರಸಕ್ತಿರೂಪವಾಗಿ ಕಳೆದ ಎರಡು ಶ್ಲೋಕಗಳಲ್ಲಿ ಆಪ್ತಮೂಲತ್ವವನ್ನು ತೋರಿಸುವುದಕ್ಕಾಗಿ ವಕ್ತ್ರಾನುಕೂಲ್ಯ ಶ್ರೋತ್ರಾನುಕೂಲ್ಯ ಪ್ರಸಂಗಾನುಕೂಲ್ಯಗಳನ್ನು ವಿವರಿಸಿದರೋ, ಆ ಭಾಷ್ಯದ ರಚನಾ ವಿಷಯವನ್ನೇ ಈ ಶ್ಲೋಕದಲ್ಲಿ ನಿರೂಪಣೆ ಮಾಡುತ್ತಾರೆ. (ಕಕ.ವಿ.ಭ.) ಬ್ರಹ್ಮಸೂತ್ರಗಳನ್ನು ರಚಿಸಿದ ವೇದವ್ಯಾಸರೇ ನಿಮಗೆ (ಎಂದರೆ ಮಧ್ವಾಚಾರ್ಯರಿಗೆ) ಸೂತ್ರಗಳ ಸರಿಯಾದ ಅರ್ಥವನ್ನು ತಿಳಿಸುವ ಭಾಷ್ಯವನ್ನು ರಚಿಸುವಂತೆ ಆಜ್ಞಾಪಿಸಿದ್ದರಿಂದ ನೀವು ಭಾಷ್ಯರಚನೆ ಮಾಡಿದಿರಿ. ಆದರ ಜೊತೆಗೆ ಪರಮತಗಳನ್ನು ನಿರಾಕರಣ ಮಾಡದಿದ್ದರೆ

ಅವುಗಳೂ ಸರಿಯೇ ಇರಬಹುದೆಂಬ ಕಲ್ಪನೆ ಬರುವುದರಿಂದ ನಿಮ್ಮ ಭಾಷ್ಯದಲ್ಲೇ ಸಕಲ ದುರ್ಭಾಷ್ಯಗಳನ್ನೂ ನಿರಾಕರಣೆ ಮಾಡಿ ಬ್ರಹ್ಮಸೂತ್ರ-ಭಾಷ್ಯವನ್ನು ರಚಿಸಿದಿರೆಂದು ವಿಜ್ಞಾಪಿಸಿಕೊಳ್ಳುತ್ತಾರೆ.

ಆಜ್ಞಾಮನ್ಯೈರಧಾರ್ಯಾಂ ಶಿರಸಿ ಪರಿಸರದ್-
　　ರಶ್ಮಿಕೋಟೀರಕೋಟೌ
ಕೃಷ್ಣಸ್ಯಾಕ್ಲಿಷ್ಟಕರ್ಮಾ ದಧದನುಸರಣಾ-
　　ದರ್ಥಿತೋ ದೇವಸಂಘೈಃ ।
ಭೂಮಾವಾಗತ್ಯ ಭೂಮ—ನ್ನಸುಕರಮಕರೋರ್-
　　ಬ್ರಹ್ಮಸೂತ್ರಸ್ಯ ಭಾಷ್ಯಂ
ದುರ್ಭಾಷ್ಯಂ ವ್ಯಸ್ಯ ದಸ್ಯೋರ್ ಮಣಿಮತ ಉದಿತಂ
　　ವೇದಸದ್ಯುಕ್ತಿಭಿಸ್ತ್ವಮ್　　॥ ೩೮ ॥

ಖ) ಪದವಿಭಾಗ—ಆಜ್ಞಾಂ, ಅನ್ಯೈಃ, ಅಧಾರ್ಯಾಂ, ಶಿರಸಿ, ಪರಿಸರದ್....ಕೋಟೌ, ಕೃಷ್ಣಸ್ಯ, ಅಕ್ಲಿಷ್ಟಕರ್ಮಾ, ದಧತ್, ಅನುಸರಣಾತ್, ಅರ್ಥಿತಃ, ದೇವಸಂಘೈಃ, ಭೂಮೌ, ಆಗತ್ಯ, ಭೂಮನ್, ಅಸುಕರಂ, ಅಕರೋಃ, ಬ್ರಹ್ಮಸೂತ್ರಸ್ಯ, ಭಾಷ್ಯಂ, ದುರ್ಭಾಷ್ಯಂ, ವ್ಯಸ್ಯ, ದಸ್ಯೋಃ, ಮಣಿಮತಃ, ಉದಿತಂ, ವೇದಸದ್ಯುಕ್ತಿಭಿಃ, ತ್ವಮ್ ॥

ಗ) ವಿಶ್ಲೇಷಣೆ—ಈ ಶ್ಲೋಕವೂ ಒಂದು ದೊಡ್ಡ ಸಂಯುಕ್ತ ವಾಕ್ಯರೂಪವಾಗಿದೆ. ಇದರಲ್ಲಿ ತ್ವಂ ಭೂಮೌ ಆಗತ್ಯ, ದುರ್ಭಾಷ್ಯಂ ವ್ಯಸ್ಯ, ಬ್ರಹ್ಮಸೂತ್ರಸ್ಯ ಭಾಷ್ಯಂ ಅಕರೋಃ ಎಂಬ ಭಾಗ ಮುಖ್ಯ ಎನ್ನಬಹುದು. ಇದಕ್ಕೆ ನೀವು ಭೂಮಿಯಲ್ಲಿ ಬಂದು, ದುರ್ಭಾಷ್ಯವನ್ನು ಖಂಡಿಸಿ, ಬ್ರಹ್ಮ-ಸೂತ್ರಭಾಷ್ಯವನ್ನು ರಚಿಸಿದಿರಿ—ಎಂದರ್ಥ. ಭೂಮನ್ (೩ನೇ ಚರಣದಲ್ಲಿ) ಎಂಬುದು ಸಂಬೋಧನೆ. ತ್ವಂ-ಗೆ ಮೂರು ವಿಶೇಷಣಗಳು. a) ಕೃಷ್ಣಸ್ಯ ಆಜ್ಞಾಂ ಶಿರಸಿ ದಧತ್-ಶ್ರೀಹರಿಯ ಆಜ್ಞೆಯನ್ನು ಶಿರಸಾ ವಹಿಸಿದ ನೀವು—ಆಜ್ಞಾಂ-ಗೆ ಅನ್ಯೈಃ ಅಧಾರ್ಯಾಂ ಎಂದೂ, ಶಿರಸಿ-ಗೆ ಪರಿ....ಕೋಟೌ ಎಂದೂ ವಿಶೇಷಣಗಳು. b) ಅಕ್ಲಿಷ್ಟಕರ್ಮಾ-ಕ್ಲೇಶವಿಲ್ಲದೆ ಕೆಲಸ ನಿರ್ವಹಿ-ಸುವ ನೀನು. c) ದೇವಸಂಘೈಃ ಅನುಸರಣಾತ್ ಅರ್ಥಿತಃ-ರುದ್ರಾದಿ

ದೇವತೆಗಳಿಂದ ಅನುನಯದಿಂದ ಪ್ರಾರ್ಥಿತರಾದ ನೀವು. ದುರ್ಭಾಷ್ಯಂ-ಗೆ ದಸ್ರೋಃ ಮಣಿಮತಃ ಉದಿತಂ ಎಂದು ವಿಶೇಷಣ. ಅಲ್ಲೇ ವ್ಯಸ್ಯ ಎಂಬುದಕ್ಕೆ 'ವೇದಸದ್ಯುಕ್ತಿಭಿಃ' ಎಂದು ಜೋಡಿಸಿಕೊಳ್ಳಬೇಕು. ಅಸುಕರಂ ಎಂಬುದು ಭಾಷ್ಯಂ-ಗೆ ವಿಶೇಷಣ. ಈ ಪ್ರಕಾರ ಈ ಶ್ಲೋಕದಲ್ಲಿ a) ಶ್ರೀಹರಿಯ ಆಜ್ಞೆಯನ್ನು ಶಿರಸಾವಹಿಸಿದ, b) ದೇವತೆಗಳಿಂದ ವಿನಯಪೂರ್ವಕ ಪ್ರಾರ್ಥಿತರಾದ c) ಸಕಲ ಕಾರ್ಯದಕ್ಷರಾದ ನೀವು d) ಭೂಮಿಗೆ ಬಂದು, e) ದುರ್ಭಾಷ್ಯವನ್ನು ನಿರಾಕರಿಸಿ f) ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದಿರಿ ಎಂದು ಆರು ಚಿಕ್ಕ ಭಾಗಗಳಿವೆ; ಇದನ್ನು ಗಮನಿಸಿದರೆ ಶ್ಲೋಕ ಸುಲಭ-ವಾಗಿ ಅರ್ಥವಾಗುತ್ತದೆ.

ಘ) ಕಠಿನ ಶಬ್ದಾರ್ಥ—1) ಪರಿಸರತ್ — ಪರಿ-ಸುತ್ತಲೂ, ಸರತ್-ಸರಿದಾಡುವಂಥಾ, ಪ್ರಸರತ್-ಹರಡಿಕೊಳ್ಳುವಂಥಾ ಎಂದರ್ಥ. ಕೋಟೀರ-ಕಿರೀಟ. 'ಮೌಲಿಃ ಕೋಟೀರ ಉಷ್ಣೀಷಂ ಕಿರೀಟಂ ಮುಕುಟೋಽಸ್ತ್ರಿಯಾಂ' ವೈಜಯಂತೀಕೋಶ. 'ಆಹುಃ ಕಿರೀಟಮುಷ್ಣೀಶಂ ಕೋಟೀರಂ ಮುಕುಟಂ ಸಮಮ್' ಹಲಾಯುಧ. ಕೋಟೀರಃ (ಪು.) ಕೋಟೀರಂ (ನ.ಲಿ.) ಎರಡು ರೂಪವೂ ಉಂಟು. ಕೋಟಿಃ ಎಂದರೆ ಇಲ್ಲಿ ಅಗ್ರ, ತುದಿ ಎಂದರ್ಥ. (ಕಕ.ವಿ.ಛ.) 'ಕೋಟಿರಗ್ರೇ ಪ್ರಕರ್ಷೇ ಚ—' ಇತ್ಯಭಿಧಾನಂ. ಥಳಥಳಿಸುತ್ತಿರುವ ಕಾಂತಿಯುಳ್ಳ ಕಿರೀಟದ ತುದಿಯನ್ನು ಧರಿಸಿದ ಶಿರಸ್ಸಿನಲ್ಲಿ—ಎಂದು ಅನ್ವಯ. ಅಥವಾ (ಛ.) ಪರಿಸರದ್ರಶ್ಮಿ-ಕೋಟೀರೇಣ ಕೋಟಿಃ-ಪ್ರಕರ್ಷಃ, ಉತ್ಕರ್ಷ ಇತಿ ಯಾವತ್, ಯಸ್ಮಿನ್-ಥಳಥಳಿಸುವ ಕಿರೀಟದಿಂದ ಉತ್ಕೃಷ್ಟವಾದ ಎಂದರೆ ದೇದೀಪ್ಯಮಾನವಾದ ಕಿರೀಟದಿಂದ ಶೋಭಿಸುವ ತಲೆಯಲ್ಲಿ ಎಂದರ್ಥ.

2) ಕೃಷ್ಣಸ್ಯ ಎಂದರೆ ನಾರಾಯಣನ ಎಂದರ್ಥವಾಗುತ್ತದೆ. ಕೃಷ್ಣ ಶಬ್ದಕ್ಕೆ ನಾರಾಯಣ ಎಂಬ ಅರ್ಥ ಅಪೂರ್ವವಾದ ಕಾರಣ ಈ ಅರ್ಥಕ್ಕೆ ಛ. ಭಾಗವತ ಪ್ರಯೋಗ ತೋರಿಸಿದ್ದಾರೆ—'ಅಥಾಜಾಮಿಳ ಆಕರ್ಣ್ಯ ದೂತಾನಾಂ ಯಮ-ಕೃಷ್ಣಯೋಃ' (೬ ಸ್ಕ. ೨ ಅಧ್ಯಾ. ೨೭ ಶ್ಲೋ.) 'ಅಜಾಮಿಳನು ಯಮನ ಮತ್ತು 'ವಿಷ್ಣು'ವಿನ ದೂತರ ಸಂವಾದವನ್ನು ಕೇಳಿ' ಎಂದು

ಹೇಳಿದೆ. ಆದ್ದರಿಂದ ಕೃಷ್ಣ ಶಬ್ದಕ್ಕೆ ನಾರಾಯಣ ಎಂಬ ಅರ್ಥವುಂಟು. 3) ಅಕ್ಲಿಷ್ಟಕರ್ಮಾ—(ವಿ.) ಅಕ್ಲಿಷ್ಟಂ-ಅನವದ್ಯಂ ಕರ್ಮ ಯಸ್ಯ ಸಃ, ದೋಷವಿಲ್ಲದ ಕರ್ಮವನ್ನು ಮಾಡುವ (ಛ.) ನ ವಿದ್ಯತೇ ಕ್ಲೇಶಕರಾಣಿ ಕರ್ಮಾಣಿ ಯಸ್ಯ ಸಃ, ಆಯಾಸವಿಲ್ಲದೆ ಎಲ್ಲ ಕೆಲಸಗಳನ್ನೂ ಮಾಡುವ ಗು.ಸಾ. ದಲ್ಲಿ ಈ ಭಾವವನ್ನು ಸ್ಪಷ್ಟಪಡಿಸಿದ್ದಾರೆ—ಕೆಲವರು ಸಂಕಲ್ಪಿಸಿದರೂ ಕೆಲಸ ಆರಂಭಿಸುವುದಿಲ್ಲ. ಇತರರು ಆರಂಭಿಸಿದರೂ ವಿಘ್ನಗಳಿಂದ ಪೂರ್ಣಗೊಳಿಸು-ವುದಿಲ್ಲ. ಅಥವಾ ಪೂರ್ಣಗೊಳಿಸಿದರೂ ಅದರಲ್ಲಿ ಅನೇಕ ಲೋಪದೋಷ-ಗಳಿರುವುವು. ಅಥವಾ ಕಷ್ಟಪಟ್ಟು ಮುಗಿಸುವರು. ಆದರೆ ಶ್ರೀಮದಾಚಾರ್ಯರ ವಿಷಯದಲ್ಲಿ ಈ ಯಾವ ನ್ಯೂನತೆಗಳೂ ಇರುವುದಿಲ್ಲ. ಕಾರ್ಯ ಮಾಡಿದ್ದರಿಂದ ಅವರಿಗೂ ಕಷ್ಟವಿಲ್ಲ, ಇತರರಿಗೆ ಅದರಿಂದ ಅನಿಷ್ಟವೂ ಆಗುವುದಿಲ್ಲವೆಂದು ಭಾವ. 4) ಅನುಸರಣಾತ್ ವಿನಯಪೂರ್ವಕವಾಗಿ ಪ್ರಾತಃಸಂಕಲ್ಪಗದ್ಯದಲ್ಲಿ ಈ 'ಶಿರಸಿ ದಧತ್', 'ಅನುಸರಣಾತ್ ಅರ್ಥಿತಃ' ಎಂಬ ಅರ್ಥವನ್ನು ಮನಸ್ಸಿಗೆ ನಾಟುವಂತೆ ವರ್ಣಿಸಿದ್ದಾರೆ—'ಭಗವದಾಜ್ಞಾಂ ಶಿರಸಿ ಪರಮಾದರೇಣ ಅನರ್ಘ್ಯಶಿರೋರತ್ನವನ್ನಿಧಾಯ, ತಥಾ ಅಶೇಷದೇವತಾ ಪ್ರಾರ್ಥನಾಂ ಹಾರ-ವದ್ ಹೃದಿ ನಿಧಾಯ' 'ಭಗವಂತನ ಆಜ್ಞೆಯನ್ನು ಅನರ್ಘ್ಯ ಶಿರೋರತ್ನದಂತೆ ಪರಮಾದರದಿಂದ ಶಿರಸಾವಹಿಸಿ—ಇದು ಭಗವಂತನಲ್ಲಿ ವಾಯುದೇವರಿಗಿರುವ ಭಕ್ತ್ಯತಿಶಯವನ್ನು ಸೂಚಿಸುತ್ತದೆ; ರುದ್ರಾದಿದೇವತೆಗಳ ಪ್ರಾರ್ಥನೆಯನ್ನು ಹಾರದಂತೆ-ಅಭಿಮಾನದಿಂದ-ಹೃದಯದಲ್ಲಿ ಧರಿಸಿ', ರಾಯರ ವಾಕ್ಯವು ಮಧ್ವವಿಜಯದ (೨/೪) ಈ ಶ್ಲೋಕವನ್ನು ಅವಲಂಬಿಸಿದೆ—'ಆದೇಶ ಮೌಲಿಮಣಿಮುಜ್ಜ್ವಲವರ್ಣಮೇನಂ ಬದ್ಧಾಂಜಲಿರ್ಮುರುದನರ್ಘ್ಯಮಧತ್ತ ಮೂರ್ಧ್ನಾ । ಹಾರಾವಲೀಮಿವ ಹೃದಾ ವಿಬುಧೇಂದ್ರಯಾಚ್ಞಾಂ ಬಿಭ್ರನ್ನಿ-ಜಾನನುಜಿಘೃಕ್ಷುರವಾತಿತೀರ್ಷತ್ ॥' 'ಅನುಸರಣಾತ್' ಎಂಬುದಕ್ಕೆ ಗು.ಸಾ. 'ನಿಮ್ಮ ಹಿಂದೆಯೇ ಬಂದು' ನಿಮ್ಮನ್ನು ಪ್ರಾರ್ಥಿಸಿದರು—ಎಂದು ಅರ್ಥ-ಮಾಡಿ 'ಸ್ವಲ್ಪ ದೂರದವರೆಗೆ ನಿಮ್ಮ ಹಿಂದೆಯೇ ಬಂದರು. ನಿಮ್ಮ ಕೃಪಾ-ಕಟಾಕ್ಷಕ್ಕೆ ಪಾತ್ರರಾಗಿ ಹಿಂತೆರಳಿದರು' ಎಂದು ವಿವರಿಸಿದ್ದಾರೆ. ಆಜ್ಞಾ-ಮನ್ಯೈರಧಾರ್ಯಾಂ ಎಂಬ ವಾಯುಸ್ತುತಿಯ ಅಭಿಪ್ರಾಯವನ್ನೇ ಮಧ್ವ-

ವಿಜಯದಲ್ಲಿ (೨/೨) 'ನಾಥಃಕಲೌ....' ಎಂಬ ಶ್ಲೋಕದಲ್ಲಿ ವಿಸ್ತರಿಸಿ 'ವಿಷ್ಣು ಕಲಿಯುಗದಲ್ಲಿ ಅವತಾರ ಎತ್ತುವಹಾಗಿರಲಿಲ್ಲ. ಬ್ರಹ್ಮದೇವರಿಗೆ ಅವತಾರವೇ ಇಲ್ಲವಾದ್ದರಿಂದ ಅವರಿಗೂ ಅಪ್ಪಣೆ ಮಾಡುವಂತಿರಲಿಲ್ಲ. ರುದ್ರಾದಿಗಳಿಗೆ ಅಜ್ಞಾನವೂ ದೈತ್ಯಬಾಧೆಯೂ ಉಂಟು. ಆದ್ದರಿಂದ ಅವರಿಗೂ ಹೇಳುವ ಹಾಗಿರಲಿಲ್ಲ—ಅರ್ಥಾತ್ ವಾಯುದೇವರನ್ನು ಬಿಟ್ಟರೆ ಬೇರೆ ಯಾರೂ ಸರ್ವಜ್ಞರಿರಲಿಲ್ಲ. ಆದ್ದರಿಂದ ವಾಯುದೇವರಿಗೇ ಆಜ್ಞೆಮಾಡಿದನು' ಎಂದು ಹೇಳಿದ್ದಾರೆ. 5) ಭೂಮನ್ ಎಂಬುದು ನಕಾರಾಂತ ಪುಲ್ಲಿಂಗ ಶಬ್ದ; ಇಲ್ಲಿ ಸಂಬೋಧನಾರೂಪ. ಭೂ ಬಹೌ, ಬಹುಃ ಪೂರ್ಣತಾಯಾಂ ಎಂಬ ಧಾತುವಿನ ಮೇಲೆ 'ಸರ್ವಧಾತುಭ್ಯೋ ಮನಿನ್ (ಉ. ೪/೧೪೪) ಎಂಬ ಸೂತ್ರದಂತೆ ಮನಿನ್ ಪ್ರತ್ಯಯ ಬಂದು ಭೂಮನ್ ಎಂದಾಗಿದೆ; ಆದಕಾರಣ ಇದಕ್ಕೆ 'ತುಂಬಿದ' ಅಥವಾ 'ಪರಿಪೂರ್ಣವಾದ' ಎಂದರ್ಥ. ಎಲ್ಲಾ ರೀತಿಯಿಂದಲೂ ಪರಿಪೂರ್ಣನಾದವನು ವಿಷ್ಣುವೊಬ್ಬನೇ; ಆದ್ದರಿಂದ ಅವನೇ ನಿಜವಾದ 'ಭೂಮಾ'-ಪರಿಪೂರ್ಣನಾದವನು. ಅವನನ್ನು ಬಿಟ್ಟರೆ ವಾಯುದೇವರು ಭೂಮಾ-ಪೂರ್ಣರು; ಇದಕ್ಕೆ ಬಲ-ಜ್ಞಾನ-ಭಕ್ತಿ-ವೈರಾಗ್ಯಾದಿ ಸಕಲ ಸಂಪತ್ತಿನಿಂದಲೂ ಪೂರ್ಣರಾದವರು ಎಂದರ್ಥ. ಬ್ರಹ್ಮಶಬ್ದವೂ ಈ ಅರ್ಥವನ್ನೇ ಹೇಳುತ್ತದೆ. ಆದ್ದರಿಂದಲೇ ತೈತ್ತಿರೀಯ ಉಪನಿಷತ್ತಿನಲ್ಲಿ ಶಾಂತಿಪಾಠ ಹೇಳುವಾಗ ಭೃಗುಋಷಿಗಳು ವಾಯುದೇವರಿಗೆ 'ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ' ಎಂದು ವಂದಿಸಿದ್ದಾರೆ. ಅಲ್ಲೂ 'ಬ್ರಹ್ಮ' ಎಂದರೆ ಸಾಧನಸಂಪತ್ತಿನಿಂದ ಪರಿಪೂರ್ಣವಾದವರು' ಎಂದೇ ಅರ್ಥ. (ಕಕ.ವಿ.) ಈ ಅರ್ಥವನ್ನೇ ಸಂಗ್ರಹಿಸಿ 'ಮಹಾಮಹಿಮನೇ' ಎಂದು ಹೇಳಿದರೆ (ಛ.) ಇದನ್ನೇ ವಿಸ್ತರಿಸಿ 'ಶ್ರೀಹರಿ ಒಬ್ಬನಿಗೆ ಹೋಲಿಸಿದರೆ ಮಾತ್ರ ಕಡಿಮೆಯೂ ಮಿಕ್ಕುದೆಲ್ಲಕ್ಕಿಂತ ಅಧಿಕವಾದ ಅಥವಾ ಪೂರ್ಣವಾದ ಮಹಿಮೆಯುಳ್ಳವರೇ! ಎಂದು ವಿವರಿಸಿದರು. 6) ಅಸುಕರಂ-ಸುಲಭವಾಗಿ ಮಾಡಲು ಸಾಧ್ಯವಾದುದು 'ಸುಕರ', ಅದಕ್ಕೆ ವಿರುದ್ಧವಾದುದು ಅಸುಕರ-ಸುಲಭವಲ್ಲದ ಅರ್ಥಾತ್ ಕಷ್ಟಸಾಧ್ಯವಾದ ಎಂದರ್ಥ. 'ಅಸುಕರ' ಎಂಬುದರ ಸ್ಪಷ್ಟೀಕರಣ ಗು.ಸಾ.ದಲ್ಲಿ ಚೆನ್ನಾಗಿ

ಮಾಡಿದ್ದಾರೆ. ಬ್ರಹ್ಮಸೂತ್ರಗಳಲ್ಲಿ ಅನಂತವೇದಗಳ ಅರ್ಥವನ್ನು ನಿರ್ಣಯಿಸುವುದಕ್ಕೆ ಬೇಕಾದ ಅನೇಕ ಯುಕ್ತಿಗಳು ಅಡಗಿವೆ. ಅವನ್ನು ವಿವರಿಸಬೇಕಾದರೆ ಆ ಭಾಷ್ಯಕಾರರಿಗೆ ಮೊದಲು ಅನಂತವೇದಗಳ ಜ್ಞಾನವೂ ಇರಬೇಕು; ಅನಂತರ ಈ ಅರ್ಥಗಳನ್ನು ಸಮರ್ಥಿಸಲು ಏನು ಯುಕ್ತಿಗಳನ್ನು ವೇದವ್ಯಾಸರು ಹೇಳಿದ್ದಾರೆ, ಅವರಿಗೆ ಸಮ್ಮತವಾದ ಯುಕ್ತಿಗಳಾವುವು, ಸಮ್ಮತವಲ್ಲದ ಯುಕ್ತಿಗಳಾವುವು, ಹೇಗೆ ಅಥವಾ ಏಕೆ ಅಸಮ್ಮತ ಇತ್ಯಾದಿ ವಿಚಾರಗಳೆಲ್ಲ ತಿಳಿದಿರಬೇಕು. ಮಧ್ವಾಚಾರ್ಯರು ಆ ವೇದವ್ಯಾಸರಿಂದಲೇ ಅವುಗಳ ಅರ್ಥವನ್ನು ತಿಳಿದುಕೊಂಡು ಅವರ ಅಪ್ಪಣೆಯ ಮೇರೆಗೆ ಈ ಭಾಷ್ಯ ಬರೆದರು. ಈ ದೃಷ್ಟಿಯಿಂದ 'ಅಸುಕರ' ಎಂದು ತಿಳಿಯಬೇಕು. 7) ದಸ್ಯೋಃ ದಸ್ಯತಿ ಪರಸ್ವಾನ್ ನಾಶಯತೀತಿ ದಸ್ಯುಃ, ಪರರ ವ್ಯಾಧಿಗಳನು ನಾಶಮಾಡುವವನಿಗೆ-ಶತ್ರುವಿಗೆ ಅಥವಾ ಕಳ್ಳನಿಗೆ ದಸ್ಯು ಎಂದು ಹೆಸರು. ಪ್ರಕೃತ ಮಣಿಮಂತ ಶ್ರೀಹರಿಯ ಅನಂತಗುಣಗಳನ್ನೇ ನಾಶಮಾಡಿ ಅವನನ್ನು ನಿರ್ಗುಣನೆಂದು ಸಾಧಿಸಿದ್ದರಿಂದ ದಸ್ಯು-ಶಬ್ದ ಪ್ರಯೋಗಿಸಿದ್ದಾರೆ. ಏಕವಚನವು ಜಾತ್ಯೇಕವಚನ; ಇಪ್ಪತ್ತೊಂದು ಮಂದಿ ದುರ್ಭಾಷ್ಯಕಾರರಿಗೂ ಈ ಮಾತು ಅನ್ವಯಿಸುತ್ತದೆ. 8) ವ್ಯಸ್ಯ—ವಿ+ಅಸ್ ಕ್ಷೇಪಣೇ (ದಿವಾ. ಪ.)-ಎಸಿ, ವಗಿ, ಬಿಸಾಡು+ಲ್ಯಪ್ ಪ್ರತ್ಯಯ,-ನಿರಸ್ಯ, ದೂಷಿಸಿ, ಖಂಡಿಸಿ, ನಿರಾಕರಿಸಿ.

9) ಯುಕ್ತಿಮಲ್ಲಿಕಾ ಸಮಾಖ್ಯೆಗಳು—'ಅಸುಕರಮುಕರೋದ್ಬ್ರಹ್ಮಸೂತ್ರಸ್ಯ ಭಾಷ್ಯಂ' ಎಂಬುದಕ್ಕೂ 'ದುರ್ಭಾಷ್ಯಂ ವ್ಯಸ್ಯ ದಸ್ಯೋಃ' ಎಂಬುದಕ್ಕೂ ಋಗ್ವೇದದ (೯।೭೭।೨) 'ಸ ಪೂರ್ವ್ಯಃ ಪವತೇ–' ಎಂಬ ಮಂತ್ರದ 'ಶ್ಯೇನೋ ಮಥಾಯದಿಷಿತಸ್ತಿರೋ ರಜಃ' ಎಂಬ ಚರಣ ಸಮಾಖ್ಯೆಯಾಗಿದೆ. ಋಙ್ಮಂತ್ರದ ಅರ್ಥ–ತಾತ್ಪರ್ಯಗಳನ್ನು ಖಂಡ 333–ಕ ದಲ್ಲಿ ಕೊಟ್ಟಿದೆ.

356. (ಕ) ದಂಡಾನ್ವಯ—ಹೇ ಭೂಮನ್, (a) ಕೃಷ್ಣಸ್ಯ ಅನ್ಯೈಃ ಅಧಾರ್ಯಾಂ ಆಜ್ಞಾಂ ಪರಿಸರದ್....ಕೋಟೌ ಶಿರಸಿ ದಧತ್, (b) ದೇವಸಂಘೈಃ ಅನುಸರಣಾತ್ ಅರ್ಥಿತಃ, (c) ಅಕ್ಲಿಷ್ಟಕರ್ಮಾ, ತ್ವಂ (d) ಭೂಮೌ ಆಗತ್ಯ, (e) ದಸ್ಯೋಃ ಮಣಿಮತಃ ಉದಿತಂ ದುರ್ಭಾಷ್ಯಂ

ವೇದಸದ್ಯುಕ್ತಿಭಿಃ ವ್ಯಸ್ಯ, (f) ಅಸುಕರಂ ಬ್ರಹ್ಮಸೂತ್ರಸ್ಯ ಭಾಷ್ಯಂ ಅಕರೋಃ ||

ಖ) ಅನ್ವಯಾರ್ಥ— ಭೂಮನ್-ಮಹಾಮಹಿಮೆಯುಳ್ಳ ಹೇ ಮುಖ್ಯಪ್ರಾಣ ! (a) ಕೃಷ್ಣಸ್ಯ-(ಛ.) ಶ್ರೀಮನ್ನಾರಾಯಣನ (ಕಡ. ವಿ. ವೇದವ್ಯಾಸರ), ಅನ್ಯೈಃ-ಬೇರೆಯವರಿಂದ, ಅಧಾರ್ಯಾಂ-ನಡೆಸುವುದಕ್ಕೆ (ಪರಿಪಾಲಿಸುವುದಕ್ಕೆ) ಸಾಧ್ಯವಿಲ್ಲದ ; ಆಜ್ಞಾಂ-ಅಪ್ಪಣೆಯನ್ನು ; ಪರಿಸರದ್....ಕೋಟೌ-ಪರಿಸರತ್-ಸುತ್ತಲೂ ಹರಡಿಕೊಳ್ಳುತ್ತಿರುವ, ರಶ್ಮಿ-ಪ್ರಕಾಶದ ಕಿರಣಗಳುಳ್ಳ, ಕೋಟೀರ-ಕಿರೀಟದ, ಕೋಟೌ-ತುದಿಯುಳ್ಳ (ಅಥವಾ ಪರಿಸರದ್-ರಶ್ಮಿ-ಹರಡುತ್ತಿರುವ ಕಿರಣಗಳುಳ್ಳ, ಕೋಟೀರ-ಕಿರೀಟದಿಂದ, ಕೋಟೌ-ಪ್ರಾಶಸ್ತ್ಯವುಳ್ಳ ಎಂದರೆ ದೇದೀಪ್ಯಮಾನವಾದ ಕಿರೀಟದಿಂದ ಪರಿಶೋಭಿಸುವ ; ಶಿರಸಿ-ತಲೆಯಲ್ಲಿ ; ದಧತ್-ಅನರ್ಘ್ಯ ಶಿರೋರತ್ನದಂತೆ ಪರಮಾದರದಿಂದ ಧರಿಸಿ ; (b) ದೇವಸಂಘೈಃ-ರುದ್ರೇಂದ್ರಾದಿ ದೇವತಾ ಸಮೂಹಗಳಿಂದ ; ಅನುಸರಣಾತ್ (ಅನುಸರಣಂ ಪ್ರಾಪ್ಯ-ಲ್ಯಬ್ ಲೋಪ-ನಿಮಿತ್ತಪಂಚಮೀ)-ಅನುಸರಣೆಯನ್ನು ಮಾಡಿ ; ಅರ್ಥಿತಃ (ಸನ್)-ಪ್ರಾರ್ಥಿತರಾದ ; (c) ಅಕ್ಲಿಷ್ಟಕರ್ಮಾ-ಅನಾಯಾಸವಾಗಿ ಕೆಲಸವನ್ನು ಮಾಡಲು ಸಮರ್ಥರಾದ ; ತ್ವಂ-ನೀವು ; (d) ಭೂಮೌ-ಭೂಮಿಯಲ್ಲಿ ; ಆಗತ್ಯ-ಬಂದು (ಎಂದರೆ ಅವತಾರಮಾಡಿ), (ಮಧ್ವವಿಜಯದ ಹೇಳಿಕೆಯ ಮೇರೆಗೆ ಮಹಾಬದರಿಗೆ ಹೋಗಿ ವೇದವ್ಯಾಸರನ್ನು ಕಂಡು, ಅವರ ಮತ್ತು ಬದರೀನಾರಾಯಣನ ಆಜ್ಞೆಯನ್ನು ಪಡೆದು ಎಂದು ಸೇರಿಸಿಕೊಳ್ಳಬೇಕು— ಛ.) (e) ದಸ್ಯೋಃ-ಭಗವಂತ ನಿರ್ಗುಣನೆಂದು ವಾದಿಸಿ ಭಗವಂತನ ಗುಣಗಳನ್ನು ಮುಚ್ಚಿಟ್ಟು ಜಗತ್ತು ಮಿಥ್ಯಾ ಎಂದು ಪ್ರತಿಪಾದಿಸಿದ್ದರಿಂದ ಜಗತ್ಸತ್ಯತ್ವವನ್ನೂ ಅಪಹಾರ ಮಾಡಿದ ; ಮಣಿಮತಃ-ಮಣಿಮಂತನೇ ಮೊದಲಾದ ಇಪ್ಪತ್ತೊಂದು ಜನರಿಂದ ; ಉದಿತಂ-ರಚಿತವಾದ ; ದುರ್ಭಾಷ್ಯ-ಇಪ್ಪತ್ತೊಂದು ದುರ್ಭಾಷ್ಯಗಳನ್ನು ; ವೇದಸದ್ಯುಕ್ತಿಭಿಃ-ವೇದ-ಆಗಮಪ್ರಮಾಣಗಳಿಂದಲೂ, ಸದ್ಯುಕ್ತಿಭಿಃ-ಪ್ರಬಲವಾದ ಯುಕ್ತಿಗಳಿಂದಲೂ; ವ್ಯಸ್ಯ-ನಿರಾಕರಿಸಿ ; (f) ಅಸುಕರಂ-ಸುಲಭವಾಗಿ ರಚಿಸಲು ಸಾಧ್ಯವಿಲ್ಲದ,

ಬ್ರಹ್ಮಸೂತ್ರಸ್ಯ ಭಾಷ್ಯಂ–ಬ್ರಹ್ಮಸೂತ್ರ ಭಾಷ್ಯವನ್ನು ; ಅಕರೋಃ– ಮಾಡಿದಿರಿ, ರಚಿಸಿದಿರಿ.

ಗ) ಭಾವಾರ್ಥ—ಹೇ ಮಹಾಮಹಿಮರಾದ ಮಧ್ವಾಚಾರ್ಯರೇ ! ಹಿಂದಿನ ಶ್ಲೋಕದಲ್ಲಿ ನಿವೇದಿಸಿಕೊಂಡಂತೆ ಕೃಪಾಸಮುದ್ರರಾದ ವೇದವ್ಯಾಸರು ಸಜ್ಜನೋಪಕಾರಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರು. ಆದರೆ ಕಲಿಗಾಲವು ಪ್ರಾಪ್ತವಾಗಲು ಮಣಿಮಂತನೇ ಮೊದಲಾದ ಅನೇಕ ದುರಾತ್ಮರು ಬ್ರಹ್ಮ-ಸೂತ್ರಗಳಿಗೇ ಅಪಾರ್ಥ ಹೇಳಿ ಇಪ್ಪತ್ತೊಂದು ದುರ್ಭಾಷ್ಯಗಳನ್ನು ರಚಿಸಿ ಅಪಪ್ರಚಾರ ಮಾಡಿದರು. ಇದರಿಂದ ಪುನಃ ಜ್ಞಾನವು ಅಸ್ತವ್ಯಸ್ತವಾಗಿ ಹೋಯಿತು, ಸಜ್ಜನರ ಮನಸ್ಸಿನಲ್ಲಿ ಭಗವಂತನ ವಿಚಾರವೇ ಅಳಿಸಿ ಹೋಯಿತು, ಅವರು ಸನ್ಮಾರ್ಗಭ್ರಷ್ಟರಾಗಿ ತಪ್ಪುದಾರಿ ಹಿಡಿದರು. ಈ ದುಃಸ್ಥಿತಿಯನ್ನು ಕಂಡು ಖಿನ್ನರಾದ ಬ್ರಹ್ಮರುದ್ರೇಂದ್ರಾದಿ ದೇವತೆಗಳು ಜ್ಞಾನೋದ್ಧಾರ ಮಾಡಿ ಸಜ್ಜನರನ್ನು ಸಲಹಬೇಕೆಂದು ಭಗವಂತನಲ್ಲಿ ಮೊರೆ-ಯಿಟ್ಟುಕೊಂಡರು. ಈ ಮಹತ್ಕಾರ್ಯಸಾಧನೆ ಮಾಡಲು ಬೇರೆಯವರಿಗೆ ಶಕ್ಯವಿಲ್ಲವೆಂದು ತಿಳಿದು (ತಾನು ಕಲಿಯುಗದಲ್ಲಿ ಅವತಾರವೆತ್ತುವಂತಿರಲಿಲ್ಲ, ಬ್ರಹ್ಮದೇವರಿಗೆ ಅವತಾರವೇ ಇಲ್ಲ, ಬೇರೆಯವರೆಲ್ಲಾ ಅಜ್ಞಾನಕ್ಕೂ ದೈತ್ಯಾ-ವೇಶಕ್ಕೂ ಒಳಗಾದ್ದರಿಂದ ಅವರಿಂದ ಈ ಕಾರ್ಯ ಸಾಧಿಸಲು ಸಾಧ್ಯವಿಲ್ಲ-ವೆಂದು ತಿಳಿದು) ಆ ಭಗವಂತ ನಿಮ್ಮ ಮೂಲರೂಪಕ್ಕೇ ಈ ಜ್ಞಾನಕಾರ್ಯ ನಿರ್ವಹಿಸಲು ಆಜ್ಞೆ ಮಾಡಿದನು. ಅದನ್ನು ಅನುಕರಿಸಿ ರುದ್ರಾದಿ ದೇವತೆಗಳೂ ಬಿನ್ನಪ ಮಾಡಿಕೊಂಡರು. ಆದಕಾರಣ ತಾವು ಭಗವಂತನ ಆ ಆಜ್ಞೆಯನ್ನು ಅನರ್ಘ್ಯ ಶಿರೋರತ್ನದಂತೆ ಪರಮಾದರದಿಂದ ಶಿರಸಾವಹಿಸಿ ಸ್ವೀಕಾರಮಾಡಿ, ದೇವತೆಗಳ ಬಿನ್ನಪವನ್ನು ಹೂವಿನ ಹಾರದಂತೆ ಹೃದಯದಲ್ಲಿ ಧರಿಸಿ ಭೂಮಿ-ಯಲ್ಲಿ ಮಧ್ವಾಚಾರ್ಯರಾಗಿ ಅವತಾರಮಾಡಿದಿರಿ. (ಮಧ್ವವಿಜಯ ೨।೧–೪, ೨೫–೨೮) ಪ್ರಾಪ್ತವಯಸ್ಕರಾದಮೇಲೆ ಹಿರೇಬದರಿಕಾಶ್ರಮಕ್ಕೆ ಹೋಗಿ ವೇದವ್ಯಾಸರ ಸಂದರ್ಶನ ಮಾಡಿ ಅವರಲ್ಲಿ ಶಾಸ್ತ್ರಶ್ರವಣ ಮಾಡಿ ಬಂದಿರಿ. (ಅಲ್ಲೇ ೬।೫೪–೫೭, ೭।೧೬, ೮।೧–೬) ಬರುವಾಗ ನಾರಾಯಣ-ದೇವರ ದರ್ಶನಕ್ಕೆ ಹೋಗಿದ್ದಾಗ ಆ ಭಗವಂತನು ತಮಗೆ ಸೂತ್ರಭಾಷ್ಯವನ್ನು

ರಚಿಸುವಂತೆ ಆಜ್ಞಾಪಿಸಿದನು (೮।೪೩–೫೨). ಆದರಂತೆ ತಾವು ಆ ಬ್ರಹ್ಮ ಸೂತ್ರಗಳಿಗೆ ಅದುವರೆಗೆ ರಚಿತವಾಗಿದ್ದ ಮಣಿಮಂತ ಪ್ರಮುಖ ದುರ್ಭಾಷ್ಯ-ಕಾರರಿಂದ ರಚಿತವಾಗಿದ್ದ ಇಪ್ಪತ್ತೊಂದು ಕುತ್ಸಿತ ಭಾಷ್ಯಗಳನ್ನು ಶ್ರುತಿಸ್ಮೃತಿ ಪುರಾಣೇತಿಹಾಸಾದಿ ಆಗಮೋಕ್ತಿಗಳ ಆಧಾರದಿಂದಲೂ ಪ್ರಬಲ ಯುಕ್ತಿಗಳ ಬಲದಿಂದಲೂ ನಿರಾಕರಿಸಿ (ಏಕವಿಂಶತಿ ಕುಭಾಷ್ಯದೂಷಕಂ–ಮ.ವಿ. ೯।೧೨) 'ಅದ್ಭುತವಾದ' ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದಿರಿ (೯।೧೨–೧೩).

357. **ವಿಶೇಷ ವಿಚಾರಗಳು (ಕ) ಬ್ರಹ್ಮಸೂತ್ರಗಳೆಂದರೇನು ?**—ಬ್ರಹ್ಮ ಎಂದರೆ ವೇದ ಎಂದರ್ಥ. ಆ ವೇದಗಳು ಅನಂತ-ವಾಗಿರುವುವಲ್ಲದೆ ಆಪಾತತಃ ನೋಡಿದರೆ ಒಂದಕ್ಕೊಂದು ವಿರುದ್ಧವಾಗಿದ್ದಂತೆ ಕಾಣುತ್ತವೆ. ಉದಾಹರಣೆಗೆ ಅಗ್ನಿಸೂಕ್ತಗಳಲ್ಲಿ ಅಗ್ನಿಯೇ ಸರ್ವೋತ್ತಮನೆಂದೂ ಅವನೇ ಸಕಲಕ್ಕೂ ಆಧಾರ ಎಂದೆಲ್ಲಾ ಹೇಳಿದರೆ ಇಂದ್ರಸೂಕ್ತ, ರುದ್ರಾದಿ ಸೂಕ್ತಗಳಲ್ಲಿಯೂ ಹೀಗೆಯೇ ಇವರಿವರೇ ಶ್ರೇಷ್ಠರೆಂದು ಪ್ರತಿಪಾದಿಸಲಾಗಿದೆ. ಒಂದು ಶಾಖೆಯಲ್ಲಿ 'ಸಪ್ತ ಪ್ರಾಣಾಃ' ಎಂದು ಹೇಳಿದರೆ ಇನ್ನೊಂದು ಶಾಖೆಯಲ್ಲಿ 'ದ್ವಾದಶ ವಾ ಏತೇ ಪ್ರಾಣಾಃ' ಎಂದು ಹೇಳಿದೆ. ಆದರೆ ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ಪರೀಕ್ಷಿಸಿದರೆ ಯಾವ ವಿರೋಧವೂ ಬರುವುದಿಲ್ಲ ಎಂದು ಸ್ಥಾಪನೆ ಮಾಡಿ ವೇದಗಳಲ್ಲಿ ಹೇಳಿದ 'ಕೃತ್ಸ್ನ' (ಸಮಸ್ತ) ವಿಚಾರಗಳನ್ನೂ ಸಂಗ್ರಹಿಸಿರುವುದರಿಂದಲೇ ಈ ಶಾಸ್ತ್ರಕ್ಕೆ ಬ್ರಹ್ಮಸೂತ್ರಗಳೆಂದು ಹೆಸರು. ಇದರಲ್ಲಿ ಉದ್ದಕ್ಕೂ ಪೂರ್ವಪಕ್ಷ-ಸಮಾಧಾನರೂಪವಾಗಿಯೇ (ಎಂದರೆ ನ್ಯಾಯನಿರ್ಣಯದಂತೆ) ಎಲ್ಲ ವಿಚಾರಗಳನ್ನೂ ಹೇಳಿರುವುದರಿಂದ ಈ ಶಾಸ್ತ್ರಕ್ಕೆ ಉತ್ತರಮೀಮಾಂಸಾ ಎಂಬ ಹೆಸರೂ ಪ್ರಸಿದ್ಧವಾಗಿದೆ. ಸೂತ್ರ-ಶಬ್ದಾರ್ಥವನ್ನು 'ಅಲ್ಪಾಕ್ಷರಮಸಂದಿಗ್ಧಂ' ಎಂಬ ಸ್ಕಾಂದಪುರಾಣವಾಕ್ಯ ಹೇಳುತ್ತದೆ, ಇದು ಭಾಷ್ಯದ ಪ್ರಾರಂಭದಲ್ಲೇ ಇದೆ. ಅತ್ಯಂತ ಸಂಕ್ಷೇಪವಾಗಿದ್ದರೂ ಸಂದೇಹವಿಲ್ಲದಂತೆ ಅನೇಕ ಶಾಖಾನಿರ್ಣಾಯಕವಾಗಿರುವ ಉಕ್ತಿಗಳೇ ಸೂತ್ರಗಳೆಂದು ಹೇಳಬಹುದು. 'ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ' ಎಂದರೆ ಸೂತ್ರಗಳಂತೆಯೇ ಅತ್ಯಲ್ಪ ಪದಗಳಿಂದ ಸೂತ್ರಗಳ ಅರ್ಥವನ್ನು ವಿವರಿಸುವ ಗ್ರಂಥಕ್ಕೇ ಭಾಷ್ಯವೆಂದು

ಹೆಸರು. ಬ್ರಹ್ಮಸೂತ್ರಗಳಲ್ಲಿ ನಾಲ್ಕು ಅಧ್ಯಾಯಗಳು ಇವೆಯಲ್ಲದೆ ಒಂದೊಂದು ಅಧ್ಯಾಯದಲ್ಲೂ ನಾಲ್ಕು ನಾಲ್ಕು ಪಾದಗಳಿವೆ. ಯಾವ ಅಧ್ಯಾಯದಲ್ಲಿ ಯಾವ ಪಾದದಲ್ಲಿ ಏನು ವಿಷಯ ಹೇಳಿದೆಯೆಂಬುದನ್ನು ನಖಸ್ತುತಿಯಲ್ಲೇ (ಪುಟ ೨೪೩-೪೭) ವಿವರಿಸಿರುವುದರಿಂದ ಇಲ್ಲಿ ಪುನಃ ಹೇಳಬೇಕಾಗಿಲ್ಲ. ಬ್ರಹ್ಮಸೂತ್ರಭಾಷ್ಯದ ಮಹತ್ವವನ್ನು ಪ್ರಸ್ತಾಪಿಸಿ ಈ ಹಿಂದೆ 350-ಕ ಖಂಡ-ದಲ್ಲಿ ವಕ್ತೃ-ಶ್ರೋತ್ರಾದ್ಯಾನುಕೂಲ್ಯಗಳ ಪ್ರಸ್ತಾಪ ಮಾಡಲಾಗಿತ್ತು. ಈಗ ನ್ಯಾಯಸುಧಾದಿ ಗ್ರಂಥಗಳಲ್ಲಿ ವಿಸ್ತಾರವಾಗಿ ಹೇಳಿರುವ ಈ ವಿಚಾರವನ್ನು ಅತಿ ಸಂಕ್ಷೇಪವಾಗಿ ನಿರೂಪಿಸುವೆನು.

ಖ) ಪ್ರಾಮಾಣ್ಯ ತ್ರೈವಿಧ್ಯ—ಈ ವಿಷಯವನ್ನೂ ನಖಸ್ತುತಿಯಲ್ಲಿ (ಪುಟ ೩೪೨) ಕಿಂಚಿತ್ ಪ್ರಸ್ತಾಪಿಸಿದ್ದೇವೆ. ಒಂದು ಗ್ರಂಥಕ್ಕೆ ಪ್ರಾಮಾಣ್ಯ ಸಿದ್ಧಿಸಬೇಕಾದರೆ ಮೂರು ವಿಧ ಪ್ರಾಮಾಣ್ಯ ಇರಬೇಕೆನ್ನುತ್ತಾರೆ. ಶ್ರೀ-ಮಧ್ವಾಚಾರ್ಯರು ಅನುವ್ಯಾಖ್ಯಾನದಲ್ಲಿ (೧/೧/೧, ೫-೬ ಶ್ಲೋ.)—

ಆಪ್ತವಾಕ್ಯತಯಾ ತೇನ ಶ್ರುತಿಮೂಲತಯಾ ತಥಾ ।
ಯುಕ್ತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ ॥

ಎಂದು ಹೇಳಿದ್ದಾರೆ. ಇದರ ಸ್ಥೂಲಾರ್ಥ ಏನೆಂದರೆ ಗ್ರಂಥವು ಆಪ್ತರು ಹೇಳಿದ ವಾಕ್ಯವಾಗಿರಬೇಕು, ವೇದಕ್ಕೆ ಅನುಕೂಲವಾಗಿರಬೇಕು ಮತ್ತು ಯುಕ್ತಿಸಂಗತವಾಗಿರಬೇಕು. ಆಪ್ತವಾಕ್ಯತ್ವವು ವಕ್ತ್ರಾನುಕೂಲ್ಯ, ಶ್ರೋತ್ರಾನುಕೂಲ್ಯ, ಪ್ರಸಂಗಾನುಕೂಲ್ಯ ಎಂಬ ಮೂರು ಗುಣಗಳನ್ನು ಅವಲಂಬಿಸಿರುತ್ತದೆ. ಹೇಳುವವನೇ ಅಯೋಗ್ಯನಾಗಿದ್ದರೆ ಅವನ ಮಾತಿಗೆ ಬೆಲೆಯೂ ಬರುವುದಿಲ್ಲ, ಪ್ರಾಮಾಣ್ಯವೂ ಇರುವುದಿಲ್ಲ; ಹೇಳುವವನು ನಿರ್ದುಷ್ಟನಾಗಿ ಸರ್ವಜ್ಞನಾಗಿದ್ದರೆ ಅವನ ಮಾತು ಪ್ರಮಾಣವಾಗುತ್ತದೆ; ಇದೇ ವಕ್ತ್ರಾನುಕೂಲ್ಯ. ವೇದವ್ಯಾಸರೇ ತಾಮಸಜನಗಳನ್ನುದ್ದೇಶಿಸಿ ಲಿಂಗ-ಶೈವಾದಿ ಪುರಾಣಗಳನ್ನು ಬರೆದಿದ್ದಾರೆ. ಇಲ್ಲಿ ವಕ್ತೃಗಳು ವೇದವ್ಯಾಸರೇ ಆದರೂ ಆ ಪುರಾಣಗಳನ್ನು ಕೇಳುವವರು (ಶ್ರೋತೃಗಳು) ತಾಮಸರಾದ್ದರಿಂದ ಅವಕ್ಕೆ ಪ್ರಾಮಾಣ್ಯ ಬರುವುದಿಲ್ಲ. ವಕ್ತೃಗಳಂತೆ ಶ್ರೋತೃಗಳೂ ಶುದ್ಧರಾ-ಗಿದ್ದರೆ ಮಾತ್ರ ಪ್ರಾಮಾಣ್ಯ ಸಿದ್ಧಿಸುತ್ತದೆ, ಇದಕ್ಕೆ ಶ್ರೋತ್ರಾನುಕೂಲ್ಯವೆಂದು

ಹೆಸರು. ಹೇಳುವ ಪ್ರಸಂಗವೂ ಎಂದರೆ ಸಂದರ್ಭವೂ ಯೋಗ್ಯವಾಗಿರಬೇಕು. ಕಲಿಯು ರುದ್ರದೇವರಲ್ಲಿ ಆವಿಷ್ಟನಾಗಿ ಪಾಶುಪತಾಸ್ತ್ರಗಳನ್ನು ರಚಿಸಿದನು; ಇಲ್ಲಿ ಕಲಿಯುಕ್ತ ಆವೇಶವಿದ್ದುದರಿಂದ ಪ್ರಸಂಗಾನುಕೂಲ್ಯವಿಲ್ಲ. ಹೀಗೆಯೇ ವಿಷ್ಣು ಬುದ್ಧನಾಗಿ ಜಿನಾದಿ ದೈತ್ಯರನ್ನು ಮೋಹಿಸಿ ಜಗತ್ತೆಲ್ಲ ಕ್ಷಣಿಕ, ವೇದ ಅಪ್ರಮಾಣ ಎಂದು ಬೋಧಿಸಿದ; ಇಲ್ಲಿಯೂ ಪ್ರಸಂಗ ದುಷ್ಟವಾದ್ದರಿಂದ ಆ ಬೋಧನೆಯೂ ದೂಷಿತವಾಗುತ್ತದೆ. ಪ್ರಸಂಗವೂ ಶುದ್ಧವಾಗಿರುವುದಕ್ಕೆ ಪ್ರಸಂಗಾನುಕೂಲ್ಯವೆಂದು ಹೆಸರು. ವಕ್ತೃ-ಶ್ರೋತೃ-ಪ್ರಸಕ್ತಿ ಮೂರೂ ಅನುಕೂಲವಾಗಿದ್ದರೆ ಆಪ್ತಿ ಸಿದ್ಧಿಸುತ್ತದೆ. ಇದನ್ನೇ ಅನುವ್ಯಾಖ್ಯಾನದಲ್ಲಿ 'ವಕ್ತೃಶ್ರೋತೃಪ್ರಸಕ್ತೀನಾಂ ಯದಾಪ್ತಿರನುಕೂಲತಾ ॥' ಎಂದು ತೋರಿಸಿದ್ದಾರೆ.

ಗ) ಬ್ರಹ್ಮಸೂತ್ರಗಳ ಪ್ರಾಮಾಣ್ಯ—ಬ್ರಹ್ಮಸೂತ್ರಗಳನ್ನು ರಚಿಸಿದವರು 'ಗುಣಗಣನಿಲಯ'ನಾದ ಸಾಕ್ಷಾನ್ನಾರಾಯಣ; ಆದಕಾರಣ ವಕ್ತ್ರಾನುಕೂಲ್ಯ ಸಿದ್ಧಿಸಿತು. ಅವನ್ನು ಬ್ರಹ್ಮರುದ್ರಾದಿ ದೇವತೆಗಳು ಋಷಿಗಳು ಮತ್ತು ಮನುಷ್ಯೋತ್ತಮರಿಗಾಗಿ ರಚಿಸಿದರು, ಆದಕಾರಣ ಶ್ರೋತ್ರಾನುಕೂಲ್ಯವೂ ಇದೆ. ಬ್ರಹ್ಮರುದ್ರಾದಿಗಳಿಂದ ಪ್ರಾರ್ಥಿತನಾಗಿ ವೇದಾರ್ಥ ನಿರ್ಣಯಕ್ಕಾಗಿ ಈ ಗ್ರಂಥ ರಚಿಸಿದರು, ಆದ್ದರಿಂದ ಪ್ರಸಂಗಾನುಕೂಲ್ಯವೂ ಉತ್ತಮವಾಗಿದೆ. ಹೀಗೆ ಆಪ್ತಿಮೂಲತ್ವ ಸಿದ್ಧಿಸಿತು. ಒಂದೊಂದು ಸೂತ್ರವೂ ಅನೇಕ ಶ್ರುತಿವಾಕ್ಯಗಳಿಗೆ ನಿರ್ಣಾಯಕವಾಗಿದೆ—ಇದೇ ಶ್ರುತಿಮೂಲತ್ವ. ಈ ಗ್ರಂಥದಲ್ಲಿರುವ ೨೨೩ ಅಧಿಕರಣಗಳೂ ಬೇರೆ ಬೇರೆ ಪ್ರಮೇಯಗಳನ್ನು ಪೂರ್ವಪಕ್ಷ-ಸಿದ್ಧಾಂತ ವಿಚಾರಪೂರ್ವಕ ನಿರ್ಣಯಿಸುತ್ತವೆ—ಹೀಗೆ ಯುಕ್ತಿಮೂಲತ್ವವೂ ಇದಕ್ಕಿದೆ. ಇದಕ್ಕೂ ಹೆಚ್ಚಾಗಿ ಈ ಬ್ರಹ್ಮಸೂತ್ರಗಳು ವೇದಾದಿ ಸಕಲ ಶಾಸ್ತ್ರಗಳಲ್ಲಿ ಪ್ರತಿಪಾದಿಸಿದ ಸಕಲ ಸಿದ್ಧಾಂತಗಳಿಗೂ 'ಇದಮಿತ್ಥಂ' ಎಂದು ನಿರ್ಣಯ ಹೇಳುವ ನಿರ್ಣಾಯಕ ಶಾಸ್ತ್ರವಾದ್ದರಿಂದ ಇನ್ನೂ ಹೆಚ್ಚಿನ ಮಹತ್ವವನ್ನು ಹೊಂದಿದೆ. ಆದಕಾರಣ ಶ್ರೀಮದಾಚಾರ್ಯರ ವಾಣಿಯಲ್ಲೇ ಹೇಳುವುದಾದರೆ (ಅನುವ್ಯಾಖ್ಯಾನ ೧/೧/೧ ಶ್ಲೋ. ೭)—

ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ ॥

ಆದ್ದರಿಂದ ಇದಕ್ಕೆ ಸಮಾನವಾದ ಅತ್ಯಂತ ಪ್ರಮಾಣವಾದ ಗ್ರಂಥ ಬೇರೆ ಯಾವುದೂ ಇಲ್ಲ.

ಘ) ಹರಿಪರವಾಗಿ ಅರ್ಥ—ಬೆಂಗಳೂರು ಉತ್ತರಾದಿ ಮಠದಿಂದ ಪ್ರಕಟಿತವಾದ ವಿದ್ವಾನ್ ವೇ। ಶ್ರೀ ಹೆ. ಕೃ. ರಂಗನಾಥಾಚಾರ್ಯರಿಂದ ಸಂಪಾದಿತ 'ಶ್ರೀಹರಿವಾಯುಸ್ತುತಿ' ಪುಸ್ತಕದಲ್ಲಿ ೩೮–೩೯ ಈ ಎರಡು ಶ್ಲೋಕಗಳಿಗೂ ಹರಿಪರ ವಿಶೇಷಾರ್ಥ ಕೊಟ್ಟಿದ್ದಾರೆ. ೩೮ನೇ ಶ್ಲೋಕದ ಅರ್ಥಕ್ಕೆ ಪರಿಚ್ಛೇದದಲ್ಲೇ ಸ್ವಲ್ಪ ವ್ಯತ್ಯಾಸ ಮಾಡಿಕೊಳ್ಳಬೇಕು. ಪರಿಸರದ್-ರಶ್ಮಿ ಕೋಟೀರ—ಇಷ್ಟೇ ಒಂದು ಪದ; ಇದು ಸಂಬೋಧನೆ. ಕೋಟೌ ಬೇರೆ ಪದ. ಮಣಿಮತ ಉದಿತಂ ಎಂಬಲ್ಲಿ ಮಣಿಮತೇ ಉದಿತಂ ಎಂದು ಪದಚ್ಛೇದ (ಅರ್ಥವ್ಯತ್ಯಾಸಗಳು) 'ಮಣಿರಿವ ಮತಿಃ ಯಸ್ಯ ಸಃ ಮಣಿಮತಿಃ, ತಸ್ಯ ಸಂಬುದ್ಧಿಃ।' ಮಣಿಯಂತೆ ಪ್ರಕಾಶಿಸುವ ಬುದ್ಧಿಯುಳ್ಳವರೇ ಎಂದು ಅರ್ಥ (೨) 'ಭಾವಭವಿತ್ರೋರಭೇದವ್ಯಪದೇಶಃ' ಎಂಬ ನ್ಯಾಯದಿಂದ ಭೂಮನ್ ಶಬ್ದಕ್ಕೆ ಪೂರ್ಣ ಎಂದರ್ಥ (೩) 'ತಯೋರೇವ ಕೃತ್ಯ-ಕ್ತ-ಖಲರ್ಥಾಃ' (ಪಾ. ೩/೪/೭೦) ಎಂಬ ಸೂತ್ರಾನುಸಾರವಾಗಿ ದುರ್ಭಾಷ್ಯಂ ಎಂಬುದಕ್ಕೆ ದುರ್ಭಾಷಣ ಎಂದು ಅರ್ಥ. (೪) ಅಸುಂ–ಪ್ರಾಣಂ ಕರೋತೀತ್ಯಸುಕರಃ ಎಂಬ ವ್ಯುತ್ಪತ್ತಿಯಿಂದ ವಾಯೂತ್ಪತ್ತಿಗೆ ಕಾರಣನೆಂದು ಅರ್ಥ. ಈ ಅರ್ಥವು 'ಏತೇನ ಮಾತರಿಶ್ವಾ ವ್ಯಾಖ್ಯಾತಃ' (ಬ್ರ.ಸೂ. ೨/೩/೮) ಎಂಬ ಸೂತ್ರದಿಂದ ಸಮರ್ಥಿತವಾಗಿದೆ. (೫) ಬ್ರಹ್ಮ ಎಂದೂ ಸೂತ್ರಸ್ಯ ಎಂದೂ ಬೇರೆ ಬೇರೆ ಪದಗಳು.

ಙ) ಈ ಶ್ಲೋಕಕ್ಕೆ ವೇದವ್ಯಾಸ ಪರವಾಗಿ ಅನ್ವಯಾರ್ಥ—ಪರಿ....ಕೋಟಿರ-ಪರಿಸರತ್–ಸರ್ವವಿಷಯದಲ್ಲೂ ಸಂಚರಿಸುವ, ರಶ್ಮಿ–ಜ್ಞಾನರಶ್ಮಿಯುಳ್ಳ ಬ್ರಹ್ಮಾದಿಗಳಿಗೆ, ಕೋಟೀರ–ಕಿರೀಟಸ್ಥಾನೀಯರಾದ; ಭೂಮನ್–ಪೂರ್ಣರಾದ; ಮಣಿ-ಮತೇ–ರತ್ನದಂತೆ ಪ್ರಕಾಶಿಸುವ ಬುದ್ಧಿಯುಳ್ಳ ಹೇ ವೇದವ್ಯಾಸರೇ; ಅನ್ಯೈಃ ಅಧಾರ್ಯಾಂ–(ಅನಂತ ವೇದಗಳಾದ್ದರಿಂದ) ಇತರರಿಂದ ಧರಿಸಲು (ನೆನಪಿಟ್ಟುಕೊಳ್ಳಲು) ಸಾಧ್ಯವಿಲ್ಲದ; ಕೃಷ್ಣಸ್ಯ ಆಜ್ಞಾಂ–(ಶ್ರುತಿ-ಸ್ಮೃತೀ ಹರೇರಾಜ್ಞೇ–ಶ್ರುತಿ-ಸ್ಮೃತಿ ಎರಡೂ

ಶ್ರೀಹರಿಯ ಆಜ್ಞೆಗಳು ಎಂಬ ವಚನಾನುಸಾರ) ಮೂಲರೂಪೀ ನಾರಾಯಣನ ಆಜ್ಞಾರೂಪವಾದ ಶ್ರುತಿಯನ್ನು, ದಧತ್–ಮನಸ್ಸಿನಲ್ಲಿ ಧರಿಸಿರುವಂಥಾ ಎಂದರೆ ಅನಂತವೇದಗಳ ಅರ್ಥವನ್ನು ತಿಳಿದಿರುವ; ಅಕ್ಲಿಷ್ಟಕರ್ಮಾ–ಕಷ್ಟವಿಲ್ಲದೆ (ಅನಾಯಾಸವಾಗಿ) ವ್ಯಾಪಾರ ಮಾಡುವ ; ತ್ವಂ–ನೀವು ; ದೇವಸಂಘೈಃ–ಬ್ರಹ್ಮಾದಿ ದೇವತೆಗಳ ಸಮೂಹಗಳಿಂದ, ಅನುಸರಣಾತ್–ಅನುಸರಣೆ ಮಾಡಿ, ಅರ್ಥಿತಃ ಸನ್–ಪ್ರಾರ್ಥಿತರಾಗಿ, ಭೂಮೌ ಆಗತ್ಯ–ಭೂಮಿಗೆ ಬಂದು (ಅವತರಿಸಿ), ದಸ್ಯೋಃ ಉದಿತಂ–ಶತ್ರುಗಳಾದ ಸಾಂಖ್ಯಾದಿ ದುರ್ವಾದಿಗಳಿಂದ ಹೇಳಲ್ಪಟ್ಟ (ಪ್ರತಿಪಾದಿಸಲ್ಪಟ್ಟ) ; ದುರ್ಭಾಷ್ಯಂ–ದುಷ್ಟವಾದ ಪ್ರಕೃತಿಕರ್ತೃತ್ವಾದಿ ವಿಷಯವುಳ್ಳ ಗ್ರಂಥಸಮೂಹವನ್ನು ; ವೇದಸದ್ಯುಕ್ತಿಭಿಃ–ವೇದಗಳಿಂದಲೂ ನಿರ್ದುಷ್ಟ ಯುಕ್ತಿಗಳಿಂದಲೂ, ವ್ಯಸ್ಯ–ನಿರಾಕರಣ ಮಾಡಿ ; ಕೋಟೌ–ಉತ್ಕರ್ಷವು ಶ್ರುತ್ಯಾದಿಗಳಿಂದ ವಿಚಾರ ಮಾಡಲ್ಪಡಲಾಗಿ, ಶಿರಸಿ–ಬ್ರಹ್ಮಾದಿಗಳ ಶಿರಸ್ಸಿನಲ್ಲಿರುವ (ಎಂದರೆ ಬ್ರಹ್ಮಾದಿಗಳಿಗಿಂತಲೂ ಉತ್ತಮನೆಂದು ನಿಶ್ಚಿತವಾದ ; ಅಸುಕರಂ–ವಾಯುದೇವರಿಗೆ ಉತ್ಪಾದಕರಾದ ಅಥವಾ ಇತರರಿಂದ ಮಾಡಲು (ರಚಿಸಲು) ಅಶಕ್ಯವಾದ ಎಂದರೆ ಉತ್ಪತ್ತಿರಹಿತವಾದ ; ಬ್ರಹ್ಮ–ಗುಣಪೂರ್ಣವಾದ ವಿಷ್ಣುಸ್ವರೂಪವನ್ನೇ ; ಸೂತ್ರಸ್ಯ–ಸೂತ್ರಸಮುದಾಯಕ್ಕೆ, ಭಾಷ್ಯಂ–ಪ್ರತಿಪಾದ್ಯವನ್ನಾಗಿ, ಅಕರೋಃ–ಮಾಡಿದಿರಿ.

ಚ) ವೇದವ್ಯಾಸಪರವಾಗಿ ಭಾವಾರ್ಥ—ಹೇ ವೇದವ್ಯಾಸರೇ, ನೀವು ಬ್ರಹ್ಮಾದಿ ಸಕಲ ದೇವತೆಗಳೆಲ್ಲರಿಗಿಂತಲೂ ಸರ್ವೋತ್ತಮರು. ಜ್ಞಾನಾನಂದಾದಿಗಳಿಂದ ಪರಿಪೂರ್ಣರು. ಮಣಿಗಳು ಥಳಥಳಿಸುತ್ತಿರುವಂತೆ ನೀವು ಸ್ವಪ್ರಕಾಶದಿಂದ ಪ್ರಜ್ವಲಿಸುತ್ತಿರುವಿರಿ. ವೇದಗಳು ಅನಂತವಾದ್ದರಿಂದ ಎಲ್ಲರೂ ಅವನ್ನು ಸಮಗ್ರವಾಗಿ ಗ್ರಹಿಸಲಾರರು, ಆದರೂ ನೀವು ವಿಶಿಷ್ಟ ವೇದಗಳ ಅರ್ಥವನ್ನೂ ಸುಸ್ಪಷ್ಟವಾಗಿ ಬಲ್ಲವರು. ಎಲ್ಲ ವ್ಯಾಪಾರಗಳನ್ನೂ ಅತಿ ಸುಲಭವಾಗಿ ಲೀಲಾರೂಪವಾಗಿ ನಡೆಸುವಿರಿ (ಅಕ್ಲಿಷ್ಟಕರ್ಮಾ). ಇಂಥಾ ನಿಮ್ಮನ್ನು ಬ್ರಹ್ಮಾದಿ ದೇವತೆಗಳು ಪ್ರಾರ್ಥಿಸಿಕೊಳ್ಳಲು ನೀವು ಭೂಮಿಯಲ್ಲಿ ವ್ಯಾಸರಾಗಿ ಅವತಾರ ಮಾಡಿ ದುರ್ಜನರಿಂದ ಪ್ರಣೀತವಾದ ಸಾಂಖ್ಯನ್ಯಾಯವೈಶೇಷಿಕಾದಿ ದುಷ್ಟದರ್ಶನಗಳನ್ನು ವೇದವಾಕ್ಯಗಳಿಂದಲೂ ಸದ್ಯುಕ್ತಿ-

ಗಳಿಂದಲೂ ನಿರಾಕರಿಸಿ ವೇದಗಳು ಅಪೌರುಷೇಯುಗಳೆಂದೂ ಪ್ರಮಾಣವೆಂದೂ ವಿಷ್ಣುವೇ ಸಕಲವೇದ ಪ್ರತಿಪಾದ್ಯನೆಂದೂ ಸ್ಥಾಪಿಸಿ ವೇದಗಳಲ್ಲಿ ಹೇಳಿದ ಗುಣಗಳನ್ನೇ ಸೂತ್ರರೂಪವಾಗಿ ರಚಿಸಿದಿರಿ ಎಂದು ಭಾವ.

ಇಲ್ಲಿಗೆ ೩೮ನೆಯ ಶ್ಲೋಕ ಮುಗಿಯಿತು

ಘ) ಶ್ಲೋಕ ೩೯. ಅನೇಕ ಗ್ರಂಥ ರಚನೆ

358. ಕ) ಅವತಾರಿಕೆ—(ಲೇ.) ೩೮ನೇ ಶ್ಲೋಕದಲ್ಲಿ ಮಧ್ವರು ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದರೆಂದು ಹೇಳಿದ್ದರಿಂದ ಅವರು ರಚಿಸಿದ್ದು ಇದೊಂದೇ ಗ್ರಂಥ ಎಂಬ ಭಾವನೆ ಬರುತ್ತದೆ. ಅದನ್ನು ನಿವಾರಿಸುವುದಕ್ಕೆ ಸೂತ್ರಭಾಷ್ಯಗಳಲ್ಲದೆ ಬೇರೆ ಗೀತಾಭಾಷ್ಯಾದಿ ಅನೇಕ ಗ್ರಂಥಗಳನ್ನೂ ರಚಿಸಿದರೆಂದು ಹೇಳುತ್ತಾ ಅವರ ಚರಿತ್ರೆಯನ್ನೂ ಸಂಕ್ಷೇಪವಾಗಿ ನಿರೂಪಣೆ ಮಾಡುತ್ತಾರೆ. (ಕಕ.ವಿ.ಛ.) ಶ್ರೀಮದಾಚಾರ್ಯರ ಜನ್ಮಸ್ಥಳಾದಿಗಳನ್ನು ನಿರೂಪಿಸುತ್ತಾ 'ನೀವು ಪುನಃ ಬದರಿಗೆ ಹೋಗಿ ಬೇರೆ ಬೇರೆ ಭಾಷ್ಯಾದಿ ಅನೇಕ ಗ್ರಂಥಗಳನ್ನು ರಚಿಸಿದಿ'ರೆಂದು ವಿಜ್ಞಾಪಿಸುತ್ತಾರೆ. (ಪು.ರಾ.) ವೇದವ್ಯಾಸರು ಭಾರತ ರಚಿಸಿದ್ದನ್ನೂ ಶ್ರೀಮದಾಚಾರ್ಯರು ಇತರ ಭಾಷ್ಯಗಳನ್ನೂ ತಾತ್ಪರ್ಯನಿರ್ಣಯವನ್ನೂ ರಚಿಸಿದ್ದನ್ನೂ ವರ್ಣಿಸುತ್ತಾರೆ.

ಭೂತ್ವಾ ಕ್ಷೇತ್ರೇ ವಿಶುದ್ಧೇ ದ್ವಿಜಗಣನಿಲಯೇ
ರೌಪ್ಯಪೀಠಾಭಿಧಾನೇ
ತತ್ರಾಪಿ ಬ್ರಹ್ಮಜಾತಿ—ಸ್ತ್ರಿಭುವನವಿಶದೇ (ವಿದಿತೇ)
ಮಧ್ಯಗೇಹಾಖ್ಯಗೇಹೇ ।
ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ
ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್
ಭಾರತಾರ್ಥಪ್ರಕಾಶಮ್ ॥ ೩೯ ॥

ಖ) ವಾಯುಪರವಾಗಿ ಪದವಿಭಾಗ—ಭೂತ್ವಾ, ಕ್ಷೇತ್ರೇ, ವಿಶುದ್ಧೇ, ದ್ವಿಜ....ನಿಲಯೇ, ರೌಪ್ಯ....ಧಾನೇ, ತತ್ರ, ಅಪಿ, ಬ್ರಹ್ಮಜಾತಿಃ, ತ್ರಿ....ವಿಶದೇ, ಮಧ್ಯ...ಗೇಹೇ, ಪಾರಿವ್ರಾಜ್ಯಾಧಿರಾಜಃ, ಪುನಃ, ಅಪಿ, ಬದರೀಂ, ಪ್ರಾಪ್ಯ, ಕೃಷ್ಣಂ, ಚ, ನತ್ವಾ, ಕೃತ್ವಾ, ಭಾಷ್ಯಾಣಿ, ಸಮ್ಯಗ್, ವ್ಯತನುತ, ಚ, ಭವಾನ್, ಭಾರತಾರ್ಥಪ್ರಕಾಶಮ್.

ಗ) ವಿಶ್ಲೇಷಣೆ—ಈ ಶ್ಲೋಕದ ಅನ್ವಯವೂ ಅರ್ಥವೂ ಬಹಳ ಸರಳವಾಗಿದೆ. ಇಲ್ಲಿ ಭವಾನ್ (೪ನೇ ಚರಣದಲ್ಲಿ)-ನೀವು ಎಂಬುದೇ ಕರ್ತೃ-ಪದ; ವ್ಯತನುತ-ರಚಿಸಿದಿರಿ ಎಂಬುದೊಂದೇ ಪೂರ್ಣಕ್ರಿಯೆ; ಮಿಕ್ಕ ನಾಲ್ಕೂ ಅಪೂರ್ಣಕ್ರಿಯೆಗಳು. ೧) ಭವಾನ್ ಕ್ಷೇತ್ರೇ, ತತ್ರಾಪಿ ಮಧ್ಯಗೇಹಾಖ್ಯ-ಗೇಹೇ ಬ್ರಹ್ಮಜಾತಿಃ ಭೂತ್ವಾ, ೨) ಪಾರಿವ್ರಾಜ್ಯಾಧಿರಾಜಃ (ಸನ್)-ಸಂನ್ಯಾಸಿ ಶ್ರೇಷ್ಠರಾಗಿ, ೩) ಪುನರಪಿ ಬದರೀಂ ಪ್ರಾಪ್ಯ, ೪) ಕೃಷ್ಣಂ ಚ (ವ್ಯಾಸ-ರನ್ನು) ನತ್ವಾ, ೫) ಭಾಷ್ಯಾಣಿ ಕೃತ್ವಾ, ೬) ಭಾರತಾರ್ಥಪ್ರಕಾಶಂ ಚ ಸಮ್ಯಗ್ ವ್ಯತನುತ--ಎಂದು ಆರು ಚಿಕ್ಕ ಚಿಕ್ಕ ವಾಕ್ಯಗಳಿವೆ. ೧ನೆಯ ವಾಕ್ಯದಲ್ಲಿರುವ ಕ್ಷೇತ್ರೇ-ಗೆ i) ವಿಶುದ್ಧೇ, ii) ದ್ವಿಜಗಣನಿಲಯೇ, iii) ರೌಪ್ಯಪೀಠಾಭಿಧಾನೇ, iv) ತ್ರಿಭುವನವಿಶದೇ (ವಿದಿತೇ)—ಎಂದು ನಾಲ್ಕು ವಿಶೇಷಣಗಳು.

ಘ) ಕಠಿನ ಶಬ್ದಾರ್ಥ—೧) ಮಧ್ಯಗೇಹಾಖ್ಯಗೇಹೇ-ಮಧ್ಯಗೇಹ ಭಟ್ಟರ ಮನೆಯಲ್ಲಿ 'ಗೃಹಂ ಗೇಹೋದವಸಿತಂ' ಅಮರ. ೨) ಪಾರಿ-ವ್ರಾಜ್ಯಾಧಿರಾಜಃ-'ಭಿಕ್ಷುಃ ಪರಿವ್ರಾಟ್ ಕರ್ಮಂದೀ' ಎಂಬ ಅಮರದಂತೆ ಪರಿವ್ರಾಟ್ ಎಂದರೆ ಸಂನ್ಯಾಸೀ. ಅದರ ಭಾವರೂಪ ಪಾರಿವ್ರಾಜ್ಯ-ಸಂನ್ಯಾಸಿ ಧರ್ಮ ಅಥವಾ ಸಂನ್ಯಾಸಿಕರ್ಮ, ಅದರಲ್ಲಿ ಅಧಿರಾಜ-ಶ್ರೇಷ್ಠರಾದ ಎಂದರ್ಥ. ಅಥವಾ ಪಾರಿವ್ರಾಜ್ಯ-ಸಂನ್ಯಾಸಾಶ್ರಮ, ಅದರಲ್ಲಿ ಅಧಿರಾಜ ಎಂದರೆ ಸಮ್ರಾಟ್-(ಕಕ)ಸಂನ್ಯಾಸ ಸಾಮ್ರಾಜ್ಯ ಸಾರ್ವಭೌಮರೆಂದರ್ಥ. 1) ಸಂನ್ಯಾ-ಸಾಶ್ರಮಕ್ಕೆ ಅಧಿಪತಿಗಳಾಗಿ, 2) ಸಂನ್ಯಾಸಿಗಳಿಗೆ ಅಧಿಪತಿಗಳಾಗಿ ಅಥವಾ ಸಂನ್ಯಾಸಧರ್ಮದಲ್ಲಿ ಸರ್ವಶ್ರೇಷ್ಠರಾಗಿ, 3) ವ್ಯತನುತ-ವಿಸ್ತರಿಸಿದಿರಿ. ವಿ+ತನು ವಿಸ್ತಾರೇ ಧಾತುವಿನ ಲಙ್, ಆತ್ಮನೇಪದರೂಪ.

ಙ) ದಂಡಾನ್ವಯ—(ಹೇ ಶ್ರೀಮದಾನಂದತೀರ್ಥ !) ೧) ಭವಾನ್ a) ವಿಶುದ್ಧೇ, b) ದ್ವಿಜಗಣನಿಲಯೇ, c) ತ್ರಿಭುವನವಿಶದೇ, d) ರೌಪ್ಯ-ಪೀಠಾಭಿಧಾನೇ, e) ಕ್ಷೇತ್ರೇ ತತ್ರಾಪಿ ಮಧ್ಯಗೇಹಾಖ್ಯಗೇಹೇ ಬ್ರಾಹ್ಮಣ-ಜಾತಿಃ ಭೂತ್ವಾ, ೨) ಪಾರಿವ್ರಾಜ್ಯಾಧಿರಾಜಃ (ಸನ್), ೩) ಪುನರಪಿ ಬದರೀಂ ಪ್ರಾಪ್ಯ, ೪) ಕೃಷ್ಣಂ ಚ ನತ್ವಾ, ೫) ಭಾಷ್ಯಾಣಿ ಕೃತ್ವಾ, ೬) ಭಾರತಾರ್ಥಪ್ರಕಾಶಂ ಚ ಸಮ್ಯಕ್ ವ್ಯತನುತ ॥

ಚ) ಅನ್ವಯಾರ್ಥ (ವಾಯುಪರವಾಗಿ)—(ಹೇ ಶ್ರೀಮದಾ-ನಂದತೀರ್ಥ–ಹೇ ಶ್ರೀಮನ್ಮಧ್ವಾಚಾರ್ಯರೇ !) ೧) ಭವಾನ್–ತಾವು; a) ವಿಶುದ್ಧೇ–ಪವಿತ್ರವಾದ; b) ದ್ವಿಜಗಣನಿಲಯೇ—ದ್ವಿಜ–ಬ್ರಾಹ್ಮಣರ, ಗಣ–ಗುಂಪುಗಳಿಗೆ, ನಿಲಯೇ–ಆಶ್ರಯವಾಗಿದ್ದ; c) ತ್ರಿಭುವನವಿಶದೇ–ಮೂರು ಲೋಕದಲ್ಲೂ ಪ್ರಸಿದ್ಧವಾದ; d) ರೌಪ್ಯಪೀಠ–ರಜತಪೀಠ (ಪಾಜಕ ಕ್ಷೇತ್ರ)ವೆಂದು, ಅಭಿಧಾನೇ–ಹೆಸರುಳ್ಳ; ಕ್ಷೇತ್ರೇ–ಕ್ಷೇತ್ರದಲ್ಲಿ; ತತ್ರಾಪಿ–ಅಲ್ಲಿಯೂ ಸಹ, ಮಧ್ಯಗೇಹ-ಆಖ್ಯ–ಮಧ್ಯಗೇಹಭಟ್ಟರೆಂಬುವರ, ಗೇಹೇ–ಮನೆಯಲ್ಲಿ (ಪತ್ನಿಯಲ್ಲಿ); ಬ್ರಾಹ್ಮಣಜಾತಿಃ–ಬ್ರಾಹ್ಮಣರಾಗಿ; ಭೂತ್ವಾ–ಅವತರಿಸಿ; ೨) ಪಾರಿವ್ರಾಜ್ಯಾಧಿರಾಜಃ (ಸನ್)–ಸಂನ್ಯಾಸಾಶ್ರಮಕ್ಕೆ ಅಧಿಪತಿಗಳಾಗಿ, ಸಂನ್ಯಾಸಸಾಮ್ರಾಜ್ಯಕ್ಕೆ ಸಾರ್ವಭೌಮರಾಗಿ ಅಥವಾ ಸಂನ್ಯಾಸ-ಧರ್ಮದಲ್ಲಿ ಶ್ರೇಷ್ಠರಾಗಿ; ೩) ಪುನಃ ಅಪಿ–(ಸೂತ್ರಭಾಷ್ಯರಚನೆ ಮಾಡುವು-ದಕ್ಕೆ ಮುಂಚೆ ಒಂದು ಸಾರಿ ಹೋಗಿದ್ದರೂ) ಮತ್ತೊಂದು ಸಾರಿ; ಬದರೀಂ ಪ್ರಾಪ್ಯ–ಬದರಿಕಾಶ್ರಮಕ್ಕೆ ಹೋಗಿ; ೪) ಕೃಷ್ಣಂ ಚ–ವೇದವ್ಯಾಸರನ್ನು; ನತ್ವಾ–ನಮಸ್ಕರಿಸಿ; ೫) ಭಾಷ್ಯಾಣಿ–ಗೀತಾಭಾಷ್ಯ-ಋಗ್ಭಾಷ್ಯ-ಉಪನಿಷ-ದ್ಭಾಷ್ಯಗಳನ್ನು, ಕೃತ್ವಾ–ಮಾಡಿ (ರಚಿಸಿ); ೬) ಭಾರತಾರ್ಥಪ್ರಕಾಶಂ ಚ–ಮಹಾಭಾರತದ ಒಳರ್ಥವನ್ನು ಪ್ರಕಟಿಸುವ 'ಶ್ರೀಮನ್ಮಹಾಭಾರತತಾತ್ಪರ್ಯ-ನಿರ್ಣಯ'ವೆಂಬ ಗ್ರಂಥವನ್ನೂ ಕೂಡ; ಸಮ್ಯಕ್–ಚೆನ್ನಾಗಿ, ವ್ಯತನುತ–ವಿರಚಿಸಿದಿರಿ.

ಛ) ಭಾವಾರ್ಥ—ಹೇ ಶ್ರೀ ಭಗವತ್ಪಾದಾಚಾರ್ಯರೇ, ಭಗವಂತ-ನಿಂದ ಜ್ಞಾನೋದ್ಧಾರ ಮಾಡುವುದಕ್ಕಾಗಿ ಅವತಾರ ಮಾಡೆಂದು ಆಜ್ಞಪ್ತರಾದ

ತಾವು ಅದೇ ಪ್ರಕಾರ ಉಡುಪಿಗೆ ಸಮೀಪದಲ್ಲಿರುವ ಪಾಜಕಕ್ಷೇತ್ರವೆಂಬ ಪುಣ್ಯಭೂಮಿಯಲ್ಲಿ ಅವತಾರ ಮಾಡಿದಿರಿ. ಅದೊಂದು ಪವಿತ್ರವಾದ ಕ್ಷೇತ್ರ. ಅನೇಕ ಬ್ರಾಹ್ಮಣಕುಟುಂಬಗಳು ಅಲ್ಲಿ ನೆಲೆಸಿದ್ದುವು. ಆ ಕ್ಷೇತ್ರದ ಮಹಿಮೆ ಮೂರು ಲೋಕಗಳಲ್ಲೂ ಪ್ರಖ್ಯಾತವಾಗಿತ್ತು. ಆ ಪುಣ್ಯತಮ ನಾಡಿನಲ್ಲಿಯೇ ಮಧ್ಯಗೇಹಭಟ್ಟರೆಂಬ ಸದ್ಬ್ರಾಹ್ಮಣರು ವಾಸವಾಗಿದ್ದರು. ಅವರ ಮನೆ-ಯಲ್ಲೇ ತಾವು ಜನ್ಮವೆತ್ತಿದಿರಿ. ಬಾಲ್ಯಕೌಮಾರಾದ್ಯವಸ್ಥೆಗಳನ್ನು ಕಳೆದು ಉಪನೀತರಾಗಿ ವಿದ್ಯಾಧ್ಯಯನವನ್ನೂ ಮಾಡಿದಿರಿ. ಕೊನೆಗೆ ಸಂನ್ಯಾಸಗ್ರಹಣ ಮಾಡಿ ಸಂನ್ಯಾಸಸಾಮ್ರಾಜ್ಯಕ್ಕೇ ಚಕ್ರವರ್ತಿಗಳಾದಿರಿ. ಒಂದ ಸರಿ ಬದರೀಗೆ ಹೋಗಿ ವೇದವ್ಯಾಸರನ್ನು ಕಂಡು ಅವರ ಅಪ್ಪಣೆಯಂತೆ ಬ್ರಹ್ಮಸೂತ್ರಭಾಷ್ಯ-ವನ್ನು ರಚಿಸಿದಿರಿ. ಪುನಃ ಮತ್ತೊಂದು ಸರಿ ಬದರಿಗೆ ಹೋಗಿ ವೇದವ್ಯಾಸರ ದರ್ಶನ ಮಾಡಿಕೊಂಡು ಅವರಿಗೆ ನಮಸ್ಕಾರ ಮಾಡಿ ಬಂದಿರಿ. ಅಲ್ಲಿಂದ ಬಂದು ಋಗ್ಭಾಷ್ಯವನ್ನೂ ಉಪನಿಷದ್ಭಾಷ್ಯಾದಿ ಇತರ ಗ್ರಂಥಗಳನ್ನೂ ರಚಿಸಿ-ದಿರಿ. ಕೊನೆಗೆ ಭಾರತದ ಗೂಢಾರ್ಥಗಳನ್ನು ಪ್ರಕಟಿಸುವ 'ಶ್ರೀಮನ್ಮಹಾ-ಭಾರತತಾತ್ಪರ್ಯನಿರ್ಣಯ'ವೆಂಬ ಬೃಹದ್ಗ್ರಂಥವನ್ನೂ ರಚಿಸಿದಿರಿ. ಹೀಗೆ ಮೂವತ್ತೇಳು ಮೂಲಗ್ರಂಥಗಳನ್ನು ರಚಿಸಿ ಅನಾದಿ ಸತ್ಸಂಪ್ರದಾಯ-ಪರಂಪರಾಪ್ರಾಪ್ತವಾದ ಶ್ರೀಮದ್ವೈಷ್ಣವಸಿದ್ಧಾಂತವನ್ನು ಭೂಮಂಡಲದಲ್ಲಿ ಸ್ಥಿರವಾಗಿ ಸ್ಥಾಪಿಸಿದಿರಿ—ಎಂದು ಭಾವ.

ಜ) ಗು.ಸಾ.ದಲ್ಲಿ ಹೇಳಿದ ಹೆಚ್ಚಿನ ವಿಷಯಗಳು—ಶ್ರೀಮದಾ-ಚಾರ್ಯರು ಅವತರಿಸಿದ ಕ್ಷೇತ್ರಕ್ಕೆ 'ವಿಶುದ್ಧೇ ತ್ರಿಭುವನವಿದಿತೇ' ಇತ್ಯಾದಿ ವಿಶೇಷಣಗಳನ್ನು ಕೊಟ್ಟಿರುವುದರ ಮಹತ್ವವನ್ನು ಗು.ಸಾ.ದಲ್ಲಿ ಕ್ಷೇತ್ರದ ಮಹಿಮೆ ಹೇಳಿ ಸ್ಪಷ್ಟಪಡಿಸಿದ್ದಾರೆ. ಅದನ್ನು ಸಂಗ್ರಹಿಸಿ ಹೀಗೆ ಹೇಳಬಹುದು.

ಉಡುಪಿ ಕ್ಷೇತ್ರದ ಮಹಿಮೆ—ಉಡುಪಿ ಇರುವ ದಕ್ಷಿಣ ಕನ್ನಡ ಜಿಲ್ಲೆ ಮೊದಲಾದ ಭಾಗಗಳು ಪಶ್ಚಿಮ ಘಟ್ಟಗಳ ಕೆಳಗೆ ಸಮುದ್ರತೀರದವರೆಗೆ ಹರಡಿರುವ ತೀರಪ್ರದೇಶವಾಗಿವೆ. ಈ ಪ್ರದೇಶಕ್ಕೆ 'ಪರಶುರಾಮಕ್ಷೇತ್ರ'ವೆಂದು ಹೆಸರು. ಈ ಹೆಸರು ಬರಲು ಒಂದು ಆಖ್ಯಾಯಿಕೆ ಇದೆ. ಪರಶುರಾಮ-ದೇವರು ಇಪ್ಪತ್ತೊಂದು ಸಾರಿ ಭೂಮಿಯನ್ನು ಸುತ್ತಿ ದುಷ್ಟಕ್ಷತ್ರಿಯರನ್ನು

ನಾಶ ಮಾಡಿದ ಮೇಲೆ (ಅವರಿಗೆ ಸ್ವತಃ ಪಾಪಲೇಪವಿಲ್ಲವಾದರೂ ಲೋಕಶಿಕ್ಷ-ಣಾರ್ಥ) ಆ ದೋಷಪರಿಹಾರಕ್ಕಾಗಿ ಸ್ಯಮಂತಪಂಚಕದಲ್ಲಿ ಯಾಗವನ್ನು ಮಾಡಿ ತಾವು ಗೆದ್ದಿದ್ದ ಭೂಮಿಯನ್ನೆಲ್ಲಾ ಬ್ರಾಹ್ಮಣರಿಗೆ ದಾನ ಮಾಡಿದರು. ಆದರೆ ತಮಗೆ ನೆಲೆ ಬೇರೆ ಸ್ಥಳ ನಿರ್ಮಿಸುವುದಕ್ಕಾಗಿ ಗೋಕರ್ಣದ ಸಮೀಪ-ದಲ್ಲಿರುವ ಸಹ್ಯಾದ್ರಿಯ ಮೇಲೆ ನಿಂತು ತಮ್ಮ ಕೊಡಲಿಯನ್ನು ಸಮುದ್ರದ ಕಡೆಗೆ ಎಸೆಯಲು ಅದು ರಾಮೇಶ್ವರದ ಸಮೀಪದಲ್ಲಿ ಬಿತ್ತು ಮತ್ತು ಗುಡ್ಡದ ಹಿಂದಕ್ಕೆ ಸಮುದ್ರವೂ ಹಿಂದಕ್ಕೆ ಸರಿದುಬಿಟ್ಟಿತು. ಆದ್ದರಿಂದಲೇ ಘಟ್ಟದ ಕೆಳಗಿನ ಈ ಪ್ರದೇಶಕ್ಕೆ ಪರಶುರಾಮ ಕ್ಷೇತ್ರ ಎಂಬ ಹೆಸರು ಬಂತು. ಇದು ಮೊದಲು ಸಮುದ್ರಾಕ್ರಾಂತವಾಗಿದ್ದುದರಿಂದ ಈ ಕ್ಷೇತ್ರ ಅತಿ ಪರಿಶುದ್ಧ-ವಾದುದು. ಇದನ್ನೇ ಈ ಶ್ಲೋಕದಲ್ಲಿರುವ 'ಕ್ಷೇತ್ರೇ ವಿಶುದ್ಧೇ' ಎಂಬ ಪದಗಳು ತಿಳಿಸುತ್ತವೆ.

ಪರಶುರಾಮದೇವರು ಉಡುಪಿಗೆ ಬಂದು ಅಲ್ಲಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು ಎಂಟು ಮೈಲಿ ದೂರದಲ್ಲಿರುವ ಪಾಜಕ ಕ್ಷೇತ್ರದಲ್ಲಿರುವ ಒಂದು ಬೆಟ್ಟದಲ್ಲಿ ನೆಲೆಸಿದರು. ಅದನ್ನು ನೋಡಿ ದುರ್ಗಾದೇವಿಯೂ ಒಂದು ರೂಪ-ದಿಂದ ಆ ಬೆಟ್ಟಕ್ಕೆ ಪೂರ್ವದಲ್ಲಿರುವ ಒಂದು ಬೆಟ್ಟದಲ್ಲಿ ಬಂದು ನೆಲೆಸಿದಳು. ಆದ್ದರಿಂದ ಈ ಕ್ಷೇತ್ರವು ಅತ್ಯಂತ ಪಾವನವಾಯಿತು. ಇದನ್ನೇ 'ತ್ರಿಭುವನ ವಿ(ದಿತೇ)ಶದೇ' ಎಂಬ ವಿಶೇಷಣ ತಿಳಿಸುತ್ತದೆ.

ರೌಪ್ಯಪೀಠ—ರಾಮಭೋಜ ಎಂಬ ರಾಜನು ಉಡುಪಿಯಲ್ಲಿರುವ ಚಂದ್ರೇಶ್ವರನಿಗೆ ಬೆಳ್ಳಿಯ ರಾಶಿಯನ್ನು ಸಮರ್ಪಿಸಿ ಆ ರಾಶಿಬೆಳ್ಳಿಯಿಂದ ಆ ದೇವಾಲಯದ ಸುತ್ತಲೂ ಮೂರು ಮೈಲಿ ದೂರ ಭೂಮಿಯ ಅಡಿಯಲ್ಲಿ ಬೆಳ್ಳಿಯ ಪ್ರಾಕಾರವನ್ನು ನಿರ್ಮಾಣ ಮಾಡಿಸಿದನು. ಈ ಪ್ರಾಕಾರದ ನಾಲ್ಕು ಮೂಲೆಗಳಲ್ಲಿ ನಾಗಪ್ರತಿಷ್ಠೆಯನ್ನೂ ಮಾಡಿಸಿದನು. ಆ ಬೆಳ್ಳಿಯ ಪ್ರಾಕಾರವು ಚಂದ್ರೇಶ್ವರನಿಗೆ ಪೀಠದಂತೆ ಶೋಭಿಸುತ್ತಿರುವುದರಿಂದ ಈ ಕ್ಷೇತ್ರಕ್ಕೆ ರೌಪ್ಯ-ಪೀಠ (ರೌಪ್ಯ–ಬೆಳ್ಳಿಯ) ಎಂಬ ಹೆಸರು ಬಂತು. ಇದೇ ಹೆಸರು ಕನ್ನಡದಲ್ಲಿ ಶಿವಬೆಳ್ಳಿಪೀಠ ಎಂದಾಯಿತು ; ಇದರ ರೂಪಾಂತರವೇ (ಅಪಭ್ರಂಶರೂಪವೇ) ಶಿವಳ್ಳಿ ಎಂದಾಗಿದೆ. ಈ ಕಾರಣದಿಂದಲೂ ಈ ಕ್ಷೇತ್ರಕ್ಕೆ ಪ್ರಾಶಸ್ತ್ಯ ಬಂದಿದೆ.

ಈ ಕ್ಷೇತ್ರದಲ್ಲಿ ಈಗಲೂ ಅನೇಕ ಜನ ವೇದಾಧ್ಯಯನಸಂಪನ್ನರಾದ ಬ್ರಾಹ್ಮಣರು ವಾಸಿಸುತ್ತಿರುವುದರಿಂದ 'ದ್ವಿಜಗಣನಿಲಯೇ' ಎಂಬ ವಿಶೇಷಣವೂ ಹೊಂದಿಕೆಯಾಗಿದೆ.

ಗು.ಸಾ.ದಲ್ಲಿ ಶ್ರೀ ಮಧ್ವಾಚಾರ್ಯರ ಚರಿತ್ರೆಯ ಬಗ್ಗೆಯೂ ಕೆಲವು ಅಂಶಗಳನ್ನು ಕೊಟ್ಟಿದ್ದಾರೆ. ಕೆಲವು ಮುಖ್ಯಾಂಶಗಳನ್ನು ಸಂಗ್ರಹಿಸಬಹುದು. 'ಮಧ್ಯಗೇಹ' ಎಂಬುದಕ್ಕೆ 'ನಡ್ಡಂತಿಲ್ಲಾಯ' ಎಂದು ತುಳುವರು ಹೇಳುತ್ತಾರೆ. ಮಧ್ಯಗೇಹಭಟ್ಟರ ಮನೆಯಲ್ಲಿ ವಾಯುದೇವರು ಹುಟ್ಟಿದರು. ಬಾಲ್ಯದಲ್ಲಿ ಅವರಿಗೆ ವಾಸುದೇವ ಎಂಬ ಹೆಸರಿತ್ತು. ಅವರಿಗೆ ಏಳನೇ ವರ್ಷದಲ್ಲಿ ಉಪನಯನವಾಯಿತು. ಆಮೇಲೆ ಆ ಬಾಲಕನು ಒಂದು ರೂಪದಿಂದ, ವೇಂಕಟೇಶ ಮಾಹಾತ್ಮ್ಯೆಯಲ್ಲಿ ಹೇಳಿದಂತೆ, ಬದರಿಗೆ ಹೋಗಿ ವೇದವ್ಯಾಸರಲ್ಲಿ ವಿದ್ಯಾಭ್ಯಾಸ ಮಾಡಿದನು. (ಸಪ್ತಸಂವತ್ಸರಾದೂರ್ಧ್ವಂ ಗತ್ವಾ ಬದರಿಕಾಶ್ರಮಮ್ । .... ವ್ಯಾಸದೇವಾನ್ಮಹಾತ್ಮನಃ । ಅವಾಪ್ತಸರ್ವಶಾಸ್ತ್ರೋಽಸೌ). ಆಮೇಲೆ ಅನಂತೇಶ್ವರ ದೇವಾಲಯದಲ್ಲಿದ್ದ ಅಚ್ಯುತಪ್ರೇಕ್ಷಾಚಾರ್ಯರಿಂದ ಸಂನ್ಯಾಸಾಶ್ರಮವನ್ನು ಪಡೆದು ಮೊದಲು 'ಪೂರ್ಣಪ್ರಜ್ಞ' ಎಂದೂ ಅನಂತರ 'ಆನಂದತೀರ್ಥ' ಎಂದೂ ಪ್ರಖ್ಯಾತರಾದರು. ಆ ಅಚ್ಯುತಪ್ರೇಕ್ಷಾಚಾರ್ಯರಿಗೇ ಸೂತ್ರಭಾಷ್ಯವನ್ನು ತಿಳಿಸಿದರಲ್ಲದೆ ಅವರಿಗೆ ದಿವ್ಯಜ್ಞಾನವನ್ನೂ ಕರುಣಿಸಿದರು. ಇದರಂತೆ ಪದ್ಮನಾಭತೀರ್ಥ, ನರಹರಿತೀರ್ಥ, ಹೃಷಿಕೇಶತೀರ್ಥರೇ ಮೊದಲಾದ ಅಸಂಖ್ಯಸಂನ್ಯಾಸಿಗಳಿಗೂ ಬ್ರಹ್ಮಚಾರಿ-ಗೃಹಸ್ಥರಿಗೂ ಜ್ಞಾನದಾನಮಾಡಿದರು. ಅಲ್ಲದೆ ಪ್ರವಚನ ಮುಂತಾದ ಸಂನ್ಯಾಸಧರ್ಮಗಳನ್ನು ಸ್ವತಃ ಅನುಷ್ಠಾನ ಮಾಡುತ್ತಾ ಶಿಷ್ಯರಾದ ಇತರ ಸಂನ್ಯಾಸಿಗಳಿಂದಲೂ ಮಾಡಿಸುತ್ತಾ ಇದ್ದುದರಿಂದ 'ಪಾರಿವ್ರಾಜ್ಯಾಧಿರಾಜ' ಅಥವಾ 'ಸಂನ್ಯಾಸಿಚಕ್ರವರ್ತಿ'ಗಳೆನಿಸಿದರು.

ಸಂನ್ಯಾಸಾಶ್ರಮವಾದ ಬಳಿಕ (ಎರಡನೇ ಸಲ) ಬದರಿಕಾಶ್ರಮಕ್ಕೆ ಹೋದಾಗ 'ಗೀತಾಭಾಷ್ಯ'ವನ್ನು ವೇದವ್ಯಾಸರಲ್ಲಿ ಅರ್ಪಿಸಿದರು. ವ್ಯಾಸರ ಅಪ್ಪಣೆಯಂತೆ ಸೂತ್ರಭಾಷ್ಯವನ್ನು ರಚಿಸಿದರು. ಮತ್ತೊಮ್ಮೆ ಬದರಿಕಾಶ್ರಮಕ್ಕೆ ಹೋಗಿದ್ದಾಗ, ಅವರ ಅಪ್ಪಣೆಯಂತೆ 'ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ'ವನ್ನು ರಚಿಸಿದರು. (ಇಷ್ಟೆಲ್ಲಾ ಬರೆದು ಈ ರೀತಿ ಸೂಚನೆ

ಕೊಟ್ಟಿದ್ದಾರೆ—ಈ ಭಾವವು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪತಿ-ತೀರ್ಥರ ವ್ಯಾಖ್ಯಾನವನ್ನು ಅವಲಂಬಿಸಿ ಬರೆಯಲ್ಪಟ್ಟಿದೆ. ಇತರ ವ್ಯಾಖ್ಯಾನ-ಕಾರರು ಸಂನ್ಯಾಸಾಶ್ರಮಕ್ಕಿಂತ ಪೂರ್ವದಲ್ಲಿ ಬದರೀ ಕ್ಷೇತ್ರಕ್ಕೆ ಹೋದಂತೆ ಬರೆಯಲಿಲ್ಲ. ಸನ್ನ್ಯಾಸಾಶ್ರಮ ಸ್ವೀಕಾರಾನಂತರ ಎರಡಾವರ್ತಿ ಬದರಿಗೆ ಹೋಗಿರುವುಡರಿಂದ 'ಪುನರಪಿ' ಹೋದಂತೆ ಬರೆದಿರುವರು.)

ಝು) ಹೆಚ್ಚಿನ ವಿಷಯ— ತಾತ್ಪರ್ಯನಿರ್ಣಯದ ಕಡೆಯಲ್ಲಿ ಶ್ರೀ ಮಧ್ವಾಚಾರ್ಯರು ತಾವೇ 'ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ ಪೃಥಕ್ ಪೃಥಕ್ ಚೋಪನಿಷತ್ ಸುಭಾಷ್ಯಮ್। ಕೃತ್ವಾ....ಸದ್ಭಾರತಾರ್ಥಪ್ರತಿಪಾದ-ನಾಯ। ಗ್ರಂಥಂ ಚಕಾರೇಮಂ' (೩೨/೧೭೫-೬) ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದೆ ಅದೇ ಪ್ರಸಂಗದಲ್ಲಿ ೧೭೩ನೇ ಶ್ಲೋಕದಲ್ಲಿ 'ತದ್ಬ್ರಹ್ಮ-ಸೂತ್ರಾಣಿ ಚಕಾರ' ಎಂದು ಬಂದಿರುವುದರಿಂದ 'ಭಾಷ್ಯವರಂ' ಎಂದರೆ 'ಬ್ರಹ್ಮಸೂತ್ರಭಾಷ್ಯವರಂ' ಎಂದೇ ಅರ್ಥವಾಗುತ್ತದೆ. ಅದರಂತೆ—'ವೇದ-ವ್ಯಾಸರ ಆಜ್ಞೆಯಿಂದಲೇ ಬ್ರಹ್ಮಸೂತ್ರಭಾಷ್ಯವನ್ನು ರಚಿಸಿ, ಉಪನಿಷತ್-ಭಾಷ್ಯಗಳನ್ನೂ (ಪೃಥಕ್ ಎಂದದ್ದರಿಂದಲೂ, 'ಸು' ಎಂದದ್ದರಿಂದಲೂ) ಗೀತಾಭಾಷ್ಯಗಳನ್ನೂ ಬೇರೆ ಬೇರೆ ಬರೆದು, ಮಹಾಭಾರತದ ಗೂಢಾರ್ಥವನ್ನು ತಿಳಿಸುವುದಕ್ಕಾಗಿಯೇ ಈ ಭಾರತತಾತ್ಪರ್ಯನಿರ್ಣಯ ಗ್ರಂಥವನ್ನೂ' ರಚಿಸಿರು-ವುದಾಗಿ ಹೇಳಿಕೊಂಡಿದ್ದಾರೆ. ಅಲ್ಲೇ ಪ್ರಥಮಾಧ್ಯಾಯದ ಕಡೆಯಲ್ಲಿ (೧/೧೩೮-೪೦) 'ವಿಷ್ಣ್ವಾಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ। ಆನಂದತೀರ್ಥಮುನಿನಾ .... । ತಾತ್ಪರ್ಯಂ .... ಮಯಾ ಪ್ರೋಕ್ತಮ್।' 'ಶ್ರೀವಿಷ್ಣುವಿನ ಆಜ್ಞೆಯಿಂದಲೇ ಅವನ ಅನುಗ್ರಹವಿಶೇಷದಿಂದ ಸಕಲವನ್ನೂ ತಿಳಿದ (ವಿದುಷಾ) ನನ್ನಿಂದ ಸಮಸ್ತಶಾಸ್ತ್ರಗಳ ತಾತ್ಪರ್ಯವು ಹೇಳಲ್ಪಟ್ಟಿತು' ಎಂದು ಹೇಳಿಕೊಂಡಿರುವುದರಿಂದ ಈ ಗ್ರಂಥ (ತಾತ್ಪರ್ಯನಿರ್ಣಯ)ವನ್ನು ಬರೆಯಲು ವೇದವ್ಯಾಸರೇ ಅಪ್ಪಣೆ ಮಾಡಿದರೆಂದು ಸ್ಪಷ್ಟವಾಗುತ್ತದೆ. ಈ ಶ್ಲೋಕದಲ್ಲಿ 'ಕೃತ್ವಾ ಭಾಷ್ಯಾಣಿ ಸಮ್ಯಗ್' ಎಂದು ಪ್ರಸಕ್ತಿ ಬಂದಿರುವುದ-ರಿಂದ ಆಚಾರ್ಯರ ಸಕಲ ಗ್ರಂಥಗಳ ಸಂಕ್ಷಿಪ್ತ ಪರಿಚಯ ಮಾಡಿಸುತ್ತೇನೆ.

ಞ) ಸರ್ವಮೂಲ ಗ್ರಂಥಗಳು—ಮಧ್ವಶಾಸ್ತ್ರಗ್ರಂಥಗಳಲ್ಲಿ ಮೂರು ಪಂಗಡ ಇದೆ. ೧) ಗೀತಾ-ಉಪನಿಷದಾದಿ ಶ್ರುತಿ-ಸ್ಮೃತಿಗಳಿಗೆ ಶ್ರೀಮದಾಚಾರ್ಯರು ಬರೆದ ಭಾಷ್ಯಗಳು. ಶ್ರೀಮದಾಚಾರ್ಯರ ಈ ಎಲ್ಲ ಕೃತಿಗಳಿಗೂ 'ಮೂಲಗ್ರಂಥ'ಗಳೆಂದೇ ರೂಢಿಯ ಹೆಸರು. ಇವೇ ಮೂವತ್ತೇಳು (೩೭) ಗ್ರಂಥಗಳಿವೆ. ೨) ಮೂಲಗ್ರಂಥಗಳಿಗೆ ಎಂದರೆ ಆಚಾರ್ಯರ ಭಾಷ್ಯಾದಿ ಗ್ರಂಥಗಳಿಗೆ ಬರೆಯಲ್ಪಟ್ಟ ಟೀಕಾಗ್ರಂಥಗಳು. ಟೀಕಾಗ್ರಂಥಗಳಲ್ಲೆಲ್ಲಾ ಶ್ರೀಮಜ್ಜಯತೀರ್ಥರೆಂಬ ಟೀಕಾಚಾರ್ಯರು ಬರೆದ ಟೀಕೆಗಳೇ ಅತ್ಯಂತ ಪ್ರಸಿದ್ಧ ; ಅವರು ಆಚಾರ್ಯರ ಇಪ್ಪತ್ತೇಳು ಗ್ರಂಥಗಳಿಗೆ ಮಾತ್ರ ಪೂರ್ಣವಾಗಿಯೂ ನ್ಯಾಯವಿವರಣಕ್ಕೆ ಪ್ರಥಮಾಧ್ಯಾಯದ ಮೂರು ಪಾದಗಳಿಗೆ ಮಾತ್ರವೂ ಟೀಕೆ ಬರೆದಿದ್ದಾರೆ. ಆ ಗ್ರಂಥಗಳಲ್ಲೆಲ್ಲಾ 'ಅನು-ವ್ಯಾಖ್ಯಾನ'ಕ್ಕೆ ಬರೆದ 'ಶ್ರೀಮನ್ನ್ಯಾಯಸುಧಾ'ಟೀಕೆಯೇ ಅತ್ಯಂತ ದೊಡ್ಡದೂ ಮಹತ್ತರವೂ ಪ್ರಸಿದ್ಧವೂ ಆಗಿದೆ. ೩) ಟೀಕಾಗ್ರಂಥಗಳ ಅರ್ಥವನ್ನು ವಿವರಿಸುವ ಗ್ರಂಥಗಳಿಗೆ 'ಟಿಪ್ಪಣಿ'ಗಳೆಂದು ಹೆಸರು. ಟಿಪ್ಪಣಿಕಾರರಲ್ಲಿ ವೇದೇಶತೀರ್ಥರು, ಯಾದುಪತ್ಯ, ಛಲಾರಿ, ಭಾವಬೋಧಕಾರರು (ರಘೂ-ತ್ತಮ ಸ್ವಾಮಿಗಳು) ಮತ್ತು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು ಬಹಳ ಪ್ರಸಿದ್ಧರು. ವ್ಯಾಸರಾಯರ 'ತಾತ್ಪರ್ಯಚಂದ್ರಿಕೆ'ಯೂ ಇದೇ ರೀತಿ ಸೂತ್ರಭಾಷ್ಯದ ಟೀಕೆಯಾದ 'ತತ್ವಪ್ರಕಾಶಿಕಾ'ಕ್ಕೆ ಬರೆದ ಟಿಪ್ಪಣಿಯೇ ಆದರೂ ಬಹು ಪ್ರೌಢಗ್ರಂಥ, ಅದರ ಸ್ಥಾನವೇ ಬೇರೆ.

ಟ) ಪ್ರಸ್ಥಾನತ್ರಯ ಗ್ರಂಥಗಳು—'ಪ್ರಸ್ಥಾನ' ಎಂದರೆ 'ಹೊರಡು-ವಿಕೆ, ಪ್ರಯಾಣ ಆರಂಭ' ಎಂದರ್ಥ. ವೇದಾಂತರಹಸ್ಯವೆಲ್ಲಾ ಭಗವದ್ಗೀತೆ, ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳಿಂದಲೇ ಆರಂಭವಾಗಿದೆ. ಆದ್ದರಿಂದ ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಮೂರು ಸಿದ್ಧಾಂತಗಳಲ್ಲೂ ಈ 'ಪ್ರಸ್ಥಾನ-ತ್ರಯ ಭಾಷ್ಯ' ಪ್ರಸಿದ್ಧಿಗೆ ಬಂದಿದೆ. ಶ್ರೀಮದಾಚಾರ್ಯರು 1) ಗೀತಾ-ಭಾಷ್ಯ, 2) ಗೀತಾತಾತ್ಪರ್ಯನಿರ್ಣಯ ಎಂದು ಗೀತೆಯ ಮೇಲೆ ಎರಡು ಗ್ರಂಥ ಬರೆದಿದ್ದಾರೆ—ಇದು ಗೀತಾಪ್ರಸ್ಥಾನ. ಬ್ರಹ್ಮಸೂತ್ರಗಳ ವಿವರಣ-ರೂಪವಾಗಿ ೧) ಸೂತ್ರಭಾಷ್ಯ, ೨) ಅನುವ್ಯಾಖ್ಯಾನ, ೩) ನ್ಯಾಯವಿವರಣ,

೪) ಅಣುಭಾಷ್ಯ ಎಂದು ನಾಲ್ಕು ಗ್ರಂಥ ಬರೆದಿದ್ದಾರೆ— ಇದು ಸೂತ್ರಪ್ರಸ್ಥಾನ. ಉಪನಿಷತ್ತುಗಳಲ್ಲಿ i) ಈಶ, ii) ಕೇನ (ತಲವಕಾರ), iii) ಕಠ, iv) ಮುಂಡಕ (ಆಥರ್ವಣ), v) ಮಾಂಡೂಕ್ಯ, vi) ಷಟ್‌ಪ್ರಶ್ನ, vii) ತೈತ್ತಿರೀಯ, viii) ಐತರೇಯ, ix) ಛಾಂದೋಗ್ಯ, x) ಬೃಹದಾರಣ್ಯಕ ಈ ಹತ್ತಕ್ಕೆ ಮಾತ್ರ ಆಚಾರ್ಯರು ಭಾಷ್ಯ ಬರೆದಿದ್ದಾರೆ. ಇದಲ್ಲದೆ ಋಗ್ವೇದದ ಪ್ರಥಮ ಮಂಡಲದ ನಲವತ್ತು ಸೂಕ್ತಗಳಿಗೆ ಭಾಷ್ಯ ಬರೆದಿದ್ದಾರೆ; ಇದೇ ಋಗ್ಭಾಷ್ಯ. ಈ ಹನ್ನೊಂದನ್ನೂ ಉಪನಿಷತ್ ಪ್ರಸ್ಥಾನಕ್ಕೆ ಸೇರಿಸಬಹುದು. ಹೀಗೆ ಪ್ರಸ್ಥಾನತ್ರಯಕ್ಕೆ ಸೇರಿದಂತೆ 2+4+11=ಹದಿನೇಳು ಗ್ರಂಥಗಳಾದುವು.

ಠ) ದಶಪ್ರಕರಣಗಳು 'ಏಕಾರ್ಥಾವಬೋಧಕಂ ವಾಕ್ಯಂ ಪ್ರಕರಣಂ' ಎಂಬಂತೆ ಒಂದೊಂದು ಸಣ್ಣಸಣ್ಣ ವಿಚಾರಗಳನ್ನು ಬೋಧಿಸುವ ಗ್ರಂಥಗಳಿಗೆ ಪ್ರಕರಣಗಳೆಂದು ಹೆಸರು. ಶ್ರೀಮದಾಚಾರ್ಯರು ಅಂಥಾ ಹತ್ತು ಪ್ರಕರಣಗಳನ್ನು ಬರೆದಿದ್ದಾರೆ—i) ತತ್ವಸಂಖ್ಯಾನ, ii) ತತ್ವವಿವೇಕ, iii) ಮಾಯಾವಾದ ಖಂಡನ, iv) ಉಪಾಧಿಖಂಡನ, v) ಮಿಥ್ಯಾತ್ವಾನುಮಾನ ಖಂಡನ (ಈ ಮೂರನ್ನೂ ಒಟ್ಟಿಗೆ ಸೇರಿಸಿ ಖಂಡನತ್ರಯ ಎಂದೂ ಹೇಳುತ್ತಾರೆ); vi) ಕಥಾಲಕ್ಷಣ, vii) ಪ್ರಮಾಣ ಲಕ್ಷಣ, viii) ತತ್ತ್ವೋದ್ಯೋತ, ix) ಕರ್ಮನಿರ್ಣಯ, x) ವಿಷ್ಣುತತ್ವನಿರ್ಣಯ—ಇವೇ ದಶಪ್ರಕರಣಗಳು.

ಡ) ಇತರ ಗ್ರಂಥಗಳು—a) ಸ್ತೋತ್ರಗಳು—1) ದ್ವಾದಶ ಸ್ತೋತ್ರ, 2) ನಖಸ್ತುತಿ, 3) ಸದಾಚಾರಸ್ಮೃತಿ, 4) ಕೃಷ್ಣಾಮೃತಮಹಾರ್ಣವ. b) ತಂತ್ರಗ್ರಂಥ—1) ತಂತ್ರಸಾರ, 2) ಜಯಂತೀನಿರ್ಣಯ, 3) ಯತಿಪ್ರಣವಕಲ್ಪ. c) ಪುರಾಣ ಗ್ರಂಥಗಳು—1) ಯಮಕಭಾರತ, 2) ಭಾಗವತತಾತ್ಪರ್ಯನಿರ್ಣಯ, 3) ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ—ಹೀಗೆ ಇವೂ ಹತ್ತು. (ಗೀತಾ-2, ಸೂತ್ರ-4, ಉಪನಿಷತ್-11, ಪ್ರಕರಣ-10, ಇತರ 10—ಹೀಗೆ ಒಟ್ಟು ಮೂವತ್ತೇಳು

ಮೂಲಗ್ರಂಥಗಳು). ಹಿಂದೆ ತಿಳಿಸಿದಂತೆ (ಖಂ. 358) ಈ ಶ್ಲೋಕಕ್ಕೆ ಕೇವಲ ವ್ಯಾಸಪರವಾದ ಅರ್ಥವೂ ಇದೆ. ಈಗ ಅದಕ್ಕೆ ಹೋಗೋಣ.

ಘ) ವೇದವ್ಯಾಸಪರವಾಗಿ ಅರ್ಥ—ಕ) ಈ ಅರ್ಥ ಹೇಳುವಾಗ 'ರೂಪ್ಯಪೀಠಾಭಿಧಾನೇ ತತ್ರಾಪಿ' ಎಂಬುದನ್ನು ರೂಪ್ಯಪೀಠ,ಅಭಿಧಾನೇತ-ತ್ರ, ಅಪಿ ಎಂದು ಬಿಡಿಸಬೇಕು. ಅಭಿಧಾನ ಎಂದರೆ ಹೆಸರು, ನಾಮ. 'ಆಖ್ಯಾಹ್ವೇ ಅಭಿಧಾನಂ ಚ ನಾಮಧೇಯಂ ಚ ನಾಮ ಚ' ಅಮರ. ಅಭಿಧಾನಂ ಇತಃ ಪ್ರಾಪ್ತಃ ಅಭಿಧಾನೇತಃ—ಸರ್ವಶಬ್ದವಾಚ್ಯ ಎಂದರ್ಥ. ಸೂತ್ರಭಾಷ್ಯದಲ್ಲಿ (೧/೧/೨೫) 'ಸರ್ವಚ್ಛಂದೋಭಿಧೋ ಹ್ಯೇಷ ಸರ್ವದೇವಾಭಿಧೋ ಹ್ಯಸೌ । ಸರ್ವಲೋಕಾಭಿಧೋ ಹ್ಯೇಷ ತೇಷಾಂ ತದುಪಚಾರತಃ ॥' ಇತಿ ವಾಮನೇ ಎಂದಿದ್ದಾರೆ. ಅದರಂತೆ ಗಾಯತ್ರೀ ಅನುಷ್ಟುಪ್, ತ್ರಿಷ್ಟುಪ್, ಶಕ್ವರೀ, ಬೃಹತೀ ಮೊದಲಾದ ಸಕಲ ಛಂದಸ್ಸುಗಳೂ ಇವನ ಹೆಸರಾಗಿವೆ. ಇಂದ್ರ, ಅಗ್ನಿ, ಯಮ, ವರುಣ ಮೊದಲಾದ ಸಮಸ್ತ ದೇವತೆಗಳ ಹೆಸರುಗಳೂ ಇವನ ಹೆಸರುಗಳೇ. ಭೂಃ, ಭುವಃ, ಸ್ವಃ, ದ್ಯೌಃ, ಮಹಃ, ಜನಃ, ಸತ್ಯಂ ಇತ್ಯಾದಿ ಸರ್ವಲೋಕಗಳ ಹೆಸರುಗಳೂ ಮುಖ್ಯವಾಗಿ ಇವನ (ವಿಷ್ಣುವಿನ) ಹೆಸರುಗಳೇ. ಅವಕ್ಕೆಲ್ಲ-ಅವರಿಗೆಲ್ಲ ಆ ಹೆಸರುಗಳು ಔಪಚಾರಿಕವಾಗಿ ಕೂಡುತ್ತವೆ. ಈ ಪ್ರಮಾಣದಂತೆಯೂ 'ಯೋ ದೇವಾನಾಂ ನಾಮಧಾ ಏಕ ಏವ' 'ಯಾವ ವಿಷ್ಣುವೊಬ್ಬನೇ ಇಂದ್ರಾದಿ ಸಕಲ ದೇವತೆಗಳ ಹೆಸರನ್ನೂ ಧರಿಸಿದ್ದಾನೋ' ಎಂದು ಋಗ್ವೇದದಲ್ಲಿ (೧೦/೮೨/೩) ಹೇಳಿದಂತೆಯೂ ಸಕಲ ಹೆಸರುಗಳಿಂದ ಕೂಡಿದವನಾದ್ದರಿಂದ ಅಭಿಧಾನೇತ ಎಂದರೆ ವಿಷ್ಣು. ತ್ರಾಯತೇ ರಕ್ಷತೀತಿ ತ್ರಃ-ರಕ್ಷಿಸುವವನಾದ್ದರಿಂದ ತ್ರಃ । ಅಭಿಧಾನೇತಶ್ಚಾಸೌ ತ್ರಶ್ಚ ಅಭಿಧಾನೇತ-ತ್ರಃ, ತಸ್ಯ ಸಂಬುದ್ಧಿಃ-ಅಭಿಧಾನೇತ-ತ್ರ-ಸರ್ವ ಹೆಸರುಗಳುಳ್ಳವನೂ ಸರ್ವ ರಕ್ಷಕನೂ ಆದ ಹೇ ವಿಷ್ಣೋ ಎಂದರ್ಥ. ದ್ವಿಜಗಣ ಎಂದರೆ ಈ ಅರ್ಥದಲ್ಲಿ ಗಿಣಿ ಕೋಗಿಲೆ ಮೊದಲಾದ ಪಕ್ಷಿಗಳ ಸಮೂಹ ಎಂದರ್ಥ. 'ಶಕುಂತ-ಪಕ್ಷಿ-ಶಕುನಿ-ಶಕುಂತಿ-ಶಕುನ-ದ್ವಿಜಾಃ' ಅಮರ.

ಖ) ಮಧ್ಯಗೇಹಾಖ್ಯಗೇಹೇ ಎಂಬುದಕ್ಕೂ ವಿಶೇಷಾರ್ಥವಿದೆ. ಮಧ್ಯಂ ಗಚ್ಛತೀತಿ ಮಧ್ಯಗಃ ಎಂಬ ವಿಗ್ರಹದಿಂದ ಮಧ್ಯಗ ಎಂದರೆ ಹೃದಯ

ಮಧ್ಯದಲ್ಲಿರುವ; ಅರ್ಥಾತ್ ಹೃನ್ಮಧ್ಯಸ್ಥನಾದ ವಿಷ್ಣು. ಮಧ್ಯಗೇ ಈಹಾಯಾಃ-ಇಚ್ಛಾಯಾಃ ಈಹಾ—ಇಚ್ಛಾ ಯಸ್ಯ ಸಃ—ಮಧ್ಯಗೇಹಃ। ಈಹಾ ಎಂದರೆ ಇಚ್ಛೆ, ಅಪೇಕ್ಷೆ. ಹೃನ್ಮಧ್ಯಸ್ಥನಾದ ವಿಷ್ಣುವೇ ತನ್ನ ಮಗನಾಗಬೇಕೆಂಬ ಇಚ್ಛೆಯಿಂದ ತಪಸ್ಸು ಮಾಡುತ್ತಿದ್ದ ಪರಾಶರ ಮಹರ್ಷಿಗಳಿಗೆ ಮಧ್ಯಗೇಹ ಎಂಬ ಹೆಸರು. ಮಧ್ಯಗೇಹ-ಪರಾಶರನೆಂದು, ಆಖ್ಯಾ-ಹೆಸರುಳ್ಳವನ, ಗೇಹೇ-ಪತ್ನಿಯಾದ ಸತ್ಯವತಿಯಲ್ಲಿ ಎಂದರ್ಥ. ತಾತ್ಪರ್ಯನಿರ್ಣಯದಲ್ಲಿ (೧೦/೪೭) 'ತವಾತ್ಮಜೋಽಹಂ ಭವಿತಾಸ್ಮ್ಯಜೋಽಪಿ'- ನನಗೆ ಜನನವೇ ಇಲ್ಲವಾದರೂ (ಅಜೋಽಪಿ) ನಾನು ನಿನ್ನ ಮಗನಾಗಿ ಹುಟ್ಟುವೆನೆಂದು ವರ ಕೊಟ್ಟನೆಂದು ಹೇಳಿದಂತೆ ಸತ್ಯವತಿಯು ಮಗನಾದನೆಂಬುದು ಯುಕ್ತ.

ತ) ರೌಪ್ಯಪೀಠ—'ರೂಪಂ ಸ್ವಭಾವೇ ಸೌಂದರ್ಯೇ' ಎಂದು ಕೋಶವಿರುವುದರಿಂದ ಸೌಂದರ್ಯವಾಚಕರೂಪ ಶಬ್ದದ ಮೇಲೆ ಸ್ವಾರ್ಥದಲ್ಲಿ ಷ್ಯಞ್ ಪ್ರತ್ಯಯ ಬಂದು ರೌಪ್ಯ ಎಂದಾಗುತ್ತದೆ, ಇದಕ್ಕೆ ಸೌಂದರ್ಯ ಎಂದರ್ಥ. ರೌಪ್ಯ-ಸೌಂದರ್ಯಕ್ಕೆ, ಪೀಠ-ಪೀಠದಂತೆ ಆಶ್ರಯವಾದವರೇ ಎಂದು ಸಂಬೋಧನಾರೂಪದ ಅರ್ಥ. ಥ) ಭಾರತಾರ್ಥಪ್ರಕಾಶಂ ಎಂಬಲ್ಲಿ ಅರ್ಥಸ್ಯ ಪ್ರಕಾಶೋ ಯಸ್ಮಾತ್ತತ್ ಅರ್ಥಪ್ರಕಾಶಂ, (ವೇದಾದಿಗಳ) ಅರ್ಥವನ್ನು ಪ್ರಕಟಿಸುವಂಥಾ ಅಥವಾ ತೋರಿಸಿಕೊಡುವಂಥಾ. ಅರ್ಥಪ್ರಕಾಶಂ ಚ ತತ್ ಭಾರತಂ ಚ-ಭಾರತಾರ್ಥಪ್ರಕಾಶಂ ಎಂದು ವಿಶೇಷಣೋತ್ತರಪದ ಕರ್ಮಧಾರಯ, 'ವೇದಾರ್ಥಸಂಯುತಂ' (ಗೀತಾಭಾಷ್ಯ ಪೀಠಿಕೆ) ಎಂಬ ಸ್ಮೃತಿ ಹೇಳುವಂತೆ ವೇದಾರ್ಥದಿಂದ ಕೂಡಿದ ಮಹಾಭಾರತವನ್ನು ಎಂದು ಅರ್ಥ ಮಾಡಬೇಕು.

ಥ) ವ್ಯಾಸಪರವಾಗಿ ಅನ್ವಯ—೧) ರೌಪ್ಯಪೀಠ, ಅಭಿಧಾನೇತತ್ರ! ಭವಾನ್, i) ದ್ವಿಜಗಣನಿಲಯೇ, ii) ವಿಶುದ್ಧೇ ಕ್ಷೇತ್ರೇಽಪಿ ತ್ರಿಭುವನವಿಶದೇ ಮಧ್ಯಗೇಹಾಖ್ಯಗೇಹೇ ಬ್ರಾಹ್ಮಣಜಾತಿಃ (ಸನ್) ಭೂತ್ವಾ, ೨) ಪಾರಿವ್ರಾಜ್ಯಾಧಿರಾಜಃ (ಸನ್), ೩) ಪುನಃ ಬದರೀಂ ಅಪಿ ಪ್ರಾಪ್ಯ,

೪) ಕೃಷ್ಣಂ ಚ ನತ್ವಾ, ೫) ಭಾಷ್ಯಾಣಿ ಕೃತ್ವಾ, ೬) ಭಾರತಾರ್ಥಪ್ರಕಾಶಂ ಚ ಸಮ್ಯಕ್ ವ್ಯತನುತ ॥

ದ) ವ್ಯಾಸಪರವಾಗಿ ಅನ್ವಯಾರ್ಥ—(೧ನೇ ವಾಕ್ಯ) ರೌಪ್ಯ-ಪೀಠ—ರೌಪ್ಯ-ಸೌಂದರ್ಯಕ್ಕೆ, ಪೀಠ-ಪೀಠದಂತೆ ಆಶ್ರಯರಾದ (ಕೋಟಿ ಮನ್ಮಥಲಾವಣ್ಯವುಳ್ಳ) ; ಅಭಿಧಾನೇತತ್ರ—ಅಭಿಧಾನ-ಸಕಲ ನಾಮ ಗಳಿಂದಲೂ, ಇತ-ಕೂಡಿದವರೂ, ತ್ರ-ಸಕಲ ಸಂರಕ್ಷಕರೂ ಆದ ಹೇ ವೇದ-ವ್ಯಾಸರೇ ! ಭವಾನ್-ನೀವು, i) ದ್ವಿಜ....ನಿಲಯೇ—ದ್ವಿಜ-ಗಿಣಿಗಳು ಕೋಗಿಲೆಗಳೇ ಮೊದಲಾದ ಪಕ್ಷಿಗಳ, ಗಣ-ಸಮೂಹಗಳಿಗೆ, ನಿಲಯೇ-ಆಶ್ರಯವಾದ ; ವಿಶುದ್ಧೇ-ಪವಿತ್ರವಾದ ; ಕ್ಷೇತ್ರೇ ಅಪಿ-ಕ್ಷೇತ್ರವಾದ ಯಮುನಾ ನದಿಯ ಮಧ್ಯದಲ್ಲಿದ್ದ ದ್ವೀಪದಲ್ಲಿಯೂ ಕೂಡ ; ತ್ರಿಭುವನ-ವಿಶದೇ-ಮೂರು ಲೋಕಗಳಲ್ಲೂ ಪ್ರಸಿದ್ಧವಾದ, ಮಧ್ಯ....ಗೇಹೇ-ಮಧ್ಯ-ಗೇಹ-ಹೃದಯಾಂತರ್ಗತನಾದ ವಿಷ್ಣುವೇ ತನ್ನ ಮಗನಾಗಬೇಕೆಂದು ತಪಸ್ಸು ಮಾಡಿದ ಪರಾಶರರು, ಆಖ್ಯ-ಎಂದು ಹೆಸರುಳ್ಳ ಮಹರ್ಷಿಯ, ಗೇಹೇ-ಪತ್ನಿಯಾದ ಸತ್ಯವತೀ ದೇವಿಯಲ್ಲಿ ; ಬ್ರಾಹ್ಮಣಜಾತಿಃ (ಸನ್)-ಬ್ರಾಹ್ಮಣ-ರಾಗಿ, ಭೂತ್ವಾ-ಅವತಾರಮಾಡಿ ; (೨ನೇ ವಾಕ್ಯ) ಪಾರಿವ್ರಾಜ್ಯಾಧಿರಾಜಃ ಸನ್-ಸನಕಾದಿ ಸಂನ್ಯಾಸಿಗಳಿಗೂ ಸನ್ನ್ಯಾಸಿಸದೃಶರಾದ ಶುಕಾಚಾರ್ಯರೇ ಮೊದಲಾದ ವಿರಕ್ತಶಿಖಾಮಣಿಗಳಿಗೂ ಗುರುಗಳಾದ್ದರಿಂದ ಸಾರ್ವಭೌಮ-ರಾಗಿ ; ೩) ಪುನಃ-ಅವತಾರಾನಂತರದಲ್ಲಿ ; ಬದರೀಂ ಅಪಿ-ಬದರಿ-ಕಾಶ್ರಮವನ್ನೂ (ಅಪಿ ಶಬ್ದದಿಂದ) ಮೇರುಪರ್ವತವನ್ನೂ ; ಪ್ರಾಪ್ಯ-ಸೇರಿ ; ೪) ಕೃಷ್ಣಂ ಚ-ತಮ್ಮಿಂದ ಅಭಿನ್ನರಾದ ನಾರಾಯಣನನ್ನೂ ನಾರಾಯಣಸ್ವರೂಪರಾದ ತಮ್ಮನ್ನೂ ಸಹ ; ನತ್ವಾ-ಗ್ರಂಥಾರಂಭದಲ್ಲಿ ನಮಸ್ಕಾರ ಮಾಡಿ ('ನಾರಾಯಣಂ ಸುರಗುರುಂ' ಎಂದು ಭಾರತದ ಮಂಗಳ-ಶ್ಲೋಕದಲ್ಲಿ ನಾರಾಯಣನನ್ನೂ 'ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ । ದೇವೀಂ ಸರಸ್ವತೀಂ ವ್ಯಾಸಂ' ಎಂದು ನಾರಾಯಣ-ವ್ಯಾಸ ಇಬ್ಬರನ್ನೂ ಲೋಕಶಿಕ್ಷಾರ್ಥವಾಗಿ ವಂದನೆ ಮಾಡಿ—ಎಂದು ಭಾವ); ೫) ಭಾಷ್ಯಾಣಿ-ವೇದಕ್ಕೆ ನಿರ್ಣಾಯಕಗಳಾದ ಬ್ರಹ್ಮಸೂತ್ರಗಳನ್ನೂ ;

ಕೃತ್ವಾ–ಮಾಡಿ ; ೬) ಭಾರತಾರ್ಥಪ್ರಕಾಶಂ–ವೇದಾರ್ಥ ಪ್ರತಿಪಾದಕವಾದ ಮಹಾಭಾರತವನ್ನು ; ಸಮ್ಯಕ್–ಚೆನ್ನಾಗಿ (ಎಂದರೆ 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್'—ಇದರಲ್ಲಿ ಹೇಳಿದ ವಿಚಾರಗಳೇ ವೇದಾದಿ ಇತರ ಶಾಸ್ತ್ರಗಳಲ್ಲಿವೆ. ಇದರಲ್ಲಿಲ್ಲದ್ದು ಬೇರೆ ಎಲ್ಲೂ ಇಲ್ಲ. (ಗೀತಾಭಾಷ್ಯೋ-ದಾಹೃತ ಪ್ರಮಾಣ) ಎಂದೂ 'ವೇದಾನುಕ್ತಾರ್ಥಬೃಂಹಿತಮ್' ವೇದದಲ್ಲಿ ಹೇಳದ ಅನೇಕ ಹೊಸವಿಷಯಗಳಿಂದಲೂ ತುಂಬಿದ 'ವೇದಾದಪಿ ಪರಂ ಚಕ್ರೇ' ವೇದಕ್ಕಿಂತಲೂ ಉತ್ತಮವಾದ ಎಂದೂ ಭಾರತದಲ್ಲೇ ಹೇಳಿರು ವಂತೆಯೂ ಅನೇಕ ವಿಚಾರಗರ್ಭಿತವಾಗಿರುವಂತೆ) ; ವ್ಯತನುತ–ರಚಿಸಿದಿರಿ.

ಥ) ವ್ಯಾಸಪರವಾಗಿ ಭಾವಾರ್ಥ—ಹೇ ವೇದವ್ಯಾಸಮಹರ್ಷಿಗಳೇ! ತಾವು ಸೌಂದರ್ಯರಾಶಿಗೇ ಸಮುದ್ರಪ್ರಾಯರಾಗಿದ್ದೀರಿ. ಸಕಲ ಛಂದಸ್ಸು-ಗಳ, ದೇವತೆಗಳ, ಲೋಕಗಳ, ಹೆಚ್ಚೇಕೆ ಸಕಲ ಶಬ್ದಗಳ ಹೆಸರುಗಳೂ ತಮ್ಮನ್ನೇ ಬೋಧಿಸುತ್ತವೆ ; ತಾವು ಸರ್ವಶಬ್ದವಾಚ್ಯರೂ ಮತ್ತು ಸರ್ವ-ಜಗದ್ರಕ್ಷಕರೂ ಆಗಿದ್ದೀರಿ. ಇಂಥಾ ತಾವು ಜನನರಹಿತರಾದರೂ ಪರಾಶರರಿಗೂ ಸತ್ಯವತಿಗೂ ಕೊಟ್ಟ ವರದಂತೆ ಅವರ ಮಗನಾಗಿ ಯಮುನಾನದಿಯ ಮಧ್ಯದಲ್ಲಿದ್ದ ಪವಿತ್ರವಾದ ಒಂದು ದ್ವೀಪದಲ್ಲಿ ಅವತರಿಸಿ ವಿಪ್ರೋತ್ತಮರೆನಿ-ಸಿದಿರಿ. ಸನಕ-ಸನಂದನಾದಿ ಯೋಗಿವರ್ಯರಿಗೆ ಮಾತ್ರವಲ್ಲದೆ ನಾರದಾದಿ ಮಹರ್ಷಿಗಳಿಗೂ ಶುಕಾಚಾರ್ಯರೇ ಮೊದಲಾದ ವಿರಕ್ತ ಶಿಖಾಮಣಿಗಳಿಗೂ ಜ್ಞಾನೋಪದೇಶಕರಾಗಿ ಸಂನ್ಯಾಸಸಾಮ್ರಾಜ್ಯದ ಸಾರ್ವಭೌಮರೆನಿಸಿಕೊಂಡಿ-ದ್ದೀರಿ. ತಾವು ಯಮುನಾತೀರದ ದ್ವೀಪದಲ್ಲಿ ಆವಿರ್ಭವಿಸಿದರೂ ಆ ಕೂಡಲೇ ತಂದೆ ತಾಯಿಗಳಿಗೆ 'ನೀವು ಯಾವಾಗ ಸ್ಮರಿಸುವಿರೋ ಆಗ ಬರುವೆನೆಂ'ದು ಹೇಳಿ ಬದರಿಕಾಶ್ರಮಕ್ಕೂ ಮೇರುಪರ್ವತಕ್ಕೂ ನಡೆದುಬಿಟ್ಟಿರಿ. ಅನಂತ-ವೇದಾರ್ಥಗಳ ನಿರ್ಣಾಯಕ ಶಾಸ್ತ್ರವಾದ ಬ್ರಹ್ಮಸೂತ್ರಗಳನ್ನೂ, ಸಕಲ ವೇದಾರ್ಥಬೃಂಹಿತವೂ ವೇದಾನುಕ್ತಾರ್ಥಭೂಷಿತವೂ ವೇದಕ್ಕಿಂತಲೂ ಮಿಗಿಲೆನಿಸಿದ ಮಹಾಭಾರತವನ್ನು ರಚಿಸಿದಿರಿ. ಅದರ ಪ್ರಾರಂಭದಲ್ಲಿ ಶಿಷ್ಯ-ಶಿಕ್ಷಾರ್ಥವಾಗಿ 'ನಾರಾಯಣಂ ಸುರಗುರುಂ....ವಂದೇ' ಎಂದೂ 'ನಾರಾ-ಯಣಂ ನಮಸ್ಕೃತ್ಯ....ದೇವೀಂ ಸರಸ್ವತೀಂ ವ್ಯಾಸಂ' ಎಂದೂ ಗುರು-ದೇವತಾ

ವಂದನೆ ಮಾಡಿದ್ದೀರಿ ; ಯದ್ಯಪಿ ನಾರಾಯಣನಿಗೂ ನಿಮಗೂ ಭೇದವಿಲ್ಲ-ದಿದ್ದರೂ ವಾಚ್ಯ-ವಕ್ತೃತ್ವಭೇದದಿಂದ ಲೋಕಶಿಕ್ಷಾರ್ಥ ವಂದನೆ ಮಾಡಿ ಸಕಲ ಸಜ್ಜನರಿಗೂ ಸನ್ಮಾರ್ಗ ಪ್ರದರ್ಶನ ಮಾಡಿದ್ದೀರೆಂದು ಭಾವ.

ಥ) 'ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ' 'ಸಾರ್ವ-ಭೌಮ್ಯಾಧಿರಾಜಃ' ಎಂಬ ಭಾಗಗಳಿಗೆ 'ಅಜೀತಯೇಽಹತಯೇ' (ಋ. ೯/೯೬/೪) ಎಂಬ ಋಙ್ಮಂತ್ರ ಸಮಾಖ್ಯೆ. ಈ ಪೂರ್ಣಮಂತ್ರದ ಅರ್ಥವನ್ನು 270-ದ ಖಂಡದಲ್ಲೂ ಸಮಾಖ್ಯೆಯ ವಿವರಣೆಯನ್ನು 253-ಥ ಖಂಡದಲ್ಲೂ ಕೊಟ್ಟಿದೆ.

ಇಲ್ಲಿಗೆ ೩೯ನೇ ಶ್ಲೋಕ ಮುಗಿಯಿತು

ಜ) ಶ್ಲೋಕ ೪೦. ವಂದನಾರ್ಪಣೆ

359. (ಕ) ಅವತಾರಿಕೆ—(ಕಕ.ವಿ.ಛ.) ಸ್ತೋತ್ರದ ಕಡೆಯಲ್ಲಿ ಕವಿವರ್ಯರು ಭಕ್ತ್ಯುದ್ರೇಕದಿಂದ ಮತ್ತೆ ಮತ್ತೆ ವಂದಿಸುತ್ತಾರೆ (ಪುರಾ.) ಕವಿಗಳು ಸ್ತೋತ್ರವನ್ನು ಮುಗಿಸುವರಾಗಿ ಭಕ್ತ್ಯತಿಶಯದಿಂದ ಭಗವಾನ್ ವೇದವ್ಯಾಸರನ್ನೂ, ಶ್ರೀಮನ್ಮಧ್ವಾಚಾರ್ಯರನ್ನೂ ಕೂಡ ವಂದಿಸುತ್ತಾರೆ.

ವಂದೇ ತಂ ತ್ವಾ ಸುಪೂರ್ಣ—ಪ್ರಮತಿಮನುದಿನಾ-
    ಸೇವಿತಂ ದೇವವೃಂದೈರ್
ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ
    ಶ್ರೀಮದಾನಂದತೀರ್ಥಮ್ ।
ವಂದೇ ಮಂದಾಕಿನೀ ಸತ್—ಸರಿದಮಲಜಲಾ-
    ಸೇಕಸಾಧಿಕ್ಯಸಂಗಂ
ವಂದೇಽಹಂ ದೇವ ಭಕ್ತ್ಯಾ ಭವಭಯದಹನಂ
    ಸಜ್ಜನಾನ್ ಮೋದಯಂತಮ್ ॥ ೪೦ ॥

ಖ) ಪದವಿಭಾಗ—ವಂದೇ, ತ್ವಂ, ತ್ವಾ, ಸುಪೂರ್ಣಪ್ರಮತಿಂ, ಅನುದಿನಾಸೇವಿತಂ, ದೇವವೃಂದೈಃ, ವಂದೇ, ವಂದಾರುಂ, ಈಶೇ, ಶ್ರಿಯಃ (ಅಥವಾ ಶ್ರಿಯೇ), ಉತ, ನಿಯತಂ, ಶ್ರೀಮದಾನಂದತೀರ್ಥಂ, ವಂದೇ, ಮಂದಾಕಿನೀ....ಸಂಗಂ, ವಂದೇ, ಅಹಂ, ದೇವ, ಭಕ್ತ್ಯಾ, ಭವಭಯದಹನಂ, ಸಜ್ಜನಾನ್, ಮೋದಯಂತಮ್ ॥

ಗ) ವಿಶ್ಲೇಷಣೆ—ಕಡೆಯ ಚರಣದಲ್ಲಿರುವ 'ದೇವ' ಎಂಬುದು ಸಂಬೋಧನೆ. ಅದನ್ನು ಬಿಟ್ಟರೆ ಒಂದೊಂದು ಪಾದವೂ ಒಂದೊಂದು ಪೂರ್ಣ-ವಾಕ್ಯ. ಹೀಗೆ ಈ ಶ್ಲೋಕದಲ್ಲಿ ನಾಲ್ಕು ಚಿಕ್ಕಚಿಕ್ಕ ವಾಕ್ಯಗಳಿವೆ. ನಾಲ್ಕು ವಾಕ್ಯಗಳಿಗೂ 'ವಂದೇ' ಎಂದೇ ಕ್ರಿಯಾಪದ. ೧) ದೇವ, ದೇವವೃಂದೈಃ ಅನುದಿನಾಸೇವಿತಂ ಸುಪೂರ್ಣಪ್ರಮತಿಂ ತಂ ತ್ವಾ ವಂದೇ । ೨) ಈಶೇ ನಿಯತಂ, ವಂದಾರುಂ, ಉತ ಶ್ರಿಯಃ ವಂದಾರುಂ ಶ್ರೀಮದಾನಂದತೀರ್ಥಂ (ತ್ವಾ) ವಂದೇ । ೩) ಮಂದಾಕಿನೀ...ಸಂಗಂ ತ್ವಾ ವಂದೇ । ೪) ಭವ-ಭಯದಹನಂ ಸಜ್ಜನಾನ್ ಮೋದಯಂತಂ (ತ್ವಾ) ಅಹಂ ಭಕ್ತ್ಯಾ ವಂದೇ ॥

ಘ) ಕಠಿಣಶಬ್ದಾರ್ಥ—1) ವಂದೇ ಎಂದರೆ ನಮಸ್ಕರಿಸುತ್ತೇನೆ ಮತ್ತು ಸ್ತೋತ್ರವನ್ನೂ ಮಾಡುತ್ತೇನೆ ಎಂದು ಎರಡು ಅರ್ಥ. 2) ವಂದಾರುಂ-ವಂದನಶೀಲರಾದ, ವಂದನಾಸಕ್ತರಾದ (ಕಕ) 'ವಂದಾರುರಭಿವಾದಕಃ' ಅಮರ. (ವ್ಯಾಕರಣ) 'ಶೃವಂದ್ಯೋರಾರುಃ' (ಪಾ. ೩/೨/೧೭೩) ಎಂಬ ಸೂತ್ರದಂತೆ ತಾಚ್ಛೀಲ್ಯಾರ್ಥದಲ್ಲಿ ಆರು ಪ್ರತ್ಯಯ ಬಂದಿದೆ. 3) ಈಶೇ-(ಕಕ.ವಿ.) ಸ್ವಾಮಿನಿ ವಿಷ್ಣೌ। ಕರ್ಮಣೋऽಧಿಕರಣವಿವಕ್ಷಾಯಾಂ ಸಪ್ತಮೀ. ಸ್ವಾಮಿಯಾದ ವಿಷ್ಣುವನ್ನು ಎಂದೇ ಅರ್ಥ. ಹರಿಪರ ಅರ್ಥ ಹೇಳುವಾಗ (ಪುರಾ.) ಈಟ್ ಎಂಬ ಶ-ಕಾರಾಂತ ಶಬ್ದದ ಚತುರ್ಥೀ ಎಂದು ಭಾವಿಸಿ 'ಕ್ರಿಯಾರ್ಥೋಪಪದಸ್ಯ ಚ ಕರ್ಮಣಿ ಸ್ಥಾನಿನಃ' (ಪಾ.೨/೩/೧೪) ಎಂಬ ಸೂತ್ರದಂತೆ 'ಈಶಂ ಪ್ರಸಾದಯಿತುಂ' ವಿಷ್ಣುವಿನ ಅನುಗ್ರಹ ಪಡೆಯುವುದಕ್ಕಾಗಿ ಎಂಬ ಅರ್ಥದಲ್ಲಿ ಚತುರ್ಥಿಯನ್ನು ಹೇಳಬೇಕು. ಹೀಗೆಯೇ ಶ್ರಿಯೇ-ಶ್ರಿಯಂ ಪ್ರಸಾದಯಿತುಂ-ಲಕ್ಷ್ಮೀದೇವಿಯ ಪ್ರೀತ್ಯರ್ಥವಾಗಿ ಎಂದೇ ಅರ್ಥ ಹೇಳಬೇಕು. 4) ನಿಯತಂ-ನಿಯಮಯುಕ್ತವಾಗಿ, ಸರ್ವಕಾಲ-

ದಲ್ಲೂ (ಶಕ.ವಿ.) ಅವಶ್ಯವಾಗಿ. ಇದು 'ಈಶೇ ನಿಯತಂ ವಂದಾರುಂ' ಎಂದು ವಂದಾರು-ಗೆ ಕ್ರಿಯಾವಿಶೇಷಣ.

೫) ವಾಯುಪರವಾಗಿ ಅನ್ವಯಾರ್ಥ—(ಅನ್ವಯಕ್ರಮ ವಿಶ್ಲೇಷಣೆಯಲ್ಲೇ ಕೊಟ್ಟಿದೆ). ದೇವ-ಪ್ರಕಾಶಮಾನರಾದ ವಾಯುದೇವರೇ! ೧) ದೇವವೃಂದೈಃ-ರುದ್ರೇಂದ್ರಾದಿ ದೇವತಾಸಮೂಹಗಳಿಂದಲೂ (೩೫ನೇ ಶ್ಲೋಕದಲ್ಲಿ ಹೇಳಿದಂತೆ ವೈದಿಕಾದಿ ವಿದ್ಯಾಭಿಮಾನಿ ದೇವತೆಗಳಿಂದಲೂ ಗಂಧರ್ವರು, ಕಿನ್ನರರು, ಅಪ್ಸರೆಯರು ಮೊದಲಾದ ದೇವಗಣಗಳಿಂದಲೂ); ಅನುದಿನಾಸೇವಿತಂ—ಅನುದಿನ-ದಿನೇದಿನೇ, ಆ-ಸೇವಿತಂ-(೩೫ನೇ ಶ್ಲೋಕದಲ್ಲಿ ಹೇಳಿದಂತೆ) ಮೂರ್ತಿಮತ್ತಾಗಿಯೂ ಗಾನ ಮಾಡುತ್ತಲೂ, ನರ್ತನ ಮಾಡುತ್ತಲೂ ಸೇವಿಸಲ್ಪಡುತ್ತಿರುವ; ಸುಪೂರ್ಣಪ್ರಮತಿಂ-ಪೂರ್ಣಪ್ರಜ್ಞರೆಂದು ಹೆಸರುಳ್ಳ; ತಂ-ಆ ಎಂದರೆ (ಶಕ.ವಿ.೬.) ಲೋಕದಲ್ಲೂ ವೇದಗಳಲ್ಲೂ ಪ್ರಸಿದ್ಧರಾದ, ತ್ವಾ-ನಿಮ್ಮನ್ನು; ವಂದೇ-ಸ್ತೋತ್ರ ಮಾಡುತ್ತೇನೆ ಮತ್ತು ವಂದಿಸುತ್ತೇನೆ. ೨) ಈಶೇ-ಸ್ವಾಮಿಯಾದ ವಿಷ್ಣುವನ್ನು; ನಿಯತಂ-ನಿಯತವಾಗಿ (ಅವಶ್ಯವಾಗಿ); ವಂದಾರುಂ-ವಂದಿಸುವ ಶೀಲವುಳ್ಳ; ಉತ-ಮತ್ತು; ಶ್ರಿಯಃ-ಲಕ್ಷ್ಮಿಯನ್ನೂ, ವಂದಾರುಂ-ವಂದಿಸುವ ಸ್ವಭಾವದವರಾದ; ಶ್ರೀಮದಾನಂದತೀರ್ಥಂ-ಶ್ರೀಮದಾನಂದತೀರ್ಥಭಗವತ್ಪಾದರೆಂಬ; ತ್ವಾ-ನಿಮ್ಮನ್ನು; ವಂದೇ-ಸ್ತುತಿಸಿ ವಂದಿಸುತ್ತೇನೆ. ೩) ಮಂದಾಕಿನೀ... ಸಂಗಂ—ಮಂದಾಕಿನೀ-ದೇವಗಂಗೆಯೆಂಬ, ಸತ್-ಉತ್ತಮವಾದ, ಸರಿತ್-ನದಿಯ, ಅಮಲ-ಸ್ವಚ್ಛವಾದ, ಜಲ-ನೀರಿನಲ್ಲಿ, ಆ-ಸೇಕ-ಸ್ನಾನ ಮಾಡುವುದಕ್ಕೂ, ಆಧಿಕ್ಯಸಂಗಂ-ಹೆಚ್ಚಾದ ಸಹವಾಸವುಳ್ಳ; ತ್ವಾ-ತಮ್ಮನ್ನು; ವಂದೇ-ಸ್ತುತಿಸಿ ವಂದಿಸುತ್ತೇನೆ. ೪) ಭವ....ದಹನಂ—ಭವ-ಸಂಸಾರದ, ಭಯ-ಭೀತಿಯನ್ನು, ದಹನಂ-ಅಗ್ನಿಯಂತೆ ಸುಟ್ಟುಹಾಕುವ; ಸಜ್ಜನಾನ್-ಸಾಧುಸಜ್ಜನರನ್ನು (ಸತ್ ಶಬ್ದವಾಚ್ಯನಾದ ವಿಷ್ಣುವಿನ ಜನರಾದ ವೈಷ್ಣವರನ್ನು); ಮೋದಯಂತಂ-ಜ್ಞಾನದಾನದಿಂದಲೂ ಕಷ್ಟಪರಿಹಾರದಿಂದಲೂ ಇಷ್ಟಾರ್ಥ ಕೊಡುವುದರಿಂದಲೂ ಕೊನೆಗೆ ಮೋಕ್ಷ ಕೊಡುವುದರಿಂದಲೂ

ಹರ್ಷಪಡಿಸುವ ; ತ್ವಾ-ನಿಮ್ಮನ್ನು ; ಅಹಂ-ನಾನು ; ಭಕ್ತ್ಯಾ-ಭಕ್ತ್ಯು-ದ್ರೇಕದಿಂದ ; ವಂದೇ-ಸ್ತೋತ್ರಮಾಡಿ ವಂದಿಸುತ್ತೇನೆ.

(ನ್ಯಾಯವಾಗಿ ವೇದವ್ಯಾಸರಪರ ಅರ್ಥವನ್ನೇ ಮೊದಲು ಹೇಳಬೇಕು, ಅನಂತರ ವಾಯುಪರ ಅರ್ಥ ಹೇಳಬೇಕು. ಆದರೆ ವ್ಯಾಸಪರ ಅರ್ಥ ಅಷ್ಟು ಸುಲಭವಾಗಿ ಮನಸ್ಸಿಗೆ ಹತ್ತುವುದಿಲ್ಲ, ಅದ್ದರಿಂದ ವಾಯುಪರ ಅರ್ಥವನ್ನೇ ಮೊದಲು ಹೇಳಿದೆವು. ತಾತ್ಪರ್ಯ ಹೇಳುವಾಗ ಮೊದಲು ವೇದವ್ಯಾಸಪರ ಭಾವಾರ್ಥ ಹೇಳಿ ಅನಂತರ ವಾಯುಪರ ಭಾವಾರ್ಥ ಅನುವಾದ ಮಾಡುವೆವು).

ಚ) ವೇದವ್ಯಾಸಪರ ಅನ್ವಯಾರ್ಥ—೧) ದೇವ-ಕ್ರೀಡಾದಿಗುಣ. ವಿಶಿಷ್ಟರಾದ ಹೇ ವೇದವ್ಯಾಸರೇ, ದೇವವೃಂದೈಃ-ಬ್ರಹ್ಮರುದ್ರಾದಿ ದೇವತಾ-ಗಣಗಳಿಂದಲೂ ಸಕಲ ವೈದಿಕ-ತಾಂತ್ರಿಕವಿದ್ಯಾಭಿಮಾನಿದೇವತೆಗಳಿಂದಲೂ ; ಅನುದಿನ-ಆ-ಸೇವಿತಂ-ಮುಕ್ತಾಮುಕ್ತ ಎರಡು ದೆಶೆಯಲ್ಲೂ ನಿರಂತರವಾಗಿ ಸೇವಿಸಲ್ಪಡುವ ; ಸುಪೂರ್ಣಪ್ರಮತಿಂ—ಸು-ನಿರವಧಿಕವಾಗಿಯೂ ನಿರತಿ-ಶಯವಾಗಿಯೂ, ಪೂರ್ಣ-ಪರಿಪೂರ್ಣವಾದ, ಪ್ರ-ದೋಷಗಂಧರಹಿತವಾದ, ಮತಿಂ-ಜ್ಞಾನವಿಜ್ಞಾನವುಳ್ಳ ; ತಂ-ಸರ್ವವೇದಪ್ರತಿಪಾದ್ಯನಾದರೂ ಸಂ-ಪೂರ್ಣತಯಾ ಅಗಮ್ಯರೂ ಆದ, ತ್ವಾ-ಬಿಂಬರೂಪಿಯಾದ ನಿಮ್ಮನ್ನು ; ವಂದೇ-ಸ್ತುತಿಸುತ್ತೇನೆ ಮತ್ತು ವಂದಿಸುತ್ತೇನೆ. ೨) ಈಶೇ (ಚತುರ್ಥೀ ವಿಭಕ್ತಿ) ನಿಮ್ಮನ್ನು ಪ್ರಸನ್ನೀಕರಿಸಿಕೊಳ್ಳುವುದಕ್ಕಾಗಿ ; ನಿಯುತಂ-ನಿಯುತ-ವಾಗಿ, ವಂದಾರುಂ-ವಂದನಶೀಲರಾದವರನ್ನೂ ; ಉತ-ಮತ್ತು ; ಶ್ರಿಯೇ-ಲಕ್ಷ್ಮಿಯನ್ನು ಒಲಿಸಿಕೊಳ್ಳುವುದಕ್ಕಾಗಿ ; ವಂದಾರುಂ-ಭಗವದುಪಸರ್ಜನ-ತಯಾ ವಂದಿಸುವಂಥಾ ಜನಗಳನ್ನೂ ಕುರಿತು (ಶ್ರೀಮನ್ನಾರಾಯಣನನ್ನು ಸರ್ವಭಾವದಿಂದಲೂ, ಲಕ್ಷ್ಮೀದೇವಿಯನ್ನು ಭಗವದುಪಸರ್ಜನತಯಾ ವಂದಿಸಬೇಕೆಂಬುದನ್ನು 'ನಿಯುತಂ' ಶಬ್ದೇನ ಸೂಚಿಸಿದ್ದಾರೆ—ಈಶೇ ನಿಯುತಂ, ಶ್ರಿಯೇ ಈಶಾಧೀನತಯಾ ವಂದಾರುಂ), ಶ್ರೀಮದಾನಂದ-ಸ್ವ-ರೂಪಾನಂದಕ್ಕೆ, ತೀರ್ಥಂ-ಕಾರಣೀಭೂತರಾದ ; ತ್ವಾ-ನಿಮ್ಮನ್ನು ; ವಂದೇ-ವಂದಿಸುತ್ತೇನೆ-ಸ್ತುತಿಸುತ್ತೇನೆ. ಉತ್ತರಾರ್ಧಕ್ಕೆ ಕಿಂಚಿತ್ತೂ ಅರ್ಥವ್ಯತ್ಯಾಸ-ವಿಲ್ಲ, ಹಾಗೆಯೇ ಅನ್ವಯಿಸುತ್ತದೆ.

ಛ) ವೇದವ್ಯಾಸಪರವಾಗಿ ಭಾವಾರ್ಥ—ಹೇ ವೇದವ್ಯಾಸರೇ, ತಾವು ಕ್ರೀಡಾದಿ ಗುಣವಿಶಿಷ್ಟನಾದ ನಾರಾಯಣನ ಸಾಕ್ಷಾತ್ ಅವತಾರವೇ ಆಗಿದ್ದೀರಿ (ದೇವ). ಬ್ರಹ್ಮಾದಿ ಸಕಲ ದೇವತೆಗಳೂ ಈ ಅಮುಕ್ತಾವಸ್ಥೆಯಲ್ಲಿ ವಂದಿಸುವರಲ್ಲದೆ ಸಮಸ್ತ ಮುಕ್ತರಾದ ಬ್ರಹ್ಮೇಂದ್ರಾದಿಗಳೂ ತಮ್ಮನ್ನು ವಂದಿಸುತ್ತಾರೆ. (೩೫ನೇ ಶ್ಲೋಕದಲ್ಲಿ ನಿವೇದಿಸಿಕೊಂಡಂತೆ) ಸಮಸ್ತ ವೇದವಿದ್ಯಾಭಿಮಾನಿಗಳೂ ಸ್ಮೃತಿ-ತಂತ್ರಶಾಸ್ತ್ರಾದಿ ಸಕಲ ವಿದ್ಯಾಭಿಮಾನಿಗಳೂ ಮೂರ್ತಿಮತ್ತಾಗಿ ಬಂದು ತಮ್ಮನ್ನು ಓಲಗಿಸುತ್ತಾರೆ. ನಿರವಧಿಕವೂ ನಿರತಿಶಯವೂ ಆದ ನಿರ್ದುಷ್ಟವಾದ ಜ್ಞಾನ-ವಿಜ್ಞಾನಗಳ ಅಪಾರಸಮುದ್ರರೇ (ಸುಪೂರ್ಣಪ್ರಮತಿಂ) ತಾವು. ಸಕಲ ವೇದಗಳೂ ತಮ್ಮ ಮಹಿಮೆಯನ್ನೇ ಕೊಂಡಾಡುತ್ತಿವೆಯಾದರೂ ಆ ವೇದಗಳೂ ತಮ್ಮ ಜ್ಞಾನಭಂಡಾರದ ಅಂತವನ್ನು ಕಾಣಲಾರವು (ತಂ). ನನಗೆ ಬಿಂಬರೂಪಿಗಳಾದ ತಮ್ಮನ್ನು ಶ್ರದ್ಧಾದರ ಭಕ್ತಿಗಳಿಂದ ಯಥಾಮತಿ ಸ್ತುತಿಸಿ, ಇಗೋ ನಮಸ್ಕರಿಸುತ್ತಿದ್ದೇನೆ. ಹೇ ಭಗವನ್, ಯಾವ ಸುಜೀವಿಗಳು ಈ ಸಂಸಾರಾವಸ್ಥೆಯಲ್ಲಿ ಸ್ವಯೋಗ್ಯತಾನುಸಾರ ಗುಣೋಪಸಂಹಾರ ಮಾಡಿ, ಅನನ್ಯ ಭಾವನೆಯಿಂದ ಭಾಗ್ಯದೇವತೆಯೂ ಸಕಲ ವಾಙ್ಮನೋನಿಯಾಮಕಳೂ ಆದ ಲಕ್ಷ್ಮೀದೇವಿಯ ಪತಿಯೆಂದು ನಿರಂತರವಾಗಿ ತಮ್ಮ ಉಪಾಸನೆ ಮಾಡುವರೋ ಅವರಿಗೆ ಸ್ವರೂಪಾನಂದ ಸುಖವನ್ನು ದಯಪಾಲಿಸುವ ದಯಾಮಯರಾದ ಆನಂದವಿಗ್ರಹರು ತಾವು (ಶ್ರೀಮದಾನಂದ-ತೀರ್ಥಂ). ಮುಕ್ತಿಪ್ರದನಾದ ಶ್ರೀವಾಸುದೇವಸ್ವರೂಪರಾದ ತಮ್ಮನ್ನು ಯಥಾಮತಿ ಸ್ತುತಿಸಿ ವಂದಿಸುತ್ತೇನೆ. ತಮ್ಮ ಪಾದಸ್ಪರ್ಶದಿಂದ ಪಾವಿತ್ರ್ಯವನ್ನು ಪಡೆದ ದೇವಗಂಗೆಯ ಪಾವನವಾದ ನಿರ್ಮಲೋದಕದಲ್ಲಿ ಸ್ನಾನ ಮಾಡಿದರೆ ಏನು ಪುಣ್ಯ ಲಭಿಸೀತೋ ಅದಕ್ಕೂ ಕೋಟಿ ಗುಣಕ್ಕೂ ಅಧಿಕವಾದ ಪುಣ್ಯಲಾಭವು ತಮ್ಮ ಪ್ರಣಾಮದಿಂದಲೇ ಲಭಿಸುತ್ತದೆ; 'ತೀರ್ಥಕೋಟಿಸಹಸ್ರಾಣಿ ವ್ರತಕೋಟಿಶತಾನಿ ಚ । ನಾರಾಯಣಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥' (ಷೋಡಶೀಂ ಕಲಾಂ ನಾರ್ಹಂತಿ–ರೂಪಾಯಲ್ಲಿ ಒಂದು ಆಣೆಯಷ್ಟೂ ಬೆಲೆ ಬಾಳುವುದಿಲ್ಲ.) ಎಂದು ಸ್ಮೃತಿ ಸಾರುತ್ತದೆಯಲ್ಲವೆ, ದೇವ! ಅಂಥಾ ಅಚಿಂತ್ಯಮಹಿಮರಾದ

ತಮ್ಮನ್ನು ನಿರಂತರವಾಗಿ ಸ್ತುತಿಸಿ ವಂದಿಸುತ್ತೇನೆ. ಹೇ ಭಕ್ತವತ್ಸಲರೇ, ಕರುಣಾಸಮುದ್ರರೇ, ತಮ್ಮ ಸ್ಮರಣೆ, ತಮ್ಮ ಧ್ಯಾನ, ತಮ್ಮ ಅನುಗ್ರಹ ಇವುಗಳಿಂದಲೇ ಈ ಅಪಾರಸಂಸಾರಕೂಪಾರವನ್ನು ದಾಟಲು ಸಾಧ್ಯ. ಸ್ವರೂಪಾನಂದಾವಿರ್ಭಾವರೂಪ ಮೋಕ್ಷಸುಖವನ್ನು ಅನುಗ್ರಹ ಮಾಡುವ ಮಹಾಪ್ರಭುಗಳೂ ತಾವೊಬ್ಬರೇ. ಹೀಗೆ ಹೇ ಮಧ್ವಾಂತರ್ಗತ ವೇದವ್ಯಾಸರೇ, 'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ ॥' ನಿಮ್ಮನ್ನು ಅನನ್ಯ-ಭಾವದಿಂದ ದೈನ್ಯತೆಯಿಂದ ಕೈಮುಗಿದು ಪ್ರಣಾಮ ಮಾಡುತ್ತೇನೆ, ನನ್ನನ್ನು ರಕ್ಷಿಸಿರಿ, ಕೈಹಿಡಿದು ಉದ್ಧಾರ ಮಾಡಿರಿ—ಎಂದು ಭಾವ.

ಜ) ಮಧ್ವಾಚಾರ್ಯರ ಪರವಾಗಿ ಭಾವಾರ್ಥ—ಹೇ ಶ್ರೀಮದಾ-ನಂದತೀರ್ಥ ಭಗವತ್ಪಾದಾಚಾರ್ಯರೇ! ತಾವು ಜೀವೋತ್ತಮರೂ ದೇವೋ-ತ್ತಮರೂ ಆದ ಶ್ರೀ ವಾಯುದೇವರ ಮೂರನೇ ಅವತಾರಭೂತರು (ದೇವ). ಆದಕಾರಣ ತಮ್ಮಲ್ಲಿ ಮೂಲರೂಪದಲ್ಲಿರುವ ಬಲ-ಜ್ಞಾನ-ಭಕ್ತಿ-ವೈರಾಗ್ಯಾದಿ ಸಕಲಗುಣಗಳೂ ನಿಬಿಡವಾಗಿ ತುಂಬಿವೆ. ತಾವು (ಬಳಿತ್ಥಾಸೂಕ್ತದಲ್ಲಿ 'ಈಶಾನಾಸಃ ಶವಸಾಕ್ರಂತ ಸೂರಯಃ' ಎಂದು ಹೇಳಿದಂತೆ, ಖಂಡ 341–3 ನೋಡಿ) ರುದ್ರಾದಿದೇವತೆಗಳಿಗೂ ಜ್ಞಾನೋಪದೇಶಕರಾದ್ದರಿಂದ ಅವರೆಲ್ಲರೂ, ತಮ್ಮ ಅನುಗ್ರಹವಿಲ್ಲದೆ ಹರಿಯ ಅನುಗ್ರಹವು ದುರ್ಲಭವಾದ್ದರಿಂದ, ತಮ್ಮನ್ನು ನಿರಂತರವಾಗಿ ಸೇವಿಸುತ್ತಿರುತ್ತಾರೆ. ಅಷ್ಟೇ ಅಲ್ಲ, 'ರುದ್ರಾದಿ-ಸರ್ವದೇವಾಂಶ್ಚ ವಾಯುದೇಹೇಷು ಚಿಂತಯೇತ್ । ಸದಾ ನಿಯಮ್ಯ-ಭಾವೇನ ವೀರ್ಯಸಿದ್ಧ್ಯರ್ಥಮಂಜಸಾ ॥' ಎಂದರೆ ರುದ್ರಾದಿ ಸಕಲ ದೇವತೆ-ಗಳೂ ಸದಾ ವಾಯುದೇವರ ದೇಹದಲ್ಲಿ ಆಶ್ರಿತರಾಗಿದ್ದಾರೆಂದೂ ಎಲ್ಲರೂ ವಾಯುದೇವರಿಂದ ನಿಯಮ್ಯರಾಗಿದ್ದಾರೆಂದೂ (ಆಜ್ಞೆಗೆ ಒಳಪಟ್ಟವರೆಂದೂ) ಚಿಂತನೆ ಮಾಡಬೇಕು. ಇದರಿಂದ ನಾವು ಮಾಡುವ ಕರ್ಮಗಳೆಲ್ಲ ವೀರ್ಯ-ವತ್ತರವಾಗುವುದೆಂದು ವಾಯುಪ್ರೋಕ್ತ (ವಾಯುಪುರಾಣ)ದಲ್ಲಿ ಹೇಳಿರು-ವಂತೆ ಸಕಲ ತತ್ತ್ವಾಭಿಮಾನಿಗಳೂ ತಮ್ಮನ್ನು ಆಶ್ರಯಿಸಿದ್ದಾರೆ. (ಹಿಂದೆ ೩೫ನೇ ಶ್ಲೋಕದಲ್ಲಿ ನಿವೇದಿಸಿಕೊಂಡಂತೆ) ಭಾರತೀ-ಪಾರ್ವತೀ-ಶಚೀ ಮೊದಲಾದ ವೇದಾಭಿಮಾನಿ ದೇವತೆಗಳೇ ಅಲ್ಲದೆ ಅಗ್ನಿ, ಸೂರ್ಯ, ಚಂದ್ರ,

ಇಂದ್ರಾದಿ ಸಕಲ ತಂತ್ರಾಭಿಮಾನಿದೇವತೆಗಳೂ* ತಮ್ಮನ್ನು ಮೂರ್ತಿಮತ್ತಾಗಿ ಬಂದು ಓಲಗಿಸುವರು, ಗಂಧರ್ವರು ತಮ್ಮ ಚರಿತ್ರವನ್ನು ಗಾನಮಾಡುವರು, ಅಪ್ಸರೆಯರು-ಕಿನ್ನರಿಯರೇ ಮೊದಲಾದ ದೇವತಾಸ್ತ್ರೀಯರು ನರ್ತನ ಮಾಡುವರು. ಹೇ ಪೂರ್ಣಪ್ರಜ್ಞಾಚಾರ್ಯರೇ ! ಇಂಥಾ ಮಹಿಮೋಪೇತ-ರಾದ ತಮ್ಮನ್ನು ಸ್ತುತಿಸುವುದಕ್ಕೆ ಮಂದಮತಿಯಾದ ನಾನು ಎಷ್ಟರವನು ? ಆವರ ಮುಂದೆ ನನ್ನ ಜ್ಞಾನವೇನು ? ನನ್ನ ಶಕ್ತಿಯೇನು ? ಆದರೂ ಹೇ ಸರ್ವಜ್ಞಶಿಖಾಮಣಿಗಳೇ ! ತಾವು (ಪ್ರಾತಃಸಂಕಲ್ಪ ಗದ್ಯದಲ್ಲಿ ಶ್ರೀರಾಘ-ವೇಂದ್ರಸ್ವಾಮಿಗಳು ವಿಜ್ಞಾಪಿಸಿಕೊಂಡಂತೆ) ಪರಮ ದಯಾಳುಗಳೂ ಕ್ಷಮಾ-ಸಮುದ್ರರೂ ಭಕ್ತವತ್ಸಲರೂ ಭಕ್ತಾಪರಾಧಸಹಿಷ್ಣುಗಳೂ, ಅಜ್ಞಜ್ಞಾನಾರ್ಥಿ-ಜ್ಞಾನಯೋಗ್ಯ ಭಗವತ್ಕೃಪಾಪಾತ್ರಭೂತ ಸಜ್ಜನ ಕೃಪಾಳುಗಳೂ ಆಗಿದ್ದೀ-ರೆಂದು ತಿಳಿದು ಕರ್ತವ್ಯತ್ವೇನ ಯಥಾಮತಿ ತಮ್ಮನ್ನು ಸ್ತುತಿಸಿ ಸಾಷ್ಟಾಂಗ-ಪ್ರಣಾಮ ಮಾಡುತ್ತೇನೆ (ವಂದೇ). ತಾವು ಭಗವಂತನ ಅಚ್ಛಿನ್ನಭಕ್ತರು. ಸದಾ ಭಗವತ್ಪರರಾಗಿ ಸರ್ವತ್ರ ಸರ್ವದಾ ಸರ್ವಾಧಾರ-ಸರ್ವಾಕಾರ-ಸರ್ವಾಶ್ರಯ-ಸರ್ವಪ್ರವರ್ತಕ-ಸರ್ವಗುಣಾತಿಪರಿಪೂರ್ಣತಮ - ಸರ್ವಾತ್ಯಂತ ವಿಲಕ್ಷಣತ್ವೇನ ಶ್ರೀಭೂಮ್ಯಾಲಿಂಗಿತನಾದ ಭಗವಂತನನ್ನು ನಿರ್ವ್ಯಾಜ-ಭಕ್ತಿಯಿಂದ ಉಪಾಸನೆ ಮಾಡುವ ಸರ್ವಶ್ರೇಷ್ಠಾಧಿಕಾರಿಗಳಾಗಿರುವ ವೈಷ್ಣವಾಗ್ರೇಸರರಾದ ಹೇ ಶ್ರೀಮದಾನಂದತೀರ್ಥಭಗವತ್ಪಾದರೇ ! ನಿಮ್ಮ

---

* ಇಂದ್ರಾಣೀ (ಶಚೀ) ವಾರುಣೀ (ಶೇಷಪತ್ನೀ) ರೋಹಿಣೀ, ತಾರಾ, ಮಿತ್ರಾ-ವರುಣರ ಭಾರ್ಯೆಯರೇ ಮೊದಲಾದ 'ಸರ್ವದೇವಸ್ತ್ರೀ'ಯರೂ ಛಂದೋದೇವತೆ-ಗಳೆಂದೂ, ಗರುಡ ಚತುರ್ವೇದಾಭಿಮಾನಿ, ಶೇಷನು ಪಂಚರಾತ್ರಕ್ಕೂ, ಇಂದ್ರ ಕೇವಲ ಋಗ್ವೇದಕ್ಕೂ, ಸೂರ್ಯ ಯಜುರ್ವೇದಕ್ಕೂ, ಚಂದ್ರ ಸಾಮವೇದಕ್ಕೂ, ಅಗ್ನಿ ಅಥರ್ವಣವೇದಕ್ಕೂ ಅಭಿಮಾನಿಗಳೆಂದು ಋಗ್ಭಾಷ್ಯದಲ್ಲೂ (೧ನೇ ಅ. ಶ್ಲೋ. ೩೩-೪೬) ಅಧಿದೈವದಲ್ಲಿ ಅಗ್ನಿಯು ಹೋಮಕಾರ್ಯದಲ್ಲೂ, ಸೂರ್ಯ ತಾಪಕ, ಚಂದ್ರ ಕಾಂತಿಯಲ್ಲಿ, ಇಂದ್ರ ವೃಷ್ಟಿಯಲ್ಲಿ, ಶೇಷ ಪಂಚರಾತ್ರಪ್ರವೃತ್ತಿ-ಯಲ್ಲಿ, ರುದ್ರ ಹೋಮಕಾರ್ಯ ನಡೆಸುವುದರಲ್ಲಿ ದೇವತೆಗಳು (ಅಭಿಮಾನಿಗಳು) ಎಂದು ಬೃಹದ್ಭಾಷ್ಯದಲ್ಲೂ ೩/೬/೨೩ ಹೇಳಿದೆ. ಇವರೆಲ್ಲರೂ ಮೂರ್ತಿಮತ್ತಾಗಿ ಬಂದು ಶ್ರೀಮದಾಚಾರ್ಯರನ್ನು ಓಲಗಿಸುವರೆಂದು ತಿಳಿಯಬೇಕು.

ಕೀರ್ತಿಯನ್ನು ಋಗಾದಿ ಸಕಲ ವೇದಗಳೂ ಹೊಗಳುತ್ತಿರುವುದನ್ನು ಯಥಾಮತಿ ಅರಿತುಕೊಂಡು ನಿಮ್ಮ ಪಾದಾರವಿಂದಗಳಿಗೆ ದಂಡಪ್ರಣಾಮಪೂರ್ವಕ ಎರಗುತ್ತೇನೆ.

ಲೋಕದಲ್ಲಿ ಗಂಗಾಸ್ನಾನವೆಂದರೆ ಮಹಾಪುಣ್ಯಸಾಧನವೆಂದು ಪ್ರಸಿದ್ಧಿಯಿದೆ. ಆದರೆ "ನ ಹ್ಯಮ್ಮಯಾನಿ ತೀರ್ಥಾನಿ" ಎಂದು ಭಾಗವತದಲ್ಲಿ (೧೦/೮೪/೧೧) ಹೇಳಿದಂತೆ ಪಾಮರಜನರು ಕಾಣುವ ಜಡಪದಾರ್ಥವಾದ ನೀರು ಪುಣ್ಯಸಾಧಕವಲ್ಲ, ಅಲ್ಲಿ ಸನ್ನಿಹಿತರಾದ ದೇವತೆಗಳು ಉದ್ಧಾರಮಾಡುತ್ತಾರೆ. ಅಂಥಾ ತೀರ್ಥಕೋಟಿಯಲ್ಲಿರುವ ಸಕಲ ದೇವತೆಗಳೂ ತಮ್ಮ ದೇಹದಲ್ಲೇ ನೆಲೆಸಿರುವುದರಿಂದ ತಮ್ಮನ್ನು ಸ್ಮರಣೆ ಮಾಡಿದರೇ ಸಾಕು, ಮೂರೂವರೆ ಕೋಟಿ ತೀರ್ಥಗಳಲ್ಲಿ ಸ್ನಾನ ಮಾಡಿದ್ದಕ್ಕಿಂತಲೂ ಹೆಚ್ಚು ಪಾವನವಾಗುತ್ತೇವೆ, ಹೆಚ್ಚು ಪುಣ್ಯ ಲಭಿಸುತ್ತದೆ. 'ತೀರ್ಥೀಕುರ್ವಂತಿ ತೀರ್ಥಾನಿ'– ಪುಣ್ಯತೀರ್ಥಗಳನ್ನೇ ಪಾವನಮಾಡುವ ಪಾವನತಮರು ತಾವು! ಇದನ್ನೇ ಭಾಗವತದಲ್ಲಿ 'ಉಪಾಸಿತಾ....ಹರಂತ್ಯಘಂ ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ॥ (೧೦/೮೪/೧೨) ಮಹಾಜ್ಞಾನಿಗಳನ್ನು ಕ್ಷಣಮಾತ್ರ ಸೇವೆ ಮಾಡಿದರೇ ಸಾಕು, ಅವರು ಸಕಲ ಪಾಪಗಳನ್ನೂ ಪರಿಹಾರಮಾಡಿ ಪರಿಶುದ್ಧರನ್ನಾಗಿ ಮಾಡುತ್ತಾರೆ ಎಂದು ಹೇಳಿದೆ. (ಇದನ್ನೇ ಬೇರೆ ರೀತಿಯಲ್ಲಿ 'ಪುರಂದರವಿಠಲನ ಪಾದಪೂಜೆಯ ಮಾಳ್ಪ। ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ॥ ಅಂಜಿಕಿನ್ಯಾತಕಯ್ಯ' ಎಂದೂ, 'ಮಧ್ವರಾಯರ ನೆನೆದು ಪರಿಶುದ್ಧರಾಗಿರೋ' ಎಂದೂ ಪುರಂದರದಾಸರು ಹಾಡಿದರೆ, ವಿಜಯದಾಸರು 'ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ' ಎಂದರು). ಹೇ ಮಧ್ವಾಚಾರ್ಯರೇ! ಗಂಗಾಸ್ನಾನ ಅತ್ಯಂತ ಪುಣ್ಯಸಾಧನವೆಂದು ಒಪ್ಪಿಕೊಂಡರೂ ಗಂಗಾಸ್ನಾನದಿಂದ, ಸ್ನಾನ ಮಾಡಿದವನು ಒಬ್ಬ ಮಾತ್ರ ಉದ್ಧೃತನಾದಾನು! ಅದಕ್ಕೆ ಹೆಚ್ಚಿನ ಸಾಮರ್ಥ್ಯವೆಲ್ಲಿದೆ, ಭಗವನ್! ತಮ್ಮ ಸ್ಮರಣೆಯಿಂದಲೇ ನಮ್ಮ ಕುಲಕೋಟಿಯೆಲ್ಲವನ್ನೂ ಉದ್ಧಾರಮಾಡುವ ತಮ್ಮನ್ನು ಮತ್ತೆ ಮತ್ತೆ ದಿನೇ ದಿನೇ, ಅಹರ್ನಿಶಿಯೂ ವಂದಿಸುತ್ತೇನೆ.

ಸಂಸಾರಸಾಗರವು ಅಪಾರವಾಗಿದೆ. ಅಷ್ಟೇ ಅಲ್ಲ, ಜನನ-ಮರಣ, ರೋಗ-ರುಜಿನ, ಕಷ್ಟಕಾರ್ಪಣ್ಯ, ವೃದ್ಧಿಹ್ರಾಸಾದಿ ಅಸಂಖ್ಯದುಃಖಗಳಿಂದ ಭಯಂಕರವಾಗಿದೆ. ಈ ಸಂಸಾರಭಯದಿಂದ ಪಾರುಮಾಡುವ ಸಮರ್ಥರು ತಾವೊಬ್ಬರೇ! ಏಕೆಂದರೆ ನಿಮ್ಮ ಮತವೇ ಹರಿಯ ಮತ, ನೀವು ಒಲಿದರೆ ಆ ಹರಿಯೂ ಒಲಿಯುವನು. ನೀವು ಒಲಿದರೆ ನಮಗೆ ಯಾವುದಕ್ಕೇನು ಕೊರತೆ, ಭಗವನ್! ಮೋಕ್ಷಾದ್ಯಖಿಳ ಪುರುಷಾರ್ಥಗಳನ್ನೂ ಅನುಗ್ರಹಿಸುವಿರಿ. ಆದಕಾರಣ ಹೇ ಭಗವತ್ಪಾದರೇ! ಅನನ್ಯಭಾವನೆಯಿಂದ ಶ್ರದ್ಧಾ-ಭಕ್ತ್ಯಾದರೋಪೇತನಾಗಿ ದೈನ್ಯತೆಯಿಂದ ತಮ್ಮನ್ನು ಮೊರೆಹೊಕ್ಕಿದ್ದೇನೆ, ತಮ್ಮ ಪಾದಾರವಿಂದಗಳನ್ನೂ ಗಟ್ಟಿಯಾಗಿ ಹಿಡಿದು, ಅವುಗಳನ್ನೇ ನಂಬಿ, ನಮಸ್ಕರಿಸಿ ಶರಣಾಗತನಾಗಿದ್ದೇನೆ, ನನ್ನನ್ನು ರಕ್ಷಿಸಿ ಉದ್ಧಾರಮಾಡೋಣ-ವಾಗಲಿ—ಎಂಬುದೇ ಶ್ಲೋಕಾಭಿಪ್ರಾಯ.

ಝ) ಶ್ರುತಿ ಸಮಾಖ್ಯೆ—i) ಸಜ್ಜನಾನ್ ಮೋದಯಂತಂ ಎಂಬು-ದಕ್ಕೆ 'ಸ ಪೂರ್ವ್ಯಃ ಪವತೇ'—ಎಂಬ ಋಙ್ಮಂತ್ರದ (೯/೭೭/೨) 'ಸ ಮಧ್ವ ಆವಯತೇ' ಎಂಬ ಭಾಗ ಸಮಾಖ್ಯೆ. ಮಂತ್ರದ ಅರ್ಥವನ್ನು ಖಂಡ 333-ಕ ದಲ್ಲಿ ಕೊಟ್ಟಿದೆ).

ಇಲ್ಲಿಗೆ ೪೦ನೇ ಶ್ಲೋಕ ಮುಗಿಯಿತು

೫ನೇ ವರ್ಗ—ಫಲಶ್ರುತಿ (ಶ್ಲೋಕ ೪೧)

ಶ್ಲೋಕ ೪೧. ಫಲಶ್ರುತಿ ಪೂರ್ವಕ ಸಮಾಪ್ತಿ

360. ಕ) ಅವತಾರಿಕೆ—(ಕಕ.ವಿ.ಛ.) ಈಗ ಈ ಸ್ತೋತ್ರ-ವನ್ನು ರಚಿಸಿದ ತ್ರಿವಿಕ್ರಮಪಂಡಿತಾಚಾರ್ಯರು ಈ ಸ್ತುತಿಯನ್ನು ಉಪ-ಸಂಹಾರ ಮಾಡುವವರಾಗಿ ತಮ್ಮ ಸತ್ಕುಲಪ್ರಸೂತತ್ವವನ್ನು ಪ್ರಕಟಿಸುವುದ-ಕ್ಕಾಗಿ ತಮ್ಮ ಕುಲದೇವತೆ-ತಂದೆ ಇವರೆಲ್ಲರ ಹೆಸರು ಹೇಳಿ ಈ ಸ್ತೋತ್ರವನ್ನು ಪಠಿಸುವವರಿಗೆ ದೊರಕುವ ಫಲವನ್ನೂ ಹೇಳುತ್ತಾರೆ. (ಪುರಾ.) ಈ ರೀತಿ-

ಯಾಗಿ ಹರಿವಾಯುಸ್ತುತಿಯನ್ನು ಮುಗಿಸಿದ ಪೂಜ್ಯರಾದ ತ್ರಿವಿಕ್ರಮ-ಪಂಡಿತಾಚಾರ್ಯರು ಸಜ್ಜನರಿಗೆ ಆದರ ಹುಟ್ಟಿಸಲು ಈ ಸ್ತುತಿಯ ಪಠನಾದಿ-ಗಳಿಂದ ಆಗುವ ಫಲಗಳನ್ನು ನಿರೂಪಿಸುತ್ತಾರೆ—

ಸುಬ್ರಹ್ಮಣ್ಯಾಖ್ಯಸೂರೇಃ ಸುತ ಇತಿ ಸುಭೃಶಂ
ಕೇಶವಾನಂದತೀರ್ಥ-
ಶ್ರೀಮತ್ಪಾದಾಬ್ಜಭಕ್ತಃ ಸ್ತುತಿಮಕೃತ ಹರೇರ್-
ವಾಯುದೇವಸ್ಯ ಚಾಸ್ಯ ।
ತತ್ಪಾದಾರ್ಚಾದರೇಣ ಗ್ರಥಿತಪದಲಸನ್
ಮಾಲಯಾ ತ್ವೇತಯಾ ಯೇ
ಸಂರಾಧ್ಯಾಮೂ ನಮಂತಿ ಪ್ರತತಮತಿಗುಣಾ
ಮುಕ್ತಿಮೇತೇ ವ್ರಜಂತಿ ॥ ೪೧ ॥

(ಇಲ್ಲಿ ಪುನಃ ಪಾಂತ್ವಸ್ಮಾನ್, ಲಕ್ಷ್ಮೀಕಾಂತ ಎಂಬ ನಖಸ್ತುತಿಯ
ಎರಡು ಶ್ಲೋಕಗಳನ್ನು ಪಠಿಸಬೇಕು)

ಇತಿ ಶ್ರೀಮತ್ಕವಿಕುಲತಿಲಕ-ಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯ-
ವಿರಚಿತಾ ಶ್ರೀಹರಿವಾಯುಸ್ತುತಿಃ ಸಮಾಪ್ತಾ
॥ ಶ್ರೀಕೃಷ್ಣಾರ್ಪಣಮಸ್ತು ॥

ಖ) ಪದವಿಭಾಗ—ಸುಬ್ರಹ್ಮಣ್ಯಾಖ್ಯಸೂರೇಃ, ಸುತಃ, ಇತಿ, ಸುಭೃಶಂ, ಕೇಶವಾ....ಭಕ್ತಃ ಸ್ತುತಿಂ, ಅಕೃತ, ಹರೇಃ, ವಾಯುದೇವಸ್ಯ, ಚ, ಅಸ್ಯ, ತತ್ಪಾದಾರ್ಚಾದರೇಣ, ಗ್ರಥಿತ....ಮಾಲಯಾ, ತು, ಏತಯಾ, ಯೇ, ಸಂರಾಧ್ಯ, ಅಮೂ, ನಮಂತಿ, ಪ್ರತತ-ಮತಿ-ಗುಣಾಃ, ಮುಕ್ತಿಂ, ಏತೇ, ವ್ರಜಂತಿ ॥

ಗ) ವಿಶ್ಲೇಷಣೆ—ಈ ಶ್ಲೋಕ ಫಲಶ್ರುತಿರೂಪವಾದ್ದರಿಂದ ಎರಡ-ರ್ಥದ ಪ್ರಸಕ್ತಿಯೇ ಇಲ್ಲ. ಪೂರ್ವಾರ್ಧವು ಒಂದು ಸಾಮಾನ್ಯವಾಕ್ಯ. ಉತ್ತರಾರ್ಧವು ಇನ್ನೊಂದು ವಾಕ್ಯ—ಅಂದರೆ ಸಂಯುಕ್ತ ವಾಕ್ಯ. ಪೂರ್ವಾ-ರ್ಧದ ವಾಕ್ಯದಲ್ಲಿ ತ್ರಿವಿಕ್ರಮಪಂಡಿತಃ ಅಥವಾ ತ್ರಿವಿಕ್ರಮಃ ಎಂಬ ಕರ್ತೃ-ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು; ಆಗ ತ್ರಿವಿಕ್ರಮಃ ಅಥವಾ

ತ್ರಿವಿಕ್ರಮಪಂಡಿತಃ ಇತಿ ಸ್ತುತಿಂ ಅಕೃತ-ತ್ರಿವಿಕ್ರಮ(ಪಂಡಿತ)ನು ಈ ಸ್ತೋತ್ರವನ್ನು ಮಾಡಿದನು ಅಥವಾ ರಚಿಸಿದನು ಎಂಬುದೇ ಮುಖ್ಯವಿಷಯ. ಆ ತ್ರಿವಿಕ್ರಮ ಯಾರು ಎಂದರೆ ೧) ಸುಬ್ರಹ್ಮಣ್ಯಾಖ್ಯಸೂರೇಃ ಸುತಃ- ಸುಬ್ರಹ್ಮಣ್ಯಪಂಡಿತರ ಮಗ ಎಂದೂ ೨) ಕೇಶವಾನಂದ....ಭಕ್ತಃ-ಕೇಶವನ ಮತ್ತು ಮಧ್ವಾಚಾರ್ಯರ ಭಕ್ತ ಎಂದೂ ಹೇಳಿಕೊಂಡರು. ಸುಭೃಶಂ- ಅತ್ಯಧಿಕವಾಗಿ ಎಂಬುದು ಭಕ್ತಃ ಎಂಬುದಕ್ಕೆ ವಿಶೇಷಣ. ಹರೇಃ ಅಸ್ಯ ವಾಯುದೇವಸ್ಯ ಎಂಬುದು ಸ್ತುತಿಯೊಡನೆ ಸೇರುತ್ತದೆ. ಯಾರ ಸ್ತುತಿ ಎಂದರೆ ಹರಿಯ ಮತ್ತು ವಾಯುದೇವರ ಸ್ತುತಿ ಎಂದು ವಿವರಣೆ. ಹೀಗೆ ಒಟ್ಟಿನಲ್ಲಿ ಸುಬ್ರಹ್ಮಣ್ಯಪಂಡಿತರ ಮಗನೂ ಶ್ರೀಹರಿವಾಯುಗಳ ಭಕ್ತನೂ ಆದ ತ್ರಿವಿಕ್ರಮಪಂಡಿತ ಈ ಹರಿ-ವಾಯುಗಳ ಸ್ತುತಿಯನ್ನು ರಚಿಸಿದನು ಎಂಬುದೇ ಪೂರ್ವಾರ್ಧದ ವಿಷಯ.

ಉತ್ತರಾರ್ಧದಲ್ಲಿ ಈ ಸ್ತುತಿಯ ಫಲವನ್ನು ಹೇಳುತ್ತಾರೆ, ಏನೆಂದರೆ ಏತೇ ಮುಕ್ತಿಂ ವ್ರಜಂತಿ (ಎಂಬ ಕಟ್ಟಕಡೆಯ ಭಾಗ)—ಇವರು ಮುಕ್ತಿ- ಯನ್ನು ಹೊಂದುತ್ತಾರೆ ಎಂಬುದೇ ಫಲಶ್ರುತಿ. ಏತೇ-ಇವರು ಎಂದರೆ ಯಾರು ? ಎಂದರೆ ಅದಕ್ಕೆ ಉತ್ತರ—ಯೇ ಅಮೂ ಸಂರಾಧ್ಯ ನಮಂತಿ, ಏತೇ ಮುಕ್ತಿಂ ವ್ರಜಂತಿ, ಯಾರು (ಪ್ರಸಕ್ತರಾದ ಹರಿ-ವಾಯು) ಇಬ್ಬರನ್ನೂ ಆರಾಧಿಸಿ ನಮಸ್ಕರಿಸುತ್ತಾರೋ ಅವರು ಮುಕ್ತಿಗೆ ಹೋಗುತ್ತಾರೆ – ಎಂದು ಸಂಬಂಧ. ಆರಾಧಿಸುವುದು ಹೇಗೆ ಎಂದರೆ ಏತಯಾ ಗ್ರಥಿತ....ಮಾಲಯಾ ಸಂರಾಧ್ಯ—ಈ ರಚಿತವಾದ ಸ್ತುತಿಯೆಂಬ ಮಾಲಿಕೆಯಿಂದ ಆರಾಧಿಸಿ ಎಂದು ಸಂಬಂಧ. ರಚಿಸು (ಗ್ರಥಿತ)ವುದಕ್ಕೆ ಕಾರಣವೇನು ? ಎಂದರೆ—ತತ್ಪಾದಾ- ರ್ಚಾದರೇಣ–ಅವರ ಪಾದಸೇವೆಯ ಆದರದಿಂದ ರಚಿಸಿದ್ದು. ಮುಕ್ತಿಯನ್ನು ಏಕೆ ಅಥವಾ ಹೇಗೆ ಹೊಂದುತ್ತಾರೆಂದರೆ— ಪ್ರತತ-ಮತಿ-ಗುಣಾಃ ಮುಕ್ತಿಂ ವ್ರಜಂತಿ–ಅಪರೋಕ್ಷಜ್ಞಾನ ಪಡೆದು ಹೋಗುತ್ತಾರೆ. ಉತ್ತರಾರ್ಧದ ಅನ್ವಯ ಹೇಗೆಂದರೆ—ಆ ಹರಿವಾಯುಗಳ ಮೇಲಿನ ಆದರದಿಂದ ರಚಿಸಿದ ಈ ಸ್ತುತಿರೂಪ ಮಾಲೆಯಿಂದ ಯಾರು ಆ ಹರಿವಾಯುಗಳಿಬ್ಬರನ್ನೂ ಆರಾಧಿಸಿ

ವಂದಿಸುತ್ತಾರೆಯೋ ಆವರು ಅಪರೋಕ್ಷಜ್ಞಾನ ಪಡೆದು ಮುಕ್ತಿಯನ್ನೈದು-ತ್ತಾರೆಂಬುದೇ ಈ ಸ್ತೋತ್ರಕ್ಕೆ ಫಲಶ್ರುತಿ.

ಘ) ಕಠಿನಶಬ್ದಾರ್ಥ—೧) ಸೂರೇಃ 'ವಿದ್ವಾನ್ ಸನ್ ಕೋವಿದಃ ಸೂರಿಃ ಮೇಧಾವೀ ಪಂಡಿತೋ ಬುಧಃ' ವೈಜಯಂತೀಕೋಶ; 'ಧೀಮಾನ್ ಸೂರಿಃ ಕೃತೀ' ಅಮರ. ಆದ್ದರಿಂದ ಸೂರೇಃ-ಪಂಡಿತರ, ವಿದ್ವಾಂಸರ ಎಂದರ್ಥ. ೨) ಸು-ಭೃಶಂ ಎಂಬುದು ಅವ್ಯಯ. 'ಅತಿವೇಲ-ಭೃಶಾ-ತ್ಯರ್ಥಾಃ' ಅಮರದಂತೆ ಭೃಶ ಎಂದರೇ ಹೆಚ್ಚಾಗಿ; ಸು-ಭೃಶಂ-ಬಹಳ ಹೆಚ್ಚಾಗಿ. ೩) ಕೇಶವ ಶಬ್ದಾರ್ಥವನ್ನು ಗೀತಾಭಾಷ್ಯದಲ್ಲಿ (೨/೫೪) ಹೇಳಿದ್ದಾರೆ—'ಕಂ ಬ್ರಹ್ಮಾಣಮೀಶಂ ರುದ್ರಂ ಚ ವರ್ತಯತೀತಿ ಕೇಶವಃ। ಕ-ಬ್ರಹ್ಮ-ನನ್ನೂ, ಈಶ-ರುದ್ರನನ್ನೂ, ವ-ಸೃಷ್ಟ್ಯಾದಿಗಳಿಂದ ಪ್ರೇರಿಸುವವನೆಂದರ್ಥ. ೪) ಹರೇಃ (ಭ.) ಹರತಿ-ಸಂಹರತಿ ಪಾಪಸಮೂಹಮಿತಿ ಹರಿಃ। ಪಾಪ-ಸಮೂಹವನ್ನು ಹರಣಮಾಡುವುದರಿಂದ ಹರಿ ಅಥವಾ ಹರತಿ—ಆಹರತಿ-ಸ್ವೀಕರೋತಿ ಭಕ್ತೈರ್ದತ್ತಂ ಪತ್ರಪುಷ್ಪಾದಿಕಮಿತಿ ವಾ ಹರಿಃ। ಭಕ್ತರು ಭಕ್ತಿಯಿಂದ ಪತ್ರ ಪುಷ್ಪ ಫಲ ಏನು ಕೊಟ್ಟರೂ (ಹರಣ)-ಸ್ವೀಕಾರ ಮಾಡು-ವುದರಿಂದಲೂ ಹರಿ. ೫) ಗ್ರಥಿತ....ಮಾಲಯಾ—ಗ್ರಥಿತ-ರಚಿಸಿದ, ಪದ-ಪದ (ಶಬ್ದ)ಗಳೆಂಬ ಹೂವುಗಳ, ಲಸತ್-ಶೋಭಿಸುವ, ಮಾಲಯಾ-ಹಾರ-ದಿಂದ, ಈ ಸ್ತೋತ್ರರೂಪವಾದ ಹೂಮಾಲೆಯಿಂದ. ೬) ತು ಅವಧಾರಣಾ-ರ್ಥದಲ್ಲಿ ಬಂದಿದೆ. 'ತು ಸ್ಯಾದ್ ಭೇದೇಽವಧಾರಣೇ' ಅಮರ. ಏತ-ಯಾ ತು ಎಂದರೆ ಕೇವಲ ಈ ಸ್ತೋತ್ರ ಹೇಳಿಕೊಂಡರೆ ಸಾಲದು, ನಖಸ್ತುತಿ ಸಹಿತವಾಗಿಯೇ ಪಠಿಸಬೇಕು ಎಂದು ಒತ್ತಿ ಹೇಳುತ್ತದೆ. ಏಕೆಂದರೆ ತೌಳವ ಪಾಠದ ಖಿಲವಾಯುಸ್ತುತಿಯಲ್ಲಿ 'ಪಾಂತ್ವಸ್ಮಾಂಸ್ತು ವಿನಾ ಯಸ್ತು ವಾಯು-ಸ್ತುತ್ಯಕ್ಷರಂ ಜಪೇತ್। ವ್ಯರ್ಥಂ ಭವತಿ ತತ್ಸರ್ವಂ ಪ್ರತ್ಯಕ್ಷಂ ನರಕಂ ವ್ರಜೇತ್॥' ಎಂದು ಪಠಿಸುವುದುಂಟು. ೭) ಪ್ರತತಮತಿಗುಣಾಃ—ಪ್ರತತ-ವಿಸ್ತಾರವಾದ, ಮತಿ-ಅಪರೋಕ್ಷಜ್ಞಾನವೆಂಬ, ಗುಣಾಃ-ಗುಣವುಳ್ಳ-ವರಾಗಿ; ಭಗವಂತನ ಸಾಕ್ಷಾತ್ಕಾರವನ್ನೂ ಇನ್ನೂ ಮುಂದೆ ಬಿಂಬಾಪರೋಕ್ಷ-ವನ್ನೂ ಪಡೆದು ಎಂದರ್ಥ. ಬ್ರಹ್ಮಸೂತ್ರಗಳಲ್ಲಿ ಬಿಂಬಾಪರೋಕ್ಷವಾಗದ

ಹೊರತು ಮೋಕ್ಷವಿಲ್ಲ ಎಂದು ಸಾಮಾನ್ಯಾಧಿಕರಣದಲ್ಲಿ (೩ ಅ. ೩ ಪಾ. ೩೪ ಅಧಿ.) ಹೇಳಿದೆ.

ಙ) ದಂಡಾನ್ವಯ—(ಪೂರ್ವಾರ್ಧ)ಇತಿ ಸುಬ್ರಹ್ಮಣ್ಯಾಖ್ಯಸೂರೇಃ ಸುತಃ, ಸುಭೃಶಂ ಕೇಶವಾ....ಭಕ್ತಃ (ತ್ರಿವಿಕ್ರಮಪಂಡಿತಃ) ಹರೇಃ ಅಸ್ಯ ವಾಯುದೇವಸ್ಯ ಚ ಸ್ತುತಿಂ ಅಕೃತ। (ಉತ್ತರಾರ್ಧ) ತತ್ಪಾದಾರ್ಚಾದರೇಣ ಗ್ರಥಿತ....ಮಾಲಯಾ ಏತಯಾ ತು ಯೇ ಅಮೂ ಸಂರಾಧ್ಯ ನಮಂತಿ, ಏತೇ ಪ್ರತತ-ಮತಿ-ಗುಣಾಃ ಮುಕ್ತಿಂ ವ್ರಜಂತಿ॥

ಚ) ಅನ್ವಯಾರ್ಥ ಇತಿ-ಈ ಪ್ರಕಾರವಾಗಿ; ಸುಬ್ರಹ್ಮಣ್ಯ ಆಖ್ಯ ಸೂರೇಃ-ಸುಬ್ರಹ್ಮಣ್ಯ ಎಂದು ಹೆಸರುಳ್ಳ ಪಂಡಿತರ (ವಿದ್ವಾಂಸರ); ಸುತಃ-ಮಗನಾದ; ಸುಭೃಶಂ-ಅತಿಶಯವಾಗಿ; ಕೇಶವಾ....ಭಕ್ತಃ—ಕೇಶವ-ಶ್ರೀವಿಷ್ಣು, ಆನಂದತೀರ್ಥ-ಮಧ್ವಾಚಾರ್ಯರು ಇವರಿಬ್ಬರ ಶ್ರೀ-ಮತ್-ಮಂಗಳಕರವಾದ, ಪಾದಾಬ್ಜ-ಪಾದಕಮಲಗಳ, ಭಕ್ತಃ-ಭಕ್ತನಾದ; ತ್ರಿವಿಕ್ರಮಪಂಡಿತಃ-ತ್ರಿವಿಕ್ರಮಪಂಡಿತನು; ಹರೇಃ-ಶ್ರೀಹರಿಯ; ಅಸ್ಯ-ಈ (ಅವತಾರತ್ರಯೋಪೇತರಾದ, ಇದುವರೆಗೆ ಸ್ತೋತ್ರ ಮಾಡಿದ); ವಾಯು-ದೇವಸ್ಯ ಚ-ವಾಯುದೇವರ; ಸ್ತುತಿಂ-ಸ್ತೋತ್ರವನ್ನು; ಅಕೃತ-ಮಾಡಿ-ದನು. (ಉತ್ತರಾರ್ಧ) ತತ್ಪಾದಾ....ದರೇಣ—ತತ್ಪಾದ-ಅವರಿಬ್ಬರ ಪಾದಗಳ, ಆರ್ಚಾ-ಪೂಜೆಯ, ಆದರೇಣ-ಆದರದಿಂದ; ಗ್ರಥಿತ....ಮಾಲಯಾ—ಗ್ರಥಿತ-ರಚಿಸಿದ, ಪದ-ಶಬ್ದಗಳೆಂಬ ಹೂವುಗಳ, ಲಸತ್-ಪರಿಶೋಭಿಸುವ, ಮಾಲಯಾ-ಹಾರದಂತಿರುವ; ಏತಯಾ ತು-ನಖಸ್ತುತಿಸಹಿತವಾದ ಈ ಸ್ತೋತ್ರದಿಂದ; ಯೇ-ಯಾರು; ಅಮೂ-ಈ ಹರಿವಾಯುಗಳಿಬ್ಬರನ್ನೂ; ಸಂರಾಧ್ಯ-ಆರಾಧಿಸಿ; ನಮಂತಿ-ವಂದಿಸುತ್ತಾರೋ, ಏತೇ-ಇವರು; ಪ್ರತತ-ಮತಿ-ಗುಣಾಃ-ಭಗವದಪರೋಕ್ಷವನ್ನೂ, ಬಿಂಬಾಪರೋಕ್ಷವನ್ನೂ ಪಡೆದವರಾಗಿ, ಮುಕ್ತಿಂ-ಮುಕ್ತಿಗೆ, ವ್ರಜಂತಿ-ಹೋಗುತ್ತಾರೆ.

ಛ) ಭಾವಾರ್ಥ—ಸುಬ್ರಹ್ಮಣ್ಯ-ಪಂಡಿತರೆಂಬ ದೊಡ್ಡ ವಿದ್ವಾಂಸರ ಮಗನಾದ ತ್ರಿವಿಕ್ರಮಪಂಡಿತನೆಂಬಾತ ಕೇಶವನಲ್ಲೂ ಶ್ರೀಮದಾನಂದತೀರ್ಥ-ರಲ್ಲೂ ಅತ್ಯಂತ ದೃಢಭಕ್ತಿಯುಳ್ಳವನು. ಈತನೇ ಈ ಸ್ತುತಿಯನ್ನು

ರಚಿಸಿದನು. ಇದು ಹರಿಯ ಸ್ತುತಿಯೂ ಹೌದು, ವಾಯುದೇವರ ಸ್ತೋತ್ರವೂ ಹೌದು. ಅವರಿಬ್ಬರಲ್ಲಿದ್ದ ಆದರದಿಂದಲೇ ಅವರಿಬ್ಬರ ಅರ್ಚನೆಗೂ ಉಪಯೋಗವಾಗುವಂತೆ, ಹೂವಾಡಿಗನು ಹೂವಿನಹಾರ ಕಟ್ಟುವಂತೆ ಸುಬಂತ-ತಿಜಂತಗಳೆಂಬ ಶಬ್ದಾವಳಿಯನ್ನೇ ಜೋಡಿಸಿ ಈ ಸ್ತೋತ್ರ ರಚಿಸಲಾಗಿದೆ. ಈ ಸ್ತೋತ್ರ ಪಠಿಸುತ್ತಾ ಯಾರು ಈ ಹರಿವಾಯುಗಳಿಬ್ಬರನ್ನೂ ಆರಾಧಿಸುವರೋ ಅವರು ಕ್ಷಿಪ್ರದಲ್ಲೇ ಅಪರೋಕ್ಷಜ್ಞಾನವನ್ನು ಹೊಂದಿ, ಬಿಂಬಾಪರೋಕ್ಷವನ್ನೂ ಪಡೆದು ಮುಕ್ತಿಗೂ ಹೋಗುತ್ತಾರೆ. ಇತ್ಯಶೇಷಮತಿಮಂಗಲಮ್ ॥

ಜ) **ಶ್ರುತಿಸಮಾಖ್ಯೆ**—ಈ ಶ್ಲೋಕದಲ್ಲಿರುವ 'ಕೇಶವಾನಂದತೀರ್ಥಶ್ರೀಮತ್ಪಾದಾಬ್ಜ ಭಕ್ತಃ ಸ್ತುತಿಮಕೃತ ಹರೇಃ' ಎಂಬುದಕ್ಕೆ 'ವಿಷ್ಟಂಭೋ ದಿವಃ....' ಎಂಬ ಋಜ್ಮಂತ್ರದ (ಋ. ೯/೮೯/೬) 'ಮಧ್ವೋ ಅಂಶುಃ ಪವತ ಇಂದ್ರಿಯಾಯ' ಎಂಬ ಭಾಗ ಸಮಾಖ್ಯೆ. ಮಂತ್ರದ ಅರ್ಥವನ್ನು ಖಂಡ 341-ಛ-ದಲ್ಲಿ ವಿವರಿಸಿದೆ.

ಹರಿಸಮರ್ಪಣೆ

ಹರಿವಾಯುಸ್ತುತಿಪ್ರೋಕ್ತ—ಪ್ರಮೇಯಮಣಿಮಾಲಿಕಾ ।
ನಾನಾಟೀಕಾಭ್ಯ ಆಹೃತ್ಯ ವಿಚಾರ್ಯ ಚ ಪುನಃ ಪುನಃ ॥ ೧ ॥

ಯತ್ಪ್ರೀತ್ಯೈ ವಿಷ್ಣುತೀರ್ಥೇನ ರಚಿತಾ ತತ್ಕೃಪಾಬಲಾತ್ ।
ಮುದಾ ಹೃದಿ ಧರೇದೇನಾಂ ವ್ಯಾಸಾಖ್ಯೋ ಮಧ್ವವಲ್ಲಭಃ ॥ ೨ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀ ಗುರುಭ್ಯೋನಮಃ ॥

॥ ಶ್ರೀಲಕ್ಷ್ಮೀನೃಸಿಂಹಾಯ ನಮಃ ॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಚಿತಾ

ಶ್ರೀನರಸಿಂಹನಖಸ್ತುತಿಃ

ಪಾಂತ್ವಸ್ಮಾನ್ ಪುರುಹೂತವೈರಿಬಲವನ್-ಮಾತಂಗಮಾದ್ಯದ್ ಘಟಾ-
ಕುಂಭೋಚ್ಚಾದ್ರಿ-ವಿಪಾಟನಾಧಿಕಪಟು-ಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯ-ಪ್ರತತಸುನಖರಾ ದಾರಿತಾರಾತಿ-ದೂರ-
ಪ್ರಧ್ವಸ್ತಧ್ವಾಂತಶಾಂತ-ಪ್ರವಿತತಮನಸಾ ಭಾವಿತಾ ನಾಕಿವೃಂದೈಃ (ಭೂರಿಭಾಗ್ಯೈಃ) ॥ ೧ ॥

ಲಕ್ಷ್ಮೀಕಾಂತ ! ಸಮಂತತೋಽಪಿ ಕಲ) ವಿಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।
ಯದ್ರೋಷೋತ್ಕರದಕ್ಷನೇತ್ರಕುಟಿಲ-ಪ್ರಾಂತೋತ್ಥಿತಾಗ್ನಿಸ್ಫುರತ್
ಖದ್ಯೋತೋಪಮ-ವಿಸ್ಫುಲಿಂಗಭಸಿತಾ ಬ್ರಹ್ಮೇಶಶಕ್ರೋತ್ಕರಾಃ ॥ ೨ ॥

ಶ್ರೀಹರಿವಾಯುಸ್ತುತಿಃ

ಹರಿಃ ಓಂ ॥ ಶ್ರೀಮದ್ವಿಷ್ಣ್ವಂಘ್ರಿನಿಷ್ಠಾ-ತಿಗುಣಗುರುತಮ-ಶ್ರೀಮದಾನಂದತೀರ್ಥ-
ತ್ರೈಲೋಕ್ಯಾಚಾರ್ಯಪಾದೋ—ಜ್ಜ್ವಲ-ಜಲಜ-ಲಸತ್-ಪಾಂಸವೋಽಸ್ಮಾನ್ ಪುನಂತು ।
ವಾಚಾಂ ಯತ್ರ ಪ್ರಣೇತ್ರೀ ತ್ರಿಭುವನಮಹಿತಾ ಶಾರದಾ ಶಾರದೇಂದು-
ಜ್ಯೋತ್ಸ್ನಾಭದ್ರಸ್ಮಿತಶ್ರೀ—ಧವಲಿತಕಕುಭಾ ಪ್ರೇಮಭಾರಂ ಬಭಾರ ॥ ೧ ॥

ಉತ್ಕಂಠಾಕುಂಠಕೋಲಾ—ಹಲಜವವಿದಿತಾ—ಜಸ್ರಸೇವಾನುವೃದ್ಧ-
ಪ್ರಾಜ್ಞಾತ್ಮಜ್ಞಾನಧೂತಾಂ—ಧತಮಸಸುಮನೋ—ಮೌಲಿರತ್ನಾವಲೀನಾಮ್ ।
ಭಕ್ತ್ಯುದ್ರೇಕಾವಗಾಢ—ಪ್ರಘಟನಸಘಟಾತ್-ಕಾರಸಂಘೃಷ್ಯಮಾಣ-
ಪ್ರಾಂತಪ್ರಾಗ್ರ್ಯಾಂಘ್ರಿಪೀಠೋ—ತ್ಥಿತಕನಕರಜಃ—ಪಿಂಜರಾರಂಜಿತಾಶಾಃ ॥ ೨ ॥

ಜನ್ಮಾಧಿವ್ಯಾಧ್ಯುಪಾಧಿ—ಪ್ರತಿಹತಿವಿರಹ—ಪ್ರಾಪಕಾಣಾಂ ಗುಣಾನಾ-
ಮಗ್ರ್ಯಾಣಾಮರ್ಪಕಾಣಾಂ ಚಿರಮುದಿತಚಿದಾ—ನಂದಸಂದೋಹದಾನಾಮ್ ।
ಏತೇಷಾಮೇಷ ದೋಷ—ಪ್ರಮುಷಿತಮನಸಾಂ ದ್ವೇಷಿಣಾಂ ದೂಷಕಾಣಾಂ
ದೈತ್ಯಾನಾಮಾರ್ತಿಮಂಧೇ—ತಮಸಿ ವಿದಧತಾಂ ಸಂಸ್ತವೇ ನಾಸ್ಮಿ ಶಕ್ತಃ ॥ ೩ ॥

ಅಸ್ಯಾವಿಷ್ಕರ್ತುಕಾಮಂ ಕಲಿಮಲಕಲುಷೇಽಸ್ಮಿನ್ ಜನೇ ಜ್ಞಾನಮಾರ್ಗಂ
ವಂದ್ಯಂ ಚಂದ್ರೇಂದ್ರರುದ್ರ—ದ್ಯುಮಣಿಫಣಿವಯೋ—ನಾಯಕಾದ್ಯೈರಿಹಾದ್ಯ ।
ಮಧ್ವಾಖ್ಯಂ ಮಂತ್ರಸಿದ್ಧಂ ಕಿಮುತ ಕೃತವತೋ ಮಾರುತಸ್ಯಾವತಾರಂ
ಪಾತಾರಂ ಪಾರಮೇಷ್ಠ್ಯಂ ಪದಮುಪವಿಪದಃ ಪ್ರಾಪ್ತುರಾಪನ್ನಪುಂಸಾಮ್ ॥ ೪ ॥

ಉದ್ಯದ್-ವಿದ್ಯುತ್-ಪ್ರಚಂಡಾಂ ನಿಜರುಚಿನಿಕರ—ವ್ಯಾಪ್ತಲೋಕಾವಕಾಶೋ
ಬಿಭ್ರದ್ಭೀಮೋ ಭುಜೇ ಯೋಽಭ್ಯುದಿತದಿನಕರಾ—ಭಾಂಗದಾಢ್ಯಪ್ರಕಾಂಡೇ ।
ವೀರ್ಯೋದ್ಧಾರ್ಯಾಂ ಗದಾಗ್ರ್ಯಾ—ಮಯಮಿಹ ಸುಮತಿಂ ವಾಯುದೇವೋ ವಿದಧ್ಯಾ-
ದಧ್ಯಾತ್ಮಜ್ಞಾನನೇತಾ ಯತಿವರಮಹಿತೋ ಭೂಮಿಭೂಷಾಮಣಿರ್ಮೇ ॥ ೫ ॥

ಸಂಸಾರೋತ್ತಾಪನಿತ್ಯೋ—ಪಶಮದ-ಸದಯ ಸ್ನೇಹಹಾಸಾಂಬುಪೂರ-
ಪ್ರೋದ್ಯದ್-ವಿದ್ಯಾನವದ್ಯ—ದ್ಯುತಿಮಣಿಕಿರಣ—ಶ್ರೇಣಿಸಂಪೂರಿತಾಶಃ ।
ಶ್ರೀವತ್ಸಾಂಕಾಧಿವಾಸೋ—ಚಿತತರಸರಲಃ ಶ್ರೀಮದಾನಂದತೀರ್ಥ-
ಕ್ಷೀರಾಂಭೋಧಿರ್ವಿಭಿಂದ್ಯಾದ್ ಭವದನಭಿಮತಂ ಭೂರಿ ಮೇ ಭೂತಿಹೇತುಃ ॥ ೬ ॥

ಮೂರ್ಧನ್ಯೇಷೋಽಂಜಲಿರ್ಮೇ ದೃಢತರಮಿಹ ತೇ ಬಧ್ಯತೇ ಬಂಧಪಾಶ-
ಚ್ಛೇತ್ರೇ ದಾತ್ರೇ ಸುಖಾನಾಂ ಭಜತಿ ಭುವಿ ಭವಿ—ಷ್ಯದ್-ವಿಧಾತ್ರೇ ದ್ಯುಭರ್ತ್ರೇ ।
ಅತ್ಯಂತಂ ಸಂತತಂ ತ್ವಂ ಪ್ರದಿಶ ಪದಯುಗೇ ಹಂತ ಸಂತಾಪಭಾಜಾ-
ಮಸ್ಮಾಕಂ ಭಕ್ತಿಮೇಕಾಂ ಭಗವತ ಉತ ತೇ ಮಾಧವಸ್ಯಾಥ ವಾಯೋಃ ॥ ೭ ॥

ಸಾಭ್ರೋಷ್ಣಾಭೀಷುಶುಭ್ರ—ಪ್ರಭಮಭಯ ನಭೋ ಭೂರಿಭೂಭೃತ್-ವಿಭೂತಿ-
ಭ್ರಾಜಿಷ್ಣುರ್ಭೂರ್ಋಭೂಣಾಂ ಭವನಮಪಿ ವಿಭೋಽಭೇದಿ ಬಭ್ರೇ ಬಭೂವೇ ।
ಯೇನ ಭ್ರೂವಿಭ್ರಮಸ್ತೇ ಭ್ರಮಯತು ಸುಭೃಶಂ ಬಭ್ರುವದ್-ದುರ್ಭೃತಾಶಾನ್
ಭ್ರಾಂತಿರ್ಭೇದಾವಭಾಸಸ್-ತ್ವಿತಿ ಭಯಮಭಿಭೂರ್ ಭೋಕ್ಷ್ಯತೋ ಮಾಯಿಭಿಕ್ಷೂನ್ ॥ ೮ ॥

ಯೇಽಮುಂ ಭಾವಂ ಭಜಂತೇ ಸುರಮುಖಸುಜನಾ—ರಾಧಿತಂ ತೇ ತೃತೀಯಂ
ಭಾಸಂತೇ ಭಾಸುರೈಸ್ತೇ ಸಹಚರಚಲಿತೈ—ಶ್ಚಾಮರೈಶ್ಚಾರುವೇಷಾಃ ।
ವೈಕುಂಠೇ ಕಂಠಲಗ್ನ—ಸ್ಥಿರಶುಚಿವಿಲಸತ್-ಕಾಂತಿತಾರುಣ್ಯಲೀಲಾ-
ಲಾವಣ್ಯಾಪೂರ್ಣಕಾಂತಾ—ಕುಚಭರಸುಲಭಾ—ಶ್ಲೇಷಸಮ್ಮೋದಸಾಂದ್ರಾಃ ॥ ೯ ॥

ಆನಂದಾನ್ ಮಂದಮಂದಾ ದದತಿ ಹಿ ಮರುತಃ ಕುಂದಮಂದಾರನಂದ್ಯಾ-
ವರ್ತಾಮೋದಾನ್ ದಧಾನಾ ಮೃದುಪದಮುದಿತೋದ್ ಗೀತಕೈಃ ಸುಂದರೀಣಾಮ್ ।
ವೃಂದೈರಾವಂದ್ಯಮುಕ್ತೇಂ—ದ್ವಹಿಮಗುಮದನಾ—ಹೀಂದ್ರದೇವೇಂದ್ರಸೇವ್ಯೇ
ಮೌಕುಂದೇ ಮಂದರೇಽಸ್ಮಿ—ನ್ನವಿರತಮುದಯನ್ ಮೋದಿನಾಂ ದೇವದೇವ ॥ ೧೦ ॥

ಉತ್ತಪ್ತಾಽತ್ಯುತ್ಕಟತ್ವಿಟ್ ಪ್ರಕಟಕಟಕಟ-ಧ್ವಾನಸಂಘಟ್ಟನೋದ್ಯದ್-
ವಿದ್ಯುದ್ವ್ಯೂಢಸ್ಫುಲಿಂಗ—ಪ್ರಕರವಿಕಿರಣೋತ್-ಕ್ವಾಥಿತೇ ಬಾಧಿತಾಂಗಾನ್ ।
ಉದ್ಗಾಢಂ ಪಾತ್ಯಮಾನಾ ತಮಸಿ ತತ ಇತಃ ಕಿಂಕರೈಃ ಪಂಕಿಲೇ ತೇ
ಪಙ್ಕ್ತಿರ್ಗ್ರಾವ್ಣಾಂ ಗರಿಮ್ಣಾ ಗ್ಲಪಯತಿ ಹಿ ಭವದ್-ದ್ವೇಷಿಣೋ ವಿದ್ವದಾದ್ಯ ॥ ೧೧ ॥

ಅಸ್ಮಿನ್ನಸ್ಮದ್-ಗುರೂಣಾಂ ಹರಿಚರಣಚಿರ—ಧ್ಯಾನಸನ್ಮಂಗಲಾನಾಂ
ಯುಷ್ಮಾಕಂ ಪಾರ್ಶ್ವಭೂಮಿಂ ಧೃತರಣರಣಿಕ—ಸ್ವರ್ಗಿಸೇವ್ಯಾಂ ಪ್ರಪನ್ನಃ ।
ಯಸ್ತೂದಾಸ್ತೇ ಸ ಆಸ್ತೇ ऽಧಿಭವಮಸುಲಭ—ಕ್ಲೇಶನಿರ್ಮೋಕಮಸ್ತ-
ಪ್ರಾಯಾನಂದಂ ಕಥಂಚಿ—ನ್ನ ವಸತಿ ಸತತಂ ಪಂಚಕಷ್ಟೇऽತಿಕಷ್ಟೇ ॥ ೧೨ ॥

ಕ್ಷುತ್‌ಕ್ಷಾಮಾನ್ ರೂಕ್ಷರಕ್ಷೋ—ರದಖರನಖರ—ಕ್ಷುಣ್ಣವಿಕ್ಷೋಭಿತಾಕ್ಷಾ(ನ್)-
ನಾ(ಅ)ಮಗ್ನಾನಂಧಕೂಪೇ ಕ್ಷುರಮುಖಮುಖರೈಃ ಪಕ್ಷಿಭಿರ್ವಿಕ್ಷತಾಂಗಾನ್ ।
ಪೂಯಾಸೃಙ್ಮೂತ್ರವಿಷ್ಠಾ—ಕ್ರಿಮಿಕುಲಕಲಿಲೇ ತತ್‌ಕ್ಷಣಾಕ್ಷಿಪ್ತಶಕ್ತ್ಯಾ-
ದ್ಯಸ್ತ್ರವ್ರಾತಾರ್ದಿತಾಂಸ್ತ್ವದ್-ದ್ವಿಷ ಉಪಜಿಹತೇ ವಜ್ರಕಲ್ಪಾ ಜಲೂಕಾಃ ॥ ೧೩ ॥

ಮಾತರ್ಮೇ ಮಾತರಿಶ್ವನ್ ಪಿತರತುಲಗುರೋ ಭ್ರಾತರಿಷ್ಟಾಪ್ತಬಂಧೋ
ಸ್ವಾಮಿನ್ ಸರ್ವಾಂತರಾತ್ಮ—ನ್ನಜರ ಜರಯಿತರ್-ಜನ್ಮಮೃತ್ಯಾಮಯಾನಾಮ್ ।
ಗೋವಿಂದೇ ದೇಹಿ ಭಕ್ತಿಂ ಭವತಿ ಚ ಭಗವ(ನ್)-ನ್ನೂರ್ಜಿತಾಂ ನಿರ್ನಿಮಿತ್ತಾಂ
ನಿರ್ವ್ಯಾಜಾಂ ನಿಶ್ಚಲಾಂ ಸದ್-ಗುಣಗಣಬೃಹತೀಂ ಶಾಶ್ವತೀಮಾಶು ದೇವ ॥ ೧೪ ॥

ವಿಷ್ಣೋರತ್ಯುತ್ತಮತ್ವಾ—ದಖಿಲಗುಣಗಣೈ—ಸ್ತತ್ರ ಭಕ್ತಿಂ ಗರಿಷ್ಠಾಂ-
ಸಂಶ್ಲಿಷ್ಟೇ ಶ್ರೀಧರಾಭ್ಯಾ—ಮಮುಮಥ ಪರಿವಾ—ರಾತ್ಮನಾ ಸೇವಕೇಷು ।
ಯಃ ಸಂಧತ್ತೇ ವಿರಿಂ(ಚಿ)ಚ—ಶ್ವಸನವಿಹಗಪಾ—ऽನಂತರುದ್ರೇಂದ್ರಪೂರ್ವೇ-
ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮವತಿ ಸದಾ ವಾಯುರಸ್ಮದ್ಗುರುಸ್ತಂ ॥ ೧೫ ॥

ತತ್ತ್ವಜ್ಞಾನ್-ಮುಕ್ತಿಭಾಜಃ ಸುಖಯುಸಿ ಹಿ ಗುರೋ ಯೋಗ್ಯತಾತಾರತಮ್ಯಾ-
ದಾಧತ್ಸೇ ಮಿಶ್ರಬುದ್ಧೀಂ—ಸ್ತ್ರಿದಿವನಿರಯಭೂ—ಗೋಚರಾನ್ ನಿತ್ಯಬದ್ಧಾನ್ ।
ತಾಮಿಸ್ರಾಂಧಾಧಿ(ದಿ)ಕಾಖ್ಯೇ ತಮಸಿ ಸುಬಹುಲಂ ದುಃಖಯಸ್ಯನ್ಯಥಾಜ್ಞಾನ್
ವಿಷ್ಣೋರಾಜ್ಞಾಭಿರಿತ್ಥಂ ಶ್ರುತಿಶತಮಿತಿಹಾ—ಸಾದಿ ಚಾಽಕರ್ಣಯಾಮಃ ॥ ೧೬ ॥

ವಂದೇಽಹಂ ತಂ ಹನೂಮಾ—ನಿತಿ ಮಹಿತಮಹಾ—ಪೌರುಷೋ ಬಾಹುಶಾಲೀ
ಖ್ಯಾತಸ್ತೇಽಗ್ರ್ಯೋಽವತಾರಃ ಸಹಿತ ಇಹ ಬಹು ಬ್ರಹ್ಮಚರ್ಯಾದಿಧರ್ಮೈಃ ।
ಸಸ್ನೇಹಾನಾಂ ಸಹಸ್ವಾ—ನಹರಹರಹಿತಂ ನಿರ್ದಹನ್ ದೇಹಭಾಜಾ(ಂ)-
ಮಂಹೋ(ಅಂಹೋ)ಮೋಹಾಪಹೋ ಯಃ ಸ್ಪೃಹಯತಿ ಮಹತೀಂ ಭಕ್ತಿಮದ್ಯಾಪಿ ರಾಮೇ ॥೧೭॥

ಪ್ರಾಕ್ ಪಂಚಾಶತ್ ಸಹಸ್ರೈ—ರ್ವ್ಯವಹಿತಮಮಿತಂ ಯೋಜನೈಃ ಪರ್ವತಂ ತ್ವಂ
ಯಾವತ್ ಸಂಜೀವನಾದ್ಯೌ—ಷಧನಿಧಿಮಧಿಕ—ಪ್ರಾಣ ಲಂಕಾಮನೈಷೀಃ ।
ಅದ್ರಾಕ್ಷೀದುತ್ಪತಂತಂ ತತ ಉತ ಗಿರಿಮುತ್—ಪಾಟಯಂತಂ ಗೃಹೀತ್ವಾ-
ಽಽಯಾಂತಂ ಖೇ ರಾಘವಾಂಘ್ರೌ ಪ್ರಣತಮಪಿ ತದೈ—ಕಕ್ಷಣೇ ತ್ವಾಂ ಹಿ ಲೋಕಃ ॥ ೧೮ ॥

ಕ್ಷಿಪ್ತಃ ಪಶ್ಚಾತ್ ಸಲೀಲಂ ಶತಮತುಲಮತೇ ಯೋಜನಾನಾಂ ಸ ಉಚ್ಚ-
ಸ್ತಾವದ್ ವಿಸ್ತಾರವಾಂಶ್ಚಾ—ಪ್ಯುಪಲ-ಲವ ಇವ ವ್ಯಗ್ರಬುದ್ಧ್ಯಾ ತ್ವಯಾಽತಃ ।
ಸ್ವಸ್ವಸ್ಥಾನಸ್ಥಿತಾತಿ—ಸ್ಥಿರಶಕಲಶಿಲಾ—ಜಾಲಸಂಶ್ಲೇಷನಷ್ಟ
ಚ್ಛೇದಾಂಕಃ ಪ್ರಾಗಿವಾಭೂತ್ ಕಪಿವರವಪುಷ—ಸ್ತೇ ನಮಃ ಕೌಶಲಾಯ ॥ ೧೯ ॥

ದೃಷ್ಟ್ವಾ ದುಷ್ಟಾಧಿಪೋರಃ ಸ್ಫುಟಿತಕನಕಸದ್—ವರ್ಮಘೃಷ್ಟಾಸ್ಥಿಕೂಟಂ
ನಿಷ್ಪಿಷ್ಟಂ ಹಾಟಕಾದ್ರಿ—ಪ್ರಕಟತಟತಟಾ—ಕಾತಿಶಂಕೋ ಜನೋಽಭೂತ್ ।
ಯೇನಾಜೌ ರಾವಣಾರಿ—ಪ್ರಿಯನಟನಪಟುರ್ ಮುಷ್ಟಿರಿಷ್ಟಂ ಪ್ರದೇಷ್ಟುಂ
ಕಿಂ ನೇಷ್ಟೇ ಮೇ ಸ ತೇಽಷ್ಟಾ—ಪದಕಟಕತಟಿತ್—ಕೋಟಿಭಾಮೃಷ್ಟಕಾಷ್ಠಃ ॥ ೨೦ ॥

ದೇವ್ಯಾದೇಶಪ್ರಣೀತಿ—ದ್ರುಹಿಣಹರವರಾ—ವಧ್ಯರಕ್ಷೋವಿಘಾತಾ-
ದ್ಯಾಸೇವೋದ್ಯದ್ದಯಾರ್ದ್ರಃ ಸಹಭುಜಮಕರೋದ್ ರಾಮನಾಮಾ ಮುಕುಂದಃ ।
ದುಷ್ಪ್ರಾಪೇ ಪಾರಮೇಷ್ಠ್ಯೇ ಕರತಲಮತುಲಂ ಮೂರ್ಧ್ನಿ ವಿನ್ಯಸ್ಯ ಧನ್ಯಂ
ತನ್ವನ್ ಭೂಯಃ ಪ್ರಭೂತ—ಪ್ರಣಯವಿಕಸಿತಾ—ಬ್ಜೇಕ್ಷಣಸ್ತ್ವೇಕ್ಷಮಾಣಃ ॥ ೨೧ ॥

ಜಘ್ನೇ ನಿಘ್ನೇನ ವಿಘ್ನೋ ಬಹುಲ-ಬಲ-ಬಕ—ಧ್ವಂಸನಾದ್ ಯೇನ ಶೋಚದ್-
ವಿಪ್ರಾನುಕ್ರೋಶಪಾಶೈ—ರಸುವಿಧೃತಿಸುಖ—ಸ್ಯೈಕಚಕ್ರಾಜನಾನಾಮ್ ।
ತಸ್ಮೈ ತೇ ದೇವ ! ಕುರ್ಮಃ ಕುರುಕುಲಪತಯೇ ಕರ್ಮಣಾ ಚ ಪ್ರಣಾಮಾನ್
ಕಿರ್ಮೀರಂ ದುರ್ಮತೀನಾಂ ಪ್ರಥಮಮಥ ಚ ಯೋ ನರ್ಮಣಾ ನಿರ್ಮಮಾಥ ॥ ೨೨ ॥

ನಿರ್ಮೃದ್ನ(ತ್ನ)ನ್ನತ್ಯ(ಪ್ರ)ಯತ್ನಂ ವಿಜರವರ ಜರಾ—ಸಂಧಕಾಯಾಸ್ಥಿಸಂಧೀನ್
ಯುದ್ಧೇ ತ್ವಂ(ತಂ)ಸ್ವಧ್ವರೇ ವಾ ಪಶುಮಿವ ದಮಯನ್ ವಿಷ್ಣುಪಕ್ಷದ್ವಿಡೀಶಮ್ ।
ಯಾವತ್ ಪ್ರತ್ಯಕ್ಷಭೂತಂ ನಿಖಿಲಮಖಭುಜಂ ತರ್ಪಯಾಮಾಸಿಥಾಸೌ
ತಾವತ್ಯಾಽಯೋಜಿ ತೃಪ್ತ್ಯಾ ಕಿಮು ವದ ಭಗವನ್ ರಾಜಸೂಯಾಶ್ವಮೇಧೇ ॥ ೨೩ ॥

ಕ್ಷ್ವೇಳಾಕ್ಷೀಣಾಟ್ಟಹಾಸಂ ತವರಣಮರಿಹ(ನ್) ಉದ್ಗದೋದ್ದಾಮಬಾಹೋ
ಬಹ್ವಕ್ಷೌಹಿಣ್ಯನೀಕ—ಕ್ಷಪಣಸುನಿಪುಣಂ ಯಸ್ಯ ಸರ್ವೋತ್ತಮಸ್ಯ ।
ಶುಶ್ರೂಷಾರ್ಥಂ ಚಕರ್ಥ ಸ್ವಯಮಯ(ಮಿಹ)ಮಥ ಸಂ—ವಕ್ತುಮಾನಂದತೀರ್ಥ-
ಶ್ರೀಮನ್ನಾಮನ್ ಸಮರ್ಥ—ಸ್ತ್ವಮಪಿ ಹಿ ಯುವಯೋಃ ಪಾದಪದ್ಮಂ ಪ್ರಪದ್ಯೇ || ೧೪ ||

ದ್ರುಹ್ಯಂತೀಂ ಹೃದ್ರುಹಂ ಮಾಂ ದ್ರುತಮನಿಲಬಲಾದ್ ದ್ರಾವಯಂತೀಮವಿದ್ಯಾ-
ನಿದ್ರಾಂ ವಿದ್ರಾವ್ಯ ಸದ್ಯೋ ರಚನಪಟುಮಥಾ ಽಪಾದ್ಯವಿದ್ಯಾಸಮುದ್ರ ।
ವಾಗ್ದೇವೀ ಸಾ ಸುವಿದ್ಯಾ—ದ್ರವಿಣದ ವಿದಿತಾ ದ್ರೌಪದೀ ರುದ್ರಪತ್ನ್ಯಾ-
ದ್ಯುದ್ರಿಕ್ತಾ ದ್ರಾಗಭದ್ರಾ—ದ್ರಹಯತು ದಯಿತಾ ಪೂರ್ವಭೀಮಾಽಽಜ್ಞಯಾ ತೇ || ೧೫ ||

ಯಾಭ್ಯಾಂ ಶುಶ್ರೂಷುರಾಸೀಃ ಕುರುಕುಲಜನನೇ ಕ್ಷತ್ರವಿಪ್ರೋದಿತಾಭ್ಯಾಂ
ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿಸುಖವಪುಷಾ ಕೃಷ್ಣನಾಮಾಸ್ಪದಾಭ್ಯಾಮ್ ।
ನಿರ್ಭೇದಾಭ್ಯಾಂ ವಿಶೇಷಾದ್ ದ್ವಿವಚನವಿಷಯಾ—ಭ್ಯಾಮುಭಾಭ್ಯಾ-ಮುಮಾಭ್ಯಾಂ
ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜವಿಲಸ—ಲ್ಲೋಚನೇಭ್ಯೋ ನಮೋಽಸ್ತು || ೧೬ ||

ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್ ಸ ತ್ವಮುಮುರುವಪುಷಾ ಭೀಷಯಾಮಾಸ ಚೇತಿ ।
ಪೂರ್ಣಜ್ಞಾನೌಜಸೋಸ್ತೇ ಗುರುತಮ ವಪುಷೋಃ ಶ್ರೀಮದಾನಂದತೀರ್ಥ
ಕ್ರೀಡಾಮಾತ್ರಂ ತದೇತತ್ ಪ್ರಮದದ ಸುಧಿಯಾಂ ಮೋಹಕ ದ್ವೇಷಭಾಜಾಮ್ || ೧೭ ||

ಬಿಭ್ರಾಣಃ ಕೋಟಿರಟೀಕಃ ಕುಟಿಲಕಟುಮತೀ—ನುತ್ಕಟಾಟೋಪಕೋಪಾನ್
ದ್ರಾಕ್ಷ ತ್ವಂ ಸತ್ವರತ್ವಾ—ಚ್ಛರಣದ ಗದಯಾ ಪೋಥಯಾಮಾಸಿಥಾರೀನ್ ।
ಉನ್ಮಥ್ಯಾತಥ್ಯಮಿಥ್ಯಾ—ತ್ವವಚನವಚನಾ—ನುತ್ಪಥಸ್ಥಾಂಸ್ತಥಾನ್ಯಾನ್
ಪ್ರಾಯಚ್ಛಃ ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಣ ತಸ್ಮೈ ನಮಸ್ತೇ ॥ ೨೮ ॥

ದೇಹಾದುತ್ಕ್ರಾಮಿತಾನಾ—ಮಧಿಪತಿರಸತಾ—ಮಕ್ರಮಾದ್ವಕ್ರಬುದ್ಧಿಃ
ಕ್ರುದ್ಧಃ ಕ್ರೋಧೈಕವಶ್ಯಃ ಕೃ(ಕ್ರಿ)ಮಿರಿವಮಣಿಮಾನ್ ದುಷ್ಕೃತೀ ನಿಷ್ಕ್ರಿಯಾರ್ಥಮ್ ।
ಚಕ್ರೇ ಭೂಚಕ್ರಮೇತ್ಯ ಕ್ರಕಚಮಿವ ಸತಾಂ ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ ಗುಣಗಣವಿರಹಂ ಜೀವತಾಂ ಚಾಧಿಕೃತ್ಯ ॥ ೨೯ ॥

ತದ್ದುಷ್ ಪ್ರೇಕ್ಷಾನುಸಾರಾತ್ ಕತಿಪಯ-ಕುನರೈ—ರಾದೃತೋಽನ್ಯೈ-ರ್ವಿಸೃಷ್ಟೋ
ಬ್ರಹ್ಮಾಽಹಂ ನಿರ್ಗುಣೋಽಹಂ ವಿತಥಮಿದಮಿತಿ ಹ್ಯೇಷ ಪಾಷಂಡವಾದಃ ।
ತದ್ಯುಕ್ತ್ಯಾಭಾಸಜಾಲ—ಪ್ರಸರವಿಷತರೂದ್-ದಾಹದಕ್ಷಪ್ರಮಾಣ-
ಜ್ವಾಲಾಮಾಲಾಧರೋಽಗ್ನಿಃ(ಥರಾಗ್ನಿಃ)—ಪವನ ವಿಜಯತೇ ತೇಽವತಾರಸ್ತೃತೀಯಃ ॥ ೩೦ ॥

ಆಕ್ರೋಶಂತೋ ನಿರಾಶಾ ಭಯಭರವಿವಶ—ಸ್ವಾಶಯಾಶ್ಛಿನ್ನದರ್ಪಾ
ವಾಶಂತೋ ದೇಶನಾಶ—ಸ್ತ್ವಿತಿ ಬತ ಕುಧಿಯಾಂ ನಾಶಮಾಶಾದಶಾಽಽಶು ।
ಧಾವಂತೋಽಶ್ಲೀಲಶೀಲಾ ವಿತಥಶಪಥಶಾಪಾ—ಶಿವಾಃ ಶಾಂತಶೌರ್ಯಾಸ್-
ತ್ವದ್ವ್ಯಾಖ್ಯಾಸಿಂಹನಾದೇ ಸಪದಿ ದದೃಶಿರೇ ಮಾಯಿಗೋಮಾಯವಸ್ತೇ ॥ ೩೧ ॥

ತ್ರಿಷ್ವಪ್ಯೇವಾವತಾರೇ—ಷ್ವರಿಭಿರಪಘೃಣಂ ಹಿಂಸಿತೋ ನಿರ್ವಿಕಾರಃ
ಸರ್ವಜ್ಞಃ ಸರ್ವಶಕ್ತಿಃ ಸಕಲಗುಣಗಣಾ—ಪೂರ್ಣರೂಪಪ್ರಗಲ್ಭಃ ।
ಸ್ವಚ್ಛಃ ಸ್ವಚ್ಛಂದಮೃತ್ಯುಃ ಸುಖಯಸಿ ಸುಜನಂ ದೇವ ಕಿಂ ಚಿತ್ರಮತ್ರ
ತ್ರಾತಾ ಯಸ್ಯ ತ್ರಿಧಾಮಾ ಜಗದುತ ವಶಗಂ ಕಿಂಕರಾಃ ಶಂಕರಾದ್ಯಾಃ ॥ ೩೨ ॥

ಉದ್ಯನ್ಮಂದಸ್ಮಿತಶ್ರೀ—ಮೃದುಮಧುಮಧುರಾ—ಲಾಪಪೀಯೂಷಧಾರಾ-
ಪೂರಾಸೇಕೋಪಶಾಂತಾ—ಸುಖಸುಜನಮನೋ—ಲೋಚನಾಪೀಯಮಾನಮ್ ।
ಸಂದ್ರಕ್ಷ್ಯೇ ಸುಂದರಂ ಸಂ—ದುಹದಿಹಮಹದಾ—ನಂದಮಾನಂದತೀರ್ಥ
ಶ್ರೀಮದ್ವಕ್ತ್ರೇಂದುಬಿಂಬಂ ದುರಿತನುದುದಿತಂ ನಿತ್ಯದಾಹಂ ಕದಾ ನು ? ॥ ೩೩ ॥

ಪ್ರಾಚೀನಾಚೀರ್ಣಪುಣ್ಯೋ—ಚ್ಚಯಚತುರತರಾ—ಚಾರತಶ್ಚಾರುಚಿತ್ರಾ(ನ್)-
ನ(ಅ)ತ್ಯುಚ್ಚಾಂ ರೋಚಯಂತೀಂ ಶ್ರುತಿಚಿತವಚನಾಂ—ಶ್ಚಾ್ರವಕಾಂಶ್ಚೋದ್ಯಚುಂಚೂನ್ ।
ವ್ಯಾಖ್ಯಾಮುತ್ಖಾತದುಃಖಾಂ ಚಿರಮುಚಿತಮಹಾ—ಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರಕರ್ತ—ಶ್ಚರಣಪರಿಚರಾನ್ ಛ್ರಾವಯಾಸ್ಮಾಂಶ್ಚ ಕಿಂಚಿತ್ ॥ ೩೪ ॥

ಪೀಠೇ ರತ್ನೋಪಕ್ಲೃಪ್ತೇ ರುಚಿರರುಚಿಮಣಿ—ಜ್ಯೋತಿಷಾ ಸನ್ನಿಷಣ್ಣಂ
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ ವೈದಿಕಾದ್ಯಾಹಿವಿದ್ಯಾಃ ।
ಸೇವಂತೇ ಮೂರ್ತಿಮತ್ಯಃ ಸುಚರಿತ ಚರಿತಂ ಭಾತಿ ಗಂಧರ್ವಗೀತಂ
ಪ್ರತ್ಯೇಕಂ ದೇವಸಂಸತ್-ಸ್ವಪಿ ತವ ಭಗವನ್ ನರ್ತಿತದ್ಯೋವಧೂಷು ॥ ೩೫ ॥

ಸಾನುಕ್ರೋಶೈರಜಸ್ರಂ ಜನಿಮೃತಿನಿರಯಾ—ದ್ಯೂರ್ಮಿಮಾಲಾವಿಲೇಽಸ್ಮಿನ್
ಸಂಸಾರಾಬ್ಧೌ ನಿಮಗ್ನಾಂ—ಶ್ಚರಣಮಶರಣಾ—ನಿಚ್ಛತೋ ವೀಕ್ಷ್ಯ ಜಂತೂನ್ ।
ಯುಷ್ಮಾಭಿಃ ಪ್ರಾರ್ಥಿತಃ ಸನ್ ಜಲನಿಧಿಶಯನಃ ಸತ್ಯವತ್ಯಾಂ ಮಹರ್ಷೇರ್-
ವ್ಯಕ್ತಶ್ಚಿನ್ಮಾತ್ರಮೂರ್ತಿರ್ ನ ಖಲು ಭಗವತಃ ಪ್ರಾಕೃತೋ ಜಾತು ದೇಹಃ ॥ ೩೬ ॥

ಅಸ್ತವ್ಯಸ್ತಂ ಸಮಸ್ತ—ಶ್ರುತಿಗತಮಧಮೈ ರತ್ನಪೂಗಂ ಯಥಾಂಧೈ-
ರರ್ಥಂ ಲೋಕೋಪಕೃತ್ಯೈ ಗುಣಗಣನಿಲಯಃ ಸೂತ್ರಯಾಮಾಸ ಕೃತ್ಸ್ನಮ್ ।
ಯೋಽಸೌ ವ್ಯಾಸಾಭಿಧಾನ—ಸ್ತಮಹ-ಮಹರಹರ್ ಭಕ್ತಿತಸ್ತ(ತ್ತ)ತ್ಪ್ರಸಾದಾತ್
ಸದ್ಯೋವಿದ್ಯೋಪಲಬ್ಧ್ಯೈ ಗುರುತಮಮಗುರುಂ ದೇವದೇವಂ ನಮಾಮಿ ॥ ೩೭ ॥

ಆಜ್ಞಾಮನ್ಯೈರಧಾರ್ಯಾಂ ಶಿರಸಿ ಪರಿಸರದ್-ರಶ್ಮಿಕೋಟೀರಕೋಟೌ
ಕೃಷ್ಣಸ್ಯಾಕ್ಲಿಷ್ಟಕರ್ಮಾ ದಧದನುಸರಣಾ—ದರ್ಥಿತೋ ದೇವಸಂಘೈಃ ।
ಭೂಮಾವಾಗತ್ಯ ಭೂಮ—ನ್ನಸುಕರಮಕರೋರ್ ಬ್ರಹ್ಮಸೂತ್ರಸ್ಯ ಭಾಷ್ಯ
ದುರ್ಭಾಷ್ಯಂ ವ್ಯಸ್ಯ ದಸ್ಯೋರ್ ಮಣಿಮತ ಉದಿತಂ ವೇದಸದ್ಯುಕ್ತಿಭಿಸ್ತ್ವಮ್ ॥ ೩೮ ॥

ಭೂತ್ವಾ ಕ್ಷೇತ್ರೇ ವಿಶುದ್ಧೇ ದ್ವಿಜಗಣನಿಲಯೇ ರೌಪ್ಯಪೀಠಾಭಿಧಾನೇ
ತತ್ರಾಪಿ ಬ್ರಹ್ಮಜಾತಿ—ಸ್ತ್ರಿಭುವನವಿಶದೇ(ವಿದಿತೇ) ಮಧ್ಯಗೇಹಾಖ್ಯಗೇಹೇ ।
ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್ ಭಾರತಾರ್ಥಪ್ರಕಾಶಮ್ ॥ ೩೯ ॥

ವಂದೇ ತಂ ತ್ವಾ ಸುಪೂರ್ಣ—ಪ್ರಮತಿಮನುದಿನಾ—ಸೇವಿತಂ ದೇವವೃಂದೈರ್-
ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ ಶ್ರೀಮದಾನಂದತೀರ್ಥಮ್ ।
ವಂದೇ ಮಂದಾಕಿನೀಸತ್—ಸರಿದಮಲಜಲಾ-ಸೇಕಸಾಧಿಕ್ಯಸಂಗಂ
ವಂದೇಽಹಂ ದೇವ ಭಕ್ತ್ಯಾ ಭವಭಯದಹನಂ ಸಜ್ಜನಾನ್ ಮೋದಯಂತಮ್ ॥ ೪೦ ॥

ಸುಬ್ರಹ್ಮಣ್ಯಾಖ್ಯಸೂರೇಃ ಸುತ ಇತಿ ಸುಭೃಶಂ ಕೇಶವಾನಂದತೀರ್ಥ-
ಶ್ರೀಮತ್ಪಾದಾಬ್ಜಭಕ್ತಃ ಸ್ತುತಿಮಕೃತ ಹರೇರ್—ವಾಯುದೇವಸ್ಯ ಚಾಸ್ಯ ।
ತತ್ಪಾದಾರ್ಚಾದರೇಣ ಗ್ರಥಿತಪದಲಸನ್—ಮಾಲಯಾ ತ್ವೇತಯಾ ಯೇ
ಸಂರಾಧ್ಯಾಮೂ ನಮಂತಿ ಪ್ರತತಮತಿಗುಣಾ ಮುಕ್ತಿಮೇತೇ ವ್ರಜಂತಿ ॥ ೪೧ ॥

(ಇಲ್ಲಿ ಪುನಃ ನಖಸ್ತುತಿಯ ಎರಡು ಶ್ಲೋಕಗಳನ್ನು ಪಠಿಸಬೇಕು)

ಇತಿ ಕವಿಕುಲತಿಲಕಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯವಿರಚಿತಾ
ಶ್ರೀಹರಿವಾಯುಸ್ತುತಿಃ ಸಂಪೂರ್ಣಾ

॥ ಶ್ರೀಕೃಷ್ಣಾರ್ಪಣಮಸ್ತು ॥

ಖಿಲವಾಯುಸ್ತುತಿಃ

ವಾಯುರ್ಭೀಮೋ ಭೀಮನಾದೋ ಮಹೌಜಾಃ ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥ ೧ ॥

ಪ್ರಥಮೋ ಹನುಮಾನ್ ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥ ೨ ॥

ಬ್ರಹ್ಮಾಂತಾಗುರವಃ ಸಾಕ್ಷಾ—ದಿಷ್ಟಂ ದೈವಂ ಶ್ರಿಯಃ ಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ ॥ ೩ ॥

ಜ್ಞಾನೇ ವಿರಾಗೇ ಹರಿಭಕ್ತಿಭಾವೇ ಧೃತಿಸ್ಥಿತಿಪ್ರಾಣಬಲೇಷು ಯೋಗೇ ।
ಬುದ್ಧ್ಯಾ ಚ ನಾನ್ಯೋ ಹನುಮತ್ಸಮಾನಃ ಪುಮಾನ್ ಕದಾಚಿತ್ ಕ್ವ ಚ ಕಶ್ಚ ನೈವ ॥ ೪ ॥

ವಾತೇನ ಕುಂತ್ಯಾಂ ಬಲವಾನ್ ಸುಜಾತಃ ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ ಪರಾಕ್ರಮೇ ಶತ್ರುಭಿರಪ್ರಧೃಷ್ಯಃ ॥ ೫ ॥

ಯಸ್ಯ ತ್ರೀಣ್ಯುದಿತಾನಿ ವೇದವಚನೇ, ರೂಪಾಣಿ ದಿವ್ಯಾನ್ಯಲಂ ಬಟ್
ತದ್ದರ್ಶನಮಿತ್ಥಮೇವ ನಿಹಿತಂ, ದೇವಸ್ಯ ಭರ್ಗೋ ಮಹತ್ ।
ವಾಯೋ ರಾಮವಚೋನಯಂ ಪ್ರಥಮಕಂ, ಪೃಕ್ಷೋ ದ್ವಿತೀಯಂ ವಪುರ್-
ಮಧ್ವೋ ಯತ್ತು ತೃತೀಯಮೇತದಮುನಾ, ಗ್ರಂಥಃ ಕೃತಃ ಕೇಶವೇ ॥ ೬ ॥

ಮಹಾವ್ಯಾಕರಣಾಂಭೋಧಿ—ಮಂಥಮಾನಸಮಂದರಮ್ ।
ಕವಯಂತಂ ರಾಮಕೀರ್ತ್ಯಾ ಹನುಮಂತಮುಪಾಸ್ಮಹೇ ॥ ೭ ॥

ಮುಖ್ಯಪ್ರಾಣಾಯ ಭೀಮಾಯ ನಮೋ ಯಸ್ಯ ಭುಜಾಂತರಮ್ ।
ನಾನಾವೀರಸುವರ್ಣಾನಾಂ ನಿಕಷಾಶ್ಮಾಯಿತಂ ಬಭೌ ॥ ೮ ॥

ಸ್ವಾಂತಸ್ಥಾನಂತಶಯ್ಯಾಯ ಪೂರ್ಣಜ್ಞಾನರಸಾರ್ಣಸೇ ।
ಉತ್ತುಂಗವಾಕ್ತರಂಗಾಯ ಮಧ್ವದುಗ್ಧಾಬ್ಧಯೇ ನಮಃ ॥ ೯ ॥

ಯೇನಾಹಮಿಹ ದುರ್ಮಾರ್ಗಾ—ಥುದ್ಧೃತ್ಯಾಭಿನಿವೇಶಿತಃ ।
ಸಮ್ಯಕ್ ಶ್ರೀವೈಷ್ಣವೇ ಮಾರ್ಗೇ ಪೂರ್ಣಪ್ರಜ್ಞಂ ನಮಾಮಿ ತಮ್ ॥ ೧೦ ॥

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ¦ ಯೋಗಕ್ಷೇಮಂ ವಹಾಮ್ಯಹಮ್ ॥ ೧೧ ॥

ಯಸ್ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥ ೧೨ ॥

ಸೂಕ್ತಿರತ್ನಾಕರೇ ರಮ್ಯೇ ಮೂಲರಾಮಾಯಣಾರ್ಣವೇ ।
ವಿಹರಂತೋ ಮಹೀಯಾಂಸಃ ಪ್ರೀಯಂತಾಂ ಗುರವೋ ಮಮ ॥ ೧೩ ॥

ಹನೂಮಾನಂಜನೀಸೂನುರ್ ವಾಯುಪುತ್ರೋ ಮಹಾಬಲಃ ।
ರಾ(ಭೀ)ಮೇಷ್ಟಃ ಫಲ್ಗುನಸಖಃ ಪಿಂಗಾಕ್ಷೋಽಮಿತವಿಕ್ರಮಃ ॥ ೧೪ ॥

ಉದಧಿಕ್ರಮಣಶ್ಚೈವ ಸೀತಾಸಂದೇಶಹಾ(ಕಾ)ರಕಃ ।
ಲಕ್ಷ್ಮಣಪ್ರಾಣದಾತಾ ಚ ದಶಗ್ರೀವಸ್ಯ ದರ್ಪಹಾ ॥ ೧೫ ॥

ದ್ವಾದಶೈತಾನಿ ನಾಮಾನಿ ಕಪೀಂದ್ರಸ್ಯ ಮಹಾತ್ಮನಃ ।
ಸ್ವಾಪಕಾಲೇ ಪ್ರಬೋಧೇ ಚ ಯಾತ್ರಾಕಾಲೇ ಚ ಯಃ ಪಠೇತ್ ॥ ೧೬ ॥

ನ ಭಯಂ ವಿದ್ಯತೇ ತಸ್ಯ ಸರ್ವತ್ರ ವಿಜಯೀ ಭವೇತ್ ।
ದುಃಸ್ವಪ್ನಾನಿ ವಿನಶ್ಯಂತಿ ಕ್ಷೀಯಂತೇ ಪಾಪರಾಶಯಃ ॥ ೧೭ ॥

ಮಾರುತಿಃ ಪಾಂಡವೋ ಭೀಮೋ ಗದಾಪಾಣಿರ್ವೃಕೋದರಃ ।
ಕೌಂತೇಯಃ ಕೃಷ್ಣದೂತಶ್ಚ ಭೀಮಸೇನೋ ಮಹಾಬಲಃ ॥ ೧೮ ॥

ಜರಾಸಂಧಾಂತಕೋ ವೀರೋ ದುಶ್ಶಾಸನವಿನಾಶ(ನಃ)ಕಃ
ಭೀಮಸ್ಯ ದ್ವಾದಶೈತಾನಿ ನಾಮಾನಿ ನಿಯತಂ ಪಠನ್ ॥ ೧೯ ॥

ಆಯುರಾರೋಗ್ಯಸಂಪತ್ತಿ—ಮರಿಪಕ್ಷ-ಕ್ಷಯಂ ಲಭೇತ್ ।
ಪೂರ್ಣಪ್ರಜ್ಞೋ ಜ್ಞಾನದಾತಾ ಮಧ್ವೋ ಧ್ವಸ್ತದುರಾಗಮಃ ॥ ೨೦ ॥

ತತ್ತ್ವಜ್ಞೋ ವೈಷ್ಣವಾಚಾರ್ಯೋ ವ್ಯಾಸಶಿಷ್ಯೋ ಯತೀಶ್ವರಃ ।
ಶುಭತೀರ್ಥಾಭಿಧಾನಶ್ಚ ಜಿತವಾದೀ ಜಿತೇಂದ್ರಿಯಃ ॥ ೧೦ ॥

ಆನಂದತೀರ್ಥಸನ್ನಾಮಾ ಹ್ಯೇವಂ ದ್ವಾದಶಕಂ ಪಠನ್ ।
ಲಭತೇ ವೈಷ್ಣವೀಂ ಭಕ್ತಿಂ ಗುರುಭಕ್ತಿಸಮನ್ವಿತಾಮ್ ॥ ೧೧ ॥

ಮನೋಜವಂ ಮಾರುತತುಲ್ಯವೇಗಂ ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥ ೧೩ ॥

ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಮರೋ(ಗ)ಗಿತಾ ।
ಅಜಾಡ್ಯಂ ವಾಕ್ಪಟುತ್ವಂ ಚ ಹನುಮತ್ಸ್ಮರಣಾದ್ಭವೇತ್ ॥ ೧೪ ॥

ನ ಮಾಧವೋ ಸಮೋ ದೇವೋ ನ ಚ ಮಧ್ವ ಸಮೋ ಗುರುಃ ।
ನ ತದ್ವಾಕ್ಯಸಮಂ ಶಾಸ್ತ್ರಂ ನ ಚ ತಸ್ಯ ಸಮಃ ಪುಮಾನ್ ॥ ೧೫ ॥

ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।
ಪಾಂಡಿತ್ಯೇ ಚ ಪಟುತ್ವೇ ಚ ಶೂರತ್ವೇ ಚ ಬಲೇಽಪಿ ಚ ॥ ೧೬ ॥

॥ ಇತಿ ಖಿಲವಾಯುಸ್ತುತಿಃ ಸಂಪೂರ್ಣಾ ॥

॥ ಶ್ರೀಕೃಷ್ಣಾರ್ಪಣಮಸ್ತು ॥



ಈ " ಶ್ರೀಹರಿವಾಯುಸ್ತುತಿ "ಯ
ಲೇಖಕರಾದ ಶ್ರೀ ಪಿ. ವಿಷ್ಣು-
ತೀರ್ಥರ ಪಾಂಡಿತ್ಯದ ಅರಿವು
ಅವರ " ನಖಸ್ತುತಿ " ಹಾಗೂ
" ಶ್ರೀಹರಿವಾಯುಸ್ತುತಿ "ಯ
ಮೊದಲ ೨೧ ಶ್ಲೋಕಗಳನ್ನು
ಓದಿರುವ ವಾಚಕರಿಗೆ ತಿಳಿದ
ವಿಷಯವಾದುದರಿಂದ ಪುನಃ
ಪರಿಚಯಿಸಬೇಕಾದ ಅವಶ್ಯಕತೆ
ಕಾಣದು.
ಸಾಮಾನ್ಯರಿಗೂ ಅರ್ಥವಾಗುವ
ರೀತಿಯಲ್ಲಿ " ಅಣುಭಾಷ್ಯ"
ಹಾಗೂ " ಪುರುಷಸೂಕ್ತ"ದ
ವ್ಯಾಖ್ಯಾನಗಳನ್ನು ಬರೆಯುತ್ತ
ಇರುವ ಈ ಅವಧೂತರಿಗೆ
ಅವರು ಪೂರ್ಣವಾಗಿ ನಂಬಿರುವ
ನವಯುತಿಗಳು ಯಾರಿಗೆ ಪ್ರೇರಣೆ
ಮಾಡಿ ಪ್ರಕಟಿಸಲು ಅನುಗ್ರಹಿಸುವ
ರೆಂದು ಕಾದುನೋಡಬೇಕಾಗಿದೆ.